
ಕನ್ನಡ ಸಾಹಿತ್ಯ ಪರಿಷತ್ತು

ಮನುಷ್ಯ ಜಾತಿ ತಾನೊಂದೆ ವಲಂ

ದಲಿತ ಸಾಹಿತ್ಯ ಸಂಪುಟ

# ಮಾನವಿಕ



ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು

**ಡಾ. ಅರ್ಜುನ ಗೊಳಸಂಗಿ**

# ದಲಿತ ಸಾಹಿತ್ಯ ಸಂಪುಟ

# ಮಾನವಿಕ


ಪ್ರಧಾನ ಸಂಪಾದಕರು

## ನಾಡೋಜ ಡಾ. ಮನು ಬಳಿಗಾರ್

ಸಂಪಾದಕರು

**ಡಾ. ಅರ್ಜುನ ಗೊಳಸಂಗಿ**



## ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು ೫೬೦ ೦೧೮.

DALITA SAHITYA SAMPUTA - MAANAVIKA- Edited by: Dr. Arjun Golasangi Published by: Nadoja Dr. Manu Baligar, President, Kannada Sahitya Parishattu, Pampa Mahakavi Road, Chamarajapete, Bengaluru-560018 Pages: xii +248 Price: Rs.320-00: 2019

ಪ್ರಥಮ ಮುದ್ರಣ : ೨೦೧೯

ಪ್ರತಿಗಳು : ೫೦೦

ಬೆಲೆ : ಮುನ್ನೂರ ಇಪ್ಪತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ

---

ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸಂಚಾಲಕರು**

**ಡಾ. ಮೂಡಾಕೂಡು ಚಿನ್ನಸ್ವಾಮಿ, ಸದಸ್ಯರು**

**ಡಾ. ಅರ್ಜುನ ಗೊಳಸಂಗಿ, ಸದಸ್ಯರು**

**ಪ್ರಕಟಣಾ ಸಮಿತಿ**

**ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

ಡಾ. ಚಂದ್ರಶೇಖರ ಕಂಬಾರ

೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ - ಡಾ. ಪದ್ಮರಾಜ ದಂಡಾವತಿ

ಸದಸ್ಯರು

ಶ್ರೀ ಜರಗನಹಳ್ಳಿ ಶಿವಶಂಕ

ಡಾ. ಮೂಡಾಕೂಡು ಚಿನ್ನಸ್ವಾಮಿ

ಪ್ರೊ ಧರಣೇಂದ್ರ ಕುರಕುರಿ

ಶ್ರೀ ರಂಜಾನ್ ದರ್ಗಾ

ಡಾ. ಬಿ.ಕೆ. ರವಿ

ಡಾ. ತಮಿಳ್ ಸೆಲ್ವಿ

ಡಾ. ದೊಡ್ಡಮಲ್ಲಯ್ಯ

ಡಾ. ಎಚ್.ಎಲ್. ಪುಷ್ಪ

ಶ್ರೀ ಎ.ಆರ್. ಉಜ್ಜನಪ್ಪ

ಶ್ರೀ ಸಂಜಯ ಅಡಿಗ

ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ಗೌರವ ಕಾರ್ಯದರ್ಶಿಗಳು

ಡಾ. ರಾಜಶೇಖರ ಹತಗುಂದಿ

ಶ್ರೀ ವ.ಚ. ಚನ್ನೇಗೌಡ

ಗೌರವ ಕೋಶಾಧ್ಯಕ್ಷರು

ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

# ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾಡು, ನುಡಿ, ನೆಲ, ಜಲ ಹಾಗೂ ಸಾಹಿತ್ಯ-ಸಂಸ್ಕೃತಿಗೆ ಪ್ರೇರಕ ಶಕ್ತಿಯಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ನೇ ಇಸವಿ ಮೇ ೫ ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ದೂರದೃಷ್ಟಿಯ ಫಲವಾಗಿ ಅಸ್ತಿತ್ವಕ್ಕೆ ಬಂದಿತು. ಅಂದಿನ ಮೈಸೂರು ಸಂಸ್ಥಾನದ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯ ಅವರ ಒತ್ತಾಸೆಯೂ ಇಲ್ಲಿ ಜೊತೆಗೂಡಿತ್ತು. ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನೂ ಸೇರಿ ೨೫ ಅಧ್ಯಕ್ಷರನ್ನು ಕಂಡಿದೆ. ೮೪ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿ ಕನ್ನಡದ ಕಹಳೆ ಮೊಳಗಿಸಿದೆ. ಇಲ್ಲಿಯವರೆಗೆ ೧೫೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ- ಸಂಸ್ಕೃತಿ ಪ್ರಸಾರದಲ್ಲಿ ಮಹತ್ತರ ಸಾಧನೆಗೈದಿದೆ. ೧೦೫ನೇ ವರ್ಷಕ್ಕೆ ಕಾಲಿಟ್ಟ ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು: 'ದಲಿತ ಸಾಹಿತ್ಯ ಸಂಪುಟ'ದ ಯೋಜನೆ ರೂಪಿಸಿ ಕಾರ್ಯಗತಗೊಳಿಸುತ್ತಿರುವುದು ಚರಿತ್ರಾರ್ಹ ಸಂಗತಿಯೆಂದೇ ಭಾವಿಸಿದ್ದೇನೆ. 'ದಲಿತ ಸಾಹಿತ್ಯ ಸಂಪುಟ' ರಚನಾ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು "ಭಾರತೀಯ ಯಾವ ಭಾಷೆಗಳಲ್ಲೂ ಈ ಬಗೆಯ ಸಂಪುಟಗಳು ಪ್ರಕಟಗೊಂಡಿಲ್ಲ" ಎಂದು ಹೇಳಿರುವುದು ಈ ಯೋಜನೆಯ ಐತಿಹಾಸಿಕ ಮಹತ್ವವನ್ನು ಎತ್ತಿ ತೋರಿಸುತ್ತದೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತನ್ನು ತನ್ನ ಘೋಷ ವಾಕ್ಯವಾಗಿ ಸ್ವೀಕರಿಸಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ನನ್ನ ಅವಧಿಯಲ್ಲಂತೂ ಒಂದು ವ್ರತದಂತೆ ಪಾಲಿಸುತ್ತಾ ಬಂದಿದೆ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುತ್ತಾ ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲಾಗಿದೆ. ಅದರ ಭಾಗವಾಗಿಯೇ 'ದಲಿತ ಸಾಹಿತ್ಯ ಸಂಪುಟ'ದ ಈ ಚರಿತ್ರಾರ್ಹ ಯೋಜನೆ ಕಾರ್ಯಗತಗೊಂಡಿದ್ದು, ಸಮಾರಂಭವೊಂದರಲ್ಲಿ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಅರ್ಜುನ ಗೊಳಸಂಗಿಯವರು 'ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತಂದರೆ ಒಳ್ಳೆಯದು. ಅದು ನಿಮ್ಮ ಅವಧಿಯಲ್ಲೇ ಕಾರ್ಯಗತಗೊಂಡರೆ ಚರಿತ್ರಾರ್ಹ ಸಂಗತಿ

ಎನಿಸಿಕೊಳ್ಳುತ್ತದೆ' ಎಂದು ಪ್ರಸ್ತಾವನೆ ಇಟ್ಟರು. ತಕ್ಷಣವೇ ಕಾರ್ಯಪ್ರವೃತ್ತನಾದ ನಾನು ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು ಅಗತ್ಯದ ಆರ್ಥಿಕ ಸಂಪನ್ಮೂಲದ ವ್ಯವಸ್ಥೆ ಮಾಡಿಕೊಂಡು 'ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ ಅಸ್ತಿತ್ವಕ್ಕೆ ಬರುವಂತೆ ನೋಡಿಕೊಂಡೆ. ಅಷ್ಟು ಮಾತ್ರವಲ್ಲ; ಕಾಲಮಿತಿಯಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುವಂತೆ ಪ್ರಯತ್ನಿಸಿರುವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸಂಚಾಲಕರಾಗಿ ಪ್ರೊ, ಮಲ್ಲೇಪುರಂ ಜಿ. ವೆಂಕಟೇಶ ಅವರು ನಿರೀಕ್ಷೆಗೂ ಮೀರಿದ ವೇಗದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಒಟ್ಟು ಹತ್ತು ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಲಾಗಿದೆಯಾದರೂ ಮೊದಲ ಕಂತಿನಲ್ಲಿ ಐದು ಸಂಪುಟಗಳು ನಿಮ್ಮ ಕೈ ಸೇರುತ್ತಿವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸದಸ್ಯರಾಗಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾ ನಾಯಕ್ ಅವರು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ದಲಿತ ಸಂವೇದನೆ' ಒಳ ವಿದ್ಯುತ್ತಿನಂತೆ ಪ್ರವಹಿಸುತ್ತಲೇ ಇದೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತು ಪರೋಕ್ಷವಾಗಿ ಜಾತ್ಯಾತೀತ ಸಮಾಜದ ಕನಸನ್ನೇ ಪ್ರತಿಪಾದಿಸುತ್ತದೆ. ದಲಿತ ಸಂವೇದನೆಯ ಅಭಿವ್ಯಕ್ತಿಗೆ ಮತ್ತು ದಲಿತ ಪರ ಕಾಳಜಿಗೆ ಬಹುದೊಡ್ಡ ವೇದಿಕೆ ದೊರೆತದ್ದು ೧೨ನೇ ಶತಮಾನದ ವಚನ ಚಳವಳಿಯ ಕಾಲದಲ್ಲಿ, ಹಾಗೆ ನೋಡಿದರೆ ವಚನ ಚಳವಳಿಯ ಮುಖ್ಯ ಕಾಳಜಿಯೇ 'ದಲಿತ ಲೋಕ'. ಅಸಂಖ್ಯಾತ ದಲಿತ ಶರಣರ ಅಭಿವ್ಯಕ್ತಿಗೆ ಮಾಧ್ಯಮವಾಗಿದ್ದು ಅನುಭವ ಮಂಟಪ. ಬಸವೋತ್ತರ ಯುಗದ ಮಹಾಕವಿ ಹರಿಹರನು, ಮಾದಾರ ಚನ್ನಯ್ಯ ಸೇರಿದಂತೆ ದಲಿತ ಹಾಗೂ ತಳ ಸಮುದಾಯದ ಶಿವಭಕ್ತರ 'ಭಕ್ತಿಯ ಪಾರಮ್ಯವನ್ನೇ', ಕಾವ್ಯವಾಗಿಸಿದ. ಹರಿಹರನ ರಗಳೆಗಳು 'ದಲಿತ ಸಂವೇದನೆ'ಯ ಪ್ರತಿಬಿಂಬದಂತಿವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ೭೦-೮೦ರ ದಶಕ ದಲಿತ ಸಂವೇದನೆಯ ಪುನರುತ್ಥಾನದ ಯುಗ. ಹಾಗೆ ನೋಡಿದರೆ ಕಳೆದ ಶತಮಾನದ ೭೦-೮೦ರ ದಶಕ ಚಳವಳಿಗಳ ಕಾಲ, ದಲಿತ- ಬಂಡಾಯ ಚಳವಳಿಯ ಪ್ರಭಾವಳಿಯಲ್ಲಿ ಅಂದಿನ ಬಹುಪಾಲು ದಲಿತೇತರ ಸಾಹಿತಿಗಳೂ 'ದಲಿತ ಸಂವೇದನೆ'ಯೊಂದಿಗೆ ಮುಖಾಮುಖಿಯಾಗುವ ಸಂದರ್ಭ ಸೃಷ್ಟಿಯಾಯಿತು. ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಸೇರಿದಂತೆ ಹಲವರ ಸಾಹಿತ್ಯ ಒಂದು ಪರಂಪರೆಯ ಹುಟ್ಟಿಗೆ ಕಾರಣವಾದದ್ದು ಇತಿಹಾಸ. ದಲಿತ ಸಾಹಿತ್ಯ ಸಂಪುಟಗಳ ಪ್ರಕಟಣೆಯನ್ನು 'ದಲಿತ ಅಸ್ಮಿತೆ'ಯ ಭಾಗವಾಗಿ ನೋಡಬೇಕು. ದಲಿತ ಸಂವೇದನೆ; ಸೃಜನಶೀಲ ಪ್ರಕಾರಗಳಾದ ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಢಾಳಾಗಿ ಎದ್ದು ಕಾಣುತ್ತದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಸಂವೇದನೆಯ ಹೆಜ್ಜೆ ಗುರುತುಗಳನ್ನು ಪತ್ತೆ ಹಚ್ಚಲು ಹಾಗೂ ಒಟ್ಟು ಕನ್ನಡ ಕಟ್ಟುವ ಕಾಯಕದಲ್ಲಿ ದಲಿತ ವಿದ್ವಾಂಸರ ಪಾಲ್ಗೊಳ್ಳುವಿಕೆಯನ್ನು ಈ ಸಂಪುಟಗಳ ಮೂಲಕ ಗುರುತಿಸಬಹುದಾಗಿದೆ. ದಲಿತ ಅಸ್ಮಿತೆಯ ಚಹರೆಯನ್ನು ಈ ಎಲ್ಲ ಸಂಪುಟಗಳು ಹೆಚ್ಚು ಸ್ಪಷ್ಟಗೊಳಿಸುತ್ತವೆ.

ದಲಿತ ಸಾಹಿತ್ಯ ಸಂಪುಟಗಳನ್ನು ಪ್ರಾತಿನಿಧಿಕವಾಗಿ ರೂಪಿಸಲಾಗಿದೆ. ಹಾಗೂ ಇಲ್ಲಿ ಪ್ರಾದೇಶಿಕ ನ್ಯಾಯ ಮತ್ತು ಲಿಂಗ ಸಮಾನತೆಯನ್ನು ಪಾಲಿಸಲಾಗಿದೆ. ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಅಭಿವ್ಯಕ್ತಿಗೊಂಡ 'ದಲಿತ ಸಂವೇದನೆ'ಯ ವಿಭಿನ್ನ ಆಯಾಮವನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಯುಗ ತಡವಾಗಿ ಆರಂಭವಾಗಿದೆಯಾದರೂ ಬೆರಗು ಹುಟ್ಟಿಸುವ ಸಾಧನೆ ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ದಲಿತ ಸಂವೇದನೆಯ ಸ್ಥಿತ್ಯಂತರದ ನೆಲೆಗಳನ್ನು ಶೋಧಿಸುವ ಅಧ್ಯಯನಗಳು ಸಾಕಷ್ಟು ನಡೆದಿದ್ದವು. ಆದರೆ ದಲಿತ ಸಾಹಿತ್ಯದ ಪ್ರಾತಿನಿಧಿಕ ಪಠ್ಯಗಳ ಮಾದರಿಗಳನ್ನು ಒಂದೆಡೆ ಸಂಗ್ರಹಿಸಿ ಸಂಪುಟಗಳಲ್ಲಿ ಪ್ರಕಟಿಸುತ್ತಿರುವುದು ಇದೇ ಮೊದಲು, ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಹೆಮ್ಮೆ ಪಡುತ್ತದೆ. ದಲಿತ ಸಾಹಿತ್ಯ ಸಂಪುಟ- ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗಲು ಶ್ರಮಿಸಿದ ಸಮಿತಿಯ ಸಂಚಾಲಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ವಿಶೇಷ ಕೃತಜ್ಞತೆ ಸಲ್ಲಿಸುತ್ತೇನೆ. ಸಮಿತಿಯ ಸದಸ್ಯರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾನಾಯಕ್ ಅವರಿಗೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಕಾಲಮಿತಿಯಲ್ಲಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟ ಎಲ್ಲ ಸಂಪಾದಕರಿಗೆ ಕೃತಜ್ಞತೆಗಳು. ದಲಿತ ಸಾಹಿತ್ಯ ಸಂಪುಟ ಯೋಜನೆಯಡಿ ಪ್ರಕಟಗೊಳ್ಳುತ್ತಿರುವ 'ಮಾನವಿಕ ಸಂಪುಟವನ್ನು ಅದರ ಸಂಪಾದಕರಾದ ಡಾ. ಅರ್ಜುನ ಗೊಳಸಂಗಿ ಅವರು ಕಾಲಮಿತಿಯೊಳಗೆ ಅಚ್ಚುಕಟ್ಟಾಗಿ ಸಿದ್ಧಪಡಿಸಿ ಕೊಟ್ಟಿದ್ದಾರೆ. ಅಷ್ಟು ಮಾತ್ರವಲ್ಲ; ಮಾನವಿಕ ಸಂಪುಟದ ಎಲ್ಲ ಲೇಖಕರ ಅನುಮತಿಯನ್ನೂ ಪಡೆದಿರುವುದಾಗಿ ತಿಳಿಸಿದ್ದಾರೆ. ಈ ಸಂಪುಟದ ಸಂಪಾದಕರಿಗೆ ಮತ್ತು ಎಲ್ಲ ಲೇಖಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಯೋಜನೆಯಡಿಯ ಎಲ್ಲ ಸಂಪುಟಗಳ ರಕ್ಷಾಪುಟ ಕಲಾವಿನ್ಯಾಸ ಮಾಡಿಕೊಟ್ಟ ಶ್ರೀ ಚಂದ್ರಕಾಂತ ಪಟ್ಟಣ ಅವರಿಗೆ, ಸಂಪುಟಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಬಿ.ಎಂ.ಶ್ರೀ ಆಫ್‌ಸೆಟ್ ಅಚ್ಚುಕೂಟದ ಸಿಬ್ಬಂದಿಗೆ ಹಾಗೂ ಪ್ರಕಟಣೆಗೆ ಸಹಕರಿಸಿದ ಪ್ರಕಟಣಾ ಸಮಿತಿಯ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೦೧-೦೫-೨೦೧೯

ನಾಡೋಜ ಡಾ, ಮನು ಬಳಿಗಾರ್

ಅಧ್ಯಕ್ಷರು

# ಪ್ರಸ್ತಾವನೆ

**ಸುವರ್ಣಯುಗಕ್ಕೆ ಒಂದು ಶುಭನುಡಿ:**

ಕನ್ನಡ ನಾಡು-ನುಡಿಯ ಚಿಂತನೆಗೆ ಮತ್ತು ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗಾಗಿ ಶತಮಾನ ಕಂಡ ಸಂಸ್ಥೆಯೊಂದು ಯಾವುದಾದರೂ ಇದೆ ಎಂದರೆ ಅದು ಕನ್ನಡ ಸಾಹಿತ್ಯ ಪರಿಷತ್ತು ಎಂದು ಮಾತ್ರ ಹೇಳಬಹುದು. ಇದು ಗ್ರಾಮ ಮಟ್ಟದಿಂದ ಅಂತರಾಷ್ಟ್ರೀಯ ಮಟ್ಟದವರೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಯ ಪ್ರಸಾರ ಕಾರ ಮಾಡಿದ ಸಂಸ್ಥೆ ಹಾಗೂ ಕರ್ನಾಟಕದ ಪ್ರತಿಯೊಬ್ಬ ಕನ್ನಡಿಗನ ಸ್ವಾಭಿಮಾನದ ಸಂಸ್ಥೆಯಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಗೆ ಎರಡೂವರೆ ಸಾವಿರ ವರ್ಷದ ಇತಿಹಾಸ, ಚರಿತ್ರೆ ಭವ್ಯ ಪರಂಪರೆ ಇರುವುದು ದಿಟ. ಅದು ಹೆಚ್ಚು ಪ್ರಚಲಿತಗೊಂಡದ್ದು ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಾತ್ರ ೭೦ರ ದಶಕದಲ್ಲಿ ತನ್ನೆಲ್ಲ ಬಾಹುಗಳನ್ನು ಚಾಚಿ ಬೆಳೆಯ ತೊಡಗಿತು. ತನ್ನ ಅಸ್ತಿತ್ವವನ್ನು ಗಟ್ಟಿಗಳಿಸಿಕೊಂಡಿತು. ದಲಿತ ಲೋಕದ ಹಸಿವು, ನೋವು, ಅವಮಾನ, ದೌರ್ಜನ್ಯಗಳು ಅಕ್ಷರ ರೂಪದಲ್ಲಿ ಅಭಿವ್ಯಕ್ತಿದಾಗ ದಲಿತ ಸಾಹಿತ್ಯದ ಸತ್ವ ಏನು ಎಂಬುದು ತಿಳಿಯಿತು. ದಲಿತ ಸಮುದಾಯವು ಅನುಭವಿಸಿದ ಅವಮಾನ-ಶೋಷಣೆ ನೋವುಗಳ ಆದಿಯಾಗಿ ಇಡಿ ಜನಾಂಗದ ಸಂಕಷ್ಟಗಳ ಸರಮಾಲೆಯೇ ದಲಿತ ಸಾಹಿತ್ಯದ ವಸ್ತುವಾಗಿ ನಿರೂಪಿತಗೊಂಡಿತು. ಹಗಲಿರುಳು ಬೆವರು ಸುರಿಸಿ ದುಡಿದ ಶ್ರಮದ ನೆಲೆಯಲ್ಲಿ ಬಳಲಿ ಬೆಂಡಾದ ಅಸಹಾಯಕರು, ಬಂಡವಾಳ ಶಾಹಿಗಳು, ಜಾತಿವಾದಿಗಳು, ಮತಾಂಧರು ಮತ್ತು ರಕ್ತದೋಕುಳಿ ಯಾಡಿದವರೆಲ್ಲ ದಲಿತ ಸಾಹಿತ್ಯದಲ್ಲಿ ಚಿತ್ರಿತಗೊಂಡರು. ಮುಖವಾಡಗಳು ಬಯಲಾಗ ತೊಡಗಿದವು. ಬಹುಶಃ ಬೆವರು-ರಕ್ತದವಾಸನೆ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಕಂಡು ಬಂದದ್ದೇ ಈ ಹಂತದಲ್ಲಿ ಎನ್ನಬಹುದೇನೊ? ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳು ದಲಿತರ ಪಾಲಿಗೆ ಪರಮ ಶತ್ರುಗಳಾದವು. ಪ್ರತಿಭಟನೆ ಸಾಹಿತ್ಯದ ಪ್ರಮುಖ ಅಸ್ತ್ರವಾಯಿತು.

ಕಂಬಾಲಪಲ್ಲಿ, ಬದನವಾಳು, ಕಲಕೇರಿ, ಬೆಂಡಿಗೇರಿ ಪ್ರಕರಣಗಳೆಲ್ಲ ಸೃಜನಶೀಲ ನೆಲೆಯಲ್ಲಿ ರೂಪಿತಗೊಂಡವು. ದಲಿತರ ಬದುಕಿಗೂ ಬರಹಕ್ಕೂ ಸಂಬಂಧವಿದೆ. ಹೋರಾಟಕ್ಕೂ ಸಾಹಿತ್ಯಕ್ಕೂ ಸಂಬಂಧವಿದೆ. ಒಂದಕ್ಕೊಂದು ಬೆವರಿನ, ಕರುಳಿನ ಅನುಭವದ ಅಭಿವ್ಯಕ್ತಿಯ ನಂಟಿದೆ. ಬಿಡಿಸಲಾರದ ಬಂಧನ, ಅದು ಅವಿನಾಭಾವ ಸಂಬಂಧ, ಶೋಷಿತ ಜನರ ಪರವಾದ ಅನುಭವದ ಅಭಿವ್ಯಕ್ತಿಯೇ ದಲಿತ ಸಾಹಿತ್ಯ. ಹೋರಾಟ ಎಲ್ಲಿದೆಯೋ ಅಲ್ಲಿ ಸಾಹಿತ್ಯ; ಎಲ್ಲಿ ಸಾಹಿತ್ಯವಿದೆಯೊ ಅಲ್ಲಿ ಹೋರಾಟ. ದಲಿತ ಚಳವಳಿ ಮತ್ತು ಸಾಹಿತ್ಯಕ್ಕೆ ಇರುವ ಸಂಬಂಧವೇ ಅಂತಹದ್ದು. ಇದಕ್ಕೆಲ್ಲ ಜನ

ಕಲಾ ಮಂಡಳಿಯ ಹೋರಾಟದ ಹಾಡುಗಳು,ಬೀದಿನಾಟಕಗಳನ್ನು ಗಮನಿಸಬಹುದು. ಅಂದಿನ ಎಪ್ಪತ್ತರ ದಶಕ ಈ ಎಲ್ಲ ಹಿನ್ನೆಲೆಯಿಂದಾಗಿಯೇ ಬಹು ಮುಖ್ಯವಾದದ್ದು. ಕವಿ ಸಿದ್ದಲಿಂಗಯ್ಯನವರ

ಇಕ್ರಲಾ ಒದಿರಲಾ

ಈ ನನ್ನ ಮಕ್ಕಳ ಚರ್ಮ ಎಬ್ರಲಾ"

ಎಂದು ಹೇಳುವತನಕ, ಹಾಡುವತನಕ ಓದಿಸಿಕೊಳ್ಳುವ ಬದಲು 'ಒದೆಯ ಬಲ್ಲೆವು ನಾವೂ' ಎಂಬ ಅರಿವು ಶೋಷಿತರಿಗೆ ಇರಲಿಲ್ಲ. ಪ್ರತಿಭಟನೆ ಜಾಗೃತಿ ನಂತರ ಆರಂಭವಾದದ್ದು. ಇದು ದಲಿತ ಲೋಕದ ಅತ್ಯಂತ ಮಹತ್ವದ ಬದಲಾವಣೆಯ ಪರ್ವ ಎನ್ನಬಹುದು. ಡಾ. ಅರವಿಂದ ಮಾಲಗತ್ತಿಯವರ

"ಹುಟ್ಟಬಾರದೊ ಹುಟ್ಟಬಾರದು,

ಏಳೇಳ ಜನ್ಮದಾಗ ಈ ಭೂಮಿಮ್ಯಾಗ

ಹೊಲಿ ಮಾದಿಗರಾಗಿ ಹುಟ್ಟಬಾರದು"

ಎಂಬ ಪ್ರಜ್ಞೆ ಎಲ್ಲೆಡೆ ಪಸರಿಸಿತು. ದಲಿತ ಕೇರಿಯ ಎಲ್ಲ ತಳ ಸಮುದಾಯಗಳು ತಮ್ಮೊಳಗೆ ತಾವು ಅರ್ಥೈಸಿಕೊಂಡು ಬುದ್ಧ,ಬಸವ, ಅಂಬೇಡ್ಕರ್ ಅವರ ದಾರಿಯಲ್ಲಿ ನಡೆಯಲಾರಂಭಿಸಿದವು. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯವಾಗಿ ಜಾಗೃತರಾಗ ತೊಡಗಿದವು.

ಕನ್ನಡ ದಲಿತ ಸಾಹಿತ್ಯ ಮೌಲಿಕತೆಗೆ, ಪ್ರಸಿದ್ಧಿಗೆ ಕೆಲವು ಕಾರಣಗಳಿವೆ. ಜನಸಾಮಾನ್ಯರಿಗೆ ಅರ್ಥವಾಗುವಂತಹ ಭಾಷಾಶೈಲಿಯನ್ನು ದಲಿತ ಸಾಹಿತ್ಯ ಅಭಿವ್ಯಕ್ತಿಸಿತು. ದೇವನೂರ ಮಹಾದೇವ ಅವರ 'ಕುಸುಮ ಬಾಲೆ' ಹಳ್ಳಿಯ ಗ್ರಾಮ್ಯ ಭಾಷೆಯಲ್ಲಿ ನಿರೂಪಿತಗೊಂಡರೆ, ಡಾ.ಸಿದ್ಧಲಿಂಗಯ್ಯ ಅವರ ಅನೇಕ ಕವಿತೆಗಳು ಆವೇಶ,ಆಕ್ರೋಶದ, ಬೈಗುಳದ ಭಾಷೆಯಲ್ಲಿ ಮೂಡಿ ಬಂದಿವೆ. ಡಾ. ಅರವಿಂದ ಮಾಲಗತ್ತಿಯವರ 'ಮೂಕನಿಗೆ ಬಾಯಿ ಬಂದಾಗ' ಕವಿತೆ ಹಾಗೂ 'ಕಾರ್ಯ' ಕಾದಂಬರಿಗಳು ಉತ್ತರ ಕರ್ನಾಟಕದ ಕೇರಿಯ ಭಾಷೆಯನ್ನು ಒಳಗೊಂಡಿವೆ. ಇವು ನಿದರ್ಶನಕ್ಕೆ ಮಾತ್ರ ಬಹುಪಾಲು ದಲಿತ ಸಾಹಿತ್ಯವು ಇದುವರೆಗೆ ಶಿಷ್ಟ ಭಾಷೆಯಲ್ಲಿ ಪ್ರಕಟಗೊಂಡಿರುವುದು ತುಂಬಾ ಕಡಿಮೆ. ಪ್ರತಿ ಸಾಲುಗಳಲ್ಲಿ ದಲಿತರ ನೋವು-ಅವಮಾನ-ಆಕ್ರಂದನದ ಧ್ವನಿಗಳು ವ್ಯಕ್ತಗೊಂಡಿವೆ.

ದಲಿತ ಸಾಹಿತ್ಯ ವಸ್ತು ಕೂಡಾ ವಿಭಿನ್ನ, ಹಸಿವು, ಬಡತನ, ಶೋಷಣೆಗಳು ಮೊದಲಾಗಿ ಇಡೀ ದಲಿತ ಸಮುದಾಯಗಳ ದುಃಖದ ಪ್ರವಾಹವೇ ಹೊರಹೊಮ್ಮಿದೆ. ದಣಿಗಳು, ಭೂಮಾಲೀಕರು, ಜಾತಿವಾದಿಗಳು, ಮತಾಂಧರೆಲ್ಲರೂ ದಲಿತ ಸಾಹಿತ್ಯದ ವಸ್ತುವಾಗಿ ಬಿಂಬಿತಗೊಂಡಿದ್ದಾರೆ.

ಕನ್ನಡ ದಲಿತ ಸಾಹಿತ್ಯ ಇಂದು ಕಾವ್ಯ, ಕತೆ, ನಾಟಕ, ಕಾದಂಬರಿ, ಸಂಶೋಧನೆ ವಿಮರ್ಶೆ, ಆತ್ಮಕತೆ, ಜೀವನ ಚರಿತ್ರೆ, ವೈಚಾರಿಕ ಪ್ರಕಾರಗಳಲ್ಲಿ ವಿಪುಲವಾಗಿ ಬೆಳೆದು



ಬಂದಿದೆ. ಅದರಲ್ಲೂ ಕಾವ್ಯ ಪ್ರಕಾರ ಇತರ ಪ್ರಕಾರಗಳಿಗಿಂತ ಹೆಚ್ಚು ಬೆಳೆದಿದೆ, ಬೆಳೆಯುತ್ತಲಿದೆ. ಆದರೆ ಪ್ರವಾಸ, ಪ್ರಬಂಧ, ಮಾನವಿಕ ಪ್ರಕಾರಗಳಲ್ಲಿ ಇನ್ನಷ್ಟು ವಿಸ್ತರಣೆ ಅಗತ್ಯವಿದೆ. ಇತ್ತೀಚೆಗೆ ಅಂಕಣ ಪ್ರಕಾರದಲ್ಲಿ ದಲಿತ ಲೇಖಕರೂ ಕೂಡಾ ಬರೀತಾ ಇರೋದು ಒಳ್ಳೆಯ ಬೆಳವಣಿಗೆಯಾಗಿದೆ. ಮರಾಠಿ ಪ್ರಭಾವದಿಂದ ಬೆಳೆದು ಬಂದ ಆತ್ಮಕತೆ ಸಾಹಿತ್ಯ ಪ್ರಕಾರ ಇಂದು ಕನ್ನಡದಲ್ಲಿಯೂ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದೆ. ಡಾ.ಸಿದ್ಧಲಿಂಗಯ್ಯನವರ 'ಊರುಕೇರಿ' ಡಾ.ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ'ದಿಂದ ಆರಂಭವಾಗಿ ಇಂದು ಡಾ.ಸಮತಾ ದೇಶಮಾನೆಯವರ 'ಮಾತಂಗಿ ದೀವಟಿಗೆ'ಯವರೆಗೆ ಅನೇಕ ದಲಿತ ಸಾಹಿತಿಗಳು, ಸಂಘಟಿಕರು ತಮ್ಮ ಜೀವನಾನುಭವಗಳನ್ನು ಕಥನರೂಪದಲ್ಲಿ ಬಿಚ್ಚಿಟ್ಟಿದ್ದಾರೆ. ಇವೆಲ್ಲ ಇಂದು ಪ್ರಸಿದ್ಧ ದಲಿತ ಆತ್ಮ ಕತೆಗಳಾಗಿವೆ.

ಕನ್ನಡ ದಲಿತ ಸಾಹಿತ್ಯದಲ್ಲಿ ಪುರುಷರು ಬರೆದ ಸಾಹಿತ್ಯಕ್ಕೆ ಹೋಲಿಕೆ ಮಾಡಿ ನೋಡಿದಲ್ಲಿ ಮಹಿಳೆಯರು ಬರೆದದ್ದು ತುಂಬಾ ಕಡಿಮೆ ಹೌದು. ಅದಕ್ಕೆ ಅನೇಕ ಕಾರಣಗಳಿರಬಹುದು. ಅವರಿಗೆ ಸರಿಯಾದ ಶಿಕ್ಷಣ ಸಿಕ್ಕಿಲ್ಲ, ಮಹಿಳೆಯೊಬ್ಬಳು ಮುಕ್ತವಾಗಿ ತನ್ನ ಅನುಭವಗಳನ್ನು, ಅಭಿಪ್ರಾಯಗಳನ್ನು ಹಂಚಿಕೊಳ್ಳುವ ವಾತಾವರಣ ಇನ್ನೂ ರೂಪಿತವಾಗಿಲ್ಲ. ದಲಿತ ಸಾಹಿತ್ಯ ಕೃಷಿಯಲ್ಲಿ ದಲಿತ ಮಹಿಳೆಯರ ಕೊಡುಗೆ ತುಂಬಾ ಕಡಿಮೆ ಎಂದು ತೀರ್ಮಾನಿಸಿ ಕೈಬಿಡುವ ಹಾಗಿಲ್ಲ. ಏಕೆಂದರೆ ದುಡಿಯುವವರ ನೋವನ್ನು ಹೇಳುವಾಗಲೆಲ್ಲ ಪುರುಷ ಮತ್ತು ಮಹಿಳೆ ಎನ್ನದೆ ನಿರೂಪಿಸಿರುವುದು ದಲಿತ ಸಾಹಿತ್ಯದ ಇನ್ನೊಂದು ಹಿರಿಮೆ. ಇಲ್ಲಿ ಅಭಿವ್ಯಕ್ತಿಗೊಂಡಿರುವ ನೋವು- ಅವಮಾನ ಇವು ಸ್ತ್ರೀ-ಪುರುಷರು ಎಂದು ಬೇರ್ಪಡಿಸಲಾರದಷ್ಟರ ಮಟ್ಟಿಗೆ ದಲಿತ ಸಾಹಿತ್ಯದಲ್ಲಿ ಬೆರೆತು ಹೋಗಿವೆ. ಆದರೂ ಮಹಿಳೆಯರ ಅನುಭವಗಳೇ ಬೇರೆ. ಅವರಿಗೆ ಅಪಾರ ಅನುಭವಗಳಿವೆ. ಜಾತಿಯಿಂದ, ಲಿಂಗ ಭೇದದಿಂದ, ಕುಟುಂಬದ ಒಳಗೆ-ಹೊರಗೆ ಎರಡೂ ಕಡೆ ಶೋಷಣೆಗೆ ಒಳಗಾದವಳು ದಲಿತ ಮಹಿಳೆ ಅಂತಹ ದಲಿತ ಮಹಿಳೆ

ಸಾಹಿತ್ಯ ಬೆಳೆವಣಿಗೆಯ ಹಂತದಲ್ಲಿದೆ ಎಂದರೂ ಇಂದು ಅನೇಕ ದಲಿತ ಮಹಿಳೆಯರು ಸಂಶೋಧನೆ, ಕಾವ್ಯ, ಕತೆ, ಕಾದಂಬರಿ, ನಾಟಕ, ಆತ್ಮಕತೆ ಸಾಹಿತ್ಯ ಪ್ರಕಾರದಲ್ಲಿ ಹೆಚ್ಚು ಕೃಷಿ ಮಾಡಿದವರು ಇದ್ದಾರೆ. ಇದು ಆಶಾದಾಯಕ ಬೆಳೆವಣಿಗೆ ಎನ್ನಬೇಕು. ಕನ್ನಡ ಸಾಹಿತ್ಯ ಮತ್ತು ಕನ್ನಡ ದಲಿತ ಸಾಹಿತ್ಯವನ್ನು ತೌಲನೀಕರಿಸಿದಾಗ ಸತ್ವ, ಭಾಷೆ, ಅಭಿವ್ಯಕ್ತಿಯ ದೃಷ್ಟಿಯಿಂದ ದಲಿತ ಸಾಹಿತ್ಯ ತುಂಬಾ ಮೌಲಿಕವಾದುದು ಮತ್ತು ವಿಭಿನ್ನವಾದುದು.

ಈ ಮಾನವಿಕ ಸಂಪುಟದಲ್ಲಿ ಕನ್ನಡ ದಲಿತ ಸಾಹಿತ್ಯ-ಸಂಸ್ಕೃತಿಗೆ ಸಂಬಂಧಿಸಿದಂತೆ ದಲಿತ ಸಮುದಾಯಗಳ ಭಾಷೆ, ಸಾಮಾಜಿಕ, ರಾಜಕೀಯ ಸಂಗತಿಗಳು, ನಂಬಿಕೆ ಆಚರಣೆಗಳು, ದಲಿತ ಚೇತನಗಳು, ದಲಿತ ಸಂಸ್ಕೃತಿ, ಜಾತಿ, ದಲಿತರ ಉದ್ಯಮಶೀಲತೆ, ದಲಿತ ಮಹಿಳೆ, ದಲಿತ ಕೃಷಿ ಸಂಸ್ಕೃತಿ, ದಲಿತೋದ್ಧಾರ ಚಿಂತನೆ, ದಲಿತರ ದೇವರು ಧರ್ಮ, ದಲಿತರ ಮೇಲಿನ ದೌರ್ಜನ್ಯ, ದಲಿತರ ಸಾಮಾಜಿಕ ನ್ಯಾಯ, ಸ್ಥಾನಮಾನ, ಹಸಿವು-ಬಡತನ ಮೊದಲಾದ ಲೇಖನಗಳು ಇಲ್ಲಿ ಸಂಕಲಿತಗೊಂಡಿವೆ. ಕೆಲವು ಪತ್ರಿಕೆಯಲ್ಲಿ



ಮತ್ತು ಪುಸ್ತಕಗಳಲ್ಲಿ ಪ್ರಕಟಗೊಂಡ ಲೇಖನಗಳನ್ನು ಇನ್ನು ಕೆಲವು ಲೇಖಕರಿಂದ `ಆಹ್ವಾನಿಸಿ ಇಲ್ಲಿ ಸೇರಿಸಿರುವೆ.

ಪ್ರಸ್ತಾವನೆಯ ಆರಂಭದಲ್ಲಿ ಸುವರ್ಣಯುಗಕ್ಕೊಂದು ಶುಭನುಡಿ ಎಂದು ಹೇಳುವುದಕ್ಕೆ ಕಾರಣ ಇಲ್ಲದಿಲ್ಲ. ದಲಿತ ಸಾಹಿತ್ಯ ಆರಂಭವಾಗಿ ನಾಲ್ಕೂವರೆ ದಶಕಗಳು ಕಳೆದಿವೆ. ಅದಕ್ಕೆ ಇದು ಸುವರ್ಣಯುಗದ ನಾಂದಿ ಎಂದೆನ್ನಬಹುದು. ಕನ್ನಡ ಸಾಹಿತ್ಯ ಪರಿಷತ್ತು ಈ ಸಂಪುಟಗಳನ್ನು ಪ್ರಕಟಿಸುತ್ತಿರುವುದು ಐತಿಹಾಸಿಕವಾಗಿ ದಾಖಲರ್ಹವಾದ ಸಂಗತಿ. ಇದಕ್ಕೆ ಕಾರಣವೂ ಇದೆ. ಕಾರಣೀಕರ್ತರೂ ಇದ್ದಾರೆ, ಕಾರಣ ಯಾವುದೆಂದರೆ, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಭವನದಲ್ಲಿ ೫/೬/೨೦೧೮ ರಂದು ನಡೆದ ಪ್ರೊ.ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನವು ೨೦೧೮ನೇ ಸಾಲಿನ ಜೀವಮಾನ ಸಾಧನೆಗಾಗಿ ನನಗೆ ಪ್ರಶಸ್ತಿ ಪ್ರದಾನ ಮಾಡುವ ಸಮಾರಂಭ, ಪ್ರಶಸ್ತಿ ಸ್ವೀಕಾರಕ್ಕೆ ಪ್ರತಿಯಾಗಿ ಅನಿಸಿಕೆ ಹಂಚಿಕೊಳ್ಳುತ್ತಿರುವಾಗ ನಾನು ಡಾ.ಎಚ್.ಟಿ ಪೋತೆಯವರ ಪ್ರಾಸ್ತಾವಿಕ ಮಾತುಗಳನ್ನು ಇನ್ನಷ್ಟು ವಿಸ್ತರಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ದಲಿತ ಮತ್ತು ತಳ ಸಮುದಾಯಗಳ ಸಾಹಿತ್ಯದ ಬಗೆಗೆ ವಹಿಸುತ್ತಿರುವ ಕಾಳಜಿ ಕುರಿತು ಅಭಿನಂದಿಸಿ ಮಾತನಾಡಿದೆ. ದಲಿತ ಸಾಹಿತಿಗಳ ಆಯ್ದ ಪುಸ್ತಕ ಪ್ರಕಟನೆ ಮಾಡುತ್ತಿರುವುದು; ಅಲ್ಲಲ್ಲಿ ತಾಲೂಕು/ಜಿಲ್ಲಾ ಹಾಗೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ದಲಿತ/ತಳಸಮುದಾಯದ ಸಾಹಿತಿಗಳನ್ನು ಆಯ್ಕೆ ಮಾಡುತ್ತಿರುವುದನ್ನು ಉಲ್ಲೇಖಿಸಿ ಕೃತಜ್ಞತೆ ಸಲ್ಲಿಸುತ್ತಲೇ, ಪ್ರಕಟನಾ ವಿಷಯದಲ್ಲಿ ಸಾಮಾಜಿಕ ನ್ಯಾಯ ಇನ್ನಷ್ಟು ಸಿಗುವಂತಾಗಬೇಕು. ಅದು ಡಾ. ಮನು ಬಳಿಗಾರ್ ಅಂತಹವರು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷರಾಗಿರುವಾಗ ಅಸಾಧ್ಯವೇನಲ್ಲ ಎಂದೆ. ಅಲ್ಲದೆ

ಅವರು ಕನ್ನಡ ಸಾಹಿತ್ಯ ಪರಿಷತ್ತು ಪ್ರಶಸ್ತಿಗಳಿಗೂ ಕೂಡಾ ಸಾಮಾಜಿಕ ನ್ಯಾಯ ಕೊಟ್ಟಿರುವುದನ್ನು ಉದಾಹರಿಸಿದನು.

ಇದಕ್ಕೆ ನಿಜವಾಗಿ ಕಾರಣರಾದವರು ಅವತ್ತಿನ ಕಾರ್ಯಕ್ರಮದಲ್ಲಿ ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದವರು ಕ್ರಿಯಾಶೀಲರೂ, ಸಹೃದಯಿಗಳೂ ಆದ ನಾಡೋಜ ಡಾ. ಮನು ಬಳಿಗಾರ್ ಅವರು ನನ್ನ ಅನಿಸಿಕೆಯ ಮಾತು ಮುಗಿಯುತ್ತಿದಂತೆಯೇ ನನ್ನ ಮಾತುಗಳಿಗೆ ಅವರು ಪ್ರತಿಕ್ರಿಯಿಸಿ ಹೇಳಿದ ಮಾತು ಇದು. ಡಾ. ಅರ್ಜುನ ಅವರು ಹೇಳಿದುದು ಸ್ವಾಗತಾರ್ಹ ಎಂದು ಹೇಳಿ ಸುಮ್ಮನಾಗಲಿಲ್ಲ. ಕನ್ನಡ ಸಾಹಿತ್ಯ ಸಂಸ್ಕೃತಿಯಂತೆಯೇ ಕನ್ನಡ ದಲಿತ ಸಾಹಿತ್ಯ ಸಂಸ್ಕೃತಿಯೂ ಬೆಳೆಯಬೇಕು. ದಲಿತ ಸಾಹಿತಿಗಳ ಪುಸ್ತಕಗಳು ಹೆಚ್ಚು ಪ್ರಕಟವಾಗಬೇಕೆಂಬುದು ನನ್ನ ಆಶಯ. ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಪ್ರಕಟಿಸಲು ಸಿದ್ಧವಿದೆ. ಅದಕ್ಕೊಂದು ಸಮಿತಿಯನ್ನು ರಚಿಸಲಾಗುವುದು. ಪ್ರೊ, ಮಲ್ಲೇಪುರಂ ವೆಂಕಟೇಶ ಅವರು ಅಧ್ಯಕ್ಷರಾಗಿರುತ್ತಾರೆ. ಡಾ.ಅರ್ಜುನ ಗೊಳಸಂಗಿಯವರು ಆ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿರುತ್ತಾರೆಂದು ಘೋಷಿಸಿಯೇ ಬಿಟ್ಟರು. ಅದು ಮರುದಿನ ಎಲ್ಲ ಪತ್ರಿಕೆಗಳಲ್ಲಿಯೂ ಪ್ರಕಟವಾಯಿತು.

-X-

ಡಾ. ಮನು ಬಳಿಗಾರ್ ಅವರು ಹೀಗೆ ಹೇಳಿ, ಪತ್ರಿಕೆಯಲ್ಲಿ ಸುದ್ದಿ ಮಾಡಿ, ಸುಮ್ಮನೆ ಕುಳಿತುಕೊಳ್ಳುವ ಜಾಯಮಾನದವರಲ್ಲ. ಅದು ಚಾಚೂ ತಪ್ಪದೇ ಜಾರಿಗೆ ತರುವ ರಚನಾತ್ಮಕ, ಕ್ರಿಯಾತ್ಮಕ, ಕಾವ್ಯ ಚಟುವಟಿಕೆಯ ಮನೋಭಾವವುಳ್ಳವರು. ಅದಕ್ಕೊಂದು ಸಮಿತಿಯನ್ನು ರಚಿಸಿ ದಲಿತ ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಕಾವ್ಯ, ಕತೆ, ವಿಮರ್ಶೆ, ವಿಚಾರ ಸಾಹಿತ್ಯ, ಸಂಶೋಧನೆ, ಮಾನವಿಕ, ಜಾನಪದ, ಆತ್ಮಕತೆ ಮೊದಲಾದ ಪ್ರಕಾರದ ಸಾಹಿತ್ಯ ಸಂಪುಟಗಳ ಸಂಕಲನಕ್ಕೆ, ಸಂಪಾದನೆಗೆ ಚಾಲನೆ ನೀಡಿದವರು. ಅದರ ಪ್ರತಿಫಲವಾಗಿ ಕಾವ್ಯ, ಕತೆ, ವಿಮರ್ಶೆ, ಸಂಶೋಧನೆ, ವಿಚಾರ ಸಾಹಿತ್ಯ, ಮಾನವಿಕ ಮೊದಲಾದ ಸಂಪುಟಗಳು ಪ್ರಕಟಗೊಂಡು ಬೆಳಕು ಕಾಣಲು ಸಾಧ್ಯವಾಗಿದೆ.

ಕನ್ನಡ ದಲಿತ ಸಾಹಿತ್ಯ ಕ್ಷೇತ್ರದಲ್ಲಿ ಸುವರ್ಣಯುಗಕ್ಕೆ ನಾಂದಿ ಹಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷರಾದ ಡಾ.ಮನು ಬಳಿಗಾರ್, ಗೌರವ ಕಾರ್ಯದರ್ಶಿ ಗಳಾದ ಶ್ರೀ ರಾಜಶೇಖರ ಹತಗುಂದಿ, ಶ್ರೀ ವ.ಚ.ಚನ್ನೇಗೌಡ, ಖಜಾಂಚಿಗಳಾದ ಶ್ರೀ ಮಲ್ಲಿಕಾರ್ಜುನಪ್ಪ, ಪ್ರಕಟಣಾ ವಿಭಾಗದ ಸಂಚಾಲಕರಾದ ಡಾ. ಪದ್ಮರಾಜ ದಂಡಾವತಿ ಅವರಿಗೆ ಹಾಗೂ ಸಿಬ್ಬಂದಿಯವರಿಗೆ ವಿವಿಧ ಸಂಪುಟಗಳ ಸಮಿತಿಯ ಸಂಚಾಲಕರಾದ ಪ್ರೊ.ಮಲ್ಲೇಪುರಂ

ವೆಂಕಟೇಶ, ಸದಸ್ಯರುಗಳಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ.ಎಚ್.ಟಿ.ಪೋತೆ ಡಾ.ಬಿ.ಎಂ.ಪುಟ್ಟಯ್ಯ, ಡಾ.ಸಣ್ಣರಾಮ, ಹಾಗೂ ಎಚ್. ದಂಡಪ್ಪ ಅವರಿಗೆ ಮತ್ತು ಮಾನವಿಕ ಸಂಪುಟಕ್ಕೆ ಲೇಖನ ಕಳಿಸಿ ಮೌಖಿಕವಾಗಿ ಅನುಮತಿಸಿದ ಎಲ್ಲ ಲೇಖಕರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿಯ ಎಲ್ಲ ಸಿಬ್ಬಂದಿಯರಿಗೆ ರಾಜ್ಯ ಸಮಿತಿಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೆ ಅನಂತ ವಂದನೆಗಳು.

ಡಾ.ಅರ್ಜುನ ಗೊಳಸಂಗಿ

ಬುದ್ಧ ಪ್ರಿಯ

ಹುಲಕೋಟಿ

## ಪರಿವಿಡಿ


೧. ದಲಿತರು ಮತ್ತು ಸ್ವಾಭಿಮಾನ ೦೧-೦೫

· ಡಾ. ಮೂಡ್ನಾಕೂಡು ಚಿನ್ನಸ್ವಾಮಿ

೨. ಅಸ್ಪೃಶ್ಯತೆ ಪರಿಕಲ್ಪನೆಯ ಸಮಾಲೋಚನೆ ೦೬-೧೭

·ಡಾ. ಅರವಿಂದ ಮಾಲಗತ್ತಿ

೩. ಅಂಬೇಡ್ಕರ್ ಲೋಹಿಯಾ: ಸಾಂಸ್ಕೃತಿಕ ಅನುಸಂಧಾನ ೧೮-೩೧

· ಡಾ. ಎಚ್.ಟಿ.ಪೋತೆ

೪. ದಲಿತರು ಮತ್ತು ಅಮಾನವೀಯ ಆಚರಣೆಗಳು ೩೨-೫೮

· ಡಾ. ಚಿನ್ನಸ್ವಾಮಿ ಸೋಸಲೆ

೫. ಜಾತಿ ವಿನಾಶ

ಪ್ರೊ. ಬಿ. ಕೃಷ್ಣಪ್ಪ

೬. ಗಾಂಧಿ ಮತ್ತು ಅಂಬೇಡ್ಕರ್ ೬೬-೭೧

· ಡಾ. ಸಣ್ಣರಾಮ

೭. ಮಧ್ಯಕಾಲೀನ ಭಾರತದಲ್ಲಿ ದಲಿತರ ಅಸ್ತಿತ್ವ ೭೨-೮೪

· ಪ್ರೊ. ಶಿವರಾಮಯ್ಯ

೮. ದಲಿತ ಸಾಂಸ್ಕೃತಿಕ ಮೂಲ ನೆಲೆಗಳು ೮೫-೯೬

· ಡಾ. ಎಂ .ಎಸ್ ಶೇಖರ್

೯. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಾಮಾಜಿಕ ಚಿಂತನೆ ೯೭-೧೦೪

· ಡಾ. ಜಯದೇವಿ ಗಾಯಕವಾಡ

೧೦. ಪ್ರಭುತ್ವ ಸಂಸ್ಕೃತಿ-ಸಮಾಜ ದಲಿತ ಸಾಹಿತ್ಯ-ದಲಿತ

| | | |
|---|---|---|
| | ಭಾಷೆ ಮತ್ತು ಜ್ಞಾನ ಪರಂಪರೆ | ೧೦೫-೧೨೭ |
| | · ಎನ್.ಕೆ. ಹನುಮಂತಯ್ಯ | |
| ೧೧. | ಅಲೆಮಾರಿಗಳು ಮತ್ತು ಸಾಮಾಜಿಕ ನ್ಯಾಯ | ೧೨೮-೧೩೬ |
| | · ಡಾ. ಬಾಲಗುರುಮೂರ್ತಿ | |
| ೧೨. | ದಲಿತ ಸ್ತ್ರೀವಾದ ಸಮಸ್ಯೆ ಮತ್ತು ಸವಾಲುಗಳು | ೧೩೭-೧೪೭ |
| | · ಬಿ.ಯು.ಸುಮಾ | |
| ೧೩. | ದಲಿತರು ಮತ್ತು ಸಾಮಾಜಿಕ ನ್ಯಾಯ | ೧೪೮-೧೫೩ |
| | · ಡಾ. ಅರ್ಜುನ ಗೊಳಸಂಗಿ | |





| | | |
|---|---|---|
| ೧೪. | ದಲಿತರ ಮುಂದಿನ ಹೆಜ್ಜೆಗಳು | ೧೫೪-೧೫೯ |
| | · ಎಂ. ಕನ್ನಿಕಾ | |
| ೧೫. | ದಲಿತರು ಮತ್ತು ಕೃಷಿ ಪರಂಪರೆ | ೧೬೦-೧೬೬ |
| | · ಮಂಜು ಎಚ್ | |
| ೧೬. | ದಲಿತರ ಅಭಿವೃದ್ಧಿ: ಕೃಷಿ ಪತ್ತಿನ ಸಹಕಾರ ಸಂಘಗಳ ಪಾತ್ರ | ೧೬೭-೧೭೨ |
| | · ಎನ್. ನಿಂಗಯ್ಯ | |
| ೧೭. | ಭಾರತದಲ್ಲಿ ಜನಗಳಿಲ್ಲ ಜಾತಿಗಳಿವೆ! | ೧೭೩-೧೮೧ |
| | · ಪ್ರೊ. ಎಚ್.ಬಿ.ಕೋಲ್ಕಾರ್ | |

೧೮. ದಲಿತರು ಮತ್ತು ಉದ್ದಿಮೆ ಶೀಲತೆ ೧೮೨-೧೮೫

· ರಘೋತ್ತಮ ಹೊ.ಬ

೧೯. ದೇವಾಲಯ ಸಂಸ್ಕೃತಿ ಮತ್ತು ದಲಿತರು ೧೮೬-೧೯೨

· ಡಾ. ಓ ದೇವರಾಜ

೨೦. ಉರಿಲಿಂಗಪೆದ್ದಿ: ಮಾನವೀಯ ಮೌಲ್ಯಗಳು ೧೯೩-೧೯೭

ಶಿವಲಿಂಗಪ್ಪ ಆಯ್. ಭಂಡಾರಿ

೨೧. ದಲಿತ ಮಹಿಳೆ ಮತ್ತು ಜಾಗತಿಕ ವಿವೇಕ ೧೯೮-೨೦೬

· ಹುಲಿಕುಂಟೆ ಮೂರ್ತಿ

೨೨. ಜಾತಿ ಮತ್ತು ಅಸ್ಪೃಶ್ಯತೆಯಿಂದ ನಡೆಯುವ ದೌರ್ಜನ್ಯಗಳು ೨೦೭-೨೧೮

· ಡಾ. ಕೆ.ಪಿ. ಮಹಾಲಿಂಗು ಕಲ್ಕುಂದ

೨೩. ದಲಿತ ಕಾವ್ಯದಲ್ಲಿ ಮಾನವೀಯ ಚಿಂತನೆಗಳು ೨೧೯-೨೩೦

· ಡಾ. ವಾಯ್. ಎ, ದೇವಋಷಿ

೨೪. ಬಣ್ಣ ಕಳೆದುಕೊಳ್ಳುತ್ತಿರುವ ಕೊಂಡಮಾಮರ ೨೩೧-೨೩೯

ಸಾಂಸ್ಕೃತಿಕ ಬದುಕು

· ಡಾ. ಜಿ. ಶ್ರೀನಿವಾಸಯ್ಯ

೨೫. ಮುತ್ತು ಕಟ್ಟಿಸಿಕೊಂಡವರ ತುತ್ತು ಕೂಳಿನ ಕಥೆ ೨೪೦-೨೪೭

ಮಂಜುಶ್ರೀ ಕಡುಕೋಳ

## ೧. ದಲಿತರು ಮತ್ತು ಸ್ವಾಭಿಮಾನ

**- ಡಾ. ಮೂಡ್ನಾಕೂಡು ಚಿನ್ನಸ್ವಾಮಿ**

ಮನಃಶಾಸ್ತ್ರಜ್ಞರ ಪ್ರಕಾರ ಮನುಷ್ಯನಿಗೆ ಹುಟ್ಟಿನಿಂದಲೇ ಬರುವ ಮತ್ತು ಸದಾಕಾಲ ಇರುವ ಪ್ರಮುಖ ಹಾಗೂ ಆಧಿಕ್ಯ ಪ್ರಜ್ಞೆ ಎಂದರೆ "ನಾನು" ಎನ್ನುವುದು. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಈ "ನಾನು" ಎಂಬುದು ಜಾಗೃತವಾಗಿರುತ್ತದೆ. ಅದನ್ನೇ "ಅಹಂ" ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ. ಈ ಅಹಮ್ಮಿಗೆ ಸ್ವಲ್ಪ ಪೆಟ್ಟಾದರೂ ಸರಿ ಮನುಷ್ಯ ವಿಚಲಿತಗೊಳ್ಳುತ್ತಾನೆ. ಇದನ್ನೇ ಸ್ವಾಭಿಮಾನ, ಆತ್ಮಗೌರವ ಎಂದು ಹೇಳುವುದು. ಹಿಂದೂ ಧರ್ಮದಲ್ಲಿ ಮನುಷ್ಯರಿಗೆ ಆತ್ಮಗೌರವವನ್ನು ಶ್ರೇಣೀಕರಣಗೊಳಿಸಲಾಗಿದೆ. ಜಾತಿ ಪದ್ಧತಿಯ ಅತ್ಯಂತ ಮೇಲಿರುವ ಬ್ರಾಹ್ಮಣರಿಗೆ ಶೇಕಡ ೧೦೦ ಸ್ವಾಭಿಮಾನವಿದ್ದರೆ ಕೊನೆಯಲ್ಲಿರುವ ಭಂಗಿಗೆ ಅದು ಶೂನ್ಯ, ಕೆಳಜಾತಿ ಶೂದ್ರ ಹಾಗೂ ದಲಿತ ವರ್ಗದ ಜನರನ್ನು ಸ್ವಾಭಿಮಾನ ಹೀನರನ್ನಾಗಿ ನೋಡಲಾಗುತ್ತದೆ. ಮನುಷ್ಯನ ಗೌರವವನ್ನು ಹುಟ್ಟಿನಿಂದಲೇ ಶ್ರೇಣೀಕರಣಗೊಳಿಸಿರುವ ಕಾರಣದಿಂದಲೇ ಅಂಬೇಡ್ಕರ್ ಹಿಂದೂ ಧರ್ಮಗ್ರಂಥಗಳ ಮೇಲೆ ಹರಿಹಾಯುತ್ತಿದ್ದರು. ಕಟು ವಿಮರ್ಶೆಗೆ ಒಳಪಡಿಸಿ ಸಾಂಕೇತಿಕವಾಗಿ ಮಹಾಡ್ ನಗರದಲ್ಲಿ ಮನುಸ್ಮೃತಿಯ ಕೆಲವು ಭಾಗಗಳನ್ನು ಸುಟ್ಟರು. ಇದು ಮೊಟ್ಟಮೊದಲ ಬಾರಿಗೆ ಅಂಬೇಡ್ಕರ್ ಎತ್ತಿದ ಸ್ವಾಭಿಮಾನದ ಪ್ರಶ್ನೆ, ವಾಸ್ತವವಾಗಿ ದಲಿತ ಹೋರಾಟಗಳೆಲ್ಲವೂ ಸ್ವಾಭಿಮಾನದ ಹೋರಾಟಗಳೇ. ಅವೆಲ್ಲವೂ ಧರ್ಮದ ಹೆಸರಿನಲ್ಲಿ ವಂಚಿತವಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನಗಳನ್ನು ಗಳಿಸಲೆಂದೇ ಪ್ರಾರಂಭವಾದ ಹೋರಾಟಗಳು, ಇದರೊಂದಿಗೆ ಸಮಾನತೆಯನ್ನೂ ಕಲ್ಪಿಸಲಿಕ್ಕಾಗಿಯೇ ನಡೆದ ಹೋರಾಟಗಳು. ಆದ್ದರಿಂದ ಸಮಾನತೆ-ಸ್ವಾಭಿಮಾನ ಒಂದಕ್ಕೊಂದು ತಳುಕು ಹಾಕಿಕೊಂಡಿದೆ.

ಆರ್ಥಿಕ ಸ್ವಾವಲಂಬನೆಗಾಗಿ ಮೀಸಲಾತಿ, ಸಾಮಾಜಿಕ ಸಮಾನತೆಗಾಗಿ ಸ್ವಾತಂತ್ರ್ಯ; ಇವುಗಳು ಸಂವಿಧಾನದ ಮೂಲಕ ವಂಚಿತರಿಗೆ ಸುಲಭವಾಗಿ ದಕ್ಕಿರಬಹುದು. ಆದರೆ ಬಹುಮುಖ್ಯವಾಗಿ ಆತ್ಮಗೌರವ ವ್ಯಕ್ತಗೊಳ್ಳುವುದು ಧಾರ್ಮಿಕ ಸಮಾನತೆಯಲ್ಲಿ, ಹಿಂದೂ ಧರ್ಮದಲ್ಲಿ ಅದಿಲ್ಲವಾದ್ದರಿಂದ ಅಂಬೇಡ್ಕರ್ ದೇವಸ್ಥಾನ ಪ್ರವೇಶವನ್ನು ತಮ್ಮ ಹೋರಾಟದ ಮುಖ್ಯಭಾಗವಾಗಿ ಪರಿಗಣಿಸಿದರು. ನಾಸಿಕ್ ನಗರದ ಕಾಳಾರಾಂ ದೇವಸ್ಥಾನಕ್ಕೆ ದಲಿತರಿಗೆ ಪ್ರವೇಶ ಪಡೆಯಲು ೧೯೩೦ ರಿಂದ ೧೯೩೫ರವರೆಗೆ ಸತತ ಪ್ರಯತ್ನ ಮಾಡಿದರು. ಆದರೆ ಅದು ಸಾಧ್ಯವಾಲಿಲ್ಲ. ಆಗಲೇ ಅವರು "ನಾನೂ ಹಿಂದೂ ಆಗಿ

ಸಾಯಲಾರೆ ಮತಾಂತರಗೊಳ್ಳುತ್ತೇನೆ" ಎಂದು ಘೋಷಿಸಿದರು. ದೇವಸ್ಥಾನದೊಳಗಡೆ ಒಂದು ವರ್ಗದ ಜನರನ್ನು ಪ್ರವೇಶಿಸಲು ನಿಷೇಧ ಹೇರುವುದು ಆ ಜನರ ಸ್ವಾಭಿಮಾನದ ಮೇಲೆ ಮಾಡಿದ ಹಲ್ಲೆ. ಈ ರೀತಿಯ ಆತ್ಮಗೌರವದ ಹಲ್ಲೆಗಳನ್ನು ಹಿಂದೂ ಮೂಲಭೂತವಾದಿಗಳು ಇಂದಿಗೂ ನಡೆಸಿಕೊಂಡು ಬಂದಿರುವುದು ವೃತ್ತಪತ್ರಿಕೆಗಳಲ್ಲಿ ಪ್ರತಿ ದಿನವೂ ನಮಗೆ ದೊರಕುತ್ತವೆ. ಇದಕ್ಕೆ ಬಹಳ ಮುಖ್ಯವಾದ ಉದಾಹರಣೆ ಯೆಂದರೆ ಗುಜರಾತ್ ರಾಜಧಾನಿ ಅಹಮದಾಬಾದ್ ನಗರದಲ್ಲಿ ಸವರ್ಣೀಯರಿರುವ ಯಾವುದೇ ಬಡಾವಣೆಯಲ್ಲಿ ದಲಿತರಿಗೆ ಬಾಡಿಗೆ ಮನೆ ದೊರಕುವುದಿಲ್ಲವಂತೆ. ೨೦೦೨ರ ಗುಜರಾತ್‌ನ ಗೋದ್ರಾ ಗಲಭೆಯ ನಂತರ ಇದು ಇನ್ನೂ ತೀವ್ರವಾಗಿದೆ. ಪರಿಸ್ಥಿತಿ ಎಷ್ಟು ಶೋಚನೀಯವಾಗಿದೆ. ಎಂದರೆ ಪಿ.ಕೆ. ವಲೇರ ಎಂಬ ಒಬ್ಬ ನಿವೃತ್ತ ಐ.ಎ.ಎಸ್. ಅಧಿಕಾರಿ ಸವರ್ಣೀಯ ಬಡಾವಣೆಯಲ್ಲಿ ಒಂದು ಒಳ್ಳೆಯ ಮನೆ ಕೊಳ್ಳಲು ಎಷ್ಟೇ ಪ್ರಯತ್ನ ಮಾಡಿದರು. ಅದು ಸಾಧ್ಯವಾಗಲಿಲ್ಲ. ಸಮಾಜದ ಪ್ರತಿಷ್ಠಿತ ಸ್ಥಾನವನ್ನಲಂಕರಿಸಿದ್ದ ಆತನ ಪಾಡೇ ಹಾಗಾದ ಮೇಲೆ ಬೇರೆಯವರ ಪರಿಸ್ಥಿತಿ? ಆದ್ದರಿಂದ ಸುಮಾರು ೩೦೦ ದಲಿತ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಗಳು ಅಹಮದಾಬಾದ್ ನಗರ ಒಂದರಲ್ಲಿ ಅಸ್ತಿತ್ವದಲ್ಲಿವೆಯಂತೆ. ಇಂಥ ಕಡೆ inclusive growth ಹೇಗೆ ಸಾಧ್ಯವಾಗುತ್ತದೆ? ಸಮಾನತೆಯನ್ನು ಸಾರುವ ಈ ದೇಶದ ಸಂವಿಧಾನಕ್ಕೆ ಎಲ್ಲಿದೆ ಬೆಲೆ?

ಈಗ ಅವಮಾನಿತ ಜಾತಿಗಳ ಸ್ವಾಭಿಮಾನವೆ ನಿತ್ಯಹರಣವಾಗುತ್ತಿದೆ. ಇದನ್ನು ಪುಷ್ಟಿಕರಿಸಲು ಇನ್ನಷ್ಟು ಉದಾಹರಣೆ ಕೊಡಲು ಬಯಸುತ್ತೇನೆ.

ತಮಿಳಿನ ಪ್ರಸಿದ್ಧ ಕತೆಗಾರ್ತಿ ಭಾಮ 'ಅಣ್ಣಾಚಿ' ಎಂಬ ಕತೆ ಬರೆದಿದ್ದಾರೆ. ಅಕ್ಷರ ಕಲಿತ ೨ನೇ ತಲೆಮಾರು ಸ್ವಾಭಿಮಾನದ ಪ್ರಶ್ನೆಯನ್ನು ಹೇಗೆ ನೋಡುತ್ತದೆ. ಎಂಬುದು ಈ ಕತೆಯ ಸಾರಾಂಶ, ಒಮ್ಮೆ ಅಪ್ಪ ಕೆಲಸ ಮಾಡುತ್ತಿದ್ದ ಹೊಲಕ್ಕೆ ಮಗ ನೀರು ಹಾಯಿಸಿಬರಲು ಹೋಗಬೇಕಾಗುತ್ತದೆ. ಆದರೆ, ಅವನು ಹೋಗುವಾಗ ಇಸ್ತ್ರೀ ಮಾಡಿದ ಬಿಳಿ ಅಂಗಿ ಹಾಕಿಕೊಂಡು ಹೋಗುತ್ತಾನೆ. ಇದನ್ನು ನೋಡಿದ ದಣಿಗೆ ವಿಪರೀತ ಸಿಟ್ಟು ಬರುತ್ತದೆ. ನನ್ನ ಎದುರಿಗೆ ಬಿಳಿ ಬಟ್ಟೆ ಹಾಕುವ ಧೈರ್ಯ ಬಂತಾ ನಿನಗೆ ಎಂದು ಗದರಿಸುತ್ತಾನೆ. ನಿಮಗೆ ಕೆಲಸ ಮುಖ್ಯವೊ, ನನ್ನ ಬಟ್ಟೆ ಮುಖ್ಯವೊ ಎಂಬುದು ಹುಡುಗನ ಪ್ರಶ್ನೆ. ತನ್ನ ಎದುರು ಇಡೀ ಮಾಡಿದ ಬಿಳಿ ಬಟ್ಟೆ ಹಾಕಿದ್ದ ಎನ್ನುವ ಕಾರಣಕೋಸ್ಕರ ಅವನನ್ನು ಹಿಂದಿರುಗಿ ಕಳುಹಿಸಿಬಿಡುತ್ತಾನೆ. ಇನ್ನೊಮ್ಮೆ ಇದೇ ಹುಡುಗ ಕಷ್ಟ ಪಟ್ಟು ಸೀಟು ಹಿಡಿದು ಬಸ್‌ನಲ್ಲಿ ಕುಳಿತಿರುತ್ತಾನೆ. ಸಾಮಾನ್ಯವಾಗಿ ಬಸ್ ಬರುತ್ತಿದ್ದಂತೆ ಹಳ್ಳಿಯ ಜನ ಕಿಟಕಿಗಳಿಂದ ತೂರಿಕೊಂಡು ಒಳನುಗ್ಗುತ್ತಾರೆ. ತಮ್ಮ ಟವಲ್ಲುಗಳನ್ನೊ, ಬ್ಯಾಗುಗಳನ್ನೊ, ಸೀಟಿನ ಮೇಲಿಟ್ಟು ತಮ್ಮವರಿಗಾಗಿ ಕಾಯುತ್ತಾರೆ. ಅಷ್ಟು ಕಷ್ಟ ಪಟ್ಟು ಸೀಟು ಹಿಡಿದ ಇವನ ಬಳಿ ಇವರ ಅಪ್ಪ ಕೆಲಸ ಮಾಡುತ್ತಿದ್ದ ಹೊಲದ ಒಡೆಯ ಬಸ್ ಹತ್ತಿ ಇವನು ಇದ್ದಲ್ಲಿಗೆ ಬರುತ್ತಾನೆ.

ನಾನು ಯಾರು ಗೊತ್ತ? ನಿಮ್ಮ ಅಪ್ಪ ಕೆಲಸ ಮಾಡುವ ಹೊಲದ ಒಡೆಯ, ನನಗೆ ಸೀಟು ಬಿಡು ಎಂದು ಜಬರಸಿ ಕೇಳುತ್ತಾನೆ. ಈ ಹುಡುಗ ನನಗೆ ಒಡೆಯನಲ್ಲವಲ್ಲ?' ಎಂದು ಮರುಪ್ರಶ್ನೆ ಹಾಕುತ್ತಾನೆ. ಇವನು ತೋರುವ ಸ್ವಾಭಿಮಾನ ಆ ಹೊಲದೊಡೆಯನನ್ನು ಬೆಚ್ಚಿಬೀಳಿಸುತ್ತದೆ. ಸ್ವಲ್ಪ ಹೊತ್ತಿನ ನಂತರ ಆ ಒಡೆಯನ ದುರಹಂಕಾರವನ್ನು ಕೆಣಕಲೆಂದೇ ಈ ಹುಡುಗ ಒಂದು ಬೀಡಿ ಹಚ್ಚಿಕೊಳ್ಳುತ್ತಾನೆ. ಈ ಕ್ರಿಯೆಯಲ್ಲಿ ಹುಡುಗ ತನ್ನ ಸ್ವಾಭಿಮಾನವನ್ನು assert ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಾಣಿಸುತ್ತದೆ.

ಇದೇ ಹುಡುಗನನ್ನು ಒಮ್ಮೆ ಪಂಚಾಯತಿ ಕಟ್ಟೆಗೆ ಕರೆಸಲಾಗುತ್ತದೆ. ಕಾರಣವೇನೆಂದರೆ ಇವನು ನಾಯಕ ಜಾತಿಯವನೊಬ್ಬನನ್ನು 'ಅಣ್ಣಾ' ಎಂದು ಕರೆದುಬಿಟ್ಟಿರುತ್ತಾನೆ. ಅಲ್ಲಿ ಹಿರಿಯರ ಪ್ರಶ್ನೆ ಏನಾಗಿತ್ತೆಂದರೆ ಹೊಲೆಯನಾದವನು ನಾಯಕರ್ ಜಾತಿಯವನನ್ನು ಅಣ್ಣ ಎನ್ನಬಹುದಾ? ಈ ಚೂಟಿ ಹುಡುಗ ಅವನು ನನಗಿಂತ ಹಿರಿಯವನು ಅದಕ್ಕೆ 'ಅಣ್ಣ' ಅಂದೆ ಇಲ್ಲವಾಗಿದ್ದರೆ 'ಏನೋ ತಮ್ಮಾ'? ಎಂದು ಕೇಳುತ್ತಿದ್ದೆ ಎಂದು ಮತ್ತೂ ಕೆಣಕುತ್ತಾನೆ. ಕಳೆದ ವಾರ ಆ ಜಾಡಮಾಲಿ, ಹೊಲೆಯವರನ್ನು ಅಣ್ಣ ಎಂದು ಕರೆದ, ಅದಕ್ಕೆ ಪಂಚಾಯತಿ ಸೇರಿಸಿದ್ದೀರಿ. ಇದು ಬಿಟ್ಟು ಬೇರೆ ಕೆಲಸವಿಲ್ಲವೆ ನಿಮಗೆ ಎಂದು ಛೇಡಿಸುತ್ತಾನೆ. ಜಾತಿ ಪ್ರತಿಷ್ಠೆಗಾಗಿ ಈ ದೇಶದಲ್ಲಿ ದಿನಂಪ್ರತಿ ನಡೆಯುವ ಕ್ಷುಲ್ಲಕ ಕಥೆಗಳಿವು.

ಇತ್ತೀಚೆಗೆ ವರದಿಯಾದ ಒಂದು ಸುದ್ದಿ ಹೀಗಿದೆ. ಮಧುರೈ ಜಿಲ್ಲೆಯ ಉತ್ತಮ್‌ಪುರ ಹಳ್ಳಿಯಲ್ಲಿ ಮೇಲ್ಜಾತಿಯ ಜನರಿಗೂ ಮತ್ತು ದಲಿತರಿಗೂ ೧೯೮೯ರಲ್ಲಿ ಒಂದು ದೊಡ್ಡ ಗಲಭೆಯಾಯಿತು. ಈ ಜಾತಿ ಜಗಳವನ್ನು ತಡೆಗಟ್ಟಲು ಮೇಲ್ಜಾತಿಯ ಜನ ದಲಿತರ ಕೇರಿ ಮತ್ತು ತಮ್ಮ ಕೇರಿಯ ನಡುವೆ ಒಂದು ದೊಡ್ಡ ಗೋಡೆ ನಿರ್ಮಿಸಿದರು. ಅಷ್ಟೇ ಅಲ್ಲ, ಆ ಗೋಡೆಯನ್ನು ವಿದ್ಯುತ್ತೀಕರಿಸಿದರು (electrification) ಇದು ಸಾರ್ವಜನಿಕರ ಗಮನಕ್ಕೆ ಬಂದಿದ್ದು ಜುಲೈ, ೨೦೦೮ರಲ್ಲಿ. ತಮಿಳುನಾಡಿನ ವಿಧಾನಸಭೆಯಲ್ಲಿ ಪ್ರಸ್ತಾಪವಾದ ಮೇಲೆಯೇ ಆ ಗೋಡೆಯನ್ನು ಕೆಡವಲಾಯಿತು.

ಏಪ್ರಿಲ್ ೨೦೦೮ರಲ್ಲಿ ಮಧ್ಯಪ್ರದೇಶದ ಹಳ್ಳಿಯೊಂದರಲ್ಲಿ ನಡೆದ ಒಂದು ಘಟನೆ ಇನ್ನೂ ವಿಚಿತ್ರವಾಗಿದೆ. ಠಾಕೂರ್ ಒಬ್ಬನ ಶವಸಂಸ್ಕಾರದ ಯಾತ್ರೆ ವೇಳೆ ದಲಿತನೊಬ್ಬ ಬೀಡಿ ಸೇದಿಬಿಟ್ಟ ಎಂದು ಅವನ ಮನೆಯನ್ನು ಧ್ವಂಸಮಾಡಲಾಯಿತು. ಗಲಭೆ ತೀವ್ರಗೊಂಡು ಅಲ್ಲಿಂದ ೧೫ ದಲಿತ ಕುಟುಂಬಗಳ ಗಂಡಸರು ಊರಿನಿಂದ ಪಲಾಯನಗೈದರು.

ಈ ಜಾತಿ ಧರ್ಮದ ಒಳಗೆ ಸ್ವಾಭಿಮಾನ ಗಳಿಸಲು ನಡೆಸುವ ಹೋರಾಟಗಳನ್ನು ಸಮಾನತೆಗಾಗಿ ಹಂಬಲಿಸುವ ದನಿಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುತ್ತದೆ. ಇದು ಮೇಲ್ಜಾತಿಗಳಿಂದಲೇ ಆಗಬೇಕೆಂದೇನಿಲ್ಲ. ಹಿಂದುಳಿದ ಅತಿ ಕೆಳಜಾತಿಯ ಶೂದ್ರ

ವರ್ಗವೂ ತನಗಿಂತ ಕೆಳಜಾತಿಯೊಂದು ಇರಬೇಕೆಂದು ಬಯಸುತ್ತದೆ. ೧೯೮೮ರಲ್ಲಿ ಮೀರತ್‌ನಲ್ಲಿ ಅಂಬೇಡ್ಕರ್ ಪುತ್ಥಳಿಯ ಸ್ಥಾಪನೆಗೆ ವಿರೋಧ ಒಡ್ಡಿದವರು ಹಿಂದುಳಿದ ಜಾತಿಯಾದ ಯಾದವರು. ಆ ಗಲಭೆಯಲ್ಲಿ ೨೧ ಜನ ದಲಿತರು ೩ ಜನ ಯಾದವರು ಕೊಲೆಯಾದರು. ಇವತ್ತಿಗೂ ಭಾರತ ಬೇಯುತ್ತಿರುವುದು ಅಸಮಾನತೆಯನ್ನು ಉಳಿಸಿಕೊಳ್ಳುವುದಕ್ಕಾಗಿ,

ಅಧಿಕಾರ ಅಂತಸ್ತುಗಳೂ ಸಹ ದಲಿತರಿಗೆ ಸ್ವಾಭಿಮಾನವನ್ನು ಗಳಿಸಿ ಕೊಡಲಾರವು. ಎಂಬುದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಮತ್ತೆ ಮತ್ತೆ ಉಲ್ಲೇಖಿಸಲಾದ ಪ್ರಖ್ಯಾತವಾದ ಪ್ರಕರಣಗಳು ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಮತ್ತು ಮಾಜಿ ಉಪಪ್ರಧಾನಿ ಜಗಜೀವನರಾಂರಿಗೆ ಸಂಬಂಧಿಸಿದ್ದು, ಕೆ.ಆರ್.ನಾರಾಯಣನ್ ಫ್ರಾನ್ಸ್ ಭೇಟಿಯಲ್ಲಿ ಪ್ಯಾರಿಸಿನ ಎಲಿಸಿ ಅರಮನೆಯಲ್ಲಿ ಉಳಿದುಕೊಂಡಾಗ An untouchable in Elisy palace ಎಂದು ತಲೆಬರಹ ನೀಡಿ ಇಂಡಿಯಾದ ಮಾಧ್ಯಮಗಳು ಬರೆದವು ಅಲ್ಲಲ್ಲ... ಜರೆದವು. ಜಗಜೀವನರಾಂ ವಾರಣಾಸಿಯಲ್ಲಿ ಸಂಪೂರ್ಣನಂದರ ಪುತ್ಥಳಿ ಅನಾವರಣ ಮಾಡಿ ಹೋದ ನಂತರ ಅಲ್ಲಿನ ವಿದ್ಯಾರ್ಥಿಗಳು ಪುತ್ಥಳಿಯ ಮೇಲೆ ಗೋಮೂತ್ರವನ್ನು ಪ್ರೋಕ್ಷಿಸಿ ಶುದ್ದೀಕರಣ ಕಾರ್ಯಮಾಡಿದರು. ಇವೆರಡು ಜ್ವಲಂತ ಉದಾಹರಣೆಗಳು ಮೇಲ್ಜಾತಿಯ ಮನಸ್ಸಿನ ಮೇಲೆ ಹಿಡಿದ ಕನ್ನಡಿಯಂತಿವೆ.

ಭಾರತದ ಹಳ್ಳಿಗಳಲ್ಲಿ ಜಾತಿಗೊಂದು ಬಾವಿಗಳಿರುವುದು ತಿಳಿದಿರುವ ವಿಷಯ. ಈಗ ಹಳ್ಳಿಗಳಿಗೆ ನಲ್ಲಿ ನೀರು ಹೋಗುತ್ತಿದೆ. ಒರಿಸ್ಸಾದ ಒಂದು ಹಳ್ಳಿಯ ವಿಚಿತ್ರ ಬೇಡಿಕೆ ಏನೆಂದರೆ ಮೇಲ್ಜಾತಿಯ ವಾರ್ಡ್‌ಗೆ ಹೋಗುವ ಪೈಪ್ ಅಸ್ಪೃಶ್ಯರ ಕೇರಿಗಳಿಗೆ ಹೋಗಬಾರದು ಎಂಬುದು!

ಮಹಾರಾಷ್ಟ್ರದ ಖೈರ್ಲಾಂಜಿ ಎನ್ನುವ ಹಳ್ಳಿಯೊಂದರಲ್ಲಿ ಭೂತ್ ಮಾಂಗೆ ಎಂಬ ದಲಿತನ ಕುಟುಂಬವನ್ನು ಸುಡಲಾಯಿತು. ಸುಡುವ ಮುಂಚೆ ತಾಯಿ ಸುರೇಖ, ಮಗಳು ಪ್ರಿಯಾಂಕ ಎಂಬುವರನ್ನು ಬೆತ್ತಲೆ ಮೆರವಣಿಗೆ ಮಾಡಿ ಸಾಮೂಹಿಕ ಅತ್ಯಾಚಾರ ಮಾಡಿ ನಂತರ ಅವರ ಮರ್ಮಾಂಗಗಳಿಗೆ ಕಸಕಡ್ಡಿಯನ್ನು ತುರುಕಿ ಚಿತ್ರಹಿಂಸೆ ನೀಡಿ ಸುಡಲಾಯಿತು. (ಈ ಕ್ರೌರ್ಯದ ವಿವರಗಳು ಇತ್ತೀಚೆಗೆ ನೀಡಲಾದ ನ್ಯಾಯಾಲಯದ ತೀರ್ಪಿನಲ್ಲಿವೆ.) ಊರ ಹೊರಗೆ ಹೋಗಿದ್ದ ಭಯ್ಯಲಾಲ್ ಭೂತ್ ಮಾಂಗೆ ಉಳಿದುಕೊಂಡ. ಈ ಘಟನೆಗೆ ಕಾರಣ ತನಗೆ ಸೇರಿದ ಹೊಲವನ್ನು ಮೇಲ್ಜಾತಿಯವರಿಂದ ಬಿಡಿಸಿಕೊಂಡದ್ದು. ಈ ಘಟನೆ ೨೯-೦೯-೨೦೦೭ರಂದು ನಡೆದರೂ ೧೮ ದಿನಗಳ ಕಾಲ ವರದಿಯಾಗಲೇ ಇಲ್ಲ.

ಜಾತಿ ಧರ್ಮದ ಈ ಕೊಳಕು ಈ ದೇಶಕಷ್ಟೇ ಸೀಮಿತವಾಗಿಲ್ಲ. ಹಿಂದೂಗಳೆನಿಸಿಕೊಂಡ ಜನ ಎಲ್ಲಿ ಹೋಗುತ್ತಾರೋ ಅಲ್ಲೆಲ್ಲ ಜಾತಿನೀತಿಯನ್ನು

ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಬ್ರಿಟನ್‌ನಲ್ಲಿ castewatch UK ಎಂಬ ಖಾಸಗಿ ಸಂಸ್ಥೆಯೊಂದು ಕೆಲಸ ಮಾಡುತ್ತಿದೆ. ಅದರ ಉದ್ದೇಶ hidden apartheid ಅಂದರೆ ಬಿಚ್ಚಿಟ್ಟ ಗುಲಾಮಗಿರಿಯನ್ನು ಹೋಗಲಾಡಿಸುವುದು. ಅದು ಹೋರಾಟ ನಡೆಸಿ ಜಾತಿ ಆಧಾರಿತ ತಾರತಮ್ಯವನ್ನು ನಿವಾರಿಸಬೇಕೆಂದು ಸಂಸತ್ತಿನಲ್ಲಿ 'ಸಿಂಗಲ್ ಇಕ್ವಾಲಿಟಿ ಬಿಲ್' ಅನ್ನು ಪಾಸ್ ಮಾಡಿಸಿಕೊಂಡಿದೆ. ಮತ್ತು ಅಲ್ಲಿನ ಸಾಕ್ಷರ, ಶ್ರೀಮಂತ ಹಿಂದೂಗಳ ಮನ ಪರಿವರ್ತನೆಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅಗಷ್ಟೇ ತಿಂಗಳ ಕೊನೆಯಲ್ಲಿ fifth cup 'ಪಂಚಮಲೋಟ' ಎಂಬ ನಾಟಕವನ್ನು ಪ್ರದರ್ಶಿಸಿದೆ, ಜಾತಿ ಧರ್ಮದ ಈ ಹೀನಾಯ ವ್ಯವಸ್ಥೆ ವಿದೇಶಗಳಲ್ಲೂ ಹರಡಿರುವುದು ವಿಷಾದನೀಯ.

ಅಮೇರಿಕ ದೇಶದಲ್ಲಿ ೧೯೬೫ರಲ್ಲಿ civil Rights Act ಅನ್ನು ಜಾರಿಗೆ ತಂದ ಅಧ್ಯಕ್ಷ ಲಿಂಡನ್ ಜಾನ್‌ಸನ್ ಒಂದು ಮಾತು ಹೇಳಿದ್ದಾನೆ. “It is otjust enough to open the gates of opportunities, all our citizens must be able to walk through the gate”, ಮೀಸಲಾತಿಯಂತಹ ಸರ್ಕಾರದ ಕ್ರಮಗಳಿಂದ ಅವಕಾಶಗಳ ಬಾಗಿಲು ತೆರೆದಿರುವುದು ನಿಜ. ಆದರೆ, ಆ ಬಾಗಿಲುಗಳನ್ನು ದಾಟುವ ಶಕ್ತಿಯನ್ನು ದಲಿತರಿಂದ ಕಿತ್ತುಕೊಳ್ಳುವ ಮತೀಯವಾದಿಗಳು ಇರುವವರೆಗೂ ದಲಿತರಿಗೆ ಸ್ವಾಭಿಮಾನ ತುಂಬಾ ದುಬಾರಿಯಾಗಿಯೇ ಇರುತ್ತದೆ. ಇದನ್ನು ಕುರಿತು ಬರೆದ ಲೇಖನವೊಂದರಲ್ಲಿ ಮೀರಾ ನಂದಾ ಎಂಬುವರು ಹೀಗೆ ಹೇಳುತ್ತಾರೆ. “without the cultural capital some kind of positive discrimination on their behalf is morally justified”. ಸಾಂಸ್ಕೃತಿಕ ಬಂಡವಾಳವೆ ಇಲ್ಲದ ಜನಸಮುದಾಯವೊಂದು ಸ್ವಾಭಿಮಾನವನ್ನು ಗಳಿಸಿಕೊಳ್ಳಲು ಪಡುತ್ತಿರುವ ಪಾಡು ಹೇಳತೀರದು.

********

# ೧. ಅಸ್ಪೃಶ್ಯತೆ ಪರಿಕಲ್ಪನೆಯ ಸಮಾಲೋಚನೆ

ಡಾ. ಅರವಿಂದ ಮಾಲಗತ್ತಿ

ಸಾಹಿತ್ಯ ಹರಿವ ನೀರಿನಂತೆಯೂ ಹೌದು; ಸಮಾಜ ಬಿಂಬ ಸ್ವರೂಪಿಯೂ ಹೌದು. ಅದರಲ್ಲೂ ಭಾರತೀಯ ಸಾಹಿತ್ಯ ಧರ್ಮವನ್ನೇ ಕೇಂದ್ರವನ್ನಾಗಿಸಿಕೊಂಡು ಪುರುಷಾರ್ಥದೆಡೆಗೆ ತುಡಿಯುವಂತಹದ್ದಾಗಿದೆ. ಎಲ್ಲ ಮಾನವರಿಗೂ ಸ್ವೀಕಾರಾರ್ಹವಾದುದೇ 'ಧರ್ಮ' ಎಂಬ ವಿಶಾಲ ಅರ್ಥದಿಂದ ಧರ್ಮವನ್ನು ವ್ಯಾಖ್ಯಾನಿಸಲಾಗಿದೆ. ಇಂಥ ಧರ್ಮದ ಅರ್ಥವನ್ನೊಳಗೊಂಡ ಒಂದು ಸಾಂಸ್ಕೃತಿಕ ಸಂದರ್ಭ ಇರಲಿಕ್ಕೂ ಸಾಕು. ಆದರೆ ಈ ಧರ್ಮ ಕಾಲಾಂತರದಲ್ಲಿ ಸಂಕುಚಿತ ಅರ್ಥವನ್ನು ತಳೆದಿದೆ. ಕೃತಿಗಳಲ್ಲಿ ಒಂದು ಬಗೆಯಾಗಿ ದಾಖಲಾದರೆ ವಾಸ್ತವದಲ್ಲಿ ಮತ್ತೊಂದು ಬಗೆಯಾಗಿ ಬಳಕೆಯಲ್ಲಿರುವುದು ಕಂಡು ಬರುತ್ತದೆ.

ನಮ್ಮ ದೇಶದ ರಾಜಕೀಯ ಸ್ಥಿತ್ಯಂತರರ ಬಗ್ಗೆ ಶೋಧಕ್ಕೆ ಇಳಿಯಬೇಕಾದರೆ, ಧರ್ಮಕೇಂದ್ರಿತವಾದ ದೇವರುಗಳನ್ನು ಪರಿಶೀಲಿಸುವ ಅಗತ್ಯವಿದೆ. ದೇವರುಗಳ ಹಿಂದೆ ದೊಡ್ಡದಾದ ಚರಿತ್ರೆಯೇ ಅಡಗಿದೆ. ಋಗ್ವದದಲ್ಲಿ ದೇವತೆಗಳ ಸ್ತುತಿಗಳಿವೆ. ಪೃಥವೀ ಸ್ಥಾನದಲ್ಲಿ ಅಗ್ನಿಯೇ ಅತ್ಯಂತ ಶ್ರೇಷ್ಠನೆಂದು ಪರಿಗಣಿಸಲಾಗಿದೆ. ಅಂತರಿಕ್ಷ ಸ್ಥಾನದಲ್ಲಿ ಇಂದ್ರ ಶ್ರೇಷ್ಠ, ಆಕಾಶ ಸ್ಥಾನದಲ್ಲಿ (ದ್ಯುಸ್ಥಾನ) ಸೂರ್ಯನೇ ಶ್ರೇಷ್ಠ ಎಂದು ಹೇಳಲಾಗಿದೆ. ಬ್ರಹ್ಮನೇ ಅಗ್ನಿಯಾಗಿ ನಿಂತ ವಿಚಾರಗಳು ಬ್ರಾಹ್ಮಣದಲ್ಲಿವೆ (ಬ್ರಹ್ಮವಾಅಗ್ನಿಃ-ಶತಪಥ ೧-೫-೪-೮) ಸೂರ್ಯನ ಪ್ರತಿನಿಧಿಯೇ ವಿಷ್ಣು ಎನ್ನುವ ವಿಚಾರಗಳಿವೆ. ಇದಲ್ಲದೆ ಉಪನಿಷತ್ತುಗಳು ವಿಷ್ಣು, ಶಿವ (ರುದ್ರ) ಶಕ್ತಿಯ ಉಪಾಸನೆಯನ್ನು ಪ್ರತಿಪಾದಿಸುತ್ತವೆ.

ಮೇಲೆ ಪ್ರಸ್ತಾಪಿಸಲಾದ ವರ್ಣದ ಸ್ಥಿತಿಗತಿಯ ವಿಚಾರ, ಸಾಹಿತ್ಯಕ ವಿಚಾರ ಹಾಗೂ ದೇವತೆಗಳ ವಿಚಾರಗಳನ್ನು ಇಲ್ಲಿ ಒಟ್ಟಾಗಿ ಗ್ರಹಿಸಬಹುದೆನಿಸುತ್ತದೆ. ವ್ಯವಸ್ಥೆಯಲ್ಲಾಗುವ ಬದಲಾವಣೆಗಳು ಸಾಹಿತ್ಯಕವಾಗಿ ಪ್ರಕಟಗೊಳ್ಳುವಾಗ ಪ್ರತಿಮೆ, ಸಂಕೇತಗಳೊಂದಿಗೆ ಬಿಂಬಿತವಾಗುತ್ತವೆ. ಅದರಲ್ಲೂ 'ಧರ್ಮ' ಎನ್ನುವುದು ಸಾಮಾಜಿಕ ಮತ್ತು ಸಾಹಿತ್ಯಕ ವ್ಯವಸ್ಥೆಯ ನಡುವೆ ಕೆಲಮೊಮ್ಮೆ ಕೊಂಡಿಯಾಗಿ, ಇನ್ನು ಕೆಲಮೊಮ್ಮೆ ಪ್ರತಿಷ್ಠಿತ ಶಕ್ತಿಯಾಗಿ ಕೆಲಸ ಮಾಡುವಾಗ ಸಾಮಾಜಿಕ, ಧಾರ್ಮಿಕ ವಿಚಾರಗಳು ತಳುಕು ಬೀಳುತ್ತವೆ. ಇದರೊಂದಿಗೆ ಚರಿತ್ರೆಯಲ್ಲಾಗುವ ಬದಲಾವಣೆಗಳು, ಸಂಘರ್ಷಗಳೂ ದಾಖಲಾಗುತ್ತ ಒಂದಕ್ಕೊಂದು ಬಿಡಿಸಲಾಗದಂತೆ ಬೆಳೆದು ಬಂದು ಬಿಡುತ್ತವೆ. ಅಂತಹ ಸ್ಥಿತಿಯನ್ನು ನಾವಿಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ.

ಗಣಗಳ ವ್ಯವಸ್ಥೆಯೊಂದಿಗೆ 'ನಾಯಕತ್ವ, ನಾಯಕತ್ವದ ಜೊತೆಗೆ ಅದರ ಹಾಗೂ ಅವನ ತಾತ್ವಿಕತೆ ಜೊತೆಗೆ ಧಾರ್ಮಿಕ ಹಾಗೂ ರಾಜಕೀಯ ತಾತ್ವಿಕತೆಗಳ ಬೆರಕೆಯೊಂದಿಗೆ ವ್ಯವಸ್ಥೆಯೊಂದು ಎದ್ದುನಿಲ್ಲುತ್ತದೆ. ಒಂದು ವ್ಯವಸ್ಥೆ ಒಡೆದು ಎರಡು ಮೂರು ತುಂಡುಗಳಾದ ವಿಷಯವನ್ನು ಬ್ರಹ್ಮ, ಶಿವ, ವಿಷ್ಣು ಇವರ ಮೂಲಕ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಮೇಲಿನ ಸಮೀಕ್ಷೆಯಲ್ಲಿ ಬ್ರಹ್ಮ, ವಿಷ್ಣು, ಶಿವ ಇವರು ಒಂದು ಕಾಲಘಟ್ಟದಲ್ಲಿ ಗಣಗಳ ನಾಯಕರಾಗಿದ್ದು, ಕಾಲಾಂತರದಲ್ಲಿ ದೇವತೆಗಳ ಮಟ್ಟಕ್ಕೆ ಏರಿದ್ದಾರೆ. ಬ್ರಹ್ಮನ ನಾಲ್ಕು ಬಾಯಿಗಳಿಂದ ನಾಲ್ಕು ವೇದಗಳು ಹುಟ್ಟಿಕೊಂಡವು ಎನ್ನುವುದು ಇದೇ ನೆಲೆಯಿಂದ ಬಂದದ್ದು. ಬ್ರಹ್ಮನ ನಾಲ್ಕು ತಲೆಗಳ ಹಿಂದಿರುವ ಸಾಂಕೇತಿಕ ಅರ್ಥ ಒಂದೊಂದು ತಲೆ ಒಂದೊಂದು ವರ್ಣದ ಪ್ರತಿನಿಧಿ ಎನ್ನುವದೇ ಆಗಿದೆ. ಐದನೆಯ ತಲೆಯ ಹಿಂದಿರುವ ಪೌರಾಣಿಕ ಕತೆಗಳನ್ನು ಗಮನಿಸಿದರೆ ಅವೆಲ್ಲ ಶಿವಾರಾಧಕರ ಸಂಬಂಧಿಯಾದುವು. 'ಶೈವ' ಪರಿಕಲ್ಪನೆ ಶ್ರಮಿಕರ ಪ್ರತಿನಿಧಿಯಾಗಿ ಬಂದಿದೆ. ಶಿವನ ವಾಹನವಾದ ನಂದಿಯೇ (ಕೃಷಿಕರು ಇದಕ್ಕೆ ಸಾಕ್ಷಿ. ಐದನೆಯ ತಲೆಯ ಸೇರ್ಪಡೆ ಮತ್ತು ಅದು ನಾಲ್ಕು ತಲೆಗಳೊಂದಿಗೆ ಸಮಕಟ್ಟಿ ನಿಲ್ಲಲಾಗದಿರುವ ಸ್ಥಿತಿಯನ್ನು ಕತೆಗಳು ಸೂಚಿಸುತ್ತವೆ. ಅವರ್ಣೀಯರನ್ನು ನಾಲ್ಕು ವರ್ಣಗಳೊಂದಿಗೆ ಸೇರಿಸುವ, ತೆಗೆಯುವ ಪ್ರಕ್ರಿಯೆಯನ್ನು ನಾವಿಲ್ಲಿ ಗಮನಿಸುತ್ತೇವೆ. ಆ ಅವರ್ಣೀಯರೇ ದಲಿತರು ಅಥವಾ ಅಸ್ಪಶ್ಯರು. ಬ್ರಹ್ಮನೇ ಸೃಷ್ಟಿಕರ್ತ, ಜೀವರಾಶಿಗಳ ಪಿತೃ, ವರ್ಣವ್ಯವಸ್ಥೆಯ ದಾತ, ಬ್ರಹ್ಮನೊಂದಿಗೆ ಪ್ರತಿಶಕ್ತಿಯಾಗಿ ಶಿವ (ರುದ್ರ)ನೂ ನಿಲ್ಲುತ್ತಾನೆ. ಈತನಿಗೂ ಐದು ತಲೆಗಳಿರುವುದನ್ನು ಶಿವ ಸಂಬಂಧಿ ಪುರಾಣಗಳು ದಾಖಲಿಸುತ್ತವೆ. (ಸಿದ್ಧರಾಮ ಚರಿತೆ) ಎಂದರೆ ಶೈವರು ಪ್ರತ್ಯೇಕ ತಾತ್ವಿಕತೆಯನ್ನು ಹೊಂದಿದ್ದು ಅವರಲ್ಲಿಯೂ ವರ್ಣ ವ್ಯವಸ್ಥೆ ಇತ್ತು ಎನ್ನುವುದನ್ನು ಸೂಚಿಸುತ್ತದೆ.

ಕಾಲಾಂತರದಲ್ಲಿ ರೂಪುಗೊಂಡದ್ದು ವಿಷ್ಣು, ಈತನ ಬರವು ವರ್ಣವ್ಯವಸ್ಥೆಯ ವಿಚಾರಗಳಲ್ಲಾದ ಬದಲಾವಣೆಯನ್ನು ದಾಖಲಿಸುತ್ತದೆ. ಬ್ರಹ್ಮನ ಹಾಗೂ ಶಿವನ ತಾತ್ವಿಕ ಸಂದರ್ಭದಲ್ಲಿ ಎಲ್ಲ ವರ್ಣಗಳೂ ಸಮಾನ ಎನ್ನುವ ಧೋರಣೆಯನ್ನು ಗಮನಿಸುತ್ತೇವೆ. ಇದು ಶಿವ ಅಥವಾ ಬ್ರಹ್ಮನಿಗಿರುವ ರುಂಡಗಳ ಸಮಾನ ಹೊಂದಾಣಿಕೆಯೇ ಆಗಿದೆ. ವಿಷ್ಣು ಸೂರ್ಯನ ಪ್ರತಿನಿಧಿ ಎಂದು ಹೇಳಲಾಗುತ್ತದೆ. ಈತನ ಅಂಗಾಗಗಳಿಗೆ ಅನುಗುಣವಾಗಿ ವರ್ಣಗಳನ್ನು ವಿಭಜಿಸಿ ಹೇಳುವುದು ತುಂಬ ಗಮನಾರ್ಹವಾದ ವಿಷಯವಾಗಿದೆ.

ಬ್ರಾಹ್ಮಣೋಸ್ಯ ಮುಖಮಾಸಿಕ್ ಬಾಹುರಾಜನ್ಯಃಶೃತಃ

ಊರೂ ತದಸ್ಯಯದ್ ವೈಶಃಪಾಂಶೂದ್ರೋ ಅಜಾಯತ |

ಬ್ರಾಹ್ಮಣ ಮುಖದಿಂದ, ಕ್ಷತ್ರಿಯ ಬಾಹುಗಳಿಂದ, ವೈಶ್ಯ ತೊಡೆಯಿಂದ ಮತ್ತು ಶೂದ್ರ ಕಾಲುಗಳಿಂದ ಹುಟ್ಟಿದನು ಎಂದು ಸಾರುವ ಈ ಶ್ಲೋಕ ವರ್ಣವ್ಯವಸ್ಥೆಯನ್ನು ಹಾಯಗಾರಿಕೆಯಿಂದ ಗುರುತಿಸುವ ಪರಿಪಾಠ ಆರಂಭವಾಗಿತ್ತೆನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಸೂರ್ಯನ ಪ್ರತಿನಿಧಿ ಎಂದು ಕರೆಯಿಸಿಕೊಳ್ಳುವ ವಿಷ್ಣುವಿನ ಚಾರಿತ್ರಿಕ ಸಂದರ್ಭ ರಾಜ ಪ್ರಭುತ್ವದಿಂದ ಬಲ ಪಡೆದುಕೊಂಡಿದೆ. ಗಣಪ್ರಧಾನವಾದ ರಾಜಕೀಯ ವ್ಯವಸ್ಥೆಯಲ್ಲಿ ಧಾರ್ಮಿಕ ಅಧಿಕಾರವೇ ಪ್ರಧಾನವಾಗಿದ್ದು ಬ್ರಹ್ಮನ ತಾತ್ವಿಕ ವಿಚಾರಗಳೇ ನಿಂತಿದ್ದವು ಎನ್ನುವುದನ್ನು ಗುರುತಿಸಲು ಸಾಧ್ಯವಾಗುತ್ತದೆ. 'ವಿಷ್ಣು' ರಾಜಪ್ರಭುತ್ವದ ಕಾಲಘಟ್ಟಕ್ಕೆ ಸಂಬಂಧಿಸಿದವನೆಂದು ಹೇಳಲು ಆತನ ಜೊತೆಗಿರುವ ಸಂಕೇತಗಳೇ ಎಂದರೆ ಶಂಖ, ಚಕ್ರಗಳೇ ಅಧಿಕೃತ ದಾಖಲೆಗಳಾಗುತ್ತವೆ. ಬ್ರಹ್ಮನ ಸಂಕೇತವಾಗಿ ನಾಯಿ-ಗೋವು ಬರುತ್ತವೆ. ಸಂಕೇತದ ಆಯ್ಕೆ ವಿಚಾರ ಶ್ರೀಮಂತಿಕೆಗೆ ಸಂಬಂಧಿಸಿರುತ್ತದೆ. ಹಾಗೆಯೇ ಇಲ್ಲಿ ಆಗಿದೆ ಮತ್ತು ಇವು ಮಾನವನ ಬದುಕಿನ ಪ್ರಾಚೀನತೆಯ ರೀತಿಯನ್ನು ಅವಲಂಬಿಸಿ ಬಂದಿವೆ ಎಂದು ಹೇಳಬಹುದು. ಹಾಗೆಯೇ ಇವುಗಳ ನಂತರದಲ್ಲಿ ಬರುವ 'ನಂದಿ' ಶ್ರಮಿಕರ ಸಂಕೇತವಾಗಿ ನಿಲ್ಲುತ್ತದೆ. ಆದರೆ ಮೂಲದಲ್ಲಿ ಇದು ರೈತರನ್ನು ಪ್ರತಿನಿಧಿಸಿದ್ದಕ್ಕಿಂತ ಶೈವರನ್ನು ಪ್ರತಿನಿಧಿಸಿತ್ತು ಎನ್ನುವುದು ಗಮನಾರ್ಹ. ಈ ಮೂರು (ಬ್ರಹ್ಮ, ಶಿವ, ವಿಷ್ಣು ಆರಾಧನ ಶಕ್ತಿಗಳು ಒಂದೊಂದು ಕಾಲಘಟ್ಟದಲ್ಲಿ ತಮ್ಮದೆ ಆದ ತಾತ್ವಿಕತೆಯಿಂದ ಮೆರೆದವುಗಳು ಎನ್ನುವುದರಲ್ಲಿ ಸಂದೇಹವಿಲ್ಲ. ಒಂದೊಂದು ತಾತ್ವಿಕತೆಗಳೇ ಒಂದೊಂದು 'ಧರ್ಮ'ದ ಸ್ಥಾನವನ್ನು ಮೊದಲು ಆಕ್ರಮಿಸಿಕೊಂಡಿದ್ದು, ಈ ಧರ್ಮಗಳ ತಾತ್ವಿಕತೆಗಳು ವರ್ಣ ನೀತಿಯ ವಿಚಾರದಲ್ಲಿ ಮಾತ್ರ ವ್ಯತ್ಯಾಸವನ್ನು ತೋರುವಂಥವುಗಳಾಗಿದ್ದು ಮೂಲಭೂತವಾದ ತಾತ್ವಿಕ ವಿಚಾರದಲ್ಲಿ ಹೆಚ್ಚಿನ ಬದಲಾವಣೆ ಇರಲಿಲ್ಲ.

ಆದರೆ ರಾಜಕೀಯದ ಗಣನಾಯಕ ವ್ಯವಸ್ಥೆಯ ಕಾಲ ಮುಗಿದು ರಾಜಪ್ರಭುತ್ವದ ಕಾಲದ ಸಂದರ್ಭದಲ್ಲಿ ಈ ತ್ರಿಮೂರ್ತಿಗಳು ಒಂದಾಗಿದ್ದುದು ಕಂಡುಬರುತ್ತದೆ. ಎಂದರೆ ರಾಜಕೀಯ ವ್ಯವಸ್ಥೆಯಲ್ಲಾದ ಬದಲಾವಣೆಯಿಂದಾಗಿ ಸಾಮಾಜಿಕ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಿದಂತಾದಾಗ ಧಾರ್ಮಿಕ ವ್ಯವಸ್ಥೆಗಳು ತನ್ನ ಸ್ಥಾನ ಕಳೆದುಕೊಂಡು ಕಂಗಾಲಾಗಿವೆ. ಈ ಬಿಡಿಬಿಡಿಯಾದ ಮತ್ತು ಇಂದಿನ ಧರ್ಮದ ಸ್ಥಾನದಲ್ಲಿ ನಿಂತು ಕೆಲಸ ಮಾಡುವ ಈ ಶಕ್ತಿ ಸ್ವರೂಪಗಳು (ಬ್ರಹ್ಮ, ವಿಷ್ಣು, ಶಿವ) ತಮ್ಮ ತಾತ್ವಿಕ ವಿಚಾರಗಳೊಂದಿಗೆ ತಮ್ಮದೇ ಆದ ಭಿನ್ನವಿಚಾರಗಳ ಮೇಲೆ ಆಧಾರಿತವಾದ ವರ್ಣ ವ್ಯವಸ್ಥೆಯನ್ನು ಹೊಂದಿದ್ದವು. ವರ್ಣವ್ಯವಸ್ಥೆಯ ವಿಚಾರಗಳಲ್ಲಿಯೇ ತಾಕಲಾಟ, ಧಾರ್ಮಿಕ ವ್ಯವಸ್ಥೆಯ ಬೇರುಗಳ ಸಡಿಲಿಕೆ. ಇಂಥವೇ ಸಾಮ್ರಾಜ್ಯಶಾಹಿ ವ್ಯವಸ್ಥೆ ಬರುವಂತೆ ಅನುಕೂಲ ಮಾಡಿಕೊಟ್ಟಿವೆ. ಎಂದರೆ ಸಮಾಜದ ವ್ಯವಸ್ಥೆಯನ್ನು ಅಧಿಕೃತವಾಗಿ ಧರ್ಮವೇ ಆಳುತ್ತಿದ್ದ ಕಾಲ ಸಡಿಲಗೊಂಡು ಆರ್ಥಿಕ ವ್ಯವಸ್ಥೆಯ (ರಾಜಕೀಯ) ಮೂಲಕ ಸಾಮಾಜಿಕ ವ್ಯವಸ್ಥೆ ಆಳುವಂಥ ಸ್ವರೂಪ ಆರಂಭವಾದ ಕಾಲವೂ ಇದೇ ಆಯಿತು.

ಇಂಥ ವ್ಯವಸ್ಥೆಗೆ ಅಸ್ತಿರಭಾರ ಹಾಕಿದ್ದು ಬೌದ್ಧಧರ್ಮ. ಈ ಕಾಲದಲ್ಲಿಯೇ ಬೌದ್ಧಧರ್ಮ ಚಿಗುರೊಡೆದು ತಲೆ ಎತ್ತಿ ಬೆಳೆಯಲು ಸಾಧ್ಯವಾಯಿತು. ಬುದ್ಧನ 'ಸರ್ವಸ್ಸ ಲಕ್ಷಣಂ, ಕ್ಷಣಿಕಂ ಕ್ಷಣಿಕಂ ದುಃಖ ದುಃಖ, ಶೂನ್ಯಂ ಶೂನ್ಯ' ಎಂಬ ತತ್ವಸಾರ

ತ್ರಿಮೂರ್ತಿಗಳ ತಾತ್ವಿಕತೆಗಿಂತ ಭಿನ್ನವಾಗಿತ್ತು (ವಸ್ತುಗಳೆಲ್ಲ ತಮ್ಮದೇ ಆದ ಲಕ್ಷಣಗಳಿಂದ ಕೂಡಿದ್ದಾಗಿವೆ. ಸಾಮಾನ್ಯ ಲಕ್ಷಣವೆಂಬುದೇ ಇಲ್ಲ, ಸ್ವಲಕ್ಷಣ ಎಂಬುದು ಪ್ರಪಂಚದಲ್ಲಿ ಗೋಚರವಾಗುವ ಎಲ್ಲ ವಸ್ತುಗಳು ಕ್ಷಣಿಕ. ಎಲ್ಲವೂ ಬದಲಾಗುವಂಥವೇ, ಶಾಶ್ವತ ವಾದ ಯಾವ ವಸ್ತುವೂ ಇಲ್ಲ. ಹಾಗೆಯೇ ಶರೀರದಲ್ಲಿ ಆತ್ಮನಿಲ್ಲ, ಮನಸ್ಸು ಚಂಚಲ, ಪ್ರತಿಕ್ಷಣ ಬದಲಾಗುತ್ತದೆ. ವಸ್ತು ಸ್ಥಿರವೆಂಬ ಭಾವನೆಯೇ ದುಃಖಮಯವಾದ ಜೀವನಕ್ಕೆ ಮೂಲ. ಎಲ್ಲ ರಾಗದ್ವೇಷಗಳನ್ನೂ ಕಲ್ಪನೆಗಳನ್ನೂ ನಿರ್ಮೂಲನ ಮಾಡುವುದೇ ಶೂನ್ಯ. ನಾನು ಎಂಬುದೇ ಇಲ್ಲ ಇದು ದೃಢವಾದರೆ ನಿರ್ವಾಣ ಸಾಧ್ಯ.) ಜೀವಾತ್ಮ ಪರಮಾತ್ಮ ಜಗತ್ತುಗಳ ಬಗ್ಗೆ ನಂಬಿಕೆ ಇಲ್ಲದ, ವಾಸ್ತವತೆಯ ಮೇಲೆ ನಿಂತಿರುವ ಈ ವಿಚಾರಗಳು ಆಕರ್ಷಕವಾದುದುರಿಂದ ರಾಜಾಸ್ಥಾನದಲ್ಲಿ ಆಶ್ರಯ ದೊರೆಯಲು, ಸಾಮಾನ್ಯ ಜನತೆಯಲ್ಲಿ ನೆಲೆ ನಿಲ್ಲಲು ಕಾರಣವಾಯಿತು. ಹೀಗೆ ಮೂಲಭೂತವಾದ ಬದಲಾವಣೆಯ ವಿಚಾರಗಳನ್ನು ಬೌದ್ಧಧರ್ಮ ಒಡಲೊಳಗಿಟ್ಟುಕೊಂಡು ಬಂದಿರುವುದರಿಂದ ಪ್ರತ್ಯೇಕವಾಗಿ ನಿಂತುಬಿಟ್ಟಿತು ಮತ್ತು ತ್ರಿಮೂರ್ತಿಗಳ ಭಿನ್ನ ತಾತ್ವಿಕತೆಯ ಧರ್ಮಗಳಿಂದ ಪ್ರಬಲವಾದ ವಿರೋಧವನ್ನು ಎದುರಿಸಬೇಕಾಗಿ ಬಂತು. ಹೆಚ್ಚಿನ ತಾತ್ವಿಕ ಭಿನ್ನಾಭಿಪ್ರಾಯ ಇಲ್ಲದಿರುವುದರಿಂದ ಬ್ರಮಾವಾದದ ತ್ರಿಮೂರ್ತಿಗಳೆಲ್ಲ ಬೇಗನೆ ಒಂದಾಗಲೂ ಸಾಧ್ಯವಾಗಿದೆ. ಇವರಲ್ಲಿಯೇ ಇರುವ ಕಲಹ ತುಂಬ ಕುತೂಹಲಕಾರಿಯಾಗಿದೆ. (ನೋಡಿ: ಐಹಿತ್ಯ, ಪುರಾಣ ಮತ್ತು ವೈಜ್ಞಾನಿಕ ಮನೋಧರ್ಮಃ ಅರವಿಂದ ಮಾಲಗತ್ತಿ, ಸಾಹಿತ್ಯ ಸೃಷ್ಠಿ ಮತ್ತು ವೈಜ್ಞಾನಿಕ ಮನೋಧರ್ಮ-ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೦) ಇವರು ವರ್ಣಗಳ ಪ್ರತಿನಿಧಿಗಳೂ ಹೌದೆನಿಸುತ್ತದೆ. ಸೇವೆ ಮಾಡುವುದಕ್ಕಾಗಿಯೇ ಹುಟ್ಟಿದವರು ಎಂದು ಕರೆಯಿಸಿಕೊಳ್ಳುವ ಶೂದ್ರರು ಆನಂತರ ಒಂದು ಶಕ್ತಿಯಾಗಿ ಬೆಳೆಯಲಿಲ್ಲವೆಂದು ತೋರುತ್ತದೆ.

ಈ ಎಲ್ಲ ಮೇಲಿನ ವಿಚಾರಗಳನ್ನೂ ಪುರಾಣಗಳ ವಿಷಯ ಮೇಲಿಂದ ತುಂಬ ಸಲೀಸಾಗಿ ಸಾದರಪಡಿಸಿ ತೋರಿಸಬಹುದಾಗಿದೆ. ರಾಜ ಪ್ರಭುತ್ವ ಕಾಲದಲ್ಲಿ ವಿಷ್ಣುವಿಗೆ ಆದ್ಯತೆ ಸಿಕ್ಕಿದೆ. ಈ ಶಕ್ತಿ ಸಾಹಿತ್ಯವಾಗಿ ಅರಸೊತ್ತಿಗೆಯ ಪ್ರತೀಕವಾಗಿ ಬೆಳೆದಿದೆ. “ಅರಸರು ಬರುತ್ತಾರೆ ಹೋಗುತ್ತಾರೆ” ಎನ್ನುವಂತೆಯೇ ಅರಸರ ಇತಿಹಾಸವನ್ನು ಈ ಪ್ರತೀಕದ ಮೂಲಕ ಹಿಡಿದಿಡಲಾಗಿದೆ. ವಿಷ್ಣುವಿನ ಒಂದು ಆವತಾರವೆಂದರೆ ಸಮರ್ಥನಾದ ಅರಸು ಬಂದು ಅಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ವ್ಯವಸ್ಥೆಯ ಅಥವಾ ಸಾಂಪ್ರದಾಯಿಕ ವಿಚಾರಗಳನ್ನು ಕಾಪಡಿಕೊಂಡು ಹೋಗುತ್ತಿದ್ದ ಎಂದರ್ಥ. ಹೀಗೆ ಉದಯಿಸಿದ ಅರಸನಿಗೆ ಅವತಾರದ ತಳುಕುಹಾಕಿ ಅರ್ಥೈಸುವುದು ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ.

ವಿಷ್ಣುವಿನ ಅವತಾರಗಳಲ್ಲಿ ಪ್ರಧಾನವಾಗಿ ಬೌದ್ಧಧರ್ಮ ಮತ್ತು ಜೈನಧರ್ಮಗಳನ್ನು ಎದುರಿಸಿ ಬದುಕಿದ ವಿಧಾನಗಳನ್ನು ಹೇಳುತ್ತವೆ. ತ್ರಿಮೂರ್ತಿ ಶಕ್ತಿಗಳ ಅಖಂಡತ್ವದ ಗೆಲುವನ್ನು ಸಾರುತ್ತದೆ. ಇದರ ಅರ್ಥ ಬೌದ್ಧ ಧರ್ಮದ ನಂತರವೇ ಅವತಾರಗಳ

ಪರಿಕಲ್ಪನೆ ಬಂದಿದೆ ಎಂದಲ್ಲ. ಬ್ರಹ್ಮ, ಶಿವ, ವಿಷ್ಣು ಇವರ ಬೆನ್ನ ಹಿಂದೆಯೇ ಇದ್ದ ಘಟನಾತ್ಮಕ ಕಥಾವಸ್ತು ಬೌದ್ಧಧರ್ಮದ ಆಲೋಚನೆಯ ಪ್ರಹಾರದ ಸಂದರ್ಭದಲ್ಲಿ ಪರಿಷ್ಕರಣ ಹೊಂದಿ ಮತ್ತೆ ಹೊಸದೊಂದು ರೂಪ ತಳೆದಿದೆ ಎನ್ನುವುದು ಹೆಸರುಗಳನ್ನೇ ಪರಿಶೀಲಿಸಿದರೆ ಇತಿಹಾಸ ಸಿಗುತ್ತದೆ. ರುದ್ರ, ಶಿವ, ಈಶ್ವರ, ಮಹೇಶ್ವರ, ಕಾಳಾಮುಖ, ಕಾಪಾಲಿಕ, ಪಾಶುಪಾತ, ಲಕುಲೀಶ, ಬೀರದೇವರು, ವೀರಭದ್ರ, ಮೈಲಾರ, ಇದೇ ರೀತಿ ವಿಷ್ಣುವಿನ ಹೆಸರಿನ ಪಟ್ಟಿ ಬೆಳೆಯುತ್ತದೆ. ವಿಷ್ಣುವಿಗೆ ಅನ್ವಯವಾಗುವ ಹೆಚ್ಚಿನ ಹೆಸರುಗಳು ಬ್ರಹ್ಮನಿಗೂ ಅನ್ವಯವಾಗುತ್ತದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಗಣನಾಯಕನ ಹೆಸರೇ ದೇವರ ಹೆಸರಾಗಿ ದೇವರ ಹೆಸರಿಗೆ ರಾಜಕೀಯ ನಾಯಕರ ಹೆಸರುಗಳನ್ನು ಸೇರಿ ಪರ್ಯಾಯ ನಾಮಗಳಾಗಿ ಬೆಳೆಯುತ್ತ ಬಂದಿವೆ. ಮುಂದೆ ಅವೇ ಅವತಾರಗಳೆಂದು ಕರೆಸಿಕೊಂಡಿವೆ. ದಶಾವತಾರದ ಕಾಲಘಟ್ಟ ನೇರವಾಗಿ ಬೌದ್ಧಧರ್ಮದೊಂದಿಗಿನ ಸಂಘರ್ಷವನ್ನು ಹೇಳುವುದೇ ಆಗಿದೆ. ಎಂದರೆ ತ್ರಿಮೂರ್ತಿಗಳ ಕಾಲದಿಂದ ಬಂದ ಆಳ್ವಿಕೆಯ ತಂತ್ರಗಳು ಪುನಃ ಪರಿಷ್ಕರಣಕ್ಕೆ ಒಳಗಾಗಿ ದಶಾವತಾರ ರೂಪುಗೊಂಡಿವೆ.

ಭಿನ್ನವಾಗಿ ತಾತ್ವಿಕ ವಿಚಾರವನ್ನುಳ್ಳ ಧರ್ಮದ ನಿಲುವುಗಳನ್ನು ತಾತ್ವಿಕವಾಗಿ ಚರ್ಚಿಸಿ ಒಪ್ಪಿಕೊಳ್ಳುವವರು ಯಾರು? ಬೌದ್ಧಧರ್ಮ ಭಾರತೀಯ ಧರ್ಮವೇ. ಹೀಗಾಗಿ ಇಂಥಹ ತಾತ್ವಿಕತೆಗೆ ಬೆಂಬಲವನ್ನು ಕೊಟ್ಟವರು ತ್ರಿಮೂರ್ತಿಗಳ ತಾತ್ವಿಕತೆಯ ಕೊಂಡೆಯಡಿಯಲ್ಲಿ ಇರುವ ಚಿಂತಕರೇ ಆಗಿದ್ದಾರೆ. ಎಂದರೆ ಅಕ್ಷರವಿದ್ಯೆಯನ್ನು ಅರಿತು ಬ್ರಾಹ್ಮಣರೆಂದು ಕರೆಸಿಕೊಂಡವರು (ಜನಾಂಗೀಯವಾದದ ಬ್ರಾಹ್ಮಣರಲ್ಲ. ಮುಕ್ತ ವರ್ಣವ್ಯವಸ್ಥೆಯಲ್ಲಿ ಅಧ್ಯಯನ ಅಧ್ಯಾಪನಕ್ಕೆ ಮೀಸಲಾಗಿಸಿಕೊಂಡ 'ಬ್ರಾಹ್ಮಣ' ರು ಎಂದು ತಿಳಿಯುವುದು ಅವಶ್ಯ). ಅನಂತರ ಈ ಬೆಂಬಲ ಅರಸರಿಂದ ಸಾಮಾನ್ಯ ಜನತೆಯವರೆಗೂ ಪಸರಿಸುವ ವಿಧಾನ ಸರ್ವೆಸಾಮಾನ್ಯವಾಗಿ ಕಂಡುಬರುತ್ತದೆ. ಬ್ರಹ್ಮ, ಶಿವ, ವಿಷ್ಣು ಇವರ ತಾತ್ವಿಕ ವಿಚಾರಗಳೂ ಬೇರೆಯಾಗಿದ್ದಾಗಲೂ ಈ ಮೂರು ತಾತ್ವಿಕತೆಯ ಕೊಡೆಯಡಿಯಲ್ಲಿರುವ ಮೊದಲ ವರ್ಣದವರೇ (ಬ್ರಾಹ್ಮಣರೇ) ಬೌದ್ಧಧರ್ಮಕ್ಕೆ ಮತಾಂತರ ಹೊಂದಿದಾಗ ಆ ಶಕ್ತಿಗಳು ಅಸ್ತಿತ್ವವನ್ನು ಕಳೆದುಕೊಂಡಿವೆ. ಸಾಮಾನ್ಯ ಜನತೆ ಕೇವಲ ವಿಚಾರಗಳನ್ನು ಅನುಕರಿಸುವವರಾದರೆ ಅಕ್ಷರಸ್ಥ ಜನತೆ ಧಾರ್ಮಿಕ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಸಾಮರ್ಥ್ಯವನ್ನು ಹೊಂದಿದವರಾಗಿದ್ದಾರೆ. ಹೀಗಾಗಿಯೇ ಬೌದ್ಧ ಧರ್ಮ, ಜೈನ ಧರ್ಮದಂಥವು ತೀವ್ರತರವಾಗಿ ಬೆಳೆದಿವೆ. 'ಅವಾಸ್ತವಾದ' ತಾತ್ವಿಕತೆಯ ಮೇಲೆ ನಿಂತು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಈ ತ್ರಿಮೂರ್ತಿಶಕ್ತಿಗಳು ಒಂದಾಗಿದ್ದು ಅನಿವಾರ್ಯ. ಸ್ವಾರಸ್ಯಕರವಾದ ವಿಚಾರವೆಂದರೆ ತಾತ್ವಿಕ ವಿಚಾರಗಳು ಬದಲಾದರೂ ವರ್ಣವ್ಯಸ್ಥೆಯ ಮಾತ್ರ ಮುಂದುವರೆದುಕೊಂಡು ಬಂದುದು, ಎಂದರೆ ನಿರಾಕಾರಶಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಬೌದ್ಧ ಧರ್ಮ ಬಂದಾಗಲೂ, ಅಲ್ಲಿಯೂ ನಾಲ್ಕು ವರ್ಣಗಳು

ಅನಿವಾರ್ಯವಾಗಿ ತಲೆ ಎತ್ತಿವೆ. ಹಾಗೆಯೆ ಜೈನಧರ್ಮವೂ ಈ ವರ್ಣಗಳಿಂದ ಮುಕ್ತವಾಗಲಿಲ್ಲ ಎಂದರೆ ತ್ರಿಮೂರ್ತಿಗಳ ಸ್ವಾತಿಕತೆಯಿಂದ ಮತಾಂತರಗೊಂಡು ಬಂದವರು ವರ್ಣಗಳನ್ನು ಯಥಾಸ್ಥಿತಿಯಲ್ಲಿಯೇ ತೆಗೆದುಕೊಂಡು ಬಂದರು ಎನ್ನುವುದು ಗಮನಾರ್ಹವಾದ ಸಂಗತಿಯಾಗಿದೆ.

ವರ್ಣ ವ್ಯವಸ್ಥೆಯಲ್ಲಿ ವರ್ಣಗಳು ಮೂಲದಲ್ಲಿ ಎರಡು ಮೂರಾಗಿ ಮೂರು ನಾಲ್ಕಾಗಿ ಬೆಳೆದ ರೀತಿಯನ್ನು ಈ ಹಿಂದೆಯೇ ಗಮನಿಸಿದ್ದೇವೆ. ವರ್ಣ ವ್ಯವಸ್ಥೆಯೊಂದಿಗೆಯೇ ಅಸ್ಪೃಶ್ಯತೆ ಜೊತೆಗೂಡಿ ಬಂದಿದೆ ಎಂದು ಹೇಳುವುದಕ್ಕಿಂತ ಅದಕ್ಕಿಂತ ಪೂರ್ವದಲ್ಲಿಯೇ ಇತ್ತು ಎಂದು ಹೇಳಬೇಕಾಗುತ್ತದೆ. ಡಾ. ಅಂಬೇಡ್ಕರ್ ಸಮೂಹದ ಬದುಕು, ಜೀತಗಾರಿಕೆ ಬದುಕು ಹೇಗೆ ರೂಪಗೊಂಡವು ಎಂಬುದನ್ನು ತುಂಬಾ ಸಮರ್ಥವಾಗಿಯೇ ಗುರುತಿಸಿದ್ದಾರೆ. ಗುಂಪುಗಾರಿಕೆ, ನಾಯಕತ್ವದ ಬದುಕು, ಪರಸ್ಪರ ಗುಂಪುಗಳ ನಡುವೆ ನಡೆಯುವ ಸಂಘರ್ಷ ಸೋತವರು ಜೀತಕ್ಕಾಗಿ ಬದುಕುವ ಬಗೆ ಇವೆಲ್ಲ ವಾಸ್ತವಕ್ಕೆ ತೀರ ಹತ್ತಿರವಾದವುಗಳೇ ಆಗಿವೆ. ಆದರೆ ಡಾ. ಅಂಬೇಡ್ಕರ್ ಮೃತ ಗೋಮಾಂಸ ಭಕ್ಷಣೆಯಿಂದ ಅಸ್ಪಶ್ಯತೆ ಆರಂಭವಾಯಿತೆಂದು ನಿರ್ಧರಿಸುವುದು ಏಕಮುಖವಾಗುತ್ತದೆ. ಡಾ. ಅಂಬೇಡ್ಕರ್ ಅಲ್ಲದೆ ಹಲವಾರು ವಿದ್ವಾಂಸರು ಈ ಕುರಿತು ಚಿಂತಿಸಿದ್ದಾರೆ. ಅವರೆಲ್ಲರ ಆಲೋಚನಾ ರೀತಿಗಳೂ ಒಮ್ಮುಖವಾಗಿಯೇ ಇವೆ. ಎಂದರೆ ಇವರೆಲ್ಲ ಹೇಳುವ ವಿಷಯಗಳು, ಸಮರ್ಥವಾದುವುಗಳಲ್ಲ ಎನ್ನು ವಿಚಾರವಲ್ಲ. ಬದಲಾಗಿ ಇವರೆಲ್ಲರ ಒಂದೊಂದು ಕಾಲಘಟ್ಟದಲ್ಲಿ ಆಗಿರುವ ಬದಲಾವಣೆಯ ಅಂಶಗಳನ್ನು ಮಾತ್ರ ಎತ್ತಿ ಹಿಡಿದು ಪ್ರತಿಪಾದಿಸುವುದು ಕಂಡುಬರುತ್ತದೆ. ಉದಾಹರಣೆಗೆ

೧. ವಲಸೆ ಬರುವುದರಿಂದ

೨. ವೃತ್ತಿಯಿಂದ

೩. ವರ್ಣ ಸಂಕರದಿಂದ

೪. ಗೋಮಾಂಸ ಭಕ್ಷಣೆಯಿಂದ

ಜಾತಿಯ ಹುಟ್ಟಿಗೆ ಈ ಮೇಲೆ ಗುರುತಿಸಲಾದ ಮೂಲಭೂತವಾದ ಆಕರಗಳೇ ಕಾರಣವಾಗಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ಇದರೊಂದಿಗೆ ಮತ್ತೆ ಕೆಲವು ಅಂಶಗಳನ್ನು ಸೇರಿಸಿ ಗುರುತಿಸಬಹುದಾಗಿದೆ. ಆದರೆ ಈ ಎಲ್ಲ ಅಂಶಗಳು ಏಕಕಾಲಕ್ಕೆ ಜಾತಿಯ ಹುಟ್ಟಿಗೆ, ಅಸ್ಪೃಶ್ಯತೆಯ ಹುಟ್ಟಿಗೆ ಪ್ರೇರೇಪಿಸಿವೆ ಎಂದಲ್ಲ. ಕಾಲಘಟ್ಟದಲ್ಲಿ ಒಂದು ಅಂಶ ಇನ್ನೊಂದು ಅಂಶದೊಂದಿಗೆ ಸೇರಿ ಹದಗೊಳಿಸಿ ಭದ್ರಪಡಿಸುತ್ತ ಬಂದಿದೆ. 0 ಹಿ ಗೆ ಭದ್ರಪಡಿಸುವ ಕ್ರಿಯೆಯೊಂದಿಗೆ ಜಾತಿ, ಅಸ್ಪೃಶ್ಯತೆ ಎನ್ನುವಂಥವು ಸ್ಥಾಯಿಯಾದ ಗುಣವನ್ನು ಪಡೆದುಕೊಂಡಿವೆ.

ಸೋತವರನ್ನು ದೂರವಿಟ್ಟು ಸೇವಕರಂತೆ ಅಥವಾ ಗುಲಾಮರಂತೆ ದುಡಿಸಿಕೊಳ್ಳುವ ಪದ್ಧತಿಯೇ ಆರಂಭದ್ದಾಗಿದ್ದಾಗಲೂ ಅಧಿಕೃತವಾಗಿ ಜಾತಿ ಅಥವಾ ಅಸ್ಪೃಶ್ಯತೆಗೆ ರೂಪ ಸಿಕ್ಕಿದ್ದು ವರ್ಣಗಳು ಎರಡು ಮೂರಾಗಿ ಬೆಳೆದ ಸಂದರ್ಭದಲ್ಲಿ ಒಂದೇ ಗುಂಪಿಗೆ ಎರಡನೇ ಗುಂಪು ಅಸ್ಪೃಶ್ಯ ಎನಿಸಿದರೆ ಎರಡು ಗುಂಪು ಒಂದಾದಾಗ ಮೂರನೇ ಗುಂಪು ಅಸ್ಪೃಶ್ಯ ಎನಿಸಿಕೊಳ್ಳುತ್ತದೆ. ಹಾಗೆಯೇ ವರ್ಣವ್ಯಸ್ಥೆಯಲ್ಲೂ ಆಗಿದೆ. ಎರಡು ವರ್ಣಗಳಿಗೆ ಮೂರನೇ ವರ್ಣ ಅಸ್ಪಶ್ಯವೆನಿಸಿದರೆ ಮೂರನೆಯದಕ್ಕೆ ಎರಡು ವರ್ಣಗಳೊಂದಿಗೆ ಸೇರಿದಾಗ ನಾಲ್ಕನೆಯ ವರ್ಣ ಅಸ್ಪೃಶ್ಯತೆವೆನಿಸದೆ. ಆದರೆ ಇಲ್ಲಿಯ ವರ್ಣದ ಹಾಯಗಾರಿಕೆಯ ವ್ಯವಸ್ಥೆಯ ಕ್ರಮದಲ್ಲಿ ಎಂದರೆ ಏರಿಕೆಯಿಂದ ಇಳಿಕೆಯ ಕ್ರಮದ ಸ್ವರೂಪದಲ್ಲಿ ಕೆಳಕ್ಕೆ ಇಳಿಯುತ್ತ ಹೋದಂತೆ ಅಸ್ಪೃಶ್ಯತೆಯ ಪ್ರಮಾಣ ಹೆಚ್ಚುತ್ತ ಹೋಗುತ್ತದೆ. ಇದು ಒಂದು ಸ್ತರದ ವಿಚಾರವಾದರೆ ಎರಡನೇ ಸ್ತರದ ಭಾಗದ ಬರವಣಿಗೆಯಲ್ಲಿ ಗಮನಿಸಿದ್ದೇವೆ.

ಧರ್ಮ ಅಥವಾ ಮತಗಳ ಆಲೋಚನೆಯು ವರ್ಣಗಳನ್ನು ಒಡೆಯುತ್ತ ಹೋದಂತೆ ವರ್ಣಗಳು ವರ್ಣಗಳಿಗೆ ಮರಿಹಾಕಿವೆ. ಹೀಗಾದಾಗ ಒಂದು ಧರ್ಮದ ಅಥವಾ ಮತದ ವರ್ಣದ ಜನತೆಯೇ ಮತ್ತೊಬ್ಬರಿಗೆ ಅಸ್ಪೃಶ್ಯರಾಗಿದ್ದಾರೆ. ಇಂಥವರೇ ಸಂಸ್ಕಾರ ಲೋಪ ಹೊಂದಿದ 'ಪ್ರಾತ್ಯ' ರೆಂದು ಕರೆಸಿಕೊಂಡಿದ್ದಾರೆ. ಧರ್ಮ ಮತಗಳು ಮತಾಂತರದ ಮೂಲಕ ವರ್ಣಗಳಿಗೆ ಮರಿಹಾಕುವಂತೆ ಮಾಡುವುದರೊಂದಿಗೆ ವರ್ಣದೊಂದಿಗೆ ಇರುವ ವೃತ್ತಿಯೂ ಬೆಂಬತ್ತಿ ಹೋಗಿವೆ. ಧರ್ಮದಿಂದ ಧರ್ಮಕ್ಕೆ, ಮತದಿಂದ ಮತಕ್ಕೆ ವಲಸೆ ಹೋಗಿವೆ.

ಒಂದು ಮತ ತನ್ನ ಅಸ್ತಿತ್ವವನ್ನು ಕಳೆದುಕೊಂಡಾಗ ಆ ಮತಕ್ಕೆ ಸಂಬಂಧಿಸಿದವರೂ ಸಮಾಜದಲ್ಲಿ ಅಸ್ತಿತ್ವವನ್ನು ಕಳೆದುಕೊಂಡಿರುವುದು ಚರಿತ್ರೆಯ ಅಧ್ಯಯನದ ಮೂಲಕ ತಿಳಿದುಬರುತ್ತದೆ. ಹೀಗೆಯೇ ಒಂದು ಧರ್ಮ, ಒಂದು ಅರಸೊತ್ತಿಗೆ ತಮ್ಮ ತಮ್ಮ ಅಸ್ತಿತ್ವ ಕಳೆದುಕೊಂಡ ಮೇಲೆ, ಅದರ ಅನುಯಾಯಿಗಳು (Followers) ಅಸ್ತಿತ್ವವನ್ನು ಕಳೆದು ಕೊಂಡಿದ್ದಾರೆ. ಹೀಗೆ ಅಸ್ತಿತ್ವವನ್ನು ಕಳೆದುಕೊಂಡವರು ಸೇವಕರಾಗುವುದು, ಅಥವಾ ಗುಲಾಮರಾಗುವುದು, ಕೀಳು ವೃತ್ತಿಗಳಿಗೆ ಅಂಟಿಕೊಳ್ಳುವುದು, ಮೈಲಿಗೆ ಪರಿಕಲ್ಪನೆಗೆ ಬದ್ಧರಾಗುವುದು, ಊರ ಹೊರಗೆ ವಾಸಿಸುವುದು ಕಂಡುಬರುತ್ತದೆ. ಇದು ಅನಿವಾರ್ಯ ಸ್ಥಿತಿಯಿಂದ ಉಂಟಾದದ್ದೇ ವಿನಃ ಬಯಸಿ ಪಡೆದುಕೊಳ್ಳುವಂತದ್ದಲ್ಲ. ಈ ವೃತ್ತಿಯಿಂದಲೇ ಮೇಲೆದ್ದವರು ಮತ್ತೆ ಮೇಲುವರ್ಣಕ್ಕೆ ಸೇರಿದ ಸ್ಥಿತಿ ಇದೆ.

ಎಂದರೆ ಇಲ್ಲಿ ಒಟ್ಟಾರೆಯಾಗಿ ಮೊದಲ ಸ್ಥರದಲ್ಲಿ ಕೆಲಸ ಮಾಡಿದ ಗುಣಗಳೆಂದರೆ:

೧. ಧರ್ಮ ೪. ಆಸ್ತಿ ಅಥವಾ ಸಂಪತ್ತು

೨. ಮತ ೫. ರಾಜಕೀಯ ಸ್ಥಿತಿಗಳು

೩. ವರ್ಣ

ಈ ರೀತಿಯ ಗುಣಗಳು ಪ್ರಧಾನ ಪಾತ್ರವನ್ನು ವಹಿಸಿ ವ್ಯವಸ್ಥೆಯನ್ನು ಬದಲಾಯಿಸುತ್ತವೆ. ಈ ಬದಲಾವಣೆಯೊಂದಿಗೆ ಕೊನೆಗೆ ತಳ್ಳಲ್ಪಟ್ಟವರಲ್ಲಿಯೇ ಒಂದು ವ್ಯವಸ್ಥೆ ನಿರ್ಮಾಣವಾಗಿದೆ. ಹೀಗೆ ನಿರ್ಮಾಣಗೊಂಡ ವ್ಯವಸ್ಥೆಯಲ್ಲಿ ಮೇಲೆ ಸೂಚಿಸಲಾದ ಗುಣಗಳಿಂದಾಗಿಯೇ ಮತ್ತೆ ಕೆಲವು ಸಂಸ್ಕಾರಗಳು ರೂಪಗೊಂಡಿವೆ ಅಥವಾ ಈಗಾಗಲೇ ಆ ವ್ಯವಸ್ಥೆಯಲ್ಲಿರುವ ಸಂಸ್ಕಾರಗಳನ್ನೇ ಅನುಸರಿಸಬೇಕಾಗುತ್ತದೆ.

೧. ವಾಸಸ್ಥಾನ ಮತ್ತು ವೃತ್ತಿ ಸಂಬಂಧಿ ವಿಚಾರಗಳು

೨. ವೇಷಭೂಷ ಅಥವಾ ಉಡಿಗೆ ತೊಡಿಗೆ

೩. ವೈವಾಹಿಕ ಸಂಬಂಧದ ವಿಚಾರಗಳು

೪. ಆಹಾರ ಪಾನೀಯಕ್ಕೆ ಸಂಬಂಧಿಸಿದ ವಿಚಾರಗಳು

೫. ಜನನ-ಮರಣಕ್ಕೆ ಸಂಬಂಧಿಸಿದ ವಿಚಾರಗಳು

೬. ಮಡಿ-ಮೈಲಿಗೆಗೆ ಸಂಬಂಧಿಸಿದ ವಿಚಾರಗಳು

ಈ ಮೇಲಿನ ವಿಚಾರಗಳಿಗೆ ಸಂಬಂಧಿಸಿದ ಸಂಸ್ಕಾರಗಳು ವರ್ಣದಿಂದ ವರ್ಣಕ್ಕೆ ವ್ಯತ್ಯಾಸದಿಂದ ಕೂಡಿವೆ. ವರ್ಣ ಬದಲಾದಾಗ ಸಂಸ್ಕಾರಗಳ ಸ್ವರೂಪವೂ ಬದಲಾಗಿರುವುದು ಕಂಡುಬರುತ್ತದೆ. ಮುಕ್ತ ವರ್ಣ ವ್ಯವಸ್ಥೆಯ ಕಾಲದಲ್ಲಿ ವೃತ್ತಿಗಳು ಆರ್ಥಿಕ ಸ್ಥಿತಿಗತಿಯ ಮೇಲೆ ಅವಲಂಬಿತವಾಗಿದ್ದು, ವರ್ಣನಿಷ್ಠ ಕಾಲದಲ್ಲಿ ವೃತ್ತಿಗಳು ನಿರ್ಧರಿಸಲ್ಪಟ್ಟುದ್ದರಿಂದ ಆರ್ಥಿಕವಾಗಿ ಎಷ್ಟೇ ಪ್ರಬಲವಾಗಿ ಬೆಳೆದರೂ ವರ್ಣವನ್ನು ಬದಲಾಯಿಸಿಕೊಳ್ಳುವ ಸ್ಥಿತಿ ಇರಲಿಲ್ಲ. ಒಂದು ಜನಾಂಗೀಯ ವೃತ್ತಿಯಲ್ಲಿಯೇ ಉನ್ನತವಾದ ಘಟ್ಟವನ್ನು ತಲುಪಲು ಅವಕಾಶವಿರುವುದು ಕಂಡುಬರುತ್ತದೆ. ಶೂದ್ರರು ಅರಸರಾಗಿದ್ದರೂ ಯಜ್ಞ ಮಾಡಿಸಲು, ದಾನ ಕೊಡಲು ಪಾತ್ರರಾಗಿದ್ದರು, ಎನ್ನುವುದನ್ನು ಶೂದ್ರ ಅರಸು ಪೈಜವನ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಅರಸರಿಗೇ ಈ ಸ್ಥಿತಿ ಇರುವಾಗ ಸಾಮಾನ್ಯ ಜನತೆಗಂತೂ ಈ ಬಂಧಗಳಿಂದ ಹೊರ ನುಸುಳಲು ಅವಕಾಶವೇ ಇಲ್ಲದ ಸ್ಥಿತಿಯೊಂದು ಇತ್ತು ಎನ್ನುವುದನ್ನು ಊಹಿಸಬಹುದಾಗಿದೆ.

ಈ ಮೇಲೆ ಚರ್ಚಿಸಲಾದ ಸೂತ್ರಗಳಿಂದಲೇ ನಡೆದ ವ್ಯವಸ್ಥೆಯ ಪಳಯುಳಿಕೆಗಳು ಇಂದಿಗೂ ಸಮಾಜದಲ್ಲಿ ಕಾಣಿಸಿಗುತ್ತವೆ. ಆ ಕಡೆ ಸ್ವಲ್ಪ ಗಮನ ಹರಿಸುವೆ:

ಬ್ರಾಹ್ಮಣರಲ್ಲೇ ಎಷ್ಟೊಂದು ಬ್ರಾಹ್ಮಣರಿಲ್ಲ? ಗಮನಿಸಿ:

**ಮಾಂಸಾಹಾರಿ ಬ್ರಾಹ್ಮಣರು**

೧. ಕೊಂಕಣಿ ಬ್ರಾಹ್ಮಣರು

೨. ಗೌಡ ಸಾರಸ್ವತ ಬ್ರಾಹ್ಮಣರು



**ಸಸ್ಯಾಹಾರಿ ಬ್ರಾಹ್ಮಣರು**

೧. ಹವ್ಯಕ ಬ್ರಾಹ್ಮಣರು

೨. ಶಿವಳ್ಳಿ ಬ್ರಾಹ್ಮಣರು

೩. ಕೋಟ ಬ್ರಾಹ್ಮಣರು

೪. ಕರಾಡ ಬ್ರಾಹ್ಮಣರು

೫. ಚಿತ್ಪಾವನ ಬ್ರಾಹ್ಮಣರು

೬. ಸ್ಥಾನಿಕ ಬ್ರಾಹ್ಮಣರು ಮುಂತಾಗಿ

**ಇದಲ್ಲದೆ ವೃತ್ತಿಯಿಂದ ಗಮನಿಸಿದರೆ**

೧. ಬ್ರಾಹ್ಮಣ ಜಮೀನ್ದಾರ ವರ್ಗ

೨. ಬ್ರಾಹ್ಮಣ ವ್ಯಾಪಾರಸ್ತರ ವರ್ಗ

೩. ಬ್ರಾಹ್ಮಣ ಅರ್ಚಕರ ವರ್ಗ

೪. ಬ್ರಾಹ್ಮಣ ಪದಾರ್ಥಿಗಳ ವರ್ಗ

೫. ಸ್ಥಾನಿಕ ಬ್ರಾಹ್ಮಣರ ವರ್ಗ

ಪದಾರ್ಥಿಗಳಲ್ಲಿ ಮತ್ತೆ ಆಹಾರ ಕ್ರಮವನ್ನುಸರಿಸಿ ಎರಡು ಗುಂಪುಗಳಿರುವುದು ಕಾಣಬಹುದು.

ಎಡಗೈ ಪದಾರ್ಥಿಗಳು

ಬಲಗೈ ಪದಾರ್ಥಿಗಳು

ಈಗ ವೃತ್ತಿಗೆ ಸಂಬಂಧಿಸಿದಂತೆ ಒಂದೇ ವರ್ಗದಲ್ಲಿ ಹೇಗೆ ಒಳವಿಭಾಗಗಳಾಗಿ ಒಡೆದಿದೆ ಎನ್ನುವುದನ್ನು ಗಮನಿಸುವ.

ಉದಾ: ಅಡಿಗೆ ಮಾಡುವುದನ್ನೆ ವೃತ್ತಿಯನ್ನಾಗಿಸಿಕೊಂಡ ಬ್ರಾಹ್ಮಣರಲ್ಲಿ ಮತ್ತೆ ಒಳಪಂಗಡಗಳಿವೆ.

- ದೇವಸ್ಥಾನಗಳಲ್ಲಿ ಅಡಿಗೆ ಮಾಡುವವರು (ನೈವೇದ್ಯ)

- ಮದುವೆ ಸಮಾರಂಭಗಳಲ್ಲಿ ಅಡಿಗೆ ಮಾಡುವವರು (ಶುಭಕಾರ್ಯ)

- ಶ್ರಾದ್ಧದ ಅಡಿಗೆಯನ್ನು ಮಾಡುವವರು (ಅಶುಭಕಾರ್ಯ)

ಹೀಗೆ 'ಬ್ರಾಹ್ಮಣ' ಎಂಬ ಒಂದೇ ವರ್ಣ, ಒಳಪದರು ಪದರಾಗಿ ಒಡೆಯುತ್ತ ಹೋಗಿದುದ್ದನ್ನು ಇಂದಿಗೂ ನಾವು ಗಮನಿಸುತ್ತೇವೆ. ಒಬ್ಬರಿಗೆ ಸಂಬಂಧಿಸಿದ ವಿಧಿ- ನಿಷೇಧಗಳು ಇನ್ನೊಬ್ಬರಿಗಿಂತ ಭಿನ್ನ, ಭಿನ್ನ ಸಂಸ್ಕಾರಗಳು, ಕೊಡುಕೊಳ್ಳುವಿಕೆ 'ನಿಷೇಧ'

ಮೇಲು-ಕೀಳೆಂಬ ಭಾವನೆ, ಮಡಿ-ಮೈಲಲಿಗೆಯ ಆಚರಣೆ ಇಂಥವೆಲ್ಲ ಒಂದೇ ವರ್ಣದಲ್ಲಿ ಇರುವುದನ್ನು ಕಾಣುತ್ತೇವೆ. ಇದೇ ಸ್ವರೂಪ ಇತರ ವರ್ಣಗಳಲ್ಲಿಯೂ ಇದೆ. ಐದನೆಯ ವರ್ಣವಾಗುವುದಕ್ಕಾಗಿ ಸ್ಪರ್ಧಿಸಿದ, ಮನುವಿನಿಂದ ನಿರಾಕರಿಸಲ್ಪಟ್ಟ ಅಸ್ಪೃಶ್ಯರ ವರ್ಣವನ್ನು ಗಮನಿಸಿಬಹುದು. ಸರಕಾರ ಗುರುತಿಸಿದಂತೆ ಇದರಲ್ಲಿ ನೂರೊಂದು ಜಾತಿಗಳಿವೆ. ಇದರಲ್ಲಿ ಚರ್ಮದ ವೃತ್ತಿಗೆ ಸಂಬಂಧಿಸಿದವರನ್ನು ಎತ್ತಿಕೊಳ್ಳುವಾ. ಏಕೆಂದರೆ ವೇದಕಾಲದಿಂದಲೂ ಈ ಜಾತಿ (?) ಸಿಗುತ್ತವೆ. ಇಂದಿಗೂ ಅದರ ಪಳಯುಳಿಕೆ ಹೇಗಿದೆ ಎಂಬುದನ್ನು ಅರಿಯಲು ಸಾಧ್ಯವಾಗುತ್ತದೆ.

೧. ಡೋರರು

೨. ಮಚಗಾರರು

೩. ಸಮಗಾರರು

೪. ಹೊಲೆಯರು

೫. ಮಾದಿಗರು

ಬ್ರಾಹ್ಮಣರಲ್ಲಿ ಹೇಗೆ ವ್ಯತ್ಯಾಸ ಕಾಣುತ್ತೇವೆಯೋ ಹಾಗೆಯೇ ಇಲ್ಲಿಯೂ ಕಾಣುತ್ತೇವೆ.

೧. ಡೋರರು-ತೊಗಲಿಂದ ಚರ್ಮ ತಯಾರಿಸುವವರು.

೨. ಮಚಗಾರರು-ದೇಸಾಯಿ, ಪಟೇಲ, ಗೌಡ, ಇಂಥವರಿಗೆ ಮಾತ್ರ ಹೊಸ ಮಚ್ಚೆ ಹೊಲಿದು ಕೊಡುವವರು.

೩. ಸಮಗಾರರು-ಸಾಮಾನ್ಯ ಜನತೆಗೆ ಚಪ್ಪಲಿ ಹೊಲಿದು ಕೊಡುವವರು ಹಳೆಯದನ್ನು ರಿಪೇರಿ ಮಾಡುವವರು.

೪. ಮಾದಿಗರು-ಸ್ವತಃ ತಾವೇ ಚರ್ಮ ತಯಾರಿಸಿ ಚಪ್ಪಲಿ ಹೊಲೆಯುವವರು

೫. ಹೊಲೆಯರು-ಹಳೆಯದನ್ನು ರಿಪೇರಿ ಮಾಡುವವರು, ಸತ್ತ ದನದ ಚರ್ಮವನ್ನು ಸುಲಿದು ಡೋರರಿಗೆ ಒಪ್ಪಿಸುವವರು.

ವೃತ್ತಿ ಚರ್ಮದ್ದೇ ಆದರೂ ಬ್ರಾಹ್ಮಣರ ಕುರಿತು ಚರ್ಚಿಸುವಾಗ ಗುರುತಿಸಿದ ವಿಧಿ-ವಿಧಾನಗಳು ನಿಷೇಧಗಳೆಲ್ಲ ಇಲ್ಲಿಯೂ ಇವೆ. ಮೇಲೆ ಹೇಳಲಾದ ಐದು ಜಾತಿಗಳಲ್ಲಿ ಮತ್ತೆ ಒಳಪಂಗಡಗಳಿವೆ. ವೇದಗಳಲ್ಲಿ ಬರುವಂತೆ 'ಚಮ್ಮಾರ' ಅಥವಾ 'ಚರ್ಮನ್' ಪದಗಳು ಚರ್ಮದ ಕೆಲಸ ಮಾಡುವವರನ್ನು ಗುರುತಿಸಿದರೂ ಮನುಸ್ಮೃತಿಯಲ್ಲಿ ಎರಡು ಬಗೆಯ ಚರ್ಮಕಾರರ ಬಗ್ಗೆ ಹೇಳಲಾಗಿದೆ. ಹನ್ನೆರಡನೆಯ ಶತಮಾನದ ವಚನ

ಸಾಹಿತ್ಯದಲ್ಲಿ ಇನ್ನುಳಿದ ಚರ್ಮಕಾರರ ಹೆಸರುಗಳೆಲ್ಲ ಸಿಗುತ್ತವೆ. ಒಂದೇ ವೃತ್ತಿಗೆ ಸಂಬಂಧಿಸಿದವರು ಕಾಲಾಂತರದಲ್ಲಿ ಹೇಗೆ ಒಡೆದು ಭಾಗವಾದರು? ಎಂಬ ಪ್ರಶ್ನೆಯ ಉತ್ತರವೇ ಜಾತಿ ಅಸ್ಪೃಶ್ಯತೆಯ ಮೂಲ ಹೇಳುತ್ತವೆ. (ಹೆಚ್ಚಿನ ವಿವರಕ್ಕೆ



ಗಮನಿಸಿರಿ. 'ಚರ್ಮಕಾರರ ಮೂಲ; ಒಂದು ಮೂಲಭೂತ ಜಿಜ್ಞಾಸೆ' ಇದೇ ಲೇಖಕರ ಲೇಖನ)

ಇವರೆಲ್ಲ ಮಾಂಸಾಹಾರಿಗಳೇ ಆಗಿದ್ದಾಗಲೂ ಅಸ್ಪೃಶ್ಯತೆಗೆ ಬಳಸುವ ಮಾನದಂಡಗಳು ಬೇರೆಯಾಗಿವೆ. ಮೇಲು-ಕೀಳೆಂದು ಗುರುತಿಸಲು ಸಾಮಾಜಿಕ ಸ್ಥಾನಮಾನ ಗುರುತಿಸಲು ತಮ್ಮ ವ್ಯವಸ್ಥೆಯಲ್ಲಿ ತಮ್ಮದೇ ಮಾನದಂಡಗಳು ಮುಕ್ತವರ್ಣ ವ್ಯವಸ್ಥೆಯಿಂದ ಬಂದ ಬಳುವಳಿ ಎಂದೇ ಹೇಳಬೇಕಾಗುತ್ತದೆ.

ಉದಾ:

ಮಲ ತಿನ್ನುವ ಪ್ರಾಣಿಗಳನ್ನು ತಿನ್ನುವುದು (ಕನಿಷ್ಠ)

ಮಾಂಸಾಹಾರಿ ಪ್ರಾಣಿಗಳನ್ನು ತಿನ್ನುವವರು (ಮಧ್ಯಮ)

ಸಸ್ಯಾಹಾರಿ ಪ್ರಾಣಿಗಳನ್ನು ತಿನ್ನುವವರು(ಉತ್ತಮ)

ಜೀವಂತ ಪ್ರಾಣಿಗಳನ್ನು ತಿನ್ನುವವರು

(ಚೂರಿ ಹಾಕಿದ ಮೇಲೆ ಸಾಯುತ್ತದೆ!

ಮನುಷ್ಯನೆ ಚೂರಿ ಹಾಕಿದ್ದು (ಕೀಳು)

ವಿಧಿವತ್ತಾಗಿ ಚೂರಿ ಹಾಕಿಸಿದ್ದು (ಮೇಲು)

-ಸತ್ತ ಪ್ರಾಣಿಗಳನ್ನು ತಿನ್ನುವವರು

ತಾನಾಗಿಯೇ ಸತ್ತದ್ದು (ಕೀಳು)

ದುರ್ಮರಣದಿಂದ ಸತ್ತದ್ದು (ಮೇಲು)

ಹೀಗೆ ಇವುಗಳ ಮೇಲಿಂದ ಹಾಯಗಾರಿಕೆಯನ್ನು ಅಳೆಯಲಾಗುತ್ತದೆ. ಧರ್ಮ- ಮತಗಳ ವಿಚಾರಗಳ ಹೊಸ ಅಲೆ ಎದ್ದಾಗ ಮತಾಂತರಗೊಳ್ಳುವವರು ಬೌದ್ಧಿಕವಾಗಿ ಮುಂದುವರಿದವರು ಮತ್ತು ಅತ್ಯಂತ ಕೆಳವರ್ಗದವರು ಬಿಡೆಯಿಂದ, ಕೆಲಮೊಮ್ಮೆ ಮನಃಪೂರ್ವಕವಾಗಿ ಮತಾಂತರಗೊಳ್ಳುತ್ತಾರೆ. ಹೀಗಾಗಿಯೇ ಒಳಪದರಗಳು ಕಾಣಿಸಿಕೊಳ್ಳುತ್ತವೆ. ಅಥವಾ ಜಾತಿಯಂಥವು ಹುಟ್ಟಿಕೊಳ್ಳುತ್ತವೆ. ಅಸ್ಪೃಶ್ಯತೆ ಆನಂತರದಲ್ಲಿ ಹಾಯಗಾರಿಕೆಯ ಮೇಲಿಂದ ನಿರ್ಧರಿತವಾಗುತ್ತ ಹೋಗುತ್ತವೆ. ಈ ಮೈಲಿಗೆಯಲ್ಲಿಯೇ ವಿಧಾನಗಳಿವೆ.

೧. ಕುಟುಂಬ ಸಂಬಂಧಿ ಮೈಲಿಗೆ ಪರಿಕಲ್ಪನೆ (ಋತುಮತಿ, ಜನನ, ಮರಣ, ಶೌಚ)

೨. ವೃತ್ತಿ ಸಂಬಂಧಿ ಮೈಲಿಗೆ ಪರಿಕಲ್ಪನೆ (ಸ್ಥಾಯಿ ಮೈಲಿಗೆ), (ಮಡಿವಾಳ, ಕ್ಷೌರಿಕ, ಜಾಡಮಾಲಿ ಮುಂ)

೩. ರಕ್ತಮಾಂಸ ಸಂಬಂಧಿ ಮೈಲಿಗೆ ಪರಿಕಲ್ಪನೆ (ಸ್ಥಾಯಿ ಮೈಲಿಗೆ) (ಮಾಂಸ ಭಕ್ಷಣೆ ಹಾಗೂ ಸಂಬಂಧಿ ವೃತ್ತಿಗಳು)



ಅಸ್ಪೃಶ್ಯರಲ್ಲಿ ಸ್ಥಾಯಿಯಾಗಿ ಮೈಲಿಗೆಯುಳ್ಳವರಿದ್ದಾರೆ. ಬ್ರಾಹ್ಮಣರಲ್ಲೂ ಸ್ಥಾಯಿಯಾಗಿ ಮೈಲಿಗೆಯನ್ನುಳ್ಳವರೂ ಇದ್ದಾರೆ. ಅಸ್ಪಶ್ಯರು ಇಡೀ ಜನತೆಗೆ ಅಸ್ಪೃಶ್ಯರಾದರೆ, ಬ್ರಾಹ್ಮಣರಲ್ಲಿರುವ ಸ್ಥಾಯಿ ಮೈಲಿಗೆಯುಳ್ಳವರು ಬ್ರಾಹ್ಮಣರಿಗೆ ಮಾತ್ರ ಅಸ್ಪೃಶ್ಯ ಬ್ರಾಹ್ಮಣರೆನಿಸಿಕೊಂಡಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅಂಬೇಡ್ಕರ್ ಹೇಳುವಂತೆ ಮೃತ ಗೋಮಾಂಸ ಭಕ್ಷಣೆಯಿಂದ ಮೃತ ಪ್ರಾಣಿಯ ಮಾಂಸದ ಭಕ್ಷಣೆಯೇ ಆಗಿದೆ. ಇದು ಅತ್ಯಂತ ಕೆಳದರ್ಜೆಯದು ಎಂದು ಭಾವಿಸಲಾಗಿದೆಯಾದರೂ ಮೇಲೆ ಹೇಳಿದಂತೆ ಮಲ ತಿನ್ನುವ ಪ್ರಾಣಿಗಳನ್ನು ಭಕಿಸುವವರು ಎಲ್ಲರಿಗಿಂತ ಕೊನೆಯ ಸಾಲಿನಲ್ಲಿ ಇದ್ದಾರೆ. ಇವರಲ್ಲಿಯೇ ಮಲ ತಿನ್ನುವ ಸತ್ತ ಪ್ರಾಣಿಗಳನ್ನು ತಿನ್ನುವವರು ಅತ್ಯಂತ ಕನಿಷ್ಠರೆಂದು ಭಾವಿಸಲಾಗುತ್ತಿದೆ. ಹೀಗಾಗಿಯೇ 'ಸತ್ತ ಗೋವು' ಇಲ್ಲಿ ಮುಖ್ಯವಾಗುವುದಿಲ್ಲ. ಬದಲಾಗಿ 'ಸತ್ತ ಪ್ರಾಣಿ' ಮುಖ್ಯವಾಗುತ್ತದೆ. ಈ ಎಲ್ಲ ಹಿನ್ನೆಲೆಯಲ್ಲಿ 'ಸತ್ತ ಪ್ರಾಣಿಯ ಭಕ್ಷಣೆಯೇ' ಅಸ್ಪೃಶ್ಯತೆಗೆ ಕಾರಣ ಎಂದು ಹೇಳುವುದು ಇಲ್ಲಿಯ ಉದ್ದೇಶವಲ್ಲ. ಹಲವಾರು ಅಂಶಗಳಲ್ಲಿ ಇದೂ ಒಂದು ಎಂದು ತಿಳಿಯಬೇಕು. ಚಮ್ಮಾರರಲ್ಲಿ ಗುರುತಿಸಿದಂತೆಯೇ ಬಡಿಗರು, ಕಮ್ಮಾರರು, ಕುಂಬಾರರು, ಚಿನಿವಾಲರು, ನೇಕಾರರೂ ಇವರಲ್ಲಿಯೂ ಇಂಥದ್ದೇ ಸ್ಥಿತಿ ಇರುವುದನ್ನು ಗಮನಿಸಬಹುದು.

ಹೀಗಾಗಿ ಅಸ್ಪೃಶ್ಯರಲ್ಲಿ ಇರುವ ಈ ಒಳಪದರಗಳು ಎಲ್ಲರಲ್ಲಿಯೂ ಇರುವುದರಿಂದ ಎಲ್ಲ ವರ್ಣಗಳ ಸ್ಥಿತಿಗತಿಗಳು ಈ ಹಿಂದೆ ಚರ್ಚಿಸಲಾದ ಸೂತ್ರಗಳ ಮೇಲೆ ನಿಂತಿವೆ ಎಂದು ಮತ್ತೊಮ್ಮೆ ಹೇಳಬೇಕಿಲ್ಲವಲ್ಲವೆ?

## ೩. ಅಂಬೇಡ್ಕರ್, ಲೋಹಿಯಾ: ಸಾಂಸ್ಕೃತಿಕ ಅನುಸಂಧಾನ

**-ಡಾ. ಎಚ್.ಟಿ. ಸೋತೆ**

'ನಂಬಿದ ತತ್ವಗಳನ್ನು ಯಾವ ಮುಲಾಜಿಗೆ ಒಳಗಾಗದೆ ಪ್ರತಿಪಾದಿಸುವವ ಮತ್ತು ಅನಿಷ್ಠ ಶಕ್ತಿಗಳನ್ನು ದ್ವೇಷಿಸುವವ; ಇವೆರಡೂ ಉಳ್ಳ ನಾಯಕನು ಮಾತ್ರ ನವಸಮಾಜ ಸೃಷ್ಟಿಸಬಲ್ಲ' ಎಂದು ಡಾ. ಅಂಬೇಡ್ಕರ್ ಅವರು ಹೇಳಿದ್ದಾರೆ. ಯಾವುದೇ ಒಬ್ಬ ಸಮಾಜ ಸುಧಾರಕನಾದವನು ನಂಬಿದ ತತ್ವಗಳನ್ನು ಕೈಬಿಡದೆ, ಅನಿಷ್ಠ ಪದ್ಧತಿಗಳನ್ನು ಒಪ್ಪಿಕೊಳ್ಳದೆ ಮುಲಾಜಿಲ್ಲದೆ ವಿರೋಧಿಸುತ್ತಾ ಬದುಕುವವನು ಮಾತ್ರ ಸಮಾಜ ನಿರ್ಮಾಣ ಮಾಡಬಲ್ಲ ಎನ್ನುವುದು ಅಂಬೇಡ್ಕರ್ ಅವರ ಈ ಮೇಲಿನ ಮಾತಿನಿಂದ ಪ್ರತಿಪಾದಿತವಾಗಿದೆ.

ಈ ಮಾತು ಅಂಬೇಡ್ಕರ್ ಅವರ ವ್ಯಕ್ತಿತ್ವಕ್ಕೂ ಹಾಗೂ ರಾಮಮನೋಹರ ಲೋಹಿಯಾ ಅವರ ವ್ಯಕ್ತಿತ್ವಕ್ಕೂ ಅನ್ವಯವಾಗುತ್ತದೆ. ಈ ಇಬ್ಬರು ಮಾಹಾನ್ ನಾಯಕರು, ನಾಯಕರುಗಳಷ್ಟೇ ಅಲ್ಲದೆ ಶ್ರೇಷ್ಠ ಚಿಂತಕರು ಆಗಿದ್ದಂತಹವರು. ಇವರಿಬ್ಬರೂ ಬದುಕಿನುದ್ದಕ್ಕೂ ನಂಬಿದ ತತ್ವ-ಸಿದ್ಧಾಂತಗಳ ಉಳಿವಿಗಾಗಿ ನವ ಸಮಾಜದ ನಿರ್ಮಾಣಕ್ಕಾಗಿ ದುಡಿದವರಾಗಿದ್ದಾರೆ. ಅದರಂತೆಯೇ ಆದರ್ಶದ ಬದುಕು ಮಾಡುವುದರ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಲೋಹಿಯಾ ಮತ್ತು ಅಂಬೇಡ್ಕರ್ ಇಬ್ಬರ ಚಿಂತನೆಗಳು ಇಲ್ಲಿಯ ಮಾನವೀಯ ನೆಲೆಯನ್ನು ಗಟ್ಟಿಸಿಗೊಳಿಸಿದ ಎರಡು ಪ್ರಮುಖ ಚಿಂತನ ಧಾರೆಗಳಾಗಿವೆ. ಅಲ್ಲದೆ ಆಧುನಿಕ ಭಾರತದ ನಿರ್ಮಾಣದಲ್ಲಿ ಈ ಇಬ್ಬರು ಮಹಾನ್ ಚಿಂತಕರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ನಮ್ಮನ್ನು ತಮ್ಮ ವಿಚಾರಗಳೆಡೆಗೆ ಹೇಗೆ ಪ್ರಭಾವಿತರನ್ನಾಗಿ ಮಾಡುತ್ತಾರೆ ಎನ್ನುವುದು ಅವರಿಬ್ಬರ ಚಿಂತನೆಗಳ ಮೂಲಕ ಅನುಸಂಧಾನಗೊಳಿಸಿಸುವ ಕಿರು ಪ್ರಯತ್ನ ಈ ಲೇಖನದ ಮೂಲಕ ಮಾಡಲಾಗಿದೆ.

ಲೋಹಿಯಾ ಮತ್ತು ಅಂಬೇಡ್ಕರ್ ಸಾಮಾಜಿಕವಾಗಿ ಇಬ್ಬರು ಭಿನ್ನ ಭಿನ್ನ ನೆಲೆಯಿಂದ ಬಂದವರು. ವರ್ಣ ವ್ಯವಸ್ಥೆಯಂತಹ ಪದ್ಧತಿಯನ್ನು ಒಪ್ಪಕೊಂಡು ಮೇಲು, ಕೀಳೆಂಬ ಅಸಮಾನತೆಯ ಆಗರವೇ ಹಿಂದೂ ಧರ್ಮದ ಉಸಿರಾಗಿದೆ. ಬುದ್ಧ, ಬಸವರ ನಾಡಿನಲ್ಲಿ ಜಾತಿ ಪದ್ದತಿ ನೆಲೆಯೂರಿರುವುದು ವಿಷಾದನೀಯವೇಂದೇ ಹೇಳಬೇಕು. ಆಧುನಿಕ ಯುಗದಲ್ಲೂ ಚಾಲ್ತಿಯಲ್ಲಿರುವ ಜಾತಿ ಪದ್ಧತಿಯ ಕ್ರೂರ ವ್ಯವಸ್ಥೆಗೆ ಬಲಿಯಾದವರು ಅಂಬೇಡ್ಕರ್, ಜಾತಿ ಪದ್ಧತಿಯ ಅವಮಾನ, ಅಪಮಾನ, ಯಾವುದೇ ರೀತಿಯ ಮಾನಸಿಕ ಯಾತನೆಯ ಅನುಭವ ಲೋಹಿಯಾ ಅವರಿಗಿರಲಿಲ್ಲ. 'ರಾಮ ಮನೋಹರ ಲೋಹಿಯಾ ಅವರ ಪೂರ್ವಜರು ಈಗಿನ ಉತ್ತರ

ಪ್ರದೇಶದಲ್ಲಿರುವ ಮಿರ್ಜಾಪುರದ ಶ್ರೀಮಂತ ವೈಶ್ಯ ಮನೆತನಕ್ಕೆ ಸೇರಿದವರು. ಆ ಮನೆತನದವರು ಕಬ್ಬಿಣದ (ಲೋಹದ) ವ್ಯಾಪಾರ ಮಾಡುತ್ತಿದ್ದುದ್ದರಿಂದ, ಅವರ ಮನೆತನ ಲೋಹಿಯಾ ಮನೆತನ ಎಂದೇ ಹೆಸರಾಗಿತ್ತು. ರಾಮ ಮನೋಹರ ಮುತ್ತಾತ ಲಾಲಾ ಮನಸಖಾರಂ ಕುಟುಂಬಕ್ಕೆ ಮಿರ್ಜಾಪುರದಲ್ಲಿ ಮೇಲಿಂದ ಮೇಲೆ ಕಷ್ಟಗಳು ಎದುರಾದಾಗ, ಇಡೀ ಕುಟುಂಬ ಗಂಗಾ ತೀರದ ಆ ಊರನ್ನು ಬಿಟ್ಟು ತಮಸಾನದಿಯ ದಂಡೆಯಲ್ಲಿರುವ ಅಯೋಧ್ಯೆಗೆ ವಲಸೆ ಬಂದಿತು. ನಂತರ ಪಕ್ಕದ ಅಕ್ಷರಪುರದಲ್ಲಿ ವ್ಯಾಪಾರ ಆರಂಭಿಸಿತು. ಆದರೆ ಅಲ್ಲಿ ವ್ಯಾಪಾರ ಫಲ ನೀಡಲಿಲ್ಲ. ರಾಮಮನೋಹರರು ಹುಟ್ಟುವ ಹೊತ್ತಿಗೆ ಕುಟುಂಬ ಆರ್ಥಿಕವಾಗಿ ಶ್ರೀಮಂತಿಕೆಯಿಂದ ಸಾಧಾರಣ ಮಟ್ಟಕ್ಕೆ ಇಳಿದು ಜರ್ಜರಿತವಾಯಿತು. ರಾಮ ಮನೋಹರರ ತಂದೆ ಹೀರಾಲಾಲರು, ಮನೆತನದ ವ್ಯಾಪಾರ ವೃತ್ತಿಗಿಂತ ಹೆಚ್ಚಾಗಿ ಆಗತಾನೇ ಗಾಂಧೀಜಿ ನಾಯಕತ್ವದಲ್ಲಿ ಗರಿಗೆದುರುತ್ತಿದ್ದ ಸ್ವಾತಂತ್ರ್ಯ ಹೋರಾಟದ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸತೊಡಗಿತು.

ಹೀರಾಲಾಲ್-ಶ್ಯಾಮಾ ದಂಪತಿಗಳಿಗೆ ಒಬ್ಬನೇ ಮಗನಾಗಿ ರಾಮಮನೋಹರ ಲೋಹಿಯಾ ಜನಿಸಿದ್ದು ೧೯೧೦ ಮಾರ್ಚ್ ೨೩ ರಂದು. ಹೀರಾಲಾಲ್ ಅಯೋಧ್ಯಾ ನಾಡಿಗೆ ಸೇರಿದವರಾಗಿದ್ದರೆ, ಶ್ಯಾಮಾ ಮಿಥಿಲೆಯ ಹೆಣ್ಣು. ಅವರು ನೆಲೆಸಿದ್ದ ಅಕ್ಷರಪುರ ಪುರಾಣದ ಪ್ರಕಾರ ಶ್ರೀರಾಮನು ವನವಾಸಕ್ಕೆ ಹೊರಟ ನಂತರ ಮೊದಲ ರಾತ್ರಿ ಕಳೆದ ಜಾಗವಾಗಿತ್ತು. ಹೀಗೆ ರಾಮಾಯಣದ ದಟ್ಟ ನೆನಪುಗಳಿಂದ ತುಂಬಿಹೋಗಿದ್ದ ಆ ಮಣ್ಣಿನಲ್ಲಿ ಬಾಲಕ ರಾಮಮನೋಹರ ಆಡಿ ನಲಿದ. ಆತ ಎರಡೂವರೆ ವರ್ಷದ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ. ಗಾಂಧೀಜಿಯವರ ಶಿಷ್ಯರಾಗಿದ್ದ ಹೀರಾಲಾಲ್ ಮರುಮದುವೆ ಮಾಡಿಕೊಳ್ಳಲು ಒಪ್ಪದಿದ್ದುದರಿಂದ, ಮಗು ಲೋಹಿಯಾ ಅಜ್ಜಿಯ ಮಡಿಲಲ್ಲಿ ಬೆಳೆಯ ತೊಡಗಿದ. ನೆರೆಯ ಕ್ಷೌರಿಕ ಕುಟುಂಬಕ್ಕೆ ಸೇರಿದ ಸರಿಯಾ ದೇವಿಯು ಮಗುವಿನ ಪಾಲನೆ ಪೋಷಣೆಯಲ್ಲಿ ತೊಡಗಿದಳು. ಆಕೆಯ ಮಗ ರಾಮನಂದನ ಬಾಲಕ ಲೋಹಿಯಾನ ಜೊತೆಗಾರ, ರಾಮಮನೋಹರ ಮತ್ತು ರಾಮನಂದನ ಇಬ್ಬರೂ ತಮ್ಮ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು ಅಕ್ಬರ್‌ಪುರದಲ್ಲಿಯೇ ಆರಂಭಿಸಿದರಾದರೂ ೧೯೧೫ ರಲ್ಲಿ ನಡೆದ ಅಹಮದಾಬಾದ್ ಕಾಂಗ್ರೆಸ್ ಅಧೀವೇಶನಕ್ಕೆ ಹೀರಾಲಾಲ್ ಹೊರಟಾಗ ಬಾಲಕ ಲೋಹಿಯಾ ಕಿವಿಯ ಮೇಲೆ ಎಂ.ಎನ್. ರಾಯ್ ಅವರ ಕರಪತ್ರದ ಮೂಲಕ ಸಮಾಜದ ಎಂಬ ಶಬ್ದ ಬಿದ್ದದ್ದು ಕಾಕತಾಳೀಯವಾದ ಸಂಗತಿಯಾದರೂ ಕುತೂಹಲದ ಸಂಗತಿಯೂ ಆಗಿದೆ. ಇದೇ ವೇಳೆಗೆ ಹೀರಾಲಾಲ್ ಮುಂಬೈನಲ್ಲಿ ಮಗನಿಗೆ ಮಾರವಾಡಿ ಶಾಲೆಗೆ ಸೇರಿದರು. ೧೯೨೦ರಲ್ಲಿ ಬಾಲಗಂಗಾಧರ ತಿಲಕರು ನಿಧನರಾದಾಗ ಇಡೀ ಮುಂಬೈ ಶೋಕ ತಪ್ತವಾಗಿತ್ತು. ಮಳೆಯನ್ನು ಲೆಕ್ಕಿಸದೆ ತಿಲಕರಿಗೆ ಶ್ರದ್ಧಾಂಜಲಿ ಅರ್ಪಿಸಲು ಮೆರವಣಿಗೆ ಹೊರಟಿತು. ಇದು ಬಾಲಕ ಲೋಹಿಯಾನ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಇದೇ ಹೊತ್ತಿಗೆ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿ

ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಅಣಿಗೊಳಿಸಿ ಅದರ ನೇತೃತ್ವವಹಿಸಿಕೊಂಡ ವರ್ಷ, ಖಿಲಾಫತ್ ಚಳುವಳಿ, ಚಂಪಾರಣ್ ಚಳುವಳಿಗಳ ಮೂಲಕ ಗಾಂಧೀಜಿ ಜನಮೆಚ್ಚುಗೆ ಪಡೆದಿದ್ದರು. 'ಜಲಿಯನ್ ವಾಲಾಬಾಗ್ ಹತ್ಯಾಕಾಂಡ'ದ ಮೂಲಕ ಇಡೀ ದೇಶವನ್ನು ಕಂಗೆಡಿಸಿದ್ದ ಬ್ರಿಟಿಷ್ ಸರಕಾರದ ವಿರುದ್ಧ ಪೂರ್ಣ ಪ್ರಮಾಣದ ಅಸಹಕಾರ ಚಳವಳಿಗೆ ಕರೆಕೊಟ್ಟ ವರ್ಷವದು. ಅನೇಕ ವಿನೂತನ ಕಾರ್ಯಕ್ರಮಗಳ ಮೂಲಕ ದೇಶದಲ್ಲಿ ಒಂದು ರೀತಿಯ ಸಂಚಲನ ಉಂಟಾಗಿತ್ತು. ಅದೇ ವೇಳೆಗೆ ಶಾಲೆಯನ್ನು ತ್ಯಜಿಸಿದ ಲೋಹಿಯಾ, ಬಾಲಕ ಪಡೆಯನ್ನು ಕಟ್ಟಿಕೊಂಡು ಬೀದಿಗಿಳಿದರು. ಹೀಗೆ ಗಾಂಧೀಜಿಯ ಹೋರಾಟ ಮತ್ತು ವ್ಯಕ್ತಿತ್ವಕ್ಕೆ ಮಾರುಹೋದ ತಂದೆ ಮಕ್ಕಳಿಬ್ಬರೂ ಜನಪರ ಚಳವಳಿಯಲ್ಲಿ ಸಕ್ರೀಯರಾಗಿದ್ದರು. ಮುಂಬೈನಿಂದ ತಮ್ಮ ಸ್ವಂತ ಊರಾದ ಅಕ್ಬರ್‌ಪುರಕ್ಕೆ ವಾಪಸ್ಸಾದರು. ಇದಕ್ಕೆ ಮುನ್ನ ಮುಂಬೈನಲ್ಲಿ ಬಾಲಕ ಲೋಹಿಯಾನಿಗೆ ಗಾಂಧೀಜಿಯ ದರ್ಶನವಾಯಿತು. ಗಾಂಧೀಜಿಯ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದನು. ಹೀಗೆ ಗಾಂಧೀಜಿಯ ಸಂಪರ್ಕ ಹಾಗೂ ಚಿಂತನೆಯ ನೆಲೆಯಲ್ಲಿಯೇ ತಮ್ಮ ಜೀವಿತದ ಹೋರಾಟಗಳನ್ನು ಕಟ್ಟಿಕೊಂಡರು. ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದಲೇ ನೆಹರು, ಸುಭಾಷ್ಚಂದ್ರಭೋಸರ ಪರಿಚಯ ಮಾಡಿಕೊಂಡರು. ಲಂಡನ್‌ನಲ್ಲೇ ವಿದ್ಯಾಭ್ಯಾಸ ಮಾಡಿದರು. ವಿದ್ಯಾರ್ಥಿ ಜೀವನದುದ್ದಕ್ಕೂ ಬ್ರಟೀಷ್ ಸರಕಾರವನ್ನೂ ವಿರೋಧಿಸಿದ ಲೋಹಿಯಾ ಬೆಳೆಯುತ್ತಾ ಸಮಾಜವಾದದ ಚಿಂತನೆಯ ಹರಿಕಾರರಾಗಿ ಬಾಳಿ ಬದುಕಿದರು.

ಡಾ. ಅಂಬೇಡ್ಕರ್ ಅವರು ರಾಮಮನೋಹರ ಲೋಹಿಯಾ ಅವರಿಗಿಂತ ಸುಮಾರು ೨೦ ವರ್ಷಗಳಷ್ಟು ಹಿರಿಯರು. ಏಪ್ರಿಲ್ ೧೪, ೧೮೯೧ ರಲ್ಲಿ ಭಾರತದ ದಟ್ಟ ದರಿದ್ರ ಜಾತಿ ವ್ಯವಸ್ಥೆಯ ಪದ್ಧತಿಯಿರುವ ಮಹಾರಾಷ್ಟ್ರದ ಮಹಾರ್ ಎಂಬ ಅಸ್ಪೃಶ್ಯ ಸಮುದಾಯದ ರಾಮಜಿ-ಭೀಮಾಬಾಯಿ ದಂಪತಿಗಳ ಉದರದಲ್ಲಿ ಜನಿಸಿದ ಬಾಲಕನೇ ಭೀಮರಾವ್, ಆ ದಂಪತಿಗಳಿಗೆ ಭೀಮರಾವ್ ಹದಿನಾಲ್ಕನೇ ಮಗುವಾಗಿದ್ದನು. ಹುಟ್ಟು ಆಕಸ್ಮಿಕವಾದರೂ, ಭಾರತದಲ್ಲಿರುವ ಜಾತಿ ಪದ್ಧತಿಯಿಂದಾಗಿ ಹುಟ್ಟಿನಿಂದಲೇ ಅಂಬೇಡ್ಕರ್ ಅನೇಕ ಅವಮಾನಗಳನ್ನು ಅನುಭವಿಸಬೇಕಾಯಿತು. ಹುಟ್ಟು ಶ್ರೇಷ್ಠವಲ್ಲ ಎಂದಾದರೂ ಈ ದೇಶದಲ್ಲಿ ಹುಟ್ಟೇ ಶ್ರೇಷ್ಠವಾದುದು ಎನ್ನಲಿಕ್ಕೆ ಇವತ್ತಿನ ಅನೇಕ ಸಂಗತಿಗಳು ಸಾಬೀತುಪಡೀಸುತ್ತಲಿವೆ. ಲೋಹಿಯಾರಂತೆ ಸಹಜವಾಗಿ ವಿದ್ಯಾಭ್ಯಾಸ ಮಾಡುವುದು ಅಂಬೇಡ್ಕರ್ ಅವರಿಗೆ ಸಾಧ್ಯವಾಗಲಿಲ್ಲ. ಶಾಲೆಯಲ್ಲಿ ಹೊರಗೆ ಕೂಡಬೇಕು. ಕ್ಷೌರಿಕ ಕೂದಲು ಕತ್ತರಿಸುತ್ತಿರಲಿಲ್ಲ. ಸಾರ್ವಜನಿಕ ಕೆರೆ, ಬಾವಿಗಳಲ್ಲಿ ನೀರು ಕುಡಿಯಲು ಬಿಡುತ್ತಿರಲಿಲ್ಲ. ಈ ಎಲ್ಲ ಅವಮಾನ, ಯಾತನೆಗಳ ನಡುವೆಯೂ ಅಂಬೇಡ್ಕರ್ ಓದು ನಡೆದೇ ಇತ್ತು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಅಂಬೇಡ್ಕರ್ ಸೋದರತ್ತೆ ಮೀರಾಬಾಯಿ ಆಶ್ರಯದಲ್ಲಿ ಬೆಳೆಯಬೇಕಾಯಿತು.

ಅಂಬೇಡ್ಕರ್ ಅಸ್ಪಶ್ಯತೆಯಂತಹ ಭಯಂಕರ ವ್ಯವಸ್ಥೆಗೆ ಬಲಿಯಾಗಿ ಬಾಳಿನುದ್ದಕ್ಕೂ ಅಪಮಾನ, ಅವಮಾನಗಳನ್ನೂ ಎದುರಿಸುತ್ತಲೇ ಬದುಕಿದರು. ಅಂಬೇಡ್ಕರ್ ಅವರ

ತಂದೆ ರಾಮಜಿ ಸೇನೆಯಲ್ಲಿ ಸುಬೇದಾರರಾಗಿ ಕೆಲಸ ಮಾಡಿದವರಾಗಿದ್ದರು. ಮನೆಯಲ್ಲಿ ತಂದೆ ಕಬೀರ ಪಂಥದ ವಿಚಾರಗಳನ್ನು ಮಗನಿಗೆ ಸದಾ ಹೇಳಿಕೊಡುತ್ತಿದ್ದರು. ಅಂಬೇಡ್ಕರ್ ಅವರಿಗೆ ಓದಲು ಪ್ರತ್ಯೇಕ ಕೋಣೆ ಕೂಡ ಇರಲಿಲ್ಲ. ಬತ್ತಿ ದೀಪದ ಬೆಳಕಿನಲ್ಲಿ ಓದಿ ಹತ್ತನೇ ತರಗತಿ ಪಾಸುಮಾಡಿದ ಬಾಲಕ ಭೀಮರಾವ್‌ಗೆ ಸಮಾಜದವರು ಸನ್ಮಾನಿಸಿದರು. ಆ ಸಮಾರಂಭಕ್ಕೆ ಕೃಷ್ಣಕಾಂತ ಕೆಳೂಸ್ಕರ್ ಮತ್ತು ಎಸ್.ಕೆ.ಭೋಲೆ ಅವರು ಆಗಮಿಸಿದ್ದರು. ಸಮಾರಂಭದಲ್ಲಿ ಕೆಳೊಸ್ಕರ್ ಅವರು ಬುದ್ಧನ ಜೀವನ ಚರಿತ್ರೆಗೆ ಸಂಬಂಧಿಸಿದ ಅವರು ಬರೆದ ಒಂದು ಪುಸ್ತಕವನ್ನು ಕಾಣಿಕೆಯಾಗಿ ನೀಡಿದರು. ಆವಾಗಲೇ ಬಾಲಕ ಭೀಮರಾವ್‌ಗೆ ಬುದ್ಧನ ಪರಿಚಯವಾಯಿತು. ವಿದ್ಯಾಭ್ಯಾಸಕ್ಕಾಗಿ ಕೆಳೊಸ್ಕರ್ ಅವರ ಮೂಲಕ ಸಯ್ಯಾಜಿರಾವ್ ಗಾಯಕವಾಡ ಅವರ ಸಹಾಯದಿಂದ ವಿದೇಶದಲ್ಲಿ ಕಾಲೇಜು ವಿದ್ಯಾಭ್ಯಾಸ ಮುಗಿಸಿದರು. ಒಪ್ಪಂದದಂತೆ ಬರೋಡಾ ಸಂಸ್ಥಾನದಲ್ಲಿ ಕೆಲಸ ಮಾಡಬೇಕಾಗಿತ್ತು. ಕೆಲಸ ಮಾಡುವಾಗ ಅಸ್ಪೃಶ್ಯತೆ ಅವರನ್ನು ಕಾಡದೆ ಬಿಡಲಿಲ್ಲ. ಹೀಗಾಗಿ ಕೆಲಸ ತ್ಯಜಿಸಿದರು. ಈ ನಡುವೆ ತಂದೆ ರಾಮ್‌ಜಿಯ ನಿಧನ ಆಘಾತವನ್ನುಂಟು ಮಾಡಿತು. ಮುಂದೆ ಸ್ನೇಹಿತರ ಮತ್ತು ಸಯ್ಯಾಜಿರಾವ್ ಗಾಯಕವಾಡ ಅವರ ಆರ್ಥಿಕ ಸಹಾಯದಿಂದ ವಿದೇಶಕ್ಕೆ ಓದಲು ಹೋದರು. ಬಡತನದ ಬೇಗೆಯಲ್ಲಿ ಹೆಂಡತಿ ರಮಾಳನ್ನು ಇಲ್ಲಿಯೇ ಬಿಟ್ಟು ವಿದೇಶದಲ್ಲಿ ಹೆಚ್ಚಿನ ವ್ಯಾಸಂಗ ಮಾಡಿದರು. ಎರಡನೇ ಬಾರಿಗೆ ವಿದೇಶಕ್ಕೆ ಹೋಗಲು ಇಲ್ಲಿಯ ಸಮಾಜ ಸೇವೆಗಾಗಿ ದುಡಿಯುತ್ತಿದ್ದ ಛತ್ರಪತಿ ಶಾಹೂ ಮಹಾರಾಜರ ಸಹಾಯ ಪಡೆದರು. ವಿಶೇಷವೆಂದರೆ ಅಂಬೇಡ್ಕರ್ ಅವರಿಗೆ ಸಮಾಜ ಸೇವೆಯಡೆಗೆ ಒಲವು ಬರಲು ಮಹಾತ್ಮಾ ಜ್ಯೋತಿಬಾಪುಲೆಯವರ ಸಾಮಾಜಿಕ ಹೋರಾಟದ ಪ್ರಭಾವ, ಕಬೀರರ ವೈಚಾರಿಕ ನೆಲೆ, ಬುದ್ಧನ ಜೀವಪರ ಜನಪರ ಚಿಂತನೆ, ಅಂಬೇಡ್ಕರ್ ರವರಿಗೆ ಪ್ರಿಯವಾಗಿದ್ದವು. ಈ ಎಲ್ಲ ವಿಚಾರಗಳು ಅವರನ್ನು ಸಮಾಜಮುಖಿ ಚಿಂತನೆಗೆ ಹಚ್ಚಿದವು. ಹೀಗಾಗಿ ಅಂಬೇಡ್ಕರ್ ಸಾಮಾಜಿಕ ನೆಲೆಯಲ್ಲಿ ಇಂದಿಗೂ ಧ್ರುವತಾರೆಯಾಗಿದ್ದಾರೆ. ಹೀಗೆ ಅಂಬೇಡ್ಕರ್ ಲೋಹಿಯಾ ಇಬ್ಬರೂ ಕ್ರಮಿಸಿದ ದಾರಿ ಒಂದೆಯಾದರೂ ಸಾಮಾಜಿಕ ಅಪಮಾನ ಅಡಚಣೆಗಳನ್ನು ಅಂಬೇಡ್ಕ ಎದುರಿಸಿದರೆ, ಲೋಹಿಯಾ ಅವರಿಗೆ ಈ ತರಹದ ಅನುಭವಗಳು ಇರಲಿಲ್ಲ. ಲೋಹಿಯಾ ಅವರಿಗೆ ದೇಶದ ಸ್ವಾತಂತ್ರ್ಯ ಮುಖ್ಯವಾದರೆ ಅಂಬೇಡ್ಕರ್ ಅವರಿಗೆ ಭಾರತದ ಬಹುಸಂಖ್ಯಾತ ದಲಿತರಿಗೆ, ಮಹಿಳೆಯರಿಗೆ ಸಾಮಾಜಿಕ ಸ್ವಾತಂತ್ರ್ಯ ಅನಿವಾರ್ಯವಾಗಿತ್ತು.

ಅಂಬೇಡ್ಕರ್ ಅವರಿಗೆ ಬುದ್ಧ, ಕಬೀರ, ಫುಲೆ, ಅವರ ಆದರ್ಶಗಳ ಪರಿಚಯವಿದ್ದರೆ, ಲೋಹಿಯಾ ಅವರಿಗೆ ಎಳೆತನದಲ್ಲಿಯೇ ಗಾಂಧೀಜಿಯ ಆದರ್ಶಗಳು ಪರಿಚಯವಾಗಿದ್ದವು. ಗಾಂಧೀಜಿಯವರ ಆದರ್ಶವನ್ನು ನೆಚ್ಚಿಕೊಂಡು ಬೆಳೆದದ್ದಲ್ಲದೇ, ಗಾಂಧೀಜಿಯ ಚಿಂತನೆಯ ನೆಲೆಯಲ್ಲಿಯೇ ಬದುಕಿನ ಮುಕ್ಕಾಲು ಭಾಗ ಹೋರಾಟದ ದಿಕ್ಕನ್ನು ಲೋಹಿಯಾ ಕಂಡುಕೊಂಡರು.

ಲೋಹಿಯಾ ಮತ್ತು ಅಂಬೇಡ್ಕರ್ ಇಬ್ಬರೂ ವಿದೇಶದಲ್ಲಿ ವ್ಯಾಸಾಂಗ ಮಾಡಿದ್ದರೂ ಲೋಹಿಯಾ ಅವರಿಗೆ ವಿದೇಶದ ವರ್ಗ ಸಂಘರ್ಷ, ಪ್ರಿಯವಾಗುವುದರ ಜೊತೆಗೆ ಗಾಂಧಿವಾದವೇ ಅವರಿಗೆ ಆದರ್ಶವಾಗುತ್ತದೆ. ಹಿಂದೂ ವಾದವನ್ನು ಪ್ರತಿಪಾಧಿಸುತ್ತಿದ್ದ ಗಾಂಧೀಜಿಯವರನ್ನು ಅಂಬೇಡ್ಕರ್ ಅವರು ಎಂದೂ ಮೆಚ್ಚಲಿಲ್ಲ. ಮೇಲಾಗಿ ಗಾಂಧಿ ವಾದವನ್ನು ವಿರೋಧಿಸುತ್ತಲೇ ಬೆಳೆದರು. ಅದಕ್ಕಾಗಿಯೇ ಅಂಬೇಡ್ಕ ಅವರು ದೇಶದ ಸ್ವಾತಂತ್ರ್ಯ ಚಳುವಳಿಗಿಂತಲೂ ಸಾಮಾಜಿಕ ಸ್ವಾತಂತ್ರ್ಯ ಚಳುವಳಿಗೆ ಹಂಬಲಿಸುತ್ತಿದ್ದರು. ಕಾರಣ ಅಸ್ಪೃಶ್ಯತೆಯಂತಹ ಅಮಾನವೀಯ ಪದ್ಧತಿಯಿಂದ ಅಂಬೇಡ್ಕರ್ ಬೇಸತ್ತಿದ್ದರು. ೧೯೨೦ ರ ದಶಕದಲ್ಲಿ ಪ್ರಜ್ಞಾಪೂರ್ವಕವಾಗಿ ಸಂಘಟಿತವಾದ, ಸಾಮಾಜಿಕ ರಾಜಕೀಯ ಚಳುವಳಿ ದಕ್ಷಿಣ ಭಾರತದ ವಿದರ್ಭ, ಕೊಲ್ಲಾಪೂರ, ಹೈದ್ರಾಬಾದ್, ಮೈಸೂರು, ಮದ್ರಾಸ್ ಮುಂತಾದ ಪ್ರದೇಶದ ಸಂಸ್ಥಾನಗಳಲ್ಲಿ ದಲಿತ ಪರವಾದ, ಪ್ರಗತಿ ಪರವಾದ ಚಿಂತನೆಯ ಮೂಲಕ ಚಳುವಳಿ ರೂಪುಗೊಳ್ಳುತ್ತಿತ್ತು.

ಇದೇ ದಶಕದ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶೇಷವಾಗಿ ಭಾರತದ ದೊಡ್ಡ ಮಟ್ಟದಲ್ಲಿ ಕ್ರಾಂತಿಕಾರಕ ದಂಗೆಗಳನ್ನು ಕಂಡ ಕಾಲ ಅದಾಗಿತ್ತು. ರಷ್ಯಾದ ಅಕ್ಟೋಬರ್ ಕ್ರಾಂತಿ ಭಾರತವನ್ನೊಳಗೊಂಡಂತೆ ಪ್ರಪಂಚದಾದ್ಯಂತ ದುಡಿಯುವ ಜನಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು. ಈ ಕಾರಣದಿಂದಾಗಿ ಪ್ರಪಂಚದಾದ್ಯಂತ ಹೊಸ ಚಿಂತನೆಯ ಅಲೆಯೊಂದು ಎದ್ದಿದ್ದರೂ ಭಾರತದ ಜಾತಿ ಪದ್ಧತಿ ಮತ್ತು ವರ್ಣ ವ್ಯವಸ್ಥೆಯಲ್ಲಿ ಅಪಾರ ನಂಬಿಕೆ ಮತ್ತು ವಿಶ್ವಾಸ ಇಟ್ಟುಕೊಂಡವರು ಗಾಂಧೀಜಿ. ಇಲ್ಲಿ ಆಚರಣೆಯಲ್ಲಿದ್ದ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದು ಪ್ರಾಯಶ್ಚಿತವೆಂದು ಮಾತ್ರ ಭಾವಿಸಿದ್ದರು. ಈ ನಿಟ್ಟಿನಲ್ಲಿ ಆಲೋಚನೆ ಮಾಡುವಾಗ ಅಂಬೇಡ್ಕರ್ ಅವರ ವ್ಯಕ್ತಿತ್ವ ತೀರ ಭಿನ್ನವಾಗಿ ನಮಗೆ ಕಾಣುತ್ತದೆ. ಯಾವ ಗಾಂಧೀಜಿಯವರ ಅಸ್ಪೃಶ್ಯತೆ ಆಚರಣೆ ಪ್ರಾಯಶ್ಚಿತ್ತವೆಂದು ಭಾವಿಸಿದ್ದರೋ ಅದೇ ಅಸ್ಪೃಶ್ಯತೆಯ ದಾರುಣ ಅನುಭವ ಮತ್ತು ತನ್ನ ಜನರ ಆಶೋತ್ತರಗಳನ್ನು ಪ್ರತಿನಿಧಿಸುವ ಸಹಜವಾದ ಹಕ್ಕು ಅಂಬೇಡ್ಕರ್ ಪಡೆದಿದ್ದರು. ನಿಮ್ನ ವರ್ಗಗಳ ಖಾಸಗಿ ಬದುಕು, ಚಿಂತನೆಯ ಧಾಟಿ, ನೋವು ಅವಮಾನ ಅಸಹಾಯಕತೆಗಳ ನೇರ ಪರಿಚಯ ಅಂಬೇಡ್ಕರ್ ಅವರಿತ್ತು. ಅವರ ದುಃಖ ದುಮ್ಮಾನಗಳಿಗೆ ಕಿವಿಗೊಡುತ್ತಿದ್ದ ಅಂಬೇಡ್ಕರ್ ದಲಿತರ ದನಿಯಾಗಿ ರೂಪಗೊಂಡಿದ್ದರು. ಅಸಮಾನವಾದ ಸಮಾಜ ವ್ಯವಸ್ಥೆಯನ್ನು ಸಮಾನಗೊಳಿಸುವಲ್ಲಿ ಶ್ರಮಿಸಿದ ಅಂಬೇಡ್ಕರ್ ಬಹಿಷ್ಕೃತ ಹಿತಕಾರಣಿ ಸಭಾದಂತಹ ಸಂಘಟನೆಯೊಂದನ್ನು ಪ್ರಾರಂಭಿಸುವುದರ ಮೂಲಕ ಹೊಸ ಚಿಂತನೆಗೆ, ಹೋರಾಟಗಳಿಗೆ ಮುಂದಾದರು.

ಅಂಬೇಡ್ಕರ್ ಅವರು ಹೋರಾಟಕ್ಕೆ ಮಾನಸಿಕವಾಗಿ ಸಜ್ಜಾಗುವ ಹೊತ್ತಿಗೆ ದೇಶದಲ್ಲಿಯೇ ಮೊದಲ ಬಾರಿಗೆ ೧೯೨೭ ರ ಮಾರ್ಚ್ ೧೯-೨೦ ರಂದು ಈ ಎರಡು ದಿನಗಳ ಸಮಾವೇಶದಲ್ಲಿ ಮಹಾಡ್ ಕೆರೆಯ ನೀರು ಮುಟ್ಟಿದರು. ನೈಸರ್ಗಿಕವಾಗಿ ಸಿಗುತ್ತಿದ್ದ ನೀರನ್ನು ದಲಿತರ ಹೋರಾಟ ಮಾಡುವುದರ ಮೂಲಕ ಮುಟ್ಟಬೇಕಾಯಿತು.

ಅಲ್ಲಿಯ ಸವರ್ಣೀಯರು ನೀರು ಮುಟ್ಟಿದ್ದಕ್ಕಾಗಿ ದಲಿತರ ಮೇಲೆ ಮಾರಣಾಂತಿಕವಾದ ಹಲ್ಲೆ ನಡೆಸಿದರು. ನಿಸರ್ಗದತ್ತವಾದ ನೀರು, ಕುಡಿಯುವ, ಮುಟ್ಟುವ ಹಕ್ಕು ನಮಗೂ ಇದೆ. ನಾವು ಈ ದೇಶದ ವಾರಸುದಾರರು, ನಮಗೂ ಇದರಲ್ಲಿ ಪಾಲಿದೆ ಎಂದು ಪ್ರತಿಪಾದಿಸಿದರು.

ಈ ಎಲ್ಲ ಕಾರಣಗಳಿಗಾಗಿ ಅಸ್ಪಶ್ಯರು ಹಿಂದೂಗಳಲ್ಲ. ಮುಸ್ಲಿಮರಂತೆ, ಕ್ರೈಸ್ತರಂತೆ ಅವರೊಂದು ಪ್ರತ್ಯೇಕ ಜನಾಂಗ, ಆದ್ದರಿಂದ ಉಳಿದವರಂತೆ ಅಸ್ಪಶ್ಯರಿಗೂ ಪ್ರತ್ಯೇಕ ಜನಾಂಗವೆಂದು ಪರಿಗಣಿಸುವಂತೆ ಸೈಮನ್ ಕಮಿಷನ್ ಮುಂದೆ ವಾದಿಸಿದರು. ಈ ಹೋರಾಟ ಆಧುನಿಕ ಭಾರತದ ಹೋರಾಟಗಳಲ್ಲಿಯೇ ಮಹತ್ವದ್ದು, ೨೦ನೇ ಶತಮಾನದಲ್ಲಿ ಅಸ್ಪೃಶ್ಯರು ಬೃಹತ್ ಸಂಖ್ಯೆಯಲ್ಲಿ ಸಾರ್ವಜನಿಕವಾಗಿ ತಮ್ಮೆಲ್ಲ ನಾಗರಿಕ ಹಕ್ಕುಗಳನ್ನು ಪ್ರತಿಪಾದನೆ ಮಾಡಿದ ಪ್ರಥಮ ಪ್ರಸಂಗ ಅದಾಗಿತ್ತು. ದೇಶದ ನಿಮ್ನ ವರ್ಗದಲ್ಲಿ ನವಚೈತನ್ಯಕ್ಕೆ ಕಾರಣವಾಗಿತ್ತು. ಆದರೆ ನಾಗರಿಕ ಸಂಸ್ಕೃತಿಗೆ ಹೆಸರು ತಂದ ಬುದ್ಧ, ಬಸವ, ಮಹಾವೀರ ಈ ಮುಂತಾದ ಮಹನೀಯರು ಜನ್ಮ ತಾಳಿದ ನಾಡಿನಲ್ಲಿ ಮತ್ತೊಂದು ಘೋರವಾದ ಘಟನೆಯು ಜರುಗಿತು. ಮಹಾಡ್ ಕೆರೆ ಮೈಲಿಗೆಯಾಯಿತೆಂದು ಅಲ್ಲಿಯ ಸವರ್ಣೀಯರು ಗೋಮೂತ್ರ, ಹಾಲು, ತುಪ್ಪ, ಸಗಣಿಯಿಂದ ಕುಡಿಯಲು ಬಳಸುತ್ತಿದ್ದ ಕೆರೆಯ ನೀರನ್ನು ಶುಚಿಗೊಳಿಸಿದರು. ಮನುಷ್ಯರು ಬಳಸುವ ನೀರನ್ನು ಗೋಮೂತ್ರ ಬೆರೆಸಿ ಕೆರೆಯನ್ನು ಪವಿತ್ರಗೊಳಿಸುವ ಅವರ ಪ್ರಯತ್ನ ಜಗತ್ತು ನಾಚುವಂತಿತ್ತು. ಇದೇ ವರ್ಷ ಅಂದರೆ, ಡಿಸೆಂಬರ್ ೨೦, ೧೯೨೭ರಂದು ಡಾ.ಅಂಬೇಡ್ಕರ್ ಜೀವ ವಿರೋಧಿಯಾದ ಮನುಸ್ಮೃತಿಯನ್ನು ಸುಟ್ಟು ಹಾಕಿದರು.

ಶತಶತಮಾನಗಳಿಂದ ಅಸ್ಪೃಶ್ಯರನ್ನು ಹೀನಾಯವಾಗಿ ಕಂಡಿದ್ದ ಹಿಂದೂ ಧರ್ಮ ಮತ್ತು ಹಿಂದೂವಾದಿಗಳ ವಿರುದ್ಧ ಅಂಬೇಡ್ಕರ್ ಅವರ ವಾಗ್ಸರಿ ಮುಂದುವರೆಯಿತು. ಹಂದಿ, ನಾಯಿಗಳಿಗಿಂತ ನಮ್ಮನ್ನು ಕಡೆಯಾಗಿ ಕಂಡಿದ್ದೀರಿ. ಅವರಿಗೂ ನಾಗರಿಕ ಹಕ್ಕುಗಳು ಸಿಗಬೇಕು ಎಂದು ವಾದಿಸಿದರು. ಮುಂದುವರೆದು ಮಾತನಾಡುತ್ತಾ ಮಾನವತೆಗಾಗಿ ಮಿಡಿಯುವುದು ಕಠೋರವಾದವೇ? ಅಥವಾ ಅಸ್ಪೃಶ್ಯತೆ ಆಚರಣೆ ಕಠೋರವಾದವೇ? ಎಂದು ತಿಲಕರನ್ನು ಗಮನದಲ್ಲಿಟ್ಟುಕೊಂಡು ಅಂಬೇಡ್ಕರ್ ಅವರು ಹೀಗೆ ಹೇಳಿದರು. ತಿಲಕ 'ಸ್ವರಾಜ್ಯ ನನ್ನ ಆಜನ್ಮ ಸಿದ್ಧ ಹಕ್ಕು' ಎಂಬ ಘೋಷಣೆ ನೀಡಿ ಸ್ವಾತಂತ್ರ್ಯ ಆಂದೋಲನದ ಧೀಮಂತ ನಾಯಕರೆನಿಸಿದ್ದಾರೆ. ಆದರೆ ಅವರೇನಾದರು ಅಸ್ಪೃಶ್ಯರಾಗಿ (ಹೊಲೆಯ-ಮಾದಿಗ) ಹುಟ್ಟಿದ್ದರೆ ಈ ಘೋಷಣೆಗಿಂತ ಮುಂಚೆ ಅಸ್ಪೃಶ್ಯತೆ ನಿರ್ಮೂಲನೆಯೇ ನನ್ನ ಜನ್ಮ ಸಿದ್ಧ ಹಕ್ಕು ಎಂದು ಹೇಳುತ್ತಿದ್ದರು. ಅಂಬೇಡ್ಕ ಅವರ ಈ ಮಾತುಗಳಲ್ಲಿ ಸರಳವಾದ ವಿಚಾರವಿದ್ದರೂ ಕಠೋರವಾದ ಸತ್ಯವಿತ್ತು.

ಈ ಎಲ್ಲ ಚಿಂತನೆ ಹೋರಾಟಗಳ ಮಧ್ಯೆ ಅಂಬೇಡ್ಕರ್ ಅವರು ಅಸ್ಪೃಶ್ಯರಿಗೆ ಸಾಮಾಜಿಕ ಸ್ಥಾನ-ಮಾನಗಳನ್ನು ದೊರೆಕಿಸಿಕೊಡುವುದರ ಜೊತೆಗೆ ಧಾರ್ಮಿಕ ನೆಲೆಯಲ್ಲಿಯೂ ಚಳವಳಿಗಳನ್ನು ಹಮ್ಮಿಕೊಂಡರು.

ಹಿಂದೂ ಧರ್ಮದ ಮುಖ್ಯ ಕೇಂದ್ರಗಳೆಂದರೆ ದೇವಾಲಯಗಳು. ಆ ಕಾಲದಲ್ಲಿ ಪ್ರವೇಶ ಅಸ್ಪೃಶ್ಯರಿಗೆ ಇರಲಿಲ್ಲ. ಹಾಗೆ ನೋಡಿದರೆ ಈಗಲೂ ದೇವಾಲಯ ಪ್ರವೇಶ, ಆಚರಣೆ ಸುಲಭವಾಗಿಲ್ಲ. ಈ



ನೆಲೆಯಲ್ಲಿ ಮಾರ್ಚ್ ೨೦,೧೯೩೦ ರಿಂದು ೧೯೩೫ರ ವರೆಗೆ ನಾಸಿಕನಲ್ಲಿರುವ 'ಕಾಳಾರಾಂ' ದೇವಸ್ಥಾನ ಪ್ರವೇಶ ಚಳವಳಿ ನಡೆಸಿದರು. ಪ್ರಾರಂಭದಲ್ಲಿ ಸುಮಾರು ಸಾವಿರದ ಐದುನೂರು ಜನ ನಾನಾ ಭಾಗಗಳಿಂದ ಬಂದು ದೇವಸ್ಥಾನ ಪ್ರವೇಶಕ್ಕೆ ಶಾಂತ ಮೆರವಣಿಗೆಯಲ್ಲಿ ಹೊರಟರು. ದೇವಸ್ಥಾನ ತಲುಪಿದಾಗ ದೇವಾಲಯದ ಬಾಗಿಲು ಮುಚ್ಚಿತ್ತು. ಪ್ರಾರಂಭದಲ್ಲಿ ಸುಮಾರು ಇಂದು ತಿಂಗಳುಗಳ ಕಾಲ ನಡೆದ ಈ ಚಳವಳಿ ಯುದ್ಧಕ್ಕೂ ದೇವಸ್ಥಾನದ ಬಾಗಿಲು ಮುಚ್ಚೆಯೇ ಇತ್ತು. ಅದೇ ಏಪ್ರಿಲ್‌ನಲ್ಲಿ ರಾಮೋತ್ಸವದ ತೇರು ಎಳೆಯುವ ಸಂದರ್ಭದಲ್ಲಿ ನಿಮ್ನ ವರ್ಗದವರಿಗೂ ಮತ್ತು ಸವರ್ಣೀಯರಿಗೂ ಬಲವಾದ ಮಾತಿನ ಚಕಮಕಿ ನಡೆದು ಅಂಬೇಡ್ಕ ಅವರನ್ನೊಳಗೊಂಡಂತೆ ಕಲ್ಲು ತೂರಾಟಗಳಿಂದ ಗಾಯಗಳಾದವು.

ಈ ಹೋರಾಟದಿಂದ ದಲಿತರಲ್ಲಿ ಒಂದು ರೀತಿಯ ನವಚೈತನ್ಯ ಮೂಡಿತಲ್ಲದೆ, ಹೋರಾಟದ ಪ್ರಜ್ಞೆ ಬೆಳೆಯಿತು. ಅದೇ ಸಂದರ್ಭದಲ್ಲಿ ಅಂಬೇಡ್ಕರ್ ಅವರು 'ದಲಿತ ಭೂಹೀನರ, ರೈತರ, ಕೂಲಿ ಕಾರ್ಮಿಕರಿಗಾಗಿ ಎರಡು ಯೋಜನೆಗಳನ್ನು ಮುಂದಿಟ್ಟರು. ಮಹಾ ವತನ್ ಎಂಬ ಬಿಟ್ಟಿ ಚಾಕರಿ ಪದ್ಧತಿಯನ್ನು ನಿರ್ಮೂಲನ ಮಾಡುವುದು. ಗೋಮಾಳ, ಅರಣ್ಯ ಭೂಮಿ ಮುಂತಾದ ಸರಕಾರಿ ಜಮೀನನ್ನು ಭೂಹೀನ ದಲಿತರಿಗೆ, ಬಡವರಿಗೆ ಹಂಚುವಂತೆ ಒತ್ತಾಯಿಸಿ ಹೋರಾಡಿದರು. ದಲಿತರ ಬದುಕಿನಲ್ಲಿ ಕ್ರಾಂತಿ ಕಾರಕ ಬದಲಾವಣೆ ತರಲೆತ್ನಿಸಿ ಅವರು ದುಂಡು ಮೇಜಿನ ಸಭೆಯಲ್ಲಿ ಹಕ್ಕು ಪ್ರತಿಪಾದನೆ ಮಾಡಿದರು. ತನ್ನವರ ಯಾತನೆ, ನೋವುಗಳನ್ನು ತೆರೆದಿಟ್ಟರು. ಇದನ್ನರಿತ ಬ್ರಿಟಿಷರು ಅಂಬೇಡ್ಕರ್ ಪ್ರತಿಪಾದಿಸಿದ ವಿಚಾರಗಳನ್ನು ಒಪ್ಪಿದರು. ಪ್ರತ್ಯೇಕ ಮತದಾನದ ಹಕ್ಕನ್ನು ನೀಡಿ ಆದೇಶ ಹೊರ ಬೀಳುತ್ತಿದ್ದಂತೆ, ದಲಿತರಿಗೆ ಹರಿದು ಬರಬೇಕಾಗಿದ್ದ ಹಕ್ಕಿನ ವಿರುದ್ಧ ಗಾಂಧೀಜಿಯವರು ಪೂನಾದ ಯರವಾಡ ಜೈಲಿನಲ್ಲಿ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು. ದಲಿತರ ನಿಜವಾದ ನೇತಾರ ನಾನೇ ಎಂದು ಚಕ್ರಾಧಿವೇಶನದಲ್ಲಿ ಹೇಳಿದ್ದ ಗಾಂಧೀಜಿ ದಲಿತರಿಗೆ ದೊರೆತ ಹಕ್ಕಿನ ವಿರುದ್ಧ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದು ನಿಜಕ್ಕೂ ವಿಪರ್ಯಾಸದ ಸಂಗತಿ. ಜಾತಿರಹಿತ, ವರ್ಗರಹಿತ ಸಮಾಜ ಕಟ್ಟುತ್ತೇನೆ ಎಂದು ಹೇಳುತ್ತಲೇ ಗಾಂಧೀಜಿಯವರು ಪಕ್ಕಾ ಮೂಲಭೂತವಾದಿಯಾಗಿ ವರ್ತಿಸಿದ್ದೂ ದುರಾದೃಷ್ಟಕರವಾದುದು. ಬಿಎಸ್‌ಪಿಯ ಸರ್ವೋಚ್ಚ ನಾಯಕರಾಗಿದ್ದ ದಿವಂಗತ ಕಾನ್ಸಿರಾಮ ಅವರು ಅದೊಂದು ಕರಾಳ ದಿನವೆಂದು ಹೇಳಿದ್ದು ಇಲ್ಲಿ ನೆನಪಿಸಿಕೊಳ್ಳಬಹುದು.

ಗಾಂಧೀಯವರ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸುವಲ್ಲಿ ಅಂಬೇಡ್ಕ ಪ್ರತಿಪಾದಿಸಿದ ದಲಿತರ ಹಕ್ಕನ್ನು ಬಿಟ್ಟು ಕೊಡುವುದರ ಮೂಲಕ ಅಂಬೇಡ್ಕರ್ ಅವರು ರಾಷ್ಟ್ರೀಯ ಪ್ರಜ್ಞೆಯನ್ನು ಮೆರೆದರು. ಆ ಮೂಲಕ ಪ್ರತ್ಯೇಕ ಚುನಾವಣೆಯ ಬದಲಿಗೆ ಮೀಸಲು ಕ್ಷೇತ್ರಗಳನ್ನು ಪಡೆದರು. ಅಂಬೇಡ್ಕರ್ ಅವರು ಕಟ್ಟಬೇಕೆಂದಿದ್ದ ದಲಿತರ ಸ್ವಾತಂತ್ರ್ಯದ ಬದುಕಿಗೆ ಗಾಂಧೀಜಿಯವರು ಅಡ್ಡಗಾಲು ಹಾಕಿದ್ದರು ಎನ್ನುವುದು ಯಾರೂ



ಮರೆಯುವಂತಿಲ್ಲ. ಮಹಿಳೆಯರಿಗಾಗಿ ಹಿಂದೂಕೋಡ್ ಬಿಲ್, ದಲಿತರಿಗಾಗಿ ಪ್ರತ್ಯೇಕ ಚುನಾಯಕಗಳನ್ನು ಅಂಬೇಡ್ಕರ್ ಅವರು ಕೇಳಿದ್ದು ಅವರು ಬಯಸಿದ ಜಾತಿರಹಿತ ಸಮಾಜ ನಿರ್ಮಾಣಕ್ಕಾಗಿ ಎನ್ನುವುದು ಸಂಘಪರಿವಾರದವರು ಮತ್ತು ಗಾಂಧೀಜಿಯವರು ಅರಿಯಲಿಲ್ಲ. ಅಂಬೇಡ್ಕರ್ ಅವರು ಸಾಮಾಜಿಕ, ಆರ್ಥಿಕ, ರಾಜಕೀಯ ಹೀಗೆ ಎಲ್ಲ ರಂಗಗಳಲ್ಲಿಯೂ ಸಮಾನತೆಗಾಗಿ ಶ್ರಮಿಸಿದ್ದಾರೆ.

ಸ್ವಾತಂತ್ರ್ಯ ನಂತರದಲ್ಲಿದ್ದ ಆರ್ಥಿಕ ವ್ಯವಸ್ಥೆಯನ್ನು ಪುನರ್ ರಚಿಸಲು ಇಲ್ಲಿಯ ಜಮೀನದಾರಿ ಪದ್ಧತಿಯನ್ನು ಅಳಿಸಿಹಾಕಿ ಎಲ್ಲರಿಗೂ ಆರ್ಥಿಕ ನ್ಯಾಯ ಸಿಗಲು ದಲಿತ, ಹಿಂದುಳಿದ, ದುಡಿಯುವ ಜನತೆಯ ಹಿತ ಕಾಪಾಡಲು ಸಮಾಜವಾದವೊಂದೇ ಉತ್ತಮ ಮಾರ್ಗವೆಂದು ನಂಬಿದ್ದರು. ಅಂಬೇಡ್ಕರ್‌ರು ಸಮಾಜವಾದದ ಮೌಲ್ಯಗಳ ಬಗ್ಗೆ ಈ ಬಗೆಯಾದ ಆಸಕ್ತಿ ಹೊಂದಿದ್ದರೂ ಭಾರತೀಯ ಸಮಾಜವಾದಿಗಳ ಜೊತೆಗೆ ಬೆರೆಯಲಿಲ್ಲ, ಇದಕ್ಕೆ ಹಲವಾರು ಕಾರಣಗಳಿದ್ದವು. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಸಾಮಾಜಿಕ ಅಸಮಾನತೆಗೆ ಅಂಬೇಡ್ಕರರು ಸಮಾಜವಾದಿಗಳ ಗಮನವನ್ನು ಮೇಲಿಂದ ಮೇಲೆ ಸೆಳೆದಿದ್ದರು. ಆ ಬಗ್ಗೆ ಚರ್ಚೆಗೆ, ವಿಚಾರ ವಿನಿಮಯಕ್ಕೆ ಕರೆಕೊಟ್ಟಿದ್ದರು. ಸಮಾಜ ವ್ಯವಸ್ಥೆಯು ಕೇವಲ ಆರ್ಥಿಕ ಸ್ವರೂಪವನ್ನು ಆಧರಿಸಿರಲಿಲ್ಲ. ಅಲ್ಲಿ ಸಾಮಾಜಿಕ ಸ್ವರೂಪ ಕೂಡಾ ಪ್ರಮುಖವಾಗಿರುತ್ತದೆ. ಆರ್ಥಿಕ ಅಸಮಾನತೆ ಬದುಕಿನ ಭೌತಿಕ ಸ್ವರೂಪವನ್ನು ಘಾಸಿಗೊಳಿಸಿದರೆ, ಸಾಮಾಜಿಕ ಅಸಮಾನತೆಯು ಬದುಕಿನ ಮಾನಸಿಕ ಹಾಗೂ ಅಧ್ಯಾತ್ಮಿಕ ಸ್ವರೂಪವನ್ನು ಘಾಸಿಗೊಳಿಸಿದೆ ಎಂದು ಅವರು ಅದನ್ನು ಮನಗಾಣಿಸಿಕೊಡಲು ಪ್ರಯತ್ನಿಸಿದರು.

ಆದರೆ, ಭಾರತದ ಸಮಾಜವಾದಿಗಳು ಯುರೋಪಿನಲ್ಲಿಯ ಸಮಾಜ ವ್ಯವಸ್ಥೆಯನ್ನು ಕಂಡು ತಪ್ಪಾಗಿ ಪ್ರಭಾವಿತರಾಗಿದ್ದರು. ಆರ್ಥಿಕ ಸ್ಥಿತಿಯೊಂದೇ ಸಮಾಜಕ್ಕೆ ಅಧಿಕಾರವನ್ನು ನೀಡಿ ಅನ್ಯಾಯವನ್ನು, ಅಸಮಾನತೆಯನ್ನು ತೊಡೆದು ಹಾಕಬಹುದೆಂದು ತಮ್ಮ ಎಣಿಕೆಯನ್ನು ಭಾರತೀಯ ಸಮಾಜಕ್ಕೂ ಅನ್ವಯಮಾಡಲು ಹೋಗಿ ಸಮಾಜವಾದಿಗಳು ಎಡವಿದ್ದರು. ಇಲ್ಲಿ ಆರ್ಥಿಕ ಸ್ಥಿತಿಯ ಜೊತೆಗೆ ಸಾಮಾಜಿಕ ಸ್ಥಾನ ಮತ್ತು ಧಾರ್ಮಿಕ ಮನ್ನಣೆಯೂ ಅತಿ ಮುಖ್ಯ ಎಂಬುದನ್ನು ಗುರುತಿಸುವಲ್ಲಿ ಅವರು ವಿಫಲರಾದರು. ಇದೇ ಭಾರತೀಯ ಸಮಾಜವಾದಿಗಳ ದೋಷವೆಂದು ಅಂಬೇಡ್ಕ ಎತ್ತಿಹೇಳಿದರು.

ಹೀಗೆ ಮಹತ್ವದ ಚಿಂತನೆ, ತ್ಯಾಗಗಳ ಮೂಲಕ ಅಂಬೇಡ್ಕರ್ ಅವರ ಹೋರಾಟ ಒಂದು ಶ್ರೇಷ್ಠ ಮಟ್ಟಕ್ಕೆ ತಲುಪಿತ್ತು. ಅನೇಕ ಜನಪರ ಕೆಲಸಗಳಿಂದಾಗಿ ಅಂಬೇಡ್ಕರ್ ದೇಶಾದ್ಯಂತ ಮನೆಮಾತಾಗಿದ್ದರು. ಇದೇ ವೇಳೆಯಲ್ಲಿ ವಿದ್ಯಾರ್ಥಿ ದೆಸೆಯಿಂದಲೂ ಗಾಂಧೀಜಿಯವರ ಪ್ರಭಾವದಲ್ಲಿ ಬೆಳೆದ ಲೋಹಿಯಾ ಅವರು ವಿದೇಶದಲ್ಲಿ ಓದಿ ಅನೇಕ ಸಾಧನೆಗಳನ್ನು ಮಾಡಿದ್ದರು. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ, ಲೋಹಿಯಾ ಗಾಂಧೀಜಿಯ ನೆರಳಲ್ಲಿಯೇ ಸಮಾಜವಾದ ಪ್ರತಿಪಾದಿಸಿದರೆ, ಅಂಬೇಡ್ಕ



ಅವರು ಗಾಂಧೀಜಿಯವರ ಹಿಂದೂವಾದದ ಚಿಂತನ ಧಾರೆಯ ವಿರುದ್ಧ ದಿಕ್ಕಿನಲ್ಲಿ ಸಮಾಜವಾದದ ಚಿಂತನೆಗೆ ತೊಡಗಿದವರು ಹೀಗಾಗಿ ಎಂದಿಗೂ ಗಾಂಧೀಜಿಯವ ರೊಂದಿಗೆ ಹೊಂದಾಣಿಕೆ ಮಾಡಿಕೊಂಡವರಲ್ಲ.

ಲೋಹಿಯಾ ಅವರು ಅಪ್ಪಟ ರಾಷ್ಟ್ರೀಯ ಪ್ರಜ್ಞೆ ಇರತಕ್ಕಂತಹ ವ್ಯಕ್ತಿ. ೧೯೩೧ ರಲ್ಲಿ ಜಿನಿವಾದಲ್ಲಿ ನಡೆಯುತ್ತಿದ್ದ ಲೀಗ್ ಆಫ್ ನೇಷನ್ಸ್ ಅಧಿವೇಶದಲ್ಲಿ ಭಾರತದ ಪ್ರತಿನಿಧಿಯಾಗಿ ಬಿಕಾನೇರ್ ಮಹಾರಾಜನನ್ನು ಬ್ರಿಟಿಷ್ ಸರಕಾರ ಕಳುಹಿಸಿತ್ತು. ಅದೇ ವೇಳೆಯಲ್ಲಿ ಭಗತ್‌ಸಿಂಗ್, ರಾಜಗುರು ಸುಖದೇವರ ನೇಣು ಹಾಗೂ ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ ಮುಂತಾದ ಪ್ರತಿಭಟನೆಗಳ ಮೂಲಕ ಸದಾ ಉದ್ವಿಗ್ನಗೊಂಡು ಅಶಾಂತವಾಗಿದ್ದ ಭಾರತವನ್ನು ಬ್ರಿಟಿಷ್ ಪ್ರಭುತ್ವದಡಿಯ ಕಲ್ಯಾಣ ರಾಜ್ಯವನ್ನಾಗಿ ಬಿಂಬಿಸಲು ಬಿಕಾನೇರ್ ಮಹಾರಾಜನ ಉದ್ದೇಶಗಳನ್ನು ಪತ್ರಿಕೆಗಳ ಮೂಲಕ ಅರಿತ ಲೋಹಿಯಾ ಜಿನಿವಾಗೆ ತೆರಳಿ, ಅಲ್ಲಿಯ ಭಾರತೀಯ ಗೆಳೆಯನ ಸಹಾಯದಿಂದ ಅಧಿವೇಶನ ನಡೆಯುತ್ತಿದ್ದ ಸಭಾಗ್ರಹದ ಪ್ರೇಕ್ಷಕರ ಗ್ಯಾಲರಿಗೆ ಹೋಗಿ ಬಿಕಾನೇರ್‌ನ ಭಾಷಣದ ಸರದಿ ಬಂದಾಗ, ಪ್ರತಿಭಟನೆಯ ರೂಪದಲ್ಲಿ ಸಿಳ್ಳು ಹೊಡೆದಾಗ ಸಭೆಯಲ್ಲಿ ಕೋಲಾಹಲವುಂಟಾಯಿತು. ಲೋಹಿಯಾ ಸಭೆಯಿಂದ ಹೊರಹಾಕಲ್ಪಟ್ಟರು. ಇದು ಭಾರತದಲ್ಲೆಲ್ಲಾ ಸುದ್ದಿಯಾಯಿತು.

೧೯೩೨ರ ಹೊತ್ತಿಗೆ "ಉಪ್ಪು ಮತ್ತು ಸತ್ಯಾಗ್ರಹ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ಸಾದರಪಡಿಸಿ ಡಾಕ್ಟರೇಟ್ ಪದವಿಯನ್ನು ಪ್ರೊ, ಜೆಂಬಾಟ ಅವರ ಮಾರ್ಗದರ್ಶನದಲ್ಲಿ ಪಡೆದು ತಾಯಿನಾಡಿಗೆ ಮರಳುವರು. ಭಾರತಕ್ಕೆ ಬಂದ ಮೇಲೆ ಮಹಾತ್ಮಾ ಗಾಂಧೀಜಿಯವರ ಸಂಪರ್ಕದಿಂದಾಗಿ ಕಾಂಗ್ರೆಸ್ ಪಾರ್ಟಿಗೆ ಸೇರ್ಪಡೆ ಯಾದರು. ಕ್ರಮೇಣ ಗಾಂಧೀ, ನೆಹರೂಜಿಯವರಿಗೆ ಹತ್ತಿರವಾದವರು. ಕ್ರಾಂಗ್ರೆಸ್ ಪಕ್ಷದಲ್ಲಿರುವ ಜಡತ್ವವನ್ನು ಕಡಿಮೆಗೊಳಿಸಲು ಕಾಂಗ್ರೆಸ್ ಸಮಾಜವಾದಿ ಬಳಗವನ್ನು ರೂಪಿಸಿಕೊಂಡು, ಸಮಾಜವಾದಿ ಚಿಂತನೆಗೆ ಮುಂದಾದರು. ಜಯಪ್ರಕಾಶ ನಾರಾಯಣ, ಪೂರ್ಣಾನಂದ ಮುಂತಾದ ಸಮಾಜವಾದಿ ಗೆಳೆಯರ ಸಂಪರ್ಕವೂ ಬಂದಿತು.

ಲೋಹಿಯಾ ಬಳಗದವರು ಗಾಂಧೀಜಿಯ ಜೊತೆಗಿದ್ದುಕೊಂಡೇ ಸಮಾಜ ವಾದವನ್ನು ಪ್ರತಿಪಾದಿಸಿದರು. ಗಾಂಧೀಜಿಯವರ ಜೊತೆಗೆ ಅನೇಕ ಭಿನ್ನಾಭಿಪ್ರಾಯ ಗಳಿದ್ದರೂ ಸ್ವಾತಂತ್ರ್ಯ ಹೋರಾಟವನ್ನು, ಜಾಗತಿಕ ಕಾರ್ಮಿಕ ಕ್ರಾಂತಿಯನ್ನು ಮೈಗೂಡಿಸಿಕೊಂಡು ನೋಡುವ ತಾತ್ವಿಕ ಒತ್ತಾಯಕ್ಕೆ ಒಳಗಾದರು. ರಾಷ್ಟ್ರೀಯ ಆಂದೋಲನವನ್ನೇ ಒಂದು ದುಡಿಯುವ ವರ್ಗದ ಕ್ರಾಂತಿಯನ್ನಾಗಿ ಪರಿವರ್ತಿಸುವ ಹಂಬಲವುಳ್ಳದರಾಗಿದ್ದರು. ಅವರಿಗೆ ರಷ್ಯಾದ ಕ್ರಾಂತಿ ಸ್ಫೂರ್ತಿಯಾಗಿತ್ತೇ ಹೊರತು, ಅನುಕರಣೀಯ ಮಾದರಿಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ್ತು ಸಮಾಜವಾದಿಗಳ ಗುಂಪಿನಲ್ಲಿ ತಾತ್ವಿಕ ಭಿನ್ನಾಭಿಪ್ರಾಯವಿದ್ದುದು ಕಂಡುಬರುತ್ತದೆ.



ಭಾರತೀಯ ಕಮ್ಯೂನಿಸ್ಟರ ಪಿತೂರಿ, ಕಾಂಗ್ರೆಸ್ನಲ್ಲಿಯ ತಳಮಳ ಇವೆಲ್ಲವುಗಳಲ್ಲದೆ ಹಿಂದೂವಾದಿಯಾಗಿದ್ದ ಗಾಂದೀಜಿಯವರ ಚಿಂತನೆಯ ನೆಲೆಯಲ್ಲಿ ಲೋಹಿಯಾ ಅವರು ಸಾಗಿದ್ದರಿಂದ ಅವರ ಪೂರ್ವಾರ್ಧ ಸಮಾಜವಾದಿ ಹೋರಾಟದ ಬದುಕು ನಿಶ್ಚಿತ ನೆಲೆ ಕಾಣಲಿಲ್ಲ. ಗಾಂಧೀಜಿಯವರು ದುಡಿಯುವ ವರ್ಗವನ್ನು ಗೌರವಿಸುತ್ತಿದ್ದರು. ಆದರೆ, ಒಡೆತನದ ಪ್ರಶ್ನೆ ಬಂದಾಗ ಗಾಂಧೀಜಿ ಆ ಸಂದರ್ಭದಿಂದ ನುಣುಚಿ ಕೊಳ್ಳುತ್ತಿದ್ದರು. ಗಾಂಧೀಜಿಯವರ ಮೇಲಿದ್ದ ಅತಿಯಾದ ನಂಬಿಕೆ, ಗೌರವದಿಂದಲೇ ಸಮಾಜವಾದ ಪ್ರಖರವಾಗಿ ಬೆಳೆಯದೆ ಆರ್ಥಿಕ ನೆಲೆಯಿಂದ ಸಾಮಾಜಿಕ ನೆಲೆಗೆ ಸ್ಪಂದಿಸಲಿಲ್ಲವೆಂದು ಹೇಳಬೇಕಾಗುತ್ತದೆ. ಗಾಂಧೀಜಿಯವರ ಮರಣಾನಂತರವೇ ಲೋಹಿಯಾ ಅವರು ನಿಜವಾದ ಸಮಾಜವಾದಿಯಾಗಿ ಹೊರಹೊಮ್ಮಿದರು. ಅಷ್ಟೇ ಅಲ್ಲ ಅವರ ಹೋರಾಟಕ್ಕೊಂದು ಅರ್ಥ ಕೂಡ ಬಂದಿತು. ಈ ನಡುವೆ ಗೋವಾ ಹೋರಾಟ, ನೇಪಾಳ ಹೋರಾಟ ಮುಂತಾದ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ದೇಶ ವಿಭಜನೆ ವಿಷಯದಲ್ಲಿ ಲೋಹಿಯಾ ಅವರ ಸಹಮತವಿರಲಿಲ್ಲ. ಹಾಗೆಯೇ ಅಂಬೇಡ್ಕರ್ ಅವರು ದೇಶ ವಿಭಜನೆಗೆ ವಿರೋಧ ವ್ಯಕ್ತಪಡಿಸಿದ್ದರು.

ಗಾಂಧೀಜಿಯವರು ಸ್ವಜಾತಿಯವರು ಎಂಬ ಕಾರಣಕ್ಕಾಗಿಯೇ ಏನೋ ಅವರು ಬದುಕಿರುವವರೆಗೂ ಅವರೊಂದಿಗಿರಲು ಲೋಹಿಯಾ ಅವರು ನಿರ್ಧರಿಸಿದ್ದರು. ಗಾಂಧೀಜಿ ಹತ್ಯೆಯ ನಂತರ ಲೋಹಿಯಾ ಅವರು ಜಾತಿ, ವರ್ಣ, ಅಸಮಾನತೆಗಳ ಕುರಿತು ಹೆಚ್ಚು ಮಾತನಾಡಿದರು. ಗಾಂಧೀಜಿಯವರ ನಿಧನದವರೆಗೂ ಯಾವ ಸಮಾಜ ವಾದಿಯೂ ಅಂಬೇಡ್ಕರ್ ಅವರಂತಹ ಶ್ರೇಷ್ಠ ಸಮಾಜವಾದಿಯ ಗುಣವನ್ನು ಗೌರವಿಸಲಿಲ್ಲ, ಅವರತ್ತ ಗಮನವೂ ಹರಿಸಲಿಲ್ಲ. ಆದರೆ, ಲೋಹಿಯಾ ಅವರು ಅಂಬೇಡ್ಕರ್‌ರಲ್ಲಿದ್ದ ಸಮಾಜವಾದ ಚಿಂತನೆಯ ಬಗ್ಗೆ ಅಪಾರ ಗೌರವವಿಟ್ಟುಕೊಂಡಿದ್ದರು. ಅಂಬೇಡ್ಕರ್ ರಂತೆಯೇ ಜಮೀನ್ದಾರಿ ಪದ್ಧತಿ ವಿರೋಧಿಸಿ 'ಉಳುವವನಿಗೆ ಭೂಮಿ' ಎಂಬ ಹೋರಾಟ ಮಾಡಿದರು. ಭೂ ಪರಭಾರೆ ಮೇಲೆ ನಿಯಂತ್ರಣ ತರಲು ಚಿಂತಿಸಿದ್ದರು. ಹೆಚ್ಚುವರಿ ಭೂಮಿಯನ್ನು

ಬಡವರಿಗೆ ಹಂಚುವುದು, ಈ ತರಹದ ಅನೇಕ ವಿಚಾರಗಳಲ್ಲಿ ಅಂಬೇಡ್ಕರ್-ಲೋಹಿಯಾ ಒಂದೇ ನಿಟ್ಟಿನಲ್ಲಿ ಚಿಂತಿಸಿದವರಾಗಿದ್ದರು.

ಲೋಹಿಯಾ ಅವರು ಸ್ವಾತಂತ್ರ್ಯೋತ್ತರ ನಂತರ ಡಾ. ಅಂಬೇಡ್ಕರ್ ಅವರೊಂದಿಗೆ, ಅದರಲ್ಲೂ ಕೊನೆ ಕೊನೆಗೆ ಆತ್ಮೀಯರಾಗತೊಡಗಿದ್ದರು. ಅವರನ್ನು ಕಂಡು ಅವರೊಂದಿಗೆ ಜಾತಿ ಸಮಸ್ಯೆ, ಲಿಂಗ ಭೇದ ಸಮಸ್ಯೆ ಮುಂತಾದ ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸಲು ಆಸಕ್ತರಾಗಿದ್ದರು. ಡಾ ಅಂಬೇಡ್ಕರ್‌ರ ಸಮಾಜವಾದಿ ನೀತಿ, ಲೋಹಿಯಾ ಸಮಾಜವಾದ ಸಾಮ್ಯವಾಗಿರುವುದರಿಂದ; ತಾವೆಲ್ಲ ಸೇರಿ ಕೆಲಸ ಮಾಡುವ ಇಂಗಿತವನ್ನು ಅವರು ಡಾ. ಅಂಬೇಡ್ಕರ್‌ರೊಂದಿಗೆ ವ್ಯಕ್ತಪಡಿಸಿದ್ದರು. ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸುವುದಕ್ಕಾಗಿ ಮ್ಯಾನ್ ಕೈಂಡ್ ಎಂಬ ಪತ್ರಿಕೆಯನ್ನು ಲೋಹಿಯಾ ಅವರು ತಮ್ಮ ಸಂಪಾದಕತ್ವದಲ್ಲಿ ಹೊರತರುತ್ತಿದ್ದರು. ಆ ಪತ್ರಿಕೆಗೆ ಲೇಖನವನ್ನು ಬರೆಯಲು



ಕೇಳಿಕೊಳ್ಳುತ್ತ, ಡಾ ಅಂಬೇಡ್ಕರ್‌ರಿಗೆ ಬರೆದ ಪತ್ರದಲ್ಲಿ “ದೇಶದಲ್ಲಿ ಪ್ರಚಲಿತವಿರುವ ಜಾತಿ ಪದ್ಧತಿಯ ಯಾವುದಾದರೊಂದು ಮುಖವನ್ನು ನೀವು ಆಯ್ದುಕೊಂಡರೆ ಭಾರತದ ಜನ ಬರಿ ಸಿಟ್ಟಿನಿಂದಷ್ಟೇ ಅಲ್ಲ, ದಂಗು ಬಡಿದು ಕುಳಿತುಕೊಳ್ಳುವಂತೆ ಮಾಡುವಂಥ ದೇನಾದರೂ ಬರೆಯಿರೆಂದು ಮನವಿ ಮಾಡಿಕೊಳ್ಳುತ್ತೇನೆ.... ಈಗಲೂ ಕೂಡ ಕೋಪದೊಂದಿಗೆ ಸಹಾನುಭೂತಿಯಿಂದ ಬರೆಯಬೇಕೆಂದೇ ಬಯಸುತ್ತೇನೆ” . ಹಾಗೂ ನೀವು ಬರಿ ಅನುಸೂಚಿತ ಜಾತಿಗಳಗಷ್ಟೇ ಅಲ್ಲ ಇಡೀ ಭಾರತೀಯರ ನಾಯಕರಾಗಬೇಕೆಂದು ಬಯಸುತ್ತೇನೆ” . (ಲೋಹಿಯಾ ಅಂಬೇಡ್ಕರ್‌ರಿಗೆ ಬರೆದ ಪತ್ರ ಪು.೩೭, ೦೧-೧೦-೧೯೫೬) ಈ ಹೇಳಿಕೆಯಲ್ಲಿ ಮೂರು ಅಂಶಗಳು ಕಂಡು ಬರುತ್ತವೆ. ಮೊದಲನೆಯದು, ಜಾತಿಪದ್ಧತಿಯನ್ನು ಕುರಿತಾಗಿ ಅಂಬೇಡ್ಕರ್‌ರರು ಮಾಡಿರುವ ಕೆಲಸದ ಸಾಮರ್ಥ್ಯ. ಅದಕ್ಕಾಗಿ ಆ ವಿಷಯವನ್ನು ಸಮರ್ಥವಾಗಿ ಬರೆಯಬಲ್ಲರೆಂಬ ವಿಶ್ವಾಸದ ಅಭಿವ್ಯಕ್ತಿ, ಟೀಕಿಸುವ, ದೂಷಿಸುವುದರಿಂದ ಜನ ಸಿಟ್ಟಿಗೇಳಬಹುದು; ಹಾಗಾಗದೆ, ಜನ ದಂಗು ಬಡಿಯಬೇಕೆಂಬ ಸೂಚನೆಯಿದೆ. ದಂಗು ಬಡಿದಾಗ ಜನ ಗಾಬರಿಯಾಗುವುದು ಇಲ್ಲವೆ ತಮಗೆ ಗೊತ್ತಿದ್ದು, ಗೊತ್ತಿಲ್ಲದ ವಿಷಯ ಹೇಗೆ ಹೇಳಿದ್ದಾರಲ್ಲ. ಎಂದು ಭಾವನಾತ್ಮಕವಾಗಿ ಅದನ್ನು ಅಪ್ಪಿಕೊಳ್ಳುವಂತಾಗ ಬೇಕೆಂದು ಲೋಹಿಯಾ ಅವರು ಬಯಸುತ್ತಾರೆ. ಕೋಪದೊಂದಿಗೆ ಸಹಾನುಭೂತಿ ಬೆರೆಯಬೇಕು ಎನ್ನುವ ಸೂಚನೆ ಎರಡನೆಯದು. ಕೋಪದಿಂದ ಸಾಧಿಸಲಾಗದ್ದನ್ನು ಸಹಾನುಭೂತಿಯಿಂದ ಸಾಧಿಸಬಹುದೆಂದು ತರ್ಕ ಅವರದು. ಅದಕ್ಕಾಗಿ ಕೋಪದಲ್ಲಿ ಸಹನೆ ತಂದುಕೊಳ್ಳುವುದು ಅವಶ್ಯವಿದೆ. ಅದರಿಂದ ಉಪಯುಕ್ತತೆ ಅಧಿಕವೆಂದು ಮನವರಿಕೆಯಾಗುತ್ತದೆ.

ಮೂಲತಃ ನೊಂದ ಜನಾಂಗದ ವ್ಯಕ್ತಿ ಡಾ. ಅಂಬೇಡ್ಕರ್‌ರಲ್ಲಿ ಕೋಪ ಸಹಜವಾಗಿರುವುದು ಕಂಡು ಬರುತ್ತದೆ. ಅವರು ಬಹಿರಂಗ ಸಭೆಗಳಲ್ಲಿ ಆ ತರಹದ ಕೋಪವನ್ನು ಪ್ರಕಟಿಸುತ್ತಿದ್ದರಂತೆ ಅದಕ್ಕೆ ಲೋಹಿಯಾ ಅವರು ಅದನ್ನು ಬರಹದಲ್ಲಿ ಸಹಾನುಭೂತಿಯಾಗಿ ಪರಿವರ್ತಿಸಿಕೊಳ್ಳಲು ಇಚ್ಛಿಸಿದ್ದರು. ನೀವು ಕೇವಲ ದಲಿತ ನಾಯಕರಲ್ಲ; ಇಡೀ ಭಾರತೀಯರ ನಾಯಕರಾಗಬೇಕೆನ್ನುವ ಅದಮ್ಯ ಪ್ರೀತಿಯ ಬಯಕೆಯನ್ನು ಹೊಂದಿದ್ದರು. ದಲಿತರ ಸಮಸ್ಯೆಗಳನ್ನು ಕೈಗೆತ್ತಿಕೊಂಡಾಗ ದಲಿತೇತರ ವ್ಯಕ್ತಿ ಇಡೀ ಸಮಾಜದ ನಾಯಕನಾಗಬಲ್ಲ. ದಲಿತರಲ್ಲೇ ಬೆಳೆದವನು ದಲಿತಪರ ಹೋರಾಡಿದಾಗ ಅವನನ್ನು ದಲಿತರ ನಾಯಕ ಮಾತ್ರವೆಂದು ಗುರುತಿಸುವ ಸಮಾಜದ ಕಾಮಾಲೆ ಕಣ್ಣಿಗೆ ಕಾಣುವುದು ಸಹಜ. ಅಂತರಾಳದಲ್ಲಿ ಡಾ. ಅಂಬೇಡ್ಕರ್ ಅವರು ದಲಿತ ನಾಯಕರಾಗಿದ್ದೂ, ಜಾಗತಿಕ ದೃಷ್ಟಿಯಲ್ಲಿ ಅವರು ರಾಷ್ಟ್ರವಷ್ಟೇ ಅಲ್ಲ, ಜಾಗತಿಕ ನಾಯಕರೆಂದು ಹೇಳಿದರೆ ತಪ್ಪಾಗಲಾರದು.

ಅಜ್ಞಾನ, ಅಂಧಕಾರ, ಜಾತಿ, ಮೇಲು-ಕೀಳು ಸಮಸ್ಯೆಗಳಿಂದ ತುಂಬಿರುವ ಭಾರತದಲ್ಲಿ ಬೌದ್ಧಕತೆಯ ಕೊರತೆ ಸದಾ ಇರುವಂಥದ್ದು; ಆಗಾಗ ಬೌದ್ಧಿಕ ಕೊರತೆಯನ್ನು ತುಂಬಲು ಜ್ಞಾನಿಗಳು ಉದಯಿಸುತ್ತಾರೆ. ಅವರು ದುಡಿಮೆ ಅವಶ್ಯಕವಾಗಿರುತ್ತದೆ.



ಅದನ್ನು ಅರಿತುಕೊಂಡಿದ್ದ ಲೋಹಿಯಾ ಅವರು ತಮ್ಮ ಕಾಲ ಸಂದರ್ಭದಲ್ಲಿ ದೇಶದಲ್ಲಿ ಆವರಿಸಿದ್ದ ಬೌದ್ಧಿಕ ಕುಸಿತವನ್ನು ಗುರುತಿಸಿದ್ದರು. ಅದನ್ನು ಹೋಗಲಾಡಿಸಲು ಶ್ರಮಿಸಿದರು. ಅದಕ್ಕಾಗಿಯೇ ಮನಬಿಚ್ಚಿ ಮಾತನಾಡಿದರು. “ನಮ್ಮ ದೇಶವನ್ನಾವರಿಸಿದ ಸಂಪೂರ್ಣ ಬೌದ್ಧಿಕ ಕುಸಿತವನ್ನು ಒತ್ತಿ ಹೇಳಬೇಕಾಗಿದೆ. ನಿಮ್ಮಂಥ ವ್ಯಕ್ತಿ ಮುಕ್ತವಾಗಿ ಮಾತನಾಡುವುದು ತೀರ ಅವಶ್ಯಕವಾಗಿದೆ. ಎಂದು ನನ್ನ ಅನಿಸಿಕೆ” (ಪು. ೩೭,ಪತ್ರ ೦೧.೧೦.೧೯೫೬) ಎಂದು ಡಾ.ಅಂಬೇಡ್ಕರ್‌ರರರಿಗೆ ಬರೆದ ಪತ್ರದ ಸಾಲುಗಳು ಲೋಹಿಯಾರವರು ದೇಶದಲ್ಲಿ ಕುಸಿದಿರುವ ಬೌದ್ಧಿಕತೆಗೆ ಎಂಥ ವ್ಯಕ್ತಿಗಳಿಂದ, ಅದರ ಕೊರತೆಯನ್ನು ತುಂಬಿಕೊಳ್ಳಲು ಸಾಧ್ಯವೆಂಬುದನ್ನು ಮನದಂಡಿದ್ದರು. ಅದಕ್ಕಾಗಿಯೇ ಅಂಬೇಡ್ಕ ಅವರಿಗೆ ಆ ಕುರಿತಾಗಿ ಕೆಲಸ ಮಾಡಲು ಪ್ರೇರಣೆಯನ್ನು ನೀಡುವ ಕೆಲಸ ಮಾಡಿದ್ದಾರೆ.

ಲೋಹಿಯಾ ಮತ್ತು ಅಂಬೇಡ್ಕರ್‌ರಲ್ಲಿ ಪರಸ್ಪರ ಪತ್ರಗಳ ಮೂಲಕ ವಿಚಾರ ವಿನಿಮಯಗಳಾಗುತ್ತ; ಒಂದು ಸೈದ್ಧಾಂತಿಕ ಪ್ಲಾಟ್ ಫಾರ್ಮ್‌ಗೆ ಬರುವುದೊರಳಗಾಗಿ ಅಂಬೇಡ್ಕರ್ ಅವರು ನಿಧನರಾದರು. ಲೋಹಿಯಾ ಅವರು ಅಂಬೇಡ್ಕರ್‌ರನ್ನು ಕಾಣಲು ಸದಾ ಕಾತುರರಾಗಿದ್ದರು. ಆ ಅಂಶಗಳನ್ನು ಪತ್ರಗಳಲ್ಲಿ ಕಾಣುತ್ತೇವೆ. ಅವರಷ್ಟೇ ಅಂಬೇಡ್ಕರ್‌ರು ಕೂಡ ಲೋಹಿಯಾ ಅವರನ್ನು ಸ್ವಾಗತಿಸುವ ಬಯಕೆಯುಳ್ಳವರಾಗಿದ್ದರು. ಅಂಬೇಡ್ಕರ್‌ರಿಗೆ ಅನಾರೋಗ್ಯವಿದ್ದ ಸುದ್ದಿಯನ್ನು ಕೇಳಿ, ಆರೋಗ್ಯದ ಕಾಳಜಿ ವಹಿಸಿಕೊಳ್ಳಲು ತಮ್ಮ ಕಳಕಳಿಯನ್ನು ತೋಡಿಕೊಂಡಿದ್ದರು. ಡಾ. ಅಂಬೇಡ್ಕರ್‌ು ನಿಧನರಾದಾಗ ಡಾ. ಲೋಹಿಯಾ ಅವರಿಗೆ ತುಂಬ ದುಃಖವುಂಟಾಗಿತ್ತು.

ಅದನ್ನು ಅವರು ತಮ್ಮ ಸ್ನೇಹಿತರಿಗೆ ಬರೆದ ಪತ್ರವೊಂದರಲ್ಲಿ ಅಭಿವ್ಯಕ್ತಿಸಿದ್ದು ಹೀಗಿದೆ; "ಡಾ.ಅಂಬೇಡ್ಕರ್ ಅವರ ಆಕಸ್ಮಿಕ ಸಾವಿನಿಂದ ನನಗಾಗಿರುವ ವ್ಯಥೆ ವೈಯಕ್ತಿಕವಾದುದು ಕೂಡಾ ಅನ್ನುವುದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಿರಿ. ಅವರನ್ನು ನಮ್ಮ ಕಕ್ಷೆಯೊಳಗೆ ತರಬೇಕೆನ್ನುವುದು ಸಂಘಟನೆಯ ದೃಷ್ಟಿಯಿಂದಷ್ಟೇ ಅಲ್ಲ. ಗಾಂಧೀಜಿ ಯವರೊಬ್ಬರನ್ನು ಬಿಟ್ಟು ಇನ್ನಾವುದೇ ದೊಡ್ಡ ಸವರ್ಣೀಯ ಹಿಂದೂ ನಾಯಕರಷ್ಟೇ ದೊಡ್ಡ ನಾಯಕರಾಗಿದ್ದರು. ಹಿಂದೂ ಧರ್ಮದಲ್ಲಿನ ಜಾತಿಪದ್ಧತಿಯನ್ನು ಒಂದಿಲ್ಲೊಂದು ದಿನ ನಾಶ ಪಡಿಸಬಹುದೆಂದು ಆತ್ಮವಿಶ್ವಾಸ ಹಾಗೂ ನೆಮ್ಮದಿ ಈ ಅಂಶದಲ್ಲೊಂದು ನನಗೆ ದೊರಕಿತ್ತು." (ತಮ್ಮ ಸಂತಾಪದೊಂದಿಗೆ, ತಾವಿ ಅಂಬೇಡ್ಕರ್‌ರನ್ನು ಹೇಗೆ ಗ್ರಹಿಸಿದ್ದರು ಎಂಬುದನ್ನು ಇಲ್ಲಿ ದಾಖಲಿಸಿದ್ದಾರೆ. ಅದೇನೆಂದರೆ 'ಡಾ. ಅಂಬೇಡ್ಕರ್ ಈ ದೇಶದ ರಾಜಕೀಯ ಕ್ಷೇತ್ರದ ಮಹಾನ್ ನಾಯಕರೆಂದು; ಇನ್ನೊಂದು ಹೆಜ್ಜೆ ಮುಂದೆ ಹೋಗಿ ಗಾಂಧೀಜಿಯನ್ನು ಬಿಟ್ಟರೆ ಯಾವುದೇ ಸವರ್ಣೀಯ ಹಿಂದು ನಾಯಕರಷ್ಟೇ ದೊಡ್ಡ ರಾಷ್ಟ್ರ ನಾಯಕರಾಗಿದ್ದರೆಂಬುದು.' ಜಾತೀಯ ಮನಸ್ಸುಗಳು ಡಾ.ಅಂಬೇಡ್ಕರ್‌ರನ್ನು ಮಹತ್ವದ ವ್ಯಕ್ತಿ, ರಾಷ್ಟ್ರ ನಾಯಕರೆಂದು ಒಪ್ಪದೇ ಇರುವಾಗ ಲೋಹಿಯಾ ಅವರಂಥ ವಿಚಾರವಾದಿಗಳು ಅವರ ನಾಯಕತ್ವವನ್ನು ಗುರುತಿಸಿದು ಸೂಕ್ತವಾದುದ್ದೆ, ಅಲ್ಲದೆ ಡಾ. ಅಂಬೇಡ್ಕರ್‌ರಂಥ ನಾಯಕರಿದ್ದಾಗ ಹಿಂದೂ ಧರ್ಮದಲ್ಲಿನ



ಜಾತಿ ವ್ಯವಸ್ಥೆಯನ್ನು ನಿರ್ಮೂಲನ ಮಾಡುವ ಆಶಾದಾಯಕತೆ ಅವರಲ್ಲಿ ಅಂಕುರಿಸಿತ್ತು. ಆದರೆ ಅದು ಈಡೇರಲಿಲ್ಲವೆಂದು ನಾವು ಹೇಳಬಹುದು.

ಡಾ. ಅಂಬೇಡ್ಕರ್‌ರು ಲೋಹಿಯಾ ಅವರೊಂದಿಗೆ ಸೇರಿ ಕೆಲಸ ಮಾಡಬೇಕೆಂದು ಕೊಂಡಿದ್ದರು. ಆ ವಿಷಯ ಚರ್ಚಿಸಲು ಅವರ ಸ್ನೇಹಿತರು ಅಂಬೇಡ್ಕರ್‌ರಲ್ಲಿಗೆ ಹೋಗಿದ್ದಾಗ, ಅವರೊಂದಿಗೆ ಅಭಿವ್ಯಕ್ತಿಸಿದ ಭಾವನೆಗಳು, ಲೋಹಿಯಾ ಅವರಿಗೆ, ಅವರ ಸ್ನೇಹಿತರು ಬರೆದ ಪತ್ರದಲ್ಲಿ ಹೀಗಿವೆ; "ನಮ್ಮ ಜೊತೆಗಿನ ಮಾತುಕತೆಯಲ್ಲಿ ಅವರು ನಮ್ಮ ದೃಷ್ಟಿಕೋನವನ್ನರಿತುಕೊಳ್ಳಲು ತುಂಬ ಕಾತರರಾಗಿದ್ದರು. ಸಹಾನುಭೂತಿ, ಮಮತೆಯ ಮೂರ್ತಿಯಾಗಿದ್ದರು." (ಪು೩೫. ಲೋಹಿಯಾ ಸ್ನೇಹಿತರ ಪತ್ರ) ಎಂದು ಹೇಳಿರುವಲ್ಲಿ ಅಂಬೇಡ್ಕರ್‌ರ ಮನೋಭಿತ್ತಿಯನ್ನು ಕಾಣುತ್ತೇವೆ. ಅಲ್ಲದೆ ಅವರು ಲೋಹಿಯಾ ಅವರಿಗೆ ಹೀಗೆ ಬರೆಯುತ್ತಾರೆ. "ನಾವು ಪರಸ್ಪರ ಒಟ್ಟುಗೂಡಲು ಏನು ಮಾಡಬೇಕೆನ್ನುವುದುದರ ಬಗ್ಗೆ ಕೊನೆಗೆ ತೀರ್ಮಾನಿಸಬಹುದು. ಆದ್ದರಿಂದ ನನ್ನ ಮನೆಗೆ ೨ನೇ ಅಕ್ಟೋಬರ್‌ರ ೧೯೫೬ ಮಂಗಳವಾರ ನೀವು ಬಂದರೆ ಸಂತೋಷವಾಗುತ್ತದೆ."(ಪು.೩೬ ಅಂಬೇಡ್ಕರ್‌ರ ಪತ್ರ) ಹೀಗೆ ಪರಸ್ಪರ ಒಂದಾಗುವ ಬಯಕೆಗಳು ಇಬ್ಬರಲ್ಲಿಯೂ ಮೂಡಿದ್ದವು ಎಂಬುದಕ್ಕೆ ಡಾ. ಅಂಬೇಡ್ಕರ್‌ರ ಈಮೇಲಿನ ಅನಿಸಿಕೆಯೂ ನಿದರ್ಶನವಾಗಿದೆ.

ಡಾ. ಲೋಹಿಯಾ ಅವರು ತಮ್ಮ ಸ್ನೇಹಿತರಿಗೆ ಬರೆದ ಪತ್ರವೊಂದರಲ್ಲಿ ಭಾರತದ ದಲಿತರಿಗೆ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ಅದೇನೆಂದರೆ; ಡಾ.ಅಂಬೇಡ್ಕರ್ ಮತ್ತು ಡಾ. ಜಗಜೀವನರಾಮ್ ಇವರಿಬ್ಬರು ಆಧುನಿಕ ಭಾರತದ ದಲಿತರ ಎರಡು ಮಾದರಿಗಳೆಂದು ಗುರುತಿಸಿದ್ದಾರೆ. ಈ ಎರಡು ಮಾದರಿಗಳ ಸ್ವರೂಪವನ್ನು ವಿವರಿಸುತ್ತ "ಡಾ.ಅಂಬೇಡ್ಕರ್ ವಿದ್ವಾಂಸರಾಗಿದ್ದು, ಪ್ರಾಮಾಣಿಕವಾದ, ಸಮಗ್ರತೆಯನ್ನುಳ್ಳ ಹಾಗೂ ಸ್ವತಂತ್ರ ವಿಚಾರದ ವ್ಯಕ್ತಿಯಾಗಿದ್ದರು; ಬಾಹ್ಯ ಜಗತ್ತಿಗೆ ನೇರ ಭಾರತದ ಪ್ರತೀಕವೆಂದು ಅವರನ್ನು ಹೆಸರಿಸಬಹುದು; ಅವರು ಕಹಿಯಾಗಿದ್ದರು ಹಾಗೂ ಪ್ರತ್ಯೇಕವಾಗಲು ಬಯಸುತ್ತಿದ್ದರು" . (ಪು.೪೧) ಇದುವೆ ಆಧುನಿಕ ದಲಿತರಲ್ಲಿ ಬಂದಿದೆ ಎಂದು, ಜಗಜೀವನ್‌ರಾಮ್ ಅವರು ಭಾರತೀಯ ಹಿಂದೂಗಳೊಂದಿಗೆ ಸದ್ಭಾವನೆ ಬೆಳೆಸಿಕೊಂಡಿದ್ದಾರೆ. ಅವರೊಂದಿಗೆ ಮೃದುವಾಗಿ ನಡೆದುಕೊಳ್ಳುತ್ತಾರೆ. ಆದರೆ ದಲಿತರ ಪ್ರತ್ಯೇಕ ಸಭೆ ಸಮಾರಂಭಗಳಲ್ಲಿ ರೋಷದಿಂದ ಕಟುದನಿಯಲ್ಲಿ ಮಾತನಾಡುತ್ತಾರೆಂದು, ಜನರಿಂದ ತಿಳಿದಿರುವುದಾಗಿ, ಲೋಹಿಯಾ ಅವರು ಪ್ರಸ್ತಾಪಿಸಿದ್ದಾರೆ. ಇದರಿಂದ ದಲಿತರ ಏಳಿಗೆಗೆ ಸಹಾಯಕವಾಗದೆಂದು ಹೇಳುತ್ತಲೇ ಅಂಬೇಡ್ಕರ್ ಮಾದರಿ, ಅಂದರೆ ಅತಿಯಾದ ರೋಷ, ಕಟುವಾದ ವಿರೋಧಗಳು ಕೂಡಾ ಬದಲಾಗಬೇಕೆಂದು ಅವರು ಬಯಸಿದ್ದರು. ಮುಂದುವರೆದು ಭಾರತದ ದಲಿತರು ಅಂಬೇಡ್ಕರ್‌ರಿಂದ ಏನನ್ನು ಕಲಿಯಬೇಕೆಂಬುದುದನ್ನು ಹೀಗೆ ಗುರುತಿಸಿದ್ದಾರೆ. "ಅವರು(ದಲಿತರ) ಅಂಬೇಡ್ಕರ್ ಅವರ ಶ್ರದ್ಧೆ ಹಾಗೂ ಕಲಿಕೆಯನ್ನು ಒಂದು ಪ್ರತೀಕವನ್ನಾಗಿಸಿಕೊಳ್ಳಬೇಕು



ಹಾಗೂ ಅಂಬೇಡ್ಕರ್‌ರಲ್ಲಿದ್ದ ಕಹಿಯನ್ನು ಬಿಟ್ಟು ಅವರ ಸ್ವತಂತ್ರ ಮನೋಭಾವವನ್ನು ಅನುಕರಿಸಬೇಕು. ಬರಿ ಹರಿಜನರ ನಾಯಕರೆಂದಷ್ಟೇ ಅಲ್ಲ; ಅಖಿಲ ಭಾರತದ ನಾಯಕರಾಗಿ ಕಾವ್ಯ ಪ್ರವೃತ್ತರಾಗಬಲ್ಲ ಒಬ್ಬ ಡಾ. ಅಂಬೇಡ್ಕರ್‌ರನ್ನು ಅವರು ಅನುಕರಿಸಬೇಕು" . (ಪು.೪೧) ಎಂದು ಹೇಳಿದ್ದು ಸೂಕ್ತವಾಗಿದೆ.

ಅಂಬೇಡ್ಕರ್ ಅವರಿಗಿರುವುದು ವ್ಯವಸ್ಥೆಯ ವಿರುದ್ಧದ ಸಿಟ್ಟೆ ಹೊರತು ಸೇಡು ಆಗಿರಲಿಲ್ಲ. ಹೆರಿಗೆಯ ಬೇನೆ ಹೆತ್ತವಳಿಗೆ ಗೊತ್ತು ಎನ್ನುವ ಹಾಗೆ ಅಂಬೇಡ್ಕ ಅವರಿದ್ದ ನೋವು ಲೋಹಿಯಾ ಅವರಿಗಿರಲಿಲ್ಲವೆನ್ನುವುದು ಈಗಾಗಲೇ ಪ್ರಸ್ತಾಪಿಸಲಾಗಿದೆ. ಲೋಹಿಯಾರಂತೆ ಅಂಬೇಡ್ಕರ್ ಸಮಾಜ ಸುಧಾರಣೆಯಲ್ಲಿ ಪತ್ರಕರ್ತರಾಗಿಯೂ ಕೆಲಸ ಮಾಡಿದ್ದಾರೆ. ಅನೇಕ ಹಂತಗಳಲ್ಲಿ ಈ ಇಬ್ಬರು ಸಾಧಕರು ಮಾಡಿದ ಕೆಲಸ ಆಧುನಿಕರಾದ ನಮಗೆ ಅನುಕರಣೀಯವಾಗಿದೆ.

*********

## ೪. ದಲಿತರು ಮತ್ತು ಅಮಾನವೀಯ ಆಚರಣೆಗಳು

- ಡಾ. ಚಿನ್ನಸ್ವಾಮಿ ಸೋಸಲೆ

ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ, ಸ್ವರೂಪಗಳ ಬಗೆಗೆ ಸಾಕಷ್ಟು, ಅಸ್ಪಷ್ಟತೆಯಿದೆ. ಕೆಲವು ಶಾಸ್ತ್ರಗ್ರಂಥಗಳು "ಎಲ್ಲಿ ನಾರಿಯರನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ವಾಸಿಸುತ್ತಾರೆ" ಎಂದು ಅವರ ಸ್ಥಾನವನ್ನು ಹಾಡಿ ಹೊಗಳುತ್ತವೆ. ಮಾತೃದೇವತೆಯ ಹಲವು ರೂಪಗಳಾಗಿ ದುರ್ಗಾ, ಕಾಳಿ, ಚಂಡಿ ಅಥವಾ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಅವತಾರವಾಗಿ ಪ್ರಕಟಗೊಂಡ ಅವಳು ಶಕ್ತಿ ಸ್ವರೂಪಳು. ಅವಳೆಂದರೆ ಭಯ, ಭಕ್ತಿಗಳೆರಡು ಜಾಗ್ರತವಾಗುತ್ತವೆ. ಅವಳು ರಕ್ಷಿಸುವವಳು ಮತ್ತು ಸಂದರ್ಭ ಬೇರೆ ಯಾದಾಗ ವಿನಾಶ ಮಾಡಬಲ್ಲಳು. ಸಂತುಷ್ಟಳಾದರೆ ಪ್ರತಿಯೊಂದು ಬಯಕೆಯನ್ನೂ ಈಡೇರಿಸುವಳು; ಕುದ್ದಳಾದರೆ ಹಿಂದೆಂದೂ ಕಾಣದ ಉಗ್ರ ಭೀಕರತೆಯನ್ನು ಹರಿಹಾಯಿಸುವಳು. ಪುರುಷ ದೇವತೆಗಳು ಅವಳೆದುರಿಗೆ ಅಸಹಾಯಕರಾಗುವರು. ಅವಳು ಸಕ್ರಿಯಳಾಗಲು ನಿರ್ಧರಿಸಿದಾಗ ಅವರು ಮಧ್ಯ ಪ್ರವೇಶಿಸಿದರು. ಆಕೆಯ ಕೆಲವು ಗುಣಗಳು ಪ್ರತಿಯೋರ್ವ ಹೆಣ್ಣಿನಲ್ಲೂ ಇವೆಯೆಂದು ನಂಬಲಾಗುತ್ತದೆ. ಆದರೆ ಹೆಣ್ಣಿನ ಇನ್ನೊಂದು ಚಿತ್ರವೂ ಇದೆ. ಅದಕ್ಕೂ ಧರ್ಮಶಾಸ್ತ್ರಗಳ ಹಾಗೂ ಜಾನಪದದ ಸಮ್ಮತಿ ಇದೆ. ಹೆಣ್ಣು ಚಂಚಲೆ ಮತ್ತು ಅಬಲೆ. ಸುಳ್ಳು, ವಂಚನೆ, ದುರಾಸೆ, ಮೋಸ, ಅಶುದ್ಧಿ, ಆಕರ್ಷಣೆ ಇರುವವಳು. ಪೂರ್ವಾಪರ ವಿವೇಚನೆಯಿಲ್ಲದೆ ಕೆಲಸ ಮಾಡುವಳು. ಹಾಗಾಗಿ ಎಲ್ಲ ಕೆಡಕುಗಳ ಮೂಲ ಅವಳೇ ಎಂದು ಭಾವಿಸಬಹುದು. ಸ್ಥಿರವಾದ ಮನಸ್ಸಿಲ್ಲದವಳು ಎಂದು ನಂಬಲಾಗಿರುವುದರಿಂದ ಅವಳ ಮೇಲೆ ಕಟ್ಟುನಿಟ್ಟಾದ ಹತೋಟಿಯಿಟ್ಟುಕೊಳ್ಳತ್ತಕ್ಕದ್ದು, ದುರ್ಬಲಳಾದ್ದರಿಂದ ಜೀವನದ ಎಲ್ಲ ಹಂತಗಳಲ್ಲೂ ಅವಳಿಗೆ ರಕ್ಷಣೆಯ ಅಗತ್ಯವಿದೆ. ಬಾಲ್ಯದಲ್ಲಿ ತಂದೆ, ತಾರುಣ್ಯದಲ್ಲಿ ಪತಿ, ಮುಪ್ಪಿನಲ್ಲಿ ಪತಿಯು, ಮೃತನಾದ ಮೇಲೆ ಮಕ್ಕಳು ಅವಳನ್ನು ಸಂರಕ್ಷಿಸಬೇಕು. ಈ ಎರಡೂ ಚಿತ್ರಗಳು ಪರಸ್ಪರ ವಿರುದ್ಧವಾಗಿವೆ. ಅಂಗೀಕೃತ ಮಾದರಿಗಳಲ್ಲಿ ಒಲವು ನಿಷೇಧಾತ್ಮಕ ಹಾಗೂ ಕೀಳುಗಳೆಯುವ ಚಿತ್ರದ ಕಡೆಗೇ ಇದೆ. ಸುಪ್ರಸಿದ್ಧ ಕವಿ ತುಳುಸೀದಾಸರು ಜನಪ್ರಿಯವಾದ ಒಂದು ಪದ್ಯದಲ್ಲಿ ಸ್ತ್ರೀಯರನ್ನು ತಮಟೆ, ನಿರಕ್ಷರ ವ್ಯಕ್ತಿ, ಶೂದ್ರ ಮತ್ತು ಪಶು ಇವುಗಳ ಜೊತೆಗೆ ಸೇರಿಸುತ್ತಾರೆ. ಇವು ಸರಿಯಾದ ದಾರಿಯಲ್ಲೇ ಇರುವಂತೆ ನೋಡಿಕೊಳ್ಳಬೇಕಾದರೆ ಶಿಕ್ಷಿಸಬೇಕು ಎನ್ನುತ್ತಾರೆ. ದುರ್ಬಲ ಲಿಂಗವೆಂದು ಪರಿಗಣಿಸಿದ ಮಹಿಳೆ ಪುರುಷರಿಗಷ್ಟೇ ಮೀಸಲುಗೊಂಡ ಕೆಲವು ಸೌಲಭ್ಯ ಸವಲತ್ತುಗಳಿಂದ, ಹಕ್ಕುಗಳಿಂದ ವಂಚಿತಳಾಗಬೇಕಾಯಿತು.

ಅಧೀನತೆಯ ಈ ತತ್ವ ಮುಖ್ಯವಾದ ಹಿಂದೂ ಧರ್ಮಕ್ಕೆ ಅಂಟಿಕೊಂಡು ಸರ್ವವ್ಯಾಪಕವಾಗಿದೆ. ಜಗತ್ತಿನ ದೃಷ್ಟಿಯನ್ನು ಸೆಳೆದಿದೆ. ಇಡೀ ಭಾರತೀಯ ಸಮಾಜಕ್ಕೆ ಒಂದು ರಂಗುಕೊಟ್ಟಿದೆ. ಇದಕ್ಕೆ ಅಪವಾದಗಳಿಲ್ಲವೆಂದಲ್ಲ. ಕೆಲವು ಕಡೆ ಮಹಿಳೆಯರಿಗೆ ಹೆಚ್ಚು ಪ್ರಮಾಣದಲ್ಲಿ ಸಮಾನತೆಯನ್ನೂ ಸ್ವಾತಂತ್ರ್ಯವನ್ನು ನೀಡಲಾಗಿದೆ.

ಮಹಿಳೆಯರ ಮೇಲೆ ನಿಯಂತ್ರಣ ಹಾಕಿರುವ ಕ್ಷೇತ್ರಗಳು ಯಾವುವು? ಮೊದಲನೆಯದಾಗಿ, ಅವರ ಲೈಂಗಿಕ ಸ್ವಾತಂತ್ರ್ಯವನ್ನು ಪುರುಷರಕ್ಕಿಂತ ಹೆಚ್ಚು ಕಟ್ಟುನಿಟ್ಟಾಗಿ ಹತೋಟಿಗೊಳಪಡಿಸಲಾಗಿದೆ. ಸ್ತ್ರೀಯರು ಬಹು ಸುಲಭವಾಗಿ ಮಲೀನಗೊಳ್ಳುವರು. ತಾವು ಹುಟ್ಟಿದ ಹಾಗೂ ಸೇರಿದ ಕುಟುಂಬಗಳೆರಡಕ್ಕೂ ಅಪಮಾನವುಂಟು ಮಾಡುವರು. ರಜಸ್ವಲೆಯಾಗುವುದಕ್ಕೆ ಮೊದಲೇ ಕನ್ಯೆಯ ವಿವಾಹ ಮಾಡಬೇಕು ಎಂಬ ನಿರ್ಬಂಧದ ಹಿಂದೆ ಇರುವುದು ಅವಳ ಪಾವಿತ್ರ್ಯವನ್ನು ರಕ್ಷಿಸುವುದೆಂಬ ಮುಖ್ಯ ಕಾರಣ. ಲೈಂಗಿಕತೆಯ ಹತೋಟಿಯಲ್ಲಿ ವ್ಯಕ್ತವಾಗುವುದು ಸಂತಾನೋತ್ಪಾದನೆಯ ಮೇಲೆ ಹತೋಟಿ. ಎರಡನೆಯದಾಗಿ, ಸ್ತ್ರೀಯರ ಚಲನವಲನಗಳ ಮೇಲೆ, ಅವರು ಇಟ್ಟುಕೊಳ್ಳುವ ಸಂಪರ್ಕಗಳ ಮೇಲೆ ನಿಯಂತ್ರಣ. ಇದರ ಹಿಂದೇ ಇರುವ ಅರ್ಥ ಅವರು ಯಾವುದೇ ಒಂದು ಆಮಿಷಕ್ಕೆ ಒಳಗಾಗಿ ಲೈಂಗಿಕ ನಿರ್ಬಂಧಗಳನ್ನು ಉಲ್ಲಂಘಿಸದಿರಲಿ ಎಂಬುದು. ಹಾಗೆಯೇ ಅವರ ಆಸ್ತಿಪಾಸ್ತಿ, ನಗದು, ಪರಿಶ್ರಮ, ಕೌಶಲ್ಯ ಮೊದಲಾದವನ್ನು ಇತರರು ದುರುಪಯೋಗಪಡಿಸಿಕೊಂಡು ಅವರನ್ನು ಶೋಷಿಸದಿರಲಿ ಎಂದು ಕೆಳವರ್ಗಗಳಲ್ಲಿನ ಹೆಂಗಸರರು ತಮ್ಮ ಕೌಟುಂಬಿಕ ವೆಚ್ಚಗಳನ್ನು ಪೂರೈಸಿಕೊಳ್ಳಲು ಯಾವುದಾದರೂ ಕೆಲಸ ಮಾಡಬೇಕಾಗುತ್ತದೆ. ಇದರಿಂದಾಗಿ ಕುಟುಂಬ ವಲಯದ ಹೊರಗೆ ಅವರ ಚಲನವಲನ ಅಗತ್ಯವಾಗುತ್ತದೆ. ಹೀಗಾಗಿ ಈ ನಿಬಂಧನೆಗಳು ಮುಖ್ಯವಾಗಿ ಮೇಲು ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಮಾತ್ರ ಅನ್ವಯಿಸುತ್ತದೆ. ಮೂರನೆಯದಾಗಿ, ಮಹಿಳೆಯ ಸಂಪನ್ಮೂಲವನ್ನು ನಿಯಂತ್ರಣದಲ್ಲಿರಿಸಬೇಕು ಎಂದು ನಂಬಲಾಗಿತ್ತು. ಬಹುತೇಕ ಮಹಿಳೆಯರಿಗೆ ಸಂಪನ್ಮೂಲವೆಂದರೆ ಅವರ ದುಡಿಮೆ ಮತ್ತು ಕೌಶಲ್ಯಗಳು. ಹೊರಗಿನ ಕೆಲಸ ನಿರ್ವಹಿಸುತ್ತಿರುವ ಕೂಲಿ ಹೆಂಗಸರಾಗಿರಬಹುದು, ಕುಟುಂಬದ ಕೆಲಸಕಾರ್ಯಗಳಲ್ಲಿ ಮಗ್ನರಾದವರಿರಬಹುದು. ಮನ್ನಣೆ ಗಳಿಸಿ, ಲಾಭದಾಯಕವಾಗಿ ಬಳಸಲು ಬರುವ ವಿಶೇಷ ಕೌಶಲ್ಯ ಹೊಂದಿರಬಹುದು. ಇಲ್ಲಿ ಬರುವ ಪ್ರಶ್ನೆಗಳೆಂದರೆ, ಅವರು ತಾವು ಸಂಪಾದಿಸುವ ಹಣದಲ್ಲಿ ಎಷ್ಟನ್ನು ತಮಗಿಷ್ಟ ಬಂದಂತೆ ಉಪಯೋಗಿಸಲು ಅವಕಾಶವಿದೆ? ಎಷ್ಟನ್ನು ಅವರು ಉಳಿಸಿಡಬಹುದು? ಕುಟುಂಬದ ಒಟ್ಟು ವರಮಾನಕ್ಕೆ ಅವರು ತಮ್ಮ ಕೊಡುಗೆಯಾಗಿ ಎಷ್ಟು, ಹಣವನ್ನು ನೀಡಬಹುದು? ಮೇಲು ವರ್ಗ ಮತ್ತು ಮಧ್ಯಮ ವರ್ಗದ ಸ್ತ್ರೀಯರು ಮದುವೆಯಾಗಿ ಬರುವಾಗ ತಮ್ಮೊಂದಿಗೆ "ಸ್ತ್ರೀಧನ" ಅಥವಾ ಸ್ತ್ರೀಯ ಆಸ್ತಿ ಎಂದು ಕಾನೂನು ಪ್ರಕಾರ ಪರಿಗಣಿಸುವ ಒಂದಷ್ಟು ಆಸ್ತಿಪಾಸ್ತಿ ತರಬಹುದು. ಆದರೆ ಈ ಆಸ್ತಿಯನ್ನು ಅವರು ತಮಗಿಷ್ಟ ಬಂದ ಹಾಗೆ ತಾವೇ ನಿರ್ವಹಿಸಲು ಶಕ್ಯವಿದೆಯೇ? ಅಥವಾ ಕುಟುಂಬದ ಯೋಜನೆಗಳನ್ನು ಪೂರೈಸಲೋ, ತುರ್ತು ಸಂದರ್ಭಗಳಲ್ಲಿ ಅದನ್ನು ಉಪಯೋಗಿಸಿ ಕಷ್ಟ ಪರಿಹಾರ ಮಾಡಿಕೊಳ್ಳಲೋ, ಅವಳ ಮೇಲೆ ಒತ್ತಡ ಬರುವುದಿಲ್ಲವೆ?

ಈ ಹತೋಟಿಗಳನ್ನು ಬಹುಮಟ್ಟಿಗೆ ಸಾಮಾಜಿಕ ರಚನೆ, ಪಾತ್ರದ ಹಂಚಿಕೆ, ಮೌಲ್ಯಗಳು, ಸಾಮಾಜಿಕ ನಿಯಂತ್ರಣದ ಕಟ್ಟುನಿಟ್ಟು ಅಥವಾ ಸಡಿಲತೆ ಮೊದಲಾದವುಗಳನ್ನು ಅವಲಂಬಿಸಿ ಚಲಾಯಿಸಲಾಗುತ್ತದೆ. ಐತಿಹಾಸಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳ ಅಂತರ-ಒಡನಾಟವು ಲಿಂಗ ಸಮೀಕರಣವನ್ನು ರೂಪಿಸುವಲ್ಲಿ, ಪುನರ್ ರೂಪಿಸುವಲ್ಲಿ ಬಹುಮಟ್ಟಿಗೆ ಕಾರಣವಾಗುತ್ತವೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯ ಲಕ್ಷಣ, ಕೆಲವು ಅಪವಾದಗಳ ಹೊರತು, ಪಿತೃಪ್ರಧಾನ ಕುಟುಂಬ, ಅದು ಪುರುಷ ಪ್ರಧಾನ್ಯವನ್ನೂ ಸ್ತ್ರೀಯ ಅಧೀನತೆಯನ್ನು ಮಾನ್ಯ ಮಾಡುತ್ತದೆ. ಮದುವೆಯಾಗುತ್ತಿದಂತೆ ಹೆಣ್ಣು ತನ್ನ ತವರುಮನೆಯ ಸಂಬಂಧವನ್ನು ಕಡಿದುಕೊಂಡು ವಿವಾಹವಾಗಿ ಬರುತ್ತಿರುವ ಕುಟುಂಬದ ಸದಸ್ಯತ್ವ ಪಡೆಯುತ್ತಾಳೆ. ಅವಳಿಗೆ ಹುಟ್ಟುವ ಮಕ್ಕಳು ಅವಳ ಪತಿಯ ವಂಶವನ್ನು ಬೆಳೆಸುತ್ತವೆ. ಕುಟುಂಬದ ಒಳಗೆ ಅಧಿಕಾರವು ಪುರುಷರಿಗಿರುತ್ತದೆ. ಅನೇಕ ವೇಳೆ ಅತ್ಯಂತ ಹಿರಿಯನಾದ ಪುರುಷನಿಗೆ ಇರುತ್ತದೆ. ಅವನೇ ಮುಖ್ಯವಾಗಿ ನಿರ್ಣಯ ತೆಗೆದುಕೊಳ್ಳುವವನು. ಇತರ ಪುರುಷ ಸದಸ್ಯರ ಸಲಹೆ ಕೇಳಬಹುದಾದರೂ ಅಂತಿಮ ನಿರ್ಣಯ ಅವನದೇ. ಈ ಪ್ರಕ್ರಿಯೆಯಲ್ಲಿ ಮಹಿಳೆಯ ಪಾತ್ರ ಅಲ್ಪಸ್ವಲ್ಪ ಅನುಭವಕ್ಕೆ ಬಂದರೂ ಸ್ಪಷ್ಟವಾಗಿ ವ್ಯಕ್ತವಾಗುವುದಿಲ್ಲ. ಗಟ್ಟಿಮನಸ್ಸಿನ ಪಕ್ವವಾದ ಬುದ್ಧಿಯ ಮಹಿಳೆಯರು ತಮ್ಮ ಸ್ಥಾನವನ್ನು ಸ್ಥಿರೀಕರಿಸುತ್ತಾರೆ. ಆದರೆ ಬಹುಮಟ್ಟಿಗೆ ಅವರು ಹಿನ್ನೆಲೆಯಲ್ಲಿರುತ್ತಾರೆ. ಕಿರಿವಯಸ್ಸಿನ ಮಹಿಳೆಯರೂ ಹಿಂದೆ ಇದ್ದುಕೊಂಡೇ ಸೂತ್ರಗಳನ್ನು ಎಳೆಯುತ್ತಾರೆ. ಹೀಗಾಗಿ ಕುಟುಂಬ ರಾಜಕೀಯದಲ್ಲಿ ಮಹಿಳೆಯರ ಪಾತ್ರವನ್ನು ತಳ್ಳಿಹಾಕುವಂತಿಲ್ಲ. ಆದರೆ ಅಂತಿಮ ವಿಶ್ಲೇಷಣೆಯಲ್ಲಿ ಪುರುಷಪ್ರಾಧಾನ್ಯವನ್ನು ಅವರೂ ಗಂಭೀರವಾಗಿ ಪ್ರಶ್ನಿಸುವುದಿಲ್ಲ. ಅವರೇನಾದರೂ ಹಾಗೆ ಮಾಡಿದರೆ ಕುಟುಂಬ ಒಡೆಯುವುದು ಅನಿವಾರ್ಯವಾಗುತ್ತದೆ. ಕೆಲವು ಮಹಿಳಾ ಪ್ರಧಾನವಾದ ಕುಟುಂಬ ಉದಾಹರಣೆಗಳಿವೆಯೆಂಬುದೇನೋ ನಿಜ. ಮಕ್ಕಳು ಚಿಕ್ಕವರಾಗಿದ್ದಾಗ, ಕುಟುಂಬದಲ್ಲಿ ವ್ಯವಹಾರಗಳನ್ನು ನಿರ್ವಹಿಸಲು ಒಬ್ಬ ಮಹಿಳೆ ಮಾತ್ರವೇ ಇರುವಂತಹ ಸಂದರ್ಭದಲ್ಲಿ ಹೀಗಾಗಿರುತ್ತದೆ. ಮಕ್ಕಳು ಬೆಳೆದು ನಂತರ ಅವರಲ್ಲಿ ಹಿರಿಯನಾದವನು ಯಜಮಾನಿಕೆಯನ್ನು ವಹಿಸಿಕೊಳ್ಳುತ್ತಾನೆ.

ಹೆಚ್ಚಿನ ಆದಿವಾಸಿ ಬುಡಕಟ್ಟುಗಳು ಪಿತೃಪ್ರಧಾನ ವಂಶದವೇ. ಆದರೆ ಪಿತೃಪ್ರಾಧಾನ್ಯವು ಅವರಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುವುದಿಲ್ಲ. ಇದಕ್ಕೆ ಅಪವಾದಗಳು ಆಳುವವರು ಮತ್ತು ಸೇನಾಪತಿಗಳ ಕುಟುಂಬಗಳು, ಅಲ್ಲಿ ಪುರುಷನೇ ಪ್ರಧಾನ. ಆದಿವಾಸಿ ಹೆಂಗಸರು ಕಾಡುಗಳಲ್ಲಿ, ಹೊಲ ಗದ್ದೆಗಳಲ್ಲಿ ಕೆಲಸ ಮಾಡಬೇಕು. ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಚಲನ ಸ್ವಾತಂತ್ರ್ಯವಿದೆ. ಆರ್ಥಿಕ ಹೊಣೆಗಾರಿಕೆಯೂ ಇದೆ. ತಾತ್ವಿಕವಾಗಿ ಅವರು ಪುರುಷ ಪ್ರಧಾನ್ಯವನ್ನು ಒಪ್ಪಿಕೊಳ್ಳುತ್ತಾರೆ. ಅವರ ಅಂಕೆಗೆ ಒಳಪಡುತ್ತಾರೆ. ಆದರೆ ಬಹುಮಟ್ಟಿಗೆ ಅವರು ಸ್ವತಂತ್ರರಂತೆಯೇ ವರ್ತಿಸುತ್ತಾರೆ.

ಭಾರತದಲ್ಲಿ ಅಲ್ಲಲ್ಲೇ ಮಾತೃಗೋತ್ರ ಪ್ರಧಾನ ವರ್ಗಗಳಿವೆ. ಆದರೆ ಮಾತೃಪ್ರಧಾನತೆಯು ಮುಂದುವರಿದು ಬಂದುದಕ್ಕೆ ಆಧಾರ ಸಾಕಷ್ಟಿಲ್ಲ ಎಂಬುದನ್ನು



ಈ ಮೊದಲೇ ನೋಡಿದ್ದೇವೆ. ಇಂತಹ ಕುಟುಂಬಗಳಲ್ಲಿ ವಂಶವನ್ನು ಗುರುತಿಸುವುದು ಸ್ತ್ರೀಯರ ಮೂಲಕ. ಆದರೆ ಅಲ್ಲೂ ರಾಜಕೀಯ ಅಧಿಕಾರ ನಿಲ್ಲುವುದು ಪುರುಷರ ಕೈಯಲ್ಲೇ, ಭೂಮಿ-ಕಾಣಿಕೆ ಅನುವಂಶಿಕವಾಗಿ ಬರುವುದು ಮಹಿಳೆಯರ ಮೂಲಕ. ಆದರೆ ಅದರ ನಿರ್ವಹಣೆ ಪುರುಷರದು. ಮಾತೃಗೋತ್ರ ಪ್ರಧಾನ ವ್ಯವಸ್ಥೆಯು ಮಹಿಳೆಯರ ಸ್ಥಾನಕ್ಕೊಂದು ಮಹತ್ವ ನೀಡಿ ಅವರಿಗೆ ವಿಶೇಷ ಗೌರವ ಕೊಡುತ್ತದೆ. ಒಕ್ಕಲಿಗ ಜನರಲ್ಲಿ ಒಂದು ಗಾದೆಯಿದೆ. ಅದರರ್ಥ "ಯುದ್ಧ ಮತ್ತು ರಾಜಕೀಯ ಗಂಡಸರಿಗೆ; ಆಸ್ತಿ ಮತ್ತು ಮಕ್ಕಳು ಹೆಂಗಸರಿಗೆ" ಎಂದು ಅವರಲ್ಲಿ ಅರಸರು, ನಾಯಕರು, ಅಧಿಕಾರವಿರುವ "ಹಿರಿಯರು" ಎಲ್ಲರೂ ಪುರುಷರೇ; ಆದರೆ ಮಹಿಳೆಯರಿಗೆ ಮುಖ್ಯವಾದ ಆರ್ಥಿಕವಾದ ಪಾತ್ರಗಳಿರುತ್ತವೆ. ಉದಾಹರಣೆಗೆ, ಒಕ್ಕಲಿಗ ಮಹಿಳೆಯರು ಸಣ್ಣಪುಟ್ಟ ಅಂಗಡಿಗಳನ್ನು ನಡೆಸುತ್ತಾರೆ. ಸ್ಥಳೀಯ ವ್ಯಾಪಾರದಲ್ಲಿ ತೊಡಗುತ್ತಾರೆ. ಕೇರಳದ ಹಿಂದೂ ಸಮಾಜದ ಭಾಗವಾದ ನಾಯರ್‌ರು ಭೂಮಾಲೀಕರು ಅಥವಾ ಬೇಸಾಯ ಮಾಡದ ಗುತ್ತಿಗೆದಾರರು. ಅವರಲ್ಲಿ ಹೆಂಗಸರು ಮನೆಯಲ್ಲಿಯೇ ಇರುವವರು. ಗಂಡಸರು ಮಿಲಿಟರಿಗೆ ಸೇರಿದವರು. ಅವರ ತಾರಾವಾಡದಲ್ಲಿ ಆಸ್ತಿಯ ಯಜಮಾನಿಕೆ ಹೆಂಗಸರದು. ಅದನ್ನು ಅನುವಂಶೀಯವಾಗಿ ಅವರು ಪಡೆಯುತ್ತಿದ್ದರು. ಆದರೆ ಆಸ್ತಿಯನ್ನು ನೋಡಿಕೊಳ್ಳುವವರು ಕರ್ಣವರ್ ಎಂಬುವರು. ಅದು ಒಬ್ಬ ಪುರುಷನೇ ಆಗಿರಬೇಕು. ನಾಯರ್‌ಗಳಲ್ಲೂ ಖಾಸೀಗಳಲ್ಲೂ ಸಾಮಾನ್ಯವಾಗಿ ನಿರ್ವಾಕಕನ ಈ ಪಾತ್ರವನ್ನು ಚಿಕ್ಕಪ್ಪ ಅಥವಾ ಹಿರಿಯಣ್ಣ ನಿರ್ವಹಿಸುತ್ತಿದ್ದರು. ಲಕ್ಷದ್ವೀಪದ ಮುಸ್ಲಿಮರ ಮಾತೃಗೋತ್ರ ಪ್ರಧಾನ ವರ್ಗಗಳಲ್ಲೂ ಇದೇ ಮಾದರಿ ಕಂಡುಬರುತ್ತದೆ. ಕೇರಳ ಮತ್ತು ಕರ್ನಾಟಕದ ಕೆಲವು ಮಾತೃಗೋತ್ರ ಪ್ರಧಾನ ಕುಟುಂಬಗಳಲ್ಲಿ ಮಾತ್ರ ಮನೆತನದ ಯಜಮಾನಿಕೆಯನ್ನು ಮಹಿಳೆ ಹೊತ್ತಿರುತ್ತಾಳೆ.

ಮಾತೃ ಯಜಮಾನ್ಯವು ಒತ್ತಡಕ್ಕೆ ಸಿಕ್ಕಿದೆ. ಇಂದಿನ ಸಾಮಾಜಿಕ ಪರಿಸರವು ಅದರ ಕಾರ್ಯರೂಪದಲ್ಲಿ ಕೆಲವು ಬದಲಾವಣೆಗಳನ್ನು ಒತ್ತಾಯಿಸುತ್ತಿದೆ. ಮಾರುಕಟ್ಟೆ, ಆಧುನಿಕ ವಿದ್ಯಾಭ್ಯಾಸ, ಭೌಗೋಳಿಕವಾಗಿ ಪರಿಚಲನೆ ಹೆಚ್ಚುತ್ತಿರುವುದು, ನೂತನ ಉದ್ಯೋಗಾವಕಾಶಗಳು ಇವು ಪರಿವರ್ತನೆಗೆ ಕಾರಣವಾಗಿರುವ ಕೆಲವು ಮುಖ್ಯಾಂಶಗಳು. ಪತಿ, ಪತ್ನಿ, ಮಕ್ಕಳು ಮೊದಲಾದ ಘಟಕಗಳಲ್ಲಿ ವಿಶೇಷವಾಗಿ ವಿದೇಶಿ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಾತೃಪ್ರಾಧಾನ್ಯ ಪದ್ಧತಿಯು ಹಿಂದೆ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಇದ್ದಷ್ಟು ಸರಾಗವಾಗಿ ವರ್ತಿಸುವುದಿಲ್ಲ. ಕಾನೂನು ವಿವಾಹದ ಮೂಲತತ್ವ ಏನಿತ್ತೋ ಅದನ್ನು ಬದಲಾಯಿಸಿ ವ್ಯಕ್ತಿಗಳಿಗೆ ತಮ್ಮ ಅನುವಂಶಿಕೆ ಆಸ್ತಿಯನ್ನು ಸಮಾನವಾಗಿ ಹಂಚಿಕೊಳ್ಳುವ ಹಕ್ಕನ್ನು ನೀಡಿರುವುದರಿಂದಾಗಿ, ನಾಯರ್ ತಾರಾವಾಡಗಳು ಕ್ಷಯಿಸುತ್ತಿವೆ. ಸ್ವಯಾರ್ಜಿತ ಆಸ್ತಿಯನ್ನು ಗಣನೆಗೆ ತೆಗೆದುಕೊಂಡು ಈಗ ಖಾಸಿ ಜನರೂ ಕೂಡ ತಮ್ಮ ಶಾಸನಕ್ಕೆ ತಿದ್ದುಪಡಿ ತರಲು

ಪ್ರಯತ್ನಿಸುತ್ತಿದ್ದಾರೆ. ಆದರೆ ಮಾತೃಪ್ರಧಾನ ವ್ಯವಸ್ಥೆಯ ಭಾವನೆಯನ್ನು ಪೂರ್ತಿಯಾಗಿ ಅಳಿಸಿಹಾಕಲು ಸಾಧ್ಯವಿಲ್ಲ. ಏಕೆಂದರೆ ಮಹಿಳೆಯರು ತಮ್ಮ ಪರಂಪರೆಯನ್ನು ಮುಂದುವರಿಸುತ್ತಲೇ ಇದ್ದಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು



ಪಡೆಯುತ್ತಾರೆ. ಸಾಂಪ್ರದಾಯಿಕತೆಯು ನೀಡಿದ್ದ ಗೌರವವನ್ನೂ ಸ್ಥಾನಮಾನವನ್ನು ಒತ್ತಾಯಿಸಿ ಕೇಳುತ್ತಿದ್ದಾರೆ.

ಪಾತ್ರದ ಹಂಚಿಕೆಯಲ್ಲಿ "ಗಂಡಸರ ಕೆಲಸ" , "ಹೆಂಗಸರ ಕೆಲಸ" ಎಂದು ವ್ಯತ್ಯಾಸ ಕಲ್ಪಿಸಲಾಗುತ್ತದೆ. ಮನೆಯ ಕಾರುಭಾರುಗಳ ನಿರ್ವಹಣೆ ಮಹಿಳೆಯರ ಕ್ಷೇತ್ರವೇ. ಮನೆಯ ಕೆಲಸ-ಕಾರ್ಯಗಳಿಗೆ ಹಣ ಕೊಟ್ಟು ಇತರರನ್ನು ನೇಮಿಸಿಕೊಳ್ಳದೆ ಹೋದಾಗ ಕೆಲವರು ಮಾತ್ರ ಹಾಗೆ ನೇಮಿಸಿಕೊಳ್ಳಲು ಶಕ್ತರಾಗಿರುತ್ತಾರೆ- ಮಹಿಳೆಯರು, ನೀರು ಸೇದುವುದು ಅಡಿಗೆ ಮಾಡುವುದು, ಮನೆಯನ್ನು ಸ್ವಚ್ಛಗೊಳಿಸುವುದು, ಮನೆಯ ಗಂಡಸರ, ಮಕ್ಕಳ ಹಾಗೂ ತಮ್ಮ ಬಟ್ಟೆಗಳನ್ನು ಒಗೆಯುವುದು, ಮಕ್ಕಳನ್ನು ನೋಡಿಕೊಳ್ಳುವುದು ಇವೆಲ್ಲವನ್ನೂ ಮಾಡಬೇಕಾಗುತ್ತದೆ. ಈ ಯಾವುದೇ ಕೆಲಸವನ್ನು ಗಂಡಸರು ಮಾಡುತ್ತಿದ್ದರೆ ಸಾಮಾನ್ಯವಾಗಿ ಅವರು ಇತರರ ಅಪಹಾಸ್ಯಕ್ಕೆ ತುತ್ತಾಗುತ್ತಾರೆ. ಹೆಂಡತಿ ಬೇರೆ ಊರಿಗೆ ಹೋಗಿದ್ದರೆ ಅಥವಾ ಕಾಯಿಲೆ ಬಿದ್ದಿದ್ದರೆ ಅಥವಾ ಈ ಕೆಲಸಗಳನ್ನು ನಿರ್ವಹಿಸಲು ಬೇರಾವ ಹೆಂಗಸೂ ಇರದಿದ್ದರೆ ಮಾತ್ರ ಗಂಡಸು ನಿರ್ವಹಿಸುತ್ತಾನೆ. ಈ ಭಾವನೆ ಎಷ್ಟು ಆಳವಾಗಿ ಬೇರೂರಿಬಿಟ್ಟಿದೆಯೆಂದರೆ, ಪೂರ್ಣಾವಧಿಯ ವೃತ್ತಿಗಳಲ್ಲಿ ನಿರತರಾಗಿರುವ ಹೆಂಗಸರೂ ಕೂಡ ಕೆಲಸದ ಜೊತೆಗೆ ಮನೆಗೆಲಸಗಳನ್ನು ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ. ಅನೇಕ ಹೆಂಗಸರಿಗೆ ತಾವು ಮನೆಗೆಲಸಗಳನ್ನು ಮಾಡದೆ ಹೋದರೆ ಏನೋ ಕೊರತೆಯಿದ್ದಂತೆ, ತಾವೇನೋ ತಪ್ಪು ಮಾಡಿದಂತೆ ಭಾವಿಸುತ್ತಾರೆ. ಇದಕ್ಕೆದುರಾಗಿ ಪುರುಷರು ಮನೆಯ ಹೊರಗಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಕುಟುಂಬಕ್ಕೆ ಆಹಾರ ಒದಗಿಸುವುದು, ಕುಟುಂಬದೊಳಗಿನ ಘರ್ಷಣೆಗಳನ್ನು, ಅತೃಪ್ತಿಗಳನ್ನು ಪರಿಹಾರ ಮಾಡುವುದು ಅವರ ಕೆಲಸವಾಗಿರುತ್ತದೆ.

ಪುರುಷರ ಪ್ರಧಾನ್ಯವೇನೋ ಇದೆ. ಆದರೆ ತಮ್ಮ ಆಸೆ, ಆಕಾಂಕ್ಷೆಗಳ ಪ್ರಕಾರವೇ ಕೆಲಸಗಳನ್ನು ಮಾಡಿಸಿಕೊಳ್ಳುವ ದಾರಿ ಮಹಿಳೆಯರಿಗೆ ಗೊತ್ತು. ಕೆಳಜಾತಿಗಳಲ್ಲಿ ಮತ್ತು ವರ್ಗಗಳಲ್ಲಿ ಕುಟುಂಬದ ಆರ್ಥಿಕ ವ್ಯವಹಾರಗಳಲ್ಲಿ ಸ್ತ್ರೀಯರಿಗೆ ಗಣನೀಯವಾದ ಪಾಲು ಉಂಟು. ಅವರು ನೇಗಿಲು ಹಿಡಿಯದೆ ಇರಬಹುದು. ಆದರೆ ಕೃಷಿಗೆ ಹತ್ತಾರು ವಿಧಗಳಲ್ಲಿ ಅವರು ನೆರವಾಗುತ್ತಾರೆ. ಕುಶಲಕರ್ಮಿಗಳ ಕುಟುಂಬಗಳಲ್ಲಾದರೆ ಸ್ತ್ರೀಯರಿಗೆ ಪರಂಪರಾಗತ ಕುಶಲಕಲೆಯ ನಿರ್ವಹಣೆಯಲ್ಲಿ ಹೆಚ್ಚು ಖಚಿತವಾದ ಪಾತ್ರವಿರುತ್ತದೆ. ಹಾಗಾಗಿ ಮನೆಯ ಹಣಕಾಸಿನ ವ್ಯವಹಾರಗಳಲ್ಲಿ ಅವರ ಕೊಡುಗೆಯನ್ನು ಎಷ್ಟು ಮಾತ್ರಕ್ಕೂ ಅಲಕ್ಷಿಸುವ ಹಾಗಿಲ್ಲ. ಮೇಲುವರ್ಗದ ಸಾಮಾಜಿಕ ಸಮುದಾಯಗಳಲ್ಲಿ ಅನ್ನ ಬಟ್ಟೆ ಇದಗಿಸುವವರು ಗಂಡಸರೇ ಆಗಿದ್ದರು. ಆದರೆ ಈ ಪರಿಸ್ಥಿತಿಯೂ ಈಗ ವೇಗವಾಗಿ

ಬದಲಾಗುತತಿದೆ. ಹೆಂಗಸರೂ ಈಗ ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ, ವಿವಿಧ ವೃತ್ತಿಗಳಲ್ಲಿ ದುಡಿಯುತ್ತಿದ್ದಾರೆ. ಮಾಸಿಕ ವೇತನವನ್ನು ಸಂಪಾದಿಸುತ್ತಿದ್ದಾರೆ. ಏರಿದ ಜೀವನಮಟ್ಟದ ಬೇಡಿಕೆಗಳನ್ನು ಪೂರೈಸಿಕೊಳ್ಳ ಹಾಗೂ ಬೆಲೆಯೇರಿಕೆಯನ್ನು



ನಿರ್ವಹಿಸುವ ಸಲುವಾಗಿ ಈ ಒಲವನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆದರೆ ಹೆಂಡತಿಯು ಸಂಪಾದಿಸಿ ತಂದು ತನ್ನನ್ನು ಸಾಕುವುದನ್ನು ಗಂಡನು ಇಷ್ಟಪಡುವುದಿಲ್ಲ . ಹೆಂಡಂದಿರು ತಮಗಿಂತ ಹೆಚ್ಚು ಸಂಪಾದಿಸಿದರೆ ಗಂಡಸರ ಅಹಂಕಾರಕ್ಕೆ ಚುಚ್ಚಿದಂತಾಗುತ್ತದೆ. ಈಗ ಮೂಡುತ್ತಿರುವ ಪರಿಸ್ಥಿತಿ ಪಿತೃಪ್ರದಾನ ಕುಟುಂಬದ ಪರವಾಗಿ ನಿಲ್ಲುವುದಿಲ್ಲ. ಆದರೆ ಹಿಂದಿನಿಂದ ಬಂದಿರುವ ಚಿತ್ರ ತನ್ನ ಸ್ಥಾನ ಬಿಟ್ಟುಕೊಡಲು ಇಷ್ಟಪಡುತ್ತಿಲ್ಲ. ಸಮಾಜವುಬದಲಾಗುತ್ತಿರುವ ಚಿತ್ರಕ್ಕೆ ನಿಧಾನವಾಗಿಯಾದರೂ ಹೊಂದಿಕೊಳ್ಳುತ್ತಿದೆ.

ಹಿಂದೂ ಸಮಾಜದ ಪಿತೃಪ್ರಧಾನ ಭಾಗವು ಹಲವಾರು ಸದ್ಗುಣಗಳು ಇರಬೇಕೆಂದು ನಿರೀಕ್ಷಿಸುತ್ತದೆ. ಅವುಗಳಲ್ಲಿ ಮೊದಲನೆಯದು ಶೀಲ. ಮದುವೆಯಾಗುವುದಕ್ಕಿಂತ ಮೊದಲು ಹೆಣ್ಣು ಲೈಂಗಿಕ ಅರ್ಥದಲ್ಲಿ ಯಾವುದೇ ಪುರುಷನ್ನು ಕುರಿತು ಆಲೋಚನೆ ಕೂಡ ಮಾಡಕೂಡದು; ಮದುವೆಯಾದ ನಂತರ ತನ್ನ ಪತಿಯ ಹೊರತು ಇನ್ನೊಬ್ಬ ಗಂಡಸಿನ ಬಗ್ಗೆ ಆಲೋಚಿಸಬಾರದು. ಎರಡನೆಯ ಸದ್ಗುಣ ಪತಿಭಕ್ತಿ, ಪತಿಪರಮೇಶ್ವರ ಎಂಬ ಕಲ್ಪನೆ (ಗಂಡನೇ ದೇವರು ಎಂಬ ಭಾವನೆ) ವ್ಯಾಪಕವಾಗಿದೆ. ಅದೇ ಗಂಡನೇ ಮುಂದಿನ ಜನ್ಮಗಳಲ್ಲೂ ತನಗೆ ದೊರಕಲಿ ಎಂದು ಹೆಂಡತಿಯು ಅನೇಕ ವ್ರತೋಪವಾಸಗಳನ್ನು ಮಾಡುತ್ತಾಳೆ. ಆ ಉಪವಾಸ ವ್ರತಗಳಲ್ಲಿ ಪತಿಯ ದಿರ್ಘಾಯುಷ್ಯಕ್ಕಾಗಿ ಪ್ರಾರ್ಥನೆ ಸಲ್ಲಿಸುವುದೂ ಸೇರಿರುತ್ತದೆ. ಏಕೆಂದರೆ ತನಗೆ ವೈಧವ್ಯದ ಯಾತನೆ ಬರಬಾರದೆಂದು ಹೆಂಡತಿ ಆಶಿಸುತ್ತಾಳೆ. ಬಹುವಾಗಿ ವಿವಾದಕ್ಕೊಳಗಾದ ಸತಿಪದ್ಧತಿಯಲ್ಲಿ ತನ್ನ ಪತಿಯ ಚಿತೆಯ ಮೇಲೆ ಕುಳಿತು ಪತ್ನಿಯು ಆತ್ಮಾಹುತಿ ಮಾಡಿಕೊಳ್ಳುತ್ತಾಳೆ. ಈ ಕರಾಳ ಪದ್ಧತಿಯನ್ನು ಶಾಸನವು ನಿಷೇಧಿಸಿದೆ. ಇಂದಿನ ಭಾತರದಲ್ಲಿ ಸತಿ ಆಚರಣೆ ತುಂಬ ವಿರಳ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಈ ವಿಚಾರವು ಹಿಂದೂ ಮನಸ್ಸಿನ ಮೇಲೆ ಹೊಂದಿರುವ ಬಿಗಿಯಾದ ಹಿಡಿತ. ಸತಿಯಾದ ಸ್ಥಳಗಳನ್ನು ಆಮೇಲೆ ದೇವಾಲಯವಾಗಿ ಪರಿವರ್ತಿಸಲಾಗುತ್ತದೆ. ಭಾರೀ ಸಂಖ್ಯೆಯಲ್ಲಿ ಜನರು ಸೇರುವ ಜಾತ್ರೆಗಳನ್ನು ನಡೆಸಲಾಗುತ್ತದೆ. ಮೂರನೆಯದಾಗಿ, ಪತ್ನಿಯು ತಾನು ವಿವಾಹವಾಗಿ ಬಂದ ಕುಟುಂಬದ ರಚನೆಗೆ ತನ್ನನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಪತಿಯ ವ್ಯಕ್ತಿತ್ವದೊಳಗೆ ತನ್ನ ವೈಯಕ್ತಿಕತೆಯನ್ನು ವಿಲೀನಗೊಳಿಸಿಕೊಳ್ಳಬೇಕಾಗುತ್ತದೆ. ಅವಳು ಪತಿಯ "ನೆರಳಿನಂತೆ"

ಇರಬೇಕು. ಜೀವನಯಾತ್ರೆಯುದ್ದಕ್ಕೂ ಅವನನ್ನು ಅನುಸರಿಸಬೇಕು. ಅಗತ್ಯದ ]ಗಳಿಗೆಗಳಲ್ಲಿ ಅವನಿಗೆ ಇತ್ತಾಸೆಯಾಗಿ ನಿಂತು ಅವನ ಶಕ್ತಿಗೆ ತನ್ನ ಶಕ್ತಿಯನ್ನು ಕೂಡಿಸಿ ಕೊಡಬೇಕು.

ಇವು ಆದರ್ಶ ಮೌಲ್ಯಗಳು. ಇಂದಿನ ಸಮಾಜದಲ್ಲಿ ಅನೇಕರು ಚಾಚೂ ತಪ್ಪದೆ ಅವುಗಳನ್ನು ಪಾಲಿಸಿಲಾರರು ಎಂಬುದೂ ಸ್ಪಷ್ಟ ಹಾಗಾಗಿ ಹಲವಾರು ಜಾತಿಗಳು, ಸಮುದಾಯಗಳು, ವಾಸ್ತವವಾಗಿ ಜನತೆಯ ಬಹುಭಾಗ, ವಿವಾಹ ವಿಚ್ಛೇದನವನ್ನೂ ವಿಧವಾ ಪುನರ್ವಿವಾಹವನ್ನೂ ಅನುಮತಿಸುತ್ತವೆ. ಬಡತನವಿರುವ ಸಂಸ್ಕೃತಿಯಲ್ಲಿ ಅಂತಹ ನಿಯಮಗಳನ್ನು ಪಾಲಿಸುವುದು ಸಾಧ್ಯವಾಗುವುದಿಲ್ಲ. ಆದಿವಾಸಿಗಳಲ್ಲಿ ಹಾಗೂ



ಮಾತೃಪ್ರಧಾನ ಪದ್ಧತಿಯಿರುವ ಸಮುದಾಯಗಳಲ್ಲಿನ ಪರಿಸ್ಥಿತಿ ಬೇರೆ. ಮಿತವ್ಯಯ, ಕಷ್ಟಪಟ್ಟು ಕೆಲಸ ಮಾಡುವುದು, ಕುಟುಂಬಬದ ಇತರ ಸದಸ್ಯರ ಕ್ಷೇಮವನ್ನು ಪರಿಗಣಿಸುವುದು, ಈ ಕೆಲವು ಸದ್ಗುಣಗಳನ್ನು ಎಲ್ಲ ಸಮುದಾಯಗಳಲ್ಲೂ ಸಮಾಜದ ಎಲ್ಲ ವರ್ಗಗಳಲ್ಲೂ ನಿರೀಕ್ಷಿಸಲಾಗುತ್ತದೆ. ಬಂಜೆತನ ಹೆಂಗಸಿಗೆ ಒಂದು ಶಾಪ ಎಂದು ಪರಿಗಣಿಸಲಾಗುತ್ತಿತ್ತು. ಪಿತೃಗೋತ್ರ ಪ್ರಧಾನ ಸಮುದಾಯಗಳಲ್ಲಿ ಆಕೆಯು ವಂಶವನ್ನು ಮುಂದಕ್ಕೆ ಬೆಳೆಸಲು ಮಗನಿಗೆ ಜನ್ಮ ಕೊಡಬೇಕು. ಮಾತೃಗೋತ್ರ ಪ್ರಧಾನ ಸಮುದಾಯಗಳಲ್ಲಿ ಇದು ಅಪೇಕ್ಷಣೀಯವೆನಿಸಿದರು ಅಗತ್ಯವೆಂದೇನು ಇಲ್ಲ. ಅವರಲ್ಲೂ ಸಂತಾನ ಒಂದು ಸಾಮಾಜಿಕ ಅಗತ್ಯ ಮತ್ತು ಬೆಲೆಯುಳ್ಳ ವಸ್ತು ಎಂಬುದಂತು ನಿಜ.

ನಿಯಮಗಳನ್ನೂ ಮೌಲ್ಯಗಳನ್ನೂ ಜಾರಿಗೆ ತರುವುದು ಬಹುಮಟ್ಟಿಗೆ ನಿಯಂತ್ರಣ ವ್ಯವಸ್ಥೆಯ ಬಲ ಅಥವಾ ದೌರ್ಬಲ್ಯವನ್ನು ಅವಲಂಬಿಸಿರುತ್ತದೆ. ಸಾಮಾಜಿಕ, ಧಾರ್ಮಿಕ ಕೃತಿಗಳಲ್ಲಿ ಮೌಲ್ಯಗಳನ್ನು ವಿವರಿಸಿರುವುದು ಮತ್ತು ನಿಯಮಗಳನ್ನು ವಿಧಿಸಿರುವುದು, ಇಷ್ಟರಿಂದಲೇ ಅವುಗಳನ್ನು ಪಾಲಿಸಿದಂತಾಗಲಿಲ್ಲ. ಪರಂಪರೆಯು ಸದೃಢವಾಗಿದ್ದರೂ ವ್ಯಾಜ್ಯಗಳನ್ನು ಪರಿಹರಿಸಲು, ಅಪರಾಧಿ ಸದಸ್ಯರು ಪಶ್ಚಾತ್ತಾಪ ಪಟ್ಟು ಮಾಮೂಲಿನಂತೆ ವರ್ತಿಸುವ ಹಾಗೆ ಮಾಡಲು ಹಿರಿಯರ, ಜಾತಿ, ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ ಮೊದಲಾದ ಸಾಮಾಜಿಕ ಸಂಸ್ಥೆಗಳ ಮಧ್ಯಪ್ರವೇಶ, ಪರಿಶ್ರಮ ಅಗತ್ಯವಾಗುತ್ತದೆ. ಮೇಲು ಜಾತಿ ಮತ್ತು ವರ್ಗಗಳಲ್ಲಿ ಗೌರವ ಮತ್ತು ನಾಚಿಕೆಯ ಭಾವನೆಗಳು ಬಲವಾಗಿರುತ್ತವೆ. ಮನೆಯ ವ್ಯವಹಾರಗಳು ಬಯಲಿಗೆ ಬರದಂತೆ ಮಾಡಲು ವಿಶೇಷವಾಗಿ ಪ್ರಯತ್ನ ಮಾಡುತ್ತಾರೆ. ಏನಾದರೂ ಗೊಂದಲವುಂಟಾದರೆ ಮನೆಯ ಹಿರಿಯರು, ಹೆಂಡತಿ, ತಂದೆ, ತಾಯಿ, ಆಕೆಯ ಆಪ್ತ ಬಂಧು ವರ್ಗ ಇವರು ನಿಂತು ಇತ್ಯರ್ಥ ಮಾಡುತ್ತಾರೆ. ಕೆಳಜಾತಿಗಳು ಮತ್ತು ವರ್ಗಗಳಲ್ಲಿ ಸಾಮಾನ್ಯವಾಗಿ ರಹಸ್ಯವನ್ನು ಇಟ್ಟುಕೊಳ್ಳಲಾಗುವುದಿಲ್ಲ. ಆದ್ದರಿಂದ ಇತರರ ಮಧ್ಯಪ್ರವೇಶ ಅಗತ್ಯವಾಗುತ್ತದೆ. ಅವರೂ ನಾಚಿಕೆಯ

ಬಗ್ಗೆ ಸೂಕ್ಷ್ಮ ಪ್ರಕೃತಿಯರಾಗಿರುತ್ತಾರೆ. ಆದರೆ ಆ ಬಗ್ಗೆ ಅವರು ಏನೂ ಮಾಡಲಾರದಾಗಿರುತ್ತಾರೆ. ಹೆಂಡತಿಯನ್ನು ಹೊಡೆದು ಬಡಿದು ಮನೆಯ ಗೌರವ ರಕ್ಷಿಸಲು ಪ್ರಯತ್ನಿಸುತ್ತಾರೆ. ಕುಟುಂಬದೊಳಗೆ ನಡೆಯುವ ಈ ಹಿಂಸಾಕೃತ್ಯ ಎಷ್ಟು ಎಂದು ಅಳತೆ ಮಾಡುವುದು ಸಾಧ್ಯವಿಲ್ಲ. ಕೆಳವರ್ಗಗಳಲ್ಲಿ ಅದು ಸ್ಪಷ್ಟವಾಗಿ ಗೋಚರಿಸುತ್ತದೆ. ಮೇಲುಸ್ತರದಲ್ಲೂ ಇದು ಹೆಚ್ಚಾಗಿಯೇ ಆದರೂ ಸಹ ಅದು ಅಷ್ಟಾಗಿ ಗೋಚರಿಸುವುದಿಲ್ಲ. ಸ್ವಾತಂತ್ರ್ಯ ಬಂದು ಆರು ದಶಕಗಳೂ ಸರಿದಿದ್ದರೂ ಪದೇ ಪದೇ ನಾವು ಪತ್ರಿಕೆಗಳಲ್ಲಿ ವಧುದಹನ, ವರದಕ್ಷಿಣೆ ಸಾವುಗಳ ಬಗೆಗೆ ಓದುತ್ತೇವೆ. ಅದಕ್ಕಿಂತ ಕಡಿಮೆ ಪ್ರಮಾಣದ ಹಿಂಸೆಯೆಂದರೆ, ಹೆಂಡತಿಯ ಮೇಲೆ ಮತ್ತು ಅವಳ ತಂದೆ-ತಾಯಿಯರ ಮೇಲೆ ಅಪವಾದ, ನಿಂದೆ ಹೊರಿಸುವುದು, ಹೆಂಡತಿಯು ವಿಶ್ರಾಂತಿಯೇ ಇಲ್ಲದೆ ವಿಪರೀತ ಕೆಲಸ ಮಾಡುವಂತೆ ಬಲಾತ್ಕರಿಸುವುದು, ಅವಳಿಗೆ ಸಾಕಷ್ಟು ಪೌಷ್ಟಿಕರ ಆಹಾರ ಕೊಡದಿರುವುದು, ಅನೇಕ ಕಾರಣಗಳಿಂದ ಅವಳ ಮೇಲೆ ಹರಿಹಾಯ್ದು ಮಾನಸಿಕವಾಗಿ ಹಿಂಸಿಸುವುದು ಇತ್ಯಾದಿ. ವಿದ್ಯಾವತಿಯರಾದ,



ಮೇಲುವರ್ಗಕ್ಕೆ ಸೇರಿದ ಮಹಿಳೆಯರೂ ಇಂತಹ ಹಿಂಸೆಗಳಿಗೆ ಬಲಿಯಾಗುತ್ತಾರೆ. ಆದರೆ ಈಗ ಪರಿಸ್ಥಿತಿ ಬದಲಾಗುತ್ತಿದೆ.

ಅಸಮಾನ ಲಿಂಗ ಸಂಬಂಧಗಳು, ಸ್ತ್ರೀಯರಿಗೆ ಎಸಗುವ ಅನ್ಯಾಯಗಳು ಸಮಾಜ ಸುಧಾರಕರ ಗಮನ ಸೆಳೆದಿದೆ. ಅನೇಕರು ಸ್ತ್ರೀಯರ ಪರವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಬಸವಣ್ಣ, ಅಲ್ಲಮರಿಂದ ಮೊದಲ್ಗೊಂಡು ಕೆಲವು ಮಧ್ಯಕಾಲೀನ ಸಂತ ಕವಿಗಳು ಸ್ತ್ರೀಯರನ್ನು ಹೆಚ್ಚಿನ ನ್ಯಾಯದಿಂದ, ಮಾನವೀಯತೆಯಿಂದ ನಡೆಸಿಕೊಳ್ಳಬೇಕೆಂದು ಸಾರಿ ಹೇಳಿದ್ದಾರೆ. ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ, ಆರ್ಯಸಮಾಜ ಮತ್ತು ಕೆಲವು ಮುಸ್ಲಿಂ ಸುಧಾರಣಾ ಚಳುವಳಿಗಳು ಮಹಿಳೆಯರ ಹಕ್ಕುಗಳನ್ನೂ ಸ್ಥಾನಮಾನಗಳನ್ನೂ ಸುಧಾರಿಸುವುದನ್ನು ತಮ್ಮ ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡಿವೆ. ಅವೆಲ್ಲ ಸಾಮಾನ್ಯವಾಗಿ ಸಾಮಾಜಿಕ ಮತ್ತು ಕಾನೂನು ಅಸಮಾನತೆಗಳ ಎದುರಾಗಿ ಹೋರಾಡಿದವು. ಬಾಲ್ಯವಿವಾಹ, ವಿಧವೆಯರನ್ನು ನಡೆಸಿಕೊಳ್ಳುವ ರೀತಿ, ಸ್ತ್ರೀಯರಿಗೆ ಆಸ್ತಿಹಕ್ಕು ವಂಚಿಸುವುದು, ಮಹಿಳಾ ವಿದ್ಯಾಭ್ಯಾಸ ಈ ಸಮಸ್ಯೆಗಳಿಗೆ ವಿಶೇಷ ಗಮನಕೊಟ್ಟವು.

ಬ್ರಿಟಿಷರು ತಮ್ಮ ಆಡಳಿತಾವಧಿಯಲ್ಲಿ ಧರ್ಮದ ಸಂಬಂಧವಿದ್ದ ಸಾಮಾಜಿಕ ಸುಧಾರಣೆಗಳನ್ನು ಚುರುಕುಗೊಳಿಸಲು ಪ್ರಯತ್ನಿಸಿದರು. ಸಾಂಪ್ರದಾಯಿಕತೆಯು ಬಲವಾದಿದ್ದು ವಿವಿಧ ಸಮುದಾಗಳ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಮಧ್ಯಪ್ರವೇಶ ಮಾಡುವುದನ್ನು ತೀವ್ರವಾಗಿ ಪ್ರತಿಭಟಿಸಿತು. ಸತಿಪದ್ಧತಿಯನ್ನು ನಿಷೇಧಿಸಲಾಯಿತು (೧೮೨೯), ವಿಧವಾ ಪುನರ್ವಿವಾಹಕ್ಕೆ ಕಾನೂನಿನ ಬೆಂಬಲ ದೊರಕಿತು(೧೮೫೬), ಸ್ತ್ರೀ-ಶಿಶುಹತ್ಯೆಯನ್ನು ನಿಷೇಧಿಸಿದರು(೧೮೭೦), ವಿಶೇಷ ವಿವಾಹ ಶಾಸನದ ಪ್ರಕಾರ ಅಂತರ್‌ಜಾತೀಯ ವಿವಾಹಕ್ಕೆ

ಅನುಮತಿ ದೊರಕಿತು(೧೮೨), ವಿವಾಹದ ವಯಸ್ಸನ್ನು ಹನ್ನೆರಡು ವರ್ಷಕ್ಕೆ ಏರಿಸಲಾಯಿತು(೧೮೯೧), ಬಾಲ್ಯ ವಿವಾಹದ ವಿರುದ್ಧವಾಗಿ ಶಾಸನ ಜಾರಿಗೆ ಬಂದಿತು(೧೯೨೯), ಮದರಾಸು ಪ್ರಾಂತದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ದೊರಕಿತು (೧೯೨೧)ಮತ್ತು ಮಹಿಳೆಯರಿಗೆ ಆಸ್ತಿಯ ಮೇಲೆ ಸೀಮಿತ ಹಕ್ಕು ಬಂದಿತು(೧೯೩೭), ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ಪ್ರತ್ಯೇಕವಾದ ಶಾಲೆಯನ್ನು ಮೈಸೂರಿನಲ್ಲಿ ತೆರೆಯಲಾಯಿತು(೧೯೦೨).

ಸತಿಪದ್ಧತಿಯನ್ನು ತೊಡೆದುಹಾಕಿದ್ದರಿಂದ ಮಹಿಳೆಯರಿಗೆ ಆಗುತ್ತಿದ್ದ ಹಿಂಸೆಯನ್ನು ತಕ್ಕಮಟ್ಟಿಗೆ ನಿವಾರಿಸಲಾಯಿತು. ಆದರೆ ಸ್ತ್ರೀಯು ತನ್ನ ಪತಿಯ ಚಿತೆಯ ಮೇಲೆ ಆತ್ಮಾರ್ಪಣೆ ಮಾಡಿಕೊಳ್ಳುವುದನ್ನು ಹಾಡಿ ಹೊಗಳುವ ಪದ್ಧತಿ ಇನ್ನೂ ಅಪರೂಪಕ್ಕಾದರೂ ಮುಂದುವರಿದಿದೆ. ರಾಜಾಸ್ಥಾನದಲ್ಲಿ ನಡೆದ ರೂಪಾಕನ್ವರಳ ಘಟನೆ(೧೯೮೮) ಸತಿಯ ಬೆಂಬಲಿಗರಲ್ಲೂ ವಿರೋಧಿಗಳಲ್ಲೂ ಭಾವೋದ್ವೇಗದ ಅಲೆಗಳನ್ನು ದೇಶಾದ್ಯಂತ ಕೆರಳಿಸಿತು. ದ್ವಿಜ-ಜಾತಿಗಳಲ್ಲಿ ವಿಧವೆಯರನ್ನು ಇಂದಿಗೂ ತುಚ್ಛವಾಗಿ ಕಾಣಲಾಗುತ್ತದೆ. ಎಲ್ಲೋ



ಅಪರೂಪಕ್ಕೊಮ್ಮೆ ಕೆಲವರು ಸಾಂಪ್ರದಾಯಿಕತೆಯ ಸಂಕೋಲೆಯನ್ನು ಕಡಿಮೆ ಹೊರಬಂದು ಮರುವಿವಾಹವಾಗುತ್ತಾರೆ. ಸ್ತ್ರೀ-ಶಿಶುಹತ್ಯೆಗಿಂತಲೂ ಸ್ತ್ರೀ ಭ್ರೂಣಹತ್ಯೆ ಇನ್ನೂ ಮುಂದುವರೆದಿದೆ. ಪ್ರತಿವರ್ಷವೂ ಗಂಡುಮಕ್ಕಳಿಗಿಂತ ಹೆಚ್ಚಾಗಿ ೩,೦೦,೦೦೦ ಹೆಣ್ಣು ಮಕ್ಕಳು ಶೈಶವದಲ್ಲಿ ಸಾಯುತ್ತಾರೆ. ಇವುಗಳಲ್ಲಿ ಹಲವು ಸಾವುಗಳಿಗೆ ಉದ್ದೇಶಪೂರ್ವಕ ಅಲಕ್ಷ್ಯ ಕಾರಣ. ಏಕೆಂದರೆ ಹೆಣ್ಣುಮಕ್ಕಳು “ ಒಂದು ಹೊರೆ” ಎಂಬಂತೆ ಪರಿಗಣಿಸಲಾಗುತ್ತದೆ. ವೈದ್ಯಕೀಯ ತಂತ್ರಜ್ಞಾನದಲ್ಲಿ ಅತ್ಯಾಧುನಿಕ ಪ್ರಗತಿಯಿಂದಾಗಿ ಅಮ್ನಿಯೋಸೆಂಟಿಸಿಸ್ ಮೂಲಕ ಹುಟ್ಟುವ ಮೊದಲೇ ಗರ್ಭದಲ್ಲಿರುವ ಶಿಶು ಹೆಣ್ಣೆ, ಗಂಡೋ ಎಂದು ತಿಳಿದುಕೊಳ್ಳಲು ಸಾಧ್ಯವಿದೆ. ಇದರಿಂದಾಗಿ ಸ್ತ್ರೀಭ್ರೂಣಹತ್ಯೆಯ ಪ್ರಮಾಣ ಏರಿದೆ. ಪತ್ರಿಕಾ ವರದಿಗಳ ಪ್ರಕಾರ, ಬೆಂಗಳೂರು ನಗರವೊಂದರಲ್ಲೇ ಒಂದು ವರ್ಷದಲ್ಲಿ(೧೯೮೪) ಸುಮಾರು ೧೫,೦೦೦ ಸ್ತ್ರೀ ಭ್ರೂಣಹತ್ಯಾ ಪ್ರಕರಣಗಳು ಸಂಭವಿಸಿದವು. ೧೯೯೪ರಲ್ಲಿ ಸುಮಾರು ೨೩,೦೦೦ ಸ್ತ್ರೀ ಭ್ರೂಣ ಹತ್ಯೆ ಪ್ರಕರಣಗಳು ಸಂಭವಿಸಿವೆ. ಈ ಸೌಲಭ್ಯ ಈಗ ಎಲ್ಲ ನಗರಗಳಲ್ಲೂ ಅನೇಕ ಪಟ್ಟಣಗಳಲ್ಲೂ ಲಭ್ಯವಿದೆ. ಅಂತರ್‌ಜಾತೀಯ ವಿವಾಹಗಳ ಶೇಕಡಾವಾರು ಹೆಚ್ಚುತ್ತಿದೆ. ಆದರೆ ನಿಷೇಧಿಸಿರುವ ಶಾಸನವಿದ್ದರೂ ಕೆಲವು ಕಡೆ ಬಾಲ್ಯವಿವಾಹಗಳು ನಡೆಯುತ್ತಲೇ ಇವೆ. ಮೂಲ ಶಾಸನದಲ್ಲಿ ವಿವಾಹದ ಕನಿಷ್ಟ ವಯಸ್ಸು ಹೆಣ್ಣಿಗೆ ಹದಿನೈದು, ಗಂಡಿಗೆ ಹದಿನೆಂಟು ಎಂದಿತ್ತು. ಆಮೇಲೆ ಅದನ್ನು ಹದಿನೆಂಟು, ಇಪ್ಪತ್ತೊಂದು ಎಂದು ಪರಿಷ್ಕರಿಸಲಾಯಿತು. ಆದರೆ ಭಾರತದ ಕೆಲವು ಭಾಗಗಳಲ್ಲಿ ಸಾಮೂಹಿಕ ವಿವಾಹಗಳು ನಡೆಯುತ್ತವೆ. ಅವುಗಳ ನಡುನಡುವೆ ಮಕ್ಕಳ(ಕೇವಲ ಶಿಶುಗಳ) ವಿವಾಹ ಕೂಡ ನಡೆದು ಹೋಗುತ್ತದೆ. ಸ್ವಾತಂತ್ರ್ಯ ಬಂದ ನಂತರ ಮಹಿಳೆಯರಿಗೆ ಮತದಾನ ಮಾಡುವ ಹಕ್ಕು ಬಂದಿತು. ಆಸ್ತಿ ಹಕ್ಕಿನ ವಿಷಯದಲ್ಲೂ ಹೆಚ್ಚಿನ ಸುಧಾರಣೆಯಾಯಿತು.

ಆದರೆ ಇನ್ನೂ ಹಲವಾರು ಸಮಸ್ಯೆಗಳು ಹಾಗೇ ಉಳಿದಿವೆ. ಹೆಣ್ಣು ಮಗುವಿನಿಂದ ದುಡಿಸಿಕೊಂಡು ಶೋಷಿಸುವುದು, ದೇವಾಲಯಗಳಿಗೆ ಅವರನ್ನು ಜೋಗತಿಯರಾಗಿ ಅಥವಾ ದೇವದಾಸಿಯರಾಗಿ ಬಿಟ್ಟುಬಿಡುವುದು, ಆ ಮೂಲಕ ಲೈಂಗಿಕವಾಗಿ ಶೋಷಿಸುವುದು, ಸೂಳೆಗಾರಿಕೆ, ಕುಟುಂಬದಲ್ಲಿ ಹೆಣ್ಣುಮಕ್ಕಳನ್ನು ಹೀನಾಯವಾಗಿ ನಡೆಸಿಕೊಳ್ಳುವುದು ಇತ್ಯಾದಿ. ಸಾಮಾಜಿಕ ಪ್ರಜ್ಞೆಯಿಲ್ಲದೆ, ಸಮಾಜ ಕಾರ್ಯದ ಉದ್ದೇಶವಿಲ್ಲದೆ ಕೇವಲ ಶಾಸನ ಮಾಡುವುದು ಟೊಳ್ಳಾಗುತ್ತದೆ, ಈಡೇರದ ಭರವಸೆಯಾಗಿ ಉಳಿಯುತ್ತದೆ.

ಹಿಂದೂ ಕೆಳಜಾತಿಯ ಶ್ರೇಣಿಗಳಲ್ಲಿ ಹುಟ್ಟಿಕೊಂಡ ಕೆಲವು ಚಳವಳಿಗಳು ಉದಾಹರಣೆಗೆ, ಜ್ಯೋತಿಬಾ ಫುಲೇ ಅವರ ಸತ್ಯಶೋಧಕ ಸಮಾಜದ ಪಂಥವು ಮಹಿಳೆಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡವು. ಗಾಂಧೀಜಿಯವರು ಅವರನ್ನು ಸ್ವಾತಂತ್ರ್ಯ ಆಂದೋಲನಕ್ಕೆ ಸೇರಿಸಿಕೊಂಡು ಅವರ ಅನೇಕ ಬಂಧನಗಳನ್ನು ಕಿತ್ತೆಸೆಯುವ ಹಾಗೆ ಮಾಡಿದರು; ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರಂತೂ ಸ್ತ್ರೀಯರ ಸ್ವಾತಂತ್ರ್ಯಕ್ಕಾಗಿ ಹಕ್ಕೊತ್ತಾಯಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ನಮ್ಮ ಮುಂದಿರುವ ಸತ್ಯ. ಸ್ವಾತಂತ್ರ್ಯ ನಂತರ ಮಹಿಳೆಯರು ಅನೇಕ ಕ್ಷೇತ್ರಗಳಲ್ಲಿ ಮುಂದುವರಿದಿದ್ದಾರೆ.



ಹಲವು ಮಹಿಳೇತರ ರಂಗಗಳಲ್ಲೂ ಇಂದು ಅವರು ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ, ತಮ್ಮ ಸ್ಥಾನವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೂ ಲಿಂಗ ಸಂಬಂಧಗಳಲ್ಲಿ ಅಸಮಾನತೆ ಹಾಗೆಯೇ ಉಳಿದಿದೆ.

ನ್ಯಾಯಾಂಗ, ಶಿಕ್ಷಣ, ಈಗ ಆರ್ಥಿಕ ಮತ್ತು ರಾಜಕೀಯ ಅವಕಾಶಗಳು ಪರಿಸ್ಥಿತಿಯನ್ನು ವೇಗವಾಗಿ ಬದಲಾಯಿಸಬಹುದಾಗಿತ್ತು. ಆದರೆ ಸರಕಾರವು ಬಹು ಜಾಗರೂಕತೆಯಿಂದ ಹೆಜ್ಜೆಯಿಟ್ಟಿದೆ. ಸಾಂಪ್ರದಾಯಿಕತೆಯ ಕಟ್ಟಿಗೆ ಒಳಪಟ್ಟ ಸಮಾಜದಲ್ಲಿ ಸಾಂಸ್ಕೃತಿಕ ಸೂಕ್ಷ್ಮ ಸಂವೇದನೆಗಳನ್ನು ತಿಳಿಯಲು ಅದು ಇಷ್ಟಪಟ್ಟಿಲ್ಲ. ಸತಿಪದ್ಧತಿಯು ನಿಷೇಧವಾದ ಮೇಲೆ ಸರಕಾರವು ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಹಿಡಿತ ಬಿಗಿಪಡಿಸಿದೆ. ಬಹುಪತ್ನಿತ್ವವನ್ನು ದುರುಪಯೋಗ ಪಡಿಸಿಕೊಳ್ಳದ ಹಾಗೆ ಕ್ರಮ ಕೈಗೊಂಡಿದೆ. ವಿವಾಹದ ವಯಸ್ಸನ್ನು ಏರಿಸಿದೆ. ವರದಕ್ಷಿಣೆಯ ವಿರುದ್ಧವಾಗಿ ಶಾಸನ ಬಂದಿದೆ. ವಿಚ್ಛೇದನ ನಿಯಮಗಳನ್ನು ಸುಲಭಗೊಳಿಸಲಾಗಿದೆ. ಪಾಲಕ ನಿಯಮಗಳಲ್ಲಿ ಕೆಲವು ಬದಲಾವಣೆಗಳಾಗಿವೆ. ಜೀವನಾಶವನ್ನು ಕುರಿತು ಹೊಸ ಕಾನೂನುಗಳಾಗಿವೆ. ವಾರಸುದಾರಿಕೆ ಹಕ್ಕುಗಳ ಬಗ್ಗೆ ಮಹಿಳೆಯರ ಪರವಾಗಿ ಹೆಚ್ಚು ಉದಾರವಾದ ಶಾಸನಗಳಾಗಿವೆ. ಆದರೆ ಈ ಶಾಸನಗಳನ್ನು ಜಾರಿಗೆ ತರುವುದರಲ್ಲಿ ಕಷ್ಟಗಳಿವೆ. ಅವುಗಳಲ್ಲಿರುವ ಕೆಲವು ದೋಷಗಳು ಅವುಗಳ ಉದ್ದೇಶವನ್ನೇ ಭಗ್ನಗೊಳಿಸಿವೆ. ಹಿಂದೂ ಶಾಸನ ಸಂಹಿತೆಯು ಪಾರಂಪರಿಕ ಆಚರಣೆಗಳ

ಬಗ್ಗೆ ಸ್ವಲ್ಪ ವಿನಾಯಿತಿ ತೋರಿಸಬೇಕಾಯಿತು. ಕುಟುಂಬದ ಆಸ್ತಿಯಲ್ಲಿ ತಮಗೆ ನ್ಯಾಯವಾಗಿ ಸಲ್ಲಬೇಕಾದ ಪಾಲು ಪಡೆಯುವುದರಲ್ಲಿ ಮಹಿಳೆಯರಿಗೆ ಕಷ್ಟವಾಗುತ್ತಿದೆ. ಸ್ತ್ರೀ ಧನದ ಮೇಲೂ ಅವಳಿಗೆ ಪೂರ್ತಿ ಹಕ್ಕು ಇಲ್ಲದ ಹಾಗಾಗಿದೆ.

ಮಹಿಳೆಯರಿಗೆ ಶಿಕ್ಷಣಾವಕಾಶ ಹೆಚ್ಚಿದೆ. ಹೆಚ್ಚು ಹೆಚ್ಚು ಜನ ಸಂಖ್ಯೆಯಲ್ಲಿ ಅವರು ವಿದ್ಯಾಸಂಸ್ಥೆಗಳ ಮೆಟ್ಟಿಲು ಹತ್ತುತ್ತಿದ್ದಾರೆ. ಆದರೆ ಶಾಲಾ ಕಾಲೇಜಿಗಳಿಗೆ ಸೇರಿಕೊಳ್ಳುವವರ ಸಂಖ್ಯೆ ಗಂಡು ಮಕ್ಕಳಿಗಿಂತ ತುಂಬಾ ಕಡಿಮೆ ಹಾಗೂ ನಡುವೆ ವಿದ್ಯಾಭ್ಯಾಸ ಬಿಟ್ಟುಬಿಡುವವರ ಸಂಖ್ಯೆ ಗಾಬರಿಗೊಳಿಸುವಷ್ಟು ಹೆಚ್ಚು ಹೊಸ ಆರ್ಥಿಕ ಅವಕಾಶಗಳು ತೆರೆದುಕೊಂಡಿವೆ. ಮಹಿಳೆಯರು ಅವುಗಳ ಪ್ರಯೋಜನ ಪಡೆಯುತ್ತಿದ್ದಾರೆ. ಆದರೆ ಅವರ ವಿರುದ್ಧವಾಗಿ ಮುಸುಕಿನ ಪಕ್ಷಪಾತ ಮುಂದುವರಿದಿದೆ. ಜನಸಂಖ್ಯೆಯಲ್ಲಿ ಅವರ ಶೇಕಡಾವಾರು ಪರಿಮಾಣಕ್ಕೆ ತಕ್ಕಂತೆ ಉದ್ಯೋಗ ವಲಯಗಳಲ್ಲಿ ಅವರಿಗೆ ಅವಕಾಶ ದೊರೆಕುತ್ತಿಲ್ಲ. ಇದು ರಾಜಕೀಯದಲ್ಲೂ ನಿಜ. ೧೯೮೯ರಲ್ಲಿ ಆಳುವ ಪಕ್ಷವು(ಕಾಂಗ್ರೇಸ್ ಐ) ಮತಸ್ಥಾನಗಳ ಶೇ.೩೦ ಮಹಿಳೆಯರಿಗೆ ಎಂದು ಭರವಸೆ ನೀಡಿತು. ಆದರೆ ಅದು ಈಡೇರಲಿಲ್ಲ. ವಿರೋಧಪಕ್ಷದ ದಾಖಲೆಯೂ ಇದಕ್ಕಿಂತ ಬೇರೆಯಲ್ಲ. ೧೯೮೯ರ ಸಂಸತ್ತಿನಲ್ಲಿದ್ದ ಮಹಿಳೆಯರ ಸಂಖ್ಯೆ ಹಿಂದಿನ ಮುಖ್ಯಮಂತ್ರಿ ಸಂಸತ್ತುಗಳಿಗಿಂತ ಕಡಿಮೆ. ಕರ್ನಾಟಕದಲ್ಲಿ ೨೦ ತಿಂಗಳ ಕಾಲ ಆಳ್ವಿಕೆ ನಡೆಸಿದ ಎಚ್.ಡಿ. ಕುಮಾರಸ್ವಾಮಿ ಅವರ ಮಂತ್ರಿಮಂಡಲದಲ್ಲಿ ಒಬ್ಬ ಮಹಿಳೆಯೂ ಇರಲಿಲ್ಲ.

ಈ ಬಗೆಯ ಲಿಂಗ ಪಕ್ಷಪಾತ ಹಲವು ರೂಪಗಳು ಹುಟ್ಟುವುದು ಭಾರತೀಯ ಸಂವಿಧಾನದಲ್ಲಿರುವ ಒಂದು ವೈರುಧ್ಯದಿಂದ, ಅದು ಶಾಸನದೆದುರಿಗೆ ಸರ್ವರಿಗೂ



ಸಮಾನತೆಯ ಭರವಸೆ ಕೊಡುತ್ತದೆ. ಧರ್ಮ, ಜಾತಿ, ಜನಾಂಗ, ಲಿಂಗ, ಜನ್ಮಸ್ಥಳ ಇಂತಹ ಯಾವುದೇ ಆಧಾರದ ಮೇಲೆ ಪಕ್ಷಪಾತ ಮಾಡುವುದನ್ನು ನಿಷೇಧಿಸುತ್ತದೆ. ಅದೇ ಸಮಯದಲ್ಲೇ ಸಂವಿಧಾನವು ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಭರವಸೆ ಕೊಡುತ್ತದೆ. ಧಾರ್ಮಿಕ ಸ್ವಾತಂತ್ರ್ಯದ ಈ ಅವಕಾಶವು ಮಹಿಳೆಯರಿಗೆ ಸಂವಿಧಾನವು ನೀಡಿರುವ ಸ್ವಾತಂತ್ರ್ಯ ಸಮಾನತೆಗಳನ್ನು ಧರ್ಮದ ಹೆಸರಿನಲ್ಲಿ ಬಹುಮಟ್ಟಿಗೆ ಕಿತ್ತುಕೊಳ್ಳುತ್ತದೆ. ಕುಟುಂಬ ಮತ್ತು ವ್ಯಕ್ತಿ ನಿಯಮಗಳು ಧರ್ಮ ಸಂಹಿತೆಗಳಲ್ಲಿ ಬೇರು ಬಿಟ್ಟಿರುವುದರಿಂದ ಮಹಿಳೆಯರು ಕುಟುಂಬದೊಳಗಾಗಲಿ, ಆಸ್ತಿಪಾಸ್ತಿಗಾಗಲಿ ಸಮಾನ ಹಕ್ಕುಗಳನ್ನು ಹೊಂದಿಲ್ಲ. ಅವರಲ್ಲಿ ಅನೇಕರಿಗೆ ವಿವಾಹ ನಂತರ ತಾನು ಎಲ್ಲಿ ವಾಸಮಾಡುವೆನೆಂಬುದೇ ನಿರ್ಧಾರವಾಗಿರುವುದಿಲ್ಲ. ಹಾಗಾಗಿ ಕೆಲವರಿಗೆ ಜೀವನಾಂಶ ದೊರಕುವುದಿಲ್ಲ. ಮತ್ತೆ ಕೆಲವರಿಗೆ ವಿವಾಹ ವಿಚ್ಛೇದನ ಪಡೆಯುವುದರಲ್ಲಿ ತುಂಬ ಕಷ್ಟವಾಗುತ್ತದೆ. ಕೆಲವರು ಶಾಸನಬದ್ಧ ರೀತಿಯಲ್ಲಿ ತಮಗಿಷ್ಟ ಬಂದ ಒಂದು ಮಗುವನ್ನು ದತ್ತಕ ತೆಗೆದುಕೊಳ್ಳುವುದೂ ಸಾಧ್ಯವಿರುವುದಿಲ್ಲ. ಎಲ್ಲರಿಗೂ ಸಮಾನವಾದ ಸಿವಿಲ್‌ಕೋಡ್ ಇರಬೇಕೆಂಬ ಕೂಗು ಈಗ ಗಟ್ಟಿಯಾಗಿ ಕೆಳಿಬರುತ್ತಿದೆ. ಆದರೆ ಸಾಂಪ್ರದಾಯಿಕ ವಲಯದಿಂದ ತೀವ್ರ

ವಿರೋಧ, ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವ ಇವು ದೇಶದ ರಾಜಕೀಯ ನಾಯಕತ್ವವನ್ನು ದಿಕ್ಕುಗೆಡಿಸುತ್ತಿವೆ. ಮುಂದೆ ಎಂದಾದರೂ ಇದಕ್ಕಿಂತ ಅನುಕೂಲಕರವಾದ ಸಮಯದಲ್ಲಿ ಮಾಡೋಣವೆಂದು ಮುಂದೂಡುತ್ತಿದ್ದಾರೆ. ರಾಜಕೀಯವಾಗಿ ಸ್ಥಾನ ಕಳೆದುಕೊಂಡು ಬಿಡಬಹುದೆಂಬ ಭೀತಿ, ಧಾರ್ಮಿಕ ವಲಯಗಳ ವಿರೋಧ ಕಟ್ಟಿಕೊಳ್ಳುವ ಶಂಕೆ, ಅದರ ಪರಿಣಾಮವಾಗಿ ವೋಟು ಬ್ಯಾಂಕ್‌ಗಳ ನಷ್ಟ ಈ ಅಂಶಗಳು ಸರಕಾರದ ಪ್ರಗತಿಪರ ಶಾಸನಕ್ಕೆ ತಡೆಯೊಡ್ಡುತ್ತವೆ. ಈ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಸಮಾನತೆ ಎನ್ನುವುದು ಮರೀಚಿಕೆಯಾಗಿದೆ.

ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆ ಲಿಂಗ ಅಸಮಾನತೆಯನ್ನು ಮುಂದುವರಿಸುವಂತೆ ತೋರುತ್ತದೆ. ಸಮಾನತೆಯ ಸಾಧನೆಯ ಯಾತ್ರೆ ಅತಿ ದೀರ್ಘವೂ ಕಷ್ಟಕರವೂ ಆಗಿದೆ. ಇಂಥ ಪರಿಸ್ಥಿತಿಯನ್ನು ಸಮಗ್ರವಾಗಿ ಚಿಂತಿಸಿದ ಅಂಬೇಡ್ಕರ್ ಅವರು ಇವರ ಪ್ರಗತಿಗೆ ಶಾಸನದಲ್ಲಿ ಉತ್ತರ ನೀಡಲು ಮುಂದಾದರು.

**೧. ದೇವದಾಸಿ ಪದ್ಧತಿ**

ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಹೆಸರುಗಳಲ್ಲಿ ದಲಿತ ಮಹಿಳೆಯರ ಲೈಂಗಿಕ ಶೋಷಣೆ ನಡೆಯುತ್ತಾ ಬಂದಿದೆ. ಎಲ್ಲಮ್ಮನಂತಹ ಹೆಣ್ಣು ಗ್ರಾಮೀಣ ದೇವತೆಗಳು, ಹನುಮಂತ ಮುಂತಾದ ಗಂಡು ದೇವರುಗಳ ಹೆಸರಿನಲ್ಲಿ ಕೆಳಜಾತಿಯ ಮತ್ತು ಹಿಂದುಳಿದ ಹಾಗೂ ದಲಿತ ವರ್ಗದ ಹೆಣ್ಣು ಮಕ್ಕಳನ್ನು ಲೈಂಗಿಕ ದಾಸ್ಯಕ್ಕೆ, ವೇಶ್ಯಾವಾಟಿಕೆಗೆ ತಳ್ಳಲಾಗುತ್ತಿದೆ. ಮೇಲಾಗಿ ಜಮದಗ್ನಿ ಋಷಿಯ ಪತ್ನಿ ರೇಣುಕಾದೇವಿಯ ಪೌರಾಣಿಕ ಹಿನ್ನೆಲೆಯೂ ಈ ಆಚರಣೆಗಿದೆ. ದೇವದಾಸಿ ಪದ್ಧತಿ, ಬಸವಿ ಬಿಡುವುದು, ಜೋಗತಿ ಬಿಡುವುದು ಇತ್ಯಾದಿ ಹಲವಾರು ಹೆಸರುಗಳಿಂದ ಕರೆಯಲ್ಪಡುವ ಈ ಅಮಾನವೀಯ



ಆಚರಣೆಯು ರಾಜ್ಯದ ವಿವಿಧ ಭಾಗಗಳಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಕೆಲವು ಗ್ರಾಮೀಣ ಭಾಗಗಳಲ್ಲಿ ಸರಕಾರದ ನಿಷೇಧದ ಹೊರತಾಗಿಯೂ ನಡೆಯುತ್ತಿದೆ.

ಉದಾಹರಣೆಗೆ, ದಾವಣಗೆರೆ ಜಿಲ್ಲೆಯ ಲೋಕಿಕೆರೆ, ಹುಚ್ಚಂಗಿ ಎಲ್ಲಮ್ಮ ದೇವಸ್ಥಾನ, ಹೂವಿನಮಡು, ಹರಪ್ಪನಹಳ್ಳಿ, ಕೂಲಿಹಳ್ಳಿ, ಚಿತ್ರಂಪಳ್ಳಿ, ಶಿವಮೊಗ್ಗ ಜಿಲ್ಲೆಯ ಸೊರಬ, ಚಿತ್ರದುರ್ಗ ಜಿಲ್ಲೆಯ ನಾಯಕನ ಹಟ್ಟಿ, ಬಳ್ಳಾರಿ ಜಿಲ್ಲೆಯ ಕೊಟ್ಟೂರು, ಕಮಲಾಪುರ, ಕೂಗುನೂರು, ಚಿಂಚನಸೂರು, ರಾಯಚೂರು ಜಿಲ್ಲೆಯ ಮಸ್ಕಿ, ಸಿಂಧನೂರು ಹಾಗೂ ಲಿಂಗಸೂರು ತಾಲೂಕಿನ ಬಲಬಂದಿ, ಚಿಂಚೋಳ್ಳಿ, ಜೇವರ್ಗಿ, ಗುಲ್ಬರ್ಗಾ ಜಿಲ್ಲೆಯ ಹುಕ್ಕೇರಿ ಬಳಿಯ ಅವರೆಗೋಳ, ರಾಮದುರ್ಗ ತಾಲೂಕಿನ ತೊಂಡೆಕಟ್ಟಿ, ಹೊಸಕೋಟೆ, ಸಾಲಹಳ್ಳಿ, ಗೋಡಚಿ, ಉಗುರಗೊಳ್ಳ,

ಗುಲ್ಬರ್ಗಾ ಜಿಲ್ಲೆಯ ತ್ಯಾಗನೂರು, ಅಗರಗ, ರಾಜಕೂಟನೂರು, ಬಾನೂರು, ಇಟ್ಟಿಗ, ಸಂಡೂರು, ಶಹಾಪುರದ ಹೊಸಳ್ಳಿ, ಬಿಜಾಪುರದ ಬೂದಿಯಾಳ, ಧಾರವಾಡದ ಸವದತ್ತಿ, ಹುನಗುಂದ ತಾಲೂಕಿನ ಕಮತಗಿ, ಬೀದ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಚಿಕ್ಕಸಲಿಗೆ, ಮುಲ್ಲಾನ್, ನಾಗರದಿಣ್ಣೆ, ಮಟ್ಟಿ ಹಳ್ಳಿ, ಮುತ್ತಗೆ, ಮುತ್ತಂಡಿ ಹೀಗೆ ಈ ಆಚರಣೆಯು ವಿವಿಧ ದೇವರುಗಳ ಜಾತ್ರೆಯ ಹೆಸರಿನಲ್ಲಿ ವ್ಯಾಪಕವಾಗಿ ನಡೆಯುತ್ತಿದೆ.

ಲೈಂಗಿಕ ಶೋಷಣೆಯ ಪ್ರಕ್ರಿಯೆಯಲ್ಲಿ ಅನೇಕ ಹೆಸರುಗಳಿಂದ ಕರೆಯುತ್ತಾ ಬಂದಿರುವುದು ಸಾಮಾನ್ಯ ಸಂಗತಿ. ಈ ಶೋಷಣೆಗೆ ಒಳಗಾದ ಅನೇಕ ಮಹಿಳಾ ಸಮುದಾಯಗಳನ್ನು ಹೆಸರಿಸುವ ಒಂದೊಂದು ಪದ ಹಾಗೂ ಆಯಾ ಜಾತಿ ವರ್ಗಕ್ಕೆ ಇರುವ ಹೀನಾರ್ಥಗಳ ಕಾರಣ ಆ ಹೆಸರುಗಳನ್ನು ಕೈಬಿಟ್ಟು ಇಲ್ಲಿ ಲೈಂಗಿಕ ದಾಸಿಯರು ಎಂದು ವಿಶಾಲಾರ್ಥದಲ್ಲಿ ಬಳಸಿದೆ. ಲೈಂಗಿಕ ದಾಸಿಯರಲ್ಲಿ ಎರಡು ವಿಧಗಳು.

೧. ದೈವಕೇಂದ್ರಿತ ಲೈಂಗಿಕ ದಾಸಿಯರು.

೨. ಸಮಾಜಕೇಂದ್ರಿತ ಲೈಂಗಿಕ ದಾಸಿಯರು.

ಪಾತರದವರು, ಬಸವಿಯರು, ಜೋಗತಿಯರು ದೈವಕೇಂದ್ರಿತ ಲೈಂಗಿಕ ದಾಸಿಯರಾದರೆ, ಕಸುಬಿನವರು (ಸೆಕ್ಸ್ ವರ್ಕಸ್್ರ) ಲೌಕಿಕ ಕೇಂದ್ರಿತ ದೇವದಾಸಿಯರು. ಇವರೆಲ್ಲರನ್ನು ಒಟ್ಟು ಸೇರಿಸಿ ದೇವದಾಸಿಯರು ಎಂದು ಕರೆಯುವ ವಾಡಿಕೆ ಇದೆ. ಆದರೆ ಅದು ಸಮರ್ಪಕ ಎನಿಸುವುದಿಲ್ಲ. ಇದು ಇತ್ತೀಚಿನ ಪದ ಬಳಕೆ. ಬಸವಿಯರು, ಜೋಗತಿಯರು, ಪಾತರದವರು ಈ ಒಂದೊಂದು ಪದ ಭಿನ್ನ ಸಾಂಸ್ಕೃತಿಕ ಚರಿತ್ರೆಯನ್ನುಹೊಂದಿದೆ.

**೧. ಪಾತರದವರು**

ನಟುವರು ಮತ್ತು ಪಾತರದವರು ಬೇರೆ ಬೇರೆಯಲ್ಲ. ದೇವಸ್ಥಾನಗಳಲ್ಲಿ ನರ್ತನ ಮತ್ತು ಸಂಗೀತ ಸೇವೆ ಮಾಡುವವರನ್ನು 'ಪಾತರದವರೆಂದು ಹೇಳುವರು. ಇವರಿಗೆ 'ಸಾನಿಯರು' ಎಂದು ಕರೆಯುವ ವಾಡಿಕೆ ಇದೆ. ಋತುಮತಿಯಾದ ಹುಡುಗಿಗೆ

'ಗಂಡಾ' ಕಟ್ಟಿದರೆ ಅವಳು ಪಾತರದವಳಾಗುತ್ತಾಳೆ(ಹೆಚ್ಚಿನ ಓದಿಗೆ ಡಾ.ಶೈಲಜ ಹಿರೇಮಠ ಅವರ 'ಪಾತರದವರು' ಕೃತಿಯನ್ನು ನೋಡಬಹುದು. ಕ.ವಿ.ವಿ,ಹಂಪಿ)

ಪಾತರ ದೀಕ್ಷೆ ಪಡೆಯುವ ಹುಡುಗಿಗೆ ಹಿರಿಯ ಪಾತರದವಳೊಂದಿಗೆ ಮದುವೆಯಾಗುತ್ತದೆ. ಮುಂದೆ ಅವಳೊಂದಿಗೆ ವಿವಾಹಬಾಹಿರವಾಗಿ ಕೂಡ ಬಯಸುವವನೇ ಗಂಡಾ ಕಟ್ಟುವುದರ ಎಲ್ಲ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಾನೆ . ಚೊಣ್ಣದ ಕಾರ್ಯ, ಹಲ್ಲಿಟ್ಟಿನ ಕಾರ್ಯ, ಶೋಭನ ಕಾರ್ಯ ಮಾಡುತ್ತಾರೆ. ಚೊಣ್ಣದ ಕಾರ್ಯದಲ್ಲಿ ಪೈಜಾಮ, ಅಂಗಿ, ತೊಡಿಸಿ ಸಂಗೀತ ವಾದ್ಯಗಳಾದ ತಂಬೂರಿ, ತಬಲಾ, ಹಾರ್ಕ್ಮೋನಿಯಂ ಪೆಟ್ಟಿಗೆಯ ಜೊತೆ ಕಾರಣ ಮಾಡುತ್ತಾರೆ. ಅದಕ್ಕೆ ಗಂಡಾ ಕಟ್ಟುವುದು ಎನ್ನುತ್ತಾರೆ. ಪಾತರದವರಲ್ಲಿ ಗಂಡ ಕಟ್ಟುವ ಕಾರ್ಯ ಬಹಳ ಮಹತ್ವದ್ದು. ಅದೊಂದು ಧಾರ್ಮಿಕ ಕಾರ್ಯಕ್ರಮ. ಅದಕ್ಕೆ ಪಂಚಾಂಗ ನೋಡಿ ಮುಹೂರ್ತ ಗುರುತಿಸುತ್ತಾರೆ. ಎಂದರೆ ತಬಲಾ ಜತೆ ಮದುವೆ ಮಾಡಿದ ಹಾಗೆ ಹುಡುಗಿಗೆ ಒಳ್ಳೆಯ ಸೀರೆ ಉಡಿಸಿ, ಅಲಂಕಾರ ಮಾಡಿ ಬ್ಯಾಂಡ್ ಬಾಜಿ ಜತೆ ಮನೆಯಿಂದ ಗುಡಿ ತನಕ ಮೆರವಣಿಗೆ ಮಾಡುತ್ತಾರೆ. ಮತ್ತೆ ಮನೆಗೆ ಬಂದು ಪೈಜಾಮ, ಅಂಗಿ ತೊಡಿಸುತ್ತಾರೆ. ನಡುಮನೆಯಲ್ಲಿ ಪೂಜೆ ಮಾಡಿದ ತಬಲಾ, ಹಾರ್ಮ್ಮೋನಿಯಂ ಪೆಟ್ಟಿಗೆ ಇಟ್ಟಿರುತ್ತಾರೆ. ತಬಲಾಕ್ಕೆ ರುಮಾಲು ಸುತ್ತಿರುತ್ತಾರೆ. ತಬಲಾದ ಎಡಭಾಗದಲ್ಲಿ ಹುಡುಗಿಯನ್ನು ಕೂಡಿಸಿರುತ್ತಾರೆ. ತಬಲಾ ಆಕೆಯ ಗಂಡ ನೀವು ಕಲಿಸಿದ್ದನ್ನೆಲ್ಲ ಮನಸ್ಸಿಟ್ಟು ಕಲಿಯುವೆ, ನಿಮ್ಮ ಶಿಷ್ಯಳಾಗಿರುವ ಅವಧಿಯಲ್ಲಿ ಬೇರೆ ಯಾರನ್ನೂ ಸ್ವೀಕರಿಸುವುದಿಲ್ಲ ಎಂದು ಅವಳು ಪ್ರತಿಜ್ಞೆ ಮಾಡುತ್ತಾಳೆ. ಆಗ ಗುರು ಎನಿಸಿಕೊಂಡವನು ಅಕೆಯ ಕೈಗೆ ಮೂರೆಳೆ ದಾರ ಕಟ್ಟುವುದು. ಅದೇ ಸಂದರ್ಭದಲ್ಲಿ ಕಾಲಿಗೆ ಗೆಜ್ಜೆ ಕಟ್ಟುವರು. ಅಂದಿನಿಂದ ಆಕೆಗೆ ಸಂಗೀತ ಮತ್ತು ನೃತ್ಯ ಶಿಕ್ಷಣ ಆರಂಭವಾಗುತ್ತದೆ.

ಹಲ್ಲಿಟ್ಟಿನ ಕಾರ್ಯದಲ್ಲಿ ಹಲ್ಲಿಟ್ಟನ್ನು ಹಲ್ಲುಗಳ ಎಡಭಾಗಕ್ಕೆ ಐದು ಸಲ ಬಲಭಾಗಕ್ಕೆ ಐದು ಸಲ ಹಚ್ಚುವರು. ಇದು ಹಲ್ಲುಗಳ ಬಣ್ಣವನ್ನು ಕಪ್ಪಾಗಿಸುತ್ತದೆ.

ಶೋಭನ ಕಾರ್ಯದಂದು ಹುಡುಗಿಗೆ ಒಳ್ಳೆಯ ರೇಷ್ಮೆ ಸೀರೆ ಉಡಿಸಿ ಮದುಮಗಳಂತೆ ಅಲಂಕರಿಸುತ್ತಾರೆ. ಹಿರಿಯ ಪಾತರದವಳಿಗೆ ಗಂಡಸಿನ ವೇಷ ಹಾಕಿ ಆಕೆಯ ಕೈಯಲ್ಲಿ ಕತ್ತಿಯನ್ನು ಕೊಡುತ್ತಾರೆ. ಅವಳೊಂದಿಗೆ ಮದುವೆ ನಡೆಯುತ್ತದೆ. ಹಿರಿಯ ಪಾತರದವಳೇ ತಾಳಿಯನ್ನು ಕಟ್ಟುತ್ತಾಳೆ. ಈ ರೀತಿ ದೀಕ್ಷೆ ನೀಡಿ ಪಾತರದವಳನ್ನಾಗಿಸುವ ಕಾರ್ಯಕ್ರಮ ಮೊದಲು ಮೂರು ದಿನಗಳ ಕಾಲ ನಡೆಯುತ್ತಿತ್ತು. ಆದರೆ ಈಗ ಅದು ಕಾನೂನು ಬಾಹಿರವಾಗಿರುವುದರಿಂದ ಒಂದೇ ದಿನದಲ್ಲಿ ಮನೆಯಲ್ಲಿ ಕದ್ದು ಮುಚ್ಚಿ ನಡೆಯುತ್ತದೆ. ಈ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆಯಾದರೂ ಹೆಚ್ಚಿನ ಮೂಲಭೂತ ವ್ಯತ್ಯಾಸಗಳೇನೂ ಇಲ್ಲ. ಕದ್ದು ಮುಚ್ಚಿ ನಡೆಯುವ ಈ ಕಾರ್ಯಕ್ರಮಗಳು ಮೊದಲಿನ ಹಾಗೆ ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿಲ್ಲ. ಬಿಜಾಪುರದ ಸಿಂಧಗಿಯ ನೀಲಗಂಗಮ್ಮ, ಬಾಗಲಕೋಟೆಯ

ತೇರದಾಳದ ಪ್ರಭುದೇವರು, ಬೆಳಗಾವಿಯ ಅಕ್ಕಿವಾಟದ ಮಲ್ಲಿಕಾರ್ಜುನ ದೇವಸ್ಥಾನಗಳಲ್ಲಿ ಈ ಪದ್ಧತಿ ಇಂದಿಗೂ ಜೀವಂತಿಕೆಯಾಗಿರುವುದು ಕಂಡು ಬರುತ್ತದೆ. ಈ ಪದ್ಧತಿಯನ್ನು ತಮ್ಮದಾಗಿಸಿಕೊಂಡಿರುವವರು ದಲಿತ ವರ್ಗದ ಹೊಲೆಯ, ಮಾದಿಗ ಹಾಗೂ ಪರಿಶಿಷ್ಟ ಪಂಗಡ ಜನಾಂಗ ಹಾಗೂ ಲಂಬಾಣಿ ಜನಾಂಗವಿರುವುದು ವಿಶೇಷವಾಗಿದೆ.

**೩. ಬಸವಿಯರು**

ಮುದ್ರೆ ಹಾಕಿಕೊಂಡವರನ್ನು ಮಾತ್ರ ಬಸವಿಯರು ಎನ್ನುತ್ತಾರೆ. ಮುದ್ರೆಗಳಲ್ಲಿ ಗಟ್ಟಿ ಮುದ್ರೆ, ಹೂಮುದ್ರೆಗಳೆಂಬ ಎರಡು ವಿಧಗಳಿವೆ. ಹುಡುಗಿ ಋತುಮತಿಯಾದ ನಂತರವೇ ಮುದ್ರೆಯನ್ನು ಹಾಕುತ್ತಾರೆ. ಹನುಮಂತ ದೇವರಿಗೆ ಇವರನ್ನು ಬಿಟ್ಟಿರುತ್ತಾರೆ. ಮುದ್ರೆ ಹಾಕಿಸಿಕೊಂಡ ಮೇಲೆ ಅವಳು ಮದುವೆಯಾಗುವಂತಿಲ್ಲ. ಗಟ್ಟಿಮುದ್ರೆ ಹಾಕಿಸಿಕೊಳ್ಳುವವಳನ್ನು ಊರ ಹೊರಗಿನ ಹಳ್ಳದಲ್ಲೋ, ನದಿಯಲ್ಲೋ, ಭಾವಿಯಲ್ಲೋ, ಸ್ನಾನ ಮಾಡಿಸುತ್ತಾರೆ. ಅವಳ ತಂದೆ, ತಾಯಿ ಹಾಗೂ ಸಂಬಂಧಿಕರು ಜತೆಗಿರುತ್ತಾರೆ. ಸ್ನಾನ ಮಾಡಿಸಿ ಹೊಸ ಸೀರೆ ಉಡಿಸಿ ಹನುಮಂತ ದೇವಸ್ಥಾನಕ್ಕೆ ಅವಳನ್ನು ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಪೂಜಾರಿ ಎಲ್ಲ ಧಾರ್ಮಿಕ ವ್ಯವಸ್ಥೆಗಳನ್ನು ಮಾಡಿಟ್ಟುಕೊಂಡಿರುತ್ತಾನೆ. ಪೂಜಾರಿ ನಾಯಕ ಅಥವಾ ಇನ್ನಾವುದೇ ಕೆಳ ಜಾತಿಯವನಾಗಿರುತ್ತಾನೆ. ನಿಗಿನಿಗಿಯಾಗಿರುವ ಕೆಂಡದಲ್ಲಿ ಶಂಖ, ಚಕ್ರ, ಪದ್ಮ ಮುದ್ರೆಗಳಿರುತ್ತವೆ. ತೊಟ್ಟ ರವಿಕೆಯನ್ನು ಸಡಿಲಿಸಲು ಹೇಳುತ್ತಾನೆ ಅವಳ ಎದೆ ಭಾಗ ಬಹಿರಂಗಗೊಳುತ್ತದೆ. ಏಕಕಾಲಕ್ಕೆ ಎದೆಯ ಮೇಲ್ಬಾಗಕ್ಕೆ ಎರಡು ಕಡೆ ಹಾಗೂ ಬಲ ಭುಜಕ್ಕೆ ಮುದ್ರೆ ಹಾಕುತ್ತಾನೆ. ಆ ಸಂದರ್ಭದಲ್ಲಿ ಆಕೆ ಚೀರಕೂಡದು. ಚೀರಿದರೆ ಆಕೆ ತನ್ನ ಶೀಲವನ್ನು ಮೊದಲೇ ಕಳೆದುಕೊಂಡಿದ್ದಾಳೆ ಎಂದು ಭಾವಿಸುತ್ತಾರೆ. ಆದುದರಿಂದ ಹುಡುಗಿ ಎಷ್ಟೇ ನೋವಾದರೂ ಸಹಿಸಿಕೊಳ್ಳುತ್ತಾಳೆ. ನಂತರ ಪೂಜಾರಿಯೇ ಆಕೆಯ ಕೊರಳಿಗೆ ತಾಳಿ ಕಟ್ಟುತ್ತಾನೆ. ಅವಳನ್ನು ಅವತ್ತಿನ ರಾತ್ರಿ ಪೂಜಾರಿಯೊಂದಿಗೆ ದೇವಸ್ಥಾನದಲ್ಲೇ ಬಿಟ್ಟು ಹೋಗುತ್ತಾರೆ. ಆದಿನ ದೇವರೇ ಆಕೆಯ ಮೀಸಲು ಮುರಿಯುತ್ತಾನೆ ಎಂಬ ನಂಬಿಕೆ ಇದೆ. ಇವರನ್ನು ಮೂರು ಮುದ್ರೆ ಸೂಳೆಯರು ಎಂದು ಕರೆಯುವ ವಾಡಿಕೆ ಜನಸಾಮಾನ್ಯರಲ್ಲಿದೆ. ಈ ಆಚರಣೆಯಲ್ಲಿ ನೂರಕ್ಕೆ ನೂರು ಭಾಗ ದಲಿತರೇ ಆಗಿರುವುದು ಭಾರತದ ಅಧಃಪತನದ ಸಾಮಾಜಿಕ ಚರಿತ್ರೆಗೆ ಮುನ್ನುಡಿಯಂತಿದೆ.

ಹೂಮುದ್ರೆ ಹಾಕಿಕೊಳ್ಳುವ ಹುಡುಗಿ ಇದೇ ತರಹದ ಆಚರಣೆಗೆ ಒಳಗಾಗುತ್ತಾಳೆ. ಆದರೆ ಇಲ್ಲಿ ಮುದ್ರೆಗಳಿರುವುದಿಲ್ಲ. ಮಲ್ಲಿಗೆ ಅಥವಾ ಯಾವುದಾದರೂ ಹೂವನ್ನು ದೀಪಕ್ಕೆ ಹಿಡಿದು ಎದೆಯ ಎರಡೂ ಭಾಗಗಳಿಗೆ ಹಚ್ಚುತ್ತಾರೆ. ಇವರಲ್ಲಿ ಗಟ್ಟಿಮುದ್ರೆ ಹಾಕಿಕೊಂಡವರೇ ಶ್ರೇಷ್ಠ ಎಂಬ ನಂಬಿಕೆಯಿದೆ. ಇಂದಿಗೂ ಈ ಸಂಪ್ರದಾಯಗಳು ವ್ಯವಸ್ಥಿತವಾಗಿ ಊರ ಹೊರಗಿನ ಪಾಳುಬಿದ್ದ ದೇವಾಲಯಗಳಲ್ಲಿ ನಡೆಯುತ್ತವೆ. ಈ

ಆಚರಣೆ ಹೆಚ್ಚಾಗಿ ಬಳ್ಳಾರಿ ಜಿಲ್ಲೆಯ ಕಮಲಾಪುರ, ಮರಿಯಮ್ಮನಹಳ್ಳಿ, ಚಿಂತ್ರಪಳ್ಳಿ, ಕೂಡ್ಲಿಗಿ ಮತ್ತು ಉಚ್ಚಂಗಿ ದುರ್ಗ ಮುಂತಾದ ಕಡೆ ಇನ್ನೂ ಕೆಲವು ಜೀವಂತವಾಗಿದೆ.

**೪, ಚೌರಿ ಬಸವಿಯರು**

ಮೈಲಾರದ ಮೈಲಾರಪ್ಪನಿಗೆ, ಕೂಲಹಳ್ಳಿಯ ಗೋಣಿಬಸವನಿಗೆ ಚೌರಿ ಬಸವಿಯರನ್ನು ಬಿಡುತ್ತಾರೆ. ಇಂದಿಗೂ ಸಹ ದಲಿತ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರು ಸರಕಾರದ ಕಣ್ಣು ತಪ್ಪಿಸಿ ಈಗಲೂ ಆಚರಣೆಯನ್ನು ನೆರವೇರಿಸಿಕೊಂಡು ಬರುತ್ತಿದ್ದಾರೆ. ಮೈಲಾರ ಗುಡಿಯ ಪೂಜಾರಿ ಕುರುಬನಾಗಿದ್ದರೆ ಗೋಣಿ ಬಸವನ ಗುಡಿಯ ಈಗಿನ ಪೂಜಾರಿ ನಾಯಕರ ಜಾತಿಯವನು. ಆದರೆ ಗೋಣಿ ಬಸವನ ಗುಡಿ ಪೂಜಾರಿಗಳು ತಾವು ಶುದ್ಧ ಜಂಗಮರೆಂದು ಸುಳ್ಳು ಪ್ರಚಾರ ಮಾಡಿಕೊಳ್ಳುತ್ತಾರೆ. ದೇವರ ಸನ್ನಿಧಿಯಲ್ಲಿ ಹುಡುಗಿಯರಿಗೆ ಗುಡಿಯ ಪೂಜಾರಿ ಚೌರಿ ಹೊರಿಸಿದರೆ ಆಕೆ ಚೌರಿ ಬಸವಿಯಾಗುತ್ತಾಳೆ.

(ಹೆಚ್ಚಿನ ಓದಿಗೆ ಡಾ. ಶೈಲಜ ಹಿರೇಮಠ ಅವರ ಹರದೇಶಿ ನಾಗೇಶಿ: ಕಲೆ ಮತ್ತು ಕಲಾವಿದರು: ಲಿಂಗ ಸಂಬಂಧಿ ಅಧ್ಯಯನ ಎಂಬ ಕೃತಿಯನ್ನು ಗಮನಿಸಬಹುದು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧)

**೫. ಜೋಗತಿಯರು**

ಪ್ರಾಚೀನ ಕಾಲದ ಹೆಣ್ಣು ದೇವತೆಗಳು ಎಲ್ಲೆಲ್ಲ ಚಾಲ್ತಿಯಲ್ಲಿದ್ದಾರೋ ಅಲ್ಲೆಲ್ಲ ಜೋಗತಿಯರ ಬಿಡುವ ಸಂಪ್ರದಾಯ ಜೀವಂತವಾಗಿದೆ. ಸವದತ್ತಿ ಎಲ್ಲಮ್ಮ, ಕೊಕಟನೂರು ಎಲ್ಲಮ್ಮ, ಚಿಂಚಲಿಯ ಮಾಯವ್ವ, ಹುಲಗಿಯ ಹುಲಿಗೆವ್ವ, ಉಚ್ಚಂಗಿ ದುರ್ಗದ ಉಚ್ಚಂಗೆವ್ವ ಇರುವ ಪ್ರದೇಶಗಳಲ್ಲಿ ಈ ಆಚರಣೆಯಿದೆ. ಈ ಆಚರಣೆ ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದೆ ಎಂದು ಹೇಳಬಹುದು.

ಪ್ರಾಯಕ್ಕೆ ಬಂದ ಹುಡುಗಿಯರನ್ನೇ ಈ ಸಂಪ್ರದಾಯಕ್ಕೆ ಒಳಗುಮಾಡುತ್ತಾರೆ. ಕೆಲವೊಮ್ಮೆ ಎಳೆ ಕಂದಮ್ಮಗಳನ್ನೂ ಈ ಸಂಪ್ರದಾಯಕ್ಕೆ ಬಲಿಪಶು ಮಾಡುವ ಸಂಪ್ರದಾಯ ಇದೆ. ಮೊದಲು ದೇವಿಯರಿರುವ ಸ್ಥಳಗಳಲ್ಲೇ ಹೆಣ್ಣು ಬಿಡುವ ಸಂಪ್ರದಾಯವಿತ್ತು. ಆದರೆ ಸರಕಾರದ ನಿಷೇಧ ಕಾರ್ಯ ಜಾರಿಗೆ ಬಂದ ಮೇಲೆ ಮನೆಗಳಲ್ಲಿ ಕೆಲಮೊಮ್ಮೆ ಆಯಾ ದೇವಾಲಯಗಳಲ್ಲೇ ಹೆಣ್ಣು ಬಿಡಲಾಗುತ್ತದೆ.

ದೇವಿಗೆ ಬಿಡುವ ಹೆಣ್ಣನ್ನು ಮೊದಲು ಹೊಳೆಯಲ್ಲಿ ಸ್ನಾನ ಮಾಡಿಸಿ, ಮಡಿ ಸೀರೆ ಉಡಿಸಿ ದೇವಿಯ ಹತ್ತಿರ ಕರೆತರುತ್ತಾರೆ. ಅಲ್ಲಿ ಗಂಡಸರಾರೂ ಸೇರಿರುವುದಿಲ್ಲ. ಜೋಗತಿಯರೇ ಅಲ್ಲಿ ಸೇರಿರುತ್ತಾರೆ. ಐದು ಮಂದಿ ಹಿರಿಯ

ಜೋಗತಿಯರು ಸೇರಿ ಆಕೆಯ ಕೊರಳಿಗೆ ಕೆಂಪು ಬಿಳಿ ಮುತ್ತುಗಳನ್ನು ಕಟ್ಟುತ್ತಾರೆ. ಅದಾದ ನಂತರ ಅವಳು ಐದು ದಿನ ಊರಾಡಬೇಕು, ಎಂದರೆ ಭಿಕ್ಷೆ ಬೇಡಬೇಕು. ಐದನೇ ವಾರ ತಮಗೆ



ಅನುಕೂಲವಾದ ಒಂದು ದಿನ ಗೊತ್ತು ಮಾಡಿಕೊಂಡು ಸಂಬಂಧಿಕರನ್ನೆಲ್ಲ ಊಟಕ್ಕೆ ಕರೆಯುವರು. ದೇವಿಗೆಂದು ಮಾಡಿದ ಒಂದು ಎಡೆಯನ್ನು ತೆಗೆದಿಟ್ಟಿರುತ್ತಾರೆ. ಮೊದಲು ಐದು ಜನ ಹಿರಿಯ ಜೋಗತಿಯರು ಉಣ್ಣುತ್ತಾರೆ. ಇಷ್ಟಾದರೆ ಅವಳು ಜೋಗತಿಯರ ಕುಲದೊಳಗೆ ಬಂದ ಹಾಗೆ, ನಂತರ ಪ್ರಸ್ತ ಕಾರ್ಯ ಇಟ್ಟುಕೊಳ್ಳುತ್ತಾರೆ.

ಧಾರ್ಮಿಕತೆಯ ಹೆಸರಿನಲ್ಲಿ ನಡೆಯುವ ಈ ಆಚರಣೆಗಳಲ್ಲಿ ಸಂಘಟಿತ ವೇಶ್ಯಾವಾಟಿಕೆಯ ವಾಸನೆ ಹೊಡೆಯುತ್ತಿದೆ. ಮಕ್ಕಳಾಗಲಿ ಎಂದು ಮತ್ತು ಮಳೆ- ಬೆಳೆಯು ಸಮೃದ್ಧಿಯಾಗಿ ಆಗಲೆಂದು ದಲಿತರು, ಅವರು ನಂಬಿರುವ ದೇವರಲ್ಲಿ ಹರಕೆ ಹೇಳಿಕೊಳ್ಳುತ್ತಾರೆ. ಕೊಟ್ಟೂರಿನಂತಹ ಊರಿನಲ್ಲಿ ಬಸವಿಯರ ಮನೆತನವೇ ಇದೆ, ಇವರನ್ನು ಯಾರೂ ಮದುವೆಯಾಗುವುದಿಲ್ಲ. ಕೆಲವರು ಬಸವಿ ಬಿಡುವುದು ತಮ್ಮ ಪಾರಂಪರಿಕ ಕರ್ತವ್ಯ ಎಂದು ಭಾವಿಸಿ ಎಲ್ಲ ಮಕ್ಕಳನ್ನು ಬಸವಿ ಬಿಡುತ್ತಾರೆ. ಹಂಪಿಯ ಸುತ್ತಮುತ್ತ, ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ, ಕೂಲಿಹಳ್ಳಿ ಮುಂತಾದ ಕಡೆಗಳಲ್ಲಿ ಬಡ ಕುಟುಂಬಗಳು ತಮ್ಮ ಎಲ್ಲ ಹೆಣ್ಣುಮಕ್ಕಳನ್ನು ಬಸವಿ ಬಿಡುವುದಿದೆ. ಹಣದ ಲಾಲಸೆಯೂ ಇದಕ್ಕೆ ಕಾರಣವಾಗಿದೆ. ಮುಖ್ಯವಾದ ಸಂಗತಿ ಎಂದರೆ ಈ ಕಾರ್ಯಕ್ಕೆ ತೊಡಗುವವರು ದಲಿತರು ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬೇಡ ಜನಾಂಗದವರು ಆಗಿರುವುದು ಈ ಭೂಮಿಯ ಮೂಲಭೂತವಾದ ಚರಿತ್ರೆಗೆ ಹಿಡಿದ ಕನ್ನಡಿಯಾಗಿದೆ.

ಬಸವಿಯರು ಹಾಗೂ ಜೋಗತಿಯರು ಮೊದಲಿಗೆ ಊರಗೌಡರು, ಕುಲಕರ್ಣಿ ಹೀಗೆ ಶ್ರೀಮಂತರ ಜತೆ ಲೈಂಗಿಕ ಸಂಪರ್ಕ ಬೆಳೆಸಿದರೆ ನಂತರ ವ್ಯವಹಾರಿಕ ವೇಶ್ಯಾವಾಟಿಕೆಗೆ ಇಳಿಯುತ್ತಾರೆ. ಕೆಲವರು ಮುಂಬೈಯಂತಹ ಊರುಗಳ ವೇಶ್ಯಾವಾಟಿಕೆಗೆ ಸೇರಿ ಹಲವು ರೋಗಗಳನ್ನು ಅಂಟಿಸಿಕೊಂಡು ಕೊನೆಗಾಲದಲ್ಲಿ ಗತಿಯಿಲ್ಲದೆ ಬೀದಿಪಾಲಾಗಿ ಭಿಕ್ಷೆ ಬೇಡುತ್ತಾರೆ. ಇಂಥ ವೇಶ್ಯವಾಟಿಕೆ ಜಾಲಗಳು ಅಮಾನವೀಯ ಆಚರಣೆಗಳನ್ನು, ಮೂಢನಂಬಿಕೆಯನ್ನು ಪ್ರಚೋದಿಸುವ ಮೂಲಕ ಈ ಅನಿಷ್ಟ ಸಂಪ್ರದಾಯಕ್ಕೆ ಪ್ರೋತ್ಸಾಹಿಸುತ್ತವೆ.

ಕಾನೂನು ತಜ್ಞರ ಅಭಿಪ್ರಾಯದಂತೆ ಧಾರ್ಮಿಕ ನಂಬಿಕೆಯ ದುರ್ಬಳಕೆಯ ಮೂಲಕ ಕೆಳವರ್ಗದ ಸ್ತ್ರೀಯರನ್ನು ತನ್ನ ಲೈಂಗಿಕ ಚಟಕ್ಕೆ ಬಳಸಿಕೊಳ್ಳಲು ಮೇಲ್ವರ್ಗವೆಂದು ಹೇಳಿಕೊಂಡಿರುವವರು ಮಾಡಿಕೊಂಡಿರುವ

ವ್ಯವಸ್ಥೆಯಿದು. ಇದಕ್ಕೆ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿದ್ದರೂ ವ್ಯವಸ್ಥಿತ ವೇಶ್ಯಾವಾಟಿಕೆಯನ್ನು ಹುಟ್ಟುಹಾಕಿ ಬೆಳೆಸುವ ಆಚರಣೆಯಿದು.

ಇದರ ನಿರ್ಮೂಲನೆಗೆ ಪ್ರಿವೆಂಟೇಶನ್ ಆಫ್ ಇಮ್ಮಾರಲ್ ಟ್ರಾಫಿಕ್ ಆಕ್ಟ್, ಇಂಡಿಯನ್ ಪೊಲೀಸ್ ಆಕ್ಟ್, ಕರ್ನಾಟಕ ಪೊಲೀಸ್ ಆಕ್ಟ್‌ಗಳು ಚಾಲ್ತಿಯಲ್ಲಿದ್ದರೂ ನಿರೀಕ್ಷಿತ ಪರಿಣಾಮ ಬೀರಿಲ್ಲ. ಸಂವಿಧಾನದ ವಿಧಿ ೨೫ರಲ್ಲಿ ಧಾರ್ಮಿಕ ಆಚರಣೆಯನ್ನು ನಿಷೇಧಿಸಬಹುದಾಗಿದ್ದು, ಅಂತಹ ನಿಷೇಧಕ್ಕಾಗಿ ಸಂಬಂಧಿಸಿದ ರಾಜ್ಯಗಳು ಸೂಕ್ತ ಕಾಯಿದೆಯನ್ನು ಮಾಡಬಹುದೆಂದು ತಿಳಿಸಿದೆ. ಆಚಾರ ಜಗದೀಶ್ವರಾನಂದ ಅವಧೂತ



ವಿರುದ್ಧ ಕಲ್ಕತ್ತಾ ಪೊಲೀಸ್ ಕಮೀಷನರ್ ಪ್ರಕರಣದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ತಾಂಡವ ನೃತ್ಯ ಮಾಡುವುದು, ಬುರುಡೆ ಮತ್ತು ಶಸ್ತ್ರಗಳನ್ನು ಹಿಡಿದು ಮೆರವಣಿಗೆ ಹೋಗುವುದು ಧಾರ್ಮಿಕ ಹಕ್ಕಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ೧೯೮೪(೪) ಎಸ್.ಸಿ. ೫೨೨, ೧೯೯೪ (೬) ಎಸ್.ಸಿ.೩೬೦ರ ಎಸ್.ಆರ್.ಬೊಮ್ಮಾಯಿ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣಕ್ಕೆ ಸಂಬಂಧಿಸಿ ಸಂವಿಧಾನದ ವಿಧಿ ೨೫ರಲ್ಲಿ ಜಾತ್ಯತೀತತೆ ದೇವರ ವಿರೋಧಿಯೂ ಧರ್ಮ ವಿರೋಧಿಯೂ ಅಲ್ಲ, ಆದರೆ ಧಾರ್ಮಿಕ ಆಚರಣೆಗಳು ಸಾರ್ವಜನಿಕ ನೈತಿಕತೆಗೆ ಧಕ್ಕೆ ಉಂಟುಮಾಡದಂತಿರಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಆದುದರಿಂದ ಈ ಅಮಾನವೀಯ ಆಚರಣೆಗಳನ್ನು ಹೋಗಲಾಡಿಸಲು ಈಗಿರುವ ಕಾನೂನುಗಳನ್ನು ಕಟ್ಟುನಿಟ್ಟಿನಿಂದ ಜಾರಿಗೆ ತರಬೇಕು. ರಾಜ್ಯ ಸರಕಾರಗಳು ಸಹ ಸಮಾಜ ಕಲ್ಯಾಣದ ಕಾಯಿದೆಗಳನ್ನು ಜಾರಿಗೆ ತರುವುದರ ಮೂಲಕ ಇಂತಹ ಆಚರಣೆಗಳನ್ನು ನಿರ್ಮೂಲನಗೊಳಿಸಬಹುದು ಎಂದು ಸಂವಿಧಾನದ ವಿಧಿ ೨೫೩ರಲ್ಲಿ ಹೇಳಿದ್ದು, ಎ.ಐ.ಆರ್.೧೯೬೩ ಎಸ್.ಸಿ.,೮೫೩ರ ಸೈಫುದ್ದೀನ್ ವಿರುದ್ಧ ಸ್ಟೇಟ್ ಆಫ್ ಬಾಂಬೆ ಪ್ರಕರಣದಲ್ಲಿಯೂ ಈ ಕುರಿತ ಉಲ್ಲೇಖ ಇದೆ. ಸಂವಿಧಾನದ ೨೩ಕ್ಕೆ ಸಂಬಂಧಪಟ್ಟ ಶೋಷಣೆಯ ವಿರುದ್ಧ ಹಕ್ಕಿನಡಿ ಕೂಡ ಇವುಗಳನ್ನು ನಿಯಂತ್ರಿಸಬಹುದು.

ಇಲ್ಲಿ ಹೆತ್ತವರನ್ನು, ಇಂತಹ ಆಚರಣೆಗಳ ವ್ಯವಸ್ಥಾಪಕರನ್ನು ಹಾಗೂ ಇವುಗಳ ದುರ್ಲಾಭ ಪಡೆಯುವ ಮೇಲ್ವರ್ಗದವರನ್ನು ನೇರವಾಗಿ ಹೊಣೆ ಮಾಡಿ ಶಿಕ್ಷಿಸುವ ಕಾನೂನು ಮತ್ತು ಜಾಗೃತಿ ಬೇಕಿದೆ. ಜೊತೆಗೆ ಲಿಂಗಭೇದದ ವಿರುದ್ಧ ಜಾಗೃತಿಯನ್ನೂ ಮೂಡಿಸಬೇಕು. ಶಿಕ್ಷಣ ನೀಡುವುದರ ಮುಖಾಂತರ ಉತ್ತಮ ಬದುಕಿನೆಡೆಗೆ ಮುಖ ಮಾಡಿರುವ ಹಾಗೆ ಕ್ರಮ ಕೈಗೊಳ್ಳಬಹುದಾಗಿದೆ. ಇದಕ್ಕೆ ಸರ್ಕಾರದ ಕಾನೂನುಗಳು ಜಾರಿಗೆ ಬಂದರೆ ಸಾಲದು

ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳ್ಳುವಿಕೆಯಲ್ಲಿ ಕ್ರಮ ವಹಿಸಬೇಕು ಹಾಗೂ ಇಂದಿನ ಜನರೂ ಸಹ ಈ ದಿಕ್ಕಿನಲ್ಲಿ ಪ್ರಜ್ಞಾವಂತರಾಗಬೇಕಾದ ಜರೂರಿದೆ.

**೬. ಅರೆಬೆತ್ತಲೆ ಸೇವೆ ಮತ್ತು ಬೇವಿನುಡಿಗೆ**

ದಲಿತ ಮಹಿಳೆಯರ ಬೆತ್ತಲೆ ಸೇವೆಯಿಂದಾಗಿ ಚಂದ್ರಗುತ್ತಿಯಂತಹ ಸಣ್ಣ ಊರು ಪ್ರಪಂಚದಾದ್ಯಂತ ಕುಖ್ಯಾತವಾಯಿತು. ಈ ಆಚರಣೆಯನ್ನು ಸರಕಾರ ನಿಷೇಧಿಸಿದೆಯಾದರೂ ಇದೇ ಮಾದರಿಯ ಅರೆಬೆತ್ತಲೆ ಸೇವೆ ಅಥವಾ ಬೇವಿನುಡುಗೆ ಎಂಬ ಆಚರಣೆ ರಾಜ್ಯದ ಹಲವಾರು ಕಡೆಗಳಲ್ಲಿ ಆಚರಣೆಯಲ್ಲಿದೆ. ಮಹಿಳೆಯರು ಬಟ್ಟೆ ಕಳಚಿ ಮರೆಗಾಗಿ ಬೇವಿನ ತೊಪ್ಪಲುಗಳನ್ನು ಸುತ್ತಿಕೊಂಡು ಸಾರ್ವಜನಿಕವಾಗಿ ಮೆರವಣಿಗೆಯ ಮೂಲಕ ಆಯಾ ದೇವಿಯ ಗುಡಿಗಳಿಗೆ ಹೋಗಿ ಪೂಜೆ ಸಲ್ಲಿಸುವುದು ಈ ಆಚರಣೆಯ ಮುಖ್ಯಾಂಶ.

ಪ್ರಸಿದ್ಧ ದಲಿತ ಬಂಡಾಯ ಸಾಹಿತಿಯಾಗಿರುವ, ಚಿಂತಕ ಡಾ.ಚೆನ್ನಣ್ಣ ವಾಲೀಕಾರ ಅವರ ಲೆಕ್ಕಾಚಾರ ಪ್ರಕಾರ ಅದರಲ್ಲಿ ಭಾಗವಹಿಸುವವರಲ್ಲಿ ಸುಮಾರು ಶೇಕಡಾ ೩೦ಮಂದಿ ಮಾದಿಗರು, ಶೇಕಡಾ ೧೦ ಮಂದಿ ಹೊಲೆಯರು ಹಾಗೂ ಉಳಿದ ೫೦



ಶೇಕಡಾ ಮಂದಿ ಹಿಂದುಳಿದ ಜಾತಿಗಳಿಗೆ ಸೇರಿದವರು. ಈ ಜಾತಿಗಳ ಹೆಣ್ಣು ಮಕ್ಕಳಲ್ಲದೆ ಹಸಿರು ಮುತ್ತು ಕಟ್ಟಿಸಿಕೊಂಡ ಜೋಗತಿಯರೂ ಇದರಲ್ಲಿ ಭಾಗವಹಿಸುವರು. ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಕೋಗನೂರು, ಚಿಂಚನಸೂರು, ಅಫಲ್‌ಪುರ ತಾಲೂಕಿನ ಗತ್ತರಗಿ, ಬಿ.ಹಳ್ಳಿ, ಗುಲ್ಬರ್ಗಾ ತಾಲೂಕಿನ ಹೊನ್ನಕಿರಣಗಿ, ಹಾರುತಿ, ಬೆಳಗಾವಿ ಜಿಲ್ಲೆಯ ಸವದತ್ತಿ ಹಾಗೂ ಹರಿಹರ, ತೊಂಡೆಹಾಳ, ಮುದ್ದೇಬೀಹಾಳ, ಕಲಘಟಗಿ, ಹುಲಿಕೊಪ್ಪ, ಬೆಳಗಾವಿಯ ಅಥಣಿ ತಾಲ್ಲೂಕಿನ ಕೊಕಟನೂರು, ತೆಲಸಂಗಾ, ಹುಕ್ಕೇರಿ ತಾಲ್ಲೂಕಿನ ಅವರಗೋಳ, ಬೆಳಗಾವಿ ತಾಲ್ಲೂಕಿನ ರಾಮದುರ್ಗ, ಹೊಸಕೋಟೆ, ಮಂಡಿಕಟ್ಟಿ, ಸಾಲಹಳ್ಳಿ, ಗೂಡಬಿ, ಉಗುರುಗೊಳ, ಬಿಜಾಪುರದ ಬೂದಿಹಾಳ, ತೇರದಾಳ, ಬಬಲೇಶ್ವರ, ಆಲಮಟ್ಟಿ ತಾಲ್ಲೂಕಿನ ಚಂದ್ರಗುತ್ತಿ, ಬಸವನ ಬಾಗೇವಾಡಿ ತಾಲೂಕಿನ ಚಿಕ್ಕಸಲಗಿ, ನಾಗರದಿಣ್ಣೆ, ಮಟ್ಟಿಹಾಳ, ಹುನಗುಂದ ತಾಲ್ಲೂಕಿನ ಕಮತಗಿ, ರಾಯಚೂರು ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಬಬಲಾದಿ, ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣ್ಣೆ ಕಲ್ಲು, ದಾವಣಗೆರೆ ನಗರ, ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಹಾಲೇಕಲ್ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಸ್ವರೂಪ ಹಾಗೂ ವಿಧಿ ವಿಧಾನಗಳೊಂದಿಗೆ ಈ ಆಚರಣೆ ವ್ಯಾಪಕವಾಗಿ ಚಾಲ್ತಿಯಲ್ಲಿದೆ. ಮೇಲೆ ಹೆಸರಿಸಿದ ಸ್ಥಳಗಳು ಕೇವಲ ಉದಾಹರಣೆಗಳು ಮಾತ್ರ

ಚಿಂಚನಸೂರು (ಚುಂಚೂರು) ಮಹಾಪೂರ ತಾಯಿ ಜಾತ್ರೆ ಏಪ್ರಿಲ್ ಕೊನೆಯ ವಾರದಿಂದ ಮೇ ಕೊನೆಯ ವಾರದವರೆಗೆ ಒಂದು ತಿಂಗಳು ನಡೆಯುತ್ತದೆ. ಅಕ್ಷತದಿ ಅಮಾವಾಸ್ಯೆಯ ಹಿಂದಿನ ಶುಕ್ರವಾರ ಮಹಾಪೂರ ತಾಯಿ ಚಿಂಚನಸೂರ ಊರಿಂದ ಎರಡು ಕಿ.ಮೀ ದೂರ ಇರುವ ಗುಡಿಗೆ ಬರುತ್ತಾಳೆ. ಅಂದಿನಿಂದ ಜಾತ್ರೆ ಆರಂಭವಾಗುತ್ತದೆ. ಇದು ಬಾದಾಮಿ ಅಮಾವಾಸ್ಯೆಯ ತನಕ ಒಂದು ಪ್ರತೀ ಶುಕ್ರವಾರ ನಡೆಯುತ್ತದೆ. ಸುತ್ತ ಮುತ್ತಲಿನ ಜನ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಸಾವಿರಾರು ಜನರು ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಹರಕೆ ಹೊತ್ತು ಅರೆಬೆತ್ತಲೆ ಸೇವೆ ಸಲ್ಲಿಸುತ್ತಾರೆ. ಗುಲಬರ್ಗಾ ತಾಲ್ಲೂಕಿನ ಹೊನ್ನಕಿರಣಗೆ ಮರಗಮ್ಮನ ಜಾತ್ರೆ ಪ್ರತಿ ಮೂರು ವರ್ಷಗಳಿಗೊಮ್ಮೆ ಜರುಗಿದರೆ, ಆಳಂದ ತಾಲ್ಲೂಕಿನ ಗೋಳಾ ಲಕ್ಕಮ್ಮನ ಜಾತ್ರೆ ದೀಪಾವಳಿ ನಂತರ ಕಡೆಯ ಪಂಚಮಿ ದಿನ ನಡೆಯುತ್ತದೆ. ಗುಲ್ಬರ್ಗಾ ಜಿಲ್ಲೆಯ ಹೆಚ್ಚು ಕಡಿಮೆ ಪ್ರತೀ ಗ್ರಾಮದಲ್ಲಿ ವೈಶಾಖ ಮಾಸದಲ್ಲಿ ಯಲ್ಲಮ್ಮನ ಹೆಸರಿನಲ್ಲಿ ಹಾಗೂ ಮದುವೆಯ ಸಂದರ್ಭದಲ್ಲಿ ಅರೆಬೆತ್ತಲೆ ಸೇವೆ ನಡೆಯುತ್ತದೆ. ಚಿತ್ರದುರ್ಗ ಜಿಲ್ಲೆಯ ಹುಲಕಲ್ಲಿನಲ್ಲಿ ೮.೪.೨೦೦೧ ರಿಂದ ೧೧.೦೪.೨೦೦೧ ರ ತನಕ ಈ ಅರೆಬೆತ್ತಲೆ ಸೇವೆ ನಡೆಯಿತು. ಈ ಸೇವೆಯಲ್ಲಿ ಹೆಚ್ಚಾಗಿ ಭಾಗವಹಿಸುವವರು ಮಾದಿಗ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ.

ರಾಜ್ಯದ ಎಲ್ಲ ಕಡೆಗಳಲ್ಲಿ ಒಂದೇ ರೀತಿಯ ವಿಧಿವಿಧಾನಗಳಿವೆ. ಜಾತ್ರೆ ಸಂದರ್ಭದಲ್ಲಿ ಹರಕೆ ಹೊತ್ತ ಭಕ್ತ ಮಹಿಳೆಯರು ತಮ್ಮ ನೆಂಟರಿಷ್ಟರೊಂದಿಗೆ ಆಯಾ ಸ್ಥಳಗಳಿಗೆ ಬರುತ್ತಾರೆ. ಸ್ನಾನವಾದ ಬಳಿಕ ಮಾದಿಗ ಮಾತಂಗಿಯರು ಬಕ್ಕಿ ಸೊಪ್ಪು, ಬೇವಿನ ಸೊಪ್ಪಿನಿಂದ ತಯಾರಿಸಿದ 'ಹುಟ್ಟಿಗೆ' ತರುತ್ತಾರೆ. ಹಡಲಗಿ ಪೂಜೆ, ಹುಟ್ಟಿಗೆ



ಎಂಬ ಎರಡು ವಿಧಿಗಳನ್ನು ನೇರವೇರಿಸುತ್ತಾರೆ. ಕೈಗಳಿಗೆ ಕಾಲುಗಳಿಗೆ ಪೂಜೆ ಮಾಡುತ್ತಾರೆ. ಬಾಯಿಗೆ ಬೇವಿನ ಸೊಪ್ಪು ಕೊಡುತ್ತಾರೆ. ಹಸಿ ಬಟ್ಟೆ ಬಿಚ್ಚಿಹಾಕಿ ಹುಟ್ಟಿಗೆ ತೊಡಿಸುತ್ತಾರೆ. ಜೋರಾಗಿ ಹಲಗೆ, ಡೊಳ್ಳು ಬಾಜಾಬಂಜಂತ್ರಿ ಬಾರಿಸುತ್ತಾರೆ.

ನಂತರ ಈ ಮಹಿಳೆಯರಿಗೆ ಉರಿಯುತ್ತಿರುವ 'ತನಾರತಿ' ಹೊರಿಸುತ್ತಾರೆ. ಬಾಜಾಬಜಂತ್ರಿಯ ಮುಂದೆ ಹುಟ್ಟಿಗೆ ಉಟ್ಟವರು ಸಾಗುತ್ತಾರೆ. ಹಿಂದೆ ಜನಸಮೂಹ ಹಾಗೂ ಬಲಿ ಕೊಡುವ ಪ್ರಾಣಿ ಇರುತ್ತದೆ. ಗುಡಿಗೆ ಐದು ಸುತ್ತು ಪ್ರದಕ್ಷಿಣೆ ಹಾಕಿ ಆದ ಮೇಲೆ ಹುಟ್ಟಿಗೆ ಹೊತ್ತವರಿಗೆ ಸ್ನಾನ ಮಾಡಿಸುತ್ತಾರೆ. ನಂತರ ಹೊಸ ಬಟ್ಟೆ ತೊಡಿಸುತ್ತಾರೆ. ಕುರಿಗೆ ಪೂಜೆ ಮಾಡಿ ಬಲಿ ಕೊಡುತ್ತಾರೆ. ನಂತರ ಬಲಿ ಪ್ರಾಣಿಯ ಅಡುಗೆ ಮಾಡಿ ದೇವರಿಗೆ ನೈವೇದ್ಯ ನೀಡುತ್ತಾರೆ. ಮುಂಜಾನೆಯಿಂದ ಕಾರ್ಯಕ್ರಮ ಮುಗಿಯುವವರೆಗೆ ಹುಟ್ಟಿಗೆ ಉಡುವವರು ಉಪವಾಸ ಇರಬೇಕು. ನೈವೇದ್ಯ ಮೂಲಕ ಉಪವಾಸ ಬಿಡುತ್ತಾರೆ. ಇದು ಜಾತ್ರೆಗಳಲ್ಲಿ ನಡೆಯುವ ಆಚರಣೆ.

ಮಾದಿಗರು, ವಡ್ಡರು, ಕೊರವರು, ಸಮಗಾರರು, ಕಬ್ಬಲಿಗರು, ಡೋರರು, ಕುರುಬರು, ಗೊಂದಲಿಗರು ಇತ್ಯಾದಿ ಜನಾಂಗದವರು ಗಂಡುಮಗನ ಮದುವೆಯ ನಿಶ್ಚಿತಾರ್ಥ ಸಂದರ್ಭದಲ್ಲಿ ಮಂಗಳವಾರ ಅಥವಾ ಶುಕ್ರವಾರ ಈ ಅರೆಬೆತ್ತಲೆ ಸೇವೆ ನಡೆಸುತ್ತಾರೆ. ಈ ಆಚರಣೆಯ ವಿಧಿವಿಧಾನ ಸ್ವಲ್ಪ ಬೇರೆಯಾಗಿದೆ. ಇದರ ಪ್ರಾರಂಭ ಹೇಗೆ ಆಗಿರಬಹುದು. ಆದರೆ ಇಂದು ಸರ್ಕಾರ ಇದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಆದರೂ ಇದು ಅಲ್ಲಲ್ಲಿ ನಡೆಯುತ್ತಿರುವುದಕ್ಕೆ ಮೇಲಿನದು ಸಾಕ್ಷಿಯಾಗಿದೆ. ಈ ಹಂತದಲ್ಲಿ ಈ ಭಾಗದ ದಲಿತ ವರ್ಗದ ವಿದ್ಯಾವಂತರು ಪ್ರಮುಖವಾಗಿ ಇದರ ವಿರುದ್ಧ ಹೋರಾಡಿ ಅವರಲ್ಲಿ ಅರಿವು ಮೂಡಿಸಲು ಮುಂದಾಗಬೇಕಾಗಿದೆ.

**೧. ಕೊಡ ಹೊರುವುದು**

ಗ್ರಾಮೀಣ ಜಾತ್ರೆಗಳಲ್ಲಿ ದಲಿತರು ಕೊಡ ಹೊರುವ ಹಿಂದಿನ ದಿನ ಕುಂಬಾರನ ಮನೆಗೆ ಹೋಗಿ ಹೊಸ ಮಣ್ಣಿನ ಕೊಡಗಳು, ಎರಡು ಹಾಗೂ ಎರಡು ಹಣತೆಗಳನ್ನು ತರುತ್ತಾರೆ. ಅವುಗಳಿಗೆ ಒಳ್ಳೆಣ್ಣೆ ಹಾಗೂ ಜಾಜಾ ಮಿಶ್ರ ಮಾಡಿ ಲೇಪಿಸುತ್ತಾರೆ. ಕೊಡದ ತಳಭಾಗಕ್ಕೆ ಸುಣ್ಣ ಹಚ್ಚುತ್ತರೆ. ಮರುದಿನ ಬೆಳಿಗ್ಗೆ ಕೊಡದ ಪೂಜೆ ನಡೆಯುತ್ತದೆ. ಬೆಳಿಗ್ಗೆ ಒಂಬತ್ತರಿಂದ ಹತ್ತರವರೆಗಿನ ಬಿಸಿಲಿಗೆ ಕೊಡದ ಪೂಜೆಗೆ ತಯಾರಿ ನಡೆಯುತ್ತದೆ. ದಲಿತ ವರ್ಗದವರಾಗಿರುವ ಮಾತಂಗಿಯವರು, ಜೋಗತಿಯರು, ಡೊಳ್ಳು ಹಲಗೆಯವರು ಆ ಹೊತ್ತಿಗೆ ಬರುತ್ತಾರೆ. ಕೊಡದ ಪೂಜೆಗಾಗಿ ಕಂಬಳಿ ಹಾಸುತ್ತಾರೆ. ಕುಂಕುಮ ಭಂಡಾರದಿಂದ ಮಾತಂಗಿಯರು ರಂಗ ಕೂಡಿಸುತ್ತಾರೆ. ನಡುವೆ ಸ್ವಲ್ಪ ಜೋಳ ಹಾಕಿ ಕೊಡ ಇಡುತ್ತಾರೆ. ನಂತರ ಸ್ನಾನ ಮಾಡಿದ ಹಸಿ ಬಟ್ಟೆಯಲ್ಲಿ ಹರಕೆ ಹೊತ್ತವರು ಮಾತಂಗಿಯರ ಜತೆ ಸೇರಿ ಕೊಡಕ್ಕೆ ಪೂಜೆ ಮಾಡುತ್ತಾರೆ. ಕೊಡದ ಬಾಯಿಗೆ ಗೋಧಿಯ ಹಿಟ್ಟಿನ ಕಣಕ ಮಾಡಿ ಎರಡು ಕುಳ್ಳಿ ಇಡುತ್ತಾರೆ. ನಡೆಯುವಾಗ



ಕುಳ್ಳಿಗಳು ಅದುರಿ ಬೀಳಬಾರದು. ಕುಳ್ಳಿಗಳ ಬಾಯಿಯಲ್ಲಿ ಹಣತೆಗಳನ್ನಿಡುವರು. ಹಣತೆಯಲ್ಲಿ ಬಿಳಿ ಅರಿವೆಯಲ್ಲಿ ಕಟ್ಟಿದ ಹತ್ತಿಕಾಳುಗಳನ್ನು ಎಣ್ಣೆಯಲ್ಲಿ ಅದ್ದಿ ಅದಕ್ಕೆ ಬೆಂಕಿ ಹಚ್ಚಿ ಉರಿಯುವಂತೆ ಮಾಡುತ್ತಾರೆ.

ತನಾರತಿ ಎಂದರೆ ಕಂಚಿನ ಅಥವಾ ಸ್ಟೀಲ್‌ನ ಒಂದು ತಟ್ಟೆ. ಇದರ ನಡುವೆ ಗೋಧಿ ಹಿಟ್ಟಿನ ಹಣತೆ ಇರುತ್ತದೆ. ಈ ಹಣತೆಯಲ್ಲೂ ಬಟ್ಟೆಯಲ್ಲಿ ಕಟ್ಟಿ ಎಣ್ಣೆಯಲ್ಲಿ ಅದ್ದಿದ ಹತ್ತಿ ಬೀಜಗಳು ಇರುತ್ತವೆ. ಇದಕ್ಕೆ ಬೆಂಕಿ ಹಚ್ಚಿ ಧಗಧಗ ಉರಿಯುವಂತೆ ಮಾಡುತ್ತಾರೆ.

ಹರಕೆ ಹೊತ್ತವರು ಎರಡು ಮೂರು ದಿನ ಮುಂಚೆ ಮಾದಿಗರ ಮನೆಗೆ ಎಣ್ಣೆ, ಕೊಬ್ಬರಿ ಬಟ್ಟಲು, ನಾರು, ಕುಂಕುಮ ತೆಗೆದುಕೊಂಡು ಹೋಗುತ್ತಾರೆ. ಇಂತಹ ದಿನ ಅಂದರೆ ಮಂಗಳವಾರ ಅಥವಾ ಶುಕ್ರವಾರ ನಮಗೆ ಹುಟ್ಟಿಗೆ ಬೇಕು ಎಂದು ಹೇಳಿ ತಾವು ತಂದ ವಸ್ತುಗಳನ್ನು ಮಾದಿಗರ ಹಟ್ಟಿಗೆ ಕಟ್ಟುವರು. ಮಾದಿಗರು ನಸುಕಿನಲ್ಲಿ ಎದ್ದು ಸ್ನಾನ

ಮಾಡಿ ಹೊಲದಿಂದ ಲಕ್ಕಿ ಸೊಪ್ಪು ಮತ್ತು ಬೇವಿನ ಸೊಪ್ಪು ತರುತ್ತಾರೆ. ನಂತರ ಸೊಪ್ಪನ್ನು ಜೋಡಿಸಿ ಬೇಕಾದ ರೀತಿಯಲ್ಲಿ ಹುಟ್ಟಿಗೆ ಕಟ್ಟುತ್ತಾರೆ.

ಕೊಡದ ಪೂಜೆ, ತನಾರತಿ ಪೂಜೆಯಾದ ಮೇಲೆ ಮದುಮಗನ ತಾಯಿಯನ್ನು ಕಂಬಳಿಯ ಗದ್ದುಗೆಗೆ ಕರೆಯುತ್ತಾರೆ. ಮಾತಂಗಿಯರು ಅವಳ ಮುಖಕ್ಕೆ, ಕೈಕಾಲಿಗೆ, ಬೆನ್ನಿಗೆ, ಭುಜಗಳಿಗೆ ಕುಂಕುಮ ಭಂಡಾರದಿಂದ ಚಿಕ್ಕ ಚಿಕ್ಕ ಚುಕ್ಕೆಗಳನ್ನಿಟ್ಟು ಪೂಜೆ ಮಾಡುತ್ತಾರೆ. ಆಗ ವಾದ್ಯಗಳ ಸದ್ದು ತಾರಕಕ್ಕೇರುವುದು. ಮದುಮಗನಿಗೂ ಪೂಜೆ ನಡೆಯುತ್ತದೆ. ಆಗ ಆತ ಧೋತರ ಉಟ್ಟು ಬರಿ ಮೈಯಲ್ಲಿರುತ್ತಾನೆ. ಆತನ ಮುಖ ಮೈಗಳಿಗೆ ಪೂಜೆ ಮಾಡಿ ಬಾಯಿಗೆ ಬೇವಿನ ಸೊಪ್ಪು ಕೊಡುತ್ತಾರೆ. ನಂತರ ಮದುಮಗಳಿಗೆ, ಹೆಂಗಸರಿಗೆ ಹುಟ್ಟಿಗೆ ಉಡಿಸುತ್ತಾರೆ. ಒಳಗಿನ ಸೀರೆ ಕಳಚುತ್ತಾರೆ.

ಹುಟ್ಟಿಗೆ ಉಡಿಸಿ ಅದು ಕಳಚಿ ಬೀಳದಂತೆ ಸೊಂಟಕ್ಕೆ ಹಗ್ಗದಿಂದ ಬಿಗಿಯುತ್ತಾರೆ. ತಲೆಯ ಮೆಲೆ ಕೊಡ ಇಡುತ್ತಾರೆ. ಮದುಮಗನ ತಲೆಯ ಮೇಲೆ ತನಾರತಿ ಇಡುತ್ತಾರೆ. ಬಲಿಯ ಕುರಿಗೆ ಪೂಜೆ ಮಾಡಿ ಕೊರಳಿಗೆ ಹೂವಿನ ಹಾರ ತೊಡಿಸುತ್ತಾರೆ. ವಾದ್ಯ ಮೇಳದೊಂದಿಗೆ ಎಲ್ಲರೂ ಬಲಿ ಕುರಿಯೊಂದಿಗೆ ಎಲ್ಲಮ್ಮನ ಗುಡಿಗೆ ಮೆರವಣಿಗೆಯಲ್ಲಿ ಹೊರಡುತ್ತಾರೆ.

ಎಲ್ಲಮ್ಮನ ಗುಡಿಗೆ ಐದು ಪ್ರದಕ್ಷಿಣೆ ಹಾಕಿದ ಬಳಿಕ ಕಂಬಳಿ ಹಾಸಿ ಅದರ ಮೇಲೆ ಕೊಡವನ್ನು ಇಳಿಸುತ್ತಾರೆ. ಹುಟ್ಟಿಗೆ ಉಟ್ಟವರು ಮತ್ತು ತನಾರತಿ ಹೊತ್ತವರನ್ನು ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸುತ್ತಾರೆ. ನಂತರ ದೇವರಿಗೆ ನಮಸ್ಕರಿಸುತ್ತಾರೆ. ನಂತರ ಮಾತಂಗಿಯರಿಗೆ ಹೋಳಿಗೆ, ಕಡುಬು, ಹಿಂಡಿ ಪಲ್ಯದಿಂದ 'ಹಡ್ಲಿಗೆ' ತುಂಬುವರು. ಗುಡಿಯ ಎದುರು ಪರಶುರಾಮನ ಪೂಜೆ ಮಾಡುವರು. ಇಂಥ ಅಮಾನವೀಯ ಆಚರಣೆಯ ವಿರುದ್ಧ ಜನ ಎಚ್ಚೆತ್ತುಕೊಳ್ಳುವ ಅವಶ್ಯಕತೆ ಇದೆ. ಇದರ ಆಚರಣೆಯ

ಹಿಂದೆ ಯಾವ ವೈಜ್ಞಾನಿಕ ಕಥೆಯೂ ಇಲ್ಲ. ಇದು ಇರುವುದು ಒಂದೇ. ಅಂದರೆ ಅದು ಭಾರತೀಯ ಸಮಾಜದ ಅಧಃಪತನದ ಮಾದರಿ ಮಾತ್ರ

ಹಡ್ಲಿಗೆ(ಹಡಲಿಗೆ) ತುಂಬಿದ ಮೇಲೆ ಮಾತಂಗಿಯರು ಕುರಿ ಮಲಗುವಷ್ಟು ಜಾಗವನ್ನು ಕುಂಕುಮ, ಗುಲಾಲ, ಹಿಟ್ಟು, ಅಕ್ಕಿಯಿಂದ ಚೌಕಾಕರದ ರಂಗವಲ್ಲಿ ಮಾಡಿ ಸಿಂಗರಿಸುತ್ತಾರೆ. ನಡುವೆ ಕೊಬ್ಬರಿ ಬಟ್ಟಲು ಇಟ್ಟು ಅದರಲ್ಲಿ ದಕ್ಷಿಣೆ ಇಡಲು ಹೇಳುತ್ತಾರೆ. ಹಲಗೆ ಬಾರಿಸುವವ ಕುರಿಯ ಕಣ್ಣುಗಳಿಗೆ ಕುಂಕುಮ ಭಂಡಾರ ತುಂಬುತ್ತಾನೆ. ರಂಗದ ಒಳಗೆ ನಾಲ್ಕೂ ಕಾಲುಗಳನ್ನು ಹಿಡಿದು ಮಲಗಿಸುತ್ತಾನೆ. ಕುರಿಯ ಮುಖವನ್ನು ಮಾತಂಗಿಯರು ಬೇವಿನ ಸೊಪ್ಪಿನಿಂದ ಮುಚ್ಚುವರು. ಹುಟ್ಟಿಗೆ ಹೊತ್ತವರು ಮತ್ತು ನೆರೆದವರು ಉಧೋ ಉಧೋ ಎನ್ನುತ್ತಾ ಕುರಿಯ ಮೇಲೆ ಕುಂಕುಮ ಮೇಲೆ ಚೆಲ್ಲುವರು. ಕುರಿಯನ್ನು ಎಬ್ಬಿಸಿ ವಾದ್ಯಮೇಳದೊಂದಿಗೆ ಮನೆಗೆ ಹೋಗುತ್ತಾರೆ. ನಂತರ ಮನೆಯಲ್ಲಿ ಊರಿನ ಮುಸ್ಲಿಂ ಜನಾಂಗಕ್ಕೆ ಸೇರಿದವರಿಂದ ಕುರಿ ಕೊಮ್ಮಿಸುತ್ತಾರೆ. ನಂತರ ಅಡುಗೆ ಮಾಡಿ ದೇವಿಗೆ ನೈವೇದ್ಯ ಕಳುಹಿಸುತ್ತಾರೆ. ನಂತರ ಕೊಡ ಹೊತ್ತವರ ಹಡ್ಲಿಗೆ ತುಂಬಿ ಉಪವಾಸ ಬಿಡಿಸುತ್ತಾರೆ. ನಂತರ ಎಲ್ಲರಿಗೂ ಊಟ.

ಚಿತ್ರದುರ್ಗ ಜಿಲ್ಲೆಯ ಹುಲೇಕಲ್ ನಲ್ಲಿ ವಿಧಿ-ವಿಧಾನಗಳು ಸ್ವಲ್ಪ ಬದಲಾಗಿವೆ. ಇಲ್ಲಿನ ದೇವತೆ ಕರಿಯವ್ವ, ಇಲ್ಲಿ ಬ್ರಾಹ್ಮಣರು, ಲಿಂಗಾಯತರು, ಕ್ರೈಸ್ತರು ಮತ್ತು ಮುಸ್ಲಿಮರನ್ನು ಹೊರತುಪಡಿಸಿ ದಲಿತರೂ ಸೇರಿದಂತೆ ಎಲ್ಲ ಜಾತಿಯವರಲ್ಲಿ ಇದನ್ನು ಆಚರಿಸುವವರಿದ್ದಾರೆ. ದಾವಣಗೆರೆಯಂತಹ ವ್ಯಾಪಾರಕ್ಕೆ ಪ್ರಸಿದ್ಧವಾದ ನಗರದಲ್ಲೂ ಬೇವಿನುಡುಗೆ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಆಚರಣೆಯಲ್ಲಿದೆ. ಕೋಣ ಕುರಿಗಳ ಬಲಿಗಳ ಭರಾಟೆ ಮತ್ತು ಮತ್ತೇರಿದ ವಾತಾವರಣದಲ್ಲಿ ಇಲ್ಲಿನ ದುಗ್ಗಮ್ಮ ದೇವಿಯ ಜಾತ್ರೆಯಲ್ಲಿ ಈ ಆಚರಣೆ ನಡೆಯುತ್ತದೆ.

'ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳು' ಎಂಬ ಪುಸ್ತಕದಲ್ಲಿ ಈ ಆಚರಣೆಗಳ ಕುರಿತು ವಿವರಗಳನ್ನು ನೀಡಿರುವ ಡಾ. ಚೆನ್ನಣ್ಣ ವಾಲೀಕಾರ ಅವರ ಪ್ರಕಾರ ಈ ಆಚರಣೆಗೆ ಮುಖ್ಯ ಕಾರಣಗಳು ಎಂದರೆ ಬಡತನ, ಅಜ್ಞಾನ, ಅಸಹಾಯಕತೆ, ಬದುಕಿನ ಒತ್ತಡಗಳು, ಗ್ರಾಮಗಳ ಮುಖಂಡರು, ಜನನಾಯಕರು, ಸರಕಾರಿ ಅಧಿಕಾರಿಗಳು ಮತ್ತು ಕಾಮುಕ ದೃಷ್ಟಿ ಹೊಂದಿರುವ ಸಮಾಜದ ಎಲ್ಲ ವರ್ಗಗಳ ಜನರು, ಮಕ್ಕಳಾಗದವರು ಮಕ್ಕಳಾಗುವಂತೆ, ಮಳೆ-ಬೆಳೆ ಸರಿಯಾಗಿ ಆಗಲು, ಸಂಪತ್ತು ಹೆಚ್ಚಾಗಲು, ದನ-ಕರು-ಕುರಿ-ಮರಿ ಹೆಚ್ಚಾಗಲು, ರೋಗಗಳಿಂದ ಗುಣವಾಗಲು, ಸಾಯುತ್ತಿರುವ ಮಕ್ಕಳನ್ನು ಉಳಿಸಲು ಬೇಡಿ ಹರಕೆ ಹೊತ್ತುಕೊಂಡ ಜನರು ಈ ಆಚರಣೆಯನ್ನು ನಡೆಸುತ್ತಾರೆ ಎಂದು ಹೇಳಿದ್ದಾರೆ.

ಇಂತಹ ಆಚರಣೆಗಳಿಗೆ ಪ್ರೋತ್ಸಾಹ ನೀಡಿ ಅವುಗಳನ್ನು ಪೋಷಿಸುವುದರ ಹಿಂದೆ ಆರ್ಥಿಕ ಹಾಗೂ ವ್ಯಾಪಾರಿ ಹಿತಾಸಕ್ತಿಗಳೂ ಕೆಲಸ ಮಾಡುತ್ತವೆ. ಇಂತಹ ಜಾತ್ರೆಗಳು ಹಲವರಿಗೆ ಕೆಲಸ, ಊಟ, ಬಟ್ಟೆ ಇತ್ಯಾದಿ ಒದಗಿಸಿಕೊಡುತ್ತವೆ. ಸಾವಿರಾರು

ಜನರು ಭಾಗವಹಿಸುವುದರಿಂದ ಭಾರೀ ವ್ಯಾಪಾರ ವಹಿವಾಟುಗಳು ನಡೆಯುತ್ತವೆ. ಹಾಯ್ ಬೆಂಗಳೂರು ಪತ್ರಿಕೆಯ ೧೨.೦೨.೨೦೦೦ ನೇ ಸಂಚಿಕೆಯ ಲೇಖನದಲ್ಲಿ ದಾವಣಗೆರೆಯ ದುಗ್ಗವ್ವ ಜಾತ್ರೆಯ ಆರ್ಥಿಕ ವಹಿವಾಟನ್ನು ಅಂದಾಜಿಸುವ ಪ್ರಯತ್ನ ಮಾಡಲಾಗಿದೆ. ಒಂದು ಕುರಿಗೆ ಸರಾಸರಿ ಎರಡು ಸಾವಿರ ರೂಪಾಯಿಗಳಂತೆ ಸುಮಾರು ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಕಿಮ್ಮತ್ತಿನ ಕುರಿಗಳು ಬೀಳುತ್ತವೆ. ಮಸಾಲೆ ವೆಚ್ಚ ಕನಿಷ್ಟ ಹತ್ತುಲಕ್ಷ ರೂಪಾಯಿಗಳು, ಮಧ್ಯ ಮಾರಾಟದ ಲೆಕ್ಕ ಸಿಗುವುದು ದುಸ್ತರವಾದರೂ ಒಂದು ಕೋಟಿ ದಾಟಿದರೆ ಸೋಜಿಗವೇನಿಲ್ಲ. ಹಬ್ಬದ ಬಟ್ಟೆ ಇತ್ಯಾದಿಗಳ ಖರೀದಿ, ಆರೇಳು ಲಾರಿ ಬೇವಿನ ಸೊಪ್ಪು, ಕೋಳಿಗಳ ಲೆಕ್ಕ ಬೇರೆ. ಒಟ್ಟು ಸುಮಾರು ಐದು ಕೋಟಿ ರೂಪಾಯಿ ವ್ಯವಹಾರ ಈ ಜಾತ್ರೆಯಿಂದ ನಡೆಯುತ್ತದೆ ಎಂದು ತಿಳಿಸಿತ್ತು.

ಲೇಖನದ ಪ್ರಕಾರ ಬೇವಿನುಡುಗೆ ಆಚರಿಸುವುದರ ಹಿಂದೆ ಪುರೋಹಿತ ಶಾಹಿ ದುರಾಸಕ್ತಿಗಳಿವೆ. ಮೇಲ್ವರ್ಗದ ವಿಕೃತ ಕಾಮನೆಗಳಿವೆ. ಈ ಆಚರಣೆ ವಿರುದ್ಧ ಹಿಂದೆ ಮಾಜಿ ಶಾಸಕ ಪಂಪಾಪತಿ, ಡಾ.ಬಿ.ಎಂ.ತಿಪ್ಪೇಸ್ವಾಮಿ ಮುಂತಾದವರು ಪ್ರತಿಭಟನೆ ಮಾಡಿದ್ದರೂ ಸಹ ಪ್ರಯೋಜನವಾಗಿಲ್ಲ. ಆ ಜನರಲ್ಲಿ ಆಳವಾಗಿ ಬೇರೂರಿರುವ ಈ ಆಚರಣೆಯ ನಿಯಂತ್ರಣಕ್ಕೆ ರಾಜಕೀಯ ಸಂಕಲ್ಪದ ಅಗತ್ಯವಿದೆ. ಒಟ್ಟಾರೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸುಧಾರಣೆಯಿಂದ ಇಂತಹ ಆಚರಣೆಗಳು ನಿಧಾನವಾಗ ಬಹುದಾದರೂ ಆಡಳಿತ ವರ್ಗ ಇಂತಹ ಆಚರಣೆಯನ್ನು ನಿಷೇಧಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ ಇದನ್ನು ಬಹುತೇಕ ನಿಯಂತ್ರಣಕ್ಕೆ ತರಲು ಸಾಧ್ಯ.

ಪೋಲಿಸ್ ಕಾಯಿದೆಯಡಿಯಲ್ಲಿ ಸಾರ್ವಜನಿಕವಾಗಿ ನಡೆಯುವ ಅಸಹ್ಯಕರ ಹಾಗೂ ಅಸಭ್ಯ ಆಚರಣೆಯನ್ನು ನಿಯಂತ್ರಿಸಬಹುದು. ಸಂವಿಧಾನದ ವಿಧಿ ೨೫ರಲ್ಲಿ ಧಾರ್ಮಿಕ ಹಕ್ಕನ್ನೂ ನೀಡಿದರೂ ಸಾರ್ವಜನಿಕರ ನೈತಿಕ ಆರೋಗ್ಯಕರ ಧಕ್ಕೆ ತರುವ ಯಾವುದೇ ಆಚರಣೆಯನ್ನು ನಿಷೇಧಿಸಲು ಅವಕಾಶವಿದೆ. ದೇವದಾಸಿ ಪದ್ಧತಿ ಕುರಿತ ಕಾನೂನು ಅಭಿಪ್ರಾಯ ಈ ಆಚರಣೆಗೂ ಅನ್ವಯಿಸುತ್ತದೆ ಎಂದು ಅರಿಯಬೇಕಾಗಿದೆ.

**ಬಾಣಂತಿ, ಋತುಮತಿಯಾದವರನ್ನು ಊರಿನಿಂದ ಹೊರಗಿಡುವುದು**

ದಲಿತ ಹಾಗೂ ಹಿಂದುಳಿದ ವರ್ಗಗಳ ಹೆಣ್ಣುಮಕ್ಕಳ ಶಿಕ್ಷಣಕ್ಕೆ, ಅವರ ಆರ್ಥಿಕ ಸ್ವಾವಲಂಬನೆಗೆ, ಆರೋಗ್ಯಕ್ಕೆ ಹಾಗೂ ಶಿಶುಮರಣ ದರ ಇಳಿಸುವುದಕ್ಕೆ ಮಹಿಳೆಯರ ಹೆರಿಗೆ, ಬಾಣಂತಿತನ ಇತ್ಯಾದಿಗಳಿಗೆ ಆರೋಗ್ಯಕರ ಸವಲತ್ತುಗಳನ್ನು ಒದಗಿಸುವುದಕ್ಕೆ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಈ ಸಂದರ್ಭದಲ್ಲಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಹಸಿ ಶಿಶುವಿನ ಸಹಿತ ಬಾಣಂತಿಯರನ್ನು, ಋತುಮತಿಯರನ್ನು ಊರಿನಿಂದಲೇ ಹೊರಗಿಟ್ಟು ಅಲ್ಲಿ ತೀರಾ ಕಚ್ಚಾ ಗುಡಿಸಲಿನಲ್ಲಿ ವಾಸಿಸುವಂತೆ ಮಾಡುವ ಅತ್ಯಂತ ಕ್ರೂರ ಹಾಗೂ ಅಮಾನವೀಯ ಆಚರಣೆಯೊಂದು ದಲಿತ ವರ್ಗದವರಲ್ಲಿ

ರಾಜಾರೋಷವಾಗಿ ನಡೆಯುಯುತ್ತಿದೆ. ತುಮಕೂರು ಚಿತ್ರದುರ್ಗ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಕೋಲಾರ ಮುಂತಾದ ಜಿಲ್ಲೆಗಳಲ್ಲಿರುವ ಹಳ್ಳಿಗಳಲ್ಲಿ ಅಥವಾ ಹಟ್ಟಿಗಳಲ್ಲಿ ದೊಡ್ಡಿಗಳಲ್ಲಿ ಬೇರ ಬೇರೆ ಸ್ವರೂಪಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಈ ಆಚರಣೆ ವ್ಯಾಪಕವಾಗಿ ನಡೆಯುತ್ತದೆ. ದಲಿತ ವರ್ಗಕ್ಕೆ ಸೇರಿದ ಕಾಡುಗೊಲ್ಲರು ಅಥವಾ ಕರಡಿಗೊಲ್ಲರು ಈ ಆಚರಣೆಯನ್ನು ಹೆಚ್ಚಾಗಿ ನಡೆಸುತ್ತಾರೆ.

ಇವುಗಳಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ವೀರಲಗೊಂದಿ ಗೊಲ್ಲರ ಹಟ್ಟಿ, ಕೃಷ್ಣಗಿರಿಯ ಜೂಲಪ್ಪನ ಗೊಲ್ಲರ ಹಟ್ಟಿ, ಕೃಷ್ಣಗಿರಿಯ ಹಟ್ಟಿ, ಆಲದ ಮರದ ಹಟ್ಟಿ, ಈರಮುದ್ದನ ಹಟ್ಟಿ, ಚನ್ನಕೇಶವಪುರದ ದೇವರ ಹಟ್ಟಿ, ಕೊತ್ತೂರು, ಸಂತೆಬಂಡೆ, ಪೆಮ್ಮನಹಳ್ಳಿ, ಗೌಡಗಾರನ ಹಳ್ಳಿ, ಬ್ಯಾಡನೂರು ಹಟ್ಟಿ, ಚನ್ನಸಾಗರದ ಹಟ್ಟಿ, ಈರಣ್ಣನ ಹಟ್ಟಿ, ಜೋಗೇರ ಹಟ್ಟಿ, ಜುಂಬಪ್ಪನ ಹಟ್ಟಿ, ಮಳವಳ್ಳಿ, ಕೆಂಚಗಾನ ಹಳ್ಳಿ, ಬೀಮನ ಕುಮಟೆ, ಮೇಗಳ ಪಾಳ್ಯ, ದಲವಾಯಿ ಹಳ್ಳಿ, ಯಲ್ಲಪ್ಪ ನಾಯಕನ ಹಳ್ಳಿ, ದಳವಳ್ಳಿ ಹಟ್ಟಿ, ಮಾರಮ್ಮನ ಹಳ್ಳಿ, ಪೋತಕಾನ ಹಳ್ಳಿ, ಮಧುಗಿರಿ ತಾಲೂಕಿನ ಲಕಲಿ ಹಟ್ಟಿ, ಬೆಡತ್ತೂರು ಹಟ್ಟಿ, ಶ್ರವಣಗುಡಿ ಹಟ್ಟಿ, ಪುಮಾಚಿ ಹಟ್ಟಿ, ಕಶಾಪುರ ಬಸವನ ಹಳ್ಳಿಯ ಪಡಸಾಲೆ ಹಟ್ಟಿ, ತಿಪ್ಪಗಾನ ಹಳ್ಳಿ, ಮಾಡಗಾನ ಹಟ್ಟಿ, ಸೋಗೇನ ಹಳ್ಳಿ, ಗಂಜಲಗುಂಡೆಯ ದೊಡ್ಡ ಹಟ್ಟಿ ಕೊರಟಗೆರೆಯ ತಾಲೂಕಿನ ಪಾತಗಾನ ಹಳ್ಳಿ ಹಟ್ಟಿ, ಎಲೆರಾಪುರ ಹಟ್ಟಿ, ಹೊಸಕಟ್ಟೆ ಹಟ್ಟಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲೂಕಿನ ಸಾತನೂರು ಹೋಬಳಿಯ ಅಚ್ಚಲಿ ಸಮೀಪದ ಗೊಲ್ಲರ ದೊಟ್ಟಿ, ಸಾತನೂರು ಬಳಿಯ ಅಲಸೂರಿನ ಗೊಲ್ಲರ ದೊಡ್ಡಿ ಕೋಡಿಹಳ್ಳಿ ಹೋಬಳಿಯ ನಾರಾಯಣಪುರ ಗೊಲ್ಲರ ದೊಡ್ಡಿ, ಎಯ್ಯಂಬಳ್ಳಿ ಹೋಬಳಿಯ ಮುಳ್ಳಲಿ ಬಳಿಯ ದೊಡ್ಡಿ, ಚನ್ನಪಟ್ಟಣ ತಾಲೂಕಿನ ವಿರೂಪಾಕ್ಷಿ ಗ್ರಾಮದ ಬಳಿ ಇರುವ ದೊಡ್ಡಿ, ರಾಮನಗರ ತಾಲೂಕಿನ ಕೈಲಾಂಚ ಹೋಬಳಿ ನಿಂಗಸಂದ್ರ ಹಾಲೆ ಮರದೊಡ್ಡಿ, ದೇವರದೊಡ್ಡಿ ಮುಂತಾದ ಕಡೆಗಳಲ್ಲಿ ಈ ಅನಿಷ್ಟ ಸಂಪ್ರದಾಯ ಜಾರಿಯಲ್ಲಿರುವುದು ಕಂಡುಬರುತ್ತದೆ.

ಕಾಡುಗೊಲ್ಲರು ಹಲವಾರು ವಿಚಿತ್ರ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಬೇರೆ ಜನಾಂಗದವರು ವಾಸ ಮಾಡುವ ಹಳ್ಳಿಯಲ್ಲಿ ಅವರ ವಾಸವಿಲ್ಲ. ಊರಿನಿಂದ ದೂರದಲ್ಲಿ ವಾಸಿಸುತ್ತರೆ. ಹೊಲೆಯ ಹಾಗೂ ಮಾದಿಗರು ವಾಸ ಮಡುವ ಕಡೆಗಳಿಗೆ ಇವರು ಸುಳಿಯುವುದುಲ್ಲ. ಅಲ್ಲಿಗೆ ಹೋದರೂ ಸ್ನಾನ ಮಾಡಿ ಮನೆ ಪ್ರವೇಶಿಸುತ್ತಾರೆ. ದಲಿತರೂ ಇವರ ಹಟ್ಟಿಗೆ ಬರುವಂತಿಲ್ಲ. ಬಂದರೆ ತಮ್ಮ ದೇವರಾದ ಹಾಲೇವಾಡಿಯ ಜುಂಜಪ್ಪನಿಗೆ ಪೂಜೆ ಮಾಡಿ ಶುದ್ಧೀಕರಣ ಮಾಡುತ್ತರೆ. ಈ ಸಮುದಾಯದ ಹೆಂಗಸರು ಮೇಲ್ವರ್ಗದ ಜನರ ಸಮಾರಂಭಗಳಲ್ಲಿ ಊಟ ಮಾಡುವುದಿಲ್ಲ. ಬೇರೆ ಕಡೆನೀರು ಕುಡಿಯುವುದಿಲ್ಲ. ಬೆಳಿಗ್ಗೆ ಮನೆಯಲ್ಲಿ ನೀರು ಕುಡಿದು ದುಡಿಯಲು ಹೋದರೆ ಸಂಜೆ ಮನೆಗೆ ಬಂದೇ ನೀರು ಕುಡಿಯುತ್ತಾರೆ. ಹೆಣ್ಣುಮಕ್ಕಳು ಪೇಟೆಗೆ ಹೋಗುವಂತಿಲ್ಲ. ವಿಧವಾ ವಿವಾಹಕ್ಕೆ ಅವಕಾಶವೇ ಇಲ್ಲ. ವಿಷಪೂರಿತ ಹಾವು ಕಡಿದರೂ ಹಾಲಪ್ಪನ

ಪೂಜೆ ಮತ್ತು ತೀರ್ಥವೇ ಮದ್ದು. ಇವರ ಮನೆದೇವರಾಗಿರುವ ಹಾಲೇ ವಾಡಿಯ ಜುಂಜಪ್ಪ ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಹಾಲೇವಾಡಿಯ ಗ್ರಾಮದೇವತೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಕಾಳಗಟ್ಟಮ್ಮ ಇವರ ಹೆಣ್ಣು ದೇವರು.

ಈ ಪ್ರತಿಯೊಂದು ಹಳ್ಳಿ, ಹಟ್ಟಿ, ದೊಡ್ಡಿಗಳಲ್ಲಿಯೂ ಬಾಣಂತಿಯರನ್ನು, ಮುಟ್ಟಾದವರನ್ನು ಊರಿನಿಂದ ಹೊರಗಿರಿಸುವ ಅಮಾನವೀಯ ಆಚರಣೆ ಅತ್ಯಂತ ಅಮಾನವೀಯಯವಾಗಿ ನಡೆಯುತ್ತಿದ್ದು, ಇತ್ತೀಚೆಗಷ್ಟೆ ಸ್ವಲ್ಪ ಸಡಿಲವಾಗುತ್ತಿದೆ. ಆದರೂ ಆಚರಣೆಗೆ ಗುರಿಯಾಗುವ ಹೆಣ್ಣು ಮಕ್ಕಳು ಮತ್ತು ತಾಯಂದಿರು ಏಕಾಂತದಿಂದ, ಮಾನಸಿಕ ಖಿನ್ನತೆಯಿಂದ, ಅನಾರೋಗ್ಯ ಮತ್ತು ಅಪೌಷ್ಟಿಕತೆಯಿಂದ ಸಾಮಾಜಿಕ ಸಮಪರ್ಕರಹಿತವಾಗಿ ತೀರಾ ನೋವು ಅನುಭವಿಸುತ್ತಿದ್ದಾರೆ. ಪಾವಗಡ ತಾಲೂಕಿನ ಕೆಲವು ಹಳ್ಳಿಗಳಲ್ಲಂತೂ ಅತ್ಯಂತ ಕಠಿಣವಾದ ನಿಯಮಗಳನ್ನು ಅಚರಿಸಲಾಗುತ್ತದೆ. ಜನರ ಬಡತನ, ಅನಕ್ಷರತೆ, ಅಜ್ಞಾನಗಳಿಂದಾಗಿ ಮತ್ತು ಸಾಮಾಜಿಕವಾಗಿ ಬೆಂಬಲ ನೀಡುವ ವ್ಯವಸ್ಥೆ ಮತ್ತು ಸಂಸ್ಥೆಗಳ ಕೊರತೆಯಿಂದಾಗಿ ಇಂತಹ ಆಚರಣೆಗಳು ಹುಟ್ಟಿ ಯಾವುದೇ ವಿರೋಧವಿಲ್ಲದೆ ಹಲುಸಾಗಿ ಬೆಳೆಯುತ್ತಿವೆ.

ಕರಡಿಗೊಲ್ಲರು ಅಥವಾ ಕಾಡುಗೊಲ್ಲರು ಜನಾಂಗದಲ್ಲಿ ಹೆಣ್ಣುಮಕ್ಕಳು ಬಡವರಿರಲಿ, ಶ್ರೀಮಂತರಿರಲಿ, ವಿದ್ಯಾವಂತರಿರಲಿ, ಅವಿದ್ಯಾವಂತರಿರಲಿ ಪ್ರಸವದ ನೋವು ಪ್ರಾರಂಭವಾಗಿ ಮಗು ಜನಿಸಿದ ನಿಮಿಷದಲ್ಲೇ ಮಗುವಿನ ಹೊಕ್ಕಳು ಬಳ್ಳಿಯನ್ನು ಸಹ ಕೊಯ್ಯದೆ ಊರಿಂದ ಹೊರಹೋಗಬೇಕು. ಹಸಿ ಮಗುವನ್ನು ಒಂದು ಮೊರದಲ್ಲಿ ಹಾಕಿಕೊಂಡು ಯಾರ ಸಹಾಯವೂ ಇಲ್ಲದೆ ಊರಿಂದ ನಡೆದುಕೊಂಡು ಹೋಗಿ ಅರ್ಧದಿಂದ ಒಂದು ಕೀಲೋಮೀಟರ್ ದೂರದಲ್ಲಿ ಒಂದು ಕಚ್ಚಾ ಗುಡಿಸಲಿನಲ್ಲಿ (ಇವುಗಳನ್ನು ಗುಬ್ಬಗಳು, ಗುಡ್ಲುಗಳೆಂದು ಕರೆಯುತ್ತಾರೆ) ವಾಸಿಸಬೇಕು. ಇಷ್ಟು ಕಠಿಣವಾದ ಆಚರಣೆ ಪಾವಗಡ ಮತ್ತು ಮಧುಗಿರಿ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಈಗಲೂ ಆಚರಣೆಯಲ್ಲಿದೆ. ಆದರೆ ಕೆಲವು ಹಳ್ಳಿಗಳಲ್ಲಿ ಜನರ ತಿಳುವಳಿಕೆ ವಿಸ್ತಾರವಾದಂತೆ ಈಗ ಸ್ವಲ್ಪ ಸಡಿಲವಾಗುತ್ತಿದೆ. ಆದರೂ ಸಹ ಈ ಆಚರಣೆಯನ್ನೂ ಸ್ವಯಂ ನಿಲ್ಲಿಸಲೂ ಮುಕ್ಕಾಲು ಪಾಲು ಜನರಿಗೆ ಇಂದಿಗೂ ಇಷ್ಟವಿಲ್ಲ. ಕೆಲವು ಕಡೆಗಳಲ್ಲಿ ಹಲವಾರು ರೂಪಾಂತರಗೊಂಡ ಆಚರಣೆಯನ್ನು ಸಡಿಲವಾದ ನಿಯಮಗಳೊಂದಿಗೆ ಪಾಲಿಸುತ್ತಾರೆ. ಮಳೆ, ಗಾಳಿ, ಚಳಿ, ಗುಡುಗು, ಮಿಂಚು, ತಾಯಿಯ ಅನಾರೋಗ್ಯ, ನಿಶ್ಯಕ್ತಿ, ಏನೇ ಇದ್ದರೂ ಈ ಆಚರಣೆಗೆ ಅಡ್ಡಿ ಬರದು. ಮಗು ಹುಟ್ಟಿದ ಕೂಡಲೇ ಹೊರನಡೆಯಲೇ ಬೇಕು. ಯಾರ ನೆರವೂ ಆಕೆಗೆ ಇಲ್ಲದಿರುವುದರಿಂದ ಹೆರಿಗೆಯ ನೋವಿನ ಜೊತೆಗೆ ಮಗುವಿನ ಪೋಷಣೆಯನ್ನೂ ಮಾಡಬೇಕು. ಊಟವನ್ನೂ ತಾನೇ ಸಿದ್ದ ಪಡಿಸಿಕೊಳ್ಳಬೇಕು. ತನ್ನ ಮತ್ತು ಮಗುವಿನ ಬಟ್ಟೆ ಬರೆಗಳನ್ನು ತಾನೇ ತೊಳೆಯಬೇಕು. ಕೆಲವು ಕಡೆಗುಡಿಸಲುಗಳ ಸುತ್ತ ಕಳ್ಳಿ ಬೇಲಿಯನ್ನೂ ಹಾಕಿರುತ್ತಾರೆ. ಇಂತಹ ಬಾಣಂತಿಯರ ಶುಶೂಷೆಗಾಗಿ ವೈದ್ಯರು, ದಾದಿಯರನ್ನು ಹೋಗಲೂ ಬಿಡುವುದಿಲ್ಲ. ಕೆಲವು ಕಡೆ,

ಮುಖ್ಯವಾಗಿ ಕನಕಪುರ ತಾಲೂಕಿನಲ್ಲಿ ಬಸುರಿಗೆ ಹೆರಿಗೆ ನೋವು ಬಂದಾಗ ಊರಿಂದ ಸ್ವಲ್ಪವೇ ಹೊರಗಿರುವ ಗುಡಿಸಲಿಗೆ ಸಾಗಿಸುತ್ತಾರೆ. ಹೆತ್ತ ನಂತರ ಊರಿಂದ ದೂರವಿರುವ ಗುಡಿಸಿಲಿಗೆ ವರ್ಗಾಯಿಸುತ್ತಾರೆ. ಇಲ್ಲೆಲ್ಲ ಅಗಸರ ಸೂಲಗಿತ್ತಿಯ ಹೆರಿಗೆ ಮಾಡಿಸಲು ಅವಕಾಶವಿದೆ. ಆಕೆಗೆ ಧಾನ್ಯ, ಒಂದು ಮೇಕೆ ಮತ್ತು ಸ್ವಲ್ಪ ಹಣ ಸಿಗುತ್ತದೆ. ಹೆರಿಗೆಯಾದ ಹೆಣ್ಣು ಸತ್ತರೆ ಆಕೆಯ ಗಂಡನಾಗಲೀ, ಇತರೆ ಸಂಬಂಧಿಗಳಾಗಲೀ, ಊರಿನವರಾಗಲೀ, ಶವವನ್ನು ಮುಟ್ಟುವುದಿಲ್ಲ. ಅಗಸರಿಗೆ ಕೂಲಿ ಕೊಟ್ಟು ಅಂತ್ಯ ಸಂಸ್ಕಾರ ಮಾಡಿಸುತ್ತಾರೆ. ಅಂತ್ಯಕ್ರಿಯೆಯಲ್ಲಿ ಬಳಸಿದ ವಸ್ತುಗಳನ್ನು ಮನೆಗೆ ತರುವುದಿಲ್ಲ. ಈ ಆಚರಣೆಯನ್ನು ವಿರೋಧಿಸುವವರನ್ನು ಜಾತಿಯಿಂದ ಹೊರಹಾಕಲಾಗುತ್ತದೆ. ಇಂತಹ ಶಿಕ್ಷೆ ಬಹುಶಃ ಜಗತ್ತಿನ ಯಾವ ಸಮಾಜ ಹಾಗೂ ಸಮುದಾಯದ ಹೆಣ್ಣುಮಕ್ಕಳಿಗೂ ಒದಗಿರುವುದು ಚರಿತ್ರೆಯಲ್ಲಿ ಕಂಡುಬರುವುದಿಲ್ಲ.

ಹೆರಿಗೆಯ ಸಂದರ್ಭದಲ್ಲಿ ಇಡೀ ಹಳ್ಳಿಗೆ ಹಟ್ಟಿಗೆ ಸೂತಕವಿರುತ್ತದೆ. ಹಟ್ಟಿಯ ಯಾವ ಜನರೂ ಸ್ವಂತ ತಂದೆ, ತಾಯಿ, ಗಂಡ, ಸಂಬಂಧಿಕರು ಕೂಡ ಬಾಣಂತಿಯನ್ನು ಮುಟ್ಟುವುದಿಲ್ಲ. ಇದರ ಜತೆಗೆ ಆ ಹಟ್ಟಿಯಲ್ಲಿರುವ ದೇವರಿಗೂ ಸೂತಕ ಇರುತ್ತದೆ. ಆ ಸಂದರ್ಭದಲ್ಲಿ ನಾಲ್ಕಾರು ದಿನ ದೇವಾಲಯದ ಬಾಗಿಲು ತೆರೆಯುವುದಿಲ್ಲ. ಪೂಜೆ ಇರುವುದಿಲ್ಲ. ಊರಿಂದ ಹೊರಗಿರುವ ಬಾಣಂತಿಯರನ್ನು ಹಿಂದೆ ಮೂರು ತಿಂಗಳು ಊರೊಳಗೆ ಕರೆಸಿಕೊಳ್ಳುತ್ತಿರಲಿಲ್ಲ. ಈಗಲೂ ಕೆಲವು ಹಳ್ಳಿಗಳಲ್ಲಿ ಈ ನಿಯಮ ಬದಲಾಗಿಲ್ಲ. ಕೆಲವೆಡೆ ಒಂದು ತಿಂಗಳು, ಕೆಲವೆಡೆ, ೧೫ ರಿಂದ ೨೦ದಿನಗಳ ಕಾಲ ಬಾಣಂತಿಯರನ್ನು ಹೊರಗಿಡಲಾಗುತ್ತದೆ. ಊರಿನ ಒಳಗೆ ಮತ್ತು ಮನೆಯ ಒಳಗೆ ತಾಯಿ ಮತ್ತು ಮಗುವನ್ನು ಕರೆತರುವ ದಿನ ಜನಾಂಗದ ದೇವರಿಗೆ ಪೂಜೆ ಮಾಡಿಸಿ ತಾಯಿ, ಮಗುವಿಗೆ, ಗಂಜಳ ಹಾಕಿ, ಜೆನಿಗೆ ಹಾಕಿಸಿಕೊಳ್ಳಬೇಕು. ಕೆಲವು ಕಡೆ ಜೆನಿಗೆ ಕುರಿಯ ಹಾಲು ಕುಡಿಸುತ್ತಾರೆ. ನಂತರವಷ್ಟೇ ಮನೆಯೊಳಗೆ ಪ್ರವೇಶ. ಅದೇ ಸಂದರ್ಭದಲ್ಲಿ ದೇವರ ಪೂಜಾರಿಯು ಮಗುವಿಗೆ ನಾಮಕರಣ ಮಾಡಿ ಆಶೀರ್ವದಿಸುತ್ತಾನೆ. ಹೆಸರೇ ಮಗುವಿಗೆ ಶಾಶ್ವತವಾಗುತ್ತದೆ.

ಬಾಣಂತಿಯರು ಊರ ಹೊರಗಿರುವ ಸಂದರ್ಭದಲ್ಲಿ ರೋಗರುಜಿನಗಳಿಗೆ, ಮಾನಸಿಕ ಅಸ್ವಸ್ಥತೆಗೆ, ದೈಹಿಕ ಹಿಂಸೆಗೆ, ಲೈಂಗಿಕ ಶೋಷಣೆಗಳಿಗೆ, ಖಿನ್ನತೆಗೆ ಒಳಗಾಗುವ ಸಂದರ್ಭಗಳೇ ಹೆಚ್ಚು. ಈ ಜನಾಂಗದ ಕಲಿತ ಮತ್ತು ತಿಳುವಳಿಕೆ ಇರುವ ಹೆಣ್ಣು ಮಕ್ಕಳು ಈ ಆಚರಣೆಯನ್ನೂ ಮನಃಪೂರ್ವಕ ಒಪ್ಪದಿದ್ದರೂ ಮೌನವಾಗಿ ಪ್ರತಿಭಟಿಸುತ್ತಿದ್ದಾರೆ. ಇದನ್ನೇ ಸರ್ಕಾರ ಅಮಾನವೀಯ ಆಚರಣೆಯಡಿಯಲ್ಲಿ ಇವರಿಗೆ ಶಿಕ್ಷಿಸುವ ಮೂಲಕ ಹತೋಟಿಗೆ ತರಬಹುದಾಗಿದೆ.

**ಹಕ್ಕಿಪಿಕ್ಕಿಯರಲ್ಲಿ ಈ ಆಚರಣೆ**

ಕರ್ನಾಟಕ ಹಲವಾರು ಕಡೆ ಇರುವ ಅಲೆಮಾರಿ ಜನಾಂಗವಾದ ಹಕ್ಕಿಪಿಕ್ಕಿಯರಲ್ಲಿಯೂ ಈ ಆಚರಣೆ ಜಾರಿಯಲ್ಲಿದೆ. ಇವರಲ್ಲಿ ಈ ಆಚರಣೆ ಇನ್ನೂ ಕ್ರೂರವಾಗಿದೆ. ಹೆಣ್ಣು ತನ್ನ ಹೆರಿಗೆಯನ್ನು ಊರಿಂದ ಹೊರಗಿನ ಗುಡಿಸಿಲಿನಲ್ಲಿ ತಾನೇ



ಮಾಡಿಕೊಳ್ಳಬೇಕು. ಹೊಕ್ಕುಳ ಬಳ್ಳಿಯನ್ನು ಕೂಡ ಬಳೆಯ ಚೂರು ಅಥವಾ ಮರದ ತುಂಡಿನಿಂದ ಆಕೆಯೇ ಕತ್ತರಿಸಿಕೊಂಡು ಸೀರೆಯ ನೂಲಿನಿಂದ ಹೊಕ್ಕಳನ್ನು ಕಟ್ಟಬೇಕು. ಹಸಿ ಬಾಣಂತಿ ಮಗುವನ್ನು ತಾನೇ ಕಾಲಮೇಲೆ ಹಾಕಿಕೊಂಡು ದನದ ಸೆಗಣಿಯಿಂದ ಸ್ನಾನ ಮಾಡಿಸಬೇಕು. ಅದನ್ನು ಮನೆಯ ಹತ್ತಿರ ಕೊಂಡೊಯ್ಯುವಂತಿಲ್ಲ. ನೀರಿರುವ ಜಾಗ ಹುಡುಕಿ ಮಗುವನ್ನೂ ಸ್ನಾನ ಮಾಡಿಸಿ ತಾನೂ ಮಾಡಬೇಕು. ಬೇರೆಯವರು ಮಾಡುವ ಒಂದೇ ಸಹಾಯವೆಂದರೆ ಬೆಂಕಿ ಹಚ್ಚಿ ಕೊಡುವುದು. ಆ ಬೆಂಕಿಯ ಬಳಿಯಲ್ಲಿ ತಾಯಿ ಮಗು ಒಂದು ದಿನ ಇರಬೇಕು. ಆ ದಿನ ಗಂಡಸರು ಅಕ್ಕಿ, ಬೆಲ್ಲ, ಹಾಕಿ ಮಿಟ್ಟುದಾನ್ ಎಂಬ ಪಾಯಸ ಮಾಡಿ ಮುತ್ತುಗದ ಎಲೆಯ ದೊನ್ನೆಯಲ್ಲಿ ಅವರಿಗೆ ಕೊಡುತ್ತಾರೆ. ಈ ರೀತಿ ಸಿಹಿ ಕೊಡುವ ಆಚರಣೆ ಮುಂದಿನ ಐದು ದಿನ ಇರುತ್ತದೆ. ಬಾಣಂತಿ ಮಗುವನ್ನು ಜೋಳಿಗೆಯಲ್ಲಿ ಹಾಕಿಕೊಂಡು ಊರೆಲ್ಲ ತಿರುಗಿ ಭಿಕ್ಷೆ ಬೇಡಬೇಕು. ಆ ಸಮಯದಲ್ಲಿ ಅಡುಗೆಯನ್ನೂ ಅವರೇ ಮಾಡಿಕೊಳ್ಳಬೇಕು. ಮೂರು ತಿಂಗಳುಗಳ ಕಾಲ ಇದು ನಡೆಯುತ್ತದೆ. ಈ ಸಮಯದಲ್ಲಿ ಗಂಡ ಹೆಂಡತಿ ಮಾತನಾಡುವಂತೆಯೂ ಇಲ್ಲ (ಕೃಪೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಆರ್. ರಾಜಪ್ಪ ದಳವಾಯಿ ಅವರ ಹಕ್ಕಿಪಿಕ್ಕಿಯರ ಸಂಸ್ಕೃತಿ).

ಪಾವಗಡ ತಾಲೂಕಿನ ಪೆಮ್ಮನಹಳ್ಳಿ ಪಂಚಾಯ್ತಿಯ ಗೌಡಕಾರನ ಹಟ್ಟಿಯಲ್ಲಿ ವಾಸವಗಿರುವ ಕಾಡುಗೊಲ್ಲರ ಜನಾಂಗದ ಯರಗುಂಟಮ್ಮ(ಗಂಡನ ಹೆಸರು ನಾಗಣ್ಣ) ಎಂಬ ಸುಮಾರು ೩೦ರಿಂದ ೧೫ ವರ್ಷ ಪ್ರಾಯದ ಅಮಾಯಕ ಹೆಣ್ಣು ಮಗಳ ಕಿತ್ತು ತಿನ್ನುವ ಬಡತನದ ನಡುವೆ ಊರ ಹೊರಗೆ ಅನಾಥ ಶಿಶುವಿನಂತೆ ಪರಿತಪಿಸುತ್ತಿದ್ದಳು. ಜವಾಬ್ದಾರಿ ಇಲ್ಲದ ಗಂಡನ ಜತೆ ಬಡತನವನ್ನೇ ಹಾಸಿ ಹೊದ್ದಿರುವ ಯರಗುಂಟಮ್ಮ ಚಿಕ್ಕ ವಯಸ್ಸಿಗೆ ನಾಲ್ಕು ಹೆಣ್ಣುಮಕ್ಕಳ ತಾಯಿಯಾಗಿದ್ದಳು. ಗಂಡು ಮಗು ಬೇಕೆಂಬ ಗಂಡನ ಆಣತಿಗೆ ತಲೆಬಾಗಿರುವ ಈ ಅನಕ್ಷರಸ್ಥ ಹೆಣ್ಣುಮಗಳು ಐದನೇ ಬಾರಿಗೂ ಹೆಣ್ಣುಮಗುವನ್ನೇ ಹೆತ್ತು ತಿರಸ್ಕಾರ ಮತ್ತು ನಿರ್ಲಕ್ಷಕ್ಕೆ ಬಲಿಯಾಗಿದ್ದಳು. ಇನ್ನೊಂದು ಕಡೆ ಮೈಮುಚ್ಚಿಕೊಳ್ಳಲು ಸರಿಯಾದ ಬಟ್ಟೆಯಿಲ್ಲ. ಹಸುಗೂಸನ್ನು ಸುತ್ತಿಡಲು ಚಿಂದಿಗೂ ಇಲ್ಲ. ಆದರೂ ಕರಡಿಗೊಲ್ಲರ ಸಂಪ್ರದಾಯದಂತೆ ಗ್ರಾಮದ ಹೊರಗೆ ಅತ್ಯಂತ ಚಿಕ್ಕ, ಗಾಳಿ ಬೆಳಕು ಆಡುವ, ಉರಿ ಬಿಸಿಲಿನಲ್ಲಿರುವ

ಗುಡಿಸಲಿನಲ್ಲಿ ಈ ಹತಭಾಗ್ಯ ಹೆಣ್ಣುಮಗಳು ತೀರಾ ಸಂಕಷ್ಟದ ಸ್ಥಿತಿಯಲ್ಲಿ ಮುಗಿಲು ನೋಡುತ್ತಾ ಕುಳಿತಿದ್ದಳು. ಈ ತಾಯಿಗೆ ನುಂಗಲು ಉಗುಳೂ ಇಲ್ಲ, ಕಣ್ಣರಳಿಸಿದರೂ ದೃಷ್ಟಿ ಇಲ್ಲ. ಬಂಧು ಬಾಂಧವರ ಸಹಕಾರವಿಲ್ಲದೆ ನಿರ್ಗತಿಕಗಳಾದ ತಾಯಿ ನೀಡುವ ಒಪ್ಪೊತ್ತಿನ ಗಂಜಿಯ ಆಶ್ರಯದಲ್ಲಿ ಯರಗುಂಟಮ್ಮ ಜೀವ ಹಿಡಿದು ತನ್ನ ಬದುಕಿನ ಬಳ್ಳಿಯನ್ನೂ ಸಾಕುತ್ತಿದ್ದಳು. ಒಟ್ಟಾರೆಯಾಗಿ ಬಡತನ, ಮುಗ್ಧತೆ, ಅನಕ್ಷರತೆ, ಸಹಾಯ ನೀಡುವ ಗಂಡನ ಜತೆ ಬಾಣಂತಿಯರನ್ನು ಹೊರಗಿಡುವ ಅನಿಷ್ಟ ಸಂಪ್ರದಾಯದ ಸುಳಿಗೆ ಸಿಕ್ಕು ಈಕೆ ಪರಿತಪಿಸುತ್ತಿದ್ದಳು. ಈಕೆಯ ಸ್ಥಿತಿಯನ್ನು ನೋಡಿದ ಯಾರೂ ಕಂಬನಿಗರೆಯ ದಿರಲಾರರು(ಪ್ರಜಾವಾಣಿ ವರದಿ).



ಇದೇ ರೀತಿ ಮಧುಗಿರಿ ತಾಲೂಕಿನ ಗಂಜಲಗುಂಟೆ ದೊಡ್ಡಹಟ್ಟಿಯಲ್ಲಿ ಪುಟ್ಟಕ್ಕ ಮತ್ತು ಚಿಕ್ಕಮ್ಮ ಎಂಬ ಇಬ್ಬರು ಹದಿಹರೆಯದ ತಾಯಂದಿರು ಗ್ರಾಮದ ಹೊರಗೆ ಇರುವ ಸುಸ್ಥಿತಿಯಲ್ಲಿಲ್ಲದ ಪ್ರಸೂತಿ ಗೃಹದಲ್ಲಿ ಏಕಾಂತವಾಗಿ ತಮ್ಮ ವಂಶದ ಕುಡಿಗಳೊಂದಿಗೆ ಬಾಳುತ್ತಿದ್ದಾರೆ. ಇವರಿಗೆ ಮನೆಯಲ್ಲಿ ಹೊಟ್ಟೆಗೆ ಬಟ್ಟೆಗೆ ಇದೆಯಾದರೂ ಗ್ರಾಮದಿಂದ ಹೊರಗೆ ಒಂಟಿಯಾಗಿ ವಾಸಿಸುವುದರಿಂದ ಭಿನ್ನತೆ ಆವರಿಸಿದೆ. ಈ ಇಬ್ಬರು ತಾಯಂದಿರು ಆರ್ಥಿಕವಾಗಿ ಸ್ವಲ್ಪ ಉತ್ತಮ ಸ್ಥಿತಿಯಲ್ಲಿರುವ ಮನೆಗಳಿಗೆ ಸೇರಿರುವುದರಿಂದ ಊಟ ತಿಂಡಿಯನ್ನು ಮನೆಯವರು ಒದಗಿಸುತ್ತಾರೆ. ಆದರೂ. ಸಹ ಕಷ್ಟ-ಸುಖ, ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಮನೆಯವರು ಮತ್ತು ಆತ್ಮೀಯರು ಹತ್ತಿರವಿಲ್ಲದೆ ಮೌನವಾಗಿ ತಮಗೆ ತಾವೇ ಸಮಾಧಾನ ಪಟ್ಟುಕೊಳ್ಳುತ್ತಿದ್ದಾರೆ (ಪ್ರಜಾವಾಣಿ ವರದಿ).

ಈ ಅಮಾನವೀಯ ಆಚರಣೆಯನ್ನು ಮನಗಂಡ ಸರಕಾರವು ಪಾವಗಡ, ಮಧುಗಿರಿ, ಕೊರಟಗೆರೆ ಮತ್ತು ಶಿರಾ ತಾಲೂಕಿನ ಬಹುತೇಕ ಹಟ್ಟಿಗಳು ಸೇರಿದಂತೆ ಇಂತಹ ಆಚರಣೆಗಳು ನಡೆಯುತ್ತಿರುವ ಕಡೆಗಳಲ್ಲಿ ಪ್ರಸೂತಿ ಗೃಹಗಳನ್ನು ಕಟ್ಟಿಸಿಕೊಟ್ಟಿದೆ. ಆದರೆ ಇವುಗಳಲ್ಲಿ ಬಾಣಂತಿಯರು ವಾಸಿಸುವುದು ಕಡಿಮೆ. ಇಲ್ಲಿ ಸ್ನಾನದ ಮನೆ, ಶೌಚಾಲಯ, ನೀರಿನ ಪೂರೈಕೆ, ವಿದ್ಯುತ್, ಗಾಳಿ, ಬೆಳಕಿನ ಸೌಲಭ್ಯಗಳಿಲ್ಲ. ಇಂತಹ ಪ್ರಸೂತಿ ಗೃಹಗಳನ್ನು ಸುಸಜ್ಜಿತವಾಗಿ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ನಿರ್ಮಿಸಿದರೆ ತಮಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ಅನೇಕ ತಾಯಂದಿರು ವ್ಯಕ್ತಪಡಿಸುತ್ತಾರೆ. ಏನೇ ಆದರೂ ಈ ಅಮಾನವೀಯ ಆಚರಣೆಯ ಸಂಕಟ ಯಾತನೆಗಳು ತಪ್ಪಿಲ್ಲ. ಕೆಲವು ವಿಚಾರವಾದಿಗಳು ಸರಕಾರ ಪ್ರಸೂತಿ ಗೃಹಗಳನ್ನು ಕಟ್ಟಿಸಿಕೊಡುವ ನೀತಿಯನ್ನು ವಿರೋಧಿಸುತ್ತಾರೆ. ಈ ಹಣವನ್ನು ನಿರ್ದಿಷ್ಟವಾಗಿ ಜನರಿಗೆ ಶಿಕ್ಷಣ ನೀಡುವುದಕ್ಕೆ ಬಳಸಬೇಕಾಗಿತ್ತು ಎಂಬುದು ಇಂತಹವರ ಅಭಿಪ್ರಾಯ.

********

## ೫. ಜಾತಿ ವಿನಾಶ

**- ಪ್ರೊ. ಬಿ. ಕೃಷ್ಣಪ್ಪ**

ಪ್ರತ್ಯಕ್ಷವಾಗಲಿ, ಅಪ್ರತ್ಯಕ್ಷವಾಗಲಿ, ಭಾರತದ ಇಂದಿನ ತಪ್ಪುಗಳೆಲ್ಲ ಜಾತೀಯತೆ, ಮತೀಯತೆ ಹಾಗೂ ಪ್ರಾಂತೀಯತೆಗೆ ಸಂಬಂಧಿಸಿವೆ. ಹಿಂದೂಗಳಲ್ಲಿ ಪ್ರಚಲಿತವಾಗಿರುವ ಜಾತೀಯತೆ ಅವುಗಳಲ್ಲೆಲ್ಲ ತೀರ ಕೆಟ್ಟದಾಗಿದೆ. ಅಸ್ಪೃಶ್ಯತೆಯನ್ನು ನಿಷೇಧಿಸಿದ್ದೇ ಆದರೆ, ಕೊನೆಯ ಪಕ್ಷ ಜಾತೀಯತೆಯ ಕೊಂಡಿ ಸಡಿಲವಾಗುವುದೆಂದು ಬಹಳ ಜನ ತಪ್ಪಾಗಿಯಾದರೂ ಯೋಚಿಸುತ್ತಾರೆ. ಅಸ್ಪೃಶ್ಯತಾ ಆಚರಣೆ ಅಪರಾಧವೆಂದು ಘೋಷಿಸಲಾಗಿದ್ದರೂ ಜಾತಿ ಭಾವನೆಯಲ್ಲಿ ಯಾವುದೇ ಬದಲಾವಣೆಯನ್ನು ಯಾರೂ ಇದುವರೆಗೂ ಅನುಭವಿಸಿಲ್ಲ.

ಸಾಮಾಜಿಕ ರಚನೆಗೆ ಸಂಬಂಧಿಸಿದಂತೆ, ಅದರ ಹೊರ ಆವರಣದಲ್ಲಿ. ನಿಧಾನವಾಗಿ ಅಸ್ಪೃಶ್ಯರಿಗೆ ಬರೆಯಲು ಅವಕಾಶ ಕೊಟ್ಟಿದ್ದರೂ, ಸಮಾಜದ ಮೂಲಭೂತ ಜಾತಿ ರಚನೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಸಾವಿರ ವರ್ಷಗಳ ಹಿಂದೆ ಇದ್ದಂತೆ, ನಾಲ್ಕು ವರ್ಣ ವಿಭಜನೆಗಳು ಅವುಗಳ ಉಪಭಾಗಗಳು ಇಂದಿಗೂ ಜೀವಂತವಾಗಿವೆ. ಮಾನವತ್ವದ ಬಹುದೊಡ್ಡ ಅಪರಾಧವಾದ ಜಾತೀಯತೆಯ ಬಗ್ಗೆ ಯಾರು ಪಿತೂರಿ ಮಾಡಿದ್ದಾರೆ ಅವರು ಎಂದಿಗೂ ಸಮಾಜದ ಉನ್ನತ ಸ್ಥಾನದಲ್ಲಿಯೇ ಉಳಿದಿದ್ದಾರೆ.

ವರ್ಣ ದ್ವೇಷದ ಅಪರಾಧಕ್ಕಾಗಿ ಬಿಳಿಯರನ್ನು ಟೀಕಿಸುವ ಭಾರತ ಸರ್ಕಾರವು ತನ್ನ ದೇಶದಲ್ಲಿಯೇ ಜಾತೀಯೆ ಮುಂದುವರಿಯಲು ಅವಕಾಶ ಕೊಟ್ಟಿರುವುದನ್ನು ಕಂಡರೆ ಯಾರಿಗೂ ಆಶ್ಚರ್ಯವಾಗುತ್ತದೆ. ವರ್ಣನೀತಿಯು ಕಪ್ಪು ಮತ್ತು ವರ್ಣೀಯ ಜನಾಂಗಗಳನ್ನು ಬಿಳಿಯರಿಂದ ಪ್ರತ್ಯೇಕಿಸುವುದಾದರೆ, ಜಾತೀಯತೆ ಎನ್ನುವುದು ಒಂದೇ ಜನಾಂಗ ಇಲ್ಲವೆ ಒಂದೇ ಧರ್ಮದ ಭಿನ್ನ ತರಗತಿಯ ಜನರನ್ನು ಪ್ರತ್ಯೇಕಿಸುವುದಾಗಿದೆ. ಒಂದು ಪಕ್ಷ ವರ್ಣ ನೀತಿ ಎನ್ನುವುದು ಅಪರಾಧ ಎನ್ನುವುದಾದರೆ, ಜಾತೀಯತೆ ನಿಜಕ್ಕೂ ಮಹಾಪಾತಕವಾಗಿದೆ, ಭಾರತ ಸರ್ಕಾರವು ಕೇವಲ ವರ್ಣ ನೀತಿಯನ್ನು ಟೀಕಿಸುವುದೇ ಅಲ್ಲ. ಅದನ್ನು ಅನುಸರಿಸುವ ಯಾವುದೇ ದೇಶದೊಂದಿಗೆ ತನ್ನ ಸಂಬಂಧವನ್ನು ಕಡಿದುಕೊಂಡಿದೆ. ಆದಾಗ್ಯೂ ಅಪರಾಧವಾದ ಜಾತೀಯತೆ ಮಾಡುವ ತನ್ನ ಜನರ ವಿರುದ್ಧ ಏನೂ ಮಾಡದಿರುವುದು ಅತ್ಯಂತ ವಿಸ್ಮಯ ಸಂಗತಿಯಾಗಿದೆ.

ಸಮಾಜದ ಉನ್ನತ ಸ್ಥಾನದಲ್ಲಿರುವ ಬಹಳ ಜನ ಹಿಂದೂಗಳ ಅನೇಕ ವರ್ಗಗಳ ಮಧ್ಯೆ ಸಹನೆ ಹಾಗೂ ಪರಸ್ಪರ ಅರಿವಷ್ಟು ಕುರಿತು ಮಾತನಾಡುತ್ತಾರೆ.

ಆದರೆ ಶಕ್ತಿಯುತವಾದ ಗುಂಪು ಸಹನೆಯನ್ನು ಕುರಿತು ಮಾತನಾಡಿದರೆ ಅದೊಂದು ಶುದ್ಧ ಪೊಳ್ಳು ಎನ್ನಬೇಕು. ಏಕೆಂದರೆ ಸಹನೆ ಎನ್ನುವುದು ತುಳಿತಕ್ಕೆ ಒಳಗಾದವರಿಂದ ತೋರಿಸಬಹುದಾದದ್ದೇ ಹೊರತು ತುಳಿಯುವವರಿಂದಲ್ಲ. ಹಿಂದೂ ಧರ್ಮದ ಕೆಳವರ್ಗದಲ್ಲಿ ವಾಸಿಸುವ ಜನ, ಅವರ ಮೇಲೆ ಹೊರಿಸಿರುವ ನಿಯಮಗಳಿಗೆ ಅಂಟಿಕೊಂಡು ಗಮನಾರ್ಹವಾಗಿ ತಾವು ಸಹನಶೀಲರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರು ಜಾತಿ ಸಹನೆ ಮುಳ್ಳಿನ ಸುಗ್ಗಿ ಕುಯ್ದು ಮಾಡುತ್ತಿದ್ದಾರೆ.

ಬಹಳ ಹಿಂದೆ ಯಾವಾಗ ಹಿಂದೂಗಳು ಜಾತೀಯತೆಯನ್ನು ಮಾನ್ಯ ಮಾಡುತ್ತ ಬಂದರೂ ಅಂದೇ ಅವರು ಅವನತಿಯನ್ನು ಹೊಂದಿದರು. ಹಿಂದೂ ಧಾರ್ಮಿಕ ಪ್ರಮುಖ ಗ್ರಂಥಗಳು ಜಾತೀಯತೆಯ ಸುತ್ತಲಿನ ದಿವ್ಯಪ್ರತಿಭೆಯನ್ನು ಸೃಷ್ಟಿಮಾಡಿವೆ. ಹಿಂದೂ ಎಲ್ಲ ಧಾರ್ಮಿಕ ಪುಸ್ತಕಗಳು ಜಾತಿಯನ್ನು ಉಲ್ಲೇಖಿಸುತ್ತವೆ. ಮತ್ತು ಉನ್ನತ ಜಾತಿಯನ್ನು ಹೊಗಳಿ ಕೆಳಜಾತಿಯನ್ನು ಹೀನಾಯಿಸುತ್ತವೆ. ಯಾವುದೇ ಧಾರ್ಮಿಕ ಗ್ರಂಥದಲ್ಲಿ ಮನುಷ್ಯನನ್ನು ಮನುಷ್ಯನನ್ನಾಗಿ ಕಾಣಲಾಗಿಲ್ಲ. ಬದಲಾಗಿ ಅವನನ್ನು ಬ್ರಾಹ್ಮಣ, ವೈಶ್ಯ, ಶೂದ್ರ ಎಂದು ಉಲ್ಲೇಖಿಸಲಾಗಿದೆ. ಗೀತೆಯಲ್ಲೂ ಕೂಡ ಶ್ರೀಕೃಷ್ಣನು ತಾನು ಮಾನವರಲ್ಲಿ ಬ್ರಾಹ್ಮಣವೆಂದು ಹೇಳಿಕೊಂಡಿದ್ದಾನೆ. ಇದಕ್ಕೆ ಸರಳವಾದ ಕಾರಣವೊಂದಿದೆ. ಎಲ್ಲ ಹಿಂದೂ ಧಾರ್ಮಿಕ ಗ್ರಂಥ ಬರೆದವರು ಏನು ಉನ್ನತ ವರ್ಗದ ಸ್ವಾರ್ಥಿ ಜನಗಳಿದ್ದಾರೆಯೋ, ಅವರೇ ಜಾತಿಯನ್ನು ಸೃಷ್ಟಿಸಿದವರು ಮತ್ತು ಹರಡಿದವರು. ಅವರು ತಮಗಾಗಿ ಯಾವ ಸವಲತ್ತುಗಳನ್ನು ಉಳಿಸಿಕೊಳ್ಳಬೇಕಾಗಿತ್ತೊ ಅವನ್ನು, ಉಳಿದವರಿಗೆ ಇಲ್ಲದಂತೆ ಮಾಡಿದರು.

ಅಂತಹ ಹಿಂದು ಧಾರ್ಮಿಕ ಗ್ರಂಥಗಳನ್ನು ರಚಿಸಿದ ಜನ ಎಷ್ಟರ ಮಟ್ಟಿಗೆ ನೈತಿಕವಾಗಿ ಭ್ರಷ್ಟಗೊಂಡಿದ್ದರು ಎಂಬುದನ್ನು ಮನುಸ್ಮೃತಿಯ ಕೆಲವು ಉದಾಹರಣೆಗಳಿಂದ ತಿಳಿಯಬಹುದು.

"ವಿಪ್ರಶ್ಯಶ್ಶೈವ ಶೂದ್ರಸ್ಯ ವಿಶಿಷ್ಟಮ ಕರ್ಮ ಕೀಯತೆ

ಯದ್ ತೋನಧ್ಧಿ ಕುರುತೇತದ್ದು ವಸ್ತ್ರ ನಿಷ್ಕಲಂ"

ಬ್ರಾಹ್ಮಣನ ಸೇವೆ ಮಾಡುವುದೇ ಶೂದ್ರನ ಶ್ರೇಷ್ಠ ಕರ್ತವ್ಯ. ಆದ್ದರಿಂದ ಅವನು ಬೇರೆ ಏನನ್ನು ಮಾಡಿದರು ಅದು ನಿಷ್ಫಲವಾಗುತ್ತದೆ.

"ನ ಬ್ರಾಹ್ಮಣ್ವಧದ್ ಅಭ್ಯಂಧರ್ಮೋ ವಿದ್ಯತೇ ಭೂವಿ

ತಸ್ಮಾದಶ್ಯವಧಂ ರಾಜ ಮನಸಪಿ ನ ಚಿಂತಯೇತ್."

ಬ್ರಾಹ್ಮಣನನ್ನು ಕೊಲ್ಲುವುದಕ್ಕಿಂತ ಹೆಚ್ಚಿನ ಪಾಪ ಈ ಲೋಕದಲ್ಲಿ ಯಾವುದೂ ಇಲ್ಲ. ಆದ್ದರಿಂದ ರಾಜನು ಅವನ ಕೊಲೆಯ ಬಗ್ಗೆ ಯೋಚಿಸಲೂ ಕೂಡದು.

“ನಮ್ಮನಿಗ್ರಮ್ ದ್ವೇಷಮಭಿ ದ್ರೋಹಂ ಕುರ್ವಥಾ

ನಿಕ್ಷೇದ್ಯೋಯೋಮ: ಶಕುರ್ಜ್ವಲನ್ನಸೇ ದಶಂಗುಲ” .



ಒಂದು ಪಕ್ಷ ಶೂದ್ರನು ಬ್ರಾಹ್ಮಣನ ಜಾತಿ ಅಥವಾ ಹೆಸರನ್ನು ಅವಹೇಳನ ಮಾಡಿದ್ದೇ ಆದರೆ ಅವನ ಮೂಗಿನಲ್ಲಿ ಹತ್ತು ಬೆರಳುದ್ದದ ಕಾದು ಕೆಂಪಾದ ಮೊಳೆಯನ್ನು ಬಡಿಯಬೇಕು.

“ಸರ್ವಂ ಸ್ವಂ ಬ್ರಾಹ್ಮಣ ಸ್ವೇದಂ ಯತ್ ಕಿಂಚಿದ್ ಜಗತಿಗತಮ್

ಶ್ರೇಷ್ಠವೇ ಸುಭಿ ಜನ ನೇದಂ ಸರ್ವರ್ವ ವೈ ಬ್ರಹ್ಮರ್ಹತಿ”

ಈ ಪ್ರಪಂಚದಲ್ಲಿರುವ ಎಲ್ಲವೂ ಬ್ರಾಹ್ಮಣನಿಗೆ ಸೇರಿದೆ. ಏಕೆಂದರೆ ಅವನು ಹುಟ್ಟಿನಿಂದಲೇ ಶ್ರೇಷ್ಠನಾಗಿದ್ದಾನೆ.

“ಸ್ವಮೇವ ಬ್ರಾಹ್ಮಣೋ ಭುಂಕೇ ಸಂವಸ್ಥೆ ಸ್ವಂದಧಾತೀಚ

ಅರ್ನಿಶನ್ನದ್ ಬ್ರಾಹ್ಮಣಸ್ಯ ಭುಂಜತೇ ಇತರೇ ಜನಾ”

ಬ್ರಾಹ್ಮಣ ತಿನ್ನುವ, ಉಡುವ, ಅಥವಾ ಇತರರಿಗೆ ಕೊಡುವ ಯಾವುದೇ ಆಗಲಿ ಅದು ಅವನಿಗೆ ಸೇರಿದ್ದು, ಆದರೆ ಪ್ರಪಂಚದ ಉಳಿದ ಜನರೆಲ್ಲ ತಿನ್ನುವುದು ಕುಡಿಯುವುದು, ಇತರಿಗೆ ಕೊಡುವುದು ಅಥವಾ ತೆಗೆದುಕೊಳ್ಳುವುದು ಎಲ್ಲವೂ ಬ್ರಾಹ್ಮಣ ಕೃಪೆಯಿಂದ. ಹಿಂದೂ ಪವಿತ್ರ ಗ್ರಂಥಗಳನ್ನು ಬರೆದ ಲೇಖಕರು ತಮ್ಮ ದಂತ ಕಥೆ ಹಾಗೂ ರೋಗಗ್ರಸ್ಥ ಯೋಚನೆಗಳನ್ನು ಜನ ಗಂಭೀರವಾಗಿ ತೆಗೆದುಕೊಳ್ಳಲು ಅನುಕೂಲವಾಗುವಂತೆ ದೇವರನ್ನು ಆಮಂತ್ರಿಸಿದರು. ಮಾನವ ತತ್ವಕ್ಕೆ ಹಾನಿ ತರುವ ಕೆಟ್ಟ ಯೋಚನೆಗಳಲ್ಲಿ ಅವರು ಯಶಸ್ವಿಯಾದರು. ಉಳಿದ ಧರ್ಮಗಳ ಜನರಂತೆಯೇ ಹಿಂದೂಗಳ ಕೂಡ ಕುರುಡು ನಂಬಿಕೆಯವರಾಗಿದ್ದು ಧಾರ್ಮಿಕ ಗ್ರಂಥಗಳನ್ನು ಅವುಗಳ ಹೇಳಿಕೆಗಳನ್ನು ದೇವರ ಮಾತುಗಳೆಂದೇ ಸ್ವೀಕರಿಸಿ ಅವನ್ನು ಅನುಸರಿಸಲು ಪ್ರಯತ್ನಿಸಿದರು. ಈಗ ಪ್ರಚಲಿತವಾಗಿರುವ ಎಲ್ಲ ಬರವಣಿಗೆಗಳು ಕೂಡ, ಸಾಮಾಜಿಕವಾಗಿ ಉನ್ನತ ಸ್ತರದಲ್ಲಿರುವ ವ್ಯಕ್ತಿಗಳಿಂದ ರಚಿತವಾಗಿವೆ ಎನ್ನಲು ಯಾವುದೇ ವೈಜ್ಞಾನಿಕ ಶೋಧನೆಯ ಅಗತ್ಯವಿಲ್ಲ. ಎಲ್ಲಾ ಸ್ವಾತಂತ್ರ್ಯಗಳಿಂದ ವಂಚಿತರಾದ ಕೆಳವರ್ಗದ ಜನಕ್ಕೆ ಮಾನಸಿಕವಾಗಿ ಅಥವಾ ಮತ್ತಾವುದೇ ರೀತಿಯಲ್ಲಿ ಬೆಳೆಯಲು ಅವಕಾಶ ಕೊಡಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜಾತಿಯನ್ನು ಒಪ್ಪಿಕೊಳ್ಳದೆ ಅವರಿಗೆ ಬೇರೆ ಮಾರ್ಗವೆ ಉಳಿಯಲಿಲ್ಲ. ಒಂದು ಬಾರಿ ಒಪ್ಪಿಕೊಂಡ ಜಾತಿ ವ್ಯವಸ್ಥೆ ಸರಪಳಿ ಕ್ರಿಯೆಯನ್ನು ಪ್ರಾರಂಭಿಸಿತು. ಜಾತಿ, ಉಪಜಾತಿ ಮತ್ತು ಅವುಗಳ ಚಿಕ್ಕ ಪುಟ್ಟ ವಿಭಜನೆಗಳು ಅಸಂಖ್ಯವಾಗಿ ಬೆಳೆಯತೊಡಗಿದವು. ಇಂದು ಅವುಗಳ ಸಂಖ್ಯೆ ಸಾವಿರಕ್ಕೂ ಮಿಕ್ಕಿದೆ. ಹಲವು ವರ್ಗದ ಹಿಂದೂ

ಜನರಲ್ಲಿರುವ ಒಂದೇ ಒಂದು ತಿಳುವಳಿಕೆ ಎಂದರೆ, ತಾನು ಇಂತಹ ನಿರ್ದಿಷ್ಟ ಜಾತಿಗೆ ಸೇರಿದವನೆಂದು ಪ್ರತಿಯೊಬ್ಬನು ನಂಬುತ್ತಾನೆ. ಜಾತಿ ಚೌಕಟ್ಟಿನ ಒಳಗಿರಲು ಪ್ರಯತಿಸುತ್ತಾನೆ. ಅದಕ್ಕಾಗಿ ಹೆಮ್ಮೆಯನ್ನೂ ಪಡುತ್ತಾನೆ.

ಒಂದು ಪಕ್ಷ, ಜಾತಿ ಮುಂದುವರಿಯುವುದಾದರೆ ಅದು ಜನರ ತಪ್ಪಲ್ಲ. ಪ್ರಮುಖವಾಗಿ ಸರ್ಕಾರದ್ದು, ಜನರೇ ಜಾತಿಯನ್ನು ನಾಶಗೊಳಿಸಬೇಕೇ ಹೊರತು



ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಸರ್ಕಾರ ಬದಲಾಯಿಸಲು ಸಾಧ್ಯವಿಲ್ಲ ಎಂದು ನಂಬುವುದು ತಪ್ಪು. ಸಮಾಜವು ಜನರಿಂದ ರಚಿತವಾಗಿದೆ. ಮತ್ತು ಆ ಸಾಮಾಜಿಕ ವ್ಯವಸ್ಥೆಯನ್ನು ಕಾಲಕ್ಕೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಕಾನೂನು ಇಲ್ಲವೆ ಮತ್ತಾವುದೇ ವಿಧಾನದಿಂದ ಬದಲಾಯಿಸುವ ಹಕ್ಕು ಪ್ರತಿಯೊಬ್ಬನಿಗೂ ಇದೆ ಎಂಬುದನ್ನು ಬಹುಶಃ ಮರೆಯಲಾಗಿದೆ.

ಬಹಳ ಜನ ಜಾತಿ ನಾಶಕ್ಕಾಗಿ ಅಂತರ್ಜಾತೀಯ ವಿವಾಹವನ್ನು ಬೆಂಬಲಿಸುತ್ತಾರೆ. ನಿಜವಾಗಿಯೂ ಮದುವೆ ಎನ್ನುವುದು ಎರಡು ವಸ್ತುಗಳು ಕೂಡಿ ಒಂದು ಮಿಶ್ರಣವಾಗಿ ತಮ್ಮ ವೈಯಕ್ತಿಕ ಗುರುತನ್ನು ಕಳೆದುಕೊಳ್ಳುವ ರಾಸಾಯನಿಕ ಕ್ರಿಯೆಯಂತೂ ಅಲ್ಲ. ಅಂತರ್ಜಾತೀಯ ವಿವಾಹದಲ್ಲಿ ಒಬ್ಬರು ತಮ್ಮ ಜಾತಿಯನ್ನು ಕಳೆದುಕೊಂಡು ಇನ್ನೊಬ್ಬರದನ್ನು ಒಪ್ಪಿಕೊಳ್ಳಬೇಕಾಗಿದೆ. ಇದು ಒಂದು ಜಾತಿಯಿಂದ ಮತ್ತೊಂದು ಜಾತಿಗೆ ಮಾಡುವ ಸರಳ ಪರಿವರ್ತನೆಯಾಗಿದೆ. ಅಂತರ್ಜಾತೀಯ ಕಾವ್ಯವಿಧಾನದಲ್ಲಿ ಪ್ರತಿಯೊಂದು ಜಾತಿಯೂ ಎಂದೆಂದಿಗೂ ಉಳಿಯಲು ಸಮಾನ ಅವಕಾಶವಿದೆ. ಹೀಗೆ ಯಾವುದೇ ಒಂದು ಜಾತಿಯನ್ನು ತ್ಯಜಿಸಲಾಗುವುದಿಲ್ಲ. ಅಂತರ್ಜಾತೀಯ ವಿವಾಹಗಳು ಕೊನೆಯ ಪಕ್ಷ ಎರಡು ಜಾತಿಗಳ ಮಧ್ಯೆ ಇರುವ ತೀವ್ರತೆಯನ್ನು ಕಳೆಯುತ್ತವೆ ಎಂದು ಕೆಲವರು ಭಾವಿಸಿ ಸಂಪೂರ್ಣ ತಪ್ಪು ಮಾಡುತ್ತಾರೆ. ಅಂತಹ ತೀವ್ರತೆಯನ್ನು ಪರಿವರ್ತನೆಯಿಂದ ಉಪಶಮನ ಗೊಳಿಸಲಾಗುವಿದಿಲ್ಲ. ಬಹುಶಃ ಅದು ಜಾಸ್ತಿಯಾಗಬಹುದು.

ಎಲ್ಲ ದೃಷ್ಟಿಯಿಂದಲೂ ಜಾತೀಯತೆ ಒಂದು ಸಮಸ್ಯೆ ಎಂದು ಭಾವಿಸಿದ್ದಾರೆ. ಎನ್ನುವುದೇ ಅನುಮಾನಾಸ್ಪದವಾಗಿದೆ. ಕೆಲವು ವಾರಗಳ ಹಿಂದೆ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಅಮೇರಿಕಾ ಸಂಯುಕ್ತ ಸಂಸ್ಥಾನದ ಮಿ. ರಾಕ್‌ಫೆಲ ಅವರ ಜೊತೆಗೆ ಮಾತನಾಡುತ್ತ " ಭಾರತದ ಜಾತಿ ವ್ಯವಸ್ಥೆಯು ಯಾವುದೇ ರೀತಿಯಲ್ಲಿ ಅದರ ಪ್ರಗತಿಯನ್ನು ಕುಂಠಿತಗೊಳಿಸಿಲ್ಲ" ಎಂದು ಹೇಳಿದರು. ಇದು ಹಿಂದೂಗಳ ತೀವ್ರ ಸಾಮಾಜಿಕ ಸಮಸ್ಯೆಯ ಬಗ್ಗೆ ಸರ್ಕಾರವು ತಳೆದಿರುವ ಉದಾಸೀನ ಬುದ್ಧಿಯನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಜಮೀನ್ದಾರಿ, ಒತ್ತಾಯ ಪೂರ್ವಕ ಕೂಲಿ, ಹಾಗೂ ಅಸ್ಪೃಶ್ಯತೆ ಎಲ್ಲವೂ ಸಾಮಾಜಿಕ ಸಮಸ್ಯೆಗಳೆ, ಆದರೂ ಹಿಂದೂಗಳಿಗೆ ಅಸ್ಪೃಶ್ಯತೆ ಮಾತ್ರ ಸಾಮಾಜಿಕ ಸಮಸ್ಯೆಯಾಗಿದೆ. ಇವನ್ನು ರದ್ದುಗೊಳಿಸಲು ಸರ್ಕಾರ ಶಾಸನ ಮಾಡಿದೆ. ಆದಾಗ್ಯೂ ಅದೇ ಸರ್ಕಾರವು ಅಸ್ಪೃಶ್ಯತೆಗಿಂತಲೂ ಗಂಭೀರವಾಗಿರುವ ಜಾತಿ ಒಂದು ಸಮಸ್ಯೆಯೆಂದು ಭಾವಿಸಲು ನಾಚಿಕೆ ಪಡುತ್ತಿರುವುದು ಖೇದನೀಯವಾಗಿದೆ. ಶ್ರೇಷ್ಠ ವಿದ್ಯಾವಂತ ಭಾರತೀಯರು ಪ್ರಗತಿ ಗಾಮಿಗಳೆನ್ನಿಸಿಕೊಂಡವರಲ್ಲಿ ಶೇಕಡಾ ಒಂದು ಭಾಗದಷ್ಟು ಜನ ಜಾತಿ ನಾಶದ ಬಗ್ಗೆ ಎಂದಿಗೂ ಧ್ವನಿ ಎತ್ತದಿರುವಾಗ, ಅವಿದ್ಯಾವಂತ ಜನ ಸಾಮಾನ್ಯರು ಜಾತೀಯತೆ ಬಗ್ಗೆ ಕುತೂಹಲ ತೋರಿಸಬೇಕೆಂದು ಸರ್ಕಾರ



ಬಯಸಕೂಡದು. ಶಾಸನ ಮಾಡುವುದರ ಮೂಲಕ ಸರ್ಕಾರವೊಂದೇ ಜಾತೀಯತೆ ನಿರ್ಮೂಲ ಮಾಡಬೇಕು. ಸರ್ಕಾರವು ಹಿಂದೂ ಧರ್ಮದಲ್ಲಿ ಕೈಹಾಕುತ್ತಿದೆ ಎಂದು ಬಹಳ ಜನ ಶಾಸನ ರಚನೆಗೆ ವಿರೋಧ ವ್ಯಕ್ತ ಪಡಿಸುತ್ತಾರೆ. ಆದರೆ ಜಾತಿ ಆಚರಣೆಯನ್ನು ಹಿಂದೂ ಧರ್ಮ ಎಂದಿಗೂ ಪ್ರತಿಪಾದಿಸಿಲ್ಲ. ನಿಜಕ್ಕೂ ಜಾತಿ ಆಚರಣೆಯು ಧರ್ಮದಲ್ಲಿ ಸ್ವಹಿತಾಸಕ್ತಿ ಹೊಂದಿದ ಒಂದು ಗುಂಪಿನ ಜನರಿಂದ ಪ್ರಾರಂಭವಾಯಿತು. ಕೇವಲ ಕೆಲವು ಸಾವಿರ ವರ್ಷಗಳಿಂದ ಮಾತ್ರ ಜಾತೀಯತೆ ಅಸ್ತಿತ್ವದಲ್ಲಿದೆ. ಮತ್ತೊಂದು ವಿಧದಲ್ಲಿ ಹಿಂದೂ ಧರ್ಮವು ಅದಕ್ಕಿಂತ ಬಹಳ ಹಿಂದೆಯೇ ಅಸ್ತಿತ್ವದಲ್ಲಿದೆ. ಈಗ ಅಸ್ತಿತ್ವದಲ್ಲಿರುವ ಹಿಂದೂ ಧಾರ್ಮಿಕ ಗ್ರಂಥಗಳು ಹಿಂದೂ ಧರ್ಮದಷ್ಟು ಪ್ರಾಚೀನವಾಗಿಲ್ಲ. ಆದ್ದರಿಂದ ಜಾತಿ ಆಚರಣೆಯ ಮೇಲೆ ಹಾಕುವ ಬಹಿಷ್ಕಾರದಿಂದ ಹಿಂದೂ ಧರ್ಮದಲ್ಲಿ ಕೈಹಾಕಲಾಗಿದೆ ಎಂದು ಹೇಳಲಾಗದು.

ಒಂದು ಪಕ್ಷ ಶಾಸನದ ಮೂಲಕ ಅಸ್ಪೃಶ್ಯತಾ ನಿರ್ಮೂಲನ ಮಾಡಲು ಪ್ರಯತ್ನಿಸುವುದಾದರೆ, ಅದನ್ನೇ ಜಾತೀಯತೆಯ ವಿರುದ್ಧ ಏಕೆ ಮಾಡಬಾರದು? ಅಸ್ಪೃಶ್ಯತಾ ನಿರ್ಮೂಲನ ಚಳವಳಿಯ ಹಿನ್ನೆಲೆಯಲ್ಲಿ ಮಹಾತ್ಮಾಗಾಂಧಿ ಯವರಿದ್ದುದ್ದರಿಂದ ಬಹುಶಃ ಕಾನೂನಿನ ಮೂಲಕ ಅಸ್ಪೃಶ್ಯತಾ ಆಚರಣೆಯು ಬಹಿಷ್ಕರಿಸಲ್ಪಟ್ಟಿತು. ದುರದೃಷ್ಟವಶಾತ್ ಆ ಮಹಾನುಭಾವನು ಜಾತಿ ಆಚರಣೆಯ ವಿರುದ್ಧ ದನಿ ಎತ್ತಲು ಜೀವಿಸಿರಲಿಲ್ಲ.

ಜಾತಿ ನಿರ್ಮೂಲನೆಗೊಳಿಸುವಲ್ಲಿ ಯಾವುದೇ ರೀತಿಯ ಕಾನೂನು ಹಾಗೂ ನೀತಿಯ ಅಡಚಣೆ ಇರಕೂಡದು. ಹಿಂದೂ ಸಮಾಜದಲ್ಲಿ ಯಾವ ವರ್ಗದ ಜನ ಜಾತೀಯತೆಯಿಂದ ಜೀವನ ಮಾಡಿಕೊಳ್ಳುತ್ತಿದ್ದಾರೆಯೋ, ಅವರು ಜಾತಿ ನಿರ್ಮೂಲನೆ ಪ್ರಯತ್ನದ ವಿರುದ್ಧ ಗಲಾಟೆ ಕೂಗೆಬ್ಬಿಸುತ್ತಾರೆ. ಯಾವ ಹಿಂದೂ ಸಂಪೂರ್ಣ ಜನ ಸಂಖ್ಯೆಯು ಸ್ವಾರ್ಥಪರ ವ್ಯಕ್ತಿಗಳ ಹಿಡಿತದಿಂದ ಎಲ್ಲ ವಿಧದಲ್ಲೂ ಬಿಡುಗಡೆ ಹೊಂದಬೇಕಾಗಿದೆಯೋ ಅವರ ಹಾದಿಯಲ್ಲಿ ಕೆಲವೇ ಲಕ್ಷ ಜನರ ಹೇಯ ಹಿತಾಸಕ್ತಿಗೆ ಬರಲು ಸಮ್ಮತಿಸಕೂಡದು. ಆದರೆ ಸರ್ಕಾರ ದಿಟ್ಟ ಕ್ರಮ ತೆಗೆದುಕೊಂಡಾಗ ಮಾತ್ರ

ಈ ಅದ್ಭುತ ಸಾಧಿಸಬಹುದು. ಯಾವುದೇ ಸಾಮಾಜಿಕ ಸಂಸ್ಥೆ ಅಥವಾ ವ್ಯಕ್ತಿಗತವಾದ ಸಂಕಲ್ಪ ಈ ಕೆಲಸ ನಿಭಾಯಿಸಲು ಸಾಧ್ಯವಿಲ್ಲ.

ಜಾತಿ ಸೂಚಿಸುವ ಅಥವಾ ನಮೂದಿಸುವ ಅಡ್ಡ ಹೆಸರುಗಳ ಉಪಯೋಗವನ್ನು ನಿಷೇಧಿಸುವುದು ಹಿಂದೂಗಳ ಮಧ್ಯೆ ಜಾತಿ ನಾಶಮಾಡುವತ್ತ ಮೊದಲ ಹೆಜ್ಜೆ ಎನ್ನಬೇಕು. ಇದನ್ನು ಹಂತಹಂತವಾಗಿ ಸಾಧಿಸಬಹುದು. ಪ್ರಥಮವಾಗಿ ರಾಜಕೀಯ ಪಕ್ಷಗಳು ಜಾತಿ ಸೂಚಿಸುವ ತಮ್ಮ ಪಾರ್ಲಿಮೆಂಟ್ ಹಾಗೂ ವಿಧಾನ ಸಭಾ ಪ್ರತಿನಿಧಿಗಳ ಅಡ್ಡ ಹೆಸರುಗಳನ್ನು ಬಿಟ್ಟು ಬಿಡಬೇಕೆಂದು ಆಜ್ಞೆ ಹೊರಡಿಸಬೇಕು. ಅದಕ್ಕೆ ತಪ್ಪಿದವರನ್ನು ಪಕ್ಷದಿಂದ ಕೆಲವು ವರ್ಷಗಳು ಹೊರಹಾಕಬೇಕು. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಅವರಿಗೆ ಟಿಕೆಟನ್ನೇ ಆಗಲಿ ಸ್ವತಂತ್ರವಾಗಿ ಸ್ಪರ್ಧಿಸಲು ಪರೋಕ್ಷವಾಗಿ ಬೆಂಬಲಿಸುವುದನ್ನೇ



ಆಗಲಿ ಮಾಡಕೂಡದು. ಆಗ ರಾಜಕೀಯ ಪಕ್ಷಗಳು ಪಾರ್ಲಿಮೆಂಟಿನಲ್ಲಿ ಜಾತಿ ಆಚರಣೆ ನಿಷೇಧದ ಬಗ್ಗೆ ಕಾನೂನು ತರುವ ಸ್ಥಿತಿಯಲ್ಲಿರುತ್ತವೆ. ಈ ಕೆಳಕಂಡ ನಿಟ್ಟಿನಲ್ಲಿ ಅವರು ಕಾನೂನು ರೂಪಿಸಬೇಕು.

ಯಾವ ಹಿಂದೂವೇ ಆಗಲಿ, ಜಾತಿ ಸೂಚಿಸುವ ಅಡ್ಡ ಹೆಸರನ್ನು ಉಪಯೋಗಿಸುವುದೇ ಆಗಲಿ, ಅಥವಾ ಜಾತಿ ನಂಬುವುದೇ ಆಗಲಿ ಅಥವಾ ಜಾತೀಯತೆ ಆಚರಣೆ ಮಾಡುವುದೇ ಆಗಲಿ, ಅಥವಾ ಅದು ಮುಂದುವರಿಯಲು ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಸಹಾಯ ಮಾಡುವುದೇ ಆಗಲಿ, ಇಲ್ಲವೆ ಪ್ರಚಾರ ಮಾಡುವುದೇ ಆಗಲಿ ಮಾಡಿದರೆ, ಅಂಥವರು ಸಾರ್ವಜನಿಕ ಅಧಿಕಾರವನ್ನು ಹೊಂದಕೂಡದು. ಸಾರ್ವಜನಿಕ ಅಧಿಕಾರ ಹೊಂದಿರುವವರು ಜಾತಿ ಸೂಚಿಸುವ ಅಡ್ಡ ಹೆಸರುಗಳನ್ನು ಕಿತ್ತು ಹಾಕಬೇಕೆಂದು ಕೇಳಬೇಕು. ತಪ್ಪಿದವರಿಗೆ ಯಾವುದೇ ಹೆಚ್ಚುವರಿಯನ್ನೇ ಆಗಲಿ ಮುಂಬಡ್ತಿಯನ್ನೇ ಆಗಲಿ ಕೊಡಕೂಡದು. ಈ ಆಜ್ಞೆಗಳಿಗೆ ಬದ್ಧರಾಗದ ಉನ್ನತ ಅಧಿಕಾರಿಗಳ ಕಡ್ಡಾಯ ನಿವೃತ್ತಿಯಾಗಬೇಕು. ಖಾಸಗಿ ವಾಣಿಜ್ಯ ಸಂಸ್ಥೆಗಳು ಯಾವುದೇ ರೀತಿಯಲ್ಲಿ ಜಾತಿ ಆಚರಣೆ ಮಾಡುವ ವ್ಯಕ್ತಿಯೊಬ್ಬನನ್ನು ಕೆಲಸಕ್ಕೆ ತೆಗೆದುಕೊಳ್ಳುವುದೇ ಆಗಲಿ ಅಥವಾ ಯಾವುದೇ ರೀತಿ ಸಹಾಯ ಮಾಡುವುದೇ ಆಗಲಿ ಮಾಡಕೂಡದು. ಒಂದು ಪಕ್ಷ ವಾಣಿಜ್ಯ ಸಂಸ್ಥೆಗಳು ಅದನ್ನು ಮಾಡಿದ್ದೇ ಆದರೆ ಅಂಥಹ ಸಂಸ್ಥೆಗಳಿಗೆ ಕೊಟ್ಟಿರುವ ಮಾನ್ಯತೆಯನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕು.

ಜಾತಿ ಆಧಾರದ ಮೇಲೆ ಯಾವುದೇ ಧಾರ್ಮಿಕ, ಪರೋಪಕಾರಿ ಟ್ರಸ್ಟ ಅಥವಾ ಸಾಮಾಜಿಕ ಸಂಸ್ಥೆ ರಚನೆಯಾಗಲು ಬಿಡಕೂಡದು. ಅಂಥಹ ಸಂಸ್ಥೆಗಳು ಮಾನವತ್ವದ ಸೇವೆಗಾಗಿ ಇಲ್ಲವೆ ಕೊನೆಯ ಪಕ್ಷ ಹಿಂದೂಗಳ ಸೇವೆಗಾಗಿ ಇರಬೇಕು.

ಎಲ್ಲಾ ವಿದ್ಯಾ ಸಂಸ್ಥೆಗಳು ಜಾತಿ ಸೂಚಿಸುವ ವಿದ್ಯಾರ್ಥಿಗಳ ಅಡ್ಡ ಹೆಸರುಗಳನ್ನು ತೆಗೆದುಹಾಕಬೇಕು. ಜಾತಿ ಸೂಚಿಸುವ ಅಡ್ಡ ಹೆಸರನ್ನುಳ್ಳ ಯಾವ ವಿದ್ಯಾರ್ಥಿಯನ್ನೂ ಸೇರಿಸಕೂಡದು. ಜಾತಿ ಸೂಚಿಸುವ ಅಡ್ಡ ಹೆಸರುಗಳನ್ನು ಸರ್ಕಾರಿ ಲೆಕ್ಕ ಪತ್ರದಲ್ಲಿ ನಮೂದಿಸಕೂಡದು. ಯಾವುದೇ ಜಾತಿಗೆ ಸರ್ಕಾರಿ ಇಲ್ಲವೆ ಖಾಸಗಿ ಸಂಸ್ಥೆ ಅಥವಾ ಪ್ರದೇಶದೊಂದಿಗೆ ಸಂಪರ್ಕವಿಟ್ಟು ಕೊಳ್ಳಲು ಬಿಡಕೂಡದು.

ಒಬ್ಬ ವ್ಯಕ್ತಿಯ ಹೆಸರಿನಲ್ಲಿರುವ ಜಾತಿ ಸಂಸ್ಥೆಯೊಂದು, ಜೀವಂತವಾಗಿರಲಿ, ಸತ್ತಿರಲಿ, ಸ್ಥಳ ಅಥವಾ ಏನೇ ಆಗಿರಲಿ ಯಾವುದೇ ಬರವಣಿಗೆಯಲ್ಲಿರಲು ಬಿಡಕೂಡದು. ಜನತಾ ಮಾಧ್ಯಮಗಳಾದ ಸಿನಿಮಾ, ರೇಡಿಯೊ, ವರ್ತಮಾನ ಪತ್ರಿಕೆಗಳು, ಪ್ರತ್ಯಕ್ಷವಾಗಲಿ, ಪರೋಕ್ಷವಾಗಲಿ ಜಾತಿ ಉಲ್ಲೇಖ ಮಾಡಲು ಬಿಡಕೂಡದು.

ಪಠ್ಯಕ್ರಮವಾಗಿರುವ ಎಲ್ಲ ಶೈಕ್ಷಣಿಕ ಪುಸ್ತಕಗಳಲ್ಲಿ ಜಾತಿ ಉಲ್ಲೇಖಗಳೇನಾದರೂ ಇದ್ದರೆ, ಅಂಥವುಗಳನ್ನು ನಿಷೇಧಿಸಬೇಕು. ಜಾತಿ ಉಲ್ಲೇಖಗಳನ್ನು ತೆಗೆದುಹಾಕಿ ಅವುಗಳ ಹೊಸ ಆವೃತ್ತಿಗಳನ್ನು ತರಬೇಕು. ಆದರೂ ಮನುಸ್ಮೃತಿ, ವೇದ ಪುರಾಣ, ರಾಮಾಯಣ, ಮಹಾಭಾರತ, ಗೀತೆ ಮುಂತಾದ ಪವಿತ್ರ ಗ್ರಂಥಗಳಲ್ಲಿ ಈ ಸಮಸ್ಯೆಯ ಮೂಲ



ಉಳಿದೇ ಇರುತ್ತದೆ. ಈ ಗ್ರಂಥಗಳಲ್ಲಿರುವ ಜಾತಿ ಸಂಬಂಧವಾದ ಉಲ್ಲೇಖಗಳನ್ನು ತೆಗೆದು ಹಾಕದ ಹೊರತು. ಇಲ್ಲವೇ ಉದ್ದೇಶಪೂರ್ವಕವಾಗಿ ಕಡೆಗಣಿಸದ ಹೊರತು ಜಾತೀಯತೆ ಮುಂದುವರಿಯುತ್ತದೆ. ಬಹುಶಃ ಹಿಂದೂಗಳು ಈ ಗ್ರಂಥಗಳ ಮೇಲಿಟ್ಟಿರುವ ಭಾವನಾತ್ಮಕ ಪೂಜ್ಯತೆಯಿಂದಾಗಿ ಅವುಗಳ ಪುನರ್ ಪರಿಷ್ಕರಣವನ್ನು ಸಹಿಸದಿರಬಹುದು.

ಧರ್ಮವು ಮೂಢ ನಂಬಿಕೆಗಳ ಆಧಾರದ ಮೇಲೆ ನಿಂತಿದೆಯಲ್ಲದೆ ವೈಚಾರಿಕತೆಯ ಮೇಲಲ್ಲ. ಇಂಥ ಮೂಢ ಭಾವನೆಗಳಿಂದಾಗಿ ಹಿಂದೂ ಗ್ರಂಥಗಳು ಈಗಿನ ರೂಪದಲ್ಲಿ ಅವರ ಮೇಲೆ ಎಂತಹ ಕೆಡುಕನ್ನುಂಟುಮಾಡುತ್ತಿವೆ ಎಂಬುದನ್ನು ಕಂಡುಕೊಳ್ಳಲು ಅವರು ಅಸಮರ್ಥರಾಗಿದ್ದಾರೆ. ಒಂದು ಪಕ್ಷ ಈ ಅಂಶವನ್ನು ಮನಗಂಡರೂ ಗ್ರಂಥಗಳ ಪುನರ್ ಪರಿಷ್ಕರಣದಿಂದ ಪ್ರಪಂಚದಲ್ಲಿ ತಾವು ನಿಜವಾದ ಹಿಂದೂಗಳಾಗಿ ಉಳಿಯುದಿಲ್ಲವೆಂದು ಭೀತಿಪಡಬಹುದು. ಒಂದು ಪಕ್ಷ ಈ ಪುನರ್ ಗ್ರಂಥಗಳನ್ನು ಅವರ ಮೇಲೆ ಬಲಾತ್ಕರಿಸಿದ್ದೇ ಆದರೆ ಸರ್ಕಾರ ತೆಗೆದುಕೊಂಡಿರುವ ಅಂಥ ಕ್ರಮವನ್ನು ತಡೆಹಿಡಿಯಬೇಕೆಂದು ಒತ್ತಾಯಿಸಲು ಹಿಂಸಾಚಾರ ಸಿಡಿಯಬಹುದು.

ಆದ್ದರಿಂದ ಈ ಬಗ್ಗೆ ಕಿಂಚಿತ್ ಕಾರ್ ಮಾಡಬಹುದಾದ ಜನ, ಈ ಗ್ರಂಥಗಳ ಬೋಧನೆಗಳನ್ನು ಪೂಜಿಸುವುದೇ ಆಗಲಿ, ಅನುಸರಿಸುವುದೇ ಆಗಲಿ ನಿಲ್ಲಿಸಬೇಕು. ವಾಸ್ತವಾಗಿ ಅವು ಇರುವಂತೆ ಅವುಗಳನ್ನು ಕೇವಲ ದಂತ

ಕತೆಗಳೆಂದು, ರೋಗಗ್ರಸ್ಥ ಚಿಂತನೆಯ ಪುಸ್ತಕಗಳೆಂದು ಭಾವಿಸಬೇಕು. ಸರ್ಕಾರ, ಬುದ್ಧಿ ಜೀವಿಗಳು, ಮತ್ತು ಪತ್ರಿಕೆಗಳು ಈ ಪುಸ್ತಕಗಳ ಬಗ್ಗೆ ಜನರಲ್ಲಿ ಅಂತಹ ಭಾವನೆ ಬೆಳೆಯುವಂತೆ ಸಹಾಯಮಾಡಬೇಕು. ಈ ದಿಶೆಯಲ್ಲಿ ನಡೆದಿದ್ದೇ ಆದರೆ ಇಂದಿನ ಪೀಳಿಗೆಯಲ್ಲಿಯೇ ಜಾತಿ ನಾಶವಾಗುತ್ತದೆ. ಮುಂದೆ ಹಿಂದೂ ಪೀಳಿಗೆ ಅವರನ್ನು ಹೆಚ್ಚು ಯೋಗ್ಯರನ್ನಾಗಿ ಮಾಡಿದ್ದಕ್ಕೆ ನಮ್ಮ ಬಗ್ಗೆ ಹೆಮ್ಮೆ ಪಡುತ್ತಾರೆ.

*********

## ೬. ಗಾಂಧಿ ಮತ್ತು ಅಂಬೇಡ್ಕರ್

**- ಡಾ. ಸಣ್ಣರಾಮ**

ಗಾಂಧಿ ಮತ್ತು ಡಾ. ಅಂಬೇಡ್ಕರ್ ಭಾರತ ಕಂಡ ಎರಡು ಚೇತನಗಳು ಇಡೀ ಜಗತ್ತನ್ನೇ ಪ್ರಭಾವಿಸಿದ ಪ್ರತಿಭಾಶಾಲಿಗಳು. ಗಾಂಧೀಜಿ ಮಹಾ ಅಹಿಂಸಾವಾದಿಯಾದರೇ, ಅಂಬೇಡ್ಕರ್ ಅಹಿಂಸಾವಾದಿಯೂ ಮಹಾಮಾನವತಾವಾದಿಯೂ ಆಗಿದ್ದರು. ಅಹಿಂಸಾವಾದವೆಂಬ ಮಂತ್ರದಂಡದಿಂದ ಜಗತ್ತನ್ನೇ ಬೆರಗುಗೊಳಿಸಿದ ಗಾಂಧೀಜಿ, ಭಾರತದ ಬಹುಸಮುದಾಯಗಳ ದುಃಖ ದುಮ್ಮಾನಗಳನ್ನು ಶೋಧಿಸಿ ಪರಿಹಾರ ಮಾರ್ಗವನ್ನು ಕೊಟ್ಟ ಅಂಬೇಡ್ಕರ್ ಮಹಾನ್ ಧೀರ ಚೇತಕರು. ಇಬ್ಬರೂ ಬ್ಯಾರಿಸ್ಟರ್ ಪದವಿಯನ್ನು ಪಡೆದು ಕೆಲಕಾಲ ವಕೀಲ ವೃತ್ತಿಯನ್ನು ನಿರ್ವಹಿಸಿದರು. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ವಕೀಲ ವೃತ್ತಿಯಿಂದ ಪಡೆದ ಅನುಭವದಿಂದ ಸಮೃದ್ಧಗೊಂಡು ಭಾರತಕ್ಕೆ ಹಿಂದಿರುಗಿ ಬ್ರಿಟಿಷರ ವಿರುದ್ಧ ಹೋರಾಡಲು ತಯಾರಾದರು. ಡಾ. ಅಂಬೇಡ್ಕ ಅಮೇರಿಕಾ, ಇಂಗ್ಲೆಂಡಿನಲ್ಲಿ ಓದಿ ಅಪಾರ ಪ್ರಮಾಣದ ಜ್ಞಾನವನ್ನು ಸಂಪಾದಿಸಿ, ಬಡತನ, ಅಸ್ಪೃಶ್ಯತೆಯ ನೋವನುಂಡು ತಳಸಮುದಾಯಗಳ ಬಿಡುಗಡೆಗೆ ಪಣತೊಟ್ಟರು. ಇಬ್ಬರದು ಅತ್ಯಂತ ಸಂಕೀರ್ಣವಾದ ವ್ಯಕ್ತಿತ್ವ ಆದ್ದರಿಂದಲೇ ಇವರೀರ್ವರ ವಿಚಾರಧಾರೆಗಳು ಚಿಂತಕರನ್ನು, ಸಮಾಜ, ಸುಧಾರಕರನ್ನು, ಓದುಗರನ್ನು ಇಂದಿಗೂ ಕಾಡುತ್ತಲೇ ಇದ್ದಾರೆ. ಮುಂದೆಯೂ ಕಾಡುತ್ತಲೇ ಇರುತ್ತಾರೆ.

ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರು ಜಾತಿ ಮತ್ತು ಅಸ್ಪೃಶ್ಯತೆಯನ್ನು ಕುರಿತು ಮಾತನಾಡಿದ್ದಾರೆ. ಇಬ್ಬರಿಗೂ ಭಿನ್ನಾಭಿಪ್ರಾಯ ಇದ್ದಿದ್ದೂ ಜಾತಿ ಮತ್ತು ಅಸ್ಪೃಶ್ಯತೆಯನ್ನು ತೊಡೆದುಹಾಕುವಲ್ಲಿ, ಗಾಂಧಿ ಗ್ರಹಿಕೆಯ ನೆಲೆಯಲ್ಲಿ ಅಸ್ಪಶ್ಯತೆಯನ್ನು ಕಂಡರೇ ಅಂಬೇಡ್ಕ ಅಸ್ಪೃಶ್ಯತೆಯ ಶಾಪವನ್ನು ಸ್ವತಃ ಅನುಭವಿಸಿದವರು. ಆದ್ದರಿಂದಲೇ ಜಾತೀಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆಯನ್ನು ಕುರಿತಂತೆ ಇಬ್ಬರಲ್ಲಿ ಅಭಿಪ್ರಾಯಗಳ ಭಿನ್ನತೆಯಿದೆ. ಜಾತಿಯ ತೀವ್ರತೆಯ ಅರಿವು ಆಗುವ ಮೊದಲು ಗಾಂಧೀಜಿ ಆರಂಭಿಕ ಹಂತದಲ್ಲಿ ಜಾತೀಯತೆಯನ್ನು ಸಮರ್ಥಿಸಿದ್ದೂ ಇದೆ. ಅವರು ೧೯೨೧-೨೨ ರಲ್ಲಿ ನವಜೀವನ ಎಂಬ ಗುಜರಾತಿ ಪತ್ರಿಕೆಯಲ್ಲಿ ಭಾರತೀಯ ಸಮಾಜ ಇಂದು ಸುಭದ್ರವಾಗಿರಲು ಜಾತಿ ವ್ಯವಸ್ಥೆಯೇ ಮುಖ್ಯ ಕಾರಣ. ಜಾತಿಗಳು ಒಂದೇ ಸೈನ್ಯದ ಬೇರೆ ಬೇರೆ ಭಾಗಗಳಿದ್ದಂತೆ. ಪ್ರತಿಯೊಂದು ಭಾಗವು ಒಟ್ಟು ಹಿತಕ್ಕಾಗಿ ದುಡಿಯುತ್ತವೆ. ಎಂದಿದ್ದಾರೆ. ಇಲ್ಲಿ ಜಾತಿ ಈ ದೇಶಕ್ಕೆ ಅನಿವಾರ್ಯ ಎಂಬರ್ಥದಲ್ಲಿ ಗಾಂಧೀಜಿ ಮಾತನಾಡಿರುವುದು ಕಾಣಬಹುದಾಗಿದೆ. ಇದಕ್ಕೆ ಜಾತಿಯನ್ನು ಕುರಿತು ಗಾಂಧೀಜಿಯವರಿಗಿದ್ದ ಸೀಮಿತ

ಅನುಭವವೇ ಕಾರಣ. ಆದರೆ ಅಂಬೇಡ್ಕರ್ ,ಜಾತಿಯನ್ನು ಸಮಾಜದ ವಿನಾಶದ ರೂಪವೆಂದೇ ಪರಿಗಣಿಸುತ್ತಾರೆ. ಮನುಷ್ಯ ಮನುಷ್ಯನನ್ನು ಮುಟ್ಟದಿರುವ ಸ್ಥಿತಿ ಭಾರತವನ್ನು ಬಿಟ್ಟರೆ ಜಗತ್ತಿನ ಮತ್ತಾವ ದೇಶದಲ್ಲಿಯೂ ಇಲ್ಲ. ಜಾತಿ ಯಾವುದೋ ಸಂದರ್ಭದಲ್ಲಿ ಯಾರಿಗೋ ತಟ್ಟಿ ಹೋಗುವ ಕ್ಷಣಿಕ ಬಿಸಿಯಲ್ಲ. ದಲಿತರ ಬದುಕಿನುದ್ದಕ್ಕೂ ಜೀವಂತ ಸುಡುವ ಬೆಂಕಿ. ಒಂದು ಜಾತಿಯಲ್ಲಿ ಹುಟ್ಟಿದ ಕಾರಣಕ್ಕೆ ಮರಣದ ಪರ್ಯಂತ ಅಷ್ಟೇ ಅಲ್ಲ. ಮರಣದ ಆಚೆಗೂ ಈ ಜಾತಿ ಎಂಬ ಭೂತ ಕಾಡುತ್ತದೆ. ತನಗಾದ ಅಸ್ಪೃಶ್ಯತೆಯ ಕಟು ಅನುಭವವನ್ನು ಅವರು ಒಂದು ಕಡೆಗೆ ಹೀಗೆ ವಿವರಿಸುತ್ತಾರೆ. ಓರ್ವ ಅಸ್ಪೃಶ್ಯನಾಗಿದ್ದರಿಂದ ಅದಕ್ಕೆ ಸಂಬಂಧಿಸಿದ ಎಲ್ಲಾ ವಿಧದ ಅವಮಾನ ಅಗೌರವಗಳ ಅನುಭವ ನನಗಿದೆ. ಶಾಲೆಯಲ್ಲಿದ್ದಾಗ ಇತರ ಸಹಪಾಠಿಗಳ ಜೊತೆಯಲ್ಲಿ ಕುಳಿತುಕೊಳ್ಳುವಂತಿರಲಿಲ್ಲ. ಪ್ರತ್ಯೇಕವಾಗಿ ಒಂದು ಮೂಲೆಯಲ್ಲಿ ಒಂದು ಗೋಣಿತಟ್ಟಿನ ಮೇಲೆ ಕುಳಿತುಕೊಳ್ಳಬೇಕಾಗಿತ್ತು. ಆ ಕಟ್ಟನ್ನು ಶಾಲೆಯ ಆಳು ಮುಟ್ಟುತ್ತಿರಲಿಲ್ಲ. ಬಾಯಾರಿಕೆಯಾದರೆ ನಲ್ಲಿಯ ನೀರನ್ನು ನಾನು ಮುಟ್ಟಿ ಕುಡಿಯುವಂತಿರಲಿಲ್ಲ. ಶಾಲೆಯ ಆಳು ಸಹ ನನ್ನೊಂದಿಗೆ ಬಂದು ನಲ್ಲಿಯನ್ನು ತಿರುಗಿಸಿಕೊಟ್ಟಾಗ ಮಾತ್ರ ನನಗೆ ಕುಡಿಯಲು ನೀರು, ಇಂತಹ ಅನೇಕ ಕಹಿ ಅನುಭವಗಳು ಡಾ. ಅಂಬೇಡ್ಕರ್ ಹೇಳಿದ್ದಾರೆ. ಈ ಅನುಭವಗಳು ಅವರದ್ದು ಮಾತ್ರವಲ್ಲ ಈ ದೇಶದ ಸಮಸ್ತ ದಲಿತರು ಒಂದಲ್ಲ ಒಂದು ಸಂದರ್ಭದಲ್ಲಿ ಅಸ್ಪೃಶ್ಯತೆಯ ನೋವನ್ನುಂಡುವರೇ ಆಗಿದ್ದಾರೆ.

ಗಾಂಧೀಜಿ ಮತ್ತು ಅಂಬೇಡ್ಕರ್ ಇವರಿಬ್ಬರು ಪರಸ್ಪರ ಗೌರವಿಸಿಕೊಳ್ಳುತ್ತಿದ್ದದ್ದು ಇದೆ. ಏಕೆಂದರೆ ಈ ಮಹಾಚೇತನಗಳ ನಡುವಿನ ಭಿನ್ನಾಭಿಪ್ರಾಯ ಈ ದೇಶದ ಹಿತ ಚಿಂತನೆಗಾಗಿಯೇ ಹೊರತು ಸ್ವಾರ್ಥ ಸಾಧನೆಗಾಗಿ ಅಲ್ಲ. ಆದ್ದರಿಂದ ಜ್ಞಾನಿಗಳ ಜಗಳದಲ್ಲಿಯೂ ಬಹುದೊಡ್ಡ ತತ್ವ, ಆದರ್ಶಗಳಿರುತ್ತವೆಂಬ ಮಾತು ಸತ್ಯ. ೧೯೨೦ರ ನಂತರ ಕಾಂಗ್ರೇಸ್ಸಿನಲ್ಲಿ ಗಾಂಧೀಜಿಯವರು ಮುಖ್ಯರಾಗುತ್ತದ್ದಂತೆ ವೈಷ್ಯಮ್ಯ ಮತ್ತು ಭೇಧ ಇವುಗಳನ್ನು ನಿವಾರಿಸಬೇಕಾದಲ್ಲಿ ಮೊಟ್ಟ ಮೊದಲು ನಮ್ಮ ದೇಶದಲ್ಲಿ ಸಾಮಾಜಿಕ ಅನ್ಯಾಯವನ್ನು ದೂರಗೊಳಿಸಬೇಕು. ಪ್ರತಿಯೊಬ್ಬ ಭಾರತೀಯ ಈ ಕೆಲಸವನ್ನು ತನ್ನ ಕರ್ತವ್ಯವೆಂದು ತಿಳಿದು ಮಾಡಬೇಕು. ಎಂದಿದ್ದಾರೆ.. ಈ ಮಾತು ಡಾ. ಅಂಬೇಡ್ಕ ಅವರನ್ನು ತುಂಬಾ ಪ್ರಭಾವಿಸುತ್ತವೆ. ಅವರು ಒಂದು ಕಡೆ ಇದುವರೆಗೂ ಇಂತಹ ಮಾತನ್ನು ನಮ್ಮ ದೇಶದ ಯಾವುದೆ ರಾಜಕೀಯ ನಾಯಕನೂ ಹೇಳಿಲ್ಲ ಎಂದು ಮೆಚ್ಚಿಕೊಂಡಿದ್ದೇವೆ. ಆದರೆ ದುಂಡು ಮೇಜಿನ ಪರಿಷತ್ತು ಪೂನಾ ಒಪ್ಪಂದದ ಸಂದರ್ಭದಲ್ಲಿ ಇವರಿಬ್ಬರು ಒಬ್ಬರೊಬ್ಬರ ಅಭಿಪ್ರಾಯಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಅಷ್ಟೇ ಅಲ್ಲ. ೧೯೦೮ರಲ್ಲಿ ಪ್ರಕಟವಾದ ಹಿಂದ್ ಸ್ವರಾಜ್ ಕೃತಿಯಲ್ಲಿ ಪ್ರತಿಪಾದಿತ ವಿಚಾರಗಳ ಬಗ್ಗೆಯೂ ಡಾ.ಅಂಬೇಡ್ಕರ್ ಅವರಿಗೆ ತೀವ್ರ ವಿರೋಧಿಸಿತ್ತು. ಗಾಂಧೀಜಿವಾದದ ವಿಚಾರಗಳೆಲ್ಲವೂ ತುಂಬಾ ಪ್ರಾಚೀನವಾದವು. ಅದರ ಮುಖ್ಯ ತಿರುಳು ಅಂದರೆ ಸರಳತೆ..... ಯಂತ್ರ ಮತ್ತು ಆಧುನಿಕ ನಾಗರಿಕತೆ ಅನೇಕ ಕೆಡಕುಗಳನ್ನುಂಟು ಮಾಡಿದೆ. ಎನ್ನುವುದು ಒಪ್ಪಬಹುದು. ಈ ಕೆಡಕುಗಳಿಂದ ಅವೆರಡನ್ನು

ತಿರಸ್ಕರಿಸುವುದು ತಪ್ಪು. ಏಕೆಂದರೆ ಈ ಕೆಡಕುಗಳು ಕೇವಲ ಯಂತ್ರ ಮತ್ತು ಅಧುನಿಕತೆಯಿಂದಲೇ ಉಂಟಾಗಿಲ್ಲ. ಅವು ತಪ್ಪು ಸಾಮಾಜಿಕ ಸಂಘಟನೆಯಿಂದ ಅಂದರೆ ಖಾಸಗಿ ಆಸ್ತಿ ಹೊಂದುವ ಮತ್ತು ವೈಯಕ್ತಿಕ ಲಾಭವನ್ನು ಮುಖ್ಯ ಉದ್ದೇಶವಾಗಿ ಹೊಂದಿದ ವ್ಯವಸ್ಥೆಯಿಂದ ಉಂಟಾಗಿದೆ. (ಡಾ.ಅಂಬೇಡ್ಕರ್ ಮತ್ತು ಭಾ: ಸಂ ೯: ಪುಟ. ೩೨೦) ಇಲ್ಲಿ ಅಂಬೇಡ್ಕರ್ ಗಾಂಧಿವಾದವನ್ನು ಅಂಶಿಕವಾಗಿ ತಿರಸ್ಕರಿಸುತ್ತಾ ಭಾರತೀಯ ಸಮಾಜದ ಉನ್ನತಿಯನ್ನು ತುಂಬಾ ಸೂಕ್ಷ್ಮವಾಗಿ ಚಿಂತಿಸಿದ್ದಾರೆ. ಜೀವವಿಲ್ಲದ ಯಂತ್ರಗಳ ಆಗಮನ ತಪ್ಪಲ್ಲ. ಅವುಗಳನ್ನು ಬಳಸಿಕೊಂಡು ಶ್ರಮಿಕ ವರ್ಗವನ್ನು ಶೋಷಿಸುವುದು ತಪ್ಪು ಎಂಬುದು ಅವರ ಇಂಗಿತವಾಗಿದೆ. ಬಿಟೀಷರ ಆಗಮನದ ಪೂರ್ವದ ಭಾರತದಲ್ಲಿ ಯಾವ ಯಂತ್ರ ನಾಗರಿಕತೆ ಇರಲಿಲ್ಲ. ಅಂದ ಮಾತ್ರಕ್ಕೆ ಅದು ಶೋಷಣೆ ಮುಕ್ತ ಸಮಾಜವಾಗಿತ್ತೇ, ಅಸ್ಪೃಶ್ಯರನ್ನು ನಾಯಿಗಿಂತ ಕೀಳಾಗಿ ಕಂಡು ಕೊಟ್ಟ ತೊಂದರೆಗಳು ಮಾತಿನಲ್ಲಿ ಹೇಳಲಾರದಷ್ಟು ಯಾತನಮಯವಾಗಿರಲಿಲ್ಲವೇ? ಹೀಗಿರುವಾಗ ಕೆಟ್ಟದಲ್ಲ ನಾಗರಿಕತೆಯ ಕೊಡುಗೆ ಎಂದು ಬೆಟ್ಟು ಮಾಡುವುದು ಉಚಿತವಲ್ಲ. ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಬೇಕೆಂಬುದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿತ್ತು.

೧೯೨೨ ರಲ್ಲಿ ಜಾತಿ ವ್ಯವಸ್ಥೆಯನ್ನು ಸಮರ್ಥಿಸಿಕೊಂಡಿದ್ದ ಗಾಂಧೀಜಿ ನಂತರದ ಮೂರೇ ವರ್ಷಗಳಲ್ಲಿ ತಮ್ಮ ನಿಲುವನ್ನು ಬದಲಾಯಿಸಿಕೊಳ್ಳುತ್ತಾರೆ. ಇಂದಿನ ಜಾತಿಗಳಲ್ಲಿ ಮೆಚ್ಚಿಕೊಳ್ಳುವಂತಹ ಯಾವ ಅಂಶಗಳೂ ಉಳಿದಿಲ್ಲ. ಅವು ಶಾಸ್ತ್ರಗಳಿಗೆ ದೂರವಾಗಿವೆ. ಜಾತಿಗಳ ಸಂಖ್ಯೆ ಅಗಾಧವಾಗಿದ್ದು ಅಂತರ್ ಜಾತಿ ವಿವಾಹಗಳನ್ನು ನಿರ್ಬಂಧಿಸಲಾಗಿದೆ. ಇದು ಏಳೆಯನ್ನು ಉತ್ತೇಜಿಸುವ ಅಂಶವಲ್ಲ. ಅದು ಅವನತಿಯ ಮುನ್ಸೂಚಿ (ಡಾ. ಅಂಬೇಡ್ಕರ್ ಮತ್ತು ಭಾ: ಸಂ-೯ ಪುಟ.೩೧೨) ಜಾತಿಯನ್ನು ಕುರಿತು ಗಾಂಧೀಜಿ ಗಂಭೀರವಾಗಿ ಚಿಂತಿಸತೊಡಗಿದಾಗ ಅದರ ಕರಾಳ ಮುಖದರ್ಶನ ವಾಗಿರಬೇಕು. ನಂತರ ತಮ್ಮ ಅಭಿಪ್ರಾಯವನ್ನು ಕೊಂಚ ಬದಲಾಯಿಸಿಕೊಂಡಂತೆ ಕಂಡು ಬರುತ್ತದೆ. ದೊಡ್ಡವರ ದೊಡ್ಡತನ ಸಂಯೋಜಿತ ಬದಲಾವಣೆಯಲ್ಲಿರುತ್ತದೆ.

ಡಾ. ಅಂಬೇಡ್ಕರ್ ಮತ್ತು ಗಾಂಧೀಜಿ ಮುಖಾಮುಖಿಯಾಗಿ ಭೇಟಿಯಾಗಿದ್ದು ಕೇವಲ ಮೂರು ಬಾರಿ ಮಾತ್ರ ಮೊದಲ ಸಾರಿ ಭೇಟಿಯಾಗಿದ್ದು ಮುಂಬೈನಲ್ಲಿ, ಈ ವೇಳೆಗಾಗಲೇ ಅಂಬೇಡ್ಕರ್ ಹಿಂದೂ ಧರ್ಮದಲ್ಲಿ ಬೇರುಬಿಟ್ಟಿದ್ದ ಜಾತಿಯತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಟ ಪ್ರಾರಂಭ ಮಾಡಿ ತನ್ನ ವಿದ್ವತ್ತಿನಿಂದಾಗಿ ಸಮಾಜದ ಓರೆಕೋರೆಗಳನ್ನು ಚರ್ಚಿಸುವುದರೊಂದಿಗೆ ಭಾರತ ಮಾತ್ರವಲ್ಲ, ಜಗತ್ತಿನ ಗಮನವನ್ನು ಸೆಳೆದಿದ್ದರು. ಇದನ್ನು ಗಾಂಧೀಜಿಯವರೂ ಗಮನಿಸಿದ್ದರು. ಗಾಂಧಿ ಮತ್ತು ಅಂಬೇಡ್ಕರ್ ಈ ಭೇಟಿಯೂ ಪರಸ್ಪರ ಗೌರವ ಸಮರ್ಪಣೆ ಮತ್ತು ಪರಿಚಯದಲ್ಲಿ ಪರಿಸಮಾಪ್ತಿಯಾಗುತ್ತದೆ. ಲಂಡನ್ನಿನಲ್ಲಿ ನಡೆದ ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಎರಡನೆಯ ಬಾರಿಗೆ ಮುಖಾಮುಖಿಯಾಗುತ್ತಾರೆ.

ಅಸ್ಪಶ್ಯರಿಗೆ ಪ್ರತ್ಯೇಕ ಮತದಾನವನ್ನು ಕುರಿತಂತೆ ಇಬ್ಬರಲ್ಲಿಯೂ ಭಿನ್ನಭಿಪ್ರಾಯ ಮೂಡುತ್ತದೆ. ದಲಿತರಿಗೆ ದ್ವಿಮತದ ಹಕ್ಕಿಗಾಗಿ ಅಂಬೇಡ್ಕರ್ ಬ್ರಿಟೀಷರನ್ನು ಒತ್ತಾಯಿಸಿದರೇ, ಗಾಂಧೀಜಿ ಅದನ್ನು ನೇರವಾಗಿ ವಿರೋಧಿಸುತ್ತಾರೆ. ಬ್ರಿಟೀಷರು ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಕೊಟ್ಟರೆ ತನ್ನ ಪ್ರಾಣವನ್ನಾದರೂ ಕೊಟ್ಟು ತಡೆಯುವೆ ಎಂದು ಘೋಷಿಸುತ್ತಾರೆ.

ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಗಾಂಧೀಜಿ ಮತ್ತು ಡಾ. ಅಂಬೇಡ್ಕರ್‌ರ ಮುಖಾಮುಖಿ ಎರಡು ಬಹುದೊಡ್ಡ ಪರಂಪರೆಯ ತರ್ಕ, ಸಂವಾದ, ಸಂಘರ್ಷಗಳ ಮುಖಾಮುಖಿಯೇ ಆಗಿದೆ. ಗಾಂಧೀಜಿ, ಸನಾತನ ಪರಂಪರೆಯ ಪರವಾಗಿ ನಿಂತು ಅಸ್ಪೃಶ್ಯ ಸಮುದಾಯವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಸಂರಕ್ಷಿಸುವ ಭರವಸೆ ಅಲಾಪದ ಪ್ರತೀಕವಾದರೇ ಡಾ. ಅಂಬೇಡ್ಕರ್ ಸನಾತನ ಪರಂಪರೆಯ ವಿರುದ್ಧ ನಡೆದ ಹೋರಾಟ ಅಸ್ಪಶ್ಯತೆಯ ಘೋರ ಪರಿಣಾಮಗಳ ಯಾತನೆಯನ್ನು ಸ್ವತಃ ಅನುಭವಿಸಿ ಈ ಸಮಾಜದಲ್ಲಿ ಮೇಲ್ವರ್ಗದವರ ಮನಸ್ಸು ಸ್ವಯಂ ಪರಿವರ್ತನೆ ಸಾಧ್ಯವಿಲ್ಲವೆಂಬ ಅನುಭವಜನ್ಯ ಅಭಿಪ್ರಾಯಗಳನ್ನು ಮುಂದಿಟ್ಟುಕೊಂಡು ಸಂಘರ್ಷಿಸಲು ಸನ್ನದ್ಧವಾದ ಆಕ್ರೋಶದ ಪ್ರತೀಕವಾಗಿದ್ದಾರೆ. ಒಬ್ಬರು ಊಹಾತ್ಮಕ ಸತ್ಯದ ಪ್ರತೀಕವಾದರೆ, ಮತ್ತೊಬ್ಬ ವಾಸ್ತವ ಸತ್ಯದ ಪ್ರತೀಕವಾಗಿದ್ದಾರೆ. ಒಬ್ಬರು ಊಹೆಯಲ್ಲಿ ಅಸ್ಪೃಶ್ಯರ ಭವಿಷ್ಯತ್ತನ್ನು ಕಟ್ಟಿದರೆ ಮತ್ತೊಬ್ಬರು ವಾಸ್ತವದ ಹಿನ್ನೆಲೆಯಲ್ಲಿ ಅಸ್ಪಶ್ಯರ ಭವಿಷ್ಯತ್ತನ್ನು ಚಿಂತಿಸಿದ್ದಾರೆ. ಆ ಸಂದರ್ಭದಲ್ಲಿ ನಡೆದ ಇಬ್ಬರವಾದ ವಿವಾದದಲ್ಲಿ ಎರಡು ವ್ಯಕ್ತಿತ್ವದ ಅಂತರ್ಯ ಪಡಿಮೂಡಿಸಿದಂತಿದೆ. ಮನೋವಿಜ್ಞಾನ, ತಾತ್ವಿಕತೆ, ಪರಂಪರೆ, ಸಾಮಾಜಿಕ ಚಿಂತನೆ, ಸಮುದಾಯಗಳ ಹಿತರಕ್ಷಣೆ ಹೀಗೆ ಹಲವಾರು ಆಯಾಮಗಳಿಂದ ಈ ಸಂದರ್ಭವೂ ಅಧ್ಯಯನ ಯೋಗ್ಯವಾಗಿದೆ. ಇಂಗ್ಲೆಂಡಿನಲ್ಲಿ ಸೆಪ್ಟೆಂಬರ್ ೧೯೩೨ ರಂದು ಎರವಾಡ ಜೈಲಿನಲ್ಲಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸುತ್ತಾರೆ. ಗಾಂಧೀಜಿಯವರು ಉಪವಾಸದಿಂದ ನಿತ್ರಾಣರಾಗುತ್ತಿದ್ದಂತೆ ಈ ಹಕ್ಕನ್ನು ಹಿಂಪಡೆಯುವಂತೆ ಅಂಬೇಡ್ಕರ್ ಅವರ ಮೇಲೆ ಒತ್ತಡವೂ ಹೆಚ್ಚಾಗುತ್ತದೆ. ಅವರ ಮುಂದೆ ಎರಡು ಮಾರ್ಗಗಳಿದ್ದವು. ಒಂದು ತನ್ನ ಜನಾಂಗ ಹಿತರಕ್ಷಣೆ, ಎರಡನೆಯದು ಗಾಂಧೀಜಿಯವರ ಜೀವರಕ್ಷಣೆ. ಕಟ್ಟಕಡೆಗೆ ಡಾ. ಅಂಬೇಡ್ಕರ್ ಗಾಂಧೀಜಿ ಜೀವರಕ್ಷಣೆಯ ಕಡೆಗೆ ವಾಲುತ್ತಾರೆ. ಆಗ ನಡೆದ ಒಪ್ಪಂದವೇ ಪೂನಾ ಒಪ್ಪಂದವೆಂದು ಇತಿಹಾಸ ಪ್ರಸಿದ್ಧವಾಗಿದೆ.

ಡಾ. ಅಂಬೇಡ್ಕರ್ ಬೌದ್ಧಧರ್ಮ ಸ್ವೀಕಾರದ ಹಿಂದೆಯೂ ಗಾಂಧೀಜಿಯವರಿಗೆ ಕೊಟ್ಟ ಮಾತಿನ ಪ್ರಸ್ತಾಪವಿರುವುದು ಗಮನಾರ್ಹ ಅಂಶವಾಗಿದೆ. ಡಾ. ಅಂಬೇಡ್ಕರ್ ಬೌದ್ಧ ಧರ್ಮವೇ ಏಕೆ ಆಯ್ದುಕೊಂಡರೆಂಬುದು ಸುದೀರ್ಘ ಚರ್ಚೆಯ ವಿಷಯವಾಗಿದೆ. ಅನೇಕ ವಿದ್ವಾಂಸರು ಬಹು ಆಯಾಮಗಳಿಂದ ಈ ಸಂದರ್ಭವನ್ನು ವಿಶ್ಲೇಷಿಸಿದ್ದಾರೆ. ಅವರೇ ಒಂದು ಕಡೆ ಹೀಗೆ ಹೇಳುತ್ತಾರೆ. ಅಸ್ಪೃಶ್ಯತೆಗೆ ಸಂಂಧಿಸಿದಂತೆ ನಾನೊಮ್ಮೆ

ಗಾಂಧೀಜಿಯವರ ಬಳಿ ಚರ್ಚಿಸಿದ್ದೆ. ಈ ವಿಷಯದಲ್ಲಿ ನನ್ನೊಂದಿಗೆ ತನಗೆ ಭಿನ್ನಾಭಿಪ್ರಾಯವಿರುವುದಾಗಿ ಅವರು ಹೇಳಿದ್ದರು. ಅಷ್ಟಾದರೂ ನಾನಾಗ ಅವರಿಗೊಂದು ಮಾತು ಕೊಟ್ಟಿದ್ದೆ. ನಾನೇನಾದರೂ ನನ್ನ ಮಾರ್ಗವನ್ನು ಬದಲಿಸುವುದಾದಲ್ಲಿ ಈ ದೇಶಕ್ಕೆ ಅತ್ಯಂತ ಕಡಿಮೆ ಹಾನಿಯಾಗಬಹುದಾದಂತಹದನ್ನೇ ಆಯ್ಕೆ ಮಾಡುವುದಾಗಿ ತಿಳಿಸಿದ್ದೆ. ಈಗ ಬೌದ್ಧ ಮತ ಸ್ವೀಕರಿಸುವುದರ ಮೂಲಕ ನನ್ನ ಮಾತನ್ನು ಉಳಿಸಿಕೊಂಡಿರುವೆ. (ಸಾಮಾಜಿಕ ಕ್ರಾಂತಿ ಸೂರ್ಯ ಡಾ.ಬಾಬಾಸಾಹೇಬ್ ಅಂಬೇಡ್ಕರ್ : ಮರಾಠಿ ಮೂಲ ದತ್ತೋಪಂತ ಠೇಂಗಡಿ: ಕ-ಚಂದ್ರಶೇಖರ ಭಂಡಾರಿ) ಅವರ ಈ ಮಾತಿನಲ್ಲಿ ಗಾಂಧೀಜಿ ಮತ್ತು ದೇಶದ ಬಗ್ಗೆ ಅವರಿಗಿರುವ ಅಪಾರ ಪ್ರೇಮ ಅಭಿವ್ಯಕ್ತಗೊಂಡಿದೆ.

ಗಾಂಧೀಜಿ ಮತ್ತು ಅಂಬೇಡ್ಕರ್ ಜಾತಿಯತೆ ಮತ್ತು ಅಸ್ಪಶ್ಯತೆಯ ಆಚರಣೆಯ ವಿಚಾರದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರೂ ಆಂತರಿಕವಾಗಿ ಇಬ್ಬರು ಪರಸ್ಪರ ಗೌರವದ ಭಾವನೆಯನ್ನು ಹೊಂದಿದ್ದರು. ಗಾಂಧೀಜಿಯವರು ತಮ್ಮ ಕೊನೆಯ ದಿನಗಳಲ್ಲಿ ತುಂಬಾ ಬದಲಾವಣೆ ಆಗಿದ್ದರು. ೧೯೪೬ ಜುಲೈ ೨೦ ರಂದು ಓರ್ವ ಹರಿಜನ ಸೇವಕ ಸಂಘದ ಕಾರ್ಯಕರ್ತ ಕೇಳಿದ ಪ್ರಶ್ನೆಗೆ ಉತ್ತರಿಸುತ್ತ ಯಾವುದೇ ವಿಚಾರ ನಿರಂತರವಾಗಿ ವಿಕಾಸಗೊಳ್ಳುತ್ತಲೇ ಇರುತ್ತದೆ. ನಿಮಗೋರ್ವ ವಿವಾಹ ವಯಸ್ಕ ಮಗಳಿದ್ದೂ ಶುದ್ಧವಾದ ಧಾರ್ಮಿಕ ಭಾವನೆಯಿಂದ ನಿವೇನಾದರೂ ಓರ್ವ ಹರಿಜನ ವರನೊಂದಿಗೆ ಆಕೆಯ ವಿವಾಹ ನಡೆಸಲು ಮುಂದೆ ಬಂದಲ್ಲಿ, ನಾನು ತುಂಬಾ ಸಂತೋಷದಿಂದ ವಧು-ವರರನ್ನು ಆಶೀರ್ವದಿಸುವೆ ಎಂದಿದ್ದಾರೆ. ಅಷ್ಟೇ ಅಲ್ಲದೆ ಓರ್ವ ಸಮಾಜ ಸೇವಕನಿಗೆ ಬರೆದ ಪತ್ರದಲ್ಲಿ ಒಂದೇ ಜಾತಿಯವರ ನಡುವೆ ನಡೆಯುವ ವಿವಾಹದಲ್ಲಿ ನನ್ನಿಂದ ಆಶೀರ್ವಾದಕ್ಕಾಗಿ ಬೇಡಬಾರದು. ಅಧು ಬೇರೆ ಜಾತಿಯವಳಾದಲ್ಲಿ ನಾನು ಖಂಡಿತವಾಗಿ ಆಶೀರ್ವದಿಸುವೆ ಎಂದಿದ್ದಾರೆ. ನಿಜ ಒಬ್ಬ ಮಹಾಪುರುಷ ಕಾಳದ ಬೇಗೆಯಲ್ಲಿ ಬೆಂದು ಪರಿಪಕ್ವವಾಗುತ್ತಿದ್ದಂತೆ ಆತನ ವಿಚಾರಧಾರೆಗಳಲ್ಲಿಯೂ ಬದಲಾವಣೆಯಾಗುತ್ತಿರುತ್ತದೆ. ಗಾಂಧೀಜಿಯವರಿಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯ ಅರಿವಾಗುತ್ತದ್ದಂತೆ ಅವರಲ್ಲಿ ಶೋಷಿತ ಸಮುದಾಯಗಳ ಬಗ್ಗೆ ಅನುಕಂಪ ಉಂಟಾಗುತ್ತದೆ. ವ್ಯವಸ್ಥೆಯನ್ನು ಬದಲಾಯಿಸಲು ವ್ಯಕ್ತಿಗತ ನೆಲೆಯಲ್ಲಿ ಪ್ರಯತ್ನಿಸಿದರು. ಅದನ್ನೊಂದು ಕ್ರಾಂತಿಯ ರೂಪದಲ್ಲಿ ಪ್ರಯತ್ನಿಸಿದ್ದರೆ ಬಹುಶಃ ಭಾರತೀಯ ವ್ಯವಸ್ಥೆಯನ್ನು ಕಿಂಚಿತ್ತಾದರೂ ಬದಲಾಯಿಸಲು ಸಾಧ್ಯವಿತ್ತು. ಆದರೆ ಅವರು ಪೂರ್ಣ ಸ್ವಾತಂತ್ರ್ಯದೆಡೆಗೆ ಮನಸ್ಸು ಕೇಂದ್ರೀಕರಿಸಿದ್ದರಿಂದ ಜಾತಿ ಮತ್ತು ಅಸ್ಪೃಶ್ಯತೆಯ ಕಡೆಗೆ ತೀವ್ರ ನಿಗಾವಹಿಸಲು ಸಾಧ್ಯವಾಗಲಿಲ್ಲವೇನೋ.

ಪ್ರಸಿದ್ಧ ಚಿಂತಕ ನರಹರ ಕುರಂದಕರು ತಮ್ಮ ಭಜನ ಕೃತಿಯಲ್ಲಿ ಗಾಂಧೀಜಿಯವರಲ್ಲಾದ ಈ ಪರಿವರ್ತನೆಯನ್ನು ಕುರಿತು ಅವರು ಕಾಲ ಉರುಳಿದಂತೆ ಉದಾರವಾದಿಯಾದರು, ಸಮಾಜವಾದಿಯಾದರು ಗಾಂಧೀಜಿಯವರ ದೊಡ್ಡತನ ಪರಿಪಕ್ವವಾಗಿದ್ದನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಅವರಲ್ಲಿನ ಕೆಲವು ಗುಣಗಳು ತಾವೇ ಸ್ವರ್ಣವಾಗಿದ್ದಲ್ಲಿ ಇನ್ನೂ ಕೆಲವು ಸ್ವರ್ಣಕಾರನದ್ದಾಗಿದ್ದವು. ಭಾರತದ ರಾಜಕಾರಣ

ಮತ್ತು ಇಲ್ಲಿನ ಪ್ರಜಾಪ್ರಭುತ್ವದ ಅಗತ್ಯಗಳು ಗಾಂಧೀಜಿಯವರಲ್ಲಿ ಬದಲಾವಣೆ ತರಲು ಕಾರಣವಾದವು. ಸಾಮಾಜಿಕ ಸಮಾನತೆಯ ಈ ಸಮರದಲ್ಲಿ ತನ್ನಲ್ಲಿ ಬದಲಾವಣೆ ತರಲು ಅವರನ್ನು ಪ್ರತ್ಯಕ್ಷವಾಗಿಯೋ ಹೆಚ್ಚು ಎಂದಿದ್ದಾರೆ. ಗಾಂಧೀಜಿಯವರಲ್ಲಿ ಭಾರತೀಯ ಸಮಾಜವನ್ನು ಕುರಿತು ಅರಿವಿನ ವಿಸ್ತರಣೆಯಾದುದು ಡಾ.ಅಂಬೇಡ್ಕರ್ ಅವರ ಪ್ರೇರಣೆಯಿಂದ ಎಂಬುದನ್ನು ಬಹುಪಾಲು ಚಿಂತಕರು ಒಪ್ಪಿಕೊಳ್ಳುತ್ತಾರೆ. ಗಾಂಧೀಜಿಯವರಲ್ಲಾದ ಬದಲಾವಣೆಯನ್ನು ಮಧುಲಿಮೆವರು ಗುರುತಿಸಿದ್ದು ಹೀಗೆ ಜಾತಿ ವ್ಯವಸ್ಥೆ ಮತ್ತು ವರ್ಣವ್ಯವಸ್ಥೆಯನ್ನು ಕುರಿತಂತೆ ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆ ತುಂಬಾ ಭಿನ್ನಭಿಪ್ರಾಯಗಳಿದ್ದವು. ಆದರೆ ತಮ್ಮ ಕೊನೆಯ ಕಾಲದಲ್ಲಿ ಗಾಂಧೀಜಿಯವರ ವಿಚಾರದಲ್ಲಿ ಮೂಲಗಾಮಿ ಪರಿವರ್ತನೆಯಾಗಿತ್ತು. ಆದರೆ ಇದು ಅಂಬೇಡ್ಕರ್ ಅವರ ಸಫಲತೆಗೆ ಸಂದ ಗೌರವವೂ ಹೌದು ಎಂದಿದ್ದಾರೆ. ಅಂಬೇಡ್ಕರ್ ಅವರ ಅಸಾಮಾನ್ಯ ಚಿಂತನಾಶಕ್ತಿ, ವಿಚಾರಧಾರೆ ಗಾಂಧೀಜಿಯವರ ಪರಿವರ್ತನಾಶೀಲ ಮನಸ್ಸು ಗೌರವಾರ್ಹವಾದವು.

ಮಹಾನ್ ಚಿಂತಕರಾದ ಶ್ರೀ ಗೋಪಾಲ ಸಬನಿಸ್ ಅವರು ತಮ್ಮ ಉಗವತೀ ಚಾ ಸೂರ್ಯ ಕೃತಿಯಲ್ಲಿ ಮಹಾಪುರುಷರ ನಿಲುವುಗಳನ್ನು ಅರ್ಥೈಸುವ ಸಂಧರ್ಭದಲ್ಲಿ ನಿಸ್ಸಹಾಯಕ ಮತ್ತು ಅಂತಿಮ ಸತ್ಯವನ್ನು ಆಧರಿಸಿ ಮಹತ್ವದ್ದಾವುದೆಂಬುದನ್ನು ಗುರುತಿಸುವುದು ಸಾಧ್ಯವಾದ ನಂತರವೂ ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಮನದಿಂಗಿತ ಆದ್ದರಿಂದ ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರಂತಹ ಮಹಾಪುರುಷರ ವಿಚಾರಧಾರೆಗಳನ್ನು ವಿಶ್ಲೇಷಿಸುವಾಗ ಈ ಎಚ್ಚರ ಬಹಳ ಮುಖ್ಯವಾಗುತ್ತದೆ.

ಈ ಎಲ್ಲಾ ಚಿಂತಕರ ವಿಚಾರಧಾರೆಗಳ ಅಡಿಯಲ್ಲಿ ಡಾ.ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವಿನ ಸಂಬಂಧವನ್ನು ಪರಿಗ್ರಹಿಸುವ ಪ್ರಯತ್ನಗಳು ನಡೆಯಬೇಕಾಗಿದೆ.

***********

## ೬. ಮಧ್ಯಕಾಲೀನ ಭಾರತದಲ್ಲಿ ದಲಿತರ ಅಸ್ತಿತ್ವ

**- ಪ್ರೊ. ಶಿವರಾಮಯ್ಯ**

ಊರು ಎಂದರೆ ಹೋಲಗೆರೆ ಇರುವುದು. ನಗರವೆಂದರೆ ಕೊಳಗೇರಿಯಿರಿವುದು ಸಾಮಾನ್ಯ. ಇಲ್ಲಿ ವಾಸ ಮಾಡುವ ಸಹಮಾನವರನ್ನು ಹಿಂದೆ ಅಸ್ಪೃಶ್ಯರೆಂದೂ ಈಚೆಗೆ ದಲಿತರೆಂದೂ ಕರೆಯಲಾಗುತ್ತಿದೆ. ಆದ್ದರಿಂದ 'ದಲಿತ' ಶಬ್ದಕ್ಕೆ ಪರ್ಯಾಯವಾಗಿ "ಅಸ್ಪೃಶ್ಯ' ಎಂಬ ಶಬ್ದವನ್ನೇ ಈ ಲೇಖನದಲ್ಲಿ ಬಳಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ 'ಸ್ಪಶ್ಯರು' ಮತ್ತು 'ಅಸ್ಪೃಶ್ಯರು' ಎಂಬ ಎರಡು ಪದಗಳು ಚಾಲ್ತಿಯಲ್ಲಿದ್ದವು. ಅಸ್ಪೃಶ್ಯರು ಯಾರು ಎಂಬ ಬಗ್ಗೆ ಅನೇಕ ವ್ಯಾಖ್ಯಾನಗಳಿವೆ. ಸಂಕ್ಷಿಪ್ತವಾಗಿ ಅಸ್ಪೃಶ್ಯ ಎಂದರೆ ಅನಕ್ಷರಸ್ತ ಮತ್ತು ಅವಮಾನಕ್ಕೊಳಗಾದ ಜಾತಿಯಲ್ಲಿ ಹುಟ್ಟಿದ ವ್ಯಕ್ತಿ, ಯಾರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ದಮನಕ್ಕೊಳಗಾಗಿದ್ದಾನೋ ಅವನೇ ಅಸ್ಪೃಶ್ಯ. ಡಾ|| ಬಾಬಾಸಾಹೇಬ್ ಅಂಬೇಡ್ಕರ್ ಶ್ರುತಪಡಿಸಿರುವಂತೆ ಅಸ್ಪೃಶ್ಯನೆಂದರೆ ಒಬ್ಬ ವ್ಯಕ್ತಿ ವಿಚಾರದಲ್ಲಿ ಹಿಂದೂವಿನೊಬ್ಬನ ಅಂತರಂಗದಲ್ಲಿ ಮೂಡಿದ ತಿರಸ್ಕಾರದ ಬಾಹ್ಯ ಸ್ವರೂಪವಾಗಿರುತ್ತಾನೆ. ಎಲ್ಲೆಲ್ಲಿ ಈ ತಿರಸ್ಕಾರ ಉಂಟೋ ಅಲ್ಲೆಲ್ಲ ಅಸ್ಪೃಶ್ಯತೆ ತಾನೇ ತಾನಾಗಿರುತ್ತದೆ.

ಅಸ್ಪೃಶ್ಯರನ್ನು ಹೊಲೆಯ, ಮಾದಿಗ, ಪಂಚಮ, ಮರೆಯಾ, ಚಂಡಾಲ, ಸಮಗಾರ, ಚಮ್ಮಾರ, ಹರಿಜನ, ಆದಿಕರ್ನಾಟಕ, ಆದಿದ್ರಾವಿಡ ಇತ್ಯಾದಿ ಅನೇಕ ಪರ್ಯಾಯ ಶಬ್ದಗಳಿಂದ ಕರೆಯಲಾಗುತ್ತದೆ. ಹಿಂದೂ ಸಮಾಜವು ಒಂದು ಬೃಹತ್ ಮನೆ ಇದ್ದಂತೆ. "ಇದರಲ್ಲಿರುವ ಜನಸಮೂಹಗಳು ಅಸಂಖ್ಯಾತ ಜಾತಿಗಳಲ್ಲಿ ಹರಿದು ಹಂಚಿಹೋಗಿವೆ. ಎಂಬ ಅಂಬೇಡ್ಕರ್ ಅವರ ಮಾತು ನಿಜ. ಹಿಂದೂ ದೇಶದಲ್ಲಿ ವೈಶಿಷ್ಟ್ಯ ಇರುವುದೇ ಇಲ್ಲಿ. ಜಾತಿ, ಪದ್ಧತಿ ಮತ್ತು ಅಸ್ಪೃಶ್ಯತೆ ಒಂದರೊಳಗೊಂದು ತಳುಕು ಹಾಕಿಕೊಂಡ ನಾಗರಹೆಣೆಯಾಟದಲ್ಲಿ,

ಅಸ್ಪಶ್ಯತೆಯ ಉಗಮ ಎಂದಾಯಿತು. ಹೇಗಾಯಿತು> ಯಾಕಾಯಿತು? ಇವು ತೀವ್ರ ಕುತೂಹಲಕಾರಿಯೂ ವಿಷಾದನೀಯವೂ ಆದ ಪ್ರಶ್ನೆಗಳು.

ವೇದ (ಕ್ರಿ.ಪೂ ೧೫೦೦-೧೦೦೦) ಗಳಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರೆಂಬ ನಾಲ್ಕು ವರ್ಣಗಳು ಮೊದಲು ಕಾಣಿಸಿಕೊಂಡವು. ಹಾಗೆಯೇ ಸೃಷ್ಟಿಕರ್ತನ ಮುಖದಿಂದ ಬ್ರಾಹ್ಮಣರೂ ಭುಜದಿಂದ ಕ್ಷತ್ರಿಯರೂ ತೊಡೆಯಿಂದ ವೈಶ್ಯರೂ ಪಾದಗಳಿಂದ ಶೂದ್ರರೂ ಜನಿಸಿದರೆಂಬ ಪ್ರತೀತಿಯಿದೆ.

ವೃತ್ತಿ ಆಧಾರದಿಂದ ಹೇಳುವುದಾದರೆ, ಅಧ್ಯಯನ ಅಧ್ಯಾಪನ ನಿರತನು ಬ್ರಾಹ್ಮಣ; ರಕ್ಷಣೆ ಮಾಡುವಾತನು ಕ್ಷತ್ರೀಯ; ವ್ಯವಸಾಯ, ವ್ಯಾಪಾರ ನಿರತನು ವೈಶ್ಯ ಹಾಗೂ ಈ ಮೂರು ವರ್ಗಗಳ ಸೇವಾನಿರತನು ಶೂದ್ರ ಋಗ್ವದದಲ್ಲಿ ಆರ್ಯ ಮತ್ತು ದಸ್ಯು ಎಂಬ ಎರಡು ಶಬ್ದಗಳಿದ್ದು 'ಆರ್' ಶ್ರೇಷ್ಠನೆಂದೂ 'ದಸ್ಯು' ಅಶ್ರೇಷ್ಠ ಮೂಲನಿವಾಸಿಯೆಂದೂ ಪರಿಗಣಿಸಲಾಗಿದೆ. ಮೇಲಿನ ನಾಲ್ಕು ವರ್ಣಗಳಿಂದ ಅನೇಕ ಮಿಶ್ರವರ್ಣಗಳೂ ಮಿಶ್ರ ಜಾತಿಗಳೂ ಹುಟ್ಟಿಕೊಂಡವು. ಒಟ್ಟಾರೆ ವರ್ಣಸಂಕರವೇ ಜಾತಿಗಳ ಹುಟ್ಟಿಗೆ ಮೂಲ ಕಾರಣವೆಂದು ಸ್ಥೂಲವಾಗಿ ಹೇಳಬಹುದು.

ಹಿಂದೂ ಸಮಾಜದ ಬಗ್ಗೆ ಆಳ ಅಧ್ಯಯನಶೀಲರಾಗಿದ್ದ ಡಾ|| ಅಂಬೇಡ್ಕ ಹೇಳುವ ಹಾಗೆ ಇದರ ಸಂರಚನೆ ತುಂಬ ಸಂಕೀರ್ಣವಾದದ್ದು. ಹಿಂದೂಗಳ ಸಾಮಾಜಿಕ ಸಂರಚನೆ ಒಂದು ರೇಖಾಚಿತ್ರವನ್ನು ಅವರು ಹೀಗೆ ಬಿಡಿಸುತ್ತಾರೆ:(ಡಾ|| ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ೨೬-೧೬೮.)

ಚಂಡಾಲರ ಉಲ್ಲೇಖ ಮೊದಲು ಕಾಣಿಸಿಕೊಂಡದ್ದು ಯಜುರ್ವೇದದಲ್ಲಿ ಛಾಂದೋಗೋಪನಿಷತ್ತಿನ ಪ್ರಕಾರ ಚಂಡಾಲರು ನಾಯಿ, ಹಂದಿಗಳಿಂದ ಭಾರತಕ್ಕೆ ಬಂದ ಆಕ್ರಮಣಕಾರರು ದಮನ ಮಾಡಿದ ದೇಶೀಯ ಜನರೇ ಈಗಿನ ಅಸ್ಪೃಶ್ಯರಂತೆ. ಆದ್ದರಿಂದ ಅಸ್ಪೃಶ್ಯರೇ ಇಲ್ಲಿನ ಮೂಲ ನಿವಾಸಿಗಳಾಗಿರುತ್ತಾರೆ. ಇವರ ಸ್ಥಿತಿ-ಗತಿ ತೀರಾ ಶೋಚನೀಯ. ಅವರು ಊರ ಹೊರಗೆ, ಅದೂ ದಕ್ಷಿಣ ದಿಕ್ಕಿನಲ್ಲಿ ವಾಸಿಸಬೇಕು; ಈ ದಿಕ್ಕು ಕೂಡ ಅಮಂಗಲಕಾರಿ ಆದ್ದರಿಂದ ಗ್ರಾಮೀಣ ಭಾರತದ ಪರಿಸ್ಥಿತಿ ಈಗಲೂ ಹೀಗೇ ಇದೆ. ಭೌಗೋಳಿಕ ಪ್ರತ್ಯೇಕತೆ ಸದಾ ಕಾಲಕ್ಕೂ ಇದ್ದದ್ದೇ.

ಅವರು ಭಿಕ್ಷೆಗೆ ಅಥವಾ ಕೆಲಸಕ್ಕೆ ಊರೊಳಗೆ ಬರಬೇಕು. ಅವರನ್ನು ಯಾರೂ ಮುಟ್ಟಬಾರದು. ಒಂದು ವೇಳೆ ಮುಟ್ಟಿಸಿಕೊಂಡರೂ ಸಚೇಲ ಸ್ನಾನ ಮಾಡಬೇಕು. ಗೃಹಸ್ಥರು ತಮ್ಮ ಊಟವಾದ ಮೇಲೆ ನಾಯಿ ಕಾಗೆಗೆಗಳಿಗೆ ಎಸೆಯುವಾಗ ಇವರಿಗೂ ಅನ್ನ ಎಸೆಯಬೇಕು; ಚಂಡಾಲರು ಕಸಗುಡಿಸಲು ಬೆಳಿಗ್ಗೆ ಹೊತ್ತು ಮಾತ್ರ ಬರಬೇಕು; ತನ್ನ ಕೊರಳಿಗೆ ಕುಡಿಕೆಯೊಂದನ್ನು ಕಟ್ಟಿಕೊಂಡು, ಎಂಜಲನ್ನು ಅದರೊಳಕ್ಕೆ ಮಾತ್ರ ಉಗಿಯಬೇಕು. ಅಸ್ಪೃಶ್ಯರ ನೆರಳು ಹಿಂದೂಗಳಿಗೆ ಸೋಂಕಬಾರದು. ತಾವು ಬರುತ್ತಿರುವುದನ್ನು ಸೂಚಿಸಲು ಸದ್ದುಗದ್ದಲ ಮಾಡುತ್ತಿರಬೇಕು. ಉದಾಹರಣೆಗೆ, ದ್ವಾರಕಾ ಪಟ್ಟಣದಲ್ಲಿ 'ಕಂಬ,ಕಂಬ' ಎಂಬ ಶಬ್ದವೂ, ಮದರಾಸು ಪ್ರಾಂತ್ಯದ ಚೆರುಮಾನ್‌ರು ಓ ವೋ' ಎಂದು ಪಾಲ್‌ಘಾಟ್‌ನಲ್ಲಿ' ಅಂಬಾಣಿ ಅಂಬಾಣಿ' ಎಂದೂ ಸದ್ದು ಮಾಡುತ್ತಿದ್ದರು.

ಥರ್ಸ್ಟನ್ ತನ್ನ ಟ್ರೈಬ್ಸ್  ಆಂಡ್ ಕ್ಯಾಸ್ಟ್ಸ್ ಇನ್ ಸದರನ್ ಇಂಡಿಯಾ' ಎಂಬ ಕೃತಿಯಲ್ಲಿ ಬರೆಯುವ ಇಂತಹ ಕೆಲವು ಸಂಗತಿಗಳು ತೀರ ಹೃದಯವಿದ್ರಾವಕವಾಗಿವೆ.

ಡಾ. ಅಂಬೇಡ್ಕರ್ ತಮ್ಮ ಬರಹಗಳು ಮತ್ತು ಭಾಷಣಗಳು ಕೃತಿ (ಸಂಪುಟ ೫, ೨೧೧-೨೧೫) ಯಲ್ಲಿ ಮಲಬಾರ್ ಮ್ಯಾನ್ಯುಯಲ್ (ಆಧಾರದಿಂದ ತೆಗೆದುಕೊಂಡಿರುವ

ಮಾಹಿತಿಗಳ ಪ್ರಕಾರ, ಅಸ್ಪೃಶ್ಯರಿಗಿಂತ ಇನ್ನೂ ಹೀನಾಯವಾದ ಬದುಕು ಸಾಗಿಸುವ ಎರಡು ಬಗೆಯ ಜನನಾಯಡಿ)ರಿದ್ದರು. ಅವರನ್ನು ದೂರಾಶೌಚಕಾರಿಗಳು ಮತ್ತು ದೃಶ್ಯಾಶೌಚಕಾರಿಗಳು ಎಂದು ಕರೆಯಲಾಗುತ್ತಿತ್ತು. ಇವರಲ್ಲಿ ಮೊದಲನೇ ಗುಂಪಿನ ಜನರು ನಿರ್ದಿಷ್ಟ ದೂರದಿಂದ ಈಚೆ ಬಂದರೆ ಮೈಲಿಗೆಯನ್ನುಂಟು ಮಾಡುವವರಾಗಿದ್ದಾರೆ. ಎರಡನೇ ಗುಂಪಿನ ಜನ ಕಣ್ಣಿಗೆ ಬಿದ್ದರೂ ಮೈಲಿಗೆಯನ್ನುಂಟು ಮಾಡುವವರಾಗಿದ್ದಾರೆ. ಇಂಥವರ ಸಂಕಷ್ಟಗಳು ಎಂಥವಿರಬೇಕು? ಹೇಗೆ ಅವರು ತಮ್ಮ ಬದುಕನ್ನು ತಳ್ಳುತ್ತಿರಬಹುದು? ಅವರು ಹತ್ತಿರ ಬರುವುದೂ ಕಣ್ಣಿಗೆ ಬೀಳುವುದೂ ನಿಷಿದ್ದವಾಗಿರುವಾಗ ಅವರು ದುಡಿಯಲು ಯಾವ ಕೆಲಸ ಸಿಕ್ಕೀತು? ಭಿಕ್ಷೆ ಬೇಡುವುದು ಅಥವಾ ನಾಯಿ ಮಾಂಸವನ್ನು ತಿನ್ನುವುದು ಇಂಥವಲ್ಲದೇ ಅವರು ಇನ್ನೇನು ಮಾಡಲು ಸಾಧ್ಯ? ನಿಶ್ಚಿತವಾಗಿಯೂ ಜಗತ್ತಿನ ಯಾವುದೇ ಒಂದು ನಾಗರಿಕತೆ ಇದಕ್ಕಿಂತ ಕ್ರೌರ್ಯದ ಆರೋಪಕ್ಕೆ ಗುರಿಯಾಗಲಾರದು- ಹೀಗೆಂದು ಡಾ|| ಅಂಬೇಡ್ಕರ್ ಪ್ರತಿಕ್ರಿಯಿಸುತ್ತಾರೆ. (ಬರಹಗಳು-ಭಾಷಣಗಳು,, ಪು.೨೧೨)

ಮೇಲೆ ಹೇಳಿದ ಅಸ್ಪೃಶ್ಯತೆಯ ಆಚರಣೆ ಕಳೆದ ಶತಮಾನದ ಆರಂಭಕ್ಕೆ ಕಂಡುಬರುತ್ತಿದ್ದ ಒಂದು ನಿದರ್ಶನ ಹೇಳಬೇಕಾಗಿದೆ. ನ್ಯಾಷನಲ್ ಜಿಯಾಗ್ರಫಿಕ್ ಸಂಸ್ಥೆಯವರು ಎರಡೂ ವರ್ಷದ ಹಿಂದೆ ಇಂಡಿಯಾದಲ್ಲಿ ಈ ಬಗ್ಗೆ ಒಂದು ಸಮೀಕ್ಷೆ ನಡೆಸಿದರು. ಆಗ ಉತ್ತರ ಭಾತರದ ಒಂದು ನಗರದಲ್ಲಿ ಗಟಾರವೊಂದರ ಮ್ಯಾನ್‌ಹೋಲ್ ಕಟ್ಟಿಕೊಂಡಿತ್ತು. ಭಂಗಿಯೊಬ್ಬನು ಅದರಲ್ಲಿಳಿದು, ಆ ಹೇಲು, ಉಚ್ಚೆ ಕೊಚ್ಚೆಯಲ್ಲಿ ಮುಳುಗಿ, ಅದನ್ನು ಕ್ಲೀನ್ ಮಾಡಿ ಮೇಲೆ ಬಂದ. ವಿಪರ್ಯಾಸವೆಂದರೆ ಹಾಗೆ ಮೇಲೆ ಬಂದ ಭಂಗಿಯ ತಲೆಯ ಮೇಲೆ ಒಂದು ಕೊಡ ನೀರು ಹಾಕುವ ಸವರ್ಣೀಯರು ಹೇಸಿಕೊಂಡರು. ಇಂಥ ಹಲವಾರು ಪ್ರಸಂಗಗಳು ಆ ನ್ಯಾಷನಲ್ ಜಿಯಾಗ್ರಫಿಕ್ ಸಂಚಿಕೆಯಲ್ಲಿ ವರದಿಯಾಗಿದ್ದವು.

ಈ ಸಂದರ್ಭದಲ್ಲಿ ನನ್ನ ಸ್ವಾನುಭವ ಕೆಲವು ಪ್ರಸಂಗಗಳನ್ನು ಇಲ್ಲಿ ದಾಖಲಿಸಬಹುದು. ಈಗ ನಾಲ್ಕು ವರ್ಷಗಳ ಹಿಂದೆ ನಾನೂ ಕೆಲವು ಸ್ನೇಹಿತರೂ ಬೆಳಗಾವಿಯ ನೇಕಾರರ ಸಮಸ್ಯೆಯ ಅಧ್ಯಯನಕ್ಕೆಂದು ಹೋಗಿದ್ದೆವು. ಆಗ ಆ ನಗರದ ಗಲ್ಲಿಯೊಂದರಲ್ಲಿ ಕಂಡ ದಲಿತನೊಬ್ಬನ ಬದುಕಿನ ಚಿತ್ರವನ್ನು ನಾನೆಂದೂ ಮರೆಯಲಾರವನಾಗಿದ್ದೇನೆ. ಒಬ್ಬ ವಯಸ್ಸಾದ ವ್ಯಕ್ತಿ ಸತ್ತ ದನ-ಎಮ್ಮೆಗಳ ಹಸಿ ಚರ್ಮವನ್ನು ಹದಗೊಳಿಸುತ್ತಿದ್ದ. ಸಿಮೆಂಟ್ ತೊಟ್ಟಿಗೆ ಏನೋ ದ್ರಾವಣವನ್ನು ಹಾಕಿ, ಒಂದೆಡೆ ಚರ್ಮಗಳನ್ನು ತಂದು ನೆನೆಹಾಕಿದ್ದ. ಆ ತೊಟ್ಟಿಯ ಸುತ್ತಲೂ ಉಪ್ಪು ಸವರಿದ ಚರ್ಮಗಳನ್ನು ಕ್ಲಿಪ್ ಹಾಕಿ ನೇತುಹಾಕಿದ್ದ. ನಡುವೆ ಆ ತೊಟ್ಟಿಯಿಂದ ಒಂದೊಂದೇ ಚರ್ಮಗಳನ್ನು ಬರಿಗೈಯಲ್ಲಿ ಹಿಡಿದು ಉಜ್ಜಿ ಎರೆದು ಕ್ಲೀನ್ ಮಾಡುತ್ತಿದ್ದ. ದಿನಕ್ಕೆ ೧೦೦ರಿಂದ ೨೦೦ರವರೆಗೆ ದುಡಿಯುವುದಾಗಿ ಹೇಳಿದ. ಅವನ ಕೈಕಾಲು ಬೆರಳು ಸಂದುಗಳೆಲ್ಲಾ ಬೆಳ್ಳಗೆ ಸೆಲೆತುಕೊಂಡಿರುವುದು ಕಂಡುಬರುತ್ತಿತ್ತು.

ವಂಶಪಾರಂಪರವಾಗಿ ಅವನು ಇದೇ ವೃತ್ತಿಯನ್ನು ಮಾಡುತ್ತಿದ್ದಾನಂತೆ. ನಮಗೆ ಅಲ್ಲಿ ಒಂದು ಕ್ಷಣ ನಿಲ್ಲಲೂ ಆಗದೆ ವಾಕರಿಕೆ ಬರುತ್ತಿತ್ತು. ಇನ್ನು ಈ ಭವ್ಯ ಭಾರತದ ರೈಲ್ವೆ ಸ್ಟೇಷನ್ ಟ್ರ್ಯಾಕ್‌ಗಳಲ್ಲಿ ಇಳಿದು ಅವುಗಳನ್ನು ಶುದ್ಧೀಕರಿಸುವ ಝಾಡಮಾಲಿಗಳ ಗತಿ-ಸ್ಥಿತಿಯನ್ನು ಯಾರು ತಾನೇ ಕಂಡಿಲ್ಲ? ಒಟ್ಟಾರೆ, ದೇಶ ಕಾಲ ಯಾವುದೇ ಇರಲಿ ಅಸ್ಪೃಶ್ಯರ ಹೃದಯ ವಿದ್ರಾವಕ ಬದುಕು ಮಾತ್ರ ಹಾಗೇ ಇದೆ. ಅವರದು ಕಾಲ ದೇಶ ಸ್ಥಗಿತಗೊಂಡ ಶೂನ್ಯ ಇತಿಹಾಸ.

ಡಾ|| ಅಂಬೇಡ್ಕರ್, ಇದೇ ನಾಗರಿಕತೆ ಅಥವಾ ನರಕ ನ್ಯಾಯವನ್ನು ಬಿಂಬಿಸುವ ೨೫ನೇ ಫೆಬ್ರವರಿ ೧೯೩೮ರ ಬಾಂಬೆ ಕ್ರಾನಿಕಲ್ ಆಧರಿಸಿ, ಮತ್ತೊಂದು ಪಾಶವೀ ದೌರ್ಜನ್ಯದ ಪ್ರಸಂಗವನ್ನು ಉಲ್ಲೇಖಿಸುತ್ತಾರೆ. ದಾಮು ಮತ್ತು ಲಕ್ಷಣ ಎಂಬ ಸೋದರರು ಮರಾಠ ಜನರ ಭಜನಾ ಮೇಳದಲ್ಲಿ ತಲೆಮರೆಸಿಕೊಂಡು ಸೇರಿದ್ದು ಅವರು ತಪ್ಪಾಯಿತು. ಅವರ ಅಸ್ಪೃಶ್ಯರೆಂದು ತಿಳಿದ ಮೇಲೆ ಈ ಸವರ್ಣೀಯ ಭಜನಾ ತಂಡದವರು ಅವರ ಮೇಲೆ ಹೀನಾಯವಾದ ದೌರ್ಜನ್ಯ ನಡೆಸಿದರು. ಅವರ ಎಡ ಮೀಸೆ ಮತ್ತು ಬಲ ಹುಬ್ಬುಗಳನ್ನು ನುಣ್ಣಗೆ ಬೋಳಿಸಿ, ಬೆತ್ತಲೆಗೊಳಿಸಿ ಮೈತುಂಬ ಮಸಿ ಬಳಿದು, ಹರಿದ ಬೂಟುಗಳ ಮಾಲೆ ಹಾಕಿ 'ಮೇಲು ಜಾತಿಯವರನ್ನು ಮುಟ್ಟಿದುದಕ್ಕೆ ಇದೇ ಶಿಕ್ಷೆ' ಎಂದು ಬರೆದದು, ನಗರದ ಬೀದಿ ಬೀದಿಗಳಲ್ಲಿ ತಮ್ಮಟೆ ಬಡಿದು ಸಾರುತ್ತಾ ಮೆರವಣಿಗೆ ತೆಗೆದರು. ಅವರು ಪೋಲೀಸರಿಗೆ ದೂರು ಕೊಟ್ಟಾಗ, ಅಪಾದಿತರು ಶಿಕ್ಷೆ ಕೊಟ್ಟದ್ದು ನಿಜವೆಂದೂ ದಾಮು-ಲಕ್ಷ್ಮಣರು ಮೊದಲೇ ಶಿಕ್ಷೆಗೆ ಒಪ್ಪಿಕೊಂಡಿದ್ದರು ಎಂದೂ ಹೇಳಿದರು. ಮುಂದೆ ವಿವರಣೆ ಬೇಕಿಲ್ಲ. ಜೀವಭಯದಿಂದ ಅವರು ಇಂಥ ಅವಮಾನ ಶಿಕ್ಷೆಗೆ ಒಪ್ಪಿದರು.( ಕಂಬಾಲಪಲ್ಲಿಯ ಸಾಕ್ಷಿದಾರ ದಲಿತರು ಕೋರ್ಟಿನಲ್ಲಿ ಹಾಸ್ಟೇಲ್ ಆಗಿ, ಸವರ್ಣೀಯ ಅಪರಾಧಿಗಳು ಈಚೆಗೆ ಬಿಡುಗಡೆಯಾದ ಘಟನೆ ನೆನಪಾಗುತ್ತದೆ.)

ಈ ಬಗೆಯ ಅನೇಕಾನೇಕ ಪ್ರಸಂಗಗಳನ್ನು ಅಂಬೇಡ್ಕರ್ ಅವರ ಕೃತಿಯಲ್ಲಿ ಕಾಣಬಹುದು. ಸವರ್ಣೀಯ ಹಿಂದೂಗಳು ನಿರ್ಮಿಸಿರುವ ಜಾತಿ ವ್ಯವಸ್ಥೆಯ ಸೌಧದ ಪಾಯದಡಿಯಲ್ಲಿ ಸಿಕ್ಕಿ ಅಪ್ಪಚ್ಚಿಯಾಗಿರುವ ದಲಿತರ ಅಸಹಾಯಕ ಯಾತನಾಮಯ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಅಸ್ಪೃಶ್ಯತೆ ಎಂಬುದು ಜಾತಿ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಅನಾದಿಕಾಲದಿಂದಲೂ ಇಲ್ಲಿ ಚಾಲ್ತಿಯಲ್ಲಿದೆ. ವೃತ್ತಿ ವಿಂಗಡಣೆ ಗುಣ ಕರ್ಮಾನುಸಾರ ವೆಂದು ಹೇಳಿಕೊಳ್ಳುವ ಹಿಂದೂಗಳು ಹುಟ್ಟು ಹಾಕಿದ ಈ ವ್ಯವಸ್ಥೆ ಮನುಕುಲ ತಲೆ ತಗ್ಗಿಸುವಷ್ಟು ಕರಾಳವೂ, ಮಾನವ ವಿರೋಧಿಯೂ ಆಗಿದೆಯಷ್ಟೆ ಇಂಥ ಪಾಶವೀ ಕ್ರೌರ್ಯದ ವಿರುದ್ಧ ಮೊಟ್ಟಮೊದಲ ಬಾರಿಗೆ ಬಂಡೆದ್ದವನು ಗೌತಮ ಬುದ್ಧ, ಇಹದಲ್ಲಾಗಲೀ, ಪರದಲ್ಲಾಗಲೀ ವ್ಯಕ್ತಿ ವಿಕಸನಕ್ಕೆ ಜಾತಿ ಮತ್ತು ವರ್ಣ ಎಷ್ಟು ಮಾತ್ರವೂ ಕಾರಣವಲ್ಲವೆಂದು ಬೌದ್ಧ ದರ್ಶನ ಸಾರಿತು. ಆದರೆ ಬುದ್ಧನ ಬೋಧನೆಗಳು ಸಹ ಬೃಹತ್ ಭಾರತದ ಜಾತಿ ವ್ಯವಸ್ಥೆಯ ಮಹಾಸೌಧವನ್ನು ಉರುಳಿಸದಾಯಿತು. ಆದರೂ ಅದರ ತಳಪಾಯ ಸ್ವಲ್ಪ ಕಂಪಿಸಲು ಶುರುವಾಯಿತು ಆಗ. ಅಷ್ಟರಲ್ಲಿ ಎಚ್ಚೆತ್ತುಕೊಂಡ

ಬ್ರಾಹ್ಮಣ ವರ್ಗ, ಬುದ್ಧನು ವಿಷ್ಣುವಿನ ಅವತಾರವೆಂದು ಹೇಳಿ ಅವನನ್ನೇ ಹೈಜಾಕ್ ಮಾಡಿಕೊಂಡುಬಿಟ್ಟಿತು.

ಬುದ್ಧನ ತರುವಾಯ ಬಂದ ಭಕ್ತಿಪಂಥವು ಜಾತಿ ಪದ್ಧತಿಯನ್ನು ಮೂಲೋತ್ಪಾಟನ ಮಾಡಲು ತನ್ನ ಶಕ್ತಿ ಮೀರಿ ಯುಗಾದಿಗಳನ್ನು ಖಂಡಿಸಿ, ಮೂಢನಂಬಿಕೆ, ಅಂಧಶ್ರದ್ಧೆ, ಕಂದಾಚಾರ, ಜಾತಿ ಪದ್ಧತಿ ಇತ್ಯಾದಿಗಳ ವಿರುದ್ಧ ಸಮರ ಸಾರಿತು. ಗುಡಿ-ಗೋಪುರಗಳಲ್ಲಿ ಕೀಲಿಸಿ ಹೋಗಿದ್ದ ದೇವರನ್ನು ಭಕ್ತಿಪಂಥದ ಒಂದು ಮಹಾನ್ ಸಾಧನೆ. ಸಂಗೀತಾದಿ ಕಲೆಗಳ ಮೂಲಕ ದೀನ ದಲಿತರೂ ದೈವ ಸಾಕ್ಷಾತ್ಕಾರ ಪಡೆಯಬಹುದೆಂದು ಆತ್ಮವಿಶ್ರಾಂತಿಗೆ ಅವಕಾಶ ಕಲ್ಪಿಸಿತು. ಹೀಗೇ ಸೂಫಿ-ದತ್ತ-ದಾಸಪಂಥಗಳೂ ದೀನನಾಥ ದಲಿತರ ಬಳಿಗೆ ಹೋಗಿ ಸಂತೈಸಿದವು.

ಶತಮಾನಗಳ ದೀರ್ಘ ಇತಿಹಾಸವಿರುವ ಅಸ್ಪಶ್ಯರ ಅಸ್ತಿತ್ವದ ಬಗೆ ಕನ್ನಡ ಮಧ್ಯಮಕಾಲೀನ ಸಾಹಿತ್ಯವು ಹೇಗೆ ಪ್ರತಿಕ್ರಿಯಿಸಿತು ಎಂಬ ವಿಚಾರ ತೀವ್ರ ಕುತೂಹಲಕರವಾಗಿದೆ. ಈ ಕಾಲಾವಧಿಯನ್ನು ಕ್ರಿಶ೧೦ರಿಂದ ೧೫ರವರೆಗೆ ಎಂದು ಗುರುತಿಸಿಕೊಳ್ಳಲಾಗಿದೆ. ಆದರೆ ಇದೆಲ್ಲ ಅಧ್ಯಯನದ ಸೌಕರ್ಯಕ್ಕಾಗಿ ಮಾತ್ರ ಈ ಕಾಲಘಟ್ಟದಲ್ಲಿ ರಚಿಸಲ್ಪಟ್ಟ ಕೆಲವು ಸಾಹಿತ್ಯಕೃತಿಗಳು ಅಸ್ಪಶ್ಯರ ಅಸ್ತಿತ್ವದ ಬಗ್ಗೆ ಅನೇಕ ಮಹತ್ವದ ಮಾಹಿತಿಗಳನ್ನು ಹೊರಹಾಕುತ್ತವೆ. ಶೈವಭಕ್ತಿ ಚಳುವಳಿಯು ತಮಿಳುನಾಡಿನಿಂದ ಕರ್ನಾಟಕಕ್ಕೆ ಪ್ರವೇಶಿಸಿತು. ಈ ಅವಧಿಯಲ್ಲಿ ಇಲ್ಲಿ ಆಳುತ್ತಿದ್ದ ದೊರೆ ಚಾಲುಕ್ಯರ ಆರನೇ ವಿಕ್ರಮಾದಿತ್ಯ. ಅವನ ಆಸ್ಥಾನದಲ್ಲಿ ಅಧಿಕಾರಿಗಳಾಗಿ ಇದ್ದವರು ಕೊಂಡಗುಳಿ ಕೇಶಿರಾಜ ಮತ್ತು ತೆಲುಗು ಬೊಮ್ಮ ಎಂಬ ಶೈವ ಭಕ್ತರ. ಅಂದಿನ ಚಾತುವರ್ಣ್ಯದ ಅಸಮಾನತೆಯ ವಿರುದ್ಧ ಅವರು ಬಂಡೆದ್ದು ಅಧಿಕಾರ ತ್ಯಜಿಸಿ, ಶಿವಭಕ್ತರಾದ ಅಸ್ಪೃಶ್ಯರ ಬಳಿಗೆ ಹೊರಟುಹೊಗುತ್ತಾರೆ. ಅಸ್ಪಶ್ಯರ ಬಗೆಗಿನ ಇವರ ಪ್ರೇಮ ಮುಂದೆ ವೀರಶೈವ ವಚನಕಾರರಿಗೆ ಸ್ಫೂರ್ತಿ ಸೆಲೆಯಾಯಿತು.

ಇವರಿಬ್ಬರ ಜೀವಿತ ವಿಚಾರಗಳ ಒಟ್ಟು ಸಾರಾಂಶವೆಂದರೆ, ವೀರಶೈವ ಧರ್ಮವು ಅಸ್ಪೃಶ್ಯರಾದವರ ಬಗ್ಗೆ ಮೊಟ್ಟಮೊದಲ ಬಾರಿಗೆ ಒಲವು ತೋರಿದ್ದು ಮತ್ತು ಆಪ್ತವಾಗಿ ನಡೆಸಿಕೊಂಡದ್ದು.

ಕನ್ನಡ ವಚನ ಚಳವಳಿಯ ಆಶೋತ್ತರಗಳು ವಚನ ಸಾಹಿತ್ಯದಲ್ಲಿ ಅನನ್ಯವಾಗಿ ಪ್ರಕಟಗೊಂಡವು. ಈ ಸಾಹಿತ್ಯ ಕೆಳವರ್ಗದವರ ಜೊತೆ ಆತ್ಮೀಯ ಸಂವಾದ ನಡೆಸಿತು. ಇದರಿಂದ ಸ್ಫೂರ್ತಿಗೊಂಡ ಕೆಳವರ್ಗದ ಭಕ್ತರು ಇದೇ ಮೊದಲು ಎಂಬಂತೆ ಆತ್ಮವಿಶ್ವಾಸದಿಂದ, ಆತ್ಮಪ್ರತ್ಯಯದಿಂದ ಸವರ್ಣೀಯರ ವಿರುದ್ಧ ಬಂಡೆದ್ದರು. ಆಗ ಕರ್ನಾಟಕದಲ್ಲಿ ಒಮ್ಮಿಂದೊಮ್ಮೆಗೇ ಸಾಮಾಜಿಕ-ಆರ್ಥಿಕ-ಧಾರ್ಮಿಕ-ರಾಜಕೀಯ ಕ್ಷೇತ್ರಗಳಲ್ಲಿ ತಣ್ಣಗಾದವು.

ಇದಕ್ಕೂ ಮೊದಲು ಆದಿಕವಿ ಪಂಪನೇ ಕುಲಶ್ರೇಷ್ಠತೆಯನ್ನು ಅಲ್ಲಗಳೆದು 'ಮಾನವ ಕುಲವೆಲ್ಲಂ ತಾನೊಂದೆವಲಂ' ಎಂದು ನಾಂದಿ ಹಾಡಿದ. ಪಂಪನ ಕರ್ಣ

ವಿಪ್ರಶ್ರೇಷ್ಠರಿಗೆ ನಿಮ್ಮ ಕುಲ ನಿಮಗೆ ವ್ಯಾಕುಲವನ್ನುಂಟು ಮಾಡುತ್ತದೆ ಎಂದು ಭವಿಷ್ಯ ನುಡಿದಿದ್ದ, ಬಹಿಷ್ಕೃತ ಭಾರತದ ಕರ್ಣ ರಸಾಯನವೇ ಪಂಪ ಭಾರತ. ಜಾತಿ ಭಾರತದಲ್ಲಿ ಹೀಗೆ ಸೂಲ್ ಪಡೆಯಲು ಹೊರಟು ಆದಿಕವಿ ಪಂಪನ ಸೂಳ್ ನುಡಿಗಳು ವಚನ ಸಾಹಿತ್ಯಕ್ಕೆ ಉಚಿತ ವೇದಿಕೆಯನ್ನು ಸಜ್ಜುಗೊಳಿಸಿದವು. ವಚನ ಚಳವಳಿಯಲ್ಲಿ ವಿಪ್ರ ಮೊದಲುಗೊಂಡು ಅಂತ್ಯಜನವರೆಗೆ ಅಂಗದ ಮೇಲೆ ಲಿಂಗ ತಳೆದವರೆಲ್ಲಾ ಒಂದೇ ಕುಲದವರಾದರು. ಹುಟ್ಟಿನ ಶ್ರೇಷ್ಠತೆಯನ್ನು ಪುಡಿಗುಟ್ಟಿ ಭಕ್ತಿ ಪಾರಮ್ಯದ ಮಂದಾರವನ್ನು ಅರಳಿಸಿದವರು ವಚನಕಾರರು. ಹಾರುವ ಕುಲಜನಾದ ಬಸವಣ್ಣ ತನ್ನ ಕುಲಶ್ರೇಷ್ಠತೆಯನ್ನು ಅಪಮೌಲೀಕರಣಕ್ಕೊಳಪಡಿಸಿ ಅಸ್ಪೃಶ್ಯರೊಂದಿಗೆ ಆಪ್ತತೆಯನ್ನು ಗಳಿಸಿಕೊಳ್ಳಲು ಜೀವಿತವನ್ನೇ ಪಣಕ್ಕಿಟ್ಟ

**ಚೆನ್ನಯ್ಯನ ಮನೆಯ ದಾಸಿಯ ಮಗನು**

**ಕಕ್ಕಯ್ಯನ ಮನೆಯ ದಾಸಿಯ ಮಗಳು**

**ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ ಸಂಗವ ಮಾಡಿದರು**

**ಇವರಿಬ್ಬರಿಗೆ ಹುಟ್ಟಿದ ಮಗ ನಾನು**

-ಎಂದು ಹೇಳುವ ಮೂಲಕ ಬಸವಣ್ಣ ಜಾತಿ ಹಿಂದೂಗಳ ಎಂದಿನ ಪಾವಿತ್ರ್ಯಭಂಗ ಮಾಡಿ ಪ್ರತಿಸಂಸ್ಕೃತಿಯೊಂದರ ನಿರ್ಮಾಣಕ್ಕೆ ಕಾತರನಾದ. ಹೀಗೆ ಮೇಲು-ಕೀಳು ಎಂಬ ಜನ್ಮಾಧಾರಿತ ತಾರತಮ್ಯವನ್ನು ನಿರಾಕರಿಸಿದ ವಚನ ಚಳುವಳಿ ಕರ್ನಾಟಕದ ಮಟ್ಟಿಗೆ ಅಸ್ಪೃಶ್ಯರ ಪ್ರಥಮ ಆಂದೋಲನವೆನ್ನಬಹುದು.

ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಬಸವಣ್ಣನಿಗಿಂತ ತೀಕ್ಷ್ಣವಾಗಿ ಗದರಿಸಿ ಪ್ರತಿಕ್ರಿಯಿಸಿದವನೆಂದರೆ ಅಲ್ಲಮಪ್ರಭು, ಹಿಂದಿನ ಪರಂಪರೆಯಲ್ಲಿನ ನ್ಯೂನತೆಯನ್ನು ಕುರಿತ ಅಲ್ಲಮನ ಆರೋಪ ಹೀಗಿದೆ:

**ವೇದವೆಂಬುದು ಓದಿನ ಮಾತು**

**ಶಾಸ್ತ್ರವೆಂಬುದು ಸಂತೆಯ ಸುದ್ದಿ**

**ಪುರಾಣವೆಂಬುದು ಪುಂಡರ ಗೋಷ್ಠಿ**

**ತರ್ಕವೆಂಬುದು ತಗರ ಹೋರಟೆ**

**ಭಕ್ತಿಯೆಂಬುದು ತೋರುಂಬ ಲಾಭ**

**ಗುಹೇಶ್ವರನೆಂಬುದು ಮೀಂದ ಘನವು.**

ಇಂತಹ ಕ್ಷುದ್ರ ಜನರ ಕುಬ್ಬ ಬಾಹುಗಳಿಗೆ ಗುಹೇಶ್ವರನು ನಿಲುಕುವನೇ? ಡಾ| ಎಲ್.ಬಸವರಾಜು ಅವರು ತಮ್ಮ ಸಂಪಾದಿತ ಕೃತಿ 'ಅಲ್ಲಮನ ವಚನಗಳು' ಪುಸ್ತಕದ ಪೀಠಿಕೆಯಲ್ಲಿ ಅವನ ಧಾತು-ಧೋರಣೆಯ ಬಗ್ಗೆ ಪ್ರಸ್ತಾಪಿಸುತ್ತಾ ಆತ ಈ ಲೋಕದ 'ವಿದ್ರಾವಕ ದೃಶ್ಯವನ್ನು ಕಂಡು ಬೆಂಕಿಯಾಗಿ, ಜ್ಞಾನಿಗಳೆನಿಸಿಕೊಂಡವರ ಕಾಲಿಗೆ ಕೆಂಡವಾದನು, ದಲಿತರೆಸಿಕೊಂಡವರ ಕೈಗೆ ಉರಿಯುವ ಪಂಜಾದನು' ಎಂದು ಉಚಿತವಾಗಿ ಗ್ರಹಿಸುತ್ತಾರೆ.



ವಚನಕಾರರ ಪ್ರಕಾರ, ಅಸ್ಪೃಶ್ಯ ಶಿವಭಕ್ತಿ ಬ್ರಾಹ್ಮಣನಿಗಿಂತ ಯಾವ ಶ್ರೇಷ್ಠ. ಕೆಳವರ್ಗದ ವಚನಕಾರ್ತಿ ಕಾಳವ್ವ ಅಸ್ಪಶ್ಯರ ಆಹಾರ ಪದ್ಧತಿಯು ಬ್ರಾಹ್ಮಣರ ಆಹಾರ ಪದ್ಧತಿಗಿಂತ ಯಾವ ರೀತಿಯಲ್ಲೂ ಕೀಳಲ್ಲವೆಂದು ಸಮರ್ಥಿಸಿಕೊಳ್ಳುತ್ತಾಳೆ. ಹೀಗೆ ಜಾತಿ ವ್ಯವಸ್ಥೆಯ ವಿರುದ್ಧ ದಂಗೆ ಏಳುವ ಕಾಳವ್ವ ಹೊಲೆಮಾದಿಗರ ಆತ್ಮವಿಶ್ವಾಸದ ಪ್ರತೀಕವಾಗುತ್ತಾಳೆ. ಸದ್ಯಕ್ಕೆ ಲಭ್ಯವಿರುವ ಸುಮಾರು ೨೦೦ ಜನ ಕೆಳವರ್ಗದ ವಚನಕಾರರಲ್ಲಿ ಅಸ್ಪೃಶ್ಯ ವರ್ಗಕ್ಕೆ ಸೇರಿದವರ ಸಂಖ್ಯೆ ತೀರ ಕಡಿಮೆಯೆ. ಅದರಲ್ಲಿ ಮುಖ್ಯರಾದವರೆಂದರೆ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಉರಿಲಿಂಗ ಪೆದ್ದಿ, ಮಾದಾರ ಧೂಳಯ್ಯ, ಕಾಳವ್ವ, ಬಹುರೂಪಿ ಚೌಡಯ್ಯ, ಅಮ್ಮೆದೇವಯ್ಯ, ಢಕ್ಕೆಯ ಬೊಮ್ಮಣ್ಣ, ನಗೆಯ ಮಾರಿತಂದೆ, ಅಂಬಿಗರ ಚೌಡಯ್ಯ, ಕಲಕೇತಿ ಬೊಮ್ಮಣ್ಣ, ಭಿಖಾರಿ ಭೀಮಯ್ಯ, ವೀರ ಗೊಲ್ಲಾಳ, ಒಕ್ಕಲಿಗ ಮುದ್ದಣ್ಣ, ಕುರುಗಾಹಿ ರಾಮಣ್ಣ, ಕಂಬದ ಮಾರಿತಂದೆ, ಹೆಂಡದ ಮಾರಯ್ಯ, ಇವರೆಲ್ಲರೂ ಸವರ್ಣೀಯ ಸಮಾಜದ ಅಂಕುಡೊಂಕು, ಓರೆಕೋರೆ, ದೋಷ-ದುಷ್ಟ ಬುದ್ಧಿಗಳನ್ನು ನಿಷ್ಠುರವಾಗಿ ನಿರ್ಭಯವಾಗಿ ಖಂಡಿಸುತ್ತಾರೆ.

ರಗಳೆಯ ಕವಿಯೆಂದೇ ಪ್ರಸಿದ್ಧನಾದ ಹರಿಹರ ವಚನಕಾರರಿಗೆ ತೀರ ಹತ್ತಿರದವನು. ಅಸ್ಪೃಶ್ಯ ಶಿವಭಕ್ತರ ಬಗ್ಗೆ ಈತ ಇನ್ನಷ್ಟು ಆಪ್ತವಾಗಿ ಉತ್ಸಾಹಭರಿತನಾಗಿ ಬರೆಯುತ್ತಾನೆ. ಇವನಿಗೆ ಡಾಂಭಿಕ ಶಿವಭಕ್ತರಿಗಿಂತ ಸಂಬೋಳಿ ನಾಗಿದೇವನಂತಹ ಅಸ್ಪೃಶ್ಯ ಶಿವಭಕ್ತನ ಮೇಲೆ ಹೆಚ್ಚು ಒಲವು; ಕರಿಕಾಲ ಚೋಳರಾಜನ ಆಡಂಬರದ ಭಕ್ತಿಗಿಂತ ಅಸ್ಪೃಶ್ಯ ಚೆನ್ನಯ್ಯನ ಗುಪ್ತ ಭಕ್ತಿ ಅವನಿಗೆ ಬಲು ಇಷ್ಟ. ಒಟ್ಟಿನಲ್ಲಿ ಶಿವ ಒಲಿದಾತನೇ ಸತ್ಕುಲಜನೆಂದು ವಚನಕಾರರ ಸೆರೆಗಿಡಿದ ಈತ ಭಕ್ತಿ ಉತ್ಸಾಹದಿಂದ ಮೇರೆ ಮೀರುತ್ತಾನೆ. ಹಾಗೆಯೇ ಅನ್ಯಮತೀಯ ಭವಿಗಳ ಮೇಲೆ ಕೆಂಡದ ಮಳೆಯಾಗಿ ಸುರಿಯುತ್ತಾನೆ. ಭವಿ ಬ್ರಾಹ್ಮಣಗಿಂತ ಭಕ್ತ ಹೊಲೆಯನನ್ನು ವೀರಾವೇಶದಿಂದ ಪವಾಡಗಳ ಸಮೇತ ಕೊಂಡಾಡುವ ಹರಿಹರ, ಅಂಥವರಿಗೆ ಸಜೂಕ್ತಸ್ಥತಿ ಕಾಣಿಸುತ್ತಾನೆ. ಅಲ್ಲದೆ ಹೊಲೆ ಮಾದಿಗರ ಜೀವನಪದ್ಧತಿ ತೆರೆಮರೆಯಲ್ಲಿ ಅಸ್ಪೃಶ್ಯರ ಕರಾಳ ವಾಸ್ತವ ಚಿತ್ರಗಳನ್ನು ಮರೆಮಾಚಿ ಬಿಡುತ್ತಾನೆ.

ವಚನಕಾರರಾಗಲೀ, ಹರಿಹರನಾಗಲೀ ಶಿವಭಕ್ತಿರಾದ ಹೊಲೆಯರಬಗ್ಗೆ ಆವೇಶ ಭರಿತರಾಗಿ ಮಾತನಾಡುವವರೇ ಹೊರತು ಶಿವಭಕ್ತರಲ್ಲದ ಅಸ್ಪಶ್ಯರ ಬಗ್ಗೆ ಅಷ್ಟೇನೂ ಉತ್ಸಾಹ ತೋರುವುದಿಲ್ಲ. ಪ್ರೊ| ರಂಗಾರೆಡ್ಡಿ ಕೋಡಿರಾಂಪುರ ಅವರು ಗ್ರಹಿಸಿರುವಂತೆ ಇದು ಅವರ ಚಿಂತನಾಕ್ರಮದ ಮಿತಿಯೇ ಎನ್ನಬಹುದು(ಕನ್ನಡ

ಸಾಹಿತ್ಯದಲ್ಲಿ ಅಸ್ಪಶ್ಯತೆಯ ಪರಿಕಲ್ಪನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ ೧೮೪). ನಮ್ಮ ಇಂದಿನ ಧರ್ಮ ರಾಜಕಾರನ ಹಿನ್ನೆಲೆಯಲ್ಲಿ ಈ ಮಾತನ್ನು ಸ್ವಲ್ಪ ಸಮೀಕರಿಸಿ ನೋಡಬಹುದು. ಇವತ್ತು ಲಿಂಗಾಯತ ಮತವೆಂಬುದು ಅಲ್ಲಮಪ್ರಭು ಖಂಡಿಸುವಂತೆ ಭಕ್ತಿ ತೋರುಂಬ ಲಾಭವಾಗಿಬಿಟ್ಟಿದೆ. ಸಹಪಂಕ್ತಿ ಭೋಜನ, ಅಂತರಜಾತಿ ವಿವಾಹ ಈ ಸಂಬಂಧವಾಗಿ ಇವತ್ತಿನ ಲಿಂಗವಂತ ಜನ ಆಚರಿಸುವ ಅಸ್ಪೃಶ್ಯತೆ ಯಾರಿಗಾದರೂ ಅಸಹ್ಯ ತರಿಸುತ್ತದೆ.



ಕೆಲವು ವೀರಶೈವ ಜಗ್ಗುರುಗಳೂ ಕೂಡ ಸಂಘಪರಿವಾರದವರೂ ಹಮ್ಮಿಕೊಳ್ಳುವ ವಿರಾಟ್ ಹಿಂದೂ ಉತ್ಸವಗಳಲ್ಲಿ ಲಜ್ಜೆಗೇಡಿಗಳಾಗಿ ಭಾಗವಹಿಸುತ್ತಿರುವುದು ಬಸವಾದಿ ಶಿವಶರಣರಿಗೆ ಮಾಡುವ ಅಪಚಾರವೆಂದು ಹೇಳದೆ ವಿಧಿಯಿಲ್ಲ. ಇದನ್ನೆಲ್ಲ ಇಲ್ಲಿ ಪ್ರಸ್ತಾಪಿಸಿದ್ದಕ್ಕೆ ಕಾರಣ ಇಷ್ಟೇ: ಬಸವಣ್ಣ, ಅಲ್ಲಮರಂಥ ಶಿವಶರಣರ ಬಗ್ಗೆಯೇ ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ ಮುಂತಾದವರು ಇವರ ವಿಚಾರ ಜ್ಞಾನದಿರವಲ್ಲದೆ ಕ್ರಿಯಾಪರವಲ್ಲ" ಎಂದು ಕಟುವಾಗಿ ವಿಮರ್ಶಿಸುತ್ತಾರೆ; ಅಲ್ಲಮನನ್ನು ಮಹೇಂದ್ರ ಜಾಲಕ ಎಂಬುದಾಗಿ ಟೀಕಿಸಿದ್ದಾರೆ.

ಮಧ್ಯಯುಗ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಸ್ಪಶ್ಯರ ಜೀವಂತ ಸವಾಲುಗಳನ್ನು ಕೃತಿಯೊಳಗಕ್ಕೆ ಬರಮಾಡಿಕೊಂಡು ನ್ಯಾಯೋಚಿತವಾಗಿ ಹಾಗೂ ತರ್ಕಬದ್ಧವಾಗಿ ಅಸ್ಪೃಶ್ಯರ ಪರ ನಿಂತು ವಕಾಲತ್ತು ವಹಿಸಿ ಬರೆದ ಕವಿಯೆಂದರೆ ರಾಘವಾಂಕ ಮಾತ್ರ ಅಲ್ಲಮಪ್ರಭು ನಿರ್ವಚಿಸಿರುವಂತೆ ಹರಿಶ್ಚಂದ್ರ ಕಾವ್ಯ 'ಹಿಂದಣ ಅನಂತನವನು, ಮುಂದಣ ಅನಂತವನು, ಒಂದು ದಿನ ಒಳಗೊಂಡಿತ್ತು ನೋಡಾ' ಎಂಬಂತಿದ್ದು ಅಸ್ಪಶ್ಯರ ಸಂಕಷ್ಟಗಳನ್ನು ಹೊತ್ತುನಿಂತ ನಾದಬಿಂದು ಕಲಾ ಸ್ವರೂಪಿಯಾಗಿದೆ. ಅಸ್ಪೃಶ್ಯತೆ ಆಚರಣೆ ನೆನ್ನೆ ಮೊನ್ನೆಯದಲ್ಲ; ನಾಳೆ ನಾಡಿದ್ದರಲ್ಲಿ ಹೋಗಬಹುದಾದುದಲ್ಲ; ಊರು ಇರುವವರೆಗೆ ಹೊಲಗೇರಿ ಇರತಕ್ಕದೇ ಎಂಬುದನ್ನು ಪ್ರತಿಮಿಸಿ ಹೇಳುತ್ತದೆ ಹರಿಶ್ಚಂದ್ರ ಕಾವ್ಯ. ಎಂದರೆ ಅಸ್ಪೃಶ್ಯತೆಯ ಆಚರಣೆಯ ಬಗ್ಗೆ ಮನುಕುಲ ಅನಾದಿಕಾಲದಿಂದಲೂ ಅನುಸರಿಸಿಕೊಂಡು ಬರುತ್ತಿರುವ ಧಾಟಿ-ಧೋರಣೆಯ ವಾಸ್ತವ ಚಿತ್ರ ಈ ಕಾವ್ಯದಲ್ಲಿ ಸಜೀವವಾಗಿದೆ, ಸಚಿತ್ರವಾಗಿದೆ, ಸವರ್ಣವಾಗಿದೆ.

ಅಸ್ಪೃಶ್ಯತೆಯ ಆಚರಣೆಯ ಬಗ್ಗೆ ವಚನಕಾರರ ಧೋರಣೆ ಕೇವಲ ಮೇಲುವರ್ಗದ ಒಂದು ಸಂವಾದ ರೂಪದಲ್ಲಿದ್ದರೆ, ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಅಸ್ಪೃಶ್ಯರ ಸವಾಲುಗಳು ಮಾರ್ಮಿಕವಾಗಿವೆ. ಸಾಮಾಜಿಕವಾಗಿ ಈ ಸವಾಲುಗಳು ಎಲ್ಲ ಕಾಲಕ್ಕೂ ಪ್ರಸಮಗಗಳನ್ನು ನಾವಿಲ್ಲಿ ಪರಿಶೀಲನೆಗೆ ಎತ್ತಿಕೊಳ್ಳಬಹುದು. ಒಂದು ಹರಿಶ್ಚಂದ್ರ ಮತ್ತು ಗಾನರಾಣಿಯರ ಪ್ರಸಂಗ; ಇನ್ನೊಂದು ಹರಿಶ್ಚಂದ್ರ ಮತ್ತು ವೀರಬಾಹು ಅವರ ಪ್ರಸಂಗ. ಇದರಲ್ಲಿ ಮೊದಲನೆಯದು ಅಸ್ಪಶ್ಯತೆಯ ಆಚರಣೆಯ ವಿರುದ್ಧ ಥಿಯೆಯರಿಟಿಕಲ್ ಆದ ಸವಾಲು- ಜವಾಬು ಸ್ವರೂಪದಲ್ಲಿದ್ದರೆ, ಎರಡನೆಯದು ಅಸ್ಪಶ್ಯತೆಯ ಆಚರಣೆಯ ವಿರುದ್ಧ ಪ್ರಾಕ್ಟಿಕಲ್ ಆಗಿ ತಿರುಗಿಬಿದ್ದು ಅದನ್ನು ಬಗ್ಗಿಸುವ

ಪ್ರಕ್ರಿಯೆಯಾಗಿದೆ. ಬೇಟೆಯಿಂದ ಆಯಾಸಗೊಂಡಿದ್ದ ಹರಿಶ್ಚಂದ್ರ ರಾಜನನ್ನು ಹೊಲತಿ ಹುಡುಗಿಯರು ತಮ್ಮ ಗಾನ ನರ್ತನಗಳಿಂದ ಮುದಗೊಳಿಸುತ್ತಾರಷ್ಟೆ. ಪ್ರತಿಯಾಗಿ ಅವರಿಗೆ ಉಡುಗೊರೆಯನ್ನು ಕೊಡಲು ಹೋದಾಗ, ಅವನರು ಬೇಡುವುದು ಮುತ್ತಿನ ಸತ್ತಿಗೆಯನ್ನು "ಅದು ಅರಸುತನದ ಲಾಂಛನ, ಕೊಡಲು ಸಾಧ್ಯವಿಲ್ಲ' ಎಂದಾಗ "ಹೋಗಲಿ ಮದುವೆಯಾಗು" ಎನ್ನುತ್ತಾರೆ. ಆಗ ಸಹಜವಾಗಿಯೇ ರಘುಕುಲದ ಶ್ರೇಷ್ಠತೆ ಹರಿಶ್ಚಂದ್ರನಲ್ಲಿ ಗರಿಗೆದರುತ್ತದೆ. ತನ್ನದು ಶ್ರೇಷ್ಠ ಕ್ಷತ್ರಿಯ ಕುಲ, ಅದನ್ನು ಕೆಡಿಸಲಾಗದು ಎಂದು ಅವರ ಪ್ರಸ್ತಾವವನ್ನು ತಿರಸ್ಕರಿಸುತ್ತಾನೆ.



ಆದರೆ ಅವರು ಜಗ್ಗುವವರಲ್ಲ "ರೂಪು ಜವ್ವನವಿರಲು ಕುಲದ ಮಾತೇಕೆ" ಎಂದು ಪ್ರಶ್ನಿಸುತ್ತಾರೆ. "ಇಷ್ಟಕ್ಕು ಬಚ್ಚಲುದಕಂ ತಿಳಿದಡಾರ ಮೀಹಕ್ಕೆ ಯೋಗ್ಯಂ" ಎಂದು ಅಸಹ್ಯಪಟ್ಟುಕೊಂಡ ರಾಜ, ಈ 'ಮಾತು ತಾ ಹೊಲೆ' ಯೆಂದು ಜರೆದಾಡುತ್ತಾನೆ. ಆದರೆ ಆ ಹೊಲತಿಯರು ಸಾಮಾನ್ಯ ಗಟ್ಟಿಗಿತ್ತಿಯರಲ್ಲ! ಆಶ್ಚರ್ಯಕರ ಸವಾಲುಗಳನ್ನೇ ಎಸೆಯುತ್ತಾರೆ ಆಧುನಿಕ ವಕೀಲರಂತೆ:

**ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ, ಮಾ**

**ತಾಡಿ ಹೋಗಳಿದ ಬಾಯ್ಗೆ ಹೊಲೆಯಿಲ್ಲ, ರೂಪನೆರೆ**

**ನೋಡಿದ ವಿಲೋಚನಕೆ ಹೊಲೆಯಿಲ್ಲ, ಮೆಯ್ಮುಡಿಗಳಿಂ ಸುಳಿವ**

**ತಂಗಾಳಿಯಿಂ**

**ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ**

**ನಾಡೆ ಹೊಲೆಯಿಲ್ಲ, ಸೋಂಕಿಗೆ ಹೊಲೆಯುಂಟಾಯ್ತೆ?**

**ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧರ್ಮವೊಂದಧಿಕವೇ -ಎಂದರು**

ಕಾಲ-ದೇಶ-ಕ್ರಿಯೆಗಳು ಒಮ್ಮೆಗೆ ಸ್ಥಗಿತಗೊಂಡ ಅಮೃತೋಪಮ ಕ್ಷಣ ಇದು. ಸತ್ಕುಲಶೀಲ ಸೂರ್ಯವಂಶದ ದೊರೆ ಎದುರು ಸ್ತ್ರೀಯರು, ಅದೂ ಹೊಲತಿಯರು ನಿಂತು ಮಾತನಾಡಿದ ಇಂಥ ಪಂಥಾಹ್ವಾನ ಇತಿಹಾಸದಲ್ಲಿ ಇದೇ ಮೊದಲ ಸಲ ಘಟಿಸಿದ್ದು, ಹೀಗೆ ಹೊಲತಿಯರು ಬಂದು ಪ್ರಭುತ್ವದ ಎದುರು ಮಾತಾಡಿದ್ದು "ಬಂದ ಕಾಲಗುಣವೋ ನಿಂದ ನೆಲದ ಗುಣವೋ?" ನಂಬಲಿಕ್ಕೇ ಆಗದು. ಆದರೂ ನಿಜ, ಆ ಹೊಲತಿಯರು

ರಾಜನನ್ನು "ಕೂಡಿರ್ದ ಪಂಚೇಂದ್ರಿಯಂಗಲೊಳು ನಾಲ್ಕಧಮವೊಂದಧಿಕವೇ" ಎಂದು ಘಟ್ಟಿಸಿ ಕೇಳುವುದು ತೀರ ವಾಸ್ತವವೂ, ತರ್ಕಬದ್ಧವೂ ನ್ಯಾಯೋಚಿತವೂ ಆಗಿದೆ.

ಆದರೆ ಈ ಸನ್ನಿವೇಶದಲ್ಲಿ ಕ್ಷತ್ರಿಯ ಕುಲಶ್ರೇಷ್ಠನು ವ್ಯಕ್ತಪಡಿಸುವ ಅಸ್ಪೃಶ್ಯತೆ ಆಚರಣೆ ಘನ ಘೋರವೂ ಕಟು ಕ್ರೌರ್ಯವೂ ಹೀನ ಮನಸ್ಸಿನ ದ್ಯೋತಕವೂ ಆಗಿದೆ:

**ಏಗೆಯ್ದಡಂ ಕುಲಜರಧಮ ಸತಿಯರ ನೋಡ**

**ಲಾಗದು, ಅಯದೆ ಪಾಪದಿಂ ನೋಡಿದಡೆ ನುಡಿಸ**

**ಲಾಗದು, ಎಂತಕ್ಕೆ ನುಡಿಸಿದಡೆ ಮುನ್ನಿಸಲಾಗದು, ಅನುಗೆಟ್ಟು ಮನ್ನಿಸಿದಡೆ**

**ಮೇಗೇನುವಂ ಕರೆದುಕೊಡಲಾಗದು, ಇತ್ತ ಅವ**

**ರೇಗೈಯ್ಯಲಪ್ಪದು. ಎನಗಿಂದು ನೀವಂಗನೆಯ**

**ರಾಗಿಪ್ಪವೆಂದಿರ್ದೈ ಸಲ್ಲದು, ಒಡತಿಯರಪ್ಪವು ಎನಲು ತೀರದೆ? -ಎಂದನು**

ಇದಿಷ್ಟೂ ಮೇಲೆ ಹೇಳಿದ ಧರ್ಮಶಾಸನಕಾರರ ಕಟ್ಟಳೆಗೆ ಚಾಚೂ ತಪ್ಪದಂತೆ ಅದನ್ನು ಅನುಷ್ಠಾನಕ್ಕೆ ತರುವ ವಿಧಾನವಾಗಿದೆ. ಹಿಂದೆ ಉಲ್ಲೇಖಿಸಿದ ದೂರಾ ಶೌಚಕಾರಿ' ಹಾಗೂ 'ದೃಶ್ಯಾ ಶೌಚಾಕಾರಿ'ಗಳ ಬಗೆಗೆಗಿರುವ ಕಟ್ಟುಕಟ್ಟಳೆಗಳನ್ನು ಸಮೀಕರಿಸಿಕೊಂಡು ನೋಡಬಹುದು.



ಹೀಗೆ ರಾಜನು ಹೊಲತಿಯರನ್ನು ಕಡೆಗಣಿಸಿ ಜರೆದಾಡಿದಾಗ ಅವರು ಅಷ್ಟಕ್ಕೇನೂ ಬಗ್ಗುವ ಗಿರಾಕೆಗಳಾಗಿರಲಿಲ್ಲ. "ಎಳಸಿ, ಮೆಚ್ಚಿಸಿ, ಮರುಳೊಳೆಸಿ, ಮತ್ತೊಲ್ಲನವನಿಪನೆಂದು, ಮೊರೆಯಿಡುತ್ತ ಇಳೆಯೊಳಗೆ ಸಾರುತ್ತ ದೂರುತ್ತ ಬಟ್ಟೆವು" ಎಂದು ಆಧುನಿಕ ಅಸ್ಪೃಶ್ಯತೆ ಆಚರಣೆಯ ತಳತಂತ್ರದ ಬೆದರಿಕೆ ಒಡ್ಡುತ್ತಾರೆ. ದೇವನೂರು ಮಹಾದೇವರ ಕುಸುಮಬಾಲೆಯ ದಲಿತ ಪಾತ್ರಗಳು ಹೂಡುವ ತಳತಂತ್ರಗಳ ಮಿಂಚು ಹರಿಶ್ಚಂದ್ರ ಕಾವ್ಯದಲ್ಲಿ ಈ ಮೊದಲೇ ಹೊಳೆದು ಬಿಟ್ಟಂತೆ ಕಾಣುತ್ತದೆ. ಇನ್ನು ಹೇಳುವುದೇನಿದೆ? ತರ್ಕಬದ್ಧವಾಗಿ, ನ್ಯಾಯೋಚಿತವಾಗಿ ಉತ್ತರಿಸಲಾರದ ಜನ ಕೈಮುಂದು ಮಾಡುವಂತೆ, ನಿರುತ್ತರನಾದ ಹರಿಶ್ಚಂದ್ರ ತನ್ನ ಮಂತ್ರಿಯನ್ನೂ ಜೊತೆಗೂಡಿಕೊಂಡು ಆ ಮಾಯದಬಲೆಯರನ್ನು ಹೊಡೆದೋಡಿಸಿ ಬಿಡುತ್ತಾನಷ್ಟೆ.

ಹರಿಶ್ಚಂದ್ರ ಕಾವ್ಯದ ಇನ್ನೊಂದು ಪ್ರಸಂಗ, ಹರಿಶ್ಚಂದ್ರ ಮತ್ತು ವೀರಬಾಹು ಇವರಿಗೆ ಸಂಬಂಧಿಸಿದ್ದು, ರಾಘವಾಂಕ ಕವಿ ಹೊಲತಿಯರ ಪ್ರಸಂಗದಲ್ಲಿ ಕುಲಶ್ರೇಷ್ಠತೆಯನ್ನು ಥಿಯೆಇಟಿಕಲ್ ಆಗಿ ಪ್ರಶ್ನಿಸಿ ನಿರುತ್ತರಗೊಳಿಸಿದರೆ, ವೀರಬಾಹುವಿನ ಪ್ರಸಂಗದಲ್ಲಿ ಅದನ್ನು ಪ್ರಾಕ್ಟಿಕಲ್ ಆಗಿ ಬಗ್ಗಿಸಿ ಮಗ್ಗಲುಮುರಿಯುತ್ತಾನೆ. ಮೊದಲನೆಯದರಲ್ಲಿ ಕುಲ ಮದ, ಧನ ಮದ, ಅಧಿಕಾರ ಮದಗಳು ಒಟ್ಟಾಗಿ ಹೆಣ್ಣುಮಕ್ಕಳನ್ನು, ಅದೂ ಅಸ್ಪಶ್ಯ ಸ್ತ್ರೀಯರನ್ನು ಹೇಗೆ ನಡೆಸಿಕೊಡುತ್ತವೆ ಎಂಬುದರತ್ತ ಬೊಟ್ಟು ಮಾಡಿ ತೋರಿಸಿದರೆ, ಎರಡನೆಯದಲ್ಲಿ ಈ ಮೂರು ಮರಗಳಿಂದ ಮೇಲೆ ಮನುಷ್ಯ ಹೇಗೆ ಅಪ್ಪಟ ಮನುಷ್ಯನಾಗಿ ಪ್ರಕಾಶಿಸುತ್ತಾನೆ ಎಂಬುದನ್ನು ನಿರ್ಲಿಪತ್ತೆಯಿಂದ ಚಿತ್ರಿಸಿ ತೋರಿಸುತ್ತಾನೆ.

ಹರಿಶ್ಚಂದ್ರ-ವೀರಬಾಹುವಿನ ಪ್ರಸಂಗದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದದ್ದು ವೀರಬಾಹು ವಾಸವಾಗಿದ್ದ ಮನೆ ಆವರಣ-ಪರಿಸರ. ಅದನ್ನು ಕುರಿತು ರಾಘವಾಂಕ ಸುಮಾರು ಎಂಟುನೂರು ವರ್ಷಗಳ ಹಿಂದೆ ಬಿಡಿಸಿ, ಹಿಡಿದಿರುವ ಅಸ್ಪಶ್ಯರ ಮನೆಯ ಡಾಕ್ಯುಮೆಂಟರಿ ಚಿತ್ರ ಇಂತಿದೆ ನೋಡಿ:

**ಹೊರಗೆ ಹಾಸಿದ ಹಸಿಯ ತೊಗಲ ಹೊದೆಯ, ಮಾಣ**

**ದೋಲಿ ಕೂಗಿಡುವ ನಾನಾ ಪ್ರಾಣಿ ವರ್ಗಮಂ**

**ಕೋವ ಕೊಚ್ಚುವ ತವ ಮುಚ್ಚುವ ಕಾಸುವ ಕಡಿವ ಸೀಳೋ**

**ಹರಹುವ ಹಿಂಡುವ**

**ಹದಯದ ಒಣಗಿಲುಗರಳ ಹಿಳಲ ತೋರಣದ ಚಟ್ಟಿದ ಗೋಡೆಗಳ ರಕುತದ ಹೇಸಿಗೆಯನು ನೇ ಸಜ್ಜಗುಲನಕಾಳಿಜಂ ಕಂಟಣಿಸಭೆಕು ನೆರಹಿದದಂ ನಿಳಯದೊಳಗೆ**

ಅಸ್ಪೃಶ್ಯರು ಇಂಥ ಪ್ರತ್ಯೇಕ ಭೌಗೋಳಿಕ ಪರಿಸರದಲ್ಲಿ ನಾಯಿ ಹಂದಿಗಳಿಗಿಂತ ಕಡೆಯಾಗಿ ಬದುಕು ಸಾಗಿಸುತ್ತಿದ್ದಾರೆ ಎಂದು ಡಾ|| ಅಂಬೇಡ್ಕರ್ ಹೇಳಿರುವುದನ್ನು ನಾವಿಲ್ಲ ಸ್ಮರಿಸಿಕೊಳ್ಳಬಹುದು. ಇಂಥ ಭಯಂಕರ ಪರಿಸರದಲ್ಲಿ ವೀರಬಾಹು ಹೇಗಿದ್ದನೆಂದರೆ:

**ಹಲವೆಲುವಿನೆಕ್ಕೆಗಳ ಬಿಗಿದು ಬೀವಂ ನೇಯ್ದು**

**ನುಲಿಯ ಹಂದೊಗಲ ಹಾಸಿನೊಳು ಮಂಚದ ಹೊಲೆಯನೋಲಗವಿತ್ತು ನರಕಪಾಲದೊಳು**

**ತೀವಿದ ಹಸಿಯ ಗೋಮಾಂಸದ ಮೆಲುತ ಮಧ್ಯವನೀಂಟುತಿರ್ಪ ಪತಿಯಂ ಕಂಡು**

**ನೆಲದಲ್ಲಿ ಕುಳ್ಳಿರ್ದ ರವಿಕುಲನ ಹಗಲಮೇ ಲೆಲೆಲೆ ನೀಡಿದನು ಕಾಲಂ ಕಾಲನೊಂದೆರಡು ಕುಲಗಿರಿಯ**

**ಭಾರವೆನು.**

ಮನು ಧರ್ಮಶಾಸ್ತ್ರದ ಪ್ರಕಾರ ಅಸ್ಪಶ್ಯರು ಬಾಹ್ಯರು. ಅಂದರೆ ಅವರನ್ನು ಚಾತುವರ್ಣ್ಯದ ಛಾಯೆಯ ಹೊರಗಿನವರು ಎಂದು ಹೆಸರಿಸಲಾಗಿದೆ. ಈ ಕೀಳುಜಾತಿಯವರ ಉಗಮದ ಪ್ರಶ್ನೆ ತುಂಬಾ ಸಂಕೀರ್ಣವಾದುದು. ಅಂಬೇಡ್ಕ ಅವರು ಹೇಳುವಂತೆ, ಹಿಂದೂಗಳ ಪ್ರಾಚೀನ ಧರ್ಮಶಾಸ್ತ್ರಗಳ ಪ್ರಕಾರ, ಈ ಕೀಳು ಜಾತಿಯವರು ಚಾತುರ್ವಣ್ಯ ಪದ್ಧತಿಯಲ್ಲಿ ಸೇರಿದ ನಾಲ್ಕು ಶೂದ್ರರ ನಡುವಿನ ಅಂತರ್ವಿವಾಹಗಳಿಂದ ಸಂಜಾತರಾದ ಸಂಗತಿಯವರು. ಈ ಕೀಳುಜಾತಿಯವರ ಜೀವನ ನಿಯಮಗಳಿಗೆ ಸಂಬಂಧಿಸಿದ ಕೆಲವು ನಿರ್ದೇಶನ ಸೂತ್ರಗಳು ಹೀಗಿವೆ (ಆಧಾರ, ಮನಧರ್ಮಶಾಸ್ತ್ರ):

ಇವರು ಚಾತುರ್ವಣ್ಯಕ್ಕೆ ಬಾಹ್ಯರು ಎಂದರೆ ದಸ್ಯುಗಳು. ಇವರ ವಾಸ ಮರಗಳ ಕೆಳಗೆ, ಸ್ಮಶಾನಗಳ ಬಳಿ, ಕಾಡು ಬೆಟ್ಟ ಗುಡ್ಡಗಳಲ್ಲಿ ಅವಕ್ಕೆ ಕೆಲವು ಗುರುತುಗಳಿರಬೇಕು ಮತ್ತು ತಮ್ಮ ಹೊಟ್ಟೆ ಹೊರೆಯಲು ಮತ್ತು ಶ್ವಪಚರ ವಾಸಸ್ಥಾನವು ಹಳ್ಳಿಯಿಂದ ಹೊರಗಿರಬೇಕು ಅವರನ್ನು ಅಪಾತ್ರರನ್ನಾಗಿಸಬೇಕು. ಅವರ ಸಂಪತ್ತೆಂದರೆ ನಾಯಿಗಳು, ಕತ್ತೆಗಳು. ಸತ್ತವರ ಬಟ್ಟೆಗಳು ಅವರ ಉಡುಪು; ಅವರು ಊಟಮಾಡಬೇಕಾದ್ದು ಚೂರಾದ ಮಡಿಕೆ ಕುಡಿಕೆಗಳಲ್ಲಿ, ಕಪ್ಪು ಕಬ್ಬಿಣವೇ ಅವರ ಆಭರಣಗಳು ಅವರು ಸದಾಕಾಲವೂ ಒಂದೆಡೆಯಿಂದ ಇನ್ನೊಂದೆಡೆಗೆ ಅಲೆದಾಡುತ್ತಿರಬೇಕು. ಅವರಿಗೆ ಆರ್ಯರಲ್ಲದವರು ಒಡೆದ ಪಾತ್ರೆಗಳಲ್ಲಿ ಆಹಾರ ಕೊಡಬೇಕು. ದಿನದ ವೇಳೆಯಲ್ಲಿ ಕೆಲಸಕ್ಕೆ ಹೋಗುವಾಗ ರಾಜಾಜ್ಞೆಯಂತೆ ತನ್ನ ಗುರುತುಗಳನ್ನು ಹಾಕಿಕೊಂಡೇ ಹೋಗಬೇಕು ಮತ್ತು ಸಂಬಂಧಿಗಳಿಲ್ಲದವರ ಹೆಣಗಳನ್ನು ಎತ್ತುವುದು ಅವರ ಕೆಸ, ಕಾನೂನಿನ ಅನ್ವಯ ರಾಜಾಜ್ಞೆಯಂತೆ ಅಪರಾಧಿಗಳನ್ನು ಕಡಿದು ಹಾಕುವುದು ಅವರ ಯಾವತ್ತಿನ ಕೆಲಸ. ಅಂತಹ ಅಪರಾಧಿಗಳ ಬಟ್ಟೆಗಳು, ಹಾಸಿಗೆ, ಆಭರಣ ಇತ್ಯಾದಿಗಳನ್ನು ಅವರು ತಮಗೇ ಇಟ್ಟುಕೊಳ್ಳಬಹುದು. ಕೀಳುಜಾತಿಗಳಿಗೆ ಸೇರಿದ ಹೆಂಗಸೊಬ್ಬಳೊಡನೆ ಸಂಬಂಧವಿರಿಸಿಕೊಂಡವನನ್ನು ಮರಣದಂಡನೆಗೆ ಗುರಿ ಮಾಡಬೇಕು. ಈ ಚಂಡಾಲ ಅಥವಾ ಇತರ ಕೀಳುಜಾತಿಯವರು ಯಾರಾದರೂ

ಉದ್ದೇಶಪೂರ್ವಕವಾಗಿ(ದ್ವಿಜರನ್ನು ಮುಟ್ಟಿ ಮೈಲಿಗೆ ಮಾಡಿದರೆ ಅಂಥವರನ್ನು ಮರಣದಂಡನೆಗೆ ಗುರಿ ಮಾಡಬೇಕು- ಇತ್ಯಾದಿ.

ಹೀಗೆ ಪ್ರಾಚೀನ ಧರ್ಮಶಾಸ್ತ್ರಕಾರರು ಮಾಡಿದ ಅನುಶಾಸನಗಳು ಹರಿಶ್ಚಂದ್ರ ಕಾವ್ಯದಲ್ಲಿ ಯಥಾವತ್ತಾಗಿ ಕಾರ್ಯರೂಪದಲ್ಲಿ ಅನುಷ್ಠಾನಗೊಂಡಿರುತ್ತವೆ. ಅದಕ್ಕಾಗಿ



ಹರಿಶ್ಚಂದ್ರ ಮತ್ತು ವೀರಬಾಹುವಿನ ಪ್ರಸಂಗದ ಒಂದೆರಡು ಪದ್ಯಗಳನ್ನು ಇಲ್ಲಿ ಪರಾಮರ್ಶಿಸಬಹುದು. ಸುಡುಗಾಡಿನ ಕಾವಲುಗಾರನ ಕರ್ತವ್ಯಗಳು ಮತ್ತು ಅವನ ಸಂಬಳ ಸಾರಿಗೆಯನ್ನು ನಿಗದಿ ಮಾಡಿರುವ ಪದ್ಯಗಳು ಹೀಗಿವೆ:

**ಸುಡುಗಾಡ ಕಾಹವೇಂದೇನದ ಪಂಥಮಂ**

**ನುಡಿದು ಪೇಳೆನೆ, ಸುಡುವ ನೆಲದೆಡೆಗೆ ಹಾಗ, ಹೆಣ**

**ದುಡಿಗೆಯಂ ತಂದೆನಗೆ ಕೊಡುವುದು, ಆ ತಲೆಯಕ್ಕಿಯ ನಿನ್ನ ಸಂಬಳಕ್ಕೆ**

**ಪಡಿಯಾಗಿ ಕೊಂಡುಂಬುದು, ಅಳುಪದಿರು, ಹಸಿಯದಿರು**

**ಬಿಡದಿರೆಂದುಡುಗೆರೆಯ, ವೀಳೆಯದ ಕೂಡೆ ತಾ**

**ಪಡಿದ ಸಂಬಳಿ ಗೋಲ ಮುದ್ರೆಗೊಟ್ಟಂ ವನಧಿಮುದ್ರಿತ ಧರಾಧಿಪತಿಗೆ.**

ಹೀಗೆ ತನ್ನ ಸಹಾಯಕ ಕಾವಲುಗಾರನಿಗೆ ತನ್ನ ಕರ್ತವ್ಯ ಹಾಗೂ ಸಂಬಳವನ್ನು ಗೊತ್ತುಪಡಿಸಿದ ವೀರಬಾಹು ಸಂಬಳಿಗೋಲ ಮುದ್ರೆಯನ್ನು ಕೊಟ್ಟು ಅಧಿಕಾರ ವಹಿಸಿಕೊಡುತ್ತಾನೆ. ಮುಂದೆ ಅವನು ಹೇಗೆ ತನ್ನ ಕರ್ತವ್ಯವನ್ನು ನಿರ್ವಹಿಸಬೇಕೆಂಬುದನ್ನು ಹೀಗೆ ತಿಳಿಸುತ್ತಾನೆ:

**ಹೆಸರ ಹೇಳುತ್ತ ಸಾರುತ್ತ ಮೈಗುಹ ತೋ**

**ಅಸುತ ಪುರದೊಳಗೆಯೇ ಜನವಯೆ ಹಯ ಮೊಳ**

**ಗಿಸುತ ಮೆಯುತ್ತ ಹೋಗೇಳೆಂದು ಕಳುಪ**

**ಹೊರಮಟ್ಟನೆಲ್ಲವ ಮಾಡುತ**

ನಸುಕುಸಿದ ದೇಹ ಕಂಕರಿಗೋಲ ನಿದು ಬಾರಿಸುವ ಕೈವಿಡದೆ 'ಸಂಬಳಿ ಸಂಬಳಿ' ಎಂದೆಂದು ಕೊಸರುತಿಹ ಬಾಯ್ದೆರಸಿ ಬೀದಿ ಬೀದಿಯೊಳು ಸುಳಿದಂ ಸತ್ಯಸಂಪನ್ನನು.

ಮೇಲೆ ಮಲಬಾರ್ ಕ್ರಾನಿಕಲ್ (೧೯೨ಲ)ಹಾಗೂ ಧರ್ಮಶಾಸ್ತ್ರಕಾರರ ಬಗ್ಗೆ ಅಂಬೇಡ್ಕರ್ ಉಲ್ಲೇಖಿಸಿಕೊಟ್ಟಿರುವ ಅನುಶಾಸನಗಳನ್ನು ಈ ಪದ್ಯಗಳ ಪರ್ಯದೊಂದಿಗೆ ಸಮೀಕರಿಸಿಕೊಂಡು ನೋಡಬಹುದು.

ಹೀಗೆ ಮಧ್ಯಕಾಲೀನ ಭಾರತದ ದಲಿತರ ಅಸ್ತಿತ್ವವನ್ನು ರಾಘವಾಂಕನಂತೆ ಯಥಾವತ್ತಾಗಿ ಚಿತ್ರಿಸಿರುವ ಕವಿ ಕನ್ನಡ ಸಾಹಿತ್ಯ ಸಂದಂರ್ಭದಲ್ಲಿ, ಅಂತೆಯೇ ಭಾರತೀಯ ಸಂದರ್ಭದಲ್ಲಿ ಕೂಡ ಇನ್ನೊಬ್ಬನಿರಲಾರನು. ಆದರೂ ಹೀಗೆ ಕೇಳು ಜನ ಬದುಕಬೇಕೆಂದು ಮನುಜರ ಮೇಲೆ, ಸಾವವರ ಮೇಲೆ, ಕಡುವವರ ಮೇಲೆ ಸತ್‌ಕಾವ್ಯ ರಚನೆ ಮಾಡಿದ್ದು ಅವರ ಸೋದರ ಮಾವ ಹರಿಹರನ ದೃಷ್ಟಿಗೆ ಹೇಗೆ ಅಪರಾಧವಾಗಿ ಕಂಡಿತೋ? ಆತ ಪೂರ್ವಗ್ರಹ ಪೀಡಿತನಾಗಿ, ಹೀಗೆ ಕಾವ್ಯರಚನೆ ಮಾಡಿದ್ದು ತಪ್ಪೆಂದು ಭಾವಿಸಿ, ತನ್ನ ಪಾದುಕೆಗಳಿಂದ ಅಳಿಯನ ಕಪೋಲಮೋಕ್ಷ ಮಾಡಲು ಅವನ ಹಲ್ಲು ಬಿದ್ದುಹೋದವೆಂಬ ಪ್ರತೀತಿಯಿದೆ. ಈ ದಂತಕತೆಯ ಸತ್ಯಾಸತ್ಯತೆ ಏನೇ ಇರಲಿ, ರಾಘವಾಂಕ “ಅತಿ ಹುಸಿದಿಹ ಹೊಲಯನುನ್ನತಯತಿವರನು” ಎಂದು ಜಾತಿ ಹಿಂದೂ



ದರ್ಶನಗಳ ವಿರುದ್ಧ ಪನರಲೀಕರಣಕ್ಕೆ ತೊಡಗಿದ್ದು ಮಾತ್ರ ಲೋಕೋತ್ತರವೆಂಬಂತಿದೆ. ಹರಿಶ್ಚಂದ್ರ ಕಾವ್ಯದಂತಹ ಪ್ರತಿಮಾತ್ಮಕ ಕೃತಿ ಇಂಗ್ಲೀಷಿಗೆ ಭಾಷಾಂತರಗೊಂಡು, ಡಾ|| ಅಂಬೇಡ್ಕರ್ ಅಂಥವರ ದೃಷ್ಟಿಗೆ ಅದು ಬಿದ್ದಿದ್ದರೆ ಅವರಷ್ಟೆ ಮೆಚ್ಚಿಕೊಳ್ಳುತ್ತಿದ್ದರೂ!

ಕಡೆಯಾಗಿ ಡಾ|| ಬಾಬಾಸಾಹೇಬ್ ಅಂಬೇಡ್ಕರ್ ಅವರು ಉವಾಚಿಸಿರುವಂತೆ ಈ ನೆಲದಲ್ಲಿ ಅಸ್ಪೃಶ್ಯತೆಯ ಆಚರಣೆಗೆ ಧರ್ಮಶಾಸ್ತ್ರ ಅನುಮತಿ ಹಾಗೂ ಕಾನೂನಿನ ಒಪ್ಪಿಗೆ-ಇವರೆಡೂ ಕೂಡ ಕಾರಣವಾಗಿದ್ದವು. ಮಿಂಟೊ ಮಾರ್ಲೆಯ ಪ್ರಗತಿಪರ ಸುಧಾರಣೆಗಳು ಜಾರಿಗೆ ಬರುವವರೆಗೂ ಈ ದೇಶದಲ್ಲಿ ಪ್ರಾಚೀನ ಜಾತಿ ಪದ್ಧತಿ ತಾನೇ ತಾನಾಗಿತ್ತು ಆದರೆ ಪ್ರಾಚೀನ ರೋಮ್‌ನಲ್ಲಿ ಇದಕ್ಕೆ ಬದಲಾಗಿ ಗುಲಾಮ ಪದ್ಧತಿ ರೂಢಿಯಲ್ಲಿದ್ದು, ಅದಕ್ಕೆ ಕಾನೂನಿನ ಒಪ್ಪಿಗೆಯಿದ್ದರೂ ಆಚರಣೆಗೆ ಧರ್ಮ ಸಮ್ಮತಿ ಇರಲಿಲ್ಲ. ಆದ್ದರಿಂದ ಅಲ್ಲಿ ಗುಲಾಮ ಪದ್ಧತಿ ಯಶಸ್ವಿಯಾಗಿ ಚಾಲನೆಯಾಗಲಿಲ್ಲ. ಈ ನಿಟ್ಟಿನಲ್ಲಿ ಡಾ|| ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು ಕೃತಿ ೫ ಮತ್ತು ೬ ನೇ ಸಂಪುಟಗಳನ್ನು ಅಧ್ಯಯನ ಮಾಡುವುದು ಅಗತ್ಯ.

***********

## ೮. ದಲಿತ ಸಾಂಸ್ಕೃತಿಕ ಮೂಲನೆಲೆಗಳು

**ಎಂ.ಎಸ್. ಶೇಖರ್**

ದಲಿತ ಸಂಘರ್ಷ ಸಮಿತಿ ಹುಟ್ಟುವವರೆಗೆ ಬಾಬಾಸಾಹೇಬ ಅಂಬೇಡ್ಕರ್ ಹೆಸರು, ಬದುಕು, ಚಿಂತನೆ ಕರ್ನಾಟಕದ ನೆಲದ ಮೇಲೆ ಮೂಡಲೇ ಇಲ್ಲವೆ ಎಂಬುದು ನನ್ನ ಬಹುಕಾಲದ ಪ್ರಶ್ನೆ, ಈ ಪ್ರಶ್ನೆಯನ್ನು ಅದಕ್ಕು ಮುಂಚೆ ಎತ್ತಿದವರ ದಾಖಲೆ ಇದ್ದರೆ ತೋರಿಸಲಿ. ಇದೀಗ ಅದಕ್ಕೂ ಘೋರವಾದ ಸಂಗತಿಗಳು ಬೆಳಕಿಗೆ ಬರುತ್ತಿವೆ. ಪ್ರಶ್ನೆಗಳ ಸರಮಾಲೆಯೇ ನನ್ನ ಎದುರಿಗೆ ಅವತರಿಸಿವೆ. ೧೯ನೇ ಶತಮಾನದ ಕೊನೆಯಲ್ಲಿ ಹುಟ್ಟಿ ಬಾಬಾ ಸಾಹೇಬರಿಗೆ ಎರಡು ವರ್ಷ ದೊಡ್ಡವರಾಗಿ, ಅವರ ನಿಕಟವರ್ತಿಯಾಗಿ, ಬದುಕು-ಬರಹಗಳಲ್ಲಿ ಅವರನ್ನು ಕಡೆದಿಟ್ಟ ದೇವರಾಯ ಇಂಗಳೆಯವರನ್ನು ಆ ಕಾಲದ ನಮ್ಮ ಬರಹಗಾರರು, ಚಿತ್ರಗಾರರು, ಸಂಸ್ಕೃತಿ ಚಿಂತಕರು ಮರೆಮಾಚಿದ್ದು ಏಕೆ? ನಾಡೆಲ್ಲ ಸುತ್ತಿದವರು ಎಂದು ಭಕ್ತರ ಗ್ಯಾಂಗ್ ಬೊಬ್ಬೆ ಹಾಕುವ ಶಿವರಾಮಕಾರಂತರಿಂದ ಕಿ.ರಂ. ನಾಗರಾಜ ವರೆಗಿನ ನೆಲೆ-ಬೆಲೆ ಏನು? ನವೋದಯ, ಸಮನ್ವಯ, ಪ್ರಗತಿಶೀಲ, ನನ್ನ ಕೊನೆಗೆ ದಲಿತ ಬಂಡಾಯ ಚಳುವಳಿಗಳೇ ನಡೆದು ಹೋದರೂ; ಇಂಗಳೆ, ಸೋಸ್ಥೆ ಎಸ್, ಸಿದ್ದಪ್ಪ ಡಿ, ಗೋವಿಂದದಾಸ್, ಬಿ.ಶ್ಯಾಮಸುಂದರ ಇವರನ್ನೆಲ್ಲ ನಮ್ಮ ಕೈಯಾರ ನಾವು ಕೊಂದದ್ದು ಏಕೆ? ಆ ಮೂಲಕ ಕರ್ನಾಟಕ, ಕನ್ನಡ, ಕನ್ನಡಿಗರಲ್ಲಿ ಭಾರತದ ಮಟ್ಟದ ಸಾಂಸ್ಕೃತಿಕ ನಾಯಕರೇ ಹುಟ್ಟಲಿಲ್ಲ ಎಂಬ ಮತಿಹೀನ ಹೇಳಿಕೆ ದಾಖಲಿಸುತ್ತಿರುವುದು ಏಕೆ? ನಿನ್ನೆ ಮೊನ್ನೆ ಸತ್ತವರನ್ನೇ ಮಹಾತ್ಮರು ಎಂದು ಬಿಂಬಿಸುತ್ತ, ಯುಗ ಪ್ರವರ್ತಕರನ್ನು ಅಜ್ಞಾನದ ಕೂಪಕ್ಕೆ ಹಾಕಿ ಅದುಮಿ ಹಿಡಿದಿರುವುದು ಏಕೆ? ಗೆಳೆಯ ಸರಜೂ ಕಾಟ್ಕರ್ ಸಂಶೋಧನೆ ಹಾಗೂ ಕೊಡುಗೆ ಈ ದಿಶೆಯಲ್ಲಿ ಮಹತ್ವವಾದದ್ದು. ಗೀತಾ ನಾಗಭೂಷಣ ಅವರ ಕಾಲದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಗೆಳೆಯ ಎಂ.ಎಸ್, ಶೇಖರ್ ಅವರ ಸಂಪಾದಕತ್ವದಲ್ಲಿ ಹೊರತಂದ “ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು” ಕೃತಿಯಲ್ಲಿ ಅವರ ಪ್ರಸ್ತಾವನೆಯನ್ನು ಇಂಗಳೆಯವರನ್ನು ಕುರಿತ ಸರಜೂ ಕಾಟ್ಕರ್ ಅವರ ಎರಡೂ ಲೇಖನಗಳನ್ನು ಇಲ್ಲಿ ನೀಡಲಾಗುತ್ತಿದೆ. ಇನ್ನಾದರೂ ನಿಜವಾದ ಚರಿತ್ರೆ ಕನ್ನಡಿಗರಿಗೆ ತಿಳಿಯಲಿ, ಆ ಮೂಲಕ ಕನ್ನಡಿಗರು ತಲೆ ಎತ್ತಿ ನಡೆಯುವಂತಾಗಲಿ ಎಂಬುದು ಇದರ ಆಶಯವಾಗಿದೆ.

ದಲಿತ ಸಾಹಿತ್ಯ-ದಲಿತ ಚಳವಳಿ ಎಂದ ತಕ್ಷಣ; ಥಟ್ಟನೆ ೧೯೭೦ರ ದಶಕ ನೆನಪಿಗೆ ಬರುತ್ತದೆ. ಆ ಮಟ್ಟಿಗೆ ಅವುಗಳ ಪ್ರಭಾವ ಇದೆ. ಆಧುನಿಕ ಕನ್ನಡ ಸಾಹಿತ್ಯ

ಹಾಗೂ ಸಾಮಾಜಿಕ ಬದುಕಿನಲ್ಲಿ ಮೇಲೆ ಗಣನೀಯ ಪ್ರಭಾವವನ್ನು ಬೀರಿರುವ ಇವುಗಳ ಹೊಸ ಆಯಾಮಕ್ಕೆ ಎಡೆಮಾಡಿಕೊಟ್ಟಿದೆ. ಇದಕ್ಕೆ ಮಹಾನ್ ಮಾನವತಾವಾದಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಗಳ ಬಹುಮುಖ್ಯ ಪ್ರೇರಣೆ ಆಗಿವೆ. ಕ್ರಾಂತಿಕಾರ ವ್ಯಕ್ತಿತ್ವದ ಬಿ. ಬಸವಲಿಂಗಪ್ಪ ಅವರ ಬೂಸಾ ಸಾಹಿತ್ಯ ವಿರೋಧಿ ಪ್ರಕರಣವಂತೂ ದಲಿತ ಬಂಡಾಯ ಚಳುವಳಿಗಳಿಗೆ ಹೊಸ ದಿಕ್ಕನ್ನೇ ತಂದುಕೊಟ್ಟಿತು. ಇದರಿಂದ ಜಾಗೃತರಾದ ದಲಿತರು ಸಂಘಟನೆಗೊಂಡಿದ್ದು ಚರಿತ್ರಾರ್ಹವೆ ಆಗಿದೆ. ಈ ಜಾಗೃತಿಯ ಅರಿವಿನೊಟ್ಟಿಗೆ ನಮ್ಮ ಸಾಂಸ್ಕೃತಿಕ ನೆಲೆಗಳನ್ನು ತಡಕುತ್ತ ಹೋದಂತೆ ಹಲವು ಕುತೂಹಲಗಳು ನಮಗೆ ಎದುರಾಗುತ್ತವೆ. ೧೯೮೦ರ ದಶಕದಿಂದಲೂ ಸದಾ ಸಾಮಾಜಿಕ ಆರೋಗ್ಯವನ್ನೇ ಬಯಸುವ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸನಿಹದಲ್ಲಿದ್ದ ನನಗೆ; ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳ ಮೇಲೆ ದಟ್ಟ ಪ್ರಭಾವವನ್ನು ಬೀರಿ, ಅವುಗಳಿಗೆ ಹೊಸ ಆಯಾಮವನ್ನೇ ನೀಡಿರುವ ದಲಿತ ಚಳುವಳಿ ಹಾಗೂ ದಲಿತ ಸಾಹಿತ್ಯದ ಬಗ್ಗೆ ಅಗಾಧವಾದ ಗೌರವವನ್ನು ಹುಟ್ಟಿಸುತ್ತಿತ್ತು.

ವಾಸ್ತವವಾಗಿ ದಲಿತರೆ ಈ ದೇಶದ ಮೂಲನಿವಾಸಿಗಳು. ಶ್ರಮಸಂಸ್ಕೃತಿಗೆ ಮತ್ತೊಂದು ಹೆಸರೆಂದರೆ ದಲಿತರು. ಬೆವರು ಹರಿಸದೇ ಊಟ ಮಾಡಿದವರಲ್ಲ. ಕೃಷಿ ಸಂಸ್ಕೃತಿಯ ಹುಟ್ಟಿಗೆ ಈ ನೆಲದ ಸಂಗಾತಿಗಳಾದ ದಲಿತರೇ ಕಾರಣ. ಹಾಗಾಗಿ ಈ ಭೂಮಿಯ ಕರುಳುಬಳ್ಳಿಗಳಾದ ದಲಿತರೆ ಈ ನೈಜ ಸಾಂಸ್ಕೃತಿಕ ವಾರಸುದಾರರಾಗಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನೆಲೆಗಳು ಈ ದೇಶದ ಮೂಲ ಸಾಂಸ್ಕೃತಿಕ ನೆಲೆಗಳೆ ಆಗಿವೆ. ಶತಮಾನಗಳಿಂದ ಅದುಮಿಟ್ಟುಕೊಂಡಿದ್ದ ನೋವುಗಳು ೧೯೭೦ರ ದಶಕದಲ್ಲಿ ಸ್ಫೋಟಿಸಿದ್ದು ಒಂದು ಚಾರಿತ್ರಿಕ ದಾಖಲೆ ಆಗಿದ್ದರೂ ಕೂಡ. ಇಪ್ಪತ್ತನೆಯ ಶತಮಾನದ ಆದಿಯಲ್ಲಿಯೇ ದಲಿತ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರು ಸಾಹಿತ್ಯದ ಕೃಷಿ ಮಾಡಿರುವುದು ಗಮನಾರ್ಹ ಸಂಗತಿ ಆಗಿದೆ.

೧೯೮೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನೆ ನಡೆಸುತ್ತಿದ್ದ ನನಗೆ ದಲಿತ ಸಂಸ್ಕೃತಿಯ ಮೂಲ ನೆಲೆಗಳ ಬಗ್ಗೆ ತಣ್ಣನೆಯ ಮನಸ್ಸಿನಿಂದ ವಿವೇಕದ ಅಧ್ಯಯನ ನಡೆಸುವ ಅಗತ್ಯತೆ ಇದೆ ಅನ್ನಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಅಧ್ಯಯನ ನಿರತರಾಗಿದ್ದಾಗ ಹಾಸನ ಜಿಲ್ಲೆಯ ವಿಶ್ವವಿಖ್ಯಾತ ಶ್ರವಣಬೆಳಗೊಳದ ಸಮೀಪದ ದಮ್ಮನಿಂಗಳದವರಾದ ಡಿ. ಗೋವಿಂದದಾಸ್ (೧೯೧೦) ಅವರು ಕಡುಕಷ್ಟದಲ್ಲಿಯೇ ಅಕ್ಷರಕಲಿತು ಜಾಗೃತರಾಗಿ ಇಂಟರ್‌ಮಿಡಿಯಟ್‌ವರೆಗೂ ಓದಿ ೧೯೨೦ರ ದಶಕದಲ್ಲಿಯೆ ನೊಂದವರ ಪರ ಕಾಳಜಿಯಿಂದ ಸಾಮಾಜಿಕ ಸುಧಾರಣೆಯ ಕೆಲಸಗಳನ್ನು ಕೈಗೊಳ್ಳುತ್ತ ಸಾಹಿತ್ಯಕ ಕೃಷಿ ಮಾಡಿರುವುದು ತಿಳಿಯಿತು. ಈ ಜಾಡನ್ನು ಹಿಡಿದು ಅಪಾರ ಶ್ರಮದಿಂದ ಸಂಶೋಧನೆ ಮಾಡಿದಾಗ ಡಿ. ಗೋವಿಂದದಾಸ್ ಅವರು ೧೯೨೦ರ ದಶಕದಿಂದಲೇ ತಮ್ಮ ಸಾಮಾಜಿಕ ಸುಧಾರಣೆಯ ಕೆಲಸಕ್ಕೆ ಪೂರಕವಾದ ಸಾಹಿತ್ಯ ಕೃಷಿಯನ್ನು ಮಾಡುತ್ತ, ಕನ್ನಡನಾಡು, ನುಡಿ, ಸಂಸ್ಕೃತಿಯ

ಬಗ್ಗೆ ತುಂಬಾ ಕಾಳಜಿಯಿಂದ ಶ್ರಮಿಸಿರುವುದು ತುಂಬು ಮಹತ್ವದ ಸಂಗತಿ ಎನಿಸಿತು. ವಾಸ್ತವವಾಗಿ ಗೋವಿಂದದಾಸ್ ಅವರು, ಕಾವ್ಯಕ್ಕೆ ಸಂಬಂಧಿಸಿದಂತೆ ಬಿ.ಎಂ.ಶ್ರೀ, ಮಾಸ್ತಿ ಅವರುಗಳನ್ನು ಹಲವು ಸಲ ಭೇಟಿ ಮಾಡಿ ಚರ್ಚಿಸಿ ಅವರುಗಳ ನೆರವನ್ನು ಕೋರಿದ್ದಾರೆ. ಎ.ಆರ್. ಕೃಷ್ಣಶಾಸ್ತ್ರೀ ಅವರ ಸಂಪಾದಕತ್ವದಲ್ಲಿ ನಡೆಯುತ್ತಿದ್ದ ಪ್ರಬುದ್ಧ ಕರ್ನಾಟಕ ಪತ್ರಿಕೆಗೆ ತಮ್ಮ ಕವಿತೆಗಳ ಪ್ರಕಟನೆಗಾಗಿ ಕಳುಹಿಸಿ ತಿರಸ್ಕೃತವಾದುದ್ದನ್ನು ಗೋವಿಂದದಾಸರು ದಾಖಲಿಸಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರು ಅಧ್ಯಕ್ಷರಾಗಿದ್ದ ಮೈಸೂರು ರಾಜ್ಯ ಟೆಕ್ಸ್‌ಬುಕ್ ಕಮಿಟಿಯ ಸದಸ್ಯರಾಗಿಯು ಕೆಲಸ ಮಾಡಿದ್ದಾರೆ. ೧೯೨೦ರ ದಶಕದಲ್ಲಿಯೇ ಬೆಂಗಳೂರಿನ ಕೊಲಿಜಿಯಟ್ ಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಉತ್ತರ ಭಾರತದ ಸಾಧು-ಸಂತರ ನೆರವಿನಿಂದ ಉತ್ತರ ಭಾರತದ ಪ್ರವಾಸ ಮಾಡಿದ್ದಾರೆ. ಈ ಎಲ್ಲ ಮಾಹಿತಿಗಳು ಗೋವಿಂದಾಸ್ ಅವರ ಆತ್ಮಕಥನದಲ್ಲಿ ದಾಖಲಾಗಿವೆ. ಇಂಟರೀಡಿಯಟ್‌ನವರೆಗೂ ಓದಿ ಹರಿಜನ ತರುಣ ಯುವಕವಿ ಎಂದೇ ಹೆಸರಾಗಿದ್ದ ಗೋವಿಂದದಾಸ್ ಅವರ ಸ್ಥಿತಿಗತಿಯನ್ನು ಅರಿತು ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ಮಾಸ್ತಿ ಅವರು ಉಪಾಧ್ಯಾಯ ಕೆಲಸವನ್ನು ಕೊಡಿಸಲು ಮುಂದಾಗುತ್ತಾರೆ. ಆದರೆ ನನಗೆ ಉಪಾಧ್ಯಾಯ ಕೆಲಸ ಬೇಡ. ನಾನು-ನನ್ನ ಸಮುದಾಯವನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡುತ್ತೇನೆ. ನನ್ನ ಸಾಹಿತ್ಯ ಕೃಷಿಗೆ ನಿಮ್ಮ ಆಶೀರ್ವಾದ ಇರಲಿ ಎಂದು ಕೇಳಿಕೊಳ್ಳುತ್ತಾರೆ. ಗೊವಿಂದದಾಸ್ ಅವರು ಸುಮಾರು ನೂರಕ್ಕೂ ಹೆಚ್ಚು ಕವಿತೆಗಳನ್ನು ಬರೆದಿದ್ದಾರೆ. ೧೯೨೦ರ ದಶಕದಲ್ಲಿಯೇ ಹಾಸನ ಜಿಲ್ಲೆಯ ಹರಿಜನ ಸೇವಾ ಸಂಘವು ಹರಿಜನಾಭ್ಯುದಯ ಎಂಬ ಗೋವಿಂದದಾಸ್ ಅವರ ಕವನ ಸಂಕಲನವನ್ನು ಪ್ರಕಟಿಸಿವೆ. ಇನ್ನುಳಿದ ಕವಿತೆಗಳೆಲ್ಲ ಇವರ ಕೈಬರಹಗಳಲ್ಲಿಯೇ ಇವೆ. ಒಂದು ಆತ್ಮಕಥನ ಇದೆ. ನಡುನೀರ ಹಡಗು ಎಂಬ ನಾಟಕವನ್ನು ಬರೆದಿರುವ ಇವರು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಅಪ್ಪಟ ಗಾಂಧೀವಾದಿಗಳಾಗಿದ್ದ ಗೋವಿಂದದಾಸ್ ಅವರ ಕವಿತೆಗಳು ಕನ್ನಡ ನವೋದಯ ಕಾಲಘಟ್ಟದವುಗಳಾಗಿವೆ. ಸ್ವಾತಂತ್ರ್ಯ, ನಾಡು, ನುಡಿ, ಸಂಸ್ಕೃತಿ, ರಾಷ್ಟ್ರಪ್ರೇಮ ಹಾಗೂ ಸಮಾಜ ಸುಧಾರಣೆಯ ಆಶಯನ್ನೊಳಗೊಂಡ ಇವರ ಕವಿತೆಗಳು ತುಂಬ ಮಹತ್ವದವುಗಳೇ ಆಗಿವೆ. ಅಲ್ಲದೆ ಬುದ್ಧ, ಗಾಂಧಿ, ಗೋಪಾಲಸ್ವಾಮಿ ಅಯ್ಯರ್, ಅಂಬೇಡ್ಕರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಮುಂತಾದ ಮಾನವತಾವಾದಿಗಳನ್ನು ಕುರಿತಂತೆ ಕೂಡ ಕವಿತೆಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಕ್ರೂರವಾಗಿ ಜಾತಿಪದ್ಧತಿ ಮತ್ತು ಅಸ್ಪೃಶ್ಯತಾ ಆಚರಣೆಯಿಂದ ಮನುಷ್ಯತ್ವಕ್ಕೆ ಹೇಗೆ ಅಪಮಾನಿತವಾಗಿದೆ ಎಂಬುದನ್ನು ಗೋವಿಂದದಾಸ್ ಅವರ ಕಾವ್ಯ ಅನಾವರಣ ಮಾಡಿದೆ. ಅವರ ಕಾವ್ಯದ ಆಶಯವನ್ನು ಕುರಿತಂತೆ: ಎಂ.ರಾಜರಾವ್ ಅವರು "The language of the poems is simple and homely. The matter of the poems makes a direct appeal to the hearts o the Auidence any one" o

ಅಭಿಪ್ರಾಯಪಟ್ಟಿರುವುದು ತುಂಬ ಮಹತ್ವದೆನಿಸುತ್ತದೆ. ಈ ಎಲ್ಲ ಮಾಹಿತಿಗಳನ್ನು

ಸಂಗ್ರಹಿಸಿ ಅಧ್ಯಯನ ನಡೆಸಿ ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ಮೊದಲ ದಲಿತ ಕವಿ, ನಾಟಕಕಾರ, ಸಮಾಜ ಸುಧಾಕರ ಡಿ. ಗೋವಿಂದದಾಸ್ ಎಂಬ ನನ್ನ ಲೇಖನ ೧೯೯೯ ರಲ್ಲಿ ಸಂಕ್ರಮಣ, ಮಯೂರ, ಆಂದೋಲನ ಮುಂತಾದ ಸಾಹಿತ್ಯಕ ಸಂಚಿಕೆ-ಪತ್ರಿಕೆಗಳಲ್ಲಿ ಪ್ರಕಟವಾಯಿತು. ಲೇಖನಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿತು.

ಸರಜೂ ಕಾಟ್ಕರ್ ಅವರು: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಇಂಗಳೆಯ ಗ್ರಾಮದ ಶ್ರೀದೇವರಾಯ ಇಂಗಲೆ (೧೮೮೮) ಅವರು, ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ನಿಕಟವರ್ತಿಗಳಾಗಿದ್ದವರು. ಬಾಬಾಸಾಹೇಬರಿಗಿಂತ ಎರಡು ವರ್ಷ ಹಿರಿಯರಾದ ದೇವರಾಯ ಇಂಗಳೆ ಅವರು ಆ ಕಾಲಘಟ್ಟದಲ್ಲಿಯೇ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಎಂದು ತಿಳಿಸಿದರು. ಆ ಕಾಲದಲ್ಲಿಯೇ ಹಲವರು ಕಷ್ಟ ಬಡತನ, ಅಪಮಾನ, ಹಿಂಸೆಗಳನ್ನು ಅನುಭವಿಸುತ್ತಲೇ ದೇವರಾಯ ಅಕ್ಷರ ಕಲಿಯುತ್ತಾರೆ. ಮೂಲತಃ ಅಪಾರ ಮಾನವೀಯ ಹೃದಯದ ದೇವರಾಯರಿಗೆ ಸಾಹಿತ್ಯ ರಚಿಸುವುದಷ್ಟೆ ಇವರ ಕೆಲಸವಾಗಿರಲಿಲ್ಲ. ಕೆಟ್ಟ ಸ್ವಾರ್ಥದಿಂದ ಸವರ್ಣೀಯರು ಹೆಣೆದಿದ್ದ ವಿಷದ ಬಲೆಯಲ್ಲಿ ಸಿಕ್ಕು ಅಜ್ಞಾನದಿಂದ ಪಶುಗಳಿಗಿಂತ ಕಡೆಯಾಗಿ ಬದುಕುತ್ತಿದ್ದ ಮುಗ್ಧ ದಲಿತರ ಬದುಕು ಸುಧಾರಿಸಬೇಕು. ಇದಕ್ಕೆ ಅಕ್ಷರವೇ ಮಹಾಮದ್ದು ಎಂಬುದನ್ನು ಅರಿತಿದ್ದ ದೇವರಾಯರು ದಲಿತರಿಗೆ ಶಿಕ್ಷಣದ ಅರಿವನ್ನು ಮೂಡಿಸಲು ಆಂದೋಲನವನ್ನೆ ಪ್ರಾರಂಭಿಸುತ್ತಾರೆ. ಮುಖ್ಯವಾಗಿ ದಲಿತರು, ಕೆಳವರ್ಗದವರು ತಮ್ಮ ಹೆಣ್ಣುಮಕ್ಕಳನ್ನು ದೇವದಾಸಿ ಪದ್ಧತಿಗೆ ಬಿಡುತ್ತದ್ದ ಅಮಾನವೀಯವಾದ ಪದ್ಧತಿಯನ್ನು ಹೋಗಲಾಡಿಸಲು ಬಹಳ ದೊಡ್ಡ ಹೋರಾಟವನ್ನೇ ನಡೆಸುತ್ತಾರೆ. ದೇವದಾಸಿ ಪದ್ಧತಿ ಎಷ್ಟು ಅಮಾನವೀಯವಾದದು ಎಂಬುವುದನ್ನು ಶಿಕ್ಷಣದ ಅರಿವಿಲ್ಲದ ಮುಗ್ಧ ದಲಿತರಿಗೆ ಅರಿವು ಮೂಡಿಸಲು ಬರವಣಿಗೆಯನ್ನು ದೇವರಾಯರು ಮಾಧ್ಯಮವನ್ನಾಗಿಸಿಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ ಜನತೆಗೆ ಸುಲಭವಾಗಿ ತಟ್ಟುವ ಬೀದಿನಾಟಕಗಳನ್ನು ಸರಳ ಕವಿತೆಗಳನ್ನು ಬರೆದು ಅವುಗಳನ್ನು ಹಾಡುತ್ತ ದಲಿತಕೇರಿಗಳನ್ನು ಪ್ರವೇಶಿಸುತ್ತಾರೆ.

ಯಲ್ಲಮ್ಮ, ರೈತನ ಮಗಳು, ಸೂಳೆಯ ಮಗಳು ಎಂಬ ಮೂರು ಮಹತ್ವದ ನಾಟಕಗಳನ್ನು ದೇವರಾಯ ಬರೆದಿದ್ದಾರೆ. ಸವರ್ಣೀಯರ ಕುತಂತ್ರದಿಂದ ದಲಿತರಲ್ಲಿ ಮನೆ ಮಾಡಿದ್ದ ಮೌಢ್ಯ, ಅಜ್ಞಾನ, ಅಶುಚಿತ್ವದಿಂದ ದಲಿತರು ಹೊರಬರಬೇಕು. ಅಗತ್ಯವಾಗಿ ಶಿಕ್ಷಣ ಪಡೆಯಬೇಕು. ಅರಿವು ಮೂಡಿಸಿಕೊಳ್ಳಬೇಕು. ಸ್ವಾಭಿಮಾನಿ ಗಳಾಗಬೇಕು. ಮುಖ್ಯವಾಗಿ ಯುವ ದಲಿತರು ಸಾಮಾಜಿಕ ಆಂದೋಲನದಲ್ಲಿ ಪಾಲ್ಗೊಳ್ಳಬೇಕು ಎಂಬ ಕ್ರಾಂತಿಕಾರ ನಿಲುವುಗಳಿಗೆ ಇವರ ನಾಟಕಗಳ ಪ್ರಧಾನ ಆಶಯಗಳಾಗಿವೆ. ಓದು ಬರಹ ಬಾರದ ದಲಿತ ಸಮುದಾಯಕ್ಕೆ ಬೀದಿನಾಟಕದಂಥಹ ಮಾಧ್ಯಮಗಳ ಮಾತ್ರ ಅವರನ್ನು ಸುಲಭವಾಗಿ ತಲುಪಬಲ್ಲವು ಎಂಬುದನ್ನು ಮನಗಂಡಿದ್ದ ಇಂಗಳೆ ಅವರು ತಮ್ಮ ಸಮಾಜ ಸುಧಾರಣೆ ಕೆಲಸಕ್ಕೆ ಬೀದಿನಾಟಕಗಳನ್ನು ಮಾಧ್ಯಮವನ್ನಾಗಿಸಿಕೊಂಡಿದ್ದು ಅವರ ದೂರದೃಷ್ಟಿತ್ವಕ್ಕೆ ಸಾಕ್ಷಿಯಾಗಿದೆ. ದಲಿತ

ಸಮುದಾಯವನ್ನು ಆಕರ್ಷಿಸಲು, ದಲಿತರ ಸಾಂಸ್ಕೃತಿಕ ನೆಲೆಗಳಾದ ಚೌಡಿಕೆ ಪದಗಳನ್ನು ಬಳಸಿಕೊಂಡು ತಿಳಿಯಾದ ಹಾಸ್ಯವನ್ನು ಬೆರೆಸಿ ನಾಟಕಗಳನ್ನು ಆಡಿಸುತ್ತಿರುವುದಾಗಿ ಇವರ ಸೂಕ್ಷ್ಮ ಸಂವೇದನೆಗೆ ಸಾಕ್ಷಿಯಾಗಿದೆ. ಕ್ರಾಂತಿಕಾರಕವಾದ ಕೆಲಸ ಮಾಡುವ ಸಂದರ್ಭಗಳಲ್ಲಿ ಹಲವು ಸಲ ಕ್ರೂರ ಸವರ್ಣಿಯರ ಕೆಂಗಣ್ಣಿಗೆ ಗುರಿಯಾಗಿ ಕಿರುಕುಳಗಳನ್ನು ಅನುಭವಿಸುತ್ತಾರೆ. ಆದರೆ ಅಸ್ಪೃಶ್ಯ ಜನಾಂಗದಲ್ಲಿದ್ದ ಮೌಢ್ಯವನ್ನು ಹೋಗಲಾಡಿಸಿ ಜನಾಂಗವನ್ನು ಸುಧಾರಿಸಲೇಬೇಕೆಂಬ ದೇವರಾಯ ಇಂಗಳ ಅವರ ತುಂಬು ಅಚಲವಾದ ನಿಲುವು, ಅಪ್ರತಿಮ ನೈತಿಕ ಶಕ್ತಿಯಿಂದ ಅವುಗಳನ್ನೆಲ್ಲವನ್ನು ಎದುರಿಸುವ ಅವರ ಕಾವ್ಯವಿಧಾನವೇ ಬಹಳ ದೊಡ್ಡ ಆದರ್ಶ ಎನಿಸುತ್ತದೆ.

ಡಾ.ಬಾಬಸಾಹೇಬ್ ಅಂಬೇಡ್ಕರ್ ಅವರಿಗೆ ಹತ್ತಿರದವರಾಗಿದ್ದ ದೇವರಾಯ ಇಂಗಳೆ ಅವರು, ಬಾಂಬೆಗೆ ಹೋಗಿ ಅಂಬೇಡ್ಕರ್ ಅವರ ಮಾರ್ಗದರ್ಶನಗಳನ್ನು ಪಡೆಯುತ್ತಾ ಅವರ ಪ್ರಭಾವ-ಪ್ರೇರಣೆಯಿಂದ ಮತ್ತಷ್ಟು ಗಟ್ಟಿಯಾದ ಸಮಾಜ ಸುಧಾರಣೆ ಕೆಲಸಗಳನ್ನು ಮಾಡುತ್ತಾರೆ. ಜೊತೆಗೆ ಬೆಳಗಾವಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ದಲಿತ ಸಮುದಾಯದವರನ್ನು ಬೃಹತ್ತಾಗಿ ಸಂಘಟಿಸಿ; ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಕರೆಸಿ ಭಾಷಣಗಳನ್ನು ಮಾಡಿಸಿ ಅಂಬೇಡ್ಕರ್ ಅವರ ಪ್ರಭಾವ ನೇರವಾಗಿ ಜನತೆಗೆ ಆಗುವಂತೆ ಮಾಡಿದ್ದು ನಿಜಕ್ಕೂ ಬಹಳ ದೊಡ್ಡ ಸುಧಾರಣೆ ಕೆಲಸವೆ ಆಗಿದೆ.

ಮರಾಠಿ, ಕನ್ನಡ, ಉರ್ದು, ಇಂಗ್ಲಿಷ್, ಭಾಷೆಗಳನ್ನು ಬಲ್ಲವರಾಗಿದ್ದ ದೇವರಾಯ ಇಂಗಳೆ ಅವರು ಕನ್ನಡ, ಮರಾಠಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಕೂಡ ಸಾಹಿತ್ಯ ಕೃಷಿ ಮಾಡಿದ್ದಾರೆ. ಅಂಬೇಡ್ಕರ್ ಅವರನ್ನು ಕುರಿತಂತೆ:

**ಅವನು ಸೂರ್ಯ**

**ನಾವು ಅವನ ತುಣುಕುಗಳು**

ಎಂಬ ಆದರ್ಶವನ್ನು ಜನಕ್ಕೆ ಕಾವ್ಯದ ಮೂಲಕ ಆದರ್ಶಿಕರಿಸಿರುವುದು ಮಹತ್ವದ್ದೆನಿಸುತ್ತದೆ. ಇಂಗ್ಲೀಷ್‌ನಲ್ಲೂ ಕವಿತೆ ಬರೆದಿರುವ ಕೆಲವು ಸಾಲುಗಳು ಇಂತಿವೆ:

**God is light of Darkeness**

**God is Truth not untruth**

**God is never discriminate**

ಹೀಗೆ, ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿಯೆ ಜನಿಸಿದ ದೇವರಾಯ ಇಂಗಳೆ ಅವರು ಶೋಷಿತರ ಬಹಳ ದೊಡ್ಡ ಧ್ವನಿಯಾಗಿ ಕೆಲಸ ಮಾಡಿ ಆಧುನಿಕ ಕನ್ನಡ ಸಾಹಿತ್ಯದ ಹೊಸಗನ್ನಡದ ಅರುಣೋದಯ

ಕಾಲಘಟ್ಟದಲ್ಲಿಯೇ ಸಾಮಾಜಿಕ ಆರೋಗ್ಯವನ್ನು ಬಯಸುವ ಸಾಹಿತ್ಯ ಕೃಷಿಯನ್ನು ಮಾಡಿರುವುದು ಗಮನಾರ್ಹವೆನಿಸುತ್ತದೆ.

ಗೋವಿಂದದಾಸ್ ಕುರಿತ ನನ್ನ ಲೇಖನವನ್ನು ಓದಿ, ಗೋವಿಂದದಾಸ್ ಅವರಿಗಿಂತಲೂ ಮೊದಲೆ ಸೋಸಲೆ ಸಿದ್ದಪ್ಪ ಅವರು ಕಾವ್ಯ ಕೃಷಿ ಮಾಡಿದ್ದಾರೆ. ಎಂದು ಸೋಸಲೆ ಮಂಜುನಾಥ್ ಆವರು ಪ್ರತಿಕ್ರಿಯಿಸಿ ಬರೆದರು. ನನ್ನ ಈ ಲೇಖನದ



ಕಾರಣದಿಂದ ನಮ್ಮ ಹಿರಿಯ ತಲೆಮಾರಿನ ಚೇತನಗಳು ಬೆಳಕಿಗೆ ಬರಲು ಸಾಧ್ಯವಾಗುತ್ತಿದೆಯಲ್ಲಾ ಅಂತ ನಿಜಕ್ಕೂ ನನಗೆ ಹೆಮ್ಮೆ ಎನಿಸಿತು. ಸೋಸಲೆ ಸಿದ್ದಪ್ಪ (೧೮೯೨) ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನ ಸೋಸಲೆಯ ಬಡ ಕುಟುಂಬದಲ್ಲಿ ಜನಿಸಿದರು. ಕಡುಕಷ್ಟದಿಂದಲೇ ಅಕ್ಷರ ಕಲಿತ ಇವರು ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ಬೋರ್ಡಿಂಗ್ ಶಾಲೆಯಲ್ಲಿ ಓದಿದರು. ೧೯೧೫ ರಲ್ಲಿಯೇ ಟಿ.ನರಸೀಪುರ ಸಮೀಪದ ಬನ್ನೂರಿನ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿದ ಇವರು ನಂತರ ಸೋಸಲೆ, ಬಲಮುರಿ, ಮೈಸೂರಿನ ಅಶೋಕಪುರಂ ಮುಂತಾದ ಶಾಲೆಗಳಲ್ಲಿ ಸೇವೆ ಸಲ್ಲಿಸಿದ್ದರು. ೧೯೪೦ ರಲ್ಲಿಯೇ ನಿವೃತ್ತರಾಗುತ್ತಾರೆ. ಅಪಾರಶ್ರದ್ಧೆ ಗಾಢವಾದ ತಿಳುವಳಿಕೆ, ಅಧ್ಯಯನ, ಶುಚಿತ್ವ, ಶಿಸ್ತು, ನೀತಿ ನಿಯಮಗಳಿಂದ ಒಳ್ಳೆಯ ಶಿಕ್ಷಕರಾಗಿ ಹೆಸರಾಗಿದ್ದ ಇವರು; ಐತಿಹಾಸಿಕ-ಸಾಮಾಜಿಕ ಹಿನ್ನೆಲೆಯಲ್ಲಿ ಸುಮಾರು ಹದಿನಾರು ಕೃತಿಗಳನ್ನು ರಚಿಸಿದ್ದಾರೆ. ಇದು ನಿಜಕ್ಕೂ ದಲಿತ ಸಮುದಾಯಕ್ಕೆ ಸಾಂಸ್ಕೃತಿಕ ಘನತೆ ಮತ್ತು ಆತ್ಮವಿಶ್ವಾಸವನ್ನು ತಂದುಕೊಡುವ ಕೆಲಸವೇ ಆಗಿದೆ. ಚಾಂಗದೇವನ ಚರಿತೆ (೧೯೧೭) ಇಂಗ್ಲೆಂಡ್ ಚರಿತ್ರೆ (೧೯೨೨) ಆತ್ಮಸಂಬೋಧೆ (೧೯೨೭) ಆಳುವ ಮಹಾಸ್ವಾಮಿ ಯವರಾದ ನಾಲ್ವಡಿ ಕೃಷ್ಣರಾಜ ಒಡೆಯರ್ (೧೯೨೮) ಗೋವುಗಳ ಗೋಳಾಟ (೧೯೨೬, ಕಾವ್ಯ) ಮತಸುಧಾರಣೆ (೧೯೨೮) ಧರ್ಮಬೋಧೆ (೧೯೩೮) ಜಹಿಲಾರನೆಂಬ ಭಕ್ತನ ಕಥೆ(೧೯೩೯) ಗಿರಿಜಾ ಕಲ್ಯಾಣವೆಂಬ ಹರಿಕಥೆ (೧೯೩೯) ಅವಿವೇಕಿ ರಾಮನಿಗಾಗಿ ರಾವಣನ ಸಂತಾಪ(೧೯೪೦) ಚಂದ್ರಹಾಸ ಬಾಲ್ಯ ಎಂಬ ಹರಿಕಥೆ(೧೯೪೨) ಕಲ್ಯಾಣ ಪುರುಷನ ಸುಗುಣ ಗುಣಗ್ರಂಥ(೧೯೪೯) ಬಡವನ ಭಾಗ್ಯ (೧೯೫೪) ಇವುಗಳಲ್ಲಿ ಕೆಲವು ಕೃತಿಗಳು ಮಾತ್ರ ಸಿಕ್ಕಿವೆ. ಕೆಲವು ಲಭ್ಯವಾಗಿಲ್ಲ. ತುಂಬು ಸುಸಂಸ್ಕೃತ ಮನಸ್ಸಿನ ಕವಿ ಸೋಸಲೆ ಸಿದ್ದಪ್ಪ ಅವರ ಗೋವುಗಳ ಗೋಳಾಟ ಕವನ ಸಂಕಲನದಲ್ಲಿ:

ಸಣ್ಣ ಕುಲದವ ದೊಡ್ಡದ ಕುಲದವ

ನೆನ್ನುವಂತಹ ಭಾವನೆಯ ನೀ

ವಿನ್ನು ನಮದೊಳು ತಂದುಕೊಳ್ಳದೆ ಮನ್ನಿಸುವುದೆನ್ನ

ಸಣ್ಣ ಮಳಲೊಳಗಿಪ್ಪ ವಜ್ರವು

ಪ್ರಭೆಯನ್ನು ತೋರದಿರುವುದೆ

ಸಣ್ಣ ದೊಡ್ಡವನೆಂಬ ಭಾವನೆ ಸಣ್ಣವಗೆ ಮಾತ್ರ

ಎಂಬ ನಿಲುವನ್ನು ತಾಳುತ್ತಾರೆ. ತಣ್ಣನೆಯ ವಿಷಾದವನ್ನುಂಟು ಮಾಡುವ ಈ ಸಾಲುಗಳು ನವೋದಯ ಕಾಲಘಟ್ಟದ ಶ್ರೇಷ್ಠ ಕಾವ್ಯವೆನ್ನುವುದು ತುಂಬ ಮಹತ್ವದ ಸಂಗತಿ ಎನಿಸುತ್ತದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಹೆಮ್ಮನಹಳ್ಳಿಯಲ್ಲಿ ಜನಿಸಿದ ಜಿ.ವೆಂಕಟಯ್ಯ ಅವರು (೧೯೧೬) ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದ ಮನೆತನದಿಂದ ಬಂದವರು. ಬೆಂಗಳೂರಿನ ಕೋಟೆ ಶಾಲೆಯಲ್ಲಿ ಇಂಟರ್‌ಮೀಡಿಯೆಟ್‌ವರೆಗೂ ಓದಿದ್ದರು. ಗೋಪಾಲಸ್ವಾಮಿ ಅಯ್ಯರ್, ಗಾಂಧಿ ಪ್ರಭಾವಕ್ಕೆ ಒಳಗಾಗಿ ದಲಿತ ಜನಾಂಗದ ಅಭಿವೃದ್ಧಿಗೆ ಸಂಕಲ್ಪ ತೊಡುತ್ತಾರೆ. ಮುಖ್ಯವಾಗಿ ಆ ಕಾಲದಲ್ಲಿಯೆ 'ಲಕ್ಷ್ಮೀಸ್ಮಾರಕ ಗ್ರಂಥಮಾಲೆ'



ಎಂಬ ಪ್ರಕಾಶನವನ್ನು ಆರಂಭಿಸುತ್ತಾರೆ. ಆ ಕಾಲದಲ್ಲಿಯೇ ಹಿರಿಯ ದಲಿತ ಸಾಹಿತಿಯೊಬ್ಬರು ಪುಸ್ತಕ ಪ್ರಕಾಶವನ್ನು ತೆರೆದದ್ದು ಗಮನೀಯವಾಗಿದೆ.

ಕಥೆ, ಕಾದಂಬರಿ, ಪ್ರವಾಸಕಥನ ಹಾಗೂ ಜೀವನ ಚರಿತ್ರೆ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಜಿ.ವೆಂಕಟಯ್ಯನವರು ಸುಮಾರು ಹತ್ತಕ್ಕೂ ಹೆಚ್ಚು ಕೃತಿಗಳನ್ನೂ ಬರೆದಿದ್ದರೆ. ಮುರಿದ ಮದುವೆ (೧೯೫೧-ಕಾದಂಬರಿ) ಚೆನ್ನದ ಗಿರಿ ಯಾತ್ರೆ (೧೯೫೨-ಪ್ರವಾಸ ಕಥನ) ಬುದ್ಧದೇವ(೧೯೭೪-ಮಕ್ಕಳಸಾಹಿತ್ಯ) ನೊಂದಜೀವ (೧೯೫೫-ಕಾದಂಬರಿ) ಮಂಗಳಮಾಂಗಲ್ಯ (೧೯೫೨-ಕಥಾಸಂಕಲನ) ಬನದ ಸೆರಗು (೧೯೬೬-ಪ್ರವಾಸಕಥನ) ಚಂದನದ ಕೊರಡು (೧೯೬೫) ಇವುಗಳು ಇವರ ಪ್ರಮುಖ ಕೃತಿಗಳಾಗಿವೆ. ೧೯೪೧ರಲ್ಲಿ ಇವರ ಬುದ್ಧದೇವ ಕೃತಿಗೆ ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆಯ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. ಆ ಕಾಲಕ್ಕೆ ಟಿ.ಎಸ್.ವೆಂಕಣ್ಣಯ್ಯನವರನ್ನು ಬಿಟ್ಟರೆ:

ಜಿ.ವೆಂಕಟಯ್ಯನವರ ಬುದ್ಧದೇವನನ್ನು ಕುರಿತಂತೆ ಸಾಹಿತ್ಯ ಕೃಷಿ ಮಾಡಿರುವುದು ಮಹತ್ವದ ಕೆಲಸವೆನಿಸುತ್ತದೆ. ಇವರ ನೊಂದ ಜೀವ ಕಾದಂಬರಿ ಕುರಿತಂತೆ ಕನ್ನಡ ಸಾಹಿತ್ಯ ಚರಿತ್ರೆಕಾರರಾದ ತ.ಸು, ಶ್ಯಾಮರಾಯ ಅವರು "ನೊಂದ ಜೀವವನ್ನು ಓದಿದ ಮೇಲೆ ನಮ್ಮ ಕಣ್ಣಿಗೆ ಕಟ್ಟಿ ನಿಲ್ಲುವುದು ಇಲ್ಲಿಯ ಪ್ರಣಯ ಜೀವನವಲ್ಲ. ಅಜ್ಞಾನದ ಕುಂಡದಲ್ಲಿ ಅರೆಬೆಂದು ನಿಂತಿರುವ ನೊಂದಜೀವಿ. ಈ ವೆಂಕಟಯ್ಯನವರು ತಮ್ಮ ಕಾದಂಬರಿಯಲ್ಲಿ ಸಾಹಿತ್ಯ ಜಗತ್ತಿಗೆ ಅಜ್ಞಾತರಾದ ಅಥವಾ ಅಲ್ಪಜ್ಞಾತರಾದ ಹರಿಜನರ ನಿತ್ಯಜೀವನದ ನೈಜ ಚಿತ್ರವನ್ನು ಕನ್ನಡಿಸಿದ್ದಾರೆ. ಅನುಭವವೇದ್ಯನಾದ ಸತ್ಯಜೀವವಾಗಿ ರೂಪತಾಳಿದೆ ಇಲ್ಲಿ" ಎಂದು ಅಭಿಪ್ರಾಯಪಟ್ಟಿರುವುದು ಜಿ. ವೆಂಕಟಯ್ಯನವರ ಸೃಜನಶೀಲ ಸಾಹಿತ್ಯದ ಮಹತ್ವವನ್ನು ತಿಳಿಸುತ್ತದೆ. ಇವರ 'ಬನದ ಸೆರಗು' ಎಂಬ ಪ್ರವಾಸ ಕಥನವು ಹೆಸರೇ ಸೂಚಿಸುವಂತೆ ಬಿಳಿಗಿರಿರಂಗನಬೆಟ್ಟ ಸುತ್ತಮುತ್ತಲಿನ ದಟ್ಟ ಅರಣ್ಯದ ಬದುಕನ್ನು ಸೊಗಸಾಗಿ ಕಟ್ಟಿಕೊಡುತ್ತದೆ ಜಿ. ವೆಂಕಟಯ್ಯನವರ ಸಾಹಿತ್ಯದ ೧೯೭೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ.

ಹೈದ್ರಾಬಾದ್ ಕರ್ನಾಟಕದಲ್ಲಿ ನೊಂದವರ, ಶೋಷಿತರ ವಿಮೋಚನೆಗೆ ಕಟಿಬದ್ಧರಾಗಿ ಶ್ರಮಿಸಿರುವ ಬಿ.ಶ್ಯಾಮಸುಂದರ ಅವರು (೧೯೦೮) ಮಹಾರಾಷ್ಟ್ರದ ಔರಂಗಬಾದ್‌ನಲ್ಲಿ ಜನಿಸಿದರು. ಅಲ್ಲಿನ ಕ್ರೈಸ್ತ ಮಿಶನರಿ ಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಇವರು ಹೈದ್ರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಬಿ.ಎ ಮತ್ತು ಕಾನೂನು ಪದವಿಯನ್ನು ಪಡೆದರು. ನಂತರ ಅರ್ಥಶಾಸ್ತ್ರದಲ್ಲಿ ಎಂ.ಎ.ಪದವಿ ಗಳಿಸಿದರು. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಗಳಿಂದ ದಟ್ಟವಾದ ಪ್ರಭಾವಿತರಾಗಿ ಅವರಿಗೆ ನಿಕಟವರ್ತಿಗಳಾಗಿದ್ದ ಅವರು ಬಾಬಾಸಾಹೇಬರು ಸ್ಥಾಪಿಸಿದ್ದ ಶಿಕ್ಷಣ ಸಂಸ್ಥೆಗಳಿಗೆ ಉದಾರವಾಗಿ ಧನಸಹಾಯವನ್ನು ನೀಡುತ್ತಾರೆ. ದಲಿತರ ಜಾಗೃತಿಯನ್ನು ಕರ್ನಾಟಕಕ್ಕೂ ವಿಸ್ತರಿಸಿದ ಅವರು ಗುಲ್ಬರ್ಗಾದಲ್ಲಿ ತಮ್ಮ ವಾಸ್ತವ್ಯವನ್ನು

ಹೂಡುತ್ತಾರೆ. ಹಲವಾರು ದಲಿತರ ಸಮಾವೇಶಗಳನ್ನು ನಡೆಸಿದ ಇವರು ೧೯೫೭ರಲ್ಲಿ ಭಾಲ್ಕಿ ಕ್ಷೇತ್ರದಿಂದ ಮೈಸೂರು ಸರ್ಕಾರದ ವಿಧಾನಸಭೆಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ನಿಜಾಂರ ಸರ್ಕಾರದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದ ಅವರು ಹಲವಾರು ದಲಿತ ಪರವಾದ ಕೆಲಸವನ್ನು ಮಾಡಿ ಹೆಸರಾಗುತ್ತಾರೆ. ಕನ್ನಡ, ಹಿಂದಿ, ಉರ್ದು, ಇಂಗ್ಲೀಷ್, ಫ್ರೆಂಚ್, ಪರ್ಷಿಯನ್ ಭಾಷೆಗಳನ್ನು ಬಲ್ಲವರಾಗಿದ್ದ ಶ್ಯಾಮಸುಂದರ ಅವರು ಮುಖ್ಯವಾಗಿ ಇಂಗ್ಲೀಷ್ ಭಾಷೆಯಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. Mool bharathi(ಹಿಂದಿ- ಇಂಗ್ಲೀಷ್) They Burn(ಇಂಗ್ಲೀಷ್ ) Bhim Sena(ಇಂಗ್ಲೀಷ್) Bhima Sena kya Chatti Hai(ಹಿಂದಿ) ಇವರ ಪ್ರಮುಖ ಕೃತಿಗಳಾಗಿವೆ. ಒಳ್ಳೆಯ ಸಂಶೋಧಕರಾಗಿದ್ದ ಶ್ಯಾಮಸುಂದರ ಅವರು ಈಗ ಯಾರನ್ನು ಅಸ್ಪೃಶ್ಯರು ಎಂದು ಕರೆಯಲಾಗುತ್ತಿದೆಯೊ ಅವರೇ ಈ ದೇಶದ ಮೂಲ ನಿವಾಸಿಗಳು ಎಂಬುದನ್ನು ಅವರು ಮೂಲಭಾರತಿ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ. They Burn ಕೃತಿಯು ಕನ್ನಡಕ್ಕೆ 'ಬೆಂದವರು' ಎಂಬ ಹೆಸರಿನಲ್ಲಿ ಅನುವಾದವಾಗಿದೆ. ಶತಶತಮಾನಗಳಿಂದ ಶೋಷಣೆಗೊಳಗಾಗಿರುವ ದಲಿತರು ಶೋಷಿತರನ್ನು ಸುಟ್ಟು ಹಾಕಬಲ್ಲರು ಎಂಬ ನಿಲುವನ್ನು ಈ ಕೃತಿ ಪ್ರತಿಪಾದಿಸುತ್ತದೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಧೀಮಂತ ಶಕ್ತಿಯ ಪ್ರಭಾವವನ್ನು ನಾಡಿನುದ್ದಕ್ಕೂ ತಲುಪಿಸಬೇಕೆಂಬ ಮಹಾದಾಸೆಯಿಂದ ದಲಿತರ ಸಮಾವೇಶಗಳನ್ನು ನಡೆಸುತ್ತಾರೆ. 'ದಲಿತರ ಕೈಯಲ್ಲಿ ಬಡಿಗೆ, ಮುಖದ ಮೇಲೆ ಮೀಸೆ, ಕಾಲಲ್ಲಿ ಚಪ್ಪಲಿ' ಹಾಕಿಕೊಳ್ಳಬೇಕೆಂದು ಕರೆಕೊಟ್ಟಿರುವುದು, ದಲಿತರು ಅಗತ್ಯವಾಗಿ ಸ್ವಾಭಿಮಾನಿಗಳಾಗಬೇಕು ಎಂಬ ಅವರ ನಿಲುವು ಆರೋಗ್ಯಕರದ್ದಾಗಿದೆ. 'ಭೀಮಸೇನ' ಎಂಬ ಸಂಘಟನೆಯನ್ನು ಕಟ್ಟಿ ಹಲವಾರು ಜನಪದ ಹೋರಾಟಗಳನ್ನು ರೂಪಿಸುತ್ತಾರೆ. ಕ್ರಾಂತಿಕಾರಿ ವ್ಯಕ್ತಿತ್ವದ ಬಿ. ಬಸವಲಿಂಗಪ್ಪನವರು ಬಿ.ಶ್ಯಾಮಸುಂದರ ಅವರ ಹೋರಾಟಗಳನ್ನು ಅಪಾರವಾಗಿ ಮೆಚ್ಚಿಕೊಂಡು ಅವರ ಆಪ್ತರಾಗಿದ್ದರು ಎಂಬುದು ಮಹತ್ವದ ಸಂಗತಿ ಎನಿಸುತ್ತದೆ.

ನಾನು ಹಿರಿಯ ತಲೆಮಾರಿನ ದಲಿತ ಸಾಹಿತಿಗಳನ್ನು ಕುರಿತು ಕೆಲಸ ಮಾಡುವ ಸಂದರ್ಭದಲ್ಲಿ ಬದುಕಿನ ಬಗ್ಗೆ ತಮ್ಮದೆ ಆದ ವಿಶಿಷ್ಟ ಒಳನೋಟಗಳಿಂದ ಪ್ರಖ್ಯಾತರಾಗಿರುವ ಚಿತ್ರಕಲಾವಿದರಾದ ಕೆ.ಟಿ. ಶಿವಪ್ರಸಾದ್ ಅವರು ಮೇಷ್ಟ್ರ ಎನ್. ನರಸಿಂಹಯ್ಯ ಅಂತ ಇದಾರೆ ಕಿಣಿ ನಾನು ಹೈಸ್ಕೂಲ್ನಲ್ಲಿ ಓದುತ್ತ ಇದ್ದಾಗ ಅವರ ಪುರುಷೋತ್ತಮನ ಸಾಹಸಗಳನ್ನು ಓದಿದ್ದೆ. ಅವು ದಲಿತರು ಅಂತ ಹೇಳಿದರು. ತಡಕುತ್ತ ಹೋದರೆ ಅದು ನಿಜವೆ ಆಗಿತ್ತು. ಕನ್ನಡದಲ್ಲಿ ಹೆಚ್ಚು ಕಾದಂಬರಿಗಳನ್ನು ಅನಕೃ ಅವರು ಬರೆದಿದ್ದಾರೆ ಎಂಬ ಸಾಮಾನ್ಯ ನಿಲುವು ಇದೆ. ಆದರೆ ಕನ್ನಡದಲ್ಲಿ ನಿಜಕ್ಕೂ ಹೆಚ್ಚು ಕಾದಂಬರಿಯನ್ನು ಬರೆದು ದಾಖಲೆ ನಿರ್ಮಿಸಿರುವವರು ಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯನವರು ೧೯೨೫ರಲ್ಲಿ ಬೆಂಗಳೂರಿನ ಸುಲ್ತಾನಪೇಟೆಯಲ್ಲಿ ಜನಿಸಿದ ಇವರು ಓದಿದ್ದು ನಾಲ್ಕನೆ ತರಗತಿ ಮಾತ್ರ ನಂತರ ತಾಯಿಯ ಸಂಬಂಧದ ಊರಾದ ಚಿಕ್ಕಮಗಳೂರಿನಲ್ಲಿ ಕೆಲ ಕಾಲ ಇದ್ದು, ಅಲ್ಲಿ ಖಾಸಗಿ ಬಸ್ಸಿನ ಡ್ರೈವರ್ ಆಗಿದ್ದರು.

ನಂತರ ಮತ್ತೆ ಬೆಂಗಳೂರು ಸೇರಿದ ಇವರು ಡ್ರೈವರ್ ಆಗಿ ಕೆಲಸ ಮಾಡುತ್ತಾರೆ. ಓದುವ ತೀವ್ರ ಆಸಕ್ತಿ ಇದ್ದ ಅವರು ಬಳೆಪೇಟೆಯಲ್ಲಿ ಕೆಲವು ವರ್ಷಗಳು ಸರ್ಕುಲೇಟಿಂಗ್ ಲೈಬ್ರರಿಯೊಂದನ್ನು ತೆರೆಯುತ್ತಾರೆ. ಇದರ ಜೊತೆಗೆ ಹೊಟ್ಟೆಪಾಡಿಗಾಗಿ ಟೈಲರಿಂಗ್ ಕೆಲಸವನ್ನು ಮಾಡುತ್ತಿದ್ದ ಇವರು; ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತಾರೆ. ಸುಮಾರು ನಾನೂರಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿರುವ ಇವರು ನಿಜವಾಗಿಯೂ ಬರೆದಂತೆ ಬದುಕಿದ್ದಾರೆ. ಅವರು ಸೃಷ್ಟಿಸಿರುವ ಪತ್ತೇದಾರಿ ಕಾದಂಬರಿಗಳ ಜೀವಂತ ನಾಯಕನಂತೆ ಇನ್ನು ಬದುಕಿರುವುದು ಸಂತಸದ ಸಂಗತಿ ಆಗಿದೆ. ಎಲ್ಲ ಕುತೂಹಲಗಳ ನಡುವೆ ಭೇಟಿ ಮಾಡಲು ಹೋದವರಿಗೆ ಸುಲಭವಾಗಿ ಬಗ್ಗದ ಇವರು ಇನ್ನು ಹೆಚ್ಚು ಕ್ರಿಯಾಶೀಲರಾಗಿದ್ದಾರೆ. ನನ್ನನ್ನು ದಲಿತ ಅಂತ ಯಾಕೆ ಗುರುತಿಸುತ್ತೀರಿ ಎಂದು ಹಲವು ಪ್ರಶ್ನೆಗಳ ಸುರಿಮಳೆಯನ್ನೆ ಸುರಿಯುತ್ತಾರೆ. ಜೀವನದ ಸಂಕಷ್ಟಗಳ ನಡುವೆ ಬರೆದೇ ಬದುಕಬೇಕಿದ್ದ ನರಸಿಂಹಯ್ಯನವರು ದಿನಕ್ಕೊಂದು ರಾತ್ರಿಗೊಂದು ಕಾದಂಬರಿಗಳನ್ನು ಬರೆದ ದಾಖಲೆಗಳು ಇವೆ. ದುರಂತ ಎಂದರೆ ನಿಜಶಕ್ತಿಗಳನ್ನು ಸಹಜ ಪ್ರತಿಭೆಗಳನ್ನು ಕಾಲಕಸದಂತೆ ಕಾಣುವ ಕ್ರೂರ ಜಾತಿ ವ್ಯವಸ್ಥೆ ಈ ದೇಶದಲ್ಲಿರುವುದರಿಂದ ಎಲ್ಲಿ ನನ್ನ ಜಾತಿ ಗೊತ್ತಾಗಿ ಹೊಟ್ಟೆ ಮೇಲೆ ಕಲ್ಲು ಬೀಳುತ್ ಎಂಬ ಅಂಜಿಕೆಯಿಂದ ಹೀಗೆ ಯೋಚಿಸಿರಬಹುದು ಎನಿಸುತ್ತದೆ. ಇಂಡಿಯಾ ಹೊರತುಪಡಿಸಿ ಪಶ್ಚಿಮದ ಯಾವುದೇ ದೇಶದಲ್ಲಿ ಈ ಬಗೆಯ ಸಾಧನೆಯನ್ನು ಮಾಡಿದ್ದಾರೆ ಅವರಿಗೆ ಸಿಗಬಹುದಾಗಿದ್ದ ಮಾನ್ಯತೆಯೆ ಬೇರೆ ಇರುತ್ತಿತ್ತೆನಿಸುತ್ತದೆ. ಅದೇನೆ ಇರಲಿ. ಈ ಎಲ್ಲ ನೋವು ಸಂಕಷ್ಟಗಳ ನಡುವೆಯೇ ಜೀವಂತಗಾಥೆಯಂತೆ ಪತ್ತೇದಾರಿ ಕಾದಂಬರಿಗಳನ್ನು ಸೃಷ್ಟಿಸಿರುವ ನರಸಿಂಹಯ್ಯನವರಿಗೆ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದು ಸಂತಸದ ಸಂಗತಿಯೇ ಆಗಿದೆ.

ಬಿಜಾಪೂರ ಜಿಲ್ಲೆಯ ಕುಮಾರ ಕಕ್ಕಯ್ಯಪೋಳ ಅವರು ಸುಮಾರು ಹದಿನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಸುಮಾರು ಒಂದು ಸಾವಿರ ಇನ್ನೂರು ವಚನಗಳನ್ನು ರಚಿಸಿರುವ ಇವರು ವಚನ ಸಾಹಿತ್ಯದಿಂದ ದಟ್ಟವಾಗಿ ಪ್ರಭಾವಿತರಾಗಿದ್ದಾರೆ. ಸಮಾಜದ ಮೌಢ್ಯತೆ, ಅಜ್ಞಾನವನ್ನು ಹೋಗಲಾಡಿಸುವ ಹಿನ್ನೆಲೆಯಲ್ಲಿ ಧರ್ಮಕ್ರಾಂತಿ, ಬಸವ ಧರ್ಮದರ್ಶನ, ಚಾತುರ್ವರ್ಣ ಧರ್ಮದರ್ಶನ ಇವರ ಪ್ರಮುಖ ಕೃತಿಗಳಾಗಿವೆ. ಇದು ನನ್ನ ಸಮಾಜ ಎಂಬ ನಾಟಕದಲ್ಲಿ ದೇವದಾಸಿಯಂಥ ಕ್ರೂರ ಪದ್ಧತಿಯನ್ನು ಟೀಕಿಸುತ್ತಾರೆ. ಗೀಜಗನಗೂಡು, ನಿಯತಿಶಾಸನ ಎಂಬ ಕಾದಂಬರಿಗಳನ್ನು ರಚಿಸಿರುವ ಇವರು ತಮ್ಮ ಒಟ್ಟು ಸಾಹಿತ್ಯಕ ಕೃತಿಗಳಲ್ಲಿ ಆರೋಗ್ಯಕರ ನಿಲುವುಗಳನ್ನು ಪ್ರತಿಪಾದಿಸುವ ಲೇಖಕರಾಗಿದ್ದಾರೆ.

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಳ್ಳಿಗುಡಿ ಗ್ರಾಮದವರಾದ ಎಂ.ದೇವೇಂದ್ರನಾಯಕ(೧೯೨೭) ಅವರು ವೃತ್ತಿಯಿಂದ ವಕೀಲರು. ಕಾವ್ಯ, ಕಥೆ ಕಾದಂಬರಿಗಳನ್ನು ರಚಿಸಿರುವ ಇವರು ಪ್ರಮುಖವಾಗಿ ಶ್ರೀ ಅಭಿನವ ಮಹಾಭಾರತ

ಕಾವ್ಯ ಮಂಜರಿ ಎಂಬ ಕಾವ್ಯವನ್ನು ಸುಮಾರು ಇಪ್ಪತ್ತೈದು ಸಂಪುಟಗಳಲ್ಲಿ ಬರೆದಿದ್ದಾರೆ. ಇನ್ನು ಪ್ರಕಟವಾಗಿಲ್ಲ. ಆದಿಕೇಶವ, ಬೆಳ್ಳಿಮೊಡ ಎಂಬ ಕವನಸಂಕಲನಗಳನ್ನು, ಕರುನಾಡ ಸಿರಿಗೆ ಎಂಬ ಗೀತರೂಪಕವನ್ನು ಬರೆದಿರುವ ಇವರು ಈಗಲೂ ಕ್ರಿಯಾಶೀಲರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಹಿರಿಯ ಲೇಖರಾಗಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಲೇಖಕರುಗಳಲ್ಲಿ ಕೆಲವರು ಹತ್ತೊಂಭತ್ತನೆಯ ಶತಮಾನದಲ್ಲಿ ಜನಿಸಿದ್ದಾರೆ. ಕೆಲವರು ಇಪ್ಪತ್ತ ಶತಮಾನದ ಆದಿಯಲ್ಲಿ ಜನಿಸಿದವರಾಗಿದ್ದಾರೆ. ಇವರಲ್ಲಿ ಮರಳಿನ ಮೇಲೆ ಅಕ್ಷರ ಕಲಿತವರಾಗಿದ್ದಾರೆ. ಒಟ್ಟಾರೆ ಕ್ರೂರ ಜಾತಿ ವ್ಯವಸ್ಥೆಯ ತಿರಸ್ಕಾರ, ನಿರಂತರ ಅಪಮಾನಗಳ ನಡುವೆಯೂ ಕೂಡ ತಮ್ಮ ಸ್ವಯಂ ಪ್ರೇರಣೆಯಿಂದ ಅಕ್ಷರ ಕಲಿತು; ಜಾಗೃತರಾಗಿ ಮೌಢ್ಯದ ವಿರುದ್ಧ ಹೋರಾಡುತ್ತಲೇ ತಮ್ಮ ಸಮುದಾಯದ ಅರಿವಿಗೆ ಬರಹವನ್ನು ಮಾಧ್ಯಮವನ್ನಾಗಿಸಿ ಕೊಂಡು ಸಾಹಿತ್ಯ ಕೃಷಿ ಮಾಡಿರುವುದು ಗಮನಾರ್ಹ ಸಂಗತಿಯೇ ಆಗಿದೆ. ವ್ಯವಸ್ಥಿತವಾದ ಪೂರ್ವಗ್ರಹ ತೀರ್ಮಾನದಿಂದಲೇ ದಲಿತರೆಂದರೆ ಅಸಹಾಯಕರು, ಅಕ್ಷರ ಕಲಿಯಲು ಸಾಧ್ಯವಾಗದವರು, ಸಾಮಾಜಿಕವಾಗಿ ಎಲ್ಲ ರೀತಿಯಿಂದಲೂ ಕೀಳು ಎಂಬಂತೆ ಇರುವವರು, ಅನುಕಂಪಕ್ಕೆ ಒಳಗಾಗಬೇಕಾದವರು ಎಂಬ ಮನೋಭಾವವನ್ನೆ ಬದಲು ಮಾಡಿಕೊಳ್ಳುವಂತೆ ಇಪ್ಪತ್ತನೆಯ ಶತಮಾನದ ಆದಿಯಲ್ಲಿಯೇ ಈ ನಮ್ಮ ಹಿರಿಯ ತಲೆಮಾರಿನ ಲೇಖಕರು ಸಂಕಷ್ಟಗಳ ನಡುವೆಯೇ ತಮ್ಮ ಶಕ್ತಿ-ಸಾಮರ್ಥ್ಯಗಳನ್ನು ತೆರೆದಿಟ್ಟಿದ್ದಾರೆ. ಯಾವ ಚೋಮ, ಕರಿಸಿದ್ದ, ಗರುಡಗಂಬದ ದಾಸಯ್ಯ ಮುಂತಾದವರು ನವೋದಯದ ಹಿರಿಯ ಸಾಹಿತಿಗಳಿಗೆ ವಸ್ತುವಾಗಿದ್ದಾರೋ? ಪಾತ್ರವಾಗಿದ್ದಾರೋ? ಅನುಕಂಪಕ್ಕೆ ಗುರಿಯಾಗಿದ್ದಾರೋ? ಅವರುಗಳೇ ಬಾಯಿ ಬಿಟ್ಟರೆ ಹೇಗೆ? ಎಂಬ ಪ್ರಶ್ನೆಗಳಿದ್ದರೆ ಅದಕ್ಕೆ ಉತ್ತರಗಳೆಂಬಂತೆ ಅದೆ ಜೋಮ ಕರಿಸಿದ್ದಾದಿಗಳೇ ಬರೆದಿದ್ದಾರೆ. ತಮ್ಮ ಸ್ಥಿತಿಗಳಿಗನುಗುಣವಾಗಿಯೇ ಜಾಗೃತಿಯನ್ನು ಮೂಡಿಸಲು ಹೋರಾಟ ನಡೆಸಿದ್ದಾರೆ. ಆದರೆ ಅಂತಹ ಶಕ್ತಿಗಳನ್ನು ಬೆಳಕಿಗೆ ತರುವ ಮಾತ್ರ ಆಗದಿರುವುದು ದೊಡ್ಡ ದುರಂತವೆ ಆಗಿದೆ.

ಭರಣಯ್ಯನವರ ಕುಟುಂಬಕ್ಕೆ ೨೦೦ ಎಕರೆಗಳಷ್ಟು ಭೂಮಿ ಇದ್ದು ಆ ಭಾಗದ ಪರಂಪರಾಗತವಾದ ಶ್ರೀಮಂತ ಕುಟುಂಬವಾಗಿತ್ತು. ದುಗ್ಗಟ್ಟಿ ನಂಜಯ್ಯ ಅವರಿಗೆ ೧೨೦ ಎಕರೆಗಳ ಭೂಮಿಯಿತ್ತು. ೨೫ ಬಾವಿಗಳು ೧೨೦ ರಾಸುಗಳಿದ್ದು ದಿನನಿತ್ಯ ನೂರು ಮಂದಿ ಅವರ ಜಮೀನಿನಲ್ಲಿ ದುಡಿಯುತ್ತಿದ್ದರಂತೆ. ದಶಕಗಳ ಹಿಂದೆಯೇ ಆತ ರೇಷ್ಮೆ ನೂಲು ತೆಗೆವ ೨೦ಘಟಕಗಳ ಒಡೆಯನಾಗಿದ್ದು ಮೈಸೂರು ಜಿಲ್ಲೆಯ ಆದಿಕರ್ನಾಟಕ ಸಮುದಾಯದ ಬಹುದೊಡ್ಡ ಉದ್ಯಮಿಯಾಗಿದ್ದ. (ಧರೆಗೆ ದೊಡ್ಡವರು, ಸುಭಾಷ್, ಭರಣಿ, ಪುಟ೧೫೭) "ಕೊಡುಗೈ ದಾನಿಯೆಂದೇ ಹೆಸರಾಗಿದ್ದ ಮತ್ತೊಬ್ಬ ಉದ್ಯಮಿ ಕೃಷಿಕ ರಾಟೆ ಸಿದ್ಧಯ್ಯನವರು ಸಹ ನೂರಾರು ಎಕರೆ ಜಮೀನಿನ ಒಡೆಯರಾಗಿದ್ದವರೆ. ಇವರು ಸಹ ರೇಷ್ಮೆ ನೂಲು ತಯಾರಕರೆ. ಆ ಕಾಲಕ್ಕಾಗಲೆ

ಲಾರಿ, ಟ್ರಾಕ್ಟರ್ ಹಾಗೂ ಕಾರುಗಳನ್ನು ಹೊಂದಿದ್ದ ರಾಟೆ ಸಿದ್ಧಯ್ಯನವರು ಕುದುರೆ ಸಾರೋಟನ್ನು ಕೂಡ ಹೊಂದಿದ್ದರೆಂಬ ಅಂಶ ನಿಜಕ್ಕೂ ಅಚ್ಚರಿ ಹುಟ್ಟಿಸುವಂತಹ ವಿಚಾರವೇ ಸೈ" ( ಅದೇ ಪುಟ ೧೫೭) ಎಂದು ಡಾ. ಸುಭಾಷ್ ಭರಣಿಯವರು ತಮ್ಮ ಸಂಶೋಧನೆಯಿಂದ ಹೊರತೆಗೆದಿದ್ದಾರೆ. ಜತೆಗೆ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಸಾಹುಕಾರ್ ಪುಟ್ಟಮಾದಯ್ಯನವರು ಸೇಂದಿ ಕಂಟ್ರಾಕ್ಟರ್ ಆಗಿದ್ದುದು, ಆದಿ ಕರ್ನಾಟಕ ಜನಾಂಗದವರಾದ ಶಿವಯೋಗಿ ಮಹಾಸ್ವಾಮಿಗಳು ಮೊದಲು ಜಗದ್ಗುರು ಆಗಿದ್ದರು ಎಂಬ ಹಲವಾರು ಸಾಂಸ್ಕೃತಿಕ ಅನನ್ಯತೆಗಳನ್ನು ಹೊರಗೆಡವಿರುವುದು ನಿಜಕ್ಕೂ ಮಹತ್ವದ ಸಂಗತಿಯೇ ಆಗಿದೆ. ಇದನ್ನೆ ಆಧಾರವಾಗಿಟ್ಟುಕ್ಕೊಂಡು ಎಳೆಎಳೆಯಾಗಿ ಬಿಚ್ಚುತ್ತ ಸಂಶೋಧನೆಗೆ ತೊಡಗಿದರೆ ಪ್ರತಿ ಜಿಲ್ಲೆಗಳಲ್ಲೂ ಕೂಡ ನಿಜಮಣ್ಣಿನ ಮಕ್ಕಳ ಹೊಲೆಮಾದಿಗರು ಹೊಲದ ಒಡೆಯರು ಇವರಾಗುತ್ತಾರೆ. ಸಂಸ್ಕೃತಿಯ ಆದಿಗರು ಅವರಾಗುತ್ತಾರೆ. ಈ ಬಗೆಯ ಸಂಶೋಧನೆಗಳು ಅತ್ಯಗತ್ಯವಾಗಿ ಆಗಬೇಕಾಗಿದೆ. ಒಂದು ಸ್ಪಷ್ಟವಾಗಿ ತಿಳಿಯಬೇಕು: ಯಾವ ಜನಾಂಗಕ್ಕೆ ಸಾಂಸ್ಕೃತಿಕ ಬೇರುಗಳಿರುತ್ತವೋ ಆ ಜನಾಂಗಕ್ಕೆ ನಾಶವೆ ಇಲ್ಲ. ಹಾಗಾಗಿ ನಿಜಸಂಸ್ಕೃತಿಯ ಜನಪದ ವಾರಸುದಾರರಾದ ಹೊಲೆಮಾದಿಗರು ಅಸಾಧಾರಣವಾದ ಸಾಂಸ್ಕೃತಿಕ ತಳಪಾಯ ಹೊಂದಿರುವವರಾಗಿದ್ದಾರೆ. ಅವರು ಗರಿಕೆ ಇದ್ದಂಗೆ, ನಿಜವಾದ ಶಕ್ತಿ- ಸಾಮರ್ಥ್ಯ ಇರುವ ಕಾರಣದಿಂದಲೆ ಶತಶತಮಾನಗಳಿಂದಲೂ ಹಲವು ಬಗೆಯ ಹಿಂಸೆ-ಅಪಮಾನ-ಶೋಷಣೆಗೆ ಒಳಪಟ್ಟರೂ ಕೂಡ ತಮ್ಮ ಸಂಸ್ಕೃತಿಯನ್ನು ಬಿಡಲು ಅವರ ಮನಸ್ಸು ಒಪ್ಪುವುದೆ ಇಲ್ಲ. ಎಪ್ಪತ್ತು-ಎಂಭತ್ತರ ದಶಕದಲ್ಲಿ ದಲಿತ ಚಳವಳಿಯನ್ನು ಕಟ್ಟಿದ ಅದರೊಟ್ಟಿಗಿದ್ದ ನಾವೆಲ್ಲ; ನಮ್ಮ ಅಪಮಾನಕ್ಕೆ ಕಾರಣವಾದ, ಹಲವಾರು ತಮಟೆ-ಮೋರಿ-ಸುತಿಗಳನ್ನು ಒಡೆದು ಹಾಕಿದ್ದೇವೆ. ಆದರೆ ಈಗ ನಾವು ಚಳವಳಿ- ಮೆರವಣಿಗೆ ಮಾಡಬೇಕಾದರೆ ತಮಟೆ ಬಡಿಯುವ ಮುಖೇನವೆ ನಾವು ಚಾಲನೆ ನೀಡುತ್ತೇವೆ. ಇದು ಪಕ್ವವಾದ ಸಾಂಸ್ಕೃತಿಕ ಮನಸ್ಸುಗಳ ವಿವೇಕ ಎಂಬುದು ಮಹತ್ವದ ಸಂಗತಿ ಎನಿಸುತ್ತದೆ.

ಬುದ್ಧ, ಅಂಬೇಡ್ಕರ್, ಮಂಟೇಸ್ವಾಮಿ, ಮಲೆಮಹದೇಶ್ವರ ಅವರೆಲ್ಲರೂ ನಮ್ಮ ಪೂರ್ವಿಕ ಶಕ್ತಿ ಪ್ರತೀಕಗಳಂತಿದ್ದಾರೆ. ಈ ಶಕ್ತಿಯ ನಿರಂತರತೆ ಒಂದಲ್ಲ ಒಂದು ಎಳೆಯಲ್ಲಿ ಇದ್ದೇ ಇರುತ್ತಾದ್ದರಿಂದ ಹೊಸಗನ್ನಡದ ಅರುಣೋದಯದ ಕಾಲದಲ್ಲಿಯೇ ನಮ್ಮ ತಲೆಮಾರಿನ ಹಿರಿಯ ಸಾಹಿತಿಗಳು ಎಲ್ಲ ಎಡರುತೊಡರುಗಳ ನಡುವೆಯೂ ಸಾಹಿತ್ಯಕ ಸಾಧನೆಯ ಮಾಡಿದ್ದಾರೆ. ಮುಖ್ಯವಾಗಿ ಎಲ್ಲ ಅನುಕೂಲಗಳು ಇದ್ದು ಯಾವುದೇ ಸಾಧನೆಯನ್ನು ಮಾಡುವುದು. ಅದನ್ನೆ ವ್ಯವಸ್ಥಿತವಾಗಿ ಅವರದೇ ಆದ ಗುಂಪಿನ ಮೂಲಕ ಹೊಗಳಿಸಿಕೊಂಡು ಕೃತಕ ಹೆಸರು ಮಾಡಿಕೊಳ್ಳುವುದು ದೊಡ್ಡದಲ್ಲ. ಒಟ್ಟು ವ್ಯವಸ್ಥೆಯ ತಿರಸ್ಕಾರದ ನಡುವೆಯೂ ತನ್ನ ಸಹಜ ಶಕ್ತಿಯಿಂದ ತನ್ನೊಳಗಿದ್ದ ಸುಪ್ತ ಪ್ರತಿಭೆಯನ್ನು ಹೊರಹಾಕುವುದು, ನಂತರ ಆ ಬಗ್ಗೆ ಇಡೀ ವ್ಯವಸ್ಥೆ ಬೇಕಂತಲೆ

ಗುರುತಿಸಲಾರದ ನಡುವೆಯೂ; ನಿಸರ್ಗ ಸಹಜವಾಗಿ ಅರಳುವುದಿದೆಯಲ್ಲಾ ಅದೇ ನಿಜವಾದ ಶಕ್ತಿ, ಪ್ರತಿಭೆ. ಅಂತಹ ಪ್ರತಿಭೆಗಳೇ ನಮ್ಮ ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು. ಇವರುಗಳನ್ನು ಬೆಳಕಿಗೆ ತರುವ ಕೆಲಸ ಬಹಳ ಹಿಂದೆಯೇ ಆಗಬೇಕಾಗಿದ್ದ ಕೆಲಸ ಎಂಬ ವಿಷಾದವು ನನಗೆ ಇದ್ದೇ ಇದೆ. ತುಂಬಾ ತಡವಾಗಿಯಾದರೂ ನಮ್ಮ ಹಿರಿಯ ಚೇತನಗಳನ್ನು ಹುಡುಕಿ ತಡಕಿ ಒಂದು ಕಡೆ ಸೇರ್ಪಡಿಸಿ, ಚರ್ಚೆಗೊಳಪಡಿಸಿ ಬೆಳಕಿಗೆ ತರುವ ಕೆಲಸ ಆಗುತ್ತಿದೆಯಲ್ಲಾ! ಇದು ನನಗೆ ತುಂಬಾ ಸಂತಸದ ಕೆಲಸವೆ ಆಗಿದೆ. ಆದರೆ ಇದು ಒಬ್ಬರಿಂದ ಆಗುವ ಕೆಲಸ ಅಲ್ಲ. ಇದೊಂದು ಮಹತ್ವದ ನಮ್ಮೆಲ್ಲರ ಸಾಂಸ್ಕೃತಿಕ ಜವಾಬ್ದಾರಿಯ ಕೆಲಸವೇ ಆಗಿದೆ. ಅಂತಹ ಮಹತ್ವದ ಕೆಲಸವನ್ನು ಮಾಡಲು ನೆರವಾದ ಎಲ್ಲರಿಗೂ ನನ್ನ ನೆನಕೆಗಳು.

*** ******

## ೯. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಾಮಾಜಿಕ ಚಿಂತನೆ

**- ಡಾ. ಜಯದೇವಿ ಗಾಯಕವಾಡ**

ಭಾರತೀಯ ಸಮಾಜದ ಬಗ್ಗೆ ಅತಿಯಾಗಿ ಚಿಂತಿಸಿದವರು ಬುದ್ಧನ ನಂತರ ಡಾ.ಬಾಬಾಸಾಹೇಬ ಅಂಬೇಡ್ಕರ್ ಪ್ರಮುಖರಾಗುತ್ತಾರೆ. ಅವರು ಸಮಾಜದ ಬಗ್ಗೆ ಕಂಡುಕೊಂಡ ಅತ್ಯಂತ ಮುಖ್ಯವಾದ ವಿಚಾರವೆಂದರೆ ತಮ್ಮ ಚಿಂತನೆಯಲ್ಲಿದ್ದ 'ಆದರ್ಶ ಸಮಾಜದ ರಚನೆ', ಹಾಗೆ ನೋಡಿದರೆ ಅವರ ಸಾಮಾಜಿಕ ಬದುಕಿನ ಧೋರಣೆಗೆ ವೈದಿಕರು ಕಟ್ಟಿಕೊಂಡಿದ್ದ ಅಸಮಾನತೆಯ ಪರಿವಿಧಿಯನ್ನು ಬಿಸಾಡುವುದಾಗಿತ್ತು. ತೀವ್ರ ಚಿಂತಿಸಿ, ನಿರಂತರ ಅಧ್ಯಯನ, ಗಂಭೀರ ಚರ್ಚೆಗಳಿಂದ ಮಾನವನನ್ನು ಮೊದಲು ಮಾನವನನ್ನಾಗಿ ಪ್ರೀತಿಸುವ ಗುಣಶೀಲ ಚರಿತ್ರೆಗಳನ್ನು ಗೌರವಿಸಬೇಕೆಂದು ಅಂಬೇಡ್ಕ ಅವರ ಮೂಲ ಸಾಮಾಜಿಕ ಚಿಂತನೆಯಾಗಿತ್ತು.

ಅವೈಜ್ಞಾನಿಕ ಸಾಮಾಜಿಕ ವ್ಯವಸ್ಥೆಯೊಂದಿಗೆ ರಾಜಿಯಾಗದ ಪರಿವರ್ತನೆಯ ಮಹಾಪುರುಷ ಅಂಬೇಡ್ಕರ್. ಇವರ ಮೂಲ ಕಾಳಜಿ ಮನುಷ್ಯ ಜೀವನದ ಜೀವಪರ ನಿಲುವುಗಳು ಹಾಸುಹೊಕ್ಕಾಗಿ ಸಮಾಜದಲ್ಲಿ ಚಾಲ್ತಿಯಲ್ಲಿ ತರುವುದು. ಹೀಗಾಗಿ ಅಂದಿನ ವ್ಯವಸ್ಥೆಯ ಎಲ್ಲಾ ದುರ್ಗುಣ ಪ್ರಶ್ನಿಸುವುದವರ ಮೂಲಕ ಹೀನ ಆಚರಣೆಗಳನ್ನು ಬಯಲಿಗೆಳೆದರು. ಸಂಪ್ರದಾಯ ಆಚರಣೆಗಳನ್ನು ಖಂಡಿಸಿದರು. ತಮ್ಮ ಬದುಕಿನುದ್ದಕ್ಕೂ ಸಂಘರ್ಷಮಯವಾದ ಹೋರಾಟದಲ್ಲಿ ಸಮಾನತೆ, ಸ್ವಾತಂತ್ರ್ಯ, ಭಾತೃತ್ವವನ್ನು ತರುವ ಮೂಲಕ ಸಮ ಸಮಾಜವನ್ನು ಕಟ್ಟಬಯಸಿದ ಮಹಾಪುರುಷ. ಅವರ ಸಾಮಾಜಿಕ ಚಿಂತನೆಯಲ್ಲಿ ಜಾತಿ ಪದ್ಧತಿ, ಮೂಢ ನಂಬಿಕೆಗಳು, ದೇವರುಗಳು, ಸಂಪ್ರದಾಯ ಆಚಾರಗಳು, ನಂಬಿಕೆಗಳನ್ನು ಧಿಕ್ಕರಿತ್ತಾ ನಡೆದದ್ದನ್ನು ಕಾಣುತ್ತೇವೆ.

ಅಂಬೇಡ್ಕರ್ ಜಾತ್ಯತೀತ ಸಮಾಜ ಸ್ಥಾಪನೆಯ ಗುರಿಯನ್ನು ಹೊಂದಿದ್ದರು. ಅಂಬೇಡ್ಕರ್ ಹುಟ್ಟಿದ್ದು ಈ ದೇಶದ ಅತ್ಯಂತ ಕೆಳಜಾತಿಯಾದ 'ಮಹಾ' ಎಂಬ ಜಾತಿಯಲ್ಲಿ, ಈ ಜಾತಿಯಲ್ಲಿ ಹುಟ್ಟಿದ್ದೇ ಅಪರಾಧವೆಂಬುವಂತೆ ಅಂಬೇಡ್ಕರ್ ಅನೇಕ ಅವಮಾನ, ಅಪಮಾನಗಳನ್ನು ಜೀವನದಲ್ಲಿ ಅನುಭವಿಸಿದರು. ಕುಡಿಯಲು ನೀರು ಕೊಡಲಿಲ್ಲ. ಕೂಡಲು ಗಾಡಿ ಒದಗಿಸಲಿಲ್ಲ. ವಾಸಿಸಲು ಮನೆ ಕೊಡಲಿಲ್ಲ. ಅವರು ವಿದೇಶಕ್ಕೆ ಹೋಗಿ ವ್ಯಾಸಂಗ ಮಾಡಿ ಬಂದರೂ ಅವರು ಮುಟ್ಟಿದ ಫೈಲುಗಳನ್ನು ಒಬ್ಬ ಪ್ಯೂವನ್ ಆದವನು ಮುಟ್ಟಿರಲಿಲ್ಲ. ಹೀಗಾಗಿ ಅಂಬೇಡ್ಕರ್‌ರವರು ಮೇಲೆ ಆದ ಗಾಯಗಳಿಗೆ ಲೆಕ್ಕವಿಲ್ಲ. ಈ ಗಾಯಗಳು ಕೇವಲ ಅಂದು ಅಂಬೇಡ್ಕರ್‌ರವರ ಮೇಲಷ್ಟೇ

ಆಗಲಿಲ್ಲ. ಇಡೀ ದಲಿತ ಸಮಾಜದ ಮೇಲೆ ಆದ ಗಾಯಗಳಾಗಿದ್ದವು. ಹೀಗಾಗಿ ಅಂಬೇಡ್ಕರ್ ಈ ಜಾತಿ ವ್ಯವಸ್ಥೆ, ವರ್ಣ ವ್ಯವಸ್ಥೆಯ ಬಗ್ಗೆ ತಲೆ ಕೆಡಿಸಿಕೊಂಡಷ್ಟು ಈ ದೇಶದ ಮತ್ತೊಬ್ಬ ನಾಯಕರು ತಲೆಕೆಡಿಸಿಕೊಳ್ಳಲಿಲ್ಲ. ವರ್ಣ ವ್ಯವಸ್ಥೆ 'ಥ'ಎನಿಸುವಷ್ಟು ಅಂಬೇಡ್ಕರ್ ಅವರಿಗೆ ಅಸಹ್ಯ ಹುಟ್ಟಿಸಿತ್ತು. ಈ ಮೂಲಕ ಅಂಬೇಡ್ಕರ್ ಯಾವ ತಪ್ಪು ಮಾಡದ ಜನಗಳನ್ನು ಪ್ರಾಣಿ ಪಕ್ಷಿಗಳಿಗಿಂತಲೂ ಕಡೆಯಾಗಿ ಬದುಕು ನಡೆಸಿದ ಮನುಷ್ಯ ಶೋಷಿಸುವುದನ್ನು ಕಂಡು ಸಹಜವಾಗಿ ರೋಸಿ ಹೋದರು. ಅನಂತರ ದಲಿತರು ಶೋಣೆಗೊಳಗಾಗಿದ್ದು ಹೇಗೆ ಎಂಬುದನ್ನು ಪತ್ತೆ ಹಚ್ಚಲು ಅವರು ಅಧ್ಯಯನದ ಮೊರೆ ಹೋದರು. ವೇದ, ಶಾಸ್ತ್ರ, ಪುರಾಣ ಸೇರಿದಂತೆ ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ ನಿಜವಾದ ಸತ್ಯವನ್ನು ಶೋಧ ಮಾಡಿ ಅನಾವರಣಗೊಳಿಸುತ್ತಾರೆ.

ಭಾರತೀಯ ಸಮಾಜದುದ್ದಕ್ಕೂ ಧರ್ಮ ಜನಾಂಗದಲ್ಲಿ ಬಿರುಕು ಹಬ್ಬಿದೆ. ಹಿಂದೂ ಧರ್ಮ ವಿವಿಧ ಜಾತಿಗಳ ಒಂದು ಸಂತೆ, ಜಾತಿ ಒಂದು ವಿಷದಂತೆ. ಜಾತೀಯತೆ ಜನತೆಯ ಭಾವನೆಗಳನ್ನು ಕೊಂದು ಹಾಕುತ್ತದೆ. ಜನರ ಉದಾರ ಭಾವನೆ ಹಾಳು ಮಾಡುತ್ತದೆ ಎಂದು, ಜಾತಿ ಭಾರತಕ್ಕೆ ಅಂಟಿದ ರೋಗ ಎಂದು ಭಾವಿಸುತ್ತಾರೆ. "ವೈದಿಕ ಸಮಾಜ ಅಸಮಾನತೆಯ ತವರು. ಅದು ಏಣಿ ಇಲ್ಲದ ಪ್ರವೇಶ ದ್ವಾರ. ಅನೇಕ ಮಾಹಿತಿಗಳುಳ್ಳ ಗೋಪುರದ ಒಂದು ಮಹಡಿಯಲ್ಲಿ ಹುಟ್ಟಿದ ಜನ ಅಲ್ಲಿಯೇ ಸತ್ತು ಕೊಳೆಯಬೇಕು ಅಸ್ಪೃಶ್ಯರು ಶತಮಾನಗಳಿಂದ ಬಡತನ ಅವಮಾನ ಅನುಭವಿಸುತ್ತಿದ್ದಾರೆ." ಎಂದು ಹೇಳಿ ಜಾತಿಪದ್ಧತಿ ನಾಶವಾಗದೆ ಸಮಾನ ಸಮಾಜದ ನಿರ್ಮಾಣವಾಗದು ಎನ್ನುತ್ತಾರೆ. ನಮ್ಮ ನಡುವಿನ ಸಾಮಾಜಿಕ ವ್ಯವಸ್ಥೆಯೇ ದೋಷಪೂರಿತವಾಗಿದ್ದು ಅದು ಕೆಲವೇ ಜನರ ಹಿತಕ್ಕೋಸ್ಕರ ಬಹುಪಾಲು ಜನರನ್ನು ಸಂಕಷ್ಟಕ್ಕೆ ಗುರಿ ಮಾಡಿದೆ. ಜಾತಿ ವ್ಯವಸ್ಥೆಯೆಂಬುದು ಕೇವಲ ಅಸ್ಪಶ್ಯರನ್ನು ಮಾತ್ರ ಗುಲಾಮರನ್ನಾಗಿಸಿಲ್ಲ. ಇಡೀ ಭಾರತೀಯರ ಮನಸ್ಸನ್ನು ಗುಲಾಮರನ್ನಾಗಿಸಿವೆ ಎಂದು ಅಂಬೇಡ್ಕರ್ ಅಭಿಪ್ರಾಯ ಪಡುತ್ತಾರೆ. ಯಾವುದೇ ದೇಶ ಅಭಿವ್ಯಕ್ತಿ ಹೊಂದಲು ಅಲ್ಲಿ ಆಂತರಿಕ ಸ್ವಾತಂತ್ರ್ಯವಿರಬೇಕು. ಅಸಮಾನತೆಯಿಂದ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎನ್ನುವ ಅವರ ನುಡಿಗಳಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಬದಲು ಮಾಡದೇ ಯಾವ ಅಭಿವೃದ್ಧಿಯನ್ನು ಸಾಧಿಸಲಾಗುವುದಿಲ್ಲವೆಂಬುದನ್ನು ಕಾಣಬಹುದು. ಅಸಮಾನತೆಯ ಹಿಂದೂ ಧರ್ಮದ ಆತ್ಮ ಹಿಂದೂ ನೈತಿಕತೆ ಎಂಬುದು ಕೇವಲ ಬರೀ ಮಾತಿನಲ್ಲಿ ಅದು ನೀತಿ ಮತ್ತು ಮಾನವೀಯತೆಯಿಂದ ದೂರವೇ ಉಳಿದಿದೆ. ಇದು ಕಳಂಕಕಾರಿಯಾದುದು ಎಂದು ನೇರವಾಗಿ ಅಂಬೇಡ್ಕರ್ ಹಿಂದೂ ಧರ್ಮದ ಅಸಮಾನತೆಯನ್ನು ಟೀಕಿಸುತ್ತಾರೆ. ಗುಲಾಮಗಿರಿ ಮತ್ತು ಅಸ್ಪಶ್ಯತೆ ಮಾನವ ಸಂಪರ್ಕಕ್ಕೆ ಒಡ್ಡಿದ ಪ್ರತಿಬಂಧಗಳು. ಇವು ಸಾರ್ವಜನಿಕ ಜೀವನದಲ್ಲಿ ತಾರತಮ್ಯಗಳನ್ನು ಉಂಟು ಮಾಡುವುದಷ್ಟೆ ಅಲ್ಲ ವಾಸ್ತವವಾಗಿ ಸ್ವತಂತ್ರ, ಸಮಾನತೆ ಸಹೋದರತೆಯನ್ನು ನಿರಾಕರಿಸುತ್ತದೆ. "ಯಾವ ನಾಗರಿಕ ಹಕ್ಕುಗಳ ಆದರದಿಂದ ಮಾನವೀಯತೆ

ಬದುಕುತ್ತದೆಯೋ ಅಂತಹ ತೀರ ಸಾಮಾನ್ಯ ನಾಗರಿಕ ಹಕ್ಕುಗಳನ್ನು ಸಹ ಇವು ನಿರಾಕರಿಸುತ್ತವೆ." ಎಂದು ಅಂಬೇಡ್ಕರ್ ಮೊದಲನೆ ದುಂಡು ಮೇಜಿನ ಪರಿಷತ್ತಿನ ಭಾಷಣದಲ್ಲಿ ಅಸ್ಪೃಶ್ಯತೆ ಗುಲಾಮಗಿರಿ ಮಾನವನ ಕಲ್ಯಾಣಕ್ಕೆ ಮಾರಕವಾದ ಎರಡು ಅಸ್ತ್ರ ಎಂದು ಭಾವಿಸಿ ಅಂಬೇಡ್ಕರ್ ಇವೆರಡನ್ನೂ ತಮ್ಮ ವಿಚಾರ ಸರಣಿಯಿಂದ ಅಲ್ಲಗಳೆಯುತ್ತಾರೆ.

ಜಾತಿ ಎಂಬುದು ಮೂಲಭೂತವಾಗಿ ಒಂದು ಬಲಿಷ್ಠವಾದ ಗ್ರಹಿಕೆಯಾಗಿದೆ ಎಂದ ಅಂಬೇಡ್ಕರ್‌ರು ಹಿಂದೂಗಳ ಮೆದುಳನ್ನು ಹೃದಯವನು ಹೊಕ್ಕಿದೆ. ಹಿಂದು ಧರ್ಮದ ಶಾಸ್ತ್ರಗಳು ಧರ್ಮ ಗ್ರಂಥಗಳಲ್ಲಿ ಇಟ್ಟಿರುವ ನಂಬಿಕೆಗಳು ಮೊದಲು ಧ್ವಂಸಗೊಳಿಸಬೇಕು. ಅವುಗಳಿಗೆ ಅಂಟಿಸಲಾಗಿರುವ ನಂಬಿಕೆ ಪಾವಿತ್ರ್ಯವನ್ನು ಅಳಿಸಿ ಹಾಕಬೇಕು. ವೇದಗಳು, ಶಾಸ್ತ್ರಗಳು ತಿರಸ್ಕೃತವಾಗಬೇಕು ಎನ್ನುತ್ತಾರೆ. ಜಾತಿ ತೊಲಗಿದಾಗ ಮಾತ್ರ ಪ್ರೀತಿ ಹುಟ್ಟಲು ಸಾಧ್ಯ. ಪ್ರೀತಿ ಇದ್ದಾಗ ಮಾತ್ರ ಒಗ್ಗಟ್ಟು ಮೂಡಲು ಸಾಧ್ಯ. ಒಗ್ಗಟ್ಟು ಇದ್ದಾಗ ಮಾತ್ರ ಸಮಾಜ ಮತ್ತು ದೇಶದ ರಕ್ಷಣೆ ಸಾಧ್ಯ. ಆದ್ದರಿಂದ ಜಾತಿ ತೊಲಗದಿದ್ದರೆ ಸ್ವರಾಜ್ಯ ಕೂಡ ಸುವ್ಯವಸ್ಥೆಯನ್ನು ತರಲಾರದು ಎಂಬುವುದು ಅಂಬೇಡ್ಕರ್ ಪ್ರಮುಖ ಚಿಂತನೆಯಾಗಿತ್ತು. ಜಾತಿಯ ಕಾರಣದಿಂದಾಗಿ ಇಲ್ಲಿಯ ಪ್ರತಿಭೆಗಳು ನಾಶವಾಗುತ್ತಿವೆ. ಪ್ರತಿಭೆ ಪ್ರಕಟಗೊಂಡಾಗಲೂ ಮನ್ನಣೆ ನೀಡಲಾಗುತ್ತಿಲ್ಲ. ಬಲ ಇದ್ದರೂ ಮಿಲಿಟರಿ ಪೊಲೀಸ್ ಮುಂತಾದ ಸೇವೆಗಳಲ್ಲಿ ಅಸ್ಪೃಶ್ಯರಿಗೆ ಅವಕಾಶವಿರಲಿಲ್ಲ. ಅಸ್ಪೃಶ್ಯತೆ ಮತ್ತು ಜಾತಿಯತೆಗಳು ಇಡೀ ಸಮಾಜವನ್ನು ಹಾಗೂ ಅಸ್ಪಶ್ಯರನ್ನು ಹೊಸಕಿ ಹಾಕಿದೆ ಎಂದು ಅಂಬೇಡ್ಕರ್ ಗುಡುಗಿದರು. ಹೀಗಾಗಿ ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆ ಈ ದೇಶಕ್ಕೆ ಬಹು ದೊಡ್ಡ ಶಾಪವಾಗಿದೆ ಎಂದು ಅಂಬೇಡ್ಕರ್ ತಮ್ಮ ಬದುಕಿನುದ್ದಕ್ಕೂ ಇವುಗಳ ವಿರುದ್ಧ ಸಂಘರ್ಷಕ್ಕೆ ಇಳಿಯುತ್ತಾರೆ.

ಅಂಬೇಡ್ಕರ್‌ರವರು ದಲಿತ ವಿಮೋಚನೆಯೊಂದೇ ಅವರ ಪರಮಗುರಿ ಎಂದು ಭಾವಿಸಿದರು. ಈ ದೇಶದಲ್ಲಿ ಒಬ್ಬ ವ್ಯಕ್ತಿಯ ಗುಣ ವಿದ್ಯೆ ಹಾಗೂ ಚರಿತ್ರೆಗೆ ಎಳ್ಳಷ್ಟು ಬೆಲೆಯಿಲ್ಲ. ಗೌರವವಿಲ್ಲ, ಕೇವಲ ಜಾತಿಯಿಂದ ಪ್ರತಿಯೊಬ್ಬನ ಸ್ಥಾನಮಾನಗಳನ್ನು ನಿರ್ಧರಿಸುತ್ತಾರೆ ಎಂದು ಅಂಬೇಡ್ಕರ್ ಹೇಳಿ ಹುಟ್ಟಿನಿಂದ ಮನುಷ್ಯನ ಗುಣ ಶೀಲ ಯೋಗ್ಯತೆ ಅಳೆಯುವುದನ್ನೂ ತಿರಸ್ಕರಿಸಿ ನಡೆ ನುಡಿಯಿಂದ ಗೌರವ ಕೊಡಬೇಕು. ಎಂಬ ಪ್ರಗತಿಪರ ವಾದವನ್ನು ಮಂಡಿಸುತ್ತಾರೆ. ವಿಶ್ವದ ಸಮಸ್ಯೆಗಳಾದ ಹಸಿವು ಬಡತನದ ಜೊತೆಗೆ ಅಸ್ಪೃಶ್ಯತೆಯು ವಿಶ್ವದ ಪ್ರಮುಖ ಸಮಸ್ಯೆ ಎನ್ನುತ್ತಾರೆ. ಈ ಜಾತಿ ವ್ಯವಸ್ಥೆಯ ಕ್ರೂರತೆ, ದಲಿತರ ಸಮಸ್ಯೆಗಳನ್ನು ಕುರಿತು ಅಂಬೇಡ್ಕರ್ ಅಂದು ಮೂಕನಾಯಕ, ಸುಮತಾ, ಬಹಿಷ್ಕೃತ ಭಾರತದಂಥ ಪತ್ರಿಕೆಗಳನ್ನು ಮರಾಠಿ ಭಾಷೆಯಲ್ಲಿ ಪ್ರಕಟಿಸಿ ದಲಿತರನ್ನು ಎಚ್ಚರಿಸಿದ್ದು ಅಪೂರ್ವ ದಾಖಲೆಗಳಾಗಿವೆ. ಅಂಬೇಡ್ಕರ್ ದಲಿತ ಆನ್ನೋದ್ಧಾರದ ಚಳವಳಿಯನ್ನು ಕೈಗೊಂಡು ಸಂಪೂರ್ಣ ಮಾನವ ಸಮಾಜದಲ್ಲಿ ಮಾನವೀಯತೆಗೆ ಹುಡುಕಾಟ ನಡೆಸಿದ್ದು ಇತಿಹಾಸದಲ್ಲಿಯೇ ಅಪೂರ್ವ ಘಟನೆಯಾಗಿದೆ.

ಜಾತ್ಯಾಂಧತೆ ಕೇವಲ ಮಾನಸಿಕ ಜಾಡ್ಯವಾಗಿಲ್ಲ. ಅದೊಂದು ಲಾಭದಾಯಕ ಕುತಂತ್ರವಾಗಿದೆ. ಜಾತಿಪದ್ಧತಿಯ ಉಳಿವಿನಲ್ಲಿ ವೈದಿಕರ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಲಾಭ ಅಡಗಿದೆ. ವಿದ್ಯೆ ಸಂಪತ್ತು ರಾಜಕೀಯ ರಕ್ಷಣೆ ಧಾರ್ಮಿಕ ಧುರೀಣತ್ವ ಮೊದಲಾದ ವಿಶೇಷ ಅಧಿಕಾರಿಗಳು ವರ್ಣ ವ್ಯವಸ್ಥೆಯಲ್ಲಿ ಸುರಕ್ಷಿತವಾಗಿರುತ್ತಾರೆ ಎಂದು ಹೇಳಿ ಜಾತಿ ವ್ಯವಸ್ಥೆಯ ಉಗಮದ ಸವಲತ್ತುಗಳು ಯಾರಿಗೆ ಏತಕ್ಕಾಗಿ ಎಂಬ ಸ್ಪಷ್ಟ ವಿಚಾರಗಳನ್ನು ತಿಳಿಸಿದರು. ಭಾರತದ ನಾಶವನ್ನು ಮುಸಲ್ಮಾನ ಧರ್ಮ ಮಾಡಿಲ್ಲ. ಇಂಗ್ಲೆಂಡ್ ಕೂಡ ಮಾಡಿಲ್ಲ. ನಮ್ಮ ಶತೃವಿನ ವಿನಾಶ ನಮ್ಮೊಳಗೆ ಇದೆ. ಪುರೋಹಿತಶಾಹಿ ಮತ್ತು ಜಾತಿ ಭೇಧಗಳು ನಮ್ಮನ್ನು ನಾಶ ಮಾಡಿವೆ ಎಂಬ ನಗ್ನ ಸತ್ಯವನ್ನು ಅಂಬೇಡ್ಕರ್ ಪ್ರತಿಪಾದಿಸುತ್ತಾರೆ. ಜಾತಿ ಪದ್ಧತಿಯ ತಾಯಿ ಬೇರಾಗಿರುವ ವೈದಿಕ ಧರ್ಮವನ್ನು ನಾಶ ಮಾಡದ ಹೊರತು ಜಾತಿವಿನಾಶ ಸಾಧ್ಯವಿಲ್ಲ ಎನ್ನುತ್ತಾರೆ. ಹಿಂದು ಧರ್ಮದ ಸಾಮಾಜಿಕ ನ್ಯಾಯದ ಕುರಿತು ಮಾತನಾಡುವುದೆಂದರೆ ತನ್ನ ವಿರೋಧ ತಾನೇ ಮಾಡಿದಂತೆ, ಹಿಂದೂ ಇದೊಂದು ಧರ್ಮ ಇಲ್ಲವೇ ಇಲ್ಲ. ಹಿಂದು ಮತವೇ ನಿನ್ನ ಹೆಸರೇ ಅಸಮಾನತೆ. ಹಿಂದು ಮತದಲ್ಲಿ ಜನಸಾಮಾನ್ಯರಿಗೆ ಆಸರೆ ಇಲ್ಲ. ಸಂತ್ರಸ್ಥರಿಗೆ ನೆರವಿಲ್ಲ. ನತದೃಷ್ಟರಿಗೆ ಸ್ವಾತಂತ್ರ್ಯವಿಲ್ಲ. ಅದೊಂದು ಧರ್ಮವೇ ಅಲ್ಲ. ಯಾಕೆಂದರೆ ಅದರ ಸ್ವಭಾವದಲ್ಲಿ ಮಾನವೀಯತೆ ಇಲ್ಲ.

ಇದರ ವಿನಾಶವಾಗದ ಹೊರತುಜಾತಿ ವಿನಾಶ ಸಾಧ್ಯವಿಲ್ಲ ಎಂದು ವೈದಿಕ ಧರ್ಮವನ್ನು ತಿರಸ್ಕರಿಸುತ್ತಾರೆ. ಮಾನವೀಯ ಮೌಲ್ಯಗಳಿಗೆ ಪ್ರಮುಖ ಸ್ಥಾನ ನೀಡಿದ ಅಂಬೇಡ್ಕರ್ ಈ ದೇಶದ ಆಸ್ತಿಯಾಗಿದ್ದಾರೆ. ಇವತ್ತು ದಲಿತರು ಸಂಪೂರ್ಣವಾಗಿ ಸ್ವಾಭಿಮಾನ ಸ್ವಾವಲಂಬನೆಯಿಂದ ಬದುಕು ನಡೆಸುತ್ತಾರೆ. ಅಂದರೆ ಅದಕ್ಕೆ ಕಾರಣಕರ್ತರೆಂದರೆ ಅಂಬೇಡ್ಕರ್‌ರು. ಹಿಂದೂ ಧರ್ಮಕ್ಕೆ ಒಂದು ಹೊಸ ತಿರುವನ್ನು ಕೊಟ್ಟ ವ್ಯಕ್ತಿ ಅಂಬೇಡ್ಕರ್. ತಾವು ಪಡೆದುಕೊಂಡಿದ್ದ ಶೈಕ್ಷಣಿಕ ಅರ್ಹತೆಗಳಿಂದ ಆರಂಭದಲ್ಲಿ ಕೆಲವು ಹುದ್ದೆಗಳಲ್ಲಿ ಅಂಬೇಡ್ಕರ್ ದುಡಿದರೂ ನಂತರ ಸಂಪೂರ್ಣವಾಗಿ ಸಾಮಾಜಿಕ ಹೋರಾಟಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು. 'ನನಗೊಂದು ಮಾತೃಭೂಮಿಯೇ ಇಲ್ಲ' ಎಂದು ನೊಂದು ಗಾಂಧೀಜಿಗೆ ಅಂಬೇಡ್ಕರ್ ಹೇಳಿದರು. 'ಶತಮಾನಗಳಿಂದ ನಮ್ಮನ್ನು ಕೀಳಾಗಿ ಕಂಡ ಈ ನಾಡನ್ನು, ಈ ಧರ್ಮವನ್ನು ನನ್ನ ನಾಡೆಂದು, ನನ್ನ ಧರ್ಮವೆಂದು ಹೇಗೆ ಕರೆಯಲಿ? ಹೇಗೆ ಭಾವಿಸಲಿ ಎಂದು ಅಂಬೇಡ್ಕರ್ ಪ್ರಶ್ನಿಸುತ್ತಾರೆ. ಅಂದು ಅಂಬೇಡ್ಕರ್ ಆಡಿದ ಮಾತುಗಳಾಗಿರಲಿಲ್ಲ. ಬದಲಾಗಿ ಶತಮಾನಗಳ ನೊಂದ ಜೀವಿಗಳ ಆಕ್ರೋಶ, ಸಿಟ್ಟು, ಸೆಡವು ಅವರ ಮಾತುಗಳಲ್ಲಿ ವ್ಯಕ್ತವಾಗಿತ್ತು. ಸ್ವಾತಂತ್ರ್ಯ ಚಳವಳಿ ತುಂಬಾ ಬಿರುಸಾಗಿ ನಡೆಯುತ್ತಿದ್ದರೂ ಅಂಬೇಡ್ಕರ್ ಆ ಕಡೆ ಮುಖ ಮಾಡದೇ ಮಾನವೀಯತೆಯ ಹೋರಾಟದ ಕಡೆ ಮುಖ ಮಾಡಿ ಗಾಂಧೀಜಿಯವರನ್ನು ಎದುರು ಹಾಕಿಕೊಂಡಿದ್ದರು.

ಸ್ವಾಂತಂತ್ರ್ಯವೆನ್ನುವುದು ಹಕ್ಕು ಎಂದು ಪ್ರತಿಪಾದಿತವಾಗುವುದಾದರೆ ಅದು ದೇಶದ ಎಲ್ಲಾ ಜನರಿಗೂ ಮುಟ್ಟಬೇಕು ಎನ್ನುವ ಹಂಬಲ ಅಂಬೇಡ್ಕರ್ ಅವರದ್ದಾಗಿತ್ತು.

ಕಾಂಗ್ರೆಸ್ಸಿನ ಜೊತೆ ಭಿನ್ನವಾಗಿಯೇ ಅವರು ಗುರುತಿಸಿಕೊಂಡರು. ಜಾತಿ ಪದ್ಧತಿಯಂತಹ ಹೀನ ವ್ಯವಸ್ಥೆಯಲ್ಲಿ ಅಸ್ಪಶ್ಯರು ನೀರು ಇಲ್ಲದೇ ಕೊಳಕು ನೀರು ಕುಡಿದು ಬದುಕುತ್ತಿದ್ದರು. ಅಂಬೇಡ್ಕರ್ ಈ ದಿಸೆಯಲ್ಲಿ ದಲಿತರನ್ನು ಜಾಗೃತಗೊಳಿಸಲು ಆಧುನಿಕ ಮಾರ್ಗದಲ್ಲಿ ಹೋರಾಟ ನಡೆಸಿದರು. “ಕೆರೆಯ ನೀರನ್ನು ಕುಡಿಯದೆ ಇದ್ದುದ್ದರಿಂದ ಸಾಯಲಿಲ್ಲ. ನಾವೀಗ ಕೆರೆಗೆ ಹೋಗಬೇಕಾದ್ದದ್ದು ನೀರಿಗಾಗಿಯಲ್ಲ ನಾವು ಮನುಷ್ಯರು ಎನ್ನುವುದನ್ನು ಸಮಾಜಕ್ಕೆ ತೋರಿಸಲಿಕ್ಕೆ” ಧರ್ಮ ಮನುಷ್ಯನಿಗಾಗಿಯೇ ಹೊರತು ಧರ್ಮಕ್ಕಾಗಿ ಮನುಷ್ಯನಲ್ಲ ಎಂದು ಒತ್ತಿ ಹೇಳಿದರು. ಮನುಷ್ಯ ಮನುಷ್ಯರನ್ನು ಮನುಷ್ಯನಂತೆ ಕಾಣದ ರೀತಿಯನ್ನು ಕಂಡು ಅಂಬೇಡ್ಕರ್‌ರರು ಕಿಡಿಕಿಡಿಯಾದರು. ನಾಸಿಕದಲ್ಲಿರುವ ಕಾಳರಾಮ ದೇವಸ್ಥಾನ, ಅಮರಾವತಿಯ ಅಂಬಾದೇವಿ ಗುಡಿಯ ಪ್ರವೇಶ, ಇವೆಲ್ಲವೂ ಅಂಬೇಡ್ಕರ್ ಸಮಾನತೆಗಾಗಿ ನಡೆಸಿದ ಹೋರಾಟಗಳಾಗಿದ್ದು, ವೈದಿಕ ಮನಸ್ಸುಗಳನ್ನು ಸಾಂಪ್ರದಾಯಿಕ ಮೌಲ್ಯಗಳ ಜಿಡ್ಡಿನಿಂದ ಹೊರತರುವ ಯತ್ನಗಳಾಗಿದ್ದವು. ಆದರೆ ಮನುವಿನ ಕಾನೂನು ಕಟ್ಟಳೆಯನ್ನು ಸಹಿಸದ ಅಂಬೇಡ್ಕರ್ ಕೊನೆಗೆ ಮನು ಧರ್ಮಸಂಸ್ಕೃತಿಯನ್ನು ಸುಟ್ಟು ಹಾಕುವುದರ ಮೂಲಕ ಅಸಮಾನತೆಯನ್ನು ತಿರಸ್ಕರಿಸುತ್ತಾರೆ. ಕೆಳ ವರ್ಗದವರಿಗೆ ಸ್ವಾಭಿಮಾನದ ಸ್ವಾವಲಂಬನೆಯ ಬದುಕು ನಡೆಸಲು ಕರೆ ನೀಡುತ್ತಾರೆ. ತಮ್ಮ ಉದ್ದಾರವನ್ನು ತಾವೇ ಮಾಡಿಸಿಕೊಳ್ಳಬೇಕು. ವಿದ್ಯಾಭ್ಯಾಸ ಪಡೆದು ಶುಚಿ ಜೀವನರೂಪಿಸಿಕೊಳ್ಳಬೇಕು. ಇನ್ನೊಬ್ಬರು ನೀಡಿದ ಹಳಸಲು ಅನ್ನಕ್ಕೆ ಕೈಯೊಡ್ಡಬಾರದು. ಶಿಕ್ಷಣ, ಸಂಘಟನೆ, ಹೋರಾಟಗಳು, ದಲಿತರ ಉಸಿರಾಗಬೇಕು ಎಂದು ದಲಿತರಿಗೆ ಹಿತೋಪದೇಶಗಳನ್ನು ಹೇಳುತ್ತಾರೆ. ದಲಿತರಲ್ಲಿ ಸ್ವಾಭಿಮಾನದ ಕಿಡಿಯನ್ನು ಹೊತ್ತಿಸುತ್ತಾರೆ.

ಅಂಬೇಡ್ಕರ್ ಸಾಮಾಜಿಕ ಚಳವಳಿಗೆ ಧುಮುಕಿದ ನಂತರ ಭಾರತದಲ್ಲಿ ಜಾತಿ ವ್ಯವಸ್ಥೆಯಿಂದ ಹಾನಿಗೊಳಗಾದ ದಲಿತರಿಗೆ ರಾಜಕೀಯ ಸಾಮಾಜಿಕ ಹಕ್ಕುಗಳನ್ನು ಕೊಡಿಸುವಂತೆ ಬ್ರಿಟಿಷರಿಗೆ ಮನವಿ ಮಾಡಿದಾಗ ಕೇಂದ್ರ ಮತ್ತು ಪ್ರಾಂತೀಯ ಪ್ರತಿನಿಧಿ ಮಂಡಳಿಗಳಿಗೆ ಪ್ರಥಮ ಬಾರಿಗೆ ಶೋಷಿತ ವರ್ಗದವರನ್ನು ನಾಮಕರಣ ಮಾಡುವ ಕಾನೂನು ಜಾರಿಗೆ ಬರುತ್ತದೆ. ಆದರೆ ಗಾಂಧೀಜಿಯು ದಲಿತರಿಗೆ ದಕ್ಕದಂತೆ ಮಾಡುತ್ತಾರೆ. ಸಾಮಾಜಿಕ ಕ್ರಾಂತಿಯಲ್ಲಿ ಅಂಬೇಡ್ಕರ್ ದಲಿತರಿಗೆ ಎರಡು ಮತ ನೀಡುವ ಹಕ್ಕನ್ನು ಜಾರಿಗೆ ತರಲು ಪ್ರಯತ್ನಿಸಿದರು. ಇದರಲ್ಲೂ ಗಾಂಧೀಜಿಯವರು ದಲಿತರ ಹಕ್ಕನ್ನು ಕಸಿದುಕೊಳ್ಳುವಂತೆ ಮಾಡಿದರು. ಆಗ ಅಂಬೇಡ್ಕ ಮೀಸಲಾತಿ ಒಪ್ಪಂದಕ್ಕೆ ಸಹಿ ಹಾಕಿ ದಲಿತರ ಶ್ರೇಯೋಭಿವೃದ್ಧಿಗೆ ದುಡಿದರು. ಅಂಬೇಡ್ಕರ್ ತಮ್ಮನ್ನು ತಾವು ವರ್ಣವ್ಯವಸ್ಥೆ ಜಾತಿ ವಿನಾಶಕ್ಕೆ ಎಷ್ಟೊಂದು ತೊಡಗಿಸಿಕೊಂಡರು ಎಂದರೆ ದೇಶಕ್ಕಿಂತ ಜನರ ಬದುಕು ಮುಖ್ಯ ಎಂದರು. ಮನುಷ್ಯರಾಗಿ ಮನುಷ್ಯನಂತೆ ಬಾಳುವ ಸ್ವಾತಂತ್ರ್ಯದ ಬೇಡಿಕೆ ಎಂದಿಗೂ ನ್ಯಾಯಸಮ್ಮತವಾದದ್ದು ಎಂದು ಹೇಳಿ ತಮ್ಮ ಕೊನೆ ಉಸಿರು ಇರುವವರೆಗೂ ಸಾಮಾಜಿಕ ನ್ಯಾಯಕ್ಕಾಗಿ ದುಡಿದರು.

ಅಂಬೇಡ್ಕರ್ ಸಂವಿಧಾನ ಕರಡುಸಮಿತಿಯ ಅಧ್ಯಕ್ಷರಾಗಿ ಸಂವಿಧಾನವನ್ನು ಸಂಪೂರ್ಣವಾಗಿ ರಚನೆ ಮಾಡಿದರು. ದಲಿತರಿಗೆ ಸಂವಿಧಾನ ಬದ್ಧವಾದ ಅನೇಕ ಹಕ್ಕುಗಳು ಸವಲತ್ತುಗಳನ್ನು ಸಂವಿಧಾನ ಬದ್ಧವಾಗಿ ನೀಡಿದರು. ಭಾರತವೊಂದು ಜಾತ್ಯಾತೀತ ರಾಷ್ಟ್ರವೆಂದು ಕರೆದು ಕಾನೂನಿನ ಮುಂದೆ ಎಲ್ಲರೂ ಸಮಾನರು. ಅಸ್ಪೃಶ್ಯತೆ ಆಚರಣೆ, ಕಾನೂನು ವಿರೋಧವಾದದ್ದೇ ಎಂಬ ಮಹತ್ವದ ಅಂಶಗಳನ್ನು ಸೇರಿಸಿ ಮಾನವ ಹಕ್ಕುಗಳನ್ನು ಸರ್ವರಿಗೂ ಒದಗಿಸಿಕೊಟ್ಟಿದ್ದು ಅಂಬೇಡ್ಕರ್ ಜೀವ ಪರತೆಗೆ ಸಾಕ್ಷಿಯಾಗಿದೆ. ಸ್ವತಃ ತಮ್ಮ ಜೀವನದಲ್ಲಿ ಬ್ರಾಹ್ಮಣ ಕನ್ಯೆಯನ್ನು ಮದುವೆಯಾಗಿ ಅಂತರಜಾತಿ ವಿವಾಹಗಳಿಗೆ ಪ್ರೋತ್ಸಾಹಿಸಿದರು. ರಕ್ತ ಸಂಬಂಧಗಳಿಂದ ಜಾತಿ ಪದ್ಧತಿ ನಾಶವಾಗುತ್ತದೆ ಎಂದು ಬಲವಾಗಿ ನಂಬಿದ್ದರು. ಹಿಂದು ಧರ್ಮದಲ್ಲಿ ಸಮಾನತೆಗೆ ಅವಕಾಶವೇ ಇಲ್ಲ ಎಂದು ಮನದಟ್ಟಾದಾಗ ಅಂಬೇಡ್ಕರ್ ಕೊನೆಗೆ "ನಾನು ಹಿಂದುವಾಗಿ ಹುಟ್ಟಿದೆ ಹಿಂದುವಾಗಿ ಸಾಯಲಾರೆ" ಎಂದು ಹಿಂದು ಧರ್ಮವನ್ನು ತ್ಯಜಿಸಿ ಬುದ್ಧನ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಮಾನವೀಯ ಮೌಲ್ಯಗಳಿಗೆ ಮಾರುಹೋಗಿ ಬುದ್ಧನಿಗೆ ಶರಣಾದರು. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ವಿದ್ವತ್ತಿನ ಮಹಾ ಪುರುಷರಾದರು. ಅಂಬೇಡ್ಕರ್ ಅವರ ಸಾಮಾಜಿಕ ಹೋರಾಟ ಸಾಮಾಜಿಕ ನೋವಿನದಾಗಿತ್ತು. ಅಂಬೇಡ್ಕರ್‌ರಿಗೆ ಯಜಮಾನ ಸಂಸ್ಕೃತಿ ಬಂಡವಾಳಶಾಹಿ ನಿರ್ಮಿಸಿದ ವ್ಯವಸ್ಥೆಯನ್ನು ಸರಿಪಡಿಸುವುದನ್ನು ಸವಾಲಾಗಿ ಸ್ವೀಕರಿಸಿದರು. ಅದಕ್ಕಾಗಿ ಸಾಮಾಜಿಕ ಪ್ರಜ್ಞೆ ಸಾಮಾಜಿಕ ಹೋರಾಟಗಳ ಜೊತೆ ಧಾರ್ಮಿಕ ಪಕ್ಷಗಳ ಮೂಲಕ ಆರ್ಥಿಕ ಹೋರಾಟಗಳತ್ತ ಸಾಗಿದರು.

ತಮ್ಮ ತನು, ಮನ ಧರ್ಮಗಳನರ್ಪಿಸಿ ದಲಿತರ ವಿಮೋಚನೆಗೆ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದ ಅಂಬೇಡ್ಕರ್ ತಮಗಾಗಲಿ ತಮ್ಮ ಸಂಸಾರಕ್ಕಾಗಲಿ ಏನು ಉಳಿಸಿಕೊಳ್ಳಲಿಲ್ಲ. ಅಸ್ಪೃಶ್ಯತೆ ಒಂದು ರೋಗ ಎಂದು ಭಾವಿಸಿದ ಅಂಬೇಡ್ಕರ್ ಎಲ್ಲಿ ಅಸಮಾನತೆಯಿದೆಯೋ ಅಲ್ಲಿ ಪ್ರೀತಿಯ ಹೂವು ಅರಳಲಾರದು ಎಂದು ಮನಗಂಡಿದ್ದರು. ಎಲ್ಲರ ಒಳಿತಿನ ಸಮಾಜ ನಿರ್ಮಾಣವೇ ಅಂಬೇಡ್ಕರ್ ಬಾಳಿನ ಗುರಿಯಾಯಿತು. ಅವರು ತಮ್ಮ ಹೋರಾಟದುದ್ದಕ್ಕೂ ಕೇಳಿದ್ದು ಆತ್ಮಗೌರವ ಬದುಕು; ವ್ಯಕ್ತಿಯ ಆತ್ಮಗೌರವದಲ್ಲಿಯೇ ದೇಹದಲ್ಲಿ ಆತ್ಮಗೌರವ ಅಡಗಿದೆ. ಎಂದರು. ತಮ್ಮ ಆತೋದ್ಧಾರ ತಮ್ಮಿಂದಲೇ ಸಾಧ್ಯ ಹೊರತು. ಇನ್ನೊಬ್ಬರಿಂದ ಸಾಧ್ಯವಿಲ್ಲ ಎಂದು ಜನತೆಗೆ ಬೋಧಿಸಿದ ಅಂಬೇಡ್ಕರ್ ಜಾತಿಪದ್ಧತಿ, ವರ್ಣಾಶ್ರಮಪದ್ಧತಿ, ಪುರೋಹಿತ ಶಾಹಿಗಳನ್ನು ಕಟುವಾಗಿ ಖಂಡಿಸಿದ್ದಾರೆ.

ಸಮಾಜ ಚಿಂತನೆಯಲ್ಲಿ ದೇವರು ಧರ್ಮ ಎಂಬೆರಡರ ಬಗೆಗೆ ಅಂಬೇಡ್ಕರ್ ಹೊಂದಿದ ನಿಲುವು ದಿಟ್ಟತನದಿಂದ ಕೂಡಿದ್ದಾಗಿವೆ. ವೈಚಾರಿಕ ದೃಷ್ಟಿ ಆಲೋಚನೆಗೆ ಮುಂದಾಗಿದ್ದ ಅಂಬೇಡ್ಕರ್ ಗುಡಿ ಸಂಸ್ಕೃತಿಯನ್ನು ತಿರಸ್ಕರಿಸಿದರು. ಮೂರ್ತಿ ಪೂಜೆಯನ್ನು ಅಲ್ಲಗಳೆದರು. ಅವರು ಕಾಳರಾಮ ಮಂದಿರದಂತಹ ಮಂದಿರಗಳಲ್ಲಿ

ಪ್ರವೇಶ ಬಯಸಿದ್ದು ತಾವು ಕೂಡ ಮನುಷ್ಯರೇ ಎಂದು ತೋರಿಸಿ ಸಾಮಾಜಿಕ ಜಿಡ್ಡು ಹೋಗಲಾಡಿಸುವುದಕ್ಕಾಗಿ ಪ್ರಯತ್ನಿಸಿದರು. ಆದರೆ ಮೂಲತಃ ಅಂಬೇಡ್ಕ ದೇವಾಲಯಗಳು ಬಡವರ ಶೋಷಣೆಯ ಕೇಂದ್ರಗಳಾಗಿವೆ ಎಂದು ಸಾರಿದರು. ಜನಸಾಮಾನ್ಯರನ್ನು ದೇವರು ಧರ್ಮದ ಹೆಸರಿನಲ್ಲಿ ಶೋಷಣೆ, ದೌರ್ಜನ್ಯ ಸುಲಿಗೆಗೆ ಒಳಪಡಿಸಿರುವುದನ್ನು ಅಂಬೇಡ್ಕರ್ ಕಣ್ಣಾರೆ ಕಂಡಿದ್ದರು. ಅದಕ್ಕಾಗಿ "ದೇವಾಲಯದ ಹೊರಗೆ ನಿಲ್ಲಬೇಕಾದ ಅವಮಾನ ಬೇಡ ನಮ್ಮ ತ್ಯಾಗ ಸೇವೆ, ಸದ್‌ವೃತ್ತಿ ಸದಾಚಾರಗಳಿಂದ ಮತ್ತೊಂದು ಪಂಡರಪುರವನ್ನೇ ನಿರ್ಮಿಸುವೆ" ಎಂಬ ಮಾತನ್ನು ತಮ್ಮ ಹೆಂಡತಿ ರಾಮಾಬಾಯಿಗೆ ಹೇಳುವುದರ ಮೂಲಕ ಅಂಬೇಡ್ಕರ್ ಗುಡಿ ಸಂಸ್ಕೃತಿಯನ್ನು ತಿರಸ್ಕರಿಸುತ್ತಾರೆ. ಕಲ್ಲು ಮಣ್ಣುಗಳಿಂದ ಕೂಡಿದ ದೇವರು ನಮಗೆ ಸಮಾನತೆ ದೊರಕಿಸಿಕೊಟ್ಟಿದ್ದಾನೆಯೇ ಎಂದು ಪ್ರಶ್ನಿಸಿದರು. ನಮ್ಮ ಅಲ್ಪರೆಂಬ ಭಾವನೆ ತ್ಯಜಿಸಿ ಸ್ವಾವಲಂಬನೆ ಆತ್ಮಗೌರವದ ಬದುಕು ರೂಪಿಸಿಕೊಂಡಾಗಲೇ ನಮ್ಮ ಪ್ರಗತಿ ಸಾಧ್ಯ ಎಂದು ಸಮಾಜವನ್ನು ತಿದ್ದಿದರು. ನಮಗೀಗ ದೇವರನ್ನು ಪೂಜಿಸುವುದ ರಿಂದಾಗುವ ತೃಪ್ತಿ ಮುಖ್ಯವಲ್ಲ. ಯಾರಲ್ಲಿಯೂ ದೈವೀ ಲಕ್ಷಣಗಳಿಲ್ಲ ಎಂಬ ವೈಜ್ಞಾನಿಕ ಸತ್ಯವನ್ನು ಅಂಬೇಡ್ಕರ್ ಬೋಧಿಸಿದರು. ನಿಮ್ಮ ವ್ರತ, ನಿಯಮ, ಪೂಜೆ ಪುನಸ್ಕಾರಗಳಿಂದ ನಿಮಗೆ ಶುಭವಾಗಿಲ್ಲ. ವ್ಯಕ್ತಿಯ ದೈವೀಕರಣದಿಂದ ವ್ಯಕ್ತಿತ್ವ ಕಳೆದು ಪರಾವಲಂಬಿ ಗಳಾಗುತ್ತೀರಿ, ಕರ್ತವ್ಯ ಚ್ಯುತರಾಗುತ್ತೀರಿ, ವ್ರತ ನಿಯಮಗಳನ್ನು ಕಟ್ಟಿಟ್ಟು ಶಾಸನಾಧಿಕಾರ ಸಂಪಾದಿಸಲು ಸರ್ವತ್ಯಾಗಕ್ಕಾಗಿ ಸಿದ್ಧರಾಗಿ. ಆಗ ನಿಮ್ಮ ಹಸಿವು ನೀಗುತ್ತದೆ ಎಂದು ಅಂಬೇಡ್ಕರ್ ಹೇಳಿದರು. ಸಮಾಜದಲ್ಲಿ ಆಚರಿಸುವ ಮೂಢನಂಬಿಕೆಗಳನ್ನು ಕುರಿತು ಅಂಬೇಡ್ಕರ್ ಮರುಗುವುದರ ಜೊತೆಗೆ ಮೂಢ ನಂಬಿಕೆಗಳನ್ನು ತಿರಸ್ಕರಿಸಿರದು. ಮೂಢನಂಬಿಕೆಗಳಿಂದ ಸದಾ ದೂರವಿರಿ ಎಂದು ಜನತೆಗೆ ಕಿವಿಮಾತು ಹೇಳಿದರು. ಮಾನವನ ಅಂಧಶ್ರದ್ಧೆಗೆ ದೇವರುಗಳ ಸೃಷ್ಟಿಯೇ ಕಾರಣ ಎಂದು ನಂಬಿದರು.

"ಹಿಂದು ದೇವರುಗಳ ಇತಿಹಾಸದಲ್ಲಿ ಸಾಮಾನ್ಯವಾಗಿ ಕಾಣುವ ಅಂಶವೆಂದರೆ ಕೆಲವು ದೈವಗಳನ್ನು ಸ್ವಲ್ಪ ಕಾಲದವರೆಗೆ ಪೂಜಿಸಿ ನಂತರ ಅವುಗಳ ಪೂಜೆ ಬಿಟ್ಟು ಕೊನೆಗೆ ಆ ದೈವಗಳನ್ನು ತಿಪ್ಪೆಗೆಸೆದು ಬಿಡುವುದು ಆನಂತರ ಹೊಚ್ಚಹೊಸ ದೈವಗಳಿಗೆ ಅಂಟಿಕೊಳ್ಳುವುದು ಅವುಗಳ ಪೂಜೆ ಮಾಡುವುದು ನಂತರ ಹೊಸ ದೈವಗಳನ್ನು ಕೈ ಬಿಡುವುದು ಬೇರೆ ಹೊಸ ದೈವಗಳಿಗೆ ಅಂಟಿಕೊಳ್ಳುವುದು ಈ ಚಕ್ರ ಹೀಗೆ ಉರುಳತ್ತದೆ." ಎಂದು ಅಂಬೇಡ್ಕರ್ ಹಿಂದು ಸಂಸ್ಕೃತಿಯನ್ನು ಖಂಡಿಸುತ್ತಾರೆ. ದೇವರು ಹೆಚ್ಚಿದಂತೆಲ್ಲಾ ಮನುಷ್ಯರ ನಡುವೆ ಘರ್ಷಣೆ ಹೆಚ್ಚಾಗುತ್ತದೆ. ವಿನಃ ನೆಮ್ಮದಿ ನೆಲೆಸುವುದಿಲ್ಲ ಎಂಬ ಅಭಿಪ್ರಾಯ ಅಂಬೇಡ್ಕರ್‌ದು. ಪೂಜೆ ಹಾಗೂ ಪ್ರಾರ್ಥನೆಯಿಂದ ಪುರೋಹಿತ ವರ್ಗ ಬಲಿಷ್ಠವಾಗುತ್ತದೆ. ಎಂದು ಹೇಳಿದ್ದಲ್ಲದೇ ಪರಮಾತ್ಮ ಇಂದು ಅಂಧ ವಿಶ್ವಾಸದ ಭದ್ರ ಕೋಟೆಯಾಗಿದೆ ಎಂದು ಹೇಳಿ ಗುಡಿ ಸಂಸ್ಕೃತಿ ತಿರಸ್ಕರಿಸುತ್ತಾರೆ.

ಧರ್ಮಕ್ಕೆ ಸಂಬಂಧಿಸಿದಂತೆ ಅಂಬೇಡ್ಕರ್ ವಿಚಾರಧಾರೆಗಳು ಅತ್ಯಂತ ಪ್ರಗತಿಪರವಾದವುಗಳು. ಧರ್ಮ ಮನುಷ್ಯನಿಗಾಗಿಯೇ ವಿನಃ ಧರ್ಮಕ್ಕಾಗಿ ಮನುಷ್ಯನಲ್ಲ

ಎಂದು ಸ್ಪಷ್ಟಪಡಿಸಿ ಧರ್ಮಕ್ಕೆ ಒಂದು ಹೊಸ ವ್ಯಾಖ್ಯಾನವನ್ನೇ ಅಂಬೇಡ್ಕರ್್ರ ಕೊಟ್ಟರು. "ಮನುಷ್ಯನಿಗೆ ಧರ್ಮದ ಅಗತ್ಯ ಎನ್ನುವುದನ್ನು ತಾವು ಒಪ್ಪುವುದಾದರೂ ಬದುಕಿನಲ್ಲಿ ಒಳ್ಳೆಯದನ್ನೂ ಸಾಧಿಸುವುದಕ್ಕೆ ಸಹಾಯಕವಾಗದ ಧರ್ಮವನ್ನು ಅವರು ಒಪ್ಪುವುದಿಲ್ಲ' ಎಂದಿದ್ದರು" ಸಾಮಾಜಿಕ ಅಸಮಾನತೆಗೆ ಅವಕಾಶ ನೀಡುವ ಧರ್ಮವನ್ನು ಭಾವಿಸುವುದಿಲ್ಲ ಎಂದು ಹೇಳಿ ಮಾನವನ ಕಲ್ಯಾಣಕ್ಕಾಗಿ ಧರ್ಮ ಪೂರಕವಾಗಿರಬೇಕು ಎನ್ನುತ್ತಾರೆ. ಅದಕ್ಕಾಗಿ ಅಂಬೇಡ್ಕರ್ ಶೋಷಣೆಯ ಪ್ರತೀಕವಾದ ಹಿಂದೂ ಧರ್ಮವನ್ನು ತೊರೆದು ಮಾನವೀಯ ಮೌಲ್ಯಗಳಿಂದ ಕೂಡಿರುವ ಬೌದ್ಧ ಧರ್ಮ ಎಂದು ಅಂಬೇಡ್ಕ ಒಪ್ಪಿಕೊಂಡರು. ಯಾವ ಮುಚ್ಚುಮರೆಯಿಲ್ಲದೆ ಅಂಬೇಡ್ಕರ್ ಶೋಷಿಸುವ ಧರ್ಮವನ್ನು ತರಾಟೆಗೆ ತೆಗೆದುಕೊಂಡರು. ಯಾವುದು ಸತ್ಯ ಯಾವುದು ಮಿಥ್ಯ ಎಂಬುದನ್ನು ಜನತೆಗೆ ಮನವರಿಕೆ ಮಾಡಿಕೊಟ್ಟು ವೈಜ್ಞಾನಿಕ ತಳಹದಿಯ ಮೇಲೆ ಸಮಾಜ ನಿರ್ಮಾಣದ ಗುರಿಯನ್ನು ಹೊಂದಿದ್ದರು.

**********

# ೧೦. ಪ್ರಭುತ್ವ-ಸಂಸ್ಕೃತಿ-ಸಮಾಜ-ದಲಿತ ಸಾಹಿತ್ಯ-

## ದಲಿತ ಭಾಷೆ ಮತ್ತು ಜ್ಞಾನ ಪರಂಪರೆ

**- ಎನ್.ಕೆ. ಹನುಮಂತಯ್ಯ**

**ಪರಂಪರೆ ಮತ್ತು ದಲಿತ ಸಂಸ್ಕೃತಿ**

'ಪರಂಪರೆ' ಎನ್ನುವುದು ವಿವಿಧ ನೆಲೆಗಳಿಗೆ ಸಂಬಂಧಿಸಿದ್ದಾಗಿದೆ. ಕಲೆ, ಸಾಹಿತ್ಯ ಸಂಸ್ಕೃತಿ, ಜೀವನಕ್ರಮ, ಜ್ಞಾನ, ಅನುಭವ ಇತ್ಯಾದಿ ವಲಯಗಳ ಸಮಕಾಲೀನತೆಯನ್ನು ಕುರಿತು ಚರ್ಚಿಸಬೇಕಾದರೆ ಆ ನೆಲೆಗಳು ಪಡೆದು ಬಂದ ಅವಸ್ಥಾಂತರಗಳ ಅಥವಾ ವಿಕಾಸದ ಒಟ್ಟು ಮೊತ್ತವನ್ನು 'ಪರಂಪರೆ' ಎಂದು ಗುರುತಿಸುತ್ತಾರೆ. ಅಲ್ಲದೆ 'ಪರಂಪರೆ' ಯಾವಾಗಲೂ ತನ್ನ ಜೊತೆಯಲ್ಲೇ ತನಗೆ ವಿರುದ್ಧವಾದಂಥ ಪ್ರತಿಪರಂಪರೆಯೊಂದನ್ನು ಎದುರಿಸುತ್ತಲೇ ಬೆಳೆಯುತ್ತಿರುತ್ತದೆ. ಇಂಥ ಎರಡು ಬಗೆಯ ಪರಂಪರೆಗಳ ಸ್ವರೂಪವನ್ನು ನಾವು 'ಸತ್ ಪರಂಪರೆ' ಮತ್ತು 'ಶತ್ರು ಪರಂಪರೆ' ಎಂಬುದಾಗಿ ಗ್ರಹಿಸಲು ಸಾಧ್ಯ.

“ಪರಂಪರೆ ಎಂದರೆ ಅದು ಕೇವಲ ಪ್ರತಿಷ್ಠಿತ ಗುಂಪಿನ, ಸಮುದಾಯದ, ಭಾಷೆಯ, ಸಾಹಿತ್ಯದ, ಧರ್ಮದ, ಪ್ರಭುತ್ವದ, ಘನತೆಯ ಸಂಗತಿಯಲ್ಲ; ಉನ್ನತ ಎನಿಸಿದ್ದರ ಸಂವೇದನೆಯನ್ನು ನಿರಂತರ ಪಾಲಿಸಿಕೊಂಡು ಬರುವುದು ಎಂದೂ ಆಗುವುದಿಲ್ಲ. ಪರಂಪರೆಯಾಗಲಿ ಸಾಂಸ್ಕೃತಿಕ ಅನನ್ಯತೆಯಾಗಲೀ ಕೇವಲ ಸಾಪೇಕ್ಷವಾದ ವಾಗಿರುತ್ತದೆ. ಪರಂಪರೆ ಎನ್ನುವುದು ಯಾರೋ ಮಾಡಿಟ್ಟು ಹೋದ ನೀತಿ ಸಂಹಿತೆಯ ಕಾನೂನಲ್ಲ. ಅದು ಆಯಾ ಪ್ರದೇಶದ ಭಾವನೆಯ, ಸಮಷ್ಟಿ ಸಂವೇದನೆಯ, ಸಂಸ್ಕೃತಿಯ ಪುನರ್ ಸೃಷ್ಟಿ ಕ್ರಿಯೆಯ, ನಿರಂತರ ಮಾನವೀಯ ಸಂವಾದದ ಬಿಂಬ. ಇದನ್ನು ವರ್ಣ, ವರ್ಗ, ಧರ್ಮಗಳ ಒಳಗಿಟ್ಟು ವ್ಯಾಖ್ಯಾನಿಸಿವವರು ವೈದಿಕ ಕೋಟೆಯಿಂದ ಆಚೆ ಬರದೆ ಅಲ್ಲೇ ಇದ್ದು ಪರಂಪರೆಯ ವಿಕೃತ ವ್ಯಾಖ್ಯೆಗಳನ್ನು ಬಲಪಂಥೀಯ ಪ್ರಭುತ್ವಕ್ಕೆ ಪೂರಕವಾಗುವಂತೆ ಆಲೋಚಿಸುತ್ತಿರುತ್ತಾರೆ. ಹೀಗಾಗಿಯೇ ಪರಂಪರೆ ಎಂದರೆ ಜಾತಿ ಪ್ರಣೀತ ಸಂಸ್ಕೃತಿಗಳಲ್ಲಿ ಯಾರ ಪರಂಪರೆಯನ್ನು ಮುಖ್ಯ ಎಂದು ಒಪ್ಪಿಕೊಳ್ಳಬೇಕೆಂಬ ತಕರಾರುಗಳು ಉಂಟಾಗುವವು” ಎಂಬ ಮೊಗಳ್ಳಿ ಗಣೇಶರ ಹೇಳಿಕೆಯಲ್ಲಿ ಪರಂಪರೆಯನ್ನು ಸ್ವೀಕರಿಸುವ ಕ್ರಮದಲ್ಲೂ ಆಯ್ಕೆಯ ಪ್ರಶ್ನೆಗಳಿವೆ ಎನ್ನುವ ಅಂಶ ಸ್ಪಷ್ಟವಾಗಿದೆ.

ಮೊಗಳ್ಳಿ ಗಣೇಶ್ 'ಪರಂಪರೆ' ಕುರಿತ ಚರ್ಚೆಯನ್ನು ಮುಂದುವರೆಸುತ್ತಾ

"ಸಂಸ್ಕೃತಿಯ ಒಳಗಿನಿಂದಲೇ ನಡೆಯುವ ಪರಂಪರೆಗೆ ಜಾತಿಯ ಸೂತಕ ಎಲ್ಲೋ ಒಂದಿಷ್ಟು ಇರಬಲ್ಲುದಾದರೂ ಅದನ್ನು ಮುರಿಯಲೆಂದೇ ಪರಂಪರೆಯಲ್ಲಿ ವೈಚಾರಿಕ ಶೋಧಗಳೂ ಸೃಜನಶೀಲ ಬರಹಗಳೂ ಹುಟ್ಟಿಕೊಳ್ಳುವುದು. ಜಾತಿ, ವರ್ಣ, ಧರ್ಮ ಬೇಕೇ ಬೇಕೆಂದು ವಾದಿಸುವ, ಸೃಷ್ಟಿಸುವ ಬರಹಗಳೂ ಬೇರೆ. ಅವನ್ನು ಧಾರ್ಮಿಕ ಪಠ್ಯಗಳೆಂದು ಜಾತಿಯ ಪಠ್ಯಗಳೆಂದು ಚರಿತ್ರೆಯು ತಿರಸ್ಕರಿಸಿ ಪರಂಪರೆಯ ಮಾನವೀಯ ಹುಡುಕಾಟಗಳ ವೈಚಾರಿಕ ವಿಕಾಸದ ಕಡೆಗೆ ಹೊರಟು ಸಮುದಾಯಗಳನ್ನೂ ಆ ಬಿಂಬಕ್ಕೆ ಕರೆತರುತ್ತವೆ. ನಿಜವಾದ ಪರಂಪರೆ ಯಾವತ್ತೂ ಕೂಡ ಪ್ರಭುತ್ವದ ವಿರುದ್ಧವಾಗಿ ಅಮಾನವೀಯ ಕ್ರಿಯೆಗಳನ್ನು ಪ್ರತಿಭಟಿಸುತ್ತಾ ಸುಪ್ತವಾಗಿ ಆಳದಲ್ಲಿ ಸೃಜನಶೀಲ ಬಿಂಬಗಳಲ್ಲಿ ಮಾನವತ್ವದ ಘನತೆಯನ್ನು ಕಟ್ಟುತ್ತಾ ಹೋಗುತ್ತವೆ. ಹೀಗಾಗಿ ಜಾತಿ ವಿನಾಶದ ಒಂದು ಪುಟ್ಟ ಚಳುವಳಿಯೂ ಸಾಹಿತ್ಯದ ಪಂಥವೂ ಪರಂಪರೆಯ ಒಳಗಿನಿಂದಲೇ ಹುಟ್ಟಿಕೊಳ್ಳುವುದು" ಎಂದು ಹೇಳುತ್ತಾರೆ.

"ಕನ್ನಡ ಪರಂಪರೆ ಗಾಢವಾಗಿ ಉಳಿದು ಬೆಳೆದಿರುವುದೇ ಕೆಳಜಾತಿಗಳ ನಿರಂತರ ಕ್ರಿಯಾಶೀಲತೆಯಿಂದ, ಅಲಕ್ಷಿತ ಅಥವಾ ತಿರಸ್ಕೃತ ಜ್ಞಾನಕೇಂದ್ರಗಳಾಗಿದ್ದು ಕೊಡೇ ಕೆಳಜಾತಿಗಳು ಕನ್ನಡದ ಪ್ರತಿಭೆಯನ್ನು ಪರಂಪರೆಯನ್ನು ಭಿನ್ನನೆಲೆಗೆ ವೈವಿಧ್ಯ ರೂಪಧಾರೆಗಳಲ್ಲಿ ನಡೆಸಿವೆ. ಶಾಕ್ಯ ಪಂಥ, ಶೈವಪಂಥ, ದೇಶೀಪ್ರತಿಭೆಗಳಂತೆಯೇ ಭಕ್ತಿಪಂಥ ಚಳುವಳಿಯಲ್ಲೂ ವಚನ ಚಳುವಳಿಯಲ್ಲೂ ದಲಿತ ಪರಂಪರೆಯೇ ಅವುಗಳ ಶಕ್ತಿಯೇ ವಿಶೇಷವಾಗಿದ್ದನ್ನು ಈಗ ಎಲ್ಲರೂ ಒಪ್ಪಿಕೊಳ್ಳುತ್ತಿದ್ದಾರೆ. ಪಂಪ, ರನ್ನ, ಕುಮಾರವ್ಯಾಸರಂತೆ ಕೆಳವರ್ಗಗಳು ಸಾಹಿತ್ಯದ ಪರಂಪರೆಯನ್ನು ನಿರ್ಮಾಣ ಮಾಡದಿದ್ದರೂ ಮೌಖಿಕ ಕಾವ್ಯಗಳನ್ನು, ಪುರಾಣಗಳನ್ನು ನಿರಂತರವಾಗಿ ಯಥೇಚ್ಛವಾಗಿ ಬಹುರೂಪಗಳ ಪಠ್ಯಗಳಲ್ಲಿ ಬಹುಸಂವೇದನೆಗಳನ್ನು, ಬಹುಕಾಲಗಳ ಸ್ಮೃತಿಗಳನ್ನು ಅವರವರ ಅಭಿವ್ಯಕ್ತಿ ಸಂಪ್ರದಾಯವು ಲಿಖಿತ ಸಾಹಿತ್ಯ ಪರಂಪರೆಗಿಂತ ಪ್ರಮಾಣದಲ್ಲಿ, ವೈವಿಧ್ಯದಲ್ಲಿ ಸಂವೇದನೆಯಲ್ಲಿ ಬಹಳ ದೊಡ್ಡದು.

ಶಿಷ್ಟಸಂಸ್ಕೃತಿಗೂ 'ದಲಿತ ಸಂಸ್ಕೃತಿ'ಗೂ ಇರುವ ವ್ಯತ್ಯಾಸವನ್ನು ದೈವಕ್ಕೆ ಸಂಬಂಧಿಸಿದ ಕೆಲವು ಆಚರಣೆಗಳ ಸಂದರ್ಭಗಳಲ್ಲಿ ನೋಡಬಹುದು. ಶಿಷ್ಟ ಸಂಸ್ಕೃತಿಯಲ್ಲಿ ಪ್ರಾರ್ಥನೆ ಪ್ರಧಾನ ಅಂಶವಾದರೆ ದಲಿತ ಸಂಸ್ಕೃತಿಯಲ್ಲಿ ಒತ್ತಾಯ ಕಂಡುಬರುತ್ತದೆ. ಚಿಕ್ಕಮಗಳೂರಿನ ಒಂದು ಹಳ್ಳಿಯಲ್ಲಿ ದೇವರು ತಮ್ಮ ಕೋರಿಕೆಯನ್ನು ಪೂರೈಸದಿದ್ದರೆ ಭಕ್ತರು ಆ ದೇವರಿಗೆ ಮೆಣಸಿನಕಾಯಿ ಘಾಟುಹಾಕುವ ಸಂಪ್ರದಾಯವನ್ನು ಇಟ್ಟುಕೊಂಡಿದ್ದಾರೆ. ಆಗ ಆ ದೇವತೆ ಮನುಷ್ಯನ ಮೈದುಂಬಿ ಇನ್ನೂ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತದೆ.

"ತಮ್ಮ ಬೇಡಿಕೆಗಳು ಪ್ರಾರ್ಥನೆಯಿಂದ ಪೂರೈಸಲ್ಪಡುವುದಿಲ್ಲ. ಅವು ಒತ್ತಾಯದಿಂದ ಮಾತ್ರ ಈಡೇರುತ್ತವೆ ಎಂಬ ನಂಬಿಕೆ ವಿಮೋಚನೆಯ ಹೋರಾಟಕ್ಕೆ ಪೂರಕವಾದುದು." ಹೀಗೆ ದಲಿತ ಪರಂಪರೆ ಮತ್ತು ದಲಿತ ಸಂಸ್ಕೃತಿ ಅಮಾನವೀಯ ವಿರುದ್ಧದ ಹಾಗೂ

ಸನಾತನ ಕ್ರೌರ್ಯದ ವಿರುದ್ಧದ ಪ್ರತಿಭಟನೆಯ ಮಾದರಿಯಾಗಿದೆ. ಅಸ್ಪೃಶ್ಯತೆಯನ್ನು ನಿರ್ಮಾಣ ಮಾಡಿರುವ ವ್ಯವಸ್ಥೆಯ ಎಲ್ಲ ನೆಲೆಗಳನ್ನೂ ಶತ್ರು ಪರಂಪರೆ ಎಂದು ಗ್ರಹಿಸುವ ದಲಿತ ಸಂಸ್ಕೃತಿ ಅಂಥ ವ್ಯವಸ್ಥೆಯ ವಿರುದ್ಧದ ನೆಲೆಗೆ 'ಸತ್ ಪರಂಪರೆ' ಎಂದು ಅಸ್ಪಶ್ಯತೆಯ ವಿರೋಧಿ ನೆಲೆಗಳನ್ನು ಗುರುತಿಸುತ್ತ ಅದನ್ನು ತನ್ನ ಅಸ್ತ್ರವನ್ನಾಗಿ ಮಾಡಿಕೊಂಡಿದೆ.

ಮೇಲುವರ್ಗದ ಮೌಲ್ಯಗಳು ದಲಿತರ ಮನಸ್ಸನ್ನು ಆವರಿಸುತ್ತಿದ್ದಂತೆ ಅವರು ವ್ಯಕ್ತಿತ್ವರಹಿತರೂ, ಕೀಳರಿಮೆಯವರೆಗೂ ಆಗುತ್ತಿದ್ದಾರೆ. ದಲಿತ ಸಂಸ್ಕೃತಿಯ ಶೋಧನೆ ಮಾತ್ರ ಈ ಪ್ರವೃತ್ತಿಯನ್ನು ತಡೆಯಬಲ್ಲದು ಎನ್ನುವ ಡಾ. ಸಿದ್ದಲಿಂಗಯ್ಯನವರು ಹೀಗೆ ಬರೆಯುತ್ತಾರೆ. "ಪ್ರತಿಭಟನೆ ದಲಿತ ಸಂಸ್ಕೃತಿಯ ಮುಖ್ಯಗುಣ. ಜಾತಿ ಪದ್ಧತಿಯ ವಿರುದ್ಧ ಸಿಡಿದೆದ್ದ ಉತ್ತರ ಕರ್ನಾಟಕದ ಧರ್ಮ ಎಂಬ ಧಾರ್ಮಿಕ ಪಂಥದವರು ಕುದುರೆಯ ಮೇಲೆ ಹೋಗುವಾಗ 'ಜಾತಿ ಎಂದೋರ ಮುಕಳಿಗೆ ಗೂಟ" ಎಂಬ ಘೋಷಣೆ ಕೂಗುವರು. ಇವರ ಮಠದ ಬಾಗಿಲಿನಲ್ಲಿ ಒಂದು ಗೂಟವನ್ನು ನೇತುಹಾಕಿದ್ದಾರೆ ಎಂದು ಕೇಳಿದ್ದೇನೆ. ಹಳ್ಳಿಗಳಿಗೆ ಹೋದಾಗ ಅಸ್ಪೃಶ್ಯರ ಕೇರಿಯಲ್ಲೇ ಇವರ ವಸತಿ. ಇವರನ್ನು ಕಾಣಬಯಸುವ ಸವರ್ಣೀಯರು ಅಸ್ಪಶ್ಯರ ಕೇರಿಗೇ ಬರಬೇಕು."

"ಅಸ್ಪೃಶ್ಯತೆಯ ಹುಟ್ಟಿಗೆ ಸಂಬಂಧಿಸಿದಂತೆ ಮೇಲುವರ್ಗದವರಲ್ಲಿ ಪ್ರಚಲಿತವಾಗಿರುವ ಪುರಾಣ ದಲಿತರನ್ನು ಅಪಮಾನ ಮಾಡುವಂತಿದೆ. ಆದರೆ ಈ ಬಗ್ಗೆ ದಲಿತರು ಹೇಳುವ ಕಥೆ ಕುತೂಹಲಕಾರಿಯಾದದ್ದು. ದೇವಸ್ಥಾನಕ್ಕೆ ಊರಿನ ಜನರೆಲ್ಲ ಹೋಗುತ್ತಿದ್ದರು. ಕಾಲ್ನಡಿಗೆಯಲ್ಲಿ ಬಂದವರು ಬೇಗ ತಲುಪಿದರು. ಆದರೆ ಕುದುರೆಯ ಮೇಲೆ ಬರುತ್ತಿದ್ದವರು ತಡವಾಗಿ ಅವರು ಗುಡಿಯ ಪ್ರವೇಶ ದ್ವಾರಕ್ಕೆ ಬರುವ ವೇಳೆಗೆ ಬಾಗಿಲು ಮುಚ್ಚಿಕೊಂಡಿತು. ಅಂದಿನಿಂದ ಅವರಿಗೆ ದೇವಸ್ಥಾನಕ್ಕೆ ಪ್ರವೇಶ ಇಲ್ಲವಾಗಿದೆ. ದಲಿತರ ಈ ನಂಬಿಕೆ ಅಸ್ಪಶ್ಯತೆಯ ಅಪಮಾನದಲ್ಲೂ ಘನತೆಯನ್ನು ಪಡೆಯುವ ಪ್ರಯತ್ನವನ್ನು ಸೂಚಿಸುತ್ತದೆ" ಎನ್ನುವ ಡಾ. ಸಿದ್ಧಲಿಂಗಯ್ಯನವರು; ಮೇಲುವರ್ಗದವರ ಜನ ವಿರೋಧಿ ಪುರಾಣಗಳನ್ನು ಕೆಳವರ್ಗದ ಜನಪರ ಪುರಾಣಗಳ ಮೂಲಕ ಎದುರಿಸೋಣ ಎಂದು ಹೇಳಿದ್ದಾರೆ.

"ದಲಿತರು ಇಂಡಿಯಾದ ಮೂಲಪುರುಷರು. ವ್ಯವಸಾಯವನ್ನು ಸೃಷ್ಟಿಸಿದವರು ಹೊಲೆ ಮಾದಿಗರು, 'ಹೊಲೆಯ' ಪದ ಪೊಲ, ಹೊಲ, ಹೊಲೆಯ ಎಂಬುದಾಗಿ ನಿಷ್ಪನ್ನಗೊಂಡಿದೆ ಎನ್ನಿಸುತ್ತದೆ. ಹೊಲತಿ ಪದವೂ ಇದಕ್ಕೆ ಸಂವಾದಿಯಾಗಿ ರೂಪುಗೊಂಡಿರಬೇಕು. ಇದೇ ನೆಲೆಯಲ್ಲಿ ಮಾತಂಗ, ಮೊದಲಿಗ, ಮಾದಿಗ ಪದಗಳು ರೂಪುಗೊಂಡಿವೆ. 'ಮಾತಂಗ' ಸಂಸ್ಕೃತಿಯ ಮೂಲ ಪುರುಷರು ಎನ್ನಲೂ ಆಧಾರಗಳಿವೆ. ಇಂದಿಗೂ ಕೆಳವರ್ಗದ ಈ ಜನಗಳಲ್ಲಿ ಪಾರಂಪರಿಕ ಕಲೆ, ವ್ರತ, ಆಚರಣೆ, ಸಂಪ್ರದಾಯಗಳು ಬಳಕೆಯಲ್ಲಿವೆ. ಪ್ರಧಾನ ಸಂಸ್ಕೃತಿಗಿಂತ ವಿಭಿನ್ನವಾದ, ತನ್ನದೇ

ಬೇರುಗಳುಳ್ಳ ಸಂಸ್ಕೃತಿಯ ಮೂಲಪುರುಷರೆಂದು ಗುರುತಿಸಲು ಸಾಧ್ಯ. ಈ ಸಂಸ್ಕೃತಿಯ ಮೇಲೆ ಇತಿಹಾಸದುದ್ದಕ್ಕೂ ಆಕ್ರಮಣ ನಡೆಸುತ್ತಲೇ ತಮ್ಮ ಸಂಸ್ಕೃತಿ ಮಾತ್ರ ಶ್ರೇಷ್ಠವೆಂದು ಬ್ರಾಹ್ಮಣರಾದಿಯಾಗಿ ಮೇಲುಜಾತಿಯ ಜನ ಭಾವಿಸಿದರು. ಬ್ರಾಹ್ಮಣರು ಯಜ್ಞಯಾಗಾದಿಗಳ ಆಚರಣೆಗೆ ತೀವ್ರ ಪ್ರತಿರೋಧ ನಡೆಸಿದುದ್ದನ್ನು ಪುರಾಣಗಳು ಉಲ್ಲೇಖಿಸುತ್ತವೆ. ಈ ಹಿನ್ನಲೆಯಲ್ಲಿ ದಲಿತರನ್ನು ಕೇಂದ್ರವಾಗಿರಿಸಿಕೊಂಡು ಸಂಸ್ಕೃತಿಯನ್ನು ಪುನರ್ರೂಪಿಸಿಕೊಳ್ಳುವ ಪ್ರಯತ್ನಗಳು ನಡೆಯುವುದು ಅನಿವಾರ್ಯವಾಗಿದೆ. ಲಿಖಿತ ಪರಂಪರೆ ಸಂಪೂರ್ಣವಾಗಿ ಮೇಲು ವರ್ಗದದವರ ಸೊತ್ತಾಗಿದ್ದುದ್ದರಿಂದ ಮತ್ತು ಅದರಲ್ಲಿ ದಲಿತರು ಪ್ರವೇಶಿಸದಂತೆ ಬ್ರಾಹ್ಮಣರು ತಡೆಯೊಡ್ಡಿದುದರಿಂದ ದಲಿತರು ಮೌಖಿಕ ಪರಂಪರೆಯಲ್ಲಿ ತಮ್ಮನ್ನು ಸೃಷ್ಟಿಸಿಕೊಂಡರು. ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಜೀವನ ವಿಧಾನ, ನಂಬಿಕೆ, ಆಚರಣೆಗಳನ್ನು ಅನ್ವಯಿಕ ದೃಷ್ಟಿಯಲ್ಲಿ ಅಧ್ಯಯನ ಮಾಡಬೇಕಿದೆ. ಆ ಮೂಲಕ ದಮನಕ್ಕೊಳಗಾದ ಪರ್ಯಾಯ ಸಂಸ್ಕೃತಿಯ ಆವಿಷ್ಕಾರ ಸಾಧ್ಯ."

ದಲಿತ ಸಂಸ್ಕೃತಿಗೆ ಸಂಬಂಧಿಸಿದಂತೆ ನಡೆದಿರುವ ಚರ್ಚೆಗಳಲ್ಲಿ ಈ ಕೆಲವು ಅಂಶಗಳು ಕಂಡುಬಂದಿವೆ.

೧. 'ದಲಿತ ಸಂಸ್ಕೃತಿ' ಆದಿಮ ಸಂಸ್ಕೃತಿ (Arche Culture) ಯ ಲಕ್ಷಣಗಳನ್ನು ಹೊಂದಿದ್ದು, ಅದು ಇಂದಿಗೂ ಮೂಲ ಸ್ವರೂಪದ ಗುಣ ಲಕ್ಷಣಗಳನ್ನು ಉಳಿಸಿಕೊಂಡಿದೆ.

೨. ದಲಿತರ ಬದುಕಿನಲ್ಲಿ ಉಳಿದುಕೊಂಡು ಬಂದಿರುವ ಸಂಪ್ರದಾಯಗಳು, ನಂಬಿಕೆಗಳು, ಧಾರ್ಮಿಕ ಆಚರಣೆಗಳು, ಅವರದೇ ಆದ ಪ್ರತ್ಯೇಕ ಆದ ಅಸ್ತಿತ್ವವನ್ನು ಶ್ರುತಪಡಿಸುತ್ತವೆ.

೩. ಈ ಸಂಸ್ಕೃತಿಯ ಮೇಲೆ ಪ್ರಧಾನ ಸಂಸ್ಕೃತಿಯ ಆಕ್ರಮಣ ನಡೆದಾಗಲೂ ಇತರ ಸಂಸ್ಕೃತಿಗಳ ಜೊತೆ ಅದು ಸೌಹಾರ್ದಯುತ ಸಂಬಂಧವನ್ನು ಹೊಂದಿದೆ. ಉದಾಹರಣೆಗೆ ಮುಸ್ಲಿಂ ಸಂಸ್ಕೃತಿಯ ಪೀರಲು ದೇವರು' ಕೆಳವರ್ಗದ ಗ್ರಾಮದೇವತೆಗಳಿಗೆ 'ಅಣ್ಣ' ನಾಗಬೇಕು ಎಂಬ ನಂಬಿಕೆಯನ್ನು ಗಮನಿಸಬಹುದು.

೪. ದಲಿತರು ಆಚರಿಸುತ್ತಿರುವ ಎಷ್ಟೋ ಆಚರಣೆಗಳು ಅಮಾನುಷವೂ ಅವಮಾನ ಪೂರಿತವೂ ಆಗಿವೆ. 'ಮಾರಿಹಬ್ಬ' ದಲ್ಲಿ ಆಚರಿಸುವ ಕೋಣಬಲಿ ಪ್ರಸಂಗ ಇವರ ಅಸ್ತಿತ್ವವನ್ನೇ ಇಲ್ಲವಾಗಿಸುವ ತಂತ್ರದಿಂದ ಹೆಣೆಯಲ್ಪಟ್ಟಿದೆ. ಇಲ್ಲಿ ಕೋಣ ಹೊಲೆಯ ಇಲ್ಲವೇ ಮಾದಿಗ ಜನಾಂಗವನ್ನು ಪ್ರತಿನಿಧಿಸುವ ಗಂಡು ಮಾತ್ರ ಬಲಿ ತೆಗೆದುಕೊಳ್ಳುವ ದೇವತೆ ಬ್ರಾಹ್ಮಣ ಇಲ್ಲವೇ ಮೇಲುಜಾತಿಯ ಸ್ತ್ರೀ. ಇವೆರಡೂ ಜಾತಿಗಳ ಅಥವಾ ಗುಂಪುಗಳ ನಡುವೆ ರಕ್ತ ಸಂಬಂಧವನ್ನು ನಿಷೇಧಿಸುವ ಒಂದು ಆಚರಣೆಯಾಗಿ "ಕೋಣಬಲಿ' ಪ್ರಸಂಗ ಆಚರಣೆಯಲ್ಲಿದೆ. ಕೋಣವನ್ನು ಹಿಂಸಿಸಿ ಬಲಿಕೊಡುವವರು ಮಾದಿಗರೇ, ತಮಗೆ ಕುತ್ತಾಗಿರುವ ಇಂಥ ಆವರಣೆಯನ್ನು ಮೇಲ್ವರ್ಗದ ಒತ್ತಾಯಕ್ಕೆ ಮಣಿದು ಆಚರಿಸುತ್ತಾ ಬಂದಿದ್ದಾರೆ.

ಬೆತ್ತಲೆ ಸೇವೆ, ದೇವದಾಸಿ ಪದ್ಧತಿಗಳೂ ಕೂಡ ದಲಿತರ ಹೆಣ್ಣನ್ನು ಭೋಗದ ವಸ್ತುವಾಗಿ ಮೇಲ್ವರ್ಗದವರು ಕಾಣುತ್ತಿದ್ದಾರೆಂಬುದಕ್ಕೆ ನಿದರ್ಶನಗಳಾಗಿವೆ. ಈ ರೀತಿಯ ಆಚರಣೆಗಳು ದಲಿತ ಸಂಸ್ಕೃತಿಯೆನ್ನಿಸಿಕೊಳ್ಳಬಾರದು. ಏಕೆಂದರೆ ಮೇಲುವರ್ಗದ ಸಂಸ್ಕೃತಿ ತನ್ನ ಮನರಂಜನೆಗೆ ಹಾಗೂ ಅಸ್ಪಶ್ಯತೆಯ ರಕ್ಷಣೆಗೆ ನಡೆಸಿರುವಂಥ ಆಕ್ರಮಣಕಾರಿ ಸಾಂಸ್ಕೃತಿಕ ನೆಲೆ ಎಂದೇ ಇಂಥ ಅಮಾನುಷ ಆಚರಣೆಯನ್ನು ಗ್ರಹಿಸಬೇಕಾಗಿದೆ.

ದಲಿತ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ಎಂದು ಹೋರಾಡುವಾಗಲೂ ಕೂಡ ಎಚ್ಚರವಹಿಸಬೇಕಾಗುತ್ತದೆ. ಇಲ್ಲವಾದರೆ ಆನಂದಕ್ಕಾಗಿ ತಮ್ಮನ್ನು ಬಲಿಕೊಟ್ಟುಕೊಳ್ಳುವ ಆಚರಣೆಯನ್ನು ಸಂಸ್ಕೃತಿಯ ಹೆಸರಿನಲ್ಲಿ ರಕ್ಷಿಸುವ ದುರಂತದ ಅಂಚಿಗೆ ಬಂದು ನಿಲ್ಲಬೇಕಾಗುತ್ತದೆ. ಹೀಗೆ ದಲಿತ ಸಂಸ್ಕೃತಿಯ ಬಗೆಗೆ ಹಲವಾರು ಚರ್ಚೆಗಳು ನಡೆದಿವೆ.

ದಲಿತ ಸಂಸ್ಕೃತಿಯ ಜೀವಂತಿಕೆ ಇರುವುದೇ ಸತ್ ಪರಂಪರೆಯ ಶಕ್ತಿಯಲ್ಲಿ, ಕಲೆಯ ಬಗೆಗೆ ಮಾತನಾಡುವ ಸಂದರ್ಭಗಳಲ್ಲಿ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಒಂದು ನಂಬಿಕೆ ಇದೆ; ಒಮ್ಮೆ ಒಂದು ಎತ್ತಿನ ಗಾಡಿಯಲ್ಲಿ ಹಾಡು ಕುಣಿತಗಳನ್ನು ತುಂಬಿಕೊಂಡು ಎಲ್ಲ ವರ್ಗದವರಿಗೂ ಹಂಚಬೇಕೆಂದು ದೇವರುಗಳ ಹೊರಡುತ್ತವೆ. ಎತ್ತಿನಗಾಡಿ ಹೊಲೆ ಮಾದಿಗರ ಕೇರಿಗೆ ಬಂದ ತಕ್ಷಣ ಅಚ್ಚುಮುರಿದು ನೆಲಕ್ಕುರುಳುತ್ತದೆ. ಆಗ ಹೊಲೆಮಾದಿಗರು ಹಾಡು, ಕುಣಿತಗಳನ್ನು ತಮಗೆ ಬೇಕಾದಷ್ಟು ಬಾಚಿಕೊಂಡರು. ಅದಕ್ಕಾಗಿಯೇ ಹೊಲೆ ಮಾದಿಗರಲ್ಲಿ ಕಲಾ ಶ್ರೀಮಂತಿಕೆ ಹೆಚ್ಚು' ಎಂಬುದು ಹಳ್ಳಿಯ ದಲಿತರ ನಂಬಿಕೆಯಾಗಿದೆ. ಈ ರೀತಿಯಾಗಿ ತಮ್ಮ ಘನತೆಯನ್ನು ಅಸ್ಪೃಶ್ಯತೆಯ ಅವಮಾನದೊಳಗು ಸ್ಥಾಪಿಸುವಂಥ ಕ್ರಿಯಾಶೀಲತೆ ದಲಿತ ಸಂಸ್ಕೃತಿಯದಾಗಿದೆ.

"ಅಸ್ಪೃಶ್ಯ ದಲಿತನ ಅವಮಾನ ಸ್ಥಿತಿ ವೈಯಕ್ತಿಕ ಮಾತ್ರ ಅಲ್ಲ; ಅದು ತನ್ನೆಲ್ಲ ಜನರ ಪಾಡು ಎಂಬ ಭಾವನೆ ಅವನಿಗಿರುವುದರಿಂದ ಈ ಮನಸ್ಥಿತಿ ರೂಪಿಸುವ ರೂಪಕ ವೈಯಕ್ತಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಅವಿಭಾಜ್ಯ ಅನ್ನಿಸುವಂತೆ ಪಡೆದು ಕೊಂಡಿರುತ್ತದೆ."

ದಲಿತ ಸಂಸ್ಕೃತಿಯ ಪ್ರಧಾನ ನೆಲೆಯನ್ನು ಈ ಹಿಂದೆ ಹೇಳಿರುವ ಹಾಗೆ 'ಸತ್ ಪರಂಪರೆ' ಯ ಅಂಶಗಳು ರೂಪಿಸಿವೆ. ಈ ಸತ್ ಪರಂಪರೆಯ ರೂಪಿಕೃತ ಸಂಸ್ಕೃತಿಯನ್ನು ನಾವು 'ಪ್ರತಿ ಸಂಸ್ಕೃತಿ' ಎಂದು ಗುರುತಿಸಲು ಸಾಧ್ಯ. ಭಾರತದಂತ ಜಾತಿ ವ್ಯವಸ್ಥೆಯನ್ನು ಹತ್ತಿಕ್ಕುವ ಮತ್ತು ವಿರೋಧಿಸುವ ಏಕೈಕ ಸಂಸ್ಕೃತಿ ಅದು ದಲಿತ ಸಂಸ್ಕೃತಿಯಾಗಿದೆ. ಉಳಿದ ಯಾವ ಮೇಲ್ವರ್ಗದ ಸಂಸ್ಕೃತಿಗೂ ಜಾತಿ ಪದ್ಧತಿ ಒಂದು ಪ್ರತಿರೋಧದ ನೆಲೆಯಾಗಿಲ್ಲ. ಈ ಹಿನ್ನಲೆಯಲ್ಲಿ ಡಾ. ರಹಮತ್ ತರೀಕೆರೆಯವರು ಪ್ರತಿಪಾಧಿಸಿರುವ 'ಪ್ರತಿ ಸಂಸ್ಕೃತಿ' ಕುರಿತ ಚಿಂತನೆ ಗಮನಾರ್ಹವಾಗಿದೆ. ಅವರು "ಪಾವಿತ್ರ್ಯ ನಾಶವೆಂದರೆ, ಯಾವ ಯಜಮಾನ ಸಂಸ್ಕೃತಿಯು ದುಡಿಯುವ ಜನರ ಲೋಕಕ್ಕೆ ಸಂಬಂಧಿಸಿದ್ದನ್ನು

ಹೀನವೆಂದು ತನ್ನದನ್ನು ಶ್ರೇಷ್ಠವೆಂದು ಮೂಡಿಸಿದ ನಂಬಿಕೆಗಳಿವೆಯೋ, ಅವನ್ನು ಅಪಮೌಲೀಕರಣಗೊಳಿಸುವುದು; ಅದು ಪವಿತ್ರೀಕರಿಸುವ ಸಂಕೇತಗಳನ್ನು ನಿರಾಕರಿಸುವುದು. ಇದೊಂದು ಜಾಗತಿಕ ಪ್ರತಿಭಟನಾ ಸಾಮಾನ್ಯ ಲಕ್ಷಣವೇ ಆಗಿದೆ. ಧಣಿಗಳ ಹಿತಕ್ಕಾದ ಸಂಸ್ಕೃತಿಯನ್ನೇ ತಮ್ಮದೆಂದು ನಂಬಿದ್ದ ಜನ, ಇದು ಹೇಗೆ ನಮ್ಮದು? ಎಂದು ಪ್ರಶ್ನೆಹಾಕಿಕೊಳ್ಳುತ್ತಿರುವ ಹಂತ ಇದಾಗಿರುತ್ತದೆ; ಅವರ 'ವ್ಯವಸ್ಥೆ' ಯ, ತಮ್ಮ ಅವಸ್ಥೆಯ ವ್ಯತ್ಯಾಸಗಳು ಗೊತ್ತಾದ ಮೇಲೆ, ಧಣಿ ಸಂಸ್ಕೃತಿ ಮಾಡಿದ ಅಪವಾದಗಳನ್ನು ಅದರ ಮುಖದಂದೆ ಹಿಡಿಯುವ ಧೈರ್ಯದ ಅರಿವಿನ ಸ್ಥಿತಿಯದಾಗಿರುತ್ತದೆ. ಅಂದರೆ ಅನ್ಯಾಯವನ್ನೆ ನ್ಯಾಯವೆಂದು ಹೇಳುತ್ತಾ ತಮ್ಮ ಮೇಲೆ ಹೇರಿಕೊಂಡಿದ್ದ ಪುರಾಣಗಳನ್ನು ಕೆಳಗೆ ಎತ್ತಿ ಹಾಕಿ ಒಡೆದು, ಅವುಗಳ ಒಳಗಿನ ಸುಳ್ಳನ್ನು ಕಂಡುಕೊಳ್ಳುವುದು (demythologing) ತಮಗೆ ಕೇಡು ಬಯಸುವ ಆಳುವವರ ಸಂಸ್ಕೃತಿಯನ್ನು ಆಳಾಗಿದ್ದ ವರ್ಗಗಳು ವೈಚಾರಿಕವಾಗಿ ವಿಶ್ಲೇಷಿಸುವುದು ಹಾಗೂ ಅದರ ನಾಶ ಸಾಧಿಸುವುದು. ನಾಶವೇಕೆಂದರೆ ಅದು ಅವೈಚಾರಿಕವಾಗಿದೆ ಹಾಗೂ ಅಮಾನವೀಯವಾಗಿದೆ. ಆದರೆ ಅರ್ಥ ಪೂರ್ಣ ಪ್ರತಿಭಟನೆಯಲ್ಲಿ ನಾಶವೊಂದೆ ಕೆಲಸವಲ್ಲ. ಕೆಟ್ಟದ್ದರ ನಾಶದ ನಂತರ ಒಳ್ಳೆಯದೊಂದನ್ನು ಬದಲಿಗೆ ಕಟ್ಟಿಕೊಳ್ಳುವ ಹೊಣೆಯು ಇರಲೇಬೇಕು. ಹೇಗೆ ಕೆಡಹುವ ಕ್ರಿಯೆಗೆ ಕಟ್ಟುವ ಕನಸ್ಸಿಲ್ಲದಾಗ ಬೆಲೆ ಇರುವುದಿಲ್ಲ. ಹಾಗೆ ಮತ್ತೆ “ಕಟ್ಟುವ ಕ್ರಿಯೆಯೇ ಪ್ರತಿಸಂಸ್ಕೃತಿ” ಎಂದಿದ್ದಾರೆ.

ದಲಿತ ಸಂಸ್ಕೃತಿಯೂ ಕೂಡ ಪ್ರತಿ ಸಂಸ್ಕೃತಿಯ ಲಕ್ಷಣಗಳಿಗೆ ಬದ್ಧವಾಗಿದೆ. ಆದರೆ ಒಂದು ಕ್ರೂರ ಸಂಸ್ಕೃತಿಯನ್ನು ಭಗ್ನಗೊಳಿಸಿ ನಂತರ ತನ್ನಾಳದ ಸಾಂಸ್ಕೃತಿಕ ಚೈತ್ಯನ್ಯವನ್ನು ಅದಕ್ಕೆ ಪ್ರತಿಯಾಗಿ ಕಟ್ಟುವ ಕೆಲಸವನ್ನು ದಲಿತ ಸಂಸ್ಕೃತಿ ನಿರ್ವಹಿಸುತ್ತದೆ. ಡಾ. ಕೆ.ವಿ ನಾರಾಯಣ ಹೇಳುವಂತೆ “ಪ್ರಾಚೀನ ಮರುಗಳಿಕೆ ಎಂಬುದು ಇಡೀ ಸಮಾಜದಲ್ಲೇ ನಡೆಯುತ್ತಿರುವ ಪ್ರಕ್ರಿಯೇ. ಎಲ್ಲ ಜಾತಿ-ವರ್ಗಗಳು ಈ ಪ್ರಕ್ರಿಯೆಯಲ್ಲೇ ತಂತಾನೇ ಭಾಗಿಯಾಗಿದ್ದಾರೆ. ರಾಮನ ಅಯೋಧ್ಯೆ ಮತ್ತು ಬಾಬರಿ ಮಸೀದಿಯ ಜೋಡಿಯನ್ನು ಮೊದಲು ಗಮನಿಸಿ. ಈ ಜೋಡಿಯಲ್ಲಿ ಮಸೀದಿಯನ್ನು ನಿರಾಕರಿಸಿ ಅಲ್ಲಿ ರಾಮಮಂದಿರವನ್ನು ನಿರ್ಮಿಸಬೇಕೆಂದವರು ಮರುಗಳಿಕೆಯಲ್ಲೇ ತೊಡಗಿದ್ದಾರೆ. ಆದರೆ ಅವರು ಪುರಾಣವನ್ನು ಐತಿಹ್ಯವನ್ನು ಚರಿತ್ರೆಯನ್ನಾಗಿ ಪರಿವರ್ತಿಸುವ ಮಾದರಿಯನ್ನು ಆಶ್ರಯಿಸಿದ್ದಾರೆ. ಅಯೋಧ್ಯೆಯ ರಾಮ ಜನ್ಮಸ್ಥಳದ ಕಥನವನ್ನು ಚಾರಿತ್ರಿಕ ಸಂಭವವೆಂದು ಸಮರ್ಥಿಸುವ ಅವಶ್ಯಕವೆನಿಸುವ ಪುರಾವೆಗಳನ್ನು ಕೂಡಿಹಾಕಿದ್ದಾರೆ. ಆದರೆ ದಲಿತಸಂವೇದನೆ ನಡೆಸಿರುವ ಮರುಗಳಿಕೆಯ ವಿಧಾನವೇ ಬೇರೆ. ದಲಿತ ನೋವಿನ ಶೋಷಣೆಯು ಒಂದು ಚಾರಿತ್ರಿಕ ವಾಸ್ತವ. ಆದರೆ ಆ ವಾಸ್ತವದ ಪುರಾಣವನ್ನು ದಲಿತರು ಕಟ್ಟುತ್ತಿದ್ದಾರೆ. ಅದನ್ನೊಂದು ಮಿಥಿಕಲ್ ಎನ್ನುವ ಆವರಣದಲ್ಲಿ ಪುನರ್ ರಚಿಸುತ್ತಿದ್ದಾರೆ. ದಲಿತರ ತಮ್ಮ ಸ್ವಂತಿಕೆಯನ್ನು ಸಾಧಿಸಲು ತಮ್ಮ ಆಚರಣೆಗಳನ್ನು ವ್ಯವಸ್ಥಿತವಾಗಿ ಮರುರೂಪಿಸುತ್ತಿದ್ದಾರೆ. ಈ ಆಚರಣೆಯಲ್ಲಿ

ಚರಿತ್ರೆಯಿದೆ. ಆದರೆ ಆ ಚರಿತ್ರೆಯ ನೆಲೆ ದಲಿತರಿಗೆ ಮುಖ್ಯವಾಗಿಲ್ಲ. ಆಚರಣೆಗಳಲ್ಲಿ ಒಂದು ಪ್ರತೀಕವನ್ನಾಗಿ, ಕುರುಹಾಗಿ ಅವರು ಕಟ್ಟುತ್ತಿದ್ದಾರೆ. ಆದ್ದರಿಂದ ಅವರ ಮರುಗಳಿಕೆ ಯತ್ನ ಭಿನ್ನವಾಗಿ ತೋರುತ್ತದೆ" .

"ದಲಿತ ಚಳುವಳಿಯ ಮುಖ್ಯ ಉದ್ದೇಶ ಪೂರ್ಣ ಸಾಕ್ಷರತೆ, ಆರ್ಥಿಕ ಚೇತರಿಕೆ ಮತ್ತು ಸ್ವಾಭಿಮಾನದ ರಕ್ಷಣೆ ಎಂದು ನಾನು ತಿಳಿದಿದ್ದೇನೆ. ಇವೆಲ್ಲವು ಸಾಹಿತ್ಯದ ಸೃಷ್ಟಿಗೆ ಅತ್ಯಗತ್ಯ. ಅಲ್ಲದೆ ದಲಿತರು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದಂತೆಲ್ಲ ನಮ್ಮ ಇಡೀ ಸಾಹಿತ್ಯದ ಪುನರ್ ಮೌಲ್ಯಮಾಪನ ಅಗತ್ಯವಾಗುತ್ತದೆ" .

"ಹೋರಾಟ ಮತ್ತು ತಿಳುವಳಿಕೆ ಇವೆರಡೂ ಸೇರಿದಾಗ ಮಾತ್ರ ಒಳನೋಟ ಸಾಧ್ಯವಾಗುತ್ತದೆ. ಈ ಒಳನೋಟದಿಂದ ಸೃಷ್ಟಿಸಲ್ಪಟ್ಟ ಸಾಹಿತ್ಯ ಇಡೀ ಸಾಹಿತ್ಯದ ಸ್ವರೂಪವನ್ನೇ ಬದಲಾಯಿಸುತ್ತದೆ" .

"ಸಾವಿರಾರು ಜನ ದಲಿತರು ವಿದ್ಯಾವಂತರಾಗುತ್ತಿದ್ದರು. ಈ ದಲಿತ ಚಳವಳಿ ಮೊದಲು ಹಂತವಾದ ಪ್ರತಿಭಟನೆ ರೂಪದ ಹಂತದಲ್ಲಿದೆ. ಇದು ಸಹಜ ಕೂಡ. ಪ್ರತಿಭಟಿಸದೆ, ಉಗ್ರವಾಗಿ ವಿರೋಧಿಸದೆ ನಮ್ಮ ಸಮಾಜ ಅಲುಗಾಡುವುದಿಲ್ಲ; ಅಲ್ಲಿಯ ಜಾತಿಯತೆಯ ನೀಚತನ ಆಳವಾಗಿದೆ. ಆದರೆ ಈ ದಲಿತ ಚಳವಳಿಯೊಂದಿಗೆ ಇತರ ಜಾತಿ, ವರ್ಗಗಳು ಸೇರಬೇಕು; ಪ್ರತಿಭಟನೆ ಮಾಡುತ್ತ ಹೋಗಬೇಕು. ಇದರಷ್ಟೇ ಮುಖ್ಯವಾದದ್ದು ದಲಿತ ಕ್ರಿಯಾಶೀಲ ಲೇಖಕರಾಗಬಯಸುವವರಲ್ಲಿ ಮಾನವರೆಲ್ಲರ ದುರಂತ, ಸಮಾನತೆ, ಅಸಹಾಯಕತೆಯ ಬಗ್ಗೆ ತಿಳುವಳಿಕೆ ಹೆಚ್ಚಾಗುತ್ತಾ ಹೋಗಬೇಕು. ಕ್ರಿಯಾಶೀಲ ಯಾವಾಗಲೂ ಮಗುವಿನ ತರಹ; ಆತನಿಗೆ ಚೇತ್ಕಾರ ಒಗ್ಗುವುದಿಲ್ಲ. ಪ್ರತಿಭಟಿಸುವವ ಏಕಮುಖಿಯಾದವನು; ಅವನಿಗೆ ಮಗುವಿನ ಗ್ರಹಿಕೆ ದಕ್ಕುವುದಿಲ್ಲ. ಈ ದೃಷ್ಟಿಯಿಂದ ದಲಿತರು ಇಡೀ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ನೋಡುವಾಗ ತಾಳ್ಮೆ ಕಳೆದುಕೊಳ್ಳಬಾರದು" .

ಹೀಗೆ ದಲಿತ ಸಂಸ್ಕೃತಿಗೆ ತನ್ನದೇ ಆದ ಸೃಜನಶೀಲತೆ ಹಾಗೂ ಮಹಾಮಾನವೀಯ ಶಕ್ತಿ ಇರುವುದು ಕಂಡುಬರುತ್ತದೆ. ಭಾರತದಂಥ ಜಾತಿಪದ್ಧತಿಯ ದೇಶದಲ್ಲಿ ದಲಿತ ಸಂಸ್ಕೃತಿಯ ಮಹತ್ವ ಅಪಾರವಾಗಿದೆ. ಅದರಲ್ಲೂ ಜಾಗತೀಕರಣಕ್ಕೆ ಬಲಿಯಾದ ಸೃಜನಶೀಲತೆ, ಭಾಷೆಗಳು ಶುಷ್ಕಗೊಳ್ಳುತ್ತಿರುವ ಆಧುನಿಕ ಸಂದರ್ಭದಲ್ಲಿ ದಲಿತ ಸಂಸ್ಕೃತಿ ಹಾಗೂ ಸೃಜನಶೀಲ ನೆಲೆಗಳು ಮಹತ್ವ ಪಡೆಯುತ್ತವೆ.

ಸಾಹಿತ್ಯ ಭಾಷೆ ಅನೇಕ ಸಲ ಸಮುದಾಯದಿಂದ ತುಸು ದೂರ ಉಳಿಯಲು ಸಾಧ್ಯ. ಅಂದರೆ ಒಂದು ಪ್ರಮಾಣ ಭಾಷೆಯ ಪರಿಮಿತಿ ಸಾಹಿತ್ಯ ಭಾಷೆಗೂ ಇರಬಹುದಾಗಿದೆ. ಹೀಗಿದ್ದಾಗ ಅಭಿವ್ಯಕ್ತಿಗೆ ಸ್ಪಷ್ಟತೆ ಮತ್ತು ವಾಸ್ತವತೆಗಳು ಬರಲು ಸಮುದಾಯ ಭಾಷೆ ಅನಿವಾರ್ಯ, ಸಮುದಾಯ ಭಾಷೆಗೆ ಸಂವಹನಗೊಳ್ಳುವ ಶಕ್ತಿ ಇರುತ್ತದೆ. ಸಾಹಿತ್ಯ ಭಾಷೆಗೆಯನ್ನು ರೂಪಾಂತರಿಸುವರೋ ಅವರು ಭಾಷೆ ಮತ್ತು ಸಂಸ್ಕೃತಿಗಳ ವಿಕಾಸಕ್ಕೂ ಕಾರಣರಾಗುತ್ತಿರುತ್ತಾರೆ.

ಚರಿತ್ರೆಯಿದೆ. ಆದರೆ ಆ ಚರಿತ್ರೆಯ ನೆಲೆ ದಲಿತರಿಗೆ ಮುಖ್ಯವಾಗಿಲ್ಲ. ಆಚರಣೆಗಳಲ್ಲಿ ಒಂದು ಪ್ರತೀಕವನ್ನಾಗಿ, ಕುರುಹಾಗಿ ಅವರು ಕಟ್ಟುತ್ತಿದ್ದಾರೆ. ಆದ್ದರಿಂದ ಅವರ ಮರುಗಳಿಕೆ ಯತ್ನ ಭಿನ್ನವಾಗಿ ತೋರುತ್ತದೆ" .

"ದಲಿತ ಚಳುವಳಿಯ ಮುಖ್ಯ ಉದ್ದೇಶ ಪೂರ್ಣ ಸಾಕ್ಷರತೆ, ಆರ್ಥಿಕ ಚೇತರಿಕೆ ಮತ್ತು ಸ್ವಾಭಿಮಾನದ ರಕ್ಷಣೆ ಎಂದು ನಾನು ತಿಳಿದಿದ್ದೇನೆ. ಇವೆಲ್ಲವು ಸಾಹಿತ್ಯದ ಸೃಷ್ಟಿಗೆ ಅತ್ಯಗತ್ಯ. ಅಲ್ಲದೆ ದಲಿತರು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದಂತೆಲ್ಲ ನಮ್ಮ ಇಡೀ ಸಾಹಿತ್ಯದ ಪುನರ್ ಮೌಲ್ಯಮಾಪನ ಅಗತ್ಯವಾಗುತ್ತದೆ" .

"ಹೋರಾಟ ಮತ್ತು ತಿಳುವಳಿಕೆ ಇವೆರಡೂ ಸೇರಿದಾಗ ಮಾತ್ರ ಒಳನೋಟ ಸಾಧ್ಯವಾಗುತ್ತದೆ. ಈ ಒಳನೋಟದಿಂದ ಸೃಷ್ಟಿಸಲ್ಪಟ್ಟ ಸಾಹಿತ್ಯ ಇಡೀ ಸಾಹಿತ್ಯದ ಸ್ವರೂಪವನ್ನೇ ಬದಲಾಯಿಸುತ್ತದೆ" .

"ಸಾವಿರಾರು ಜನ ದಲಿತರು ವಿದ್ಯಾವಂತರಾಗುತ್ತಿದ್ದರು. ಈ ದಲಿತ ಚಳವಳಿ ಮೊದಲು ಹಂತವಾದ ಪ್ರತಿಭಟನೆ ರೂಪದ ಹಂತದಲ್ಲಿದೆ. ಇದು ಸಹಜ ಕೂಡ. ಪ್ರತಿಭಟಿಸದೆ, ಉಗ್ರವಾಗಿ ವಿರೋಧಿಸದೆ ನಮ್ಮ ಸಮಾಜ ಅಲುಗಾಡುವುದಿಲ್ಲ; ಅಲ್ಲಿಯ ಜಾತಿಯತೆಯ ನೀಚತನ ಆಳವಾಗಿದೆ. ಆದರೆ ಈ ದಲಿತ ಚಳವಳಿಯೊಂದಿಗೆ ಇತರ ಜಾತಿ, ವರ್ಗಗಳು ಸೇರಬೇಕು; ಪ್ರತಿಭಟನೆ ಮಾಡುತ್ತ ಹೋಗಬೇಕು. ಇದರಷ್ಟೇ ಮುಖ್ಯವಾದದ್ದು ದಲಿತ ಕ್ರಿಯಾಶೀಲ ಲೇಖಕರಾಗಬಯಸುವವರಲ್ಲಿ ಮಾನವರೆಲ್ಲರ ದುರಂತ, ಸಮಾನತೆ, ಅಸಹಾಯಕತೆಯ ಬಗ್ಗೆ ತಿಳುವಳಿಕೆ ಹೆಚ್ಚಾಗುತ್ತಾ ಹೋಗಬೇಕು. ಕ್ರಿಯಾಶೀಲ ಯಾವಾಗಲೂ ಮಗುವಿನ ತರಹ; ಆತನಿಗೆ ಚೇತ್ಕಾರ ಒಗ್ಗುವುದಿಲ್ಲ. ಪ್ರತಿಭಟಿಸುವವ ಏಕಮುಖಿಯಾದವನು; ಅವನಿಗೆ ಮಗುವಿನ ಗ್ರಹಿಕೆ ದಕ್ಕುವುದಿಲ್ಲ. ಈ ದೃಷ್ಟಿಯಿಂದ ದಲಿತರು ಇಡೀ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ನೋಡುವಾಗ ತಾಳ್ಮೆ ಕಳೆದುಕೊಳ್ಳಬಾರದು" .

ಹೀಗೆ ದಲಿತ ಸಂಸ್ಕೃತಿಗೆ ತನ್ನದೇ ಆದ ಸೃಜನಶೀಲತೆ ಹಾಗೂ ಮಹಾಮಾನವೀಯ ಶಕ್ತಿ ಇರುವುದು ಕಂಡುಬರುತ್ತದೆ. ಭಾರತದಂಥ ಜಾತಿಪದ್ಧತಿಯ ದೇಶದಲ್ಲಿ ದಲಿತ ಸಂಸ್ಕೃತಿಯ ಮಹತ್ವ ಅಪಾರವಾಗಿದೆ. ಅದರಲ್ಲೂ ಜಾಗತೀಕರಣಕ್ಕೆ ಬಲಿಯಾದ ಸೃಜನಶೀಲತೆ, ಭಾಷೆಗಳು ಶುಷ್ಕಗೊಳ್ಳುತ್ತಿರುವ ಆಧುನಿಕ ಸಂದರ್ಭದಲ್ಲಿ ದಲಿತ ಸಂಸ್ಕೃತಿ ಹಾಗೂ ಸೃಜನಶೀಲ ನೆಲೆಗಳು ಮಹತ್ವ ಪಡೆಯುತ್ತವೆ.

ಸಾಹಿತ್ಯ ಭಾಷೆ ಅನೇಕ ಸಲ ಸಮುದಾಯದಿಂದ ತುಸು ದೂರ ಉಳಿಯಲು ಸಾಧ್ಯ. ಅಂದರೆ ಒಂದು ಪ್ರಮಾಣ ಭಾಷೆಯ ಪರಿಮಿತಿ ಸಾಹಿತ್ಯ ಭಾಷೆಗೂ ಇರಬಹುದಾಗಿದೆ. ಹೀಗಿದ್ದಾಗ ಅಭಿವ್ಯಕ್ತಿಗೆ ಸ್ಪಷ್ಟತೆ ಮತ್ತು ವಾಸ್ತವತೆಗಳು ಬರಲು ಸಮುದಾಯ ಭಾಷೆ ಅನಿವಾರ್ಯ, ಸಮುದಾಯ ಭಾಷೆಗೆ ಸಂವಹನಗೊಳ್ಳುವ ಶಕ್ತಿ ಇರುತ್ತದೆ. ಸಾಹಿತ್ಯ ಭಾಷೆಗೆಯನ್ನು ರೂಪಾಂತರಿಸುವರೋ ಅವರು ಭಾಷೆ ಮತ್ತು ಸಂಸ್ಕೃತಿಗಳ ವಿಕಾಸಕ್ಕೂ ಕಾರಣರಾಗುತ್ತಿರುತ್ತಾರೆ.

**ದಲಿತ ಸಾಹಿತ್ಯದ ಭಾಷೆ:**

ನವ್ಯ ಸಾಹಿತ್ಯದ ಭಾಷೆ ಪಾಶ್ಚಾತ್ಯ ಸಾಹಿತ್ಯದ ದಟ್ಟವಾದ ಪ್ರಭಾವದಿಂದ ವ್ಯಕ್ತಿಯ ಅಂತರ್ಮುಖೀ ಸಂಕೀರ್ಣತೆಗಳನ್ನು ಶೋಧಿಸುವ ಯತ್ನದಲ್ಲಿತ್ತು. ಇಂಥ ಶೋಧನೆಯ ಪ್ರಕ್ರಿಯೆಯಲ್ಲಿ ಸಹಜವಾಗಿ ನವ್ಯ ಭಾಷೆಗೆ ವಿಶಿಷ್ಟ ಮನಶ್ಶಾಸ್ತ್ರೀಯ ಆಯಾಮ ಬಂದೊದಗಿತ್ತು. ಆದರೆ ನಗರ ಮತ್ತು ಆಧುನಿಕತೆಯ ಅನುಭವಗಳಿಗೆ ತಕ್ಕ ಭಾಷೆಯನ್ನು ನವ್ಯ ಸಾಹಿತ್ಯ ರೂಪಿಸಿಕೊಂಡದ್ದರ ಪರಿಣಾಮವಾಗಿ ಆ ಭಾಷೆಗೆ ಸಮುದಾಯದ ಕಿವಿ ತಲುಪುವ ಸಂವಹನಶೀಲತೆ ಕ್ಷೀಣಿಸಿತ್ತು. ಈ ಬಗೆಯ ಕ್ಲಿಷ್ಟತೆ ಮತ್ತು ನಗರತನವನ್ನು ತ್ಯಜಿಸುವ ಮೂಲಕ ಅಲಕ್ಷಿತ ನೆಲೆಯ ಭಾಷೆ ಮತ್ತು ಬದುಕನ್ನು ಕಲೆಯಾಗಿಸಲು ಹೊರಟದ್ದು ದಲಿತಸಾಹಿತ್ಯ, ಈ ಕಾರಣದಿಂದ ದಲಿತ ಸಾಹಿತ್ಯದ ಭಾಷೆಯೂ ಕೂಡ ಜಾನಪದೀಯ ನೆಲೆಗಳನ್ನು ಮೈಗೂಡಿಸಿಕೊಂಡು ಬೆಳೆಯಿತು.

ದಲಿತಭಾಷೆ ಕನ್ನಡ ಸಾಹಿತ್ಯದ ಪರಂಪರೆಯ ಭಾಷೆಯನ್ನು ಮುರಿದರೂ ಕನ್ನಡ ಬಂಧ ಮತ್ತು ಆಕೃತಿಯನ್ನು ಪರಂಪರೆಯಿಂದಲೇ ಸ್ವೀಕರಿಸಿದೆ ಎಂಬುದನ್ನು ದಲಿತ ಭಾಷೆಯನ್ನು ಕುರಿತು ಅಧ್ಯಯನ ಮಾಡಿದಾಗ ತಿಳಿಯುವ ಸಂಗತಿಯಾಗಿದೆ. ಅಧೋಜಗತ್ತಿನ ಬದುಕು, ಅವಮಾನ, ಅಸಹಾಯಕತೆ, ಕಲಾ ಸಮೃದ್ಧತೆ ಹಾಗೂ ಕ್ರಾಂತಿಯ ನೆಲೆಗಳು ಹೊಸ ಭಾಷೆಯಾಗಿ ರೂಪುಪಡೆದ್ದು ದಲಿತ ಭಾಷೆಯ ವಿಶಿಷ್ಟತೆ ಎನ್ನಬಹುದು.

“ಮನುಷ್ಯನ ನೋವು, ಅವನ ಸಂಕೋಲೆಗಳನ್ನು ಸೃಷ್ಟಿಸಿದ ಘಟನೆಗಳು, ಜಾತೀಯತೆಯಿಂದ ಉಂಟಾದ ಸಮಸ್ಯೆಗಳನ್ನು ಈ ಕಾರಣಕ್ಕಾಗಿ ಪಡುವ ಯಾತನೆ, ಮನುಷ್ಯ ಮನುಷ್ಯರ ನಡುವಿರುವ ಅಡ್ಡಗೋಡೆಗಳು ಮತ್ತು ಅವುಗಳ ಹಿನ್ನೆಲೆ ಅವುಗಳೆಲ್ಲದರ ಇತಿಹಾಸ ಮೂಲಗಳು ಅತ್ಯಂತ ಯಶಸ್ವಿಯಾಗಿ ಜಾನಪದ ಭಾಷೆಯ ಮುಖಾಂತರ ಸೃಷ್ಟಿಯಾಗುತ್ತವೆ” ಎಂದು ದೇವಯ್ಯ ಹರವೆ ಬರೆಯುತ್ತಾರೆ.

ಒಂದು ಜನಾಂಗ ಅಥವಾ ಒಬ್ಬ ವ್ಯಕ್ತಿಯ ನಿತ್ಯದ ಬದುಕು ತನಗೆ ಅಗತ್ಯವೆನಿಸುವ ಭಾಷೆಯನ್ನು ಸೃಷ್ಟಿಸಿಕೊಂಡು ತನ್ನ ಅಸ್ತಿತ್ವವನ್ನು ಪಡೆದಿರುತ್ತದೆ. ಅನೇಕ ಸಲ ಜೀವನವೇ ಭಾಷೆಯೂ ಆಗಿರುತ್ತದೆ. ಈ ಕಾರಣದಿಂದ ಆಧುನಿಕ ಕನ್ನಡ ಸಾಹಿತ್ಯ ದಲಿತ ಸಾಹಿತ್ಯಕ್ಕಿಂತ ಹಿಂದೆ ಒಂದು 'ಪ್ರಮಾಣ ಭಾಷೆ' ಗೆ ಅನುಗುಣವಾಗಿ ಅಭಿವ್ಯಕ್ತಿ ಪಡೆಯುತ್ತಿತ್ತು. ದಲಿತ ಸಾಹಿತ್ಯ ತನ್ನ ಜನಾಂಗದ ಒಳಲೋಕವನ್ನು ಆಶ್ರಯಿಸುವ ಮೂಲಕ ಒಂದು ಸಾಹಿತ್ಯಕ ಉಪಭಾಷೆಯಾಗಿ ಸ್ಫೋಟಿಸಿತು.

ದಲಿತ ಸಾಹಿತ್ಯದ ಭಾಷೆಯನ್ನು ಕುರಿತು ಚರ್ಚಿಸುವ ಸಂದರ್ಭದಲ್ಲಿ ನಮಗೆ ಆರಂಭದ ಎರಡು ಮುಖ್ಯ ಮಾದರಿಗಳು ಕಾಣಿಸುತ್ತವೆ. ಅವುಗಳೆಂದರೆ

೧. ಸಿದ್ಧಲಿಂಗಯ್ಯನವರ ಮಾದರಿ

೨. ದೇವನೂರು ಮಹಾದೇವರ ಮಾದರಿ

ಸಿದ್ಧಲಿಂಗಯ್ಯನವರು ಅಸ್ಪೃಶ್ಯ ಲೋಕದ ಭೂತ ಮತ್ತು ವರ್ತಮಾನ ಚರಿತ್ರೆ ಹಾಗೂ ವಾಸ್ತವಗಳ ಬಂಧನಗಳನ್ನು ಅವಮಾನಗಳನ್ನು ಅರಿತ ಸೂಕ್ಷ್ಮ ವಿದ್ಯಾವಂತ ಮನಸೊಂದು ಸಿಡಿದೇಳುವಂಥ ಭಾಷೆಯನ್ನು ರೂಪಿಸುತ್ತಾರೆ. ತನ್ನ ಸ್ಥಿತಿಗೆ ಕಾರಣವಾದ ವ್ಯವಸ್ಥೆಯ ವಿರುದ್ಧ ಹೋರಾಡುತ್ತಲೇ ಬಿಡುಗಡೆಯ ಬಾಗಿಲುಗಳನ್ನು ಕಂಡುಕೊಳ್ಳುವ ತೀವ್ರತೆ ಅವರಲ್ಲಿ ಕಾಣಿಸುತ್ತದೆ. ಇಂಥ ಹೋರಾಟಕ್ಕೆ ತನ್ನ ಲೋಕದ ಜೀವನ, ಅನುಭವ ಹಾಗೂ ಅಭಿವ್ಯಕ್ತಿಯ ಅಂಶಗಳನ್ನೆ ಆಯುಧವನ್ನಾಗಿ ಮಾಡಿಕೊಳ್ಳುವಂಥ ಭಾಷೆ ಸಿದ್ಧಲಿಂಗಯ್ಯನವರ ಮಾದರಿಯದು. ಅಷ್ಟೇ ಅಲ್ಲದೆ ವ್ಯವಸ್ಥೆಯ ಇದುವರೆಗೂ ಪಾಲಿಸಿಕೊಂಡು ಬಂದ ಸಾಹಿತ್ಯ ಪರಂಪರೆಯ ತಂತಿಯ ಮೇಲೆಯೇ ನಡೆಯುತ್ತ (ಉದಾ: ನವೋದಯ, ಜಾನಪದ ಮೊದಲಾದ ಲಯ) ವಿಭಿನ್ನ ಧ್ವನಿ ಎತ್ತುವುದು ಸಿದ್ದಲಿಂಗಯ್ಯನವರ ಮಾದರಿಗಿರುವ ವಿಶಿಷ್ಟತೆಯಾಗಿದೆ. ಸಿದ್ಧಲಿಂಗಯ್ಯನವರ ಕಾವ್ಯದ ಲಯದ ಮಾದರಿಯಲ್ಲಿ ಕುವೆಂಪು ಭಾಷೆಯ ಪ್ರಭಾವವೂ ಕೂಡ ನಿಚ್ಚಳವಾಗಿದೆ.

ಡಿ. ಆರ್. ನಾಗರಾಜ ಸಿದ್ಧಲಿಂಗಯ್ಯನವರ ಕಾವ್ಯದ ಬಗ್ಗೆ ಬರೆಯುತ್ತಾ ಹೀಗೆ ಹೇಳಿದ್ದಾರೆ. “ಒಂದು ಜನಾಂಗವನ್ನು ಎರಡಡು ರೀತಿಗಳಲ್ಲಿ ಕಟ್ಟಲು ಸಾಧ್ಯ. ಆಧುನಿಕ ಸನ್ನಿವೇಶದಲ್ಲಿ ಎಲ್ಲ ಬಗೆಯ ಸಮಷ್ಟಿ ವ್ಯಕ್ತಿ ತತ್ವಗಳೂ ಹೇಗೆ ನಿರ್ಮಿತಿಗಳೇ ಎನ್ನುವ ಮಾತನ್ನು ಗಮನದಲ್ಲಿಟ್ಟುಕೊಂಡು ಈ ಚರ್ಚೆಯನ್ನು ಮುಂದುವರೆಸಬೇಕಾಗಿದೆ. ಒಂದು- ರಾಜಕೀಯ ಸಂಕಲ್ಪದ ಮೂಲಕ ಎರಡು-ಸಾಹಿತ್ಯದ ಪ್ರತಿಭಾ ಸಂಕಲ್ಪದ ಮೂಲಕ. ಇವೆರಡೂ ಒಂದರೊಳಗೊಂದು ಹರಿಯುತ್ತವೆ ಎನ್ನುವುದೂ ಸತ್ಯ. ರಾಜಕೀಯ ಸಂಕಲ್ಪದ ಮೂಲಕ ನಿರ್ಮಾಣದ ಜನಾಂಗ ತನಗೆ ಅಗತ್ಯವಿರುವ ಸಂಸ್ಕೃತಿಯ ರೂಪಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಹಾಗೂ ಸಾಹಿತ್ಯ ಸಂಕಲ್ಪ ಕೂಡಾ ತನಗೆ ಸಾಧ್ಯವಿರುವ ರಾಜಕೀಯ ಕ್ರಿಯೆಯ ಮಾದರಿಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಈ ತತ್ವದ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರ ಕಾವ್ಯದ ರೂಪುರೇಖೆಗಳು ಇನ್ನಷ್ಟು ಉಜ್ವಲವಾಗುತ್ತವೆ.

ಡಿ.ಆರ್. ನಾಗರಾಜ್ ಹೇಳುವಂತೆ ದಲಿತ ಬದುಕಿನ ಅಭಿವ್ಯಕ್ತಿಗೆ ಒಂದು ಹೊಸ ಭಾಷೆಯೂ ಕೂಡ ಸಿದ್ಧಲಿಂಗಯ್ಯನವರ ಮೂಲಕ ಸೃಷ್ಟಿಯಾಯಿತು ಎಂದು ಹೇಳಬಹುದು. ಅಲ್ಲದೆ ಸಿದ್ಧಲಿಂಗಯ್ಯನವರ ಭಾಷೆಗೆ ಇರುವ ಇನ್ನೊಂದು ಶಕ್ತಿ ದಲಿತರ ಪ್ರಶ್ನೆಗಳು ಅಸ್ಪೃಶ್ಯಗೊಳ್ಳದೆ ಸಾರ್ವಜನಿಕ ಕ್ಷೇತ್ರಕ್ಕೆ ನಾಟುವಂತೆ ಮಾಡುವ ಶೈಲಿ.

'ದಲಿತ ಸಾಹಿತ್ಯ ದಲಿತರಿಗಷ್ಟೆ ಅದನ್ನು ನಾವು ಓದಬೇಕಿಲ್ಲ' ಎನ್ನುವ ಅಪಾಯಕಾರಿ ಗ್ರಹಿಕೆ ವ್ಯವಸ್ಥೆಗೆ ಬಂದರೆ ತನ್ನ ಜನಾಂಗದ ಧ್ವನಿಗೆ ಅರ್ಥವಿಲ್ಲ ಎನ್ನುವ ತಿಳುವಳಿಕೆ ಸಿದ್ಧಲಿಂಗಯ್ಯನವರ ಮಾದರಿಗೆ ಇರುವುದರಿಂದ ಆ ಮಾದರಿ ಸಾರ್ವಜನಿಕರಿಗೆ ಹೆಚ್ಚು ಒತ್ತು ಕೊಡುತ್ತದೆ.

ಸಿದ್ದಲಿಂಗಯ್ಯನವರ ಕಾವ್ಯದ ಗೇಯ ಗುಣ, ಲಯದ ಮಾದರಿಗಳನ್ನು ಚರ್ಚಿಸುತ್ತಾ ಡಿ.ಆರ್.ನಾಗರಾಜ್ ಹೇಗೆ ಬರೆಯುತ್ತಾರೆ “ಈ ಕವಿಯ ಪ್ರತಿಭಾ ಸಂಕಲ್ಪದಲ್ಲಿ

ಕನ್ನಡ ದಲಿತ ಜನಾಂಗ ಒಂದು ನಿರ್ದಿಷ್ಟ ರೀತಿಯಲ್ಲಿ ನಿರ್ಮಿತವಾಯಿತು. ಹಾಡು ಜನಾಂಗವನ್ನು ಕಟ್ಟಿತು. ಜನಾಂಗ ಹಾಡನ್ನು ಸೃಷ್ಟಿಸುವುದರ ಜನತೆಯೇ ತಾನು ಸೃಷ್ಟಿಸಿರುವ ಹಾಡಿನಿಂದಲೂ ಅದು ಪ್ರಭಾವಿತಗೊಳ್ಳುತ್ತದೆ. ೧೯೭೫ ರಿಂದಾಚೆಗೆ ದಲಿತರು ಹೊಸ ಪ್ರಜ್ಞಾವಂತ ಜನಾಂಗವಾಗಿ ಕರ್ನಾಟಕದಲ್ಲಿ ಸಿದ್ಧಲಿಂಗಯ್ಯನವರ ಕವಿತೆಗಳ ಎರಕದಲ್ಲಿ ರೂಪುಗೊಂಡರು. ಅದಕ್ಕಾಗಿಯೇ ದಲಿತರ ಮೆರವಣಿಗೆ ಬೀದರ್‌ನಿಂದ ಕೋಲಾರದ ತನಕ ಯಾವುದೇ ಮೂಲೆಯಲ್ಲಿ ನಡೆದರೂ ಅಲ್ಲಿ ಕವಿಯ ಹಾಡುಗಳು. ಅದಕ್ಕಾಗಿಯೇ ಇದು ಸಾರ್ವಜನಿಕ ಕಾವ್ಯದ ಅಂತಿಮ ಯಶಸ್ಸು. ಈ ಕವಿತೆಗಳನ್ನು ವ್ಯಕ್ತಿಯೊಬ್ಬ ತನ್ನ ಅತ್ಯಂತ ಖಾಸಗಿ, ದುಃಖ, ರೋಮಾಂಚನನದ, ದಿಗ್ಭ್ರಮೆಗಳ ಗಳಿಗೆಯಲ್ಲಿ ಓದಿಕೊಂಡಾಗ ಹೇಗೆ ಭಾವಿಸುತ್ತಾನೋ ಅಷ್ಟು ಖಚಿತವಾಗಿ ಹೇಳಲಾಗದು. ಆದರೆ ಆತ ತನ್ನ ಸಾಮಾಜಿಕ, ಸಾರ್ವಜನಿಕ ಗಳಿಗೆಯಲ್ಲಿಯಂತೂ ಈ ಕಾಲಕ್ಕೆ ಪ್ರತಿಸ್ಪಂದಿಸದೆ ಇರಲಾರ. ಸಾರ್ವಜನಿಕ ರಾಜಕೀಯ ಬದುಕಿನ ಉತ್ಸಾಹ, ರೋಷ, ಭೀತಿಗಳನ್ನು ಕವಿ ಪರಿಣಾಮಕಾರಿಯಾಗಿ ಹಿಡಿದಿಟ್ಟಿದ್ದಾರೆ. ಸಾರ್ವಜನಿಕ ಕಾವ್ಯಕ್ಕೆ ಒಂದು ಭಾಷಣದ ಗುಣವಿದ್ದರೆ ಅದು ರುಚಿಸುವುದೇ ಇಲ್ಲ. ಅದಕ್ಕಾಗಿಯೇ ಕ್ರಾಂತಿ ಕವಿಗಳು ಉತ್ಪ್ರೇಕ್ಷೆಯನ್ನು ಆಯ್ದುಕೊಳ್ಳುತ್ತಾರೆ. ಇಲ್ಲವೆ ಬ್ರೆಕ್ಟನ್ ಹಾಗೆ ವ್ಯಂಗ್ಯವನ್ನು, ವೈರುಧ್ಯಗಳನ್ನು ಕೋಪ, ಶೋಕ ಅಥವಾ ವ್ಯಂಗ್ಯ, ನಗು- ಹೀಗೆ ಯಾವುದೇ ಆದರೂ ಸಾರ್ವಜನಿಕ ಕಾವ್ಯ ತನ್ನ ಅತ್ಯುತ್ತಮ ಕ್ಷಣಗಳಲ್ಲಿ ಒಂದು ಆದಿಮ ಸಮಷ್ಟಿಯನ್ನು ಸೃಷ್ಟಿಸುತ್ತದೆ. ಒಂದು ರೀತಿಯ ಭಾವುಕ ಏಕತೆ ಕವಿ ಮತ್ತು ಸಮಷ್ಟಿಯನ್ನು ಜೋಡಿಸುತ್ತದೆ. ಈ ದೃಷ್ಟಿಯಿಂದ ಬೇಂದ್ರೆಯ ನಂತರ ಅತ್ಯಂತ ಹೆಚ್ಚು ಸಾರ್ವಜನಿಕ ಅಸ್ತಿತ್ವವುಳ್ಳ ಕಾವ್ಯ ಬರೆದ ಕವಿಯೆಂದರೆ ಸಿದ್ಧಲಿಂಗಯ್ಯನವರೇ ಇರಬೇಕು. ಆದರೆ ಕ್ರಮೇಣ ಸಿದ್ಧಲಿಂಗಯ್ಯನವರ ಮಾದರಿಯ ಭಾಷಾ ಬಳಕೆಯನ್ನೇ ಹಲವಾರು ದಲಿತ ಲೇಖಕರು ಅನುಕರಿಸಿದ್ದರ ಪರಿಣಾಮವಾಗಿ ಬಹುಪಾಲು ದಲಿತ ಸಾಹಿತ್ಯ ಸಿದ್ಧಲಿಂಗಯ್ಯನವರ ಭಾಷೆಯ ಪ್ರತಿಧ್ವನಿಯಾಗಿಯೇ ಕೇಳಿಸತೊಡಗಿದ್ದೂ ಉಂಟು. ಆದರೆ ದಲಿತ ಕವಿಗಳು ತಮ್ಮ ಹೆಸರನ್ನು ಸೂಚಿಸಿದೆ ಬರೆದ 'ಹೋರಾಟದ ಹಾಡುಗಳು' ಸಂಕಲನದ ಹಾಡುಗಳು ಕನ್ನಡ ನವೋತ್ತರದಲ್ಲಿ ಕಂಡ ಹೊಸ ಭಾಷಿಕ ಲಯಗಳಿಗೆ ಸಾಕ್ಷಿಯಂತಿವೆ. ತಮಟೆಯ ಧ್ವನಿ ಕೂಡ ಈ ಹಾಡುಗಳ ಭಾಷೆಯನ್ನು ಪ್ರಭಾವಿಸಿತು. ಹೀಗಿದ್ದೂ ದಲಿತ ಕಾವ್ಯದ ಒಂದು ಮಾದರಿ ವಸ್ತು ವಿಷಯವನ್ನೇ ಪ್ರಧಾನವಾಗಿಟ್ಟುಕೊಂಡು ಏಕತಾನತೆಯ ಅಪಾಯಕ್ಕೆ ಸಿಲುಕ್ಕಿದ್ದೂ ಉಂಟು.

ಹೀಗಾಗಿ ಹಿಂದೊಮ್ಮೆ ಡಿ.ಆರ್.ನಾಗರಾಜ ದಲಿತ ಕಾವ್ಯದ ಭಾಷೆಯ ಬಗ್ಗೆ ಒಂದು ಘಟ್ಟದಲ್ಲಿ ಎತ್ತಿದ ಪ್ರಶ್ನೆಗಳು ಮುಖ್ಯವಾಗಿವೆ. “ದಲಿತ ಕಾವ್ಯದಲ್ಲಿ ದಲಿತ ಲೋಕವೇ ಕಾಣೆಯಾಗಿದೆ. ದಲಿತ ಸಂಸ್ಕೃತಿಯ ಸೂಕ್ಷ್ಮಗಳು, ನಂಬಿಕೆ, ಪುರಾಣಗಳೇ ಪ್ರೀತಿಯಿಂದ ಬರೆದ ದಲಿತ ಕಾವ್ಯವನ್ನು ನಾವೀಗ ಕಾಣುತ್ತಿದ್ದೇವೆ. ನಗರದ ಒಬ್ಬ ಬಡವ ಬರೆದದ್ದಕ್ಕೂ ಹಿಂದುಳಿದ ಹಳ್ಳಿಯ ದಲಿತ ಬರೆದುದ್ದಕ್ಕೂ ಕಾವ್ಯ ಬಂಧದ

ದೃಷ್ಟಿಯಿಂದ ವ್ಯತ್ಯಾಸವೇ ಇಲ್ಲವಾಗಿದೆ. ದಲಿತರ ವಿಶಿಷ್ಟ ಲೋಕ ಕಾವ್ಯದಲ್ಲಿ ಬರೆಯದಿದ್ದಲ್ಲಿ ಅದು ಅಧಿಕೃತ ಕಾವ್ಯವಾಗಲಾರದು" . ಎನ್ನುವ ಡಿ.ಆರ್.ಸಿದ್ಧಲಿಂಗಯ್ಯನವರ ಮಾದರಿಯ ಪುನರಾವರ್ತನೆಗಿಳಿದ ದಲಿತ ಸಾಹಿತ್ಯದ ಭಾಷೆಯ ಬಗೆಗೂ ಪ್ರಶ್ನೆಗಳನ್ನು ಎತ್ತುತ್ತಾರೆ. ಈ ಸಮಸ್ಯೆಯನ್ನು ಅರಿತು ದಲಿತ ಭಾಷೆಗೆ ಒಂದು ಅಪರೂಪದ ನೆಲೆ ತಂದು ಕೊಟ್ಟದ್ದು ಮಹಾದೇವರ ಮಾದರಿ.

ದಲಿತ ಸಾಹಿತ್ಯದ ಏಕರೂಪದ ಬಂಧವನ್ನು ಮುರಿದು ಹೊಸ ಭಾಷೆಯಾಗಿ ಮಹಾದೇವರ ಮಾದರಿ ಹುಟ್ಟುಪಡೆದದ್ದು ಒಟ್ಟೂ ಕನ್ನಡ ಸಾಹಿತ್ಯದ ಸಂದರ್ಭದಲ್ಲೇ ಭಾಷೆ ತಾಳಿದ ಮಹಾನ್ ಅವತಾರ ಎಂದೂ ಹೇಳಬಹುದು.

"ಮಹಾದೇವರ ಕಾಮಿಕ್ ಧಾಟಿ ಒಡಲಾಳ', 'ಕುಸುಮಬಾಲೆ', ಕೃತಿಗಳಿಗೆ ತಂದುಕೊಟ್ಟಿರುವ ಉಜ್ವಲತೆ, ಲವಲವಿಕೆ ಗಮನಾರ್ಹವಾದದ್ದು. ಶೋಷಿತರ, ನೊಂದವರ, ದಟ್ಟ ದರಿದ್ರರ ಬಗ್ಗೆ ಬರೆಯುವಾಗಲೂ ಮಹಾದೇವರಲ್ಲಿ ಸುಪ್ತವಾಗಿರುವ ಪ್ರತಿಭೆ, ಜೀವಂತಿಕೆಗಳನ್ನು ಕಾಣಿಸುವ ಬಗೆ ಅದ್ಭುತವಾದದ್ದು. ಇತಿಹಾಸ ಕ್ರೌರ್ಯಕ್ಕೆ ಬಲಿಯಾದ ಜನಾಂಗವೊಂದು ಕ್ರಾಂತಿಗೆ ಸನ್ನದ್ಧವಾಗುತ್ತಿರುವ, ಅವಕಾಶಗಳು ಸಿಕ್ಕರೆ ತನ್ನ ಪ್ರತಿಭೆಯನ್ನು ಸಾಧನೆಯಾಗಿ ರೂಪಾಂತರಿಸಲು ಕಾಯುತ್ತಿರುವ ಉರಿಯುವ ನೆನಪುಗಳ ಜೊತೆ ಚೇತೋಹಾರಿ ಕನಸುಕಾಣುತ್ತಿರುವ ದರ್ಶನ 'ಒಡಲಾಳ', 'ಕುಸುಮಬಾಲೆ' ಗಳಲ್ಲಿ ಮೂಡಿಬರುತ್ತದೆ. ಸರಳ ನಿರಾಶೆ, ಆಸೆಗಳನ್ನು ತಮ್ಮ ವಿನೋದದ ಮೂಲಕ ಗೆದ್ದುಕೊಂಡವರ ಮಹಾದೇವರ ಪ್ರಬುದ್ಧ ಜೀವನ ದೃಷ್ಟಿ ಕನ್ನಡ ದಲಿತ ಸಾಹಿತ್ಯಕ್ಕೆ ಒಂದು ಬಗೆಯ ಆತ್ಮ ವಿಶ್ವಾಸವನ್ನೂ ಸ್ವಾಭಿಮಾನವನ್ನೂ ತಂದುಕೊಟ್ಟಿದೆ" , ಎಂದು ಟಿ.ಪಿ ಅಶೋಕ ಅವರು ಅಭಿಪ್ರಾಯಪಟ್ಟಿದ್ದಾರೆ. ಅವರೇ ತಮ್ಮ 'ಸಾಹಿತ್ಯ ಸಂದರ್ಭ' ಕೃತಿಯಲ್ಲಿ ಮಹಾದೇವರು, "ದೈನಂದಿನ ಜೀವನದ ವಿವರಗಳನ್ನು ಮಾತ್ರವಲ್ಲದೆ ದಂತಕಥೆಗಳು, ನೀತಿಕಥೆಗಳು, ಮಂತ್ರಗಳು, ಗಾದೆಗಳು ಮುಂತಾಗಿ ಮನುಷ್ಯನ ಅಭಿವ್ಯಕ್ತಿಯ ಸಕಲ ಸ್ತರಗಳನ್ನೂ ಒಳಗೊಳ್ಳಲು ಅವರು ಪ್ರಯತ್ನಿಸುತ್ತಾರೆ" ಎಂದು ಹೇಳಿದ್ದಾರೆ.

'ಕುಸುಮಬಾಲೆ' ಶೀಲ-ಅಶ್ಲೀಲ; ಮಡಿ-ಮೈಲಿಗೆಯೆಂಬ ಹಾಗೂ ಪವಿತ್ರ ಅಪವಿತ್ರವೆಂಬ ಎಲ್ಲಾ ಪರಿಕಲ್ಪನೆಗಳನ್ನು ಮೀರಿ ಜೀವಪರ ಪ್ರೀತಿಯಿಂದ ಮಿಡಿಯುತ್ತದೆ. ಮಿತ್‌ಗಳನ್ನು ಒಡೆಯುವ ಮೂಲಕ ಹೊಸಮಿತ್‌ಗಳನ್ನು ಸೃಷ್ಟಿಸುವ ಮೂಲಕ ನಂಜನಗೂಡಿನ ಕನ್ನಡದ ಒಂದು ಉಪಭಾಷೆಯನ್ನು ಸಾಹಿತ್ಯದ ಭಾಷೆಯನ್ನಾಗಿ ಉತ್ತರಿಸುವ ಮೂಲಕ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಅದು ತನ್ನದೇ ಆದ ಸ್ಥಾನವನ್ನು ಸ್ಥಾಪಿಸಿಕೊಂಡಿದೆ."

ಮಹಾದೇವರು ಲಿಖಿತ ಪರಂಪರೆಯ ಭಾಷೆಯನ್ನು ನಿಡಿದ್ದಾರೆ. ಜಾನಪದ ಮಹಾಕಾವ್ಯದ ರೂಪಕತೆ ಹಾಗೂ ಅನನ್ಯತೆ, ಜನರ ಆಡುನುಡಿ ಹಾಗೂ ವರ್ತಮಾನದ

ಬದುಕು, ಕೇವಲ ಚರಿತ್ರೆಯಾಗಿ ನಿಲ್ಲದೆ ಕಾಲಕಾಲಕ್ಕೆ ರೂಪಾಂತರ ಹೊಂದುತ್ತ ದಲಿತ ಲೋಕವನ್ನು ಶೋಧಿಸುವ ಮತ್ತು ಅಭಿವ್ಯಕ್ತಿಸುವ ಭಾಷಾಕ್ರಮ ಮಹಾದೇವರ ಮಾದರಿಗಿದೆ.

ಶಿಷ್ಟ ಸಾಹಿತ್ಯದ ಪರಂಪರೆಯಗೆ ಸವಾಲೊಡ್ಡುವ ಹಾಗೂ ದಲಿತಲೋಕದ ಘನತೆಯನ್ನು ಎತ್ತಿಹಿಡಿಯುವಂಥ ಮಹಾದೇವರ ಭಾಷಾ ಕ್ರಮ ದಲಿತ ಸಾಹಿತ್ಯವು ಪಡೆದ ಒಂದು ಮಹತ್ವದ ಘಟ್ಟ ಎನ್ನಬಹುದು.

ಮಹಾದೇವರ ಹಾಗೂ ಸಿದ್ಧಲಿಂಗಯ್ಯನವರ ಎರಡು ಮಾದರಿಗಳನ್ನು ಗ್ರಹಿಸಿಯೂ ತಮ್ಮದೇ ಆದ ಭಾಷೆಯನ್ನು ರೂಪಿಸಿಕೊಂಡು 'ದಲಿತ ಭಾಷೆಗೆ' ಮಹತ್ವ ತಂದುಕೊಟ್ಟವರಲ್ಲಿ ಕೆ.ಬಿ.ಸಿದ್ದಯ್ಯ, ಮುಳ್ಳೂರು ನಾಗರಾಜ್, ಮನಜ, ವಡ್ಡಗೆರೆ ನಾಗರಾಜಯ್ಯ, ಮೊಗಳ್ಳಿ ಗಣೇಶ್ ಮುಂತಾದವರು ಮುಖ್ಯರಾಗಿದ್ದಾರೆ.

ದಲಿತ ಸಾಹಿತ್ಯದ ಭಾಷೆ ತನ್ನ ಜನಾಂಗೀಯ ಚರಿತ್ರೆ, ಪುರಾಣ ಹಾಗೂ ಸ್ವಾತಂತ್ರ್ಯದ ಪ್ರಶ್ನೆಗಳನ್ನು ಗರ್ಭೀಕರಿಸಿಕೊಂಡಿದೆ. ಈ ಕಾರಣದಿಂದ ಕೆಲವು ಸವರ್ಣೀಯ ವಿಮರ್ಶಾ ಕಲ್ಪನೆಗಳು ದಲಿತ ಸಾಹಿತ್ಯವನ್ನು ಅಂಬೇಡ್ಕರ್ ಭಾವಚಿತ್ರವನ್ನು ಕಾಣುವ ಜಾತಿವಾದಿ ಮನಸ್ಸುಗಳಂತೆ ತುಸು ಅಂತರದಲ್ಲಿ ನೋಡುವುದು ಉಂಟು. ದಲಿತ ಸಾಹಿತ್ಯ ತನ್ನ ಜನಾಂಗೀಯ ಬದ್ಧತೆಯನ್ನು ಮತ್ತು ಭಾಷಾಸ್ವರೂಪವನ್ನು ಮೀರಬೇಕೆಂಬ ನಿರೀಕ್ಷೆ ಸವರ್ಣಿಯ ವಿಮರ್ಶೆಯಾಗಿದೆ ಎನ್ನಬಹುದು. ಅನಂತಮೂರ್ತಿಯವರಂಥ ಲೇಖಕರು ತಮ್ಮ ಜಾತಿ ಮತ್ತು ಸಂಸ್ಕೃತಿಯನ್ನು ಭಾಷೆಯಾಗಿಸಿಕೊಂಡು ನಡೆಸುವ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಹುಡುಕಾಟಗಳು ಶ್ರೇಷ್ಠ ಸಾಹಿತ್ಯ ಎನ್ನಿಸಿಕೊಳ್ಳುವಾಗ, ದಲಿತ ಸಾಹಿತ್ಯವೂ ತನ್ನ ಜಾತಿ ಮತ್ತು ಸಂಸ್ಕೃತಿ ನಿಷ್ಠವಾಗಿ ಕಲೆ ಸೃಷ್ಠಿಸುವುದು ಅಗತ್ಯವಲ್ಲವೇ ಎಂಬ ವಾದಕ್ಕೆ ಈಚೆಗೆ ಹೆಚ್ಚು ಚಾಲನೆ ಸಿಕ್ಕಿದೆ. ಮಹಾದೇವರು ರೂಪಿಸಿದ ಭಾಷೆ ಈ ಸಂಶಯಗಳಿಗೆ ಉತ್ತರ ನೀಡಬಹುದೆಂದು ಕಾಣುತ್ತದೆ. ಈಗಾಗಲೇ ಮಹಾದೇವರ ಹಾದಿಯಲ್ಲಿ ಪ್ರಕಾಶ್ ರಾಜ್ ಮೇಹು ಅವರ 'ತಿಮ್ಮಜ್ಜಿಮ್ಮಾ ಗುಂಡಿ' ತರದ ಕಾದಂಬರಿಗಳೂ ಬಂದಿವೆ. ಹಾಗೆಯೇ ದಲಿತೇತರ ಲೇಖಕರಾದ ಕುಂ. ವೀರಭದ್ರಪ್ಪ, ಕಾ.ತ.ಚಿಕ್ಕಣ್ಣ ತರದವರನ್ನು ಮಹಾದೇವರ ಭಾಷಾ ಮಾದರಿ ಪ್ರಭಾವಿಸಿರುವುದನ್ನು ಗಮನಿಸಿದರೆ ದಲಿತ ಸಾಹಿತ್ಯದ ಭಾಷೆ ಈಚಿನ ಕನ್ನಡ ಸಾಹಿತ್ಯದ ಭಾಷೆಯ ಹೊಸ, ಘಟ್ಟವೊಂದರ ನಿರ್ಮಾಣಕ್ಕೆ ಕಾರಣವಾಗಿರುವುದು ಸ್ಪಷ್ಟವಾಗುತ್ತದೆ.

**ದಲಿತ ಸಾಹಿತ್ಯ ಮತ್ತು ಪ್ರಭುತ್ವ**

“ಅಸ್ಪೃಶ್ಯ' ಎಂಬ ಪದಕ್ಕೆ ಪರ್ಯಾಯವಾಗಿ 'ದಲಿತ' ಎಂಬ ಪದವನ್ನು ಬಳಸಲಾಗುತ್ತಿದೆ. ಈ ಅಂಬೇಡ್ಕರ್ ತಮ್ಮ ಬರವಣಿಗೆಯ ಉದ್ದಕ್ಕೂ ಡಿಪ್ರೆಸ್ಡ್ ಅಂದರೆ 'ದಲಿತ' ಎಂಬ ಪದವನ್ನು ಬಳಸಿದ್ದಾರೆ. ಶಬ್ದಕೋಶದ ಪ್ರಕಾರವಾಗಿಯೂ ನೋವಿಗೆ ಒಳಗಾದ, ತುಳಿಯಲಾದ, ಮುರಿದುಹೋದ ಎಂಬ ಪದಗಳಿರುವುದರಿಂದ ಎಲ್ಲಾ

ವಿವರಗಳೊಂದಿಗೆ ಈ ಅರ್ಥಗಳ ಮಹತ್ವದ ಹೊಂದಾಣಿಕೆಯು ಅಸ್ಪೃಶ್ಯ ಜನಾಂಗದೊಂದಿಗೆ ಮಾತ್ರ ಆಗುವಂಥಾದ್ದಾಗಿದೆ. ಆದ್ದರಿಂದ 'ದಲಿತ' ಅಂದರೆ ಅಸ್ಪೃಶ್ಯ ಹಾಗೂ ಸಣ್ಣ ಪ್ರಮಾಣದಲ್ಲಿ ಅಸ್ಪೃಶ್ಯತೆಯ ಅನುಭವವಿಲ್ಲದಿದ್ದರೂ ಅತ್ಯಂತ ವೇದನೆಗೆ ಒಳಗಾದ, ಚದುರಿ ಹೋಗಿರುವ ಜನಾಂಗದ ಪ್ರತಿನಿಧಿಗಳೂ ಪ್ರಗತಿಪರ ದಲಿತ ಸಂಘಟನೆಯೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡು ತಮ್ಮ ಸಾಹಿತ್ಯ ಮತ್ತು ಸಂಘಟನೆಗಳ ಮೂಲಕ ಅಸ್ಪಶ್ಯತೆಯನ್ನು ಅಸಮಾನತೆಯನ್ನೂ ತೊಡೆದುಹಾಕಲು ಪ್ರಯತ್ನಿಸುವಂಥವರೂ ಆಗಿರುತ್ತಾರೆ. ಅಂದರೆ ತಲೆತಲೆಮಾರಿನಿಂದ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ಜನಾಂಗದವರು ಮಾತ್ರ 'ದಲಿತರು' ಎಂದು ಸ್ಪಷ್ಟವಾಗಿ ತಿಳಿಯಬೇಕು. ಇವರು ತಮ್ಮ ನೋವನ್ನು ಅತ್ಯಂತ ಸಮರ್ಥವಾಗಿ ಭಾಷೆಯ ಮುಖಾಂತರ ಸೃಷ್ಟಿಸುವಂಥದ್ದೇ ದಲಿತ ಸಾಹಿತ್ಯ" .

ಮಹಾರಾಷ್ಟ್ರದ ದಲಿತ ಸಾಹಿತಿ ಗಂಗಾಧರ ಪಟವಾಣಿಯವರು "ನನಗೆ ದಲಿತ ಎನ್ನುವುದು ಒಂದು ಜಾತಿ ಅಷ್ಟೇ ಅಲ್ಲ. ಈ ದೇಶದ ಸಂಪ್ರದಾಯದ ಚೌಕಟ್ಟಿನಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿಸಲಾಗಿರುವವನು. ಇವನಿಗೆ ದೇಶದ ರಕ್ತದಲ್ಲಿ ತುಂಬಿಕೊಂಡಿರುವ ದೇವರು-ಧರ್ಮ-ಪುನರ್ ಜನ್ಮ-ಪವಿತ್ರ ಗ್ರಂಥಗಳು-ಸ್ವರ್ಗ- ನರಕ ಮುಂತಾದವುಗಳಲ್ಲಿ ನಂಬಿಕೆಯಿಲ್ಲ. ಯಾಕೆಂದರೆ ಅವುಗಳೆಲ್ಲಾ ಇವನನ್ನು ಗುಲಾಮನನ್ನಾಗಿ ಮಾಡಿರುವಂಥವು. ಮಾನವೀಯತೆಯಲ್ಲಿ ಇವನಿಗೆ ನಂಬಿಕೆ ಇದೆ. ಬದಲಾವಣೆಯ ಮತ್ತು ಕ್ರಾಂತಿಯ ನಿಜವಾದ ಸಂಕೇತವೇ ಈ ಹೊತ್ತಿನ ದಲಿತ" ಎಂದು ವ್ಯಾಖ್ಯಾನಿಸಿದ್ದಾರೆ.

ಮರಾಠಿಯಲ್ಲಿ 'ದಲಿತ' ಪದಕ್ಕೆ ಬದಲಾಗಿ 'ಬೌದ್ಧ' ಶಬ್ದವನ್ನು ಬಳಸುವ ಪ್ರಯತ್ನವನ್ನು ಮಾಡಿದರು. ಆ ಪದ ದಲಿತ ಪದಕ್ಕಿಂತ ವ್ಯಾಪಕ ಅರ್ಥ ಹೊಂದಿದೆ ಎಂಬ ಕಾರಣಕ್ಕಾಗಿ ಬಳಸಲು ಶುರು ಮಾಡಿದವರು. ಆದರೆ ಅದು ರೂಢಿಗೆ ಬರಲಿಲ್ಲ.

ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಯಾರು ಗಮನಕ್ಕೆ ಒಳಗಾಗಿರುತ್ತಾರೋ ಅವರೆಲ್ಲ ದಲಿತರು. ಅಸ್ಪೃಶ್ಯರ ಜೊತೆ ಇತರ ಅನ್ಯಜಾತಿಯ ಬಡವರೂ ಇದರಲ್ಲಿ ಸೇರುತ್ತಾರೆಂದು ಲೋಹಿಯಾವಾದಿ ಗಳು ಅಭಿಪ್ರಾಯಪಟ್ಟರು. ಭಾರತದ ಶ್ರೇಣಿಕೃತ ಸಮಾಜದಲ್ಲಿ ಅತ್ಯಂತ ಕೆಳಗಿನವರೆಂದು ಕರೆಯಲ್ಪಡುವ ಅಸ್ಪೃಶ್ಯರೇ ದಲಿತರು ಎಂಬ ವಾದವನ್ನು ಅಂಬೇಡ್ಕರ್ ವಾದಿಗಳು ಎತ್ತಿಹಿಡಿದರು. ಮುಂದೆ ಆ ಪದವೇ ರೂಢಿಗೆ ಬಂತು.

ದಲಿತರು ಅಸಲೀ ಅನುಭವಗಳನ್ನು ದಲಿತ ಲೇಖಕ ಮಾತ್ರ ಬರೆಯಲು ಸಾಧ್ಯ. ಉಳಿದವರಿಗೆ ದಲಿತರ ಅಧಿಕೃತ ಬದುಕನ್ನು ಅಭಿವ್ಯಕ್ತಿಸಲಾಗದು ಎನ್ನುವಂಥ ವಾದಗಳು ಬೆಳೆದವು. ಇದರ ಪರಿಣಾಮವಾಗಿ ದಲಿತೇತರರು ದಲಿತರ ಬಗ್ಗೆ ಬರೆದದ್ದನ್ನು ಅನುಕಂಪ ಸಾಹಿತ್ಯವೆಂದು ಗುರುತಿಸಲಾಯಿತು. ಈ ಹಿನ್ನೆಲೆಯಲ್ಲಿ ಕಾರಂತರ



'ಜೋಮನದುಡಿ' ಕೃತಿಯ ಬಗೆಗೆ ಆಗಿರುವ ಚರ್ಚೆಗಳನ್ನು ಗಮನಿಸಬಹುದು. ಹೀಗೆ ದಲಿತರ ಬಗೆಗೆ ದಲಿತನಿಗಷ್ಟೇ ಬರೆಯಲು ಸಾಧ್ಯ ಎಂಬ ತೀರ್ಮಾನಗಳು ಸಾಹಿತ್ಯವನ್ನು ಅನುಭವನಿಷ್ಠ ಹಾಗೂ ಸತ್ಯನಿಷ್ಠ ನೆಲೆಗೆ ಕೊಂಡೊಯ್ದವು. ಈ ರೀತಿಯ ಚರ್ಚೆಯಿಂದ ಆದ ಬದಲಾವಣೆಯೆಂದರೆ 'ಬದ್ಧತೆಗೆ ಸಂಬಂಧಿಸಿದ್ದು, ಬಂಡಾಯ ಸಾಹಿತ್ಯದ ಬದ್ಧತೆಗೆ ಸಾರ್ವಜನಿಕತೆ ಇದ್ದರೆ, ದಲಿತ ಸಾಹಿತ್ಯದ ಬದ್ಧತೆಗೆ ಜನಾಂಗ ಮತ್ತು ಆ ಬದುಕು ಮುಖ್ಯವಾಯಿತು. ಆದ್ದರಿಂದಲೇ ದಲಿತ ಸಾಹಿತಿ ಬಂಡಾಯ ಸಾಹಿತಿಯಾಗಬಲ್ಲ, ಆದರೆ ಬಂಡಾಯ ಸಾಹಿತಿ ದಲಿತ ಸಾಹಿತಿ ಆಗಲಾರ' ಎಂಬ ವಾದಗಳು ಸೃಷ್ಟಿಯಾದವು.

**ದಲಿತ ಸಾಹಿತ್ಯದ ಕೆಲವು ಪ್ರಮುಖ ನೆಲೆಗಳೆಂದರೆ**

9. ಶತಮಾನಗಳಿಂದ ಚರಿತ್ರೆಯ ಗೋರಿಗಳಲ್ಲಿ ಹೂಳಲ್ಪಟ್ಟ ಅಸ್ಪಶ್ಯ ಜನಾಂಗದ ಕರಾಳ ಜೀವನವನ್ನು ಹೊರತೆಗೆಯುವುದು.

೩. ಚರಿತ್ರೆಯಿಂದ ಕಂಡುಕೊಂಡು ಅಸ್ಪೃಶ್ಯ ಜನಾಂಗದ ಜೀವನದ ಮೇಲೆ ಘಟಿಸಿರುವ ಸಾಮಾಜಿಕ, ಸಾಂಸ್ಕೃತಿಕ ಆಕ್ರಮಣಗಳನ್ನು ಅರ್ಥೈಸುತ್ತಲೇ ಎಚ್ಚರಗೊಳ್ಳುವುದು.

೪. ಚರಿತ್ರೆಯ ಭೂತಕಾಲದಲ್ಲಿ ಅಸ್ಪೃಶ್ಯ ಜನಾಂಗಕ್ಕಾಗಿ ಸ್ವಾತಂತ್ರ್ಯ ಚಳುವಳಿ ರೂಪಿಸುವುದು.

೫. ದಲಿತ ಲೋಕದ ಬಗೆಗೆ ದಲಿತ ಮಾತ್ರ ಬರೆಯುವುದರಿಂದ ಬರೆಯುವಂಥ ಬಿಡುಗಡೆ ಹಾಗೂ ಅವನ ಸಮುದಾಯದ ಬಿಡುಗಡೆಯನ್ನು ಕಂಡುಕೊಳ್ಳುವುದು.

ಹೀಗೆ ವಿವಿಧ ನೆಲೆಗಳಲ್ಲಿ ದಲಿತ ಸಾಹಿತ್ಯ ಚಾಚಿಕೊಂಡಿದೆ.

ಭಾರತದ ಜಾತಿಪದ್ಧತಿಯ ಲಕ್ಷಣವೇ ಮನುಷ್ಯನನ್ನು ಗುಲಾಮನನ್ನಾಗಿ ಮಾರ್ಪಡಿಸುವುದಾಗಿದೆ. ಸಹಜವಾದ ಜೀವನವನ್ನು ಗುಲಾಮನನ್ನಾಗಿ ಮಾರ್ಪಡಿಸುವುದಾಗಿದೆ. ಸಹಜವಾದ ಜೀವನವನ್ನು ಅಸಹಜಗೊಳಿಸಿ ಪಾಲಿಸಬೇಕಾದ ಒತ್ತಡವನ್ನು 'ಧರ್ಮ' ಎಂದು ಸಾರುವುದು ಜಾತಿ ಪದ್ಧತಿಯ ಮತ್ತೊಂದು ಮುಖ್ಯವಾಗಿದೆ. ಮಾನವರಲ್ಲಿ 'ಪ್ರಭುತ್ವ' ಹಾಗೂ 'ಅಸ್ಪೃಶ್ಯತೆ' ಎಂಬ ಎರಡು ಘಟ್ಟಗಳ ಸೃಷ್ಟಿಗೆ ಮೂಲ ನೆಲೆಯಾಗಿ ಜಾತಿ ಪದ್ಧತಿ ಅಸ್ತಿತ್ವ ಪಡೆದುಕೊಂಡಿದೆ.

ಜಾತಿಪದ್ಧತಿಯ ಶಿಶುಗಳಂತೆ ರೂಪಗೊಂಡ ಭಾರತೀಯ ಸಮಾಜದ ಕಲೆ, ಸಾಹಿತ್ಯ, ಸಂಸ್ಕೃತಿಯ ರೂಪಗಳು ಆಳದಲ್ಲಿ ಆ ಪದ್ಧತಿಯ ಪರ ಅಥವಾ ತಟಸ್ಥ ನಿಲುವಿನಿಂದ ಬಹಳ ಕಾಲದವರೆಗೆ ಮಹಾಪಾತ್ರಗಳು ಒಬ್ಬರನ್ನೊಬ್ಬರು ಶೋಷಿಸುತ್ತಾ ತಾವು ತಾವುಗಳು ಮೇಲೆ ಬರಹ ಹಾತೊರೆದಿದ್ದಾರೆ. ದಶರಥ ಮಹಾರಾಜ ತನ್ನ ಕ್ಷುದ್ರ ಕಾಮದ ಆಸೆಯಿಂದಾಗಿ ಮುಂಚೆಯೇ ಚಕ್ರವರ್ತಿಯನ್ನಾಗಿಸಬೇಕೆಂದು ರಾಮ ಕಾಡಿಗೆ ಹೋಗುವಂತಹ ವರವನ್ನು ಕೇಳುತ್ತಾಳೆ. ಮಕ್ಕಳಲ್ಲಿ ಯಾರು ಚಕ್ರವರ್ತಿಯಾದರೂ ಸಂತೋಷದಿಂದ ಇರಬಹುದಾಗಿದ್ದ ದಶರಥ ರಾಮನ ಮೇಲಿದ್ದ ಅತಿಯಾದ ಆಸೆಯಿಂದ



ರಾಮ ಚಕ್ರವರ್ತಿಯಾಗಲಿಲ್ಲವೆಂಬ ಆಸೆಯಿಂದ ಕೊರಗಿ ಸಾಯುತ್ತಾನೆ. ಸೀತೆ ರಾಮನ ಮೇಲಿನ ಆಸೆಯಿಂದ ಕಾಡಿಗೆ ಹೋಗುತ್ತಾಳೆ. ರಾವಣ ಸೀತೆಯ ಮೇಲಿನ ಆಸೆಯಿಂದ ಅವಳನ್ನು ಒಯ್ಯುತ್ತಾನೆ. ಮುಂದೆ ಸೀತೆಯನ್ನು ಬಿಡಿಸಲು ಹೋಗುವಾಗ ಸುಗ್ರೀವನ ಮೇಲಿನ ಆಸೆಯ ಕಾರಣವಾಗಿ ವಾಲಿಯನ್ನು ರಾಮ ಅಧರ್ಮಮಾರ್ಗದಿಂದ ಕೊಲ್ಲುತ್ತಾನೆ. ವಾನರ ಅಸಂಖ್ಯಾತ ಮನುಷ್ಯರ ಕಗ್ಗೊಲೆಯಾಗುವುದು ಒಬ್ಬರ ಮೇಲೆ ಮತ್ತೊಬ್ಬರಿಗೆ ಇದ್ದ ಆಸೆಯ ಕಾರಣದಿಂದ, ಅರ್ಥಾತ್ ಒಬ್ಬರು ಮತ್ತೊಬ್ಬರನ್ನು ಶೋಷಣೆ ಮಾಡಿ ತಮ್ಮ ಇಷ್ಟವನ್ನು ಪೂರೈಸಿಕೊಳ್ಳಬೇಕು ಎಂಬುದರಿಂದ ಹುಟ್ಟಿರುವಂತಹವು. ಹೀಗೆ ಒಬ್ಬರನೊಬ್ಬರು ಶೋಷಣೆ ಮಾಡಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಲು ನೋಡುವ ಈ ಕೃತಿಯ ಜನ ನಮ್ಮ ದೇವತೆಗಳಾಗಿದ್ದಾರೆ.(೩)ಎಂಬ ದೇವಯ್ಯ ಹರವೆಯವರ ಮಾತಿನಲ್ಲಿ ಪ್ರಭುತ್ವ ಕೇಂದ್ರಿತ ಚಿಂತನೆ ಸಾಹಿತ್ಯ ಕೃತಿಗಳನ್ನು ಪ್ರಭಾವಿಸಿರುವುದನ್ನು ಕುರಿತ ಸೂಚನೆಗಳಿವೆ.

ಜಾತಿ ಸಮಾಜದಲ್ಲಿ ಹುಟ್ಟುವ ಸೃಜನಶೀಲತೆ ಅನೇಕ ಸಲ ಜಾತಿಯ ಸೂಕ್ಷ್ಮ ಆಕ್ರಮಣಕ್ಕೆ ಒಳಗಾಗಿ ತನ್ನ ಧ್ವನಿಯ ಬಗ್ಗೆ ಅನುಮಾನಗಳಿಗೆ ಕಾರಣವಾಗುದುಂಟು. ಅಂದರೆ ಪ್ರಭುತ್ವ ಎನ್ನುವುದು ಎಲ್ಲವನ್ನೂ ನಿಯಂತ್ರಿಸುವ ಶಕ್ತಿ ಪಡೆದಿರುತ್ತದೆ.

“ದಶರಥ, ರಾಮ, ಸೀತೆ.... ಮುಂತಾದವರ ವಿವರಗಳನ್ನು ಹೇಳುವ ರಾಮಾಯಣ, ರಾಮನಂಥವನ ಪತಿವ್ರತೆಗೆ ಈಲಿಮಾಡಿಕೊಟ್ಟ ಚಿತ್ರವಿಚಿತ್ರವಾದ ಒಡವೆ ಗಳನ್ನು ಮಾಡಿಕೊಟ್ಟ ಅಕ್ಕಸಾಲಿಗನ ಚಿತ್ರಣವನ್ನು ಅವನ ಬದುಕಿನ ವಿವರಗಳನ್ನು ಯಾಕೆ ಕೊಡಲಿಲ್ಲ? ರಾಮನ ರಾಜ್ಯಕ್ಕೆ ಬೇಕಾದ ಅಕ್ಕಿ, ರಾಗಿ, ಜೋಳ, ಬೇಳೆ ಬೆಳೆದುಕೊಟ್ಟ ರೈತ ಅಂದು ಏನಾಗಿದ್ದ? ವೈಭೋಜನವನ್ನು ಉಂಡು ಕಕ್ಕಸು ಮಾಡಿ ಬಂದ ರಾಮನ ಪರಿವಾರದವರ ಕಕ್ಕಸನ್ನು ತಲೆಯ ಮೇಲೆ ಎತ್ತಿಕೊಂಡು ಹೋಗಿ ಸ್ವಚ್ಛ ಮಾಡಿದ ಒಬ್ಬ ಜಾಡಮಾಲಿಯ ಚಿತ್ರ ಯಾಕೆ ಒಡಮೂಡಲಿಲ್ಲ? ರಾಮನ ಪರಿವಾರದವರಿಗೆ ಚಿತ್ರವಿಚಿತ್ರವಾದ ಬೂಟು ಮೆಟ್ಟು ಹೊಲಿದ ಒಬ್ಬ ಚಮ್ಮಾರನ ಜೀವನ ಚಿತ್ರಣ ಯಾಕೆ

ಮೂಡಿರಲಿಲ್ಲವೆಂದು ಕೇಳಬೇಕಾಗಿದೆ" ಎಂದು ದೇವಯ್ಯ ಹರವೆಯವರು ಪ್ರಶ್ನೆ ಎತ್ತುತ್ತಾರೆ. ಅವರ ಮಾತಿನ ಹಿಂದೆ ಕಲೆಯೂ ಕೂಡ ಒಂದು ಬಗೆಯ ಪ್ರಭುತ್ವವಾಗಿರುವ ಸಾಧ್ಯತೆಗಳಿವೆ,' ಅಂಥ ಕಲೆ ನಿರ್ಲಕ್ಷಿತ ಸಮುದಾಯದ ಬಗೆಗೆ ದೃಷ್ಟಿಹರಿಸದಂತೆ ಇರಬಲ್ಲುದು ಎನ್ನುವ ಅಂಶಗಳು ಕಂಡುಬರುತ್ತವೆ. ಇಂಥ ಪ್ರಭುತ್ವವಾದಿ ಕಲೆಗೆ ವಿರುದ್ಧವಾಗಿ ಹುಟ್ಟಬೇಕೆಂಬ ಧೋರಣೆ ದಲಿತ ಸಾಹಿತ್ಯದ ಮುಖ್ಯ ಲಕ್ಷಣಗಳಲ್ಲಿ ಒಂದೆಂಬುದು ಗಮನಾರ್ಹ.

'ಪ್ರಭುತ್ವ' ಕೇವಲ ಸಾಮಾಜಿಕ ಅಂಶವಷ್ಟೇ ಆಗಿರದೆ ಸಾಂಸ್ಕೃತಿಕ, ಆರ್ಥಿಕ ಅಂಶವೂ ಆಗಿರುತ್ತದೆ. ವ್ಯಕ್ತಿಯ ಜೀವಿತಕ್ಕೆ ಅಗತ್ಯವಾದ ಎಲ್ಲ ನೆಲೆಗಳೂ ತಮ್ಮೊಳಗೆ ಯಜಮಾನಿಕೆಯ ಹಲ್ಲುಗಳನ್ನು ಒಳಗೊಂಡಿರುವುದು ಜಾತಿರಾಷ್ಟ್ರದ ವಾಸ್ತವವಾಗಿದೆ. ಇಂಥ ಪ್ರಭುತ್ವವನ್ನು ವಿರೋಧಿಸುವ ಸೃಜನಶೀಲತೆ ಎಲ್ಲ ಕಾಲದಲ್ಲೂ ಅವತರಿಸುತ್ತಲೇ



ಬಂದಿರುವುದು ಗಮನಾರ್ಹ. ಪ್ರಾಚೀನ ಸಾಹಿತಿಗಳಲ್ಲಿ ಪ್ರಭುತ್ವದ ಆಶ್ರಯದಲ್ಲಿದ್ದೂ ಅದರ ಕ್ರೌರ್ಯದ ವಿರುದ್ಧ ನಿಲ್ಲುವಂಥ ಸೃಜನಶೀಲತೆ ಪ್ರಕಟವಾಗಿರುವುದು ಮಾತಿಗೆ ನಿದರ್ಶನವಾಗಬಲ್ಲುದು.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನಾವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಘಟ್ಟಗಳೆಂದು ಗುರುತ್ತಿಸುತ್ತಿದ್ದೇವೆ. ಈ ಘಟ್ಟಗಳಿಗಿಂತ ಹಿಂದಿನ ಕನ್ನಡ ಸಾಹಿತ್ಯ ರೂಪಕ್ಕೆ ಸಮಾಜದ ನಿರ್ಲಕ್ಷಿತರ ಹಾಗೂ ಹಿಂಸೆಗೊಳಗಾದವರ ಪರ ಬದ್ಧವಾಗಿ ನಿಂತು ಅಭಿವ್ಯಕ್ತಿಯಾಗುವ ಅವಕಾಶ ಇರುವಂತೆ ಕಾಣದಿದ್ದರೂ ಒಂದು ಮಾನವೀಯ ನೆಲೆಯನ್ನು ಶೋಧಿಸುವ ತುಡಿತವಿರುವುದು ಗೋಚರಿಸುತ್ತದೆ.

ಆಧುನಿಕ ಸಾಹಿತ್ಯದ ಆರಂಭ ಘಟ್ಟ ಆಂಗ್ಲ ಶಿಕ್ಷಣದ ಪ್ರಭಾವದಿಂದ ಒಂದು ಹೊಸ ಆಯಾಮವನ್ನು ಪಡೆದುಕೊಂಡಿತು. ಆಂಗ್ಲಭಾಷೆ ಯಜಮಾನಿಕೆಯ ವಿರುದ್ಧ ಪ್ರತಿಭಟಿಸುವಂಥ ಎದೆಗಾರಿಕೆಯನ್ನು ಎಲ್ಲ ವಲಯಕ್ಕೂ ತಂದುಕೊಟ್ಟಿತು. ಬ್ರಿಟಿಷರ ವಿರುದ್ಧ ದಂಗೆಯೆದ್ದ ದೇಶೀ ಸಾಹಿತ್ಯಕ್ಕೆ ವ್ಯವಸ್ಥೆಯ ಆಂತರಿಕ ಹಿಂಸೆಯ ವಿರುದ್ಧ ದಂಗೆಯೇಳುವ ಒಳನೋಟವನ್ನು ಹಾಗೂ ಬಲವನ್ನು ಆಂಗ್ಲ ಶಿಕ್ಷಣ ತಂದುಕೊಟ್ಟಿದ್ದು ಒಂದು ಮುಖ್ಯ ವಿಚಾರವಾಗಿದೆ.

ಒಟ್ಟಾರೆಯಾಗಿ 'ಪ್ರಭುತ್ವ' ಪ್ರಾಚೀನ ಕಾಲಘಟ್ಟದಲ್ಲಿ ಜಾತಿ ಪದ್ಧತಿಯ ಸಮಾಜವನ್ನು ಸೃಷ್ಟಿಸಿದರೆ, ಸಮಕಾಲೀನ ಜಾತಿಪದ್ಧತಿಯ ಸಮಾಜದಲ್ಲಿ ಪ್ರಭುತ್ವದ ಕಲ್ಪನೆಯನ್ನು ಜಾತಿ-ಅಧಿಕಾರ ಕೇಂದ್ರಗಳು ಅಧಿಕಾರ ರಾಜಕಾರಣ-ಮೂಲಭೂತವಾದಿ ಪ್ರತಿಗಾಮಿ ಸಂಘಟನೆಗಳು ಭ್ರಷ್ಟಾಚಾರದ ಅಟ್ಟಹಾಸ ಮುಂತಾದವುಗಳನ್ನೊಳಗೊಂಡ ಒಂದು ಗುಚ್ಛವನ್ನಾಗಿ ನೋಡಬಹುದು.

'ಪ್ರಭುತ್ವ' ಯಾವಾಗಲೂ ಬಹುಸಂಖ್ಯಾತ ಪ್ರತಿಗಾಮಿ ಮತ್ತು ಜಾತೀಯತೆಯ ಜನರ ಮೌಲ್ಯಗಳನ್ನೇ ಪ್ರತಿಪಾದಿಸುತ್ತಿರುತ್ತದೆ. ಹೀಗಾಗಿ ದಮನದ ಪರಂಪರೆಯನ್ನು ಮುಂದುವರೆಸುವ ಕೇಂದ್ರವೂ ಆಗಿರುತ್ತದೆ. ಈ ನೆಲೆಯಿಂದ ಆಳ್ವಿಕೆ ನಡೆಸುವ ಪ್ರಭು ಯಾವುದೇ ಒಂದು ಪ್ರಗತಿಪರ ಕನಸಿಗೆ ಒತ್ತುಕೊಡುವ ಸ್ವಾತಂತ್ರ್ಯವನ್ನು ಕಳೆದುಕೊಂಡಿರುತ್ತಾನೆ. ಅಸ್ಪೃಶ್ಯತೆಯ ನಿರ್ಮೂಲನೆ ಆತನ ಕನಸಾಗಿರುವುದಿಲ್ಲ. ಪ್ರಜಾಪ್ರಭುತ್ವವೂ ಕೂಡ ಇಂಥ ಜಾಲದಲ್ಲಿ ಸಿಲುಕಿದೆ.

ಈ ಹಿನ್ನೆಲೆಯಲ್ಲಿ ಅಸ್ಪೃಶ್ಯ ಸಮುದಾಯ ಪ್ರಭುತ್ವದ ಬಹುಮುಖೀ ನೆಲೆಗಳನ್ನು ಶೋಧಿಸುತ್ತ ಅದನ್ನು ಮಾನವೀಯಗೊಳಿಸುವ ಹಾಗೂ ಅದರಿಂದ ಬಂಧಿತವಾಗಿದ್ದರೆ ಬಿಡಿಸಿಕೊಳ್ಳುವ ಹಾಗೂ ಅದನ್ನು ನಾಶಮಾಡುವ ಧೋರಣೆಗೆ ಮುಂದಾಗಬೇಕು. ಇಲ್ಲವಾದರೆ ಜಾತಿ ಪದ್ಧತಿಯ ಪ್ರಭುತ್ವದ ಬೇರುಗಳು ದಲಿತಲೋಕಕ್ಕೂ ಇಳಿದು ಪ್ರಗತಿಪರ ಸಮಾಜವನ್ನು ಹಿಂಚಲನೆ ಗಿಳಿಸುವ ಅಪಾಯಗಳಿವೆ. “ ದಲಿತರ ಮೇಲಿನ ಹಲ್ಲೆಗಳು ತೀವ್ರವಾದಷ್ಟೂ, ದಲಿತರ ಹೋರಾಟ ತೀವ್ರವಾದಷ್ಟೂ, 'ಪ್ರಭುತ್ವ' ಪರದೆಯ



ಹಿಂದೆ ತನ್ನ ಹಿಂಸಾಚರನೆಗೆ ಸನ್ನದ್ಧವಾಗಿರುತ್ತದೆ. ಹೀಗಾಗಿ ನಾಗರಿಕ ಸಮಾಜದ ಅನಿವಾರ್ಯ ವಿಧಿ ಎಂದು ನಾನು ನಂಬಿದ್ದೇನೆ.” ಎಂಬುದಾಗಿ ಡಿ.ಆರ್. ನಾಗರಾಜ್ ಅಭಿಪ್ರಾಯ ಪಡುತ್ತಾರೆ.

ಈ ಹಿನ್ನೆಲೆಯಲ್ಲಿ 'ಪ್ರಭುತ್ವ'ದ ವಿರುದ್ಧ ದಂಗೆಯನ್ನು ಜೀವಂತವಾಗಿಟ್ಟುಕೊಂಡು ಆಧುನಿಕ ಕನ್ನಡ ಸಾಹಿತ್ಯದ ಹಿಂದಿನ ಘಟ್ಟಗಳ ಬರವಣಿಗೆಯ ಸ್ವರೂಪವನ್ನು ಸ್ಫೋಟಿಸಿ ಮೈದಾಳಿದ್ದು ದಲಿತ ಸಾಹಿತ್ಯ. ಇಂಥ ದಲಿತ ಸಮುದಾಯ ತನ್ನೊಳಗೆ ಇಳಿಯುತ್ತಿರುವ ಮೇಲು(ಉದಾ: ಎಡ, ಬಲ) ಕೀಳು ಎಂಬ ಪ್ರಭುತ್ವವಾದಿ ಜಾತೀಯತೆಯನ್ನು ಎಚ್ಚರದಿಂದ ಕಾಣುತ್ತ ತನ್ನ ಚಳುವಳಿಯನ್ನು ಮುಂದುವರೆಸಬೇಕಾಗುತ್ತದೆ.

**ಸಾಹಿತ್ಯದ ಬದ್ಧತೆ ಮತ್ತು ಹೋರಾಟ**

ಇಂಗ್ಲೀಷಿನ 'commitment' ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ “ಬದ್ಧತೆ' ಎಂಬ ಪದ ಬಳಕೆಯಾಗಿದೆ. 'ಬದ್ಧತೆ' ಎಂಬುದಕ್ಕೆ 'ನಿಷ್ಠವಾಗಿರುವುದು, “ನಿಲುವು' 'ಪರವಾಗಿರುವುದು' ಮೊದಲಾದ ಅರ್ಥಗಳಿವೆ.

ಕನ್ನಡ ಸಾಹಿತ್ಯದಲ್ಲಿ ಬದ್ಧತೆ'ಯನ್ನು ಕುರಿತ ಚಿಂತನೆಯನ್ನು ಪ್ರಾಚೀನ ಕವಿಗಳಲ್ಲಿಯೇ ಕಾಣಬಹುದು. ಪಂಪನ 'ಬೆಳಗುವೆನಿಲ್ಲಿ ಲೌಕಿಕಂ ಅಲ್ಲಿ ಜಿನಾಗಮಮುಂ' ಎಂಬ ಹೇಳಿಕೆಯಲ್ಲಿಯೇ ಬದ್ಧತೆಯ ಬೇರುಗಳಿವೆ.

ಸಾಮಾಜಿಕ ಬದ್ಧತೆ, ತಾತ್ವಿಕ ಬದ್ಧತೆ, ಧಾರ್ಮಿಕ ಬದ್ಧತೆ ಹೀಗೆ ನಾನಾ ನೆಲೆಗಳಲ್ಲಿ ಪ್ರಕಟವಾಗುವ 'ಬದ್ಧತೆ' ಕುರಿತ ಚರ್ಚೆ ಹೆಚ್ಚು ಪ್ರಖರಗೊಂಡಿದ್ದು ಪ್ರಗತಿಶೀಲ ಸಾಹಿತ್ಯದಲ್ಲಿ “ಸಾಹಿತಿಯ ಧ್ಯೆಯ ಆತೋಲ್ಲಾಸನ ಪರತೆಯಲ್ಲ,

ಸ್ವಪ್ರತಿಷ್ಠೆಯ ಪ್ರಸಾರವೂ ಅಲ್ಲ, ಅವನು ದೇಶವನ್ನು ಕಟ್ಟುವ ಶಿಲ್ಪಿಗಳಲ್ಲಿ ಒಬ್ಬ, ಅವನ ಮಹಾಯುಧ ಲೇಖನಿ. ಅದರ ಪ್ರಭಾವದಿಂದ ಅವನು ಸತ್ತವರನ್ನು ಬದುಕಿಸಬಲ್ಲ; ಬದುಕಿವರನ್ನು ಸಾಯಿಸಬಲ್ಲ." ಎಂಬ ನಂಬಿಕೆ ಪ್ರಗತಿಶೀಲ ಸಾಹಿತ್ಯದ ಪ್ರಣಾಳಿಕೆಯಲ್ಲಿ ಕಂಡುಬರುತ್ತದೆ.

ಪ್ರಗತಿಶೀಲ ಸಾಹಿತ್ಯ ಲೇಖಕ ಮತ್ತು ಆತನ ಬರಹಗಳಿಗೆ ಇರುವ ಸಾಮಾಜಿಕ ರೂಪೀಕರಣ ಶಕ್ತಿಯ ಬಗೆಗೆ ದೃಢವಾದ ವಿಶ್ವಾಸ ಹೊಂದಿತ್ತು ಎಂಬ ಅಂಶ ಮೇಲಿನ ಅವರ ಪ್ರಣಾಳಿಕೆ ಮಾತುಗಳಿಂದ ತಿಳಿದುಬರುತ್ತದೆ. ನಂತರ ಬಂದ ಪ್ರಗತಿಪಂಥ ಬದ್ಧತೆಯ ಬಗೆಗೆ ತಳೆದ ಕಲ್ಪನೆ ಹೀಗಿದೆ, "ನಮ್ಮ ಕಲೆಯೂ ಸಾಹಿತ್ಯವೂ ಒಳ್ಳೆಯ ಬದುಕಿಗಾಗಿ ಜನತೆ ನಡೆಸುವ ಹೋರಾಟದೊಡನೆ ಸಂಬಂಧಿತವಾಗಿದೆ. ಅಸಹಾಯಕತೆಯ, ನಿರಾಸೆಯ ಸಾಹಿತ್ಯ ಪ್ರಗತಿ ಪಂಥೀಯರಿಗೆ ಸದಾ ಪರಕೀಯ. ಇಂಥ ಪ್ರವೃತ್ತಿಗಳು ಮಾನವನ ಕರ್ತೃತ್ವ ಶಕ್ತಿಯನ್ನು ಹಾಸಗೊಳಿಸುತ್ತವೆ. ಉತ್ತಮ ಜೀವನದ ಬಗೆಗಿನ ಅವನ ಕನಸುಗಳನ್ನು ಮಣ್ಣುಗೂಡಿಸುತ್ತವೆ. ಆ ಕನಸುಗಳು ಮೂರ್ತರೂಪ ತಾಳುವಂತೆ ತಮ್ಮ ಕತೆಗಳ ಮೂಲಕ ನೆರವಾಗುವುದೇ ಪ್ರಗತಿಪಂಥೀಯರ ಕರ್ತವ್ಯ. ಲೇಖನಿ, ಕುಂಚ, ಬರಹಗಾರರು ಮತ್ತು ಕಲಾವಿದರ ಉಪಕರಣಗಳು.



ನಮ್ಮ ಭಾವನೆ ಚಿಂತನೆ ವಿಚಾರಗಳನ್ನೆಲ್ಲ ಬೋಧಪೂರ್ಣವಾಗಿ ವ್ಯಕ್ತಪಡಿಸಲು ಆ ಉಪಕರಣಗಳನ್ನು ನಾವು ಬಳಸುತ್ತೇವೆ."

ಪ್ರಗತಿಪಂಥಿಯರೂ ಕೂಡ ಬರಹಗಾರರ ಹಾಗೂ ಕಲಾವಿದರ ಸಾಮಾಜಿಕ ಜವಾಬ್ದಾರಿಯನ್ನು ಕುರಿತು ಅಚಲ ನಿರ್ಧಾರಗಳನ್ನು ಕೈಗೊಳ್ಳುವ ಮೂಲಕ 'ಬದ್ಧತೆ'ಗೆ ಹೊಸ ನೆಲೆ ಒದಗಿಸುತ್ತಾರೆ. ಅಸಹಾಯಕತೆ ಮತ್ತು ನಿರಾಸೆಗಳನ್ನು ಅಪಾಯಕಾರಿ ಅಂಶಗಳನ್ನು ಅವರು ಭಾವಿಸುತ್ತಾರೆ.

'ಬದ್ಧತೆಯ ಚರ್ಚೆಗೆ ತೀವ್ರವಾಗಿ ಸ್ಪಂದಿಸಿದ್ದು ಬಂಡಾಯ ಸಾಹಿತ್ಯ ಬಂಡಾಯ ಸಾಹಿತ್ಯದ ಪ್ರಣಾಳಿಕೆಯಲ್ಲಿ ಹೀಗೆ ಹೇಳಲಾಗಿದೆ' "ನಮ್ಮ ದೇಶದ ಚರಿತ್ರೆಯಲ್ಲಿ ಈಚೆಗೆ ನಡೆದ ವಿದ್ಯಮಾನಗಳು ಎರಡು ಲೋಕಗಳನ್ನು ಸೃಷ್ಟಿಸಿವೆ;

೧. ಸಮಕಾಲೀನ ಬದುಕಿಗೆ ಪ್ರತಿಸ್ಪಂದಿಸಿ ಅದರ ಬದಲಾವಣೆಗೆ ಹೋರಾಡುವ ಸಾಹಿತಿಗಳು

೨. ಸಮಕಾಲೀನತೆಯನ್ನು ಬದುಕಿನ ದಿನನಿತ್ಯದ ಘಟನೆಗಳಲ್ಲಿ ಗುರುತಿಸದೆ ತಂತಮ್ಮ ಭ್ರಮೆಗಳಲ್ಲಿ ತೇಲಾಡುವ ಸಾಹಿತಿಗಳದ್ದು.

ಮೊದಲ ಗುಂಪಿನ ಲೇಖಕರು ಆ ಎಲ್ಲ ಕೌರ್ಯದ ವಿರುದ್ಧ ಹೋರಾಟ ನಡೆಸುವ ಛಲ ಹೊತ್ತವರು; ಇವರು ಪ್ರಜಾಪ್ರಭುತ್ವದ ರಕ್ಷಣೆಗೆ, ವಿಸ್ತರಣೆಗೆ ದುಡಿಯುತ್ತಿರುವ ಜನ. ಕ್ರಾಂತಿಕಾರಿ ರಾಜಕೀಯ ಪ್ರಜ್ಞೆಯನ್ನು ಹೊಂದಿ ಜನತೆಯ ಹೋರಾಟದ ಬದುಕಿನೊಂದಿಗೆ ಬರೆಯಲು ಯತ್ನಿಸುತ್ತಿರುವ ಈ ಸಾಹಿತಿಗಳು ಹೊಸ ಸಂಸ್ಕೃತಿಯನ್ನು ಸೃಷ್ಟಿಸುವ ಆಸೆ ಹೊತ್ತಿದ್ದಾರೆ.

ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು, ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧವುಳ್ಳ ಎಂಬ ನಿಲುವಿನಿಂದ ಹೊರಟದ್ದು. ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು. ಸಂಘಟನೆ ಮತ್ತು ಜನಪರ ಹೋರಾಟಗಳಲ್ಲಿ ಪಾಲ್ಗೊಳ್ಳುವುದು ನಮಗೆ ಮುಖ್ಯ. ಜನಪರ ಹೋರಾಟಗಳೊಂದಿಗೆ ಯಾವುದೇ ರೀತಿಯಲ್ಲಿ ಒಂದಾಗುವುದು, ಬೆಂಬಲಿಸುವುದು ನಮ್ಮ ಜವಾಬ್ದಾರಿಯಾಗುವುದರ ಜೊತೆಗೆ ಸಾಹಿತ್ಯದ ವಿಶೇಷ ಸತ್ವದ ಸೇರ್ಪಡೆಗೂ ಸಹಾಯಕ. ಪತಿಷ್ಠಿತ ಪ್ರತಿಗಾಮಿ ಮೌಲ್ಯಗಳ ವಿರುದ್ಧದ ಎಲ್ಲ ವರ್ಗಗಳ ಸಕ್ರಿಯ ಹೋರಾಟಾನುಭವ ಅಭಿವ್ಯಕ್ತಿ. ಇದು 'ಬಂಡಾಯ ಸಾಹಿತ್ಯ'ಕ್ಕೆ ನಮ್ಮ ಅರ್ಥ ವಿವರಣೆ.

ಈ ಮೇಲಿನ ಹೇಳಿಕೆಗಳ ರೀತಿಯಲ್ಲಿ 'ಬದ್ಧತೆ' ಯ ಚರ್ಚೆ ಕನ್ನಡ ಸಾಹಿತ್ಯದ ವಿವಿಧ ಸಾಹಿತ್ಯ ಚಳುವಳಿಗಳ ಸಂದರ್ಭದಲ್ಲಿ ಬೆಳೆಯುತ್ತಾ ಬಂದಿದೆ. ಡಾ.ಯು.ಆರ್ ಆನಂತಮೂರ್ತಿಯವರು "ನಮಗೆ ಗೊತ್ತಿರುವ ಅತ್ಯಂತ ದೊಡ್ಡ ಲೇಖಕರೆಲ್ಲ ಆಳವಾದ



ಉದ್ದೇಶ ಪೂರ್ವಕತೆಯಿಂದಲೇ ಬರೆದವರು, ತಾವು ಬರೆಯುವ ಹೊತ್ತಿನಲ್ಲೇ ಕಲೆಗೂ ಉದ್ದೇಶಬದ್ಧತೆಗೂ ಇರುವ ವಿರೋಧವನ್ನು ತಿಳಿದವರೇ ಆಗಿದ್ದರು." ಎಂದು ಅಭಿಪ್ರಾಯಪಟ್ಟಿದ್ದಾರೆ. ಅವರ ಮಾತಿನ ಹಿಂದೆ ಎಲ್ಲ ಶ್ರೇಷ್ಠ ಲೇಖಕರ ಬರವಣಿಗೆ ಒಂದು ಉದ್ದೇಶಕ್ಕೆ ಬದ್ಧವಾಗಿಯೇ ಇರುತ್ತದೆ. ಆದರೆ ಆ ಬದ್ಧತೆ ಶಬ್ದದೊಳಗಿನ ನಿಶ್ಯಬ್ದದಂತೆ ಲೀನವಾಗಿರುತ್ತದೆಯೇ ಹೊರತು ಶುಷ್ಕ ಪ್ರಚಾರದ ಮಾದರಿಯಲ್ಲಿ ಇರುವುದಿಲ್ಲ ಎನ್ನುವುದು ಕಂಡುಬರುತ್ತದೆ.

'ಬದ್ಧತೆಗೆ ಶರಣಾದ ಯಾವುದೇ ಬಗೆಯ ಸಾಹಿತ್ಯ ಒಂದು ಚಳುವಳಿಯ ಸಂಗಾತಿಯಾಗಿ ಎಷ್ಟು ದೂರ ಸಾಗಲು ಸಾಧ್ಯ? ಹೋರಾಟದ ಸಖ್ಯ ಪಡೆದ ಸಾಹಿತ್ಯ ಕಾಲಾನಂತರ ಘೋಷಣೆಯ ಮಟ್ಟಕ್ಕೆ ಇಳಿದು ಬಿಡುತ್ತದೆಯೋ? ಆದರೆ ಜಗತ್ತಿನ ಶ್ರೇಷ್ಠ ಸಾಹಿತಿಗಳೆನಿಸಿರುವ ನೆರೂಡ, ಬ್ರೇಕ್ ತರದ ಲೇಖಕರು ಮಾರ್ಕ್ಸವಾದಿಗಳಾಗಿಯೂ ಗಂಭೀರ ಸಾಹಿತ್ಯವನ್ನು ಸೃಷ್ಟಿಸಿದ್ದು ಹೇಗೆ? ಎಂಬಂಥ ಪ್ರಶ್ನೆಗಳು ನಮ್ಮನ್ನು ಕಾಡುವುದುಂಟು. ಬದ್ಧತೆ ಎನ್ನವುದು ಲೇಖಕನ ಗ್ರಹಿಕೆಯನ್ನು ಹಾಗೂ ಅವನ ವಿಶ್ವಾತ್ಮಕ ಕಲ್ಪನೆಯನ್ನು ಪೂರ್ಣವಾಗಿ ನಿಯಂತ್ರಿಸಿ ಸಾಹಿತ್ಯ ರಚನೆಗೆ ಹಲವಾರು ಮಿತಿಗಳನ್ನು ಒಡ್ಡುತ್ತದೆಯೇ ಎಂಬ ಅನುಮಾನಗಳೂ ಉಂಟಾಗುತ್ತವೆ.

ಡಿ.ಆರ್.ನಾಗರಾಜ್ 'ಬದ್ಧತೆ'ಯನ್ನು ಕುರಿತು ಚರ್ಚಿಸುತ್ತಾ; “ಬದ್ಧತೆ ಎನ್ನುವುದು ಕುದುರೆಯ ಕಣ್ಣಿಗೆ ಕಟ್ಟುವ ಪಟ್ಟಿಯಾಗಬೇಕಿಲ್ಲ, ಅದು ಲೇಖಕನ ಅನುಭವ ಲೋಕವನ್ನು, ಜೀವನ ದರ್ಶನವನ್ನು ಸೀಮಿತಗೊಳಿಸಬೇಕಿಲ್ಲ. ಬದ್ಧತೆ ಜೀವನದ ಎಲ್ಲಾ ಮೂಲೆಗಳಿಗೂ ಸಲ್ಲುವಂಥದ್ದು, ಬದ್ಧನಾದ ಲೇಖಕ ಜೀವನದ ಯಾವ ಸಂಗತಿಗಳನ್ನೂ ಕಡೆಗಣಿಸುವುದಿಲ್ಲ. ಆದರೆ ಈ ರೀತಿಯ ಸರ್ವವ್ಯಾಪೀ ಜೀವನ ದರ್ಶನಕ್ಕೆ ಅತ್ಯಂತ ಆಳವಾದ ಸ್ವಾತಿಕ ಸಿದ್ಧತೆ ಬೇಕು. ಭಿನ್ನ, ಭಿನ್ನ ಅನುಭವಗಳ ನಡುವಿನ ಹೊಂದಾಣಿಕೆಯ ಬಗ್ಗೆಯೂ ಅಷ್ಟೆ, ಮಾರ್ಕ್ಸ್‌ನ ಜೀವನ ದರ್ಶನವನ್ನು ವಿವರಿಸುತ್ತ ಎರಿಕ್ ಫ್ರಾಮ್, ಜೀವನದಲ್ಲಿ ಶಾಶ್ವತ ಚಲನೆಗಳು, ತಾತ್ಕಾಲಿಕ ಚಲನೆಗಳು ಎಂಬ ಎರಡು ರೀತಿಯ ಶಕ್ತಿಗಳ ಅಸ್ತತ್ವವನ್ನು ಗುರುತಿಸುತ್ತಾನೆ. ಪ್ರೇಮ, ಕಾಮ, ನೋವು, ನಲಿವು, 'ಬಿಸಿಲಿಗೆ ಬೆಂದು, ಮಳೆಯಲಿ ನೆಂದು, ಗಾಳಿಗೆ ಸೆರಗೆತ್ತುವ ಮರಕ್ಕೂ ತಲೆತುಂಬ ಕನಸು' ಮೂಡುವ ವಿಸ್ಮಯ, ಇವೆಲ್ಲ ಶಾಶ್ವತ ಚಲನೆಗಳು. ಸಾಮಾಜಿಕ ಶಕ್ತಿಗಳು, ಚರಿತ್ರೆಯ ಪರಿಧಿಯಲ್ಲಿ ಬರುವ ವರ್ಗ ಸಂಬಂಧಗಳು, ಧರ್ಮ, ಪ್ರಭುತ್ವ ಮುಂತಾದ ಸಾಂಸ್ಥಿಕ ಒತ್ತಾಯಗಳೂ ಇವೆಲ್ಲವೂ ತಾತ್ಕಾಲಿಕ ಚಲನೆಗಳು, ಅಂದರೆ ಬದಲಾಗುತ್ತಾ ಹೋಗುವಂತಹವು. ಆದರೆ ಈ ಪರಿವರ್ತನಶೀಲ ಶಕ್ತಿಗಳೇ ಮನುಷ್ಯನನ್ನು ಕಟ್ಟುತ್ತವೆ. ಮನುಷ್ಯನ ಅಸ್ತಿತ್ವವನ್ನು ರೂಪಿಸುತ್ತವೆ. ಹೀಗಾಗಿ ಶಾಶ್ವತ ಚಲನೆಯನ್ನು ಅನುಭವಿಸುವ, ಗ್ರಹಿಸುವ ವಿಧಾನವೂ ಆ ಪರಿವರ್ತನಶೀಲ ಶಕ್ತಿಗಳಿಂದಲೇ ನಿಯಂತ್ರಿಸಲ್ಪಡುತ್ತದೆ. ಬದಲಾಯಿಸುವ ಹರವನ್ನು ಹೊತ್ತಿರುವ ಕಮಿಟೆಡ್ ಲೇಖಕರು ಜೀವನದ ಮೇಲಿನ ಎರಡೂ ವರ್ಗೀಕರಣಗಳಿಗೂ ಸಮಗ್ರವಾಗಿ ಸ್ಪಂದಿಸುತ್ತಾರೆ ಎನ್ನುವುದು ಈ ತಾತ್ವಿಕ ಹಿನ್ನೆಲೆಯ ಕಾರಣಕ್ಕಾಗಿಯೇ.”



'ಬದ್ಧತೆ', ಏಕರೂಪವಾಗಲೀ, ಏಕತಾನತೆಯಾಗಲಿ ಅಲ್ಲ. ಅದೊಂದು ಸಕಲವನ್ನೂ ಗ್ರಹಿಸುವ, ಎಲ್ಲ ನೆಲೆಗೂ ಸ್ಪಂದಿಸುವ ಸೂಕ್ಷ್ಮ ಕಲೆಗಾರಿಕೆ ಎಂಬ ಒಳನೋಟವನ್ನು ಡಿ.ಆರ್. ನಾಗರಾಜ್ ಮೇಲಿನ ಅಭಿಪ್ರಾಯ ಒಳಗೊಂಡಿದೆ.

ಬದ್ಧತೆಯ ಬಗೆಗೆ ಹಲವು ರೀತಿಯ ವ್ಯಾಖ್ಯಾನಗಳಿವೆ. ಬರಗೂರು ರಾಮಚಂದ್ರಪ್ಪನವರು, “ಮಂಡೇಲ ೨೬ ವರ್ಷಗಳ ಕಾಲ ಸೆರೆಮನೆಯಲ್ಲದ್ದೂ ಬದುಕಿ ಉಳಿದದ್ದು ತನಗಿರುವ 'ಬದ್ಧತೆ' ಯಿಂದ ಮಾತ್ರ ಎಂಬ ಸತ್ಯ ನಮ್ಮ ಸಾಂಸ್ಕೃತಿಕ ಕ್ಷೇತ್ರಕ್ಕೂ ಒಂದು ಒಳನೋಟವಾಗಬೇಕು. ಯಾಕೆಂದರೆ ಮನುಷ್ಯನಲ್ಲಿ ಸಂಕಲ್ಪ ಶಕ್ತಿಯನ್ನು ತಂದುಕೊಡುವ 'ಬದ್ಧತೆ' ಅತ್ಯಂತ ಜೀವಪರವಾದ ಒಂದು ಪ್ರಕ್ರಿಯೆ, ಬದುಕಿನ ಬಗೆಗೆ ಪ್ರೀತಿ ಉಕ್ಕಿಸುವ ಬದ್ಧತೆ ಮಾತ್ರವೇ ವ್ಯಕ್ತಿಗಳನ್ನು ಹತಾಶೆಯಿಂದ, ಸಿನಿಕತೆಯಿಂದ ಪಾರುಮಾಡಬಲ್ಲದು... ಎಂದು ಬದ್ಧತೆಯ ಪರವಾಗಿ ಅಭಿಪ್ರಾಯಪಟ್ಟಿದ್ದಾರೆ.

ಬರಗೂರು ಮೇಲಿನ ಹೇಳಿಕೆಯಲ್ಲಿ 'ಬದ್ಧತೆ', ಪ್ರಗತಿಪರ ಹಾಗೂ ಮಾನವೀಯತೆಯ ಒಂದು 'ಸೃಜನಶೀಲ ನೆಲೆ' ಎಂಬ ಧೋರಣೆ ಸಾಮಾಜಿಕತೆಗೆ ಹೆಚ್ಚಿನ ಆದ್ಯತೆ ನೀಡುವ ಹಾಗೂ ಒಂದು ಆರೋಗ್ಯಕರ ದೃಷ್ಟಿಕೋನವನ್ನಾಗಿ 'ಬದ್ಧತೆ' ಯನ್ನು ವಿಶ್ಲೇಷಿಸುವ ಕ್ರಮ ಅದರಲ್ಲಿ ಕಾಣಿಸುತ್ತದೆ.

ದಲಿತ ಸಾಹಿತ್ಯ ಬದ್ಧತೆ'ಯ ಕಲ್ಪನೆಗೆ ವಿಭಿನ್ನ ಅರ್ಥ ನೀಡಿತು. ಒಟ್ಟೂ ಸಮಾಜಕ್ಕೆ ಅನ್ವಯವಾಗುವಂಥ 'ಬದ್ಧತೆ' ಯ ಮಾನದಂಡಗಳನ್ನು ಒಂದು ಜನಾಂಗದ ಬದುಕು ಮತ್ತು ಭಾಷೆಗೆ ಅನ್ವಯಗೊಳಿಸಿತು. ಅದು ಮುಖ್ಯವಾಗಿ ಅಸ್ಪೃಶ್ಯ ಸಮುದಾಯವನ್ನು ತನ್ನ ಬದ್ಧತೆ' ಯ ಕಕ್ಷೆಗೆ ತೆಗೆದುಕೊಂಡಿತು. ಅಸ್ಪೃಶ್ಯನಾದವನು ಮಾತ್ರ ಅಧಿಕೃತವಾಗಿ ಅಸ್ಪಶ್ಯರ ಬದುಕನ್ನು ಚಿತ್ರಸಬಲ್ಲ, ಅಸ್ಪಶ್ಯನಿಂದ ಸೃಷ್ಟಿಯಾದ ಸಾಹಿತ್ಯವಷ್ಟೇ ದಲಿತಸಾಹಿತ್ಯ ಎಂಬ ಧೋರಣೆ ದಲಿತ ಸಾಹಿತಿಗಳಲ್ಲಿ ಬೆಳೆಯಿತು. ಅಸ್ಪೃಶ್ಯ ಲೇಖಕ ತನ್ನ ಬರವಣಿಗೆಯ ಮೂಲಕ ತನ್ನ ಹಾಗೂ ತನ್ನ ಸಮುದಾಯದ ಬಿಡುಗಡೆಗೂ ಬಾಗಿಲು ಹುಡುಕುತ್ತಾನೆ. ಅವನ ಈ ಹುಡುಕಾಟ ಒಂದು ಸ್ವಾತಂತ್ರ್ಯದ ಹೋರಾಟವೂ ಆಗಿರುತ್ತದೆ. ದಲಿತೇತರರ ಬರವಣಿಗೆ ಕೇವಲ ಅನುಕಂಪದ ಬರವಣಿಗೆ ಎಂಬಂಥ ಚರ್ಚೆಗಳು ದಲಿತ ಸಾಹಿತ್ಯದಾರಂಭದಲ್ಲಿ ಹೆಚ್ಚಾಗಿ ಕಂಡು ಬಂದವು. ಉಪದೇಶದ ಬರವಣಿಗೆ ಮಾದರಿಗಳನ್ನು ಧಿಕ್ಕರಿಸಿ ವ್ಯಕ್ತಿ ಮತ್ತು ಜನಾಂಗದ ನಿರ್ಲಕ್ಷಿತ ನೆಲೆಗಳಿಗೆ ಅಭಿವ್ಯಕ್ತಿ ರೂಪ ನೀಡುವ ಕಡೆ ದಲಿತ ಸಾಹಿತ್ಯ ಚಲಿಸಿತು ಎನ್ನಬಹುದು.

ದೇವಯ್ಯ ಹರವೆಯವರು ಹೇಳುವಂತೆ "ರಮ್ಯ ಸಂಪ್ರದಾಯದ ವಿಮರ್ಶೆಗಳು, ನವ್ಯ ಸಂಪ್ರದಾಯದ ವಿಮರ್ಶಾ ಮಾನದಂಡಗಳೂ ಇಂದು ಸಾಹಿತ್ಯವನ್ನು ಜನತೆಯಿಂದ ದೂರವಾಗಿಡಲು ಸಹಾಯಕವಾಗಿವೆ. ಇಂಥ ಸಂದರ್ಭದಲ್ಲಿ ಸಾಹಿತ್ಯವನ್ನು ಜನತೆಯ ಹತ್ತಿರಕ್ಕೆ ತೆಗೆದುಕೊಂಡು ಹೋಗುವುದು ಅಷ್ಟೇ ಅಲ್ಲ ಜಾತೀಯತೆ-ಬಡತನಗಳ ಕಾರಣದಿಂದ ಸಮಾಜದಲ್ಲಿ ಉಂಟಾಗಿರುವ ಅಸಮಾನತೆಯನ್ನು ತಡೆಯುಂಥ ದೇವರು- ಧರ್ಮ- ವಿಧಿ-ಪುನರ್ಜನ್ಮ ಮುಂತಾದ ಜಡಸಂಪ್ರದಾಯಗಳನ್ನು ಸೃಷ್ಟಿಸಿ ಮನುಷ್ಯನ



ಕ್ರೀಯಾಶೀಲತೆಯನ್ನು ಹಾಳುಮಾಡುವಂಥ; ಶೂದ್ಧ ಕಲೆ ಶುದ್ಧ ಸಾಹಿತ್ಯ ಶುದ್ಧ ವಿಮರ್ಶೆಯ ಹೆಸರಿನಲ್ಲಿ ಸಾಹಿತ್ಯವನ್ನು ಜನೆತೆಯಿಂದ ದೂರ ಕೊಂಡೊಯ್ಯಬಲ್ಲಂಥ ನೀತಿಯನ್ನು ತಡೆಯಬಲ್ಲ, ಒಟ್ಟೂ ಜನತೆಯ ನಡುವೆ ಆಳವಾದ ಪ್ರೀತಿ-ವಿಶ್ವಾಸ- ನಂಬುಗೆಯನ್ನು ವೈವಿಧ್ಯಮಯವಾದ ಚಿತ್ರಣವನ್ನು ಸಾಹಿತ್ಯದಲ್ಲಿ ಸೃಷ್ಟಿಸುವುದರ ಮುಖಾಂತರ ಶಾಶ್ವತ ಸಾಹಿತ್ಯವನ್ನು ನಿರ್ಮಿಸಬಲ್ಲ ಈ ಎಲ್ಲಾ ಮನೋಭಾವವನ್ನು ದಲಿತ ಸಾಹಿತಿ ಇಂದು ಅರಿಯುತ್ತಿದ್ದಾನೆ. ಈ ಒಂದು ದೃಷ್ಟಿಕೋನದಿಂದ ವ್ಯವಸ್ಥಿತವಾಗಿ ಮೂಡುತ್ತಿರುವ ಈ ಅರಿಮೆಯೇ ದಲಿತ ಸಾಹಿತ್ಯದ ವಿಮರ್ಶಾ ಮಾನದಂಡವೂ ಹೌದು."

ದೇವಯ್ಯ ಹರವೆಯವರ ಮೇಲಿನ ಮಾತುಗಳನ್ನು ದಲಿತ ಸಾಹಿತ್ಯದ ಪ್ರಣಾಳಿಕೆಯನ್ನು ಗುರುತಿಸುವವರೂ ಉಂಟು. ಒಟ್ಟಾರೆಯಾಗಿ 'ಬದ್ಧತೆ' ಯ ಕಲ್ಪನೆ ದಲಿತ ಸಾಹಿತ್ಯದಲ್ಲಿ ಜನಾಂಗನಿಷ್ಠ ನಿಲುವಾಗಿ ಪರಿವರ್ತನೆ ಪಡೆದುದ್ದನ್ನು ಕಾಣಬಹುದು.

ದಲಿತ ಸಾಹಿತ್ಯ ಮತ್ತು ದಲಿತಚಳವಳಿಗೆ ಸಂಬಂಧಿಸಿದಂತೆ ಹೀಗೆ ಹೇಳಿದ್ದಾರೆ, "ಇಂದು ದಲಿತ ಚಳವಳಿ ಸಾಂಸ್ಕೃತಿಕ ಆಕ್ರೋಶದ ಅಭಿವ್ಯಕ್ತಿಯಾಗಿ ತನ್ನನ್ನು ತಾನು ಮಾರ್ಪಡಿಸಿಕೊಂಡಿದೆ. ಈ ಪ್ರತಿಮೆಯ ಉಗಮ ಅಂಬೇಡ್ಕರ್‌ರಲ್ಲಿಯೇ ಆಯಿತೆನ್ನುವುದು ನಿಜವೇ. ಅವರು ವ್ಯವಸ್ಥೆಯನ್ನು ಅರ್ಥೈಸಿದ ರೀತಿ ಭಿನ್ನವಾಗಿತ್ತು. ಮತ್ತು ಗಾಂಧಿ ಹುಟ್ಟುಹಾಕಿದ ಪ್ರಜ್ಞೆಯ ರಾಜಕಾರಣಕ್ಕೆ ತೀವ್ರವಾದ ವಿರೋಧ ಸೂಚಿಸುವ ಹೊತ್ತಿನಲ್ಲೇ ಅದು ರೂಪುಗೊಂಡಿತು. ದಲಿತ ವಿಮೋಚನೆಯ ವಿಷಯವನ್ನು ಜಾತಿವಾದಿ ಹಿಂದೂಗಳು ಹುಟ್ಟುಹಾಕಿದ ಆತ್ಮಶುದ್ಧೀಕರಣದ ಪರಿಕಲ್ಪನೆಯೆಂದು ಬಾಪೂಜಿ ಭಾವಿಸಿದರು. ಈ ಮಾದರಿಯನ್ನು ನಿರಾಕರಿಸಿದ ಅಂಬೇಡ್ಕರ್ ದಲಿತರ ಆತ್ಮಗೌರವ ಮಾದರಿಯನ್ನು ಮುಂದಿಟ್ಟರು. ಕರಾರುವಕ್ಕಾಗಿ ಹೇಳುವುದಾದರೆ, ಗಾಂಧಿಯೊಂದಿಗಿನ ಈ ಸಂಘರ್ಷದ ಕಾರಣದಿಂದಾಗಿಯೇ ದಲಿತ ಸಮಸ್ಯೆಯ ರಾಚನಿಕ ಆಯಾಮವನ್ನು ಎತ್ತಿ ಹಿಡಿಯಲಾಯಿತು. ಸಂಪನ್ಮೂಲಗಳ ಮಾಲಿಕತ್ವ ಮತ್ತು ವ್ಯವಸ್ಥಾಪನೆ, ತಂತ್ರಜ್ಞಾನ ಮತ್ತು ಜೀವನ ಶೈಲಿಗಳು ಹಾಗೂ ವಿವಿಧ ಮಟ್ಟದಲ್ಲಿ ಸಮಾಜದ ನಾಯಕತ್ವದ ಇಂತಹ ರಾಚನಿಕ ಹಕ್ಕುಗಳ ಸಮಸ್ಯೆಯೊಂದಿಗೆ ದಲಿತ ವಿಮೋಚನೆ ನಿಕಟವಾದ ಸಂಬಂಧ ಹೊಂದಿದೆ.

ದಲಿತ ಚಳವಳಿ ಮತ್ತು ಸಾಹಿತ್ಯದ ಬಗ್ಗೆ ಬರೆಯುತ್ತಾ ನಟರಾಜ್ ಹುಳಿಯಾರ್ 'ಚಳವಳಿಯಿಂದ ಸಾಹಿತ್ಯ ಹುಟ್ಟುತ್ತದೆ', ಹಾಗೂ 'ಚಳುವಳಿಯಿಂದ ಸಾಹಿತ್ಯ ಹುಟ್ಟುವುದಿಲ್ಲ ಎಂಬ ಎರಡೂ ನೆಲೆಗಳಲ್ಲಿ ಈ ಸಮಸ್ಯೆಯನ್ನು ಚರ್ಚಿಸಿದ್ದಾರೆ. "ಚಳವಳಿಯ ಗುರಿಯೂ ಸಾಹಿತ್ಯದ ಗುರಿಯೂ ಒಂದೇ ಆದಾಗ ಹುಟ್ಟುವ ಸೌಂದರ್ಯಾತ್ಮಕ ಎಂಥದ್ದು ಎಂಬುದನ್ನು ವಿಮರ್ಶಕ ಎಚ್ಚರದಿಂದ ನೋಡಬೇಕಾಗುತ್ತದೆ. ಚಳವಳಿಗಳನ್ನು ಕಚ್ಚಾವಸ್ತುವಾಗಿ ಸ್ವೀಕರಿಸಿ ಸಾಹಿತ್ಯ ರಚನೆ ಮಾಡಿದ ನಿದರ್ಶನಗಳೂ ಇವೆ. ಚಳವಳಿಗಳಿಂದ ಪ್ರಭಾವಿತರಾಗಿ ಬರೆಯುವಾಗಲೂ ಎರಡು ನೆಲೆಗಳಿವೆ.

೧. ಚಳುವಳಿಯಲ್ಲಿ ನೇರವಾಗಿ ಭಾಗಿಯಾಗಿ ಸಾಹಿತ್ಯ ಸೃಷ್ಟಿಸುವುದು.

೨. ಚಳುವಳಿಗಳ ಹೊರಗೆ ನಿಂತು ಸಾಹಿತ್ಯ ಸೃಷ್ಟಿಸುವುದು.

ಈ ಎರಡೂ ಸಂದರ್ಭಗಳಲ್ಲಿ ಕಲ್ಪನಾ ವಿಲಾಸ ಕೆಲಸ ಮಾಡುವ ಕ್ರಮ ಬೇರೆ ಬೇರೆ" ಎಂದು ಅವರು ಅಭಿಪ್ರಾಯಪಡುತ್ತಾರೆ.

"ಸಾಹಿತ್ಯ, ಕಲೆ ಮತ್ತು ಸಮಾಜಕ್ಕೆ ಇರುವ ಸಂಬಂಧದ ಸ್ವರೂಪ ತುಂಬಾ ಸಂಕೀರ್ಣವಾದದ್ದು. ಈ ಸಂಬಂಧವೊಂದರ ಅರ್ಥಪೂರ್ಣಗ್ರಹಿಕೆಗೆ ನಾವು ಹತ್ತಿರವಾಗುವುದು ಎರಡು ಅನಾರೋಗ್ಯ ಅತಿರೇಕಗಳನ್ನು ದಾಟಿದಾಗಲೇ, ಎಂದು ತಿಳಿದುಕೊಳ್ಳುವ ಅತಿರೇಕ. ಎರಡನೆಯದು ಸಾಹಿತ್ಯ ಮತ್ತು ಸಾಮಾಜಿಕ ಐಡಿಯಾಲಜಿಗೆ ಸಂಬಂಧವೇ ಇಲ್ಲವೆಂದು ಹೇಳುವ ಅತಿರೇಕ. ಮೊದಲನೆಯದಾದ ಕಾವ್ಯವನ್ನು ತತ್ವಿಕರಣಗೊಳಿಸುತ್ತದೆ, ವೈಯಕ್ತಿಕ ಆಶಯಗಳ ನೆಲೆಗಿಳಿಸುತ್ತದೆ. ಹಾಗೂ ಸಮಾಜ ಅಧ್ಯಯನ ರೂಪು ತಳೆಯುವಂತೆ ಮಾಡುತ್ತದೆ. ಎರಡನೆಯದಾದ ಕಾವ್ಯಕ್ಕೆ ಸಾಮಾಜಿಕ ಉದ್ದೇಶಗಳಿಲ್ಲವೆನ್ನುವುದು ಕಾವ್ಯದ ಅಸ್ತಿತ್ವವನ್ನೂ ಸಮಾಜದ ಅಸ್ತತ್ವವನ್ನೂ ಒಂದೇ ಏಟಿಗೆ ನಿರಾಕರಿಸುವ ಮಟ್ಟಕ್ಕೆ ಹೋಗುತ್ತದೆ" ಎಂದು ಸಾಹಿತ್ಯದ ಬದ್ಧತೆಗೆ ಸಂಬಂಧಿಸಿದಂತೆ ಬಸವರಾಜ ಕಲ್ಗುಡಿ ಅಭಿಪ್ರಾಯಪಟ್ಟಿದ್ದಾರೆ.

ದಲಿತ ರಾಜಕಾರಣಿ ಬಿ.ಬಸವಲಿಂಗಪ್ಪನವರು ದಲಿತರ ಪ್ರತಿನಿಧೀಕರಣವಿರುವ ಸಾಹಿತ್ಯ ಕನ್ನಡದಲ್ಲಿ ಇಲ್ಲ. ದಲಿತರನ್ನು ಕಡೆಗನಿಸಿ ರೂಪುಗೊಂಡಿರುವ ಸಾಹಿತ್ಯ ಕನ್ನಡ ಸಾಹಿತ್ಯವೆಲ್ಲ ಬೂಸಾ ಎಂದು ಹೇಳಿದ್ದೂ ಕೂಡ ಬದ್ಧತೆ ಕಲ್ಪನೆಗೆ ಸಂಬಂಧಸಿದ ವಿಸ್ತೃತ ಚರ್ಚೆಯೆಂದೇ ಹೇಳಬಹುದು.

ಒಟ್ಟಾರೆಯಾಗಿ ಬದ್ಧತೆ ಎನ್ನುವುದು ಸಾಮಾಜಿಕ ಕಳಕಳಿಗೆ ಸಂಬಂಧಿಸಿದ ಪ್ರಮುಖ ಚರ್ಚೆಯಾಗಿ ಕನ್ನಡ ಸಾಹಿತ್ಯದಲ್ಲಿ ಮುಂದುವರೆಯುತ್ತಾ ಬಂದಿದೆ. ಕುವೆಂಪು, ಬೇಂದ್ರೆ, ಕಾರಂತರಂಥ ಮಹಾನ್ ಲೇಖಕರೂ ಕೂಡ ಬದ್ಧತೆಯ ಲಕ್ಷಣಗನುಗುಣವಾಗಿ ತಮ್ಮ ಬರವಣಿಗೆಯಲ್ಲಿ ಸ್ಪಂದಿಸಿದ್ದಾರೆ. ಇಷ್ಟಾದರೂ 'ಬದ್ಧತೆ' ಯನ್ನು ಒಂದು ದೀಕ್ಷೆ ಅಥವಾ ಪ್ರತಿಜ್ಞೆಯೆಂದು ಅವಾಹಿಸಿಕೊಂಡು ಬರೆದ ಅಥವಾ ಬದ್ಧತೆಯನ್ನು ಪಟ್ಟುಹಿಡಿದು ಸಾಧಿಸಿದವರಲ್ಲಿ ಕಲೆಯ ಅನನ್ಯತೆಯ ಹಾಗೂ ಜೀವಂತಿಕೆ ಮುಕ್ಕಾಗುತ್ತದೆ ಎಂಬುದಕ್ಕೆ ಕನ್ನಡ ಸಾಹಿತ್ಯದಲ್ಲಿ ನಿದರ್ಶನಗಳಿವೆ.

ಪಾಶ್ಚಾತ್ಯರ ಖ್ಯಾತ ವಿಮರ್ಶಕ ಆರ್ಟೆಗಾಗ್ಯಾಸೆ ತಾನೊಬ್ಬ ಕಲಾಕಾರನಿಗಿಂತ ಹೆಚ್ಚಿನವನಾಗಬೇಕು ಎಂದು ಬಯಸುವವನ ಮೇಲೆ ಕಲೆ ಸೇಡು ತೀರಿಸಿಕೊಳ್ಳುತ್ತದೆ, ಕಲೆಯಾಗಿಯೂ ಕೃತಿ ಸೋಲುವಂತೆ ಮಾಡುತ್ತದೆ." ಎಂದು ಹೇಳುತ್ತಾನೆ.

ಮೇಲಿನ ಮಾತಿಗೆ ಪೂರಕವಾಗುವಂತೆ ಜಿ.ರಾಜಶೇಖರ್ ಅವರು ಬದ್ಧತೆಯನ್ನು ಕುರಿತು ತಳೆಯುವ ನಿಲುವು ಹೀಗಿದೆ. "ನಾವು ಯಾವುದನ್ನು ಪ್ರತಿಭಟನೆಯ ಸಾಹಿತ್ಯ ಎಂದು ಗುರುತಿಸುತ್ತಿವೆಯೋ ಅದು ಬಹುಮಟ್ಟಿಗೆ ನಮ್ಮ ವ್ಯವಸ್ಥೆಯ ಅಪೇಕ್ಷಗಳನ್ನು



ಈಡೇರಿಸಲು ಹುಟ್ಟಿರುಂಥದ್ದು. ದಟ್ಟವಾದ ಜೀವನಾನುಭವ ಅಥವಾ ಉನ್ನತಮಟ್ಟದ ತಾತ್ವಿಕತೆ ಈ ಸಾಹಿತ್ಯದಲ್ಲಿ ಕಾಣಿಸಿದ್ದು ಅಪರೂಪ. ಇದರ ಸುಳ್ಳು ಚೀರಾಟಗಳನ್ನು ಆಕ್ರೋಶದ ಅಭಿನಯಗಳನ್ನು ನಿಜವೆಂದು ನಾನೇಕೆ ನಂಬಬೇಕು?

ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿ ಬದ್ಧತೆಯನ್ನು ಕುರಿತು ನಡೆದ ಚರ್ಚೆಗಳಲ್ಲಿ ಎರಡು ನೆಲೆಗಳನ್ನು ಗುರುತಿಸಬಹುದು.

೧. ಪರಂಪರಾಗತ ಕಲೆಯ ಶಕ್ತಿಯನ್ನು ಒಂದು ಸಾಮಾಜಿಕ ಪರಿವರ್ತನೆಗೆ, ಚಳುವಳಿಗೆ 'ಬದ್ಧತೆ'ಯ ಆಯುಧವನ್ನಾಗಿ ಪರಿವರ್ತಿಸುವುದು.

೨. ಬದ್ಧತೆ ಒಂದು ಕೃತಕ ಆವಾಹನೆ; ಅಸಹಜ, ನಿರ್ಜೀವ ಕಲೆಗಾರಿಕೆ ಎಂದು ತಿರಸ್ಕರಿಸುವುದು.

ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಬದ್ಧತೆಯ ಅನಿವಾರ್ಯತೆ ಹೆಚ್ಚಾಗಿದೆ ಎನ್ನಬಹುದು. ಏಕೆಂದರೆ ಒಂದು ಬಗೆಯ ತಟಸ್ಥ ಅಥವಾ ಚಿಂತನೆ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿಡಲು ಸಹಕರಿಸುತ್ತದೆ. ಈ ಕಾರಣದಿಂದ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಹಾಗೂ ತಾತ್ವಿಕ ಬದ್ಧತೆಗಳನ್ನು ಪ್ರಸ್ತುತ ಎನ್ನುವುದು ನನ್ನ ಭಾವನೆ. ಕಲೆಯ ಪರ ಮತ್ತು ಪ್ರಗತಿಪರ ಹಾಗೂ ಜೀವಪರವಾದ ಬದ್ಧತೆ ನಮಗೆ ಇಂದು ಪ್ರಸ್ತುತ. ದಲಿತ ಸಾಹಿತ್ಯ ಕಲೆಯಪರ ಮತ್ತು ಜೀವಪರ ಹಾಗೂ ಪ್ರಗತಿಪರವಾಗಿ ಚಲಿಸತೊಡಗಿರುವುದು ಗಮನಾರ್ಹ ಸಂಗತಿ.

*************

## ೧೧. ಅಲೆಮಾರಿಗಳು ಮತ್ತು ಸಾಮಾಜಿಕ ನ್ಯಾಯ

**- ಬಾಲಗುರುಮೂರ್ತಿ**

ಭಾರತದ ಅಲೆಮಾರಿಗಳ Anthropology ಯ ಬಗ್ಗೆ ಸ್ಪಷ್ಟವಾದ ಅಧ್ಯಯನಗಳು ಮತ್ತು ಫಲಿತಗಳು ಅಲೆಮಾರಿಗಳು ಇರುವ ಸ್ಥಿತಿಯಲ್ಲೇ ಇರುವುದು ಸಾಮಾಜಿಕ ನ್ಯಾಯದ ಬಹು ದೊಡ್ಡ ವಿಪರ್ಯಾಸ.

ಬಹಳ ನಾಜೂಕಾಗಿ ಈ ತಬ್ಬಲಿ ಸಮುದಾಯಗಳ ಚರಿತ್ರೆಯನ್ನು ನಿರ್ವಹಿಸುವ ಸಂಶೋಧಕರು ತಾವುಪರಿಭಾವಿಸಿದ ಕ್ರಮವೇ Ulitimate ಹಾಗೆ ಹಲವು ಕೃತಿಗಳನ್ನು ಬರೆದಿರುವುದು ಸಂಶೋಧನೆಯ ವ್ಯಂಗವಾಗಿದೆ.

ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯೂ ಸೇರಿದಂತೆ ಸರ್ಕಾರಿ ಸಾಮಾಜಿಕ ನ್ಯಾಯದ ನಿಯೋಗಿಗಳು ಈಗಲು ಉಲ್ಲೇಖಿಸುವುದು ವಸಾಹತು ಅಧ್ಯಯನಕಾರರನ್ನು ಎಂದು ಅವರು ಹೊರಡಿಸುವ ಸುತ್ತೋಲೆಗಳಲ್ಲಿನ ಉಲ್ಲೇಖಗಳು ವಿವರಿಸುತ್ತವೆ. ಮತ್ತು ಆಂತ್ರೋಪಾಲಜಿಕಲ್ ಸರ್ವೇ ಆಫ್ ಇಂಡಿಯಾದ ಮಾಜಿ ಮುಖ್ಯಸ್ಥ ಕೆ.ಎಸ್.ಸಿಂಗ್ ರವರು ಮಾನವ ಶಾಸ್ತ್ರೀಯ ಅಧ್ಯಯನಗಳನ್ನು ನಮ್ಮಲ್ಲಿನ ಕೆಲವರು ಅಸಹನೆಯಿಂದ ಈ Modernity ಯಲ್ಲಿ ಇವರು ಅಪ್ರಸ್ತುತರು ಎಂದು ಟೀಕಿಸುತ್ತಾ ತಾವು ಮಾತ್ರ ಸಾಮಾಜಿಕ ನ್ಯಾಯದ ಹಂಚಿಕೆಯಲ್ಲಿ ತಮ್ಮ ಜಾತಿಯನ್ನು ಮಾತ್ರ ಪ್ರೀತಿಸುವ ಜಾತಿವಾದಿಗಳಾಗಿಯೇ ಉಳಿದಿದ್ದಾರೆ. ಆದರೆ ಈಗಲೂ ವಿಚಾರನಿಷ್ಠ ಪ್ರಾಜ್ಞರು ತುಡಿಯುತ್ತಲೇ ಇರುವುದು ಶ್ಲಾಘನೀಯ.

### ಅಲೆಮಾರಿಗಳ ಶಾಪಗ್ರಸ್ಥ ಪ್ರಯಣ

ಹಲವು ಆದಿವಾಸಿ ಬುಡಕಟ್ಟುಗಳು ಮೂಲ ಕಾಡನ್ನು ತೊರೆದು ನಾಡಿನತ್ತ ತೆವಳುತ್ತ ಬಂದ ಪ್ರಯಾಣದ ವಿವರಗಳಿವೆ. ಆದರೆ ನಾಡಿನಲ್ಲಿದ್ದ ನಾಗರಿಕ ಜಾತಿಗಳು ಈ ಆದಿಮರನ್ನು ತಮ್ಮೊಳಗೆ ಬಿಟ್ಟುಕೊಳ್ಳಲಿಲ್ಲ. ಮತ್ತು ಈ ಆದಿವಾಸಿಗಳು ನಾಗರಿಕ ಜಗತ್ತಿನ ಯಾವುದೇ ಸಾಮಾಜಿಕರಣದ ಪ್ರಕ್ರಿಯೆಗೆ ತೊಡಗಲಿಲ್ಲ ಎನ್ನುವದಕ್ಕಿಂತ ಜ್ಞಾನ ಮತ್ತು ಆತಂಕದಿಂದ ಸ್ಪದಿಸಲಿಲ್ಲ.

ಅದರ ಫಲವಾಗಿ ಊರಾಚೆಯ ಬಯಲುಗಳಲ್ಲಿ ನಿರ್ಜನ ಪ್ರದೇಶದಲ್ಲಿ ಟೆಂಟು ಗುಡಾರಗಳಲ್ಲಿ ಬದುಕುತ್ತಾ ಬಂದವರು ಈ ಅಲೆಮಾರಿಗಳು,

ಕೆಲವರು ಪಶುಪಾಲಕರಾಗಿ ಉಳಿದುಕೊಂಡರೆ ಉಳಿದವರು ಧಾರ್ಮಿಕ ಭಿಕ್ಷಾವೃತ್ತಿಗೆ ಆತುಕೊಂಡರು ಮತ್ತು ಕೆಲವರು ಆಧುನಿಕ ವೈಪರೀತ್ಯಗಳ ಫಲವಾಗಿ ರಾಜಕೀಯ ಪಲ್ಲಟಗಳಿಂದ ಅಲೆಮಾರಿಗಳಾಗಿ ರೂಪುಗೊಂಡರು.



ಅಲೆಮಾರಿಗಳ ಸೂರಿಲ್ಲದ ಶಿಕ್ಷಣವಿಲ್ಲದ ಯಾವುದೇ ಸಾಮಾಜಿಕ ಸವಲತ್ತಿನ ಹಿನ್ನೆಲೆಯಿಲ್ಲದ ಇವರ ಸ್ಥಿತಿಗಳನ್ನು ವಿವರಿಸುವುದಕ್ಕಿಂತ ಈ ಅಲೆಮಾರಿ ನಿರ್ದೇಶಕರು ಅಪೂರ್ಣವಾದ ಪಟ್ಟಿಯೊಂದನ್ನು ಘೋಷಿಸಿರುತ್ತಾರೆ. ಈ ಪಟ್ಟಿಯಲ್ಲಿ ಒಂದೇ ಬುಡಕಟ್ಟಿನ ಪರ್ಯಾಯ ಪದಗಳು

(Synonyms) ಪುನರಾವರ್ತನೆಯಾಗಿ ೫೮ ಸಮುದಾಯಗಳೆಂದು ಘೋಷಿಸಿರುವುದನ್ನು ಅದನ್ನೇ ಅಲೆಮಾರಿ ಪಟ್ಟಿಯೆಂದು ಒಪ್ಪಿಕೊಂಡಿದೆ.

ಉದಾಹರಣೆಗೆ ಗೋಂದಳಿ, ಬುಡಬುಡಿಕೆ, ಜೋಷಿ, ವಾಸುದೇವ ಇವೆಲ್ಲ ಒಂದೇ ಸಮುದಾಯವಾದರೂ ನಾಲ್ಕೈದು ಪರ್ಯಾಯ ಪದಗಳು ಪಟ್ಟಿಯನ್ನು ಉಬ್ಬಿಸಿವೆ. ಇಂತಹ ಅವೈಜ್ಞಾನಿಕ ಪಟ್ಟಿ ರದ್ದುಗೊಳಿಸಬೇಕಾಗಿದೆ.

ಕಿಳ್ಳೇಕ್ಯಾತ-ಕಟಬು, ಬುಂಡೇಬೆಸ್ತ, ಗೊಂಬೆರಾಮ, ಈ ನಾಲ್ಕು ಪರ್ಯಾಯ ಪದಗಳು ಶಿಳ್ಳೇಕ್ಯಾತ ಸಮುದಾಯವನ್ನು ಜನಪದರು ಕರೆದ ಹೆಸರುಗಳಾಗಿದ್ದು ಈ ಪಟ್ಟಿಯಲ್ಲಿ ಹೀಗೆ ಪರ್ಯಾಯ ಪದಗಳಿಂದ ತುಂಬಿ ಹೋಗಿರುವ ಅಪೂರ್ಣ ಸರಕಾಗಿದೆ. ೧೮೭೧ರಲ್ಲಿ ಬ್ರಿಟೀಷ್ ಸರ್ಕಾರ ತನ್ನ ನಿಯಂತ್ರಣಕ್ಕೆ ಬಾರದ ಮತ್ತು ತನ್ನ ಸಾಮ್ರಾಜ್ಯಶಾಹಿಯ ವಿರುದ್ಧ ದನಿಯಾದ ಇಂತಹ ಅಲೆಮಾರಿ ಗುಂಪುಗಳನ್ನು ಬಂಧಿಸಿ ಅಪರಾಧಿ ಬುಡಕಟ್ಟುಗಳೆಂದು ಘೋಷಿಸಿತು. ಮುಂದೆ ಈ ಕ್ರಿಮಿನಲ್ ಟ್ರೈಬ್‌ಗಳನ್ನು ಅಪರಾಧಿ ಬುಡಕಟ್ಟುಗಳು ಎಂಬ ಅಂಶಗಳು ತಿಳಿಯುವುದೇ ಇಲ್ಲ.

ಕೇವಲ ತುತ್ತಿನ ಚೀಲದ ಹಸಿವನ್ನು ಆ ಕ್ಷಣಕ್ಕೆ ಹಿಂಗಿಸುವುದಷ್ಟೇ ಬದುಕಿನ ತುರ್ತು. ಅದರ ಪರಿಣಾಮ ಅರವತ್ತೈದು ವರ್ಷಗಳ ಸ್ವತಂತ್ರ ಭಾರತದಲ್ಲಿ ಸಾಮಾಜಿಕ ನ್ಯಾಯದ ಹಂಚಿಕೆಯಲ್ಲಿ ಒಬ್ಬ ಅಲೆಮಾರಿ ಕೂಡ ಶಾಸನ ಸಭೆ ರೂಪಿಸುವ ಕಡೆ ಸುಳಿದಾಡಿಲ್ಲ. ಆದರೆ ಪಶುಪಾಲಕ ಅಲೆಮಾರಿಗಳೆಂದವರು ಕೇವಲ ಜಾತಿ ಪ್ರತಿನಿಧಿಗಳಾಗಿದ್ದು ಪ್ರಧಾನ ಧಾರೆಯ ಮೂಲಿಗ.

ಗಂಟಿಚೋರ್ ಸಮುದಾಯದ ಯುವಕರ ತಿಕಕ್ಕೆ ಖಾರದ ಪುಡಿ ಹಾಕಿ ಹಿಂಸಿಸುತ್ತಿದ್ದ ಪೋಲೀಸರ ದೌರ್ಜನ್ಯವನ್ನು ಇಂದಿಗೂ ಸಮುದಾಯ ಮರೆತಿಲ್ಲಾ.

ಜಗತ್ತಿಗೆ ಬೆನ್ನು ಹಾಕಿದ ಜಾಣಕುರುಡಿನ ವ್ಯವಸ್ಥೆಯ ಚರಿತ್ರೆ ವಾಸ್ಥವ ರಾಜಕಾರಣವಾಗಿ ಮುಂದುವರೆದಿದೆ. ಇಷ್ಟಾಗಿಯೂ ಅಲೆಮಾರಿಗಳನ್ನು ಕುರಿತು ನಡೆದಿರುವ ಅಧ್ಯಯನಗಳು ಅಧ್ಯಯನಕಾರರಿಗೆ ಮಾಹಿತಿಯಾಗಿ ಅವರ

ಸಂಶೋಧನಾ ಡಿಗ್ರಿಗಳಿಗೆ ಸರಕಾಗಿ ಕಂಡಿದ್ದರೂ ಮತ್ತೊಂದೆಡೆ ಈ ಸಂಶೋಧನಾ ಕೃತಿಗಳ ಅಪೂರ್ಣ ವಿವರಗಳು ಸರ್ಕಾರದ ಕಾಟಾಚಾರದ ಉಲ್ಲೇಖಗಳಾಗಿ ಪಳೆಯುಳಿಕೆಗಳಾಗಿವೆ. ಆದರೂ ಅವರ ಪ್ರಯತ್ನಗಳು 'ಏನು ಇಲ್ಲದ ಕಡೆ' ಎನ್ನುವಂತೆ ಶ್ಲಾಘನೀಯವೂ ಆಗಿದೆ.

ಕಳೆದ ವರ್ಷಗಳಲ್ಲಿ ಭಾರತ ಸರ್ಕಾರ ನೇಮಿಸಿದ ರಾಷ್ಟ್ರೀಯ ವಿಮುಕ್ತ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ



ಆಯೋಗ ಈ ದೇಶದ ಒಟ್ಟು ಅಲೆಮಾರಿಗಳ ಜನಸಂಖ್ಯೆ ಹದಿನೈದು ಕೋಟಿಗೂ ಹೆಚ್ಚು ಎಂದು ಅಂಕಿಸಂಖ್ಯೆಗಳನ್ನು ನೀಡಿದೆ.

ಮಹಾರಾಷ್ಟ್ರದಲ್ಲಿ ೭೩ ಅಲೆಮಾರಿ ಸಮುದಾಯಗಳಿದ್ದು ಮಹಾರಾಷ್ಟ್ರ ಸರ್ಕಾರ ಅಲೆಮಾರಿ ಸಮುದಾಯಗಳಿದ್ದು ಮಹಾರಾಷ್ಟ್ರ ಸರ್ಕಾರ ಅಲೆಮಾರಿಗಳಿಗೆ ಪ್ರತ್ಯೇಕವಾದ ಮೀಸಲಾತಿ ಪಟ್ಟಿಯನ್ನು ಇಂದಿಗೂ ಚಾಲ್ತಿಯಲ್ಲಿರಿಸಿದೆ.

ಅಲೆಮಾರಿಗಳ ಜನಸಂಖ್ಯೆಯ ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಅಲೆಮಾರಿ ಸಮುದಾಯಗಳು ಮೂವತ್ತರ ಆಸುಪಾಸಿನಲ್ಲಿದ್ದು ೧೯೬೬ರಲ್ಲಿ ಕರ್ನಾಟಕದಲ್ಲಿ ೫೬ ಅಲೆಮಾರಿ ಬುಡಕಟ್ಟುಗಳು ಇದ್ದವೆಂದು ಅಂದಿನ ಸಮಾಜ ಕಲ್ಯಾಣ ಇಲಾಖೆಯ ಹಣೆಪಟ್ಟಿಯನ್ನು ತೆಗೆದು ವಿಮುಕ್ತ ಬುಡಕಟ್ಟುಗಳು ಎಂದು ಮರು ನಾಮಕರಣ ಮಾಡಲಾಯಿತು. ಪಾರಿ, ದೊಂಬರು, ಗಂಟಿಚೋರ್, ಕೊರವರ್ ನಂತಹ ಹಲವಾರು ಬುಡಕಟ್ಟುಗಳು ವಿಮುಕ್ತ ಬುಡಕಟ್ಟುಗಳಾದರೂ ಪ್ರತೀ ಹದಿನೈದು ದಿವಸ-ತಿಂಗಳಿಗೆ ಪೊಲೀಸು ಸ್ಟೇಷನಿಗೆ ಹೋಗಿ ಸಹಿ ಮಾಡಿ ಬರಬೇಕಿತ್ತು. ಆ ಪ್ರದೇಶಗಳಲ್ಲಿ ಆಗುವ ಕಳ್ಳತನಗಳಿಗೆ ಈ ಅಲೆಮಾರಿಗಳನ್ನೇ ಹೊಣೆಮಾಡಿ ಘೋರವಾಗಿ ಹಿಂಸಿಸಲಾಗುತ್ತಿತ್ತು.

ಹೀಗೆ ಸಾಗಿಬಂದ ಶಾಪಗ್ರಸ್ಥ ಪ್ರಯಾಣದಲ್ಲಿ ದೇಶ-ಸಂವಿಧಾನ-ಹಕ್ಕು ಬಾಧ್ಯತೆಗಳ ಪ್ರಜ್ಞೆಯಾಗಲಿ-ಪರಿಸವಾಗಲಿ ದಕ್ಕದ ಈ ನತದೃಷ್ಟ ಸಮುದಾಯಗಳು ಅಂಬೇಡ್ಕ ಪ್ರಜ್ಞೆಯನ್ನು ಅರ್ಥಮಾಡಿಕೊಳ್ಳುವ ಮತ್ತು ಸಂಘಟಿತವಾಗುವ ಯಾವುದೇ ಚಾರಿತ್ರಿಕ ಪ್ರಯತ್ನಗಳಿಗೆ ಸಾಕ್ಷಿಯಾಗಲಿಲ್ಲ.

ಹೀಗಾಗಿಯೇ ಇಂದಿಗೂ ಅಲೆಮಾರಿ ತಾಯಂದಿರು ಮಕ್ಕಳನ್ನು ಕಟ್ಟಿಕೊಂಡು ಸರಿ ರಾತ್ರಿಗಳಲ್ಲಿ ಈ ದೇಸವೆಂಬೋ ದೇಸದಾಗೆ ಮನೆಗಳ ಮುಂದೆ ಅನ್ನಕ್ಕೆ ದೈನ್ಯವಾಗಿ ಬೇಡುತ್ತಾ ಕೈ ಒಡ್ಡುತ್ತಾರೆ. ಇವರಿಗೆ ಸ್ಪಶ್ಯ-ಅಸ್ಪೃಶ್ಯ ಎನ್ನುವ ಯಾವುದೇ ಅಮಾನವೀಯ ತಾರ್ಕಿಕ ಅಲೆಮಾರಿಗಳ ಬಗ್ಗೆ ಅವರಿಗೆ ತಿಳಿದೇ ಇಲ್ಲ.

ಇನ್ನೂ ಭೂ ಹಂಚಿಕೆಯ ಇಲ್ಲ ಭೂ ಒಡೆತನದ ಪ್ರಶ್ನೆಯಿರಲಿ, ಭೂಮಿಯೊಡನೆ ಸಂಬಂಧ ಏರ್ಪಡಿಸಿಕೊಳ್ಳದ ಈ ಅಲೆಮಾರಿಗಳು ದಲಿತರಂತೆ ಭೂ ಸಂಘರ್ಷಗಳ ಚರಿತ್ರೆಯಲ್ಲಿ ದಾಖಲಾಗಲಿಲ್ಲ. ಇಂತಹ ವಿಚಿತ್ರಗಳ ಕೀಳರಿಮೆಯ ಮನಸ್ಥಿತಿಯಿಂದ ಅಲೆಮಾರಿಗಳು ಬಳಲುತ್ತಿದ್ದಾರೆ.

ಇಂತಹ ಅಪೂರ್ಣ ಹಿನ್ನೆಲೆಯನ್ನು ಧ್ಯಾನಿಸುತ್ತಲೇ ಕರ್ನಾಟಕದ ಅಲೆಮಾರಿ ಬುಡಕಟ್ಟುಗಳನ್ನು ಚರ್ಚೆಗೆ ಒಳಪಡಿಸಿಕೊಳ್ಳಬಹುದು.

ವಸಾಹತು ಅಧ್ಯಯನಕಾರರಿಂದ ಇಂದಿನ ಉಪಸಂಸ್ಕೃತಿ ಅಧ್ಯಯನ ಮಾಲೆ, ಅಲೆಮಾರಿ ಅಧ್ಯಯನ ಮಾಲೆ-ವಿಶ್ವವಿದ್ಯಾಲಯಗಳ ಸಂಶೋಧನಾ ಕೃತಿಗಳೆಲ್ಲವನ್ನು ಮನಸಿನಲ್ಲಿಟ್ಟುಕೊಂಡು ಸರಳವಾಗಿ ಅಲೆಮಾರಿ ಯಾರು ಎಂದು ಪ್ರಶ್ನಿಸಬೇಕಾಗುತ್ತದೆ.



ಸಂಘಟನೆಯ ಅನುಭವದಲ್ಲಿ ನೀಡುವ ಉತ್ತರಗಳು ಪ್ರಮಾಣಿಕತೆಗೆ ಹೆಚ್ಚು ಹತ್ತಿರವಾಗಲಿದ್ದು ಅದರಂತೆ ಅಲೆಮಾರಿ ಮುಖ್ಯಸ್ತರಕ್ಕೆ ಸೇರದ ಜೋಳಿಗೆ ಹೆಗಲೇರಿಕೊಂಡು ಅನ್ನಕ್ಕೆ ಬೇಡಿ-ಊರಾಚೆಯ ಬಯಲುಗಳಲ್ಲಿ ಬದುಕುತ್ತಾ ಬೇಟೆ-ಭಿಕ್ಷಾಟನೆ- ಪ್ರದರ್ಶನ ಕಲೆಗಳಲ್ಲಿ ಬೆಳೆದು ಬಂದವನು ಅಲೆಮಾರಿ, ಯಾವುದೇ ನಾಗರೀಕ ಸಂಪತ್ತಿನ (amenities) ಸನಿಹವಿಲ್ಲದೆ, ಧರ್ಮದ ಹಂಗಿಲ್ಲದೆ, ಆದಿಮ ಸ್ಥಿತಿಯಲ್ಲಿ ಬದುಕಿದ್ದ ಈ ಬುಡಕಟ್ಟುಗಳ ಮೂಲರೂಪಗಳು ಇಂದಿಗೂ ಗ್ರಾಮೀಣ ಭಾರತದಲ್ಲಿ ಕಾಣುತ್ತವೆ. ಯಾವುದೇ ಸಮುದಾಯ ತನ್ನನ್ನು ಅಲೆಮಾರಿ ಎಂದು ಕರೆದುಕೊಳ್ಳುವ ಮುನ್ನ ಈ ಮೇಲಿನ ವಿವರಗಳನ್ನು ಪ್ರಾಮಾಣಿಕವಾಗಿ ಪರೀಕ್ಷಿಸಿಕೊಳ್ಳಬೇಕು. ಕಾರಣ ಇಂದು ರಾಷ್ಟ್ರೀಯ ಮಟ್ಟದಲ್ಲಿ ಅಲೆಮಾರಿಗಳ ಬಗ್ಗೆ ಚರ್ಚೆಯಾಗುತ್ತಿದ್ದು ಕೆಲವು ಬಲಿಷ್ಟ ಸಮುದಾಯಗಳು ನಾವು ಅಲೆಮಾರಿಗಳೆಂದು ಘೋಷಿಸಿಕೊಳ್ಳುತ್ತಿದ್ದು ಇಲ್ಲಿಯೂ ಕಣ್ಣು-ಕಿವಿ-ಬಾಯಿ ಇಲ್ಲದ ಅಲೆಮಾರಿ ತಬ್ಬಲಿ ಸಮುದಾಯಗಳು ಮತ್ತದೇ ವಂಚನೆಗೆ ಒಳಗಾಗುವುದು ನಿಚ್ಚಳವಾಗುತ್ತಿದೆ.

ಕರ್ನಾಟಕದಲ್ಲಿ ಒಂದು ಹಂತಕ್ಕೆ ಈಗ ಗುರುತಿನ ಸಂಘಟಿತವಾಗುತ್ತಿರುವ ಅಲೆಮಾರಿಗಳ ಪಟ್ಟಿ ಇಂತಿದೆ.

೧. ಬುಡ್ಗಜಂಗಮ್ (ಜಂಗಾಲಯ)

೨. ಚೆನ್ನ ದಾಸ

೩. ದಕ್ಕಲಿಗ

೪. ಗೋಸಂಗಿ

೫. ಹಂಡಿಜೋಗಿ

೬. ಕೊರಮ

೭. ಶಿಳ್ಳೆಕ್ಯಾತ

೮. ಸಿಂಧೋಳ್ಳು

೯. ಸುಡುಗಾಡು ಸಿದ್ಧ

೧೦. ಡುಗ್ರಿ ಘರಾಸಿಯಾ

೧೧. ಹಕ್ಕಿಪಿಕ್ಕಿ

೧೨. ಪಾರಿ

೧೩ ರಾಜಗೊಂಡ

೧೪. ಬೈಲ ಪತ್ತಾ

೧೫. ದೊಂಬದಾಸ

೧೬. ಫಿನಾಡಿ

೧೭. ಗೊಂದಳಿ

೧೮. ಕಂಜಾರಬಾಟ

೧೯. ಸಿಕ್ಕಲಿಗಾರ

೨೦. ಕಾಡುಗೊಲ್ಲ

೨೧. ಹೇಳವ

೨೨. ಜೋಗಿ

ಆದರೆ ಇನ್ನೂ ಸಂಘಟನೆಗೆ ದಕ್ಕದ ಚಪ್ಪರಬಂದ್, ಗಂಟಿಚೋರ್, ಮಾಂಗ್ಾರುಡಿ, ಹಾವಾಡಿಗ(ಮಾದರಿ), ಕರಡಿ ಖಲಂದರ್, ದರವೇಶಿ, ಡೌರಿ ಗೋಸಾಯಿ, ಗೋಸಾಯಿ, ಮೊಂಡರು, ಪರ್ವತ ಮಲ್ಲಯ್ಯ ಇವನ್ನೂ ಕೂಡಿಕೊಂಡರೆ ೩೨ ಅಲೆಮಾರಿ ಬುಡಕಟ್ಟುಗಳು ಕರ್ನಾಟಕದಲ್ಲಿದ್ದು ಇನ್ನು ಕಣ್ಣಿಗೆ ಕಾಣದ(Invisible) ಗುಂಪುಗಳನ್ನು ಹುಡುಕಾಡಲಾಗುತ್ತಿದೆ. ಈ ಮೇಲೆ ಹೇಳಿದ ಅಲೆಮಾರಿಗಳನ್ನು ಮೂರು ಗುಂಪುಗಳಲ್ಲಿ ಪ್ರತ್ಯೇಕಿಸಲಾಗಿದೆ.

ಬುಡ್ಗಜಂಗಮ್, ಚೆನ್ನದಾಸರ್, ದಕ್ಕಲಿಗ, ಗೋಸಂಗಿ, ಹಂಡಿಜೋಗಿ, ಕೊರಮ, ಶಿಳ್ಳೆಕ್ಯಾತ, ಸಿಂಧೋಳ್ಳು, ಸುಡುಗಾಡುಸಿದ್ದ ಇವರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿಡಲಾಗಿದೆ.

ಡುಂಗ್ರಿ ಘರಾಸಿಯಾ, ಹಕ್ಕಿಪಿಕ್ಕಿ, ಪಾರಿ, ರಾಜಗೊಂಡ ಇವುಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಿದ್ದು ಉಳಿದ ಹದಿನಾಲ್ಕು-ಹದಿನೈದು ಸಮುದಾಯಗಳನ್ನು ಹಿಂದುಳಿದ ವರ್ಗದ ಪ್ರವರ್ಗ-೧ ರಲ್ಲಿ ಸೇರಿಸಲಾಗಿದೆ.

ಸೋಜಿಗವೆಂದರೆ ಈ ಎಲ್ಲಾ ಸಮುದಾಯಗಳು ಬುಡಕಟ್ಟಿನ ಲಕ್ಷಣಗಳನ್ನು ಹೊಂದಿದ್ದು ಇವುಗಳನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಬೇಕಾಗಿತ್ತು. ಹಲವೆಡೆ ಒಂದೇ ಪ್ರದೇಶದಲ್ಲಿ ಟೆಂಟು ಹಾಕಿಕೊಂಡು ಬದುಕುವ ಅಲೆಮಾರಿಗಳಿಗೆ ತಮ್ಮ ಕೆಟಗರಿ (Category)ಗಳು ಗೊತ್ತೇ ಇಲ್ಲದೇ 'ಜಾತಿ' ಎನ್ನುವುದು ಕೇವಲ ತಮ್ಮ ಸಾಂಸ್ಕೃತಿಕ ಜೈವಿಕ ಸಂಬಂಧಗಳಿಗಾಗಿ ವಿನಾ ಇವುಗಳ ಹೆಸರಿನಲ್ಲಿ ತಮ್ಮ ಅಭಿವೃದ್ಧಿ ಇದೆ ಎಂಬ ಪ್ರಾಥಮಿಕ ಎಚ್ಚರವೂ ಇಲ್ಲ.

**ಅಲೆಮಾರಿಗಳು ಮತ್ತು ಐಡೆಂಟಿಟಿ**

ಇಂದು ಅಲೆಮಾರಿಗಳು ಅನುಭವಿಸುತ್ತಿರುವ ಗಂಭೀರ ಸಮಸ್ಯೆ 'ಐಡೆಂಟಿಟಿ'ಯನ್ನು ತಿಳಿಯುವುದಾಗಿದೆ. ಇಂತಹ ಐಡೆಂಟಿಟಿ ಸಮಸ್ಯೆಯಲ್ಲಿ ಬುಡ್ಗಜಂಗಮರು, ಚೆನ್ನದಾಸರ್, ಸಿಂಧೋಳ್ಳು, ಶಿಳ್ಳೆಕ್ಯಾತರಂತಹ ಅಲೆಮಾರಿ ಸಮುದಾಯಗಳು ನರಳುತ್ತಿದ್ದಾರೆ. ಇದು ಬೆಕ್ಕಿಗೆ ಚೆಲ್ಲಾಟವಾದರೆ ಇಲಿಗೆ ಪ್ರಾಣ ಸಂಕಟದ ಪ್ರಹಸನವಾಗಿದೆ.

ಒಂದುಕಡೆ ತಮ್ಮ ಸಮುದಾಯಗಳ ಐಡೆಂಟಿಟಿಯ ಯಾವುದೇ ಸಮಸ್ಯೆ ಇಲ್ಲದೆ ಸಂವಿಧಾನದ ಬದ್ಧ ಲಿಖಿತ ಚರಿತ್ರೆಯನ್ನು ಪಡೆಯುತ್ತಿರುವ ಸಮುದಾಯಗಳು ಇದ್ದರೆ ಮತ್ತೊಂದೆಡೆ ತಮ್ಮ ಲಿಖಿತ ಚರಿತ್ರೆಯನ್ನು ಕಾಣದ ತಮ್ಮನ್ನು ಪ್ರತಿನಿಧಿಸುವವರಾರೂ



ಇಲ್ಲದೆ ತಮ್ಮ ಐಡೆಂಟಿಟಿ ತಿಳಿಯದೆ, ತಿಳಿದರೂ ಆತಂಕದಿಂದ ಈ 'ಗಂಡಬೇರುಂಡ' ಮೀಸಲು ವ್ಯವಸ್ಥೆಯನ್ನು ಅಸಾಹಾಯಕತೆಯಿಂದ ನೋಡುವ ಅಲೆಮಾರಿಗಳು ಬದಿಗೆ ತಳ್ಳಲ್ಪಟ್ಟಿದ್ದಾರೆ.

ಉದಾಹರಣೆಗೆ 'ಬುಡ್ಗ ಜಂಗಮ್'ರ ಸಂಪೂರ್ಣ Antropological ವಿವರಗಳನ್ನು Edgar thruston, ಕೆ. ಎಸ್.ಸಿಂಗ್, ಉಪಸಂಸ್ಕೃತಿ ಅಧ್ಯಯನ ಮಾಲೆ- ಅಲೆಮಾರಿ ಅಧ್ಯಯನ ಮಾಲೆ-ವಿಶ್ವ ವಿದ್ಯಾಲಯಗಳಲ್ಲಿ ಪ್ರಕಟಿಸಿರುವ ಸಂಶೋಧನಾ ಕೃತಿಗಳು ಸರ್ಕಾರಿ ಆದೇಶಗಳು ಇವೆಲ್ಲವುಗಳಿಗಿಂತ ಇಂದಿಗೂ ಸ್ಪಷ್ಟಪಡಿಸುವ ಕ್ಷೇತ್ರಾಧ್ಯಯನ ಅಂದರೆ ಅದರ 'ಎತ್ನೊಗ್ರಫಿ'ಯನ್ನು ಪರಿಶಿಲಿಸುವ ಕ್ರಮ ಮೀಸಲಾತಿ/ ಜಾತಿಯನ್ನು ತಿಳಿಯದ ಬುಡ್ಗಜಂಗಮ್‌ರು ಬಳಸುವ 'ಬುಡ್ಗ' ಸಮುದಾಯದ ಉಪಕರಣ ನಮ್ಮ ಬುರಕಥೆ ಈರಮ್ಮ ತನ್ನ ಬುರಕಥೆ ಹಾಡುವಾಗ ಬಳಸುತ್ತಾಳೆ. ಆಂಧ್ರದಲ್ಲಿ ಗಂಡಸರು ನುಡಿಯುತ್ತಾರೆ. ಈ ಜಂಗಮ ಸಂಚಾರಿ ಜಿಂಗಾಲ. ಆದರೆ ಈ ಅಲೆಮಾರಿಗಳ ಮೀಸಲಾತಿಯನ್ನು ಕೆಲವು ಲಿಂಗಾಯತ ಜಂಗಮರು ವಂಚಿಸಿದ ಪ್ರಕರಣಗಳು ನಾಡಿಗೆ ತಿಳಿದಿದೆ.

ಕೆ.ಎಸ್.ಸಿಂಗ್ ಮೊದಲ ವರದಿಯ ಮೂರು ಪುಟಗಳಲ್ಲಿ ಅಲೆಮಾರಿ ಬುಡ್ಗ ಜಂಗಮರ ಬೆಡಗು-ಆಚಾರ-ವಿಚಾರ-ಸಂಸ್ಕೃತಿ ವಿವರಿಸುತ್ತಾನೆ. ಆದರೆ ನಾಲ್ಕನೆಯ ಪುಟದಿಂದ ವಿಭಿನ್ನ ಮಾಹಿತಿ ಕಾಣುತ್ತದೆ. ಇದನ್ನೇ ಕೆಲವು ಲಿಂಗಾಯಿತರು ಬೇಡ ಜಂಗಮರನ್ನು ಕುರಿತು ಎರಡನೇ ಬಾರಿ Anthropologocal survey of India ದಿಂದ ಅಧ್ಯಯನಕ್ಕೆ ಒಳಪಡಿಸಲಾಯಿತು. ಭಾರತ ಸರ್ಕಾರ ಪ್ರಕಟಿಸಿದ ಈ ವರದಿಯನ್ನು ಸಾರ್ವಜನಿಕವಾಗಿ ತಿಳಿಸಿರುವ ಈ ವರದಿ ಇಂತಿವೆ.

A Restudy of the Beda jangam.

Thurston, E., Castes and Tribes of southern India (Mardas: Governement Press, 1909; rpt. 1975, Delhi: Cosmo Publication). ವಿವರಣೆಗೆ ನೋಡಿ.

ಇಷ್ಟಾಗಿಯೂ ಅಲೆಮಾರಿ ಬುಡ್ಗಜಂಗಮ್‌ರಿಗೆ ತಮ್ಮ ಐಡೆಂಟಿಟಿಯನ್ನು ದಕ್ಕಿಸಿಕೊಳ್ಳಲಾಗುತ್ತಿಲ್ಲ. ಇವರು ಭಿಕ್ಷೆ ಬೇಡಲು ಹಾಕುವ ವೇಷಗಳನ್ನು ಸ್ಥಳೀಯ ಜನಪದರು ತೆರೆದಂತೆ ಭಾವಿಸಲಾಗಿದೆ. ಬೈರಾಗಿವೇಷ, ಬಹುರೂಪಿ, ಹಗಲುವೇಷ, ಬುರಕಥೆ, ಇಂತಹ ಹೆಸರುಗಳಿವೆ. ಈ ಅಲೆಮಾರಿಗಳು ಸಾಗುತ್ತಿದ್ದು ಇದರ ಬಗ್ಗೆ ಸ್ಪಷ್ಟಿಕರಣ ನೀಡಿ ಅಲೆಮಾರಿಗಳಿಗೆ ಸಾಮಾಜಿಕ ನ್ಯಾಯದ ನ್ಯಾಯ ದೊರಕಿಸಿ ಕೊಡಬೇಕಾದದ್ದು ಸಾಮಾಜಿಕ ನ್ಯಾಯದ ನಿಯೋಗಿ ಸಂಸ್ಥೆಗಳ ಜವಾಬ್ದಾರಿಯಾಗಿದೆ.

ಈ ಮಧ್ಯೆ ಇಂತಹ ಅನಾಥ ಸಮುದಾಯಗಳ ಬಗ್ಗೆಯೂ ಅಸಹನೆಯಿಂದ ನಡೆದುಕೊಳ್ಳುವ ಸಂಶೋಧಕರು ಇದ್ದಾರೆ.



ಮುಖ್ಯವಾದ ಮತ್ತೊಂದು ಸಂಗತಿ ಎಂದರೆ ಬುಡ್ಗ ಜಂಗಮರು ಮತ್ತು ಸುಡುಗಾಡು ಸಿದ್ಧರು ಒಂದೇ ಆಗಿದ್ದಾರೆ. ಬೆಡಗು-ಆಚಾರ-ವಿಚಾರ-ಮದುವೆ- ಸಂಬಂಧಗಳು ಭಾಷೆಯಿಂದ ಒಂದೇ ಆದರೂ ಐಡೆಂಟಿಟಿಯ ನೆಲೆಯಲ್ಲಿ ಬೇರೆ ಬೇರೆ ಸಾಗುತ್ತಿದ್ದಾರೆ. ಇದನ್ನು ಯಾರೇ ಕ್ಷೇತ್ರಾಧ್ಯಯನದಲ್ಲಿ ಪರೀಕ್ಷಿಸಬಹುದು.

ಇಂತಹ ಐಡೆಂಟಿಟಿಯ ಸಮಸ್ಯೆ ಶಿಳ್ಳೆಕ್ಯಾತರನ್ನು ಕಾಡುತ್ತಿದೆ. ಭಾರತ ಸರ್ಕಾರದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಅಲೆಮಾರಿ ಶಿಳ್ಳೆಕ್ಯಾತರು ತಮ್ಮ ಕುಲ ಕಸುಬಾದ ತೊಗಲುಗೊಂಬೆ ಮತ್ತು ಮೀನು ಹಿಡಿಯುವ ವೃತ್ತಿಗೆ ಅಂಟಿಕೊಂಡವರು. ಮೂಲತಃ ಮರಾಠಿ ನೆಲದಿಂದ ವಲಸೆ ಬಂದ ಶಿಳ್ಳೆಕ್ಯಾತರು ಮರಾಠಿಯನ್ನು ಮಾತನಾಡಿದರೂ ಅವರದೇ ಆದ ಮರಗು ಭಾಷೆ ಇದೆ. ಸ್ಥಳೀಯವಾಗಿ ವಿವಿದೆಡೆ ಇವರನ್ನು ಕಿಳ್ಳೆಕ್ಯಾತ, ಕಟಬು, ಗೊಂಬೆರಾಮ, ಬುಂಡಬೆಸ್ತ ಎಂದೆಲ್ಲ ಕರೆದಿದ್ದು ಈ ಪರ್ಯಾಯ ಹೆಸರುಗಳೆಲ್ಲಾ ಪ್ರವರ್ಗ-೧ ರಲ್ಲಿ ದಾಖಲಾಗಿದೆ. ಜಾತಿಪತ್ರ ನೀಡುವ ತಹಶೀಲ್ದಾರ್ ಶಿಳ್ಳೆಕ್ಯಾತ ಎಂದು ನೀಡುತ್ತಾ ಸಂವಿಧಾನ ಬದ್ಧ ಹಕ್ಕನ್ನು ಹೀಗೆ ತಿರಸ್ಕರಿಸುತ್ತಾ ಅಲೆಮಾರಿಗಳಿಗೆ ದ್ರೋಹವೆಸಗಿದ್ದಾರೆ.

ಸುತ್ತಾಡುವ ಈ ಅನಾದಿಗಳ ಪರವಾಗಿ ಇಂತಹ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಬೇಕಾದ ಆಯೋಗಗಳು ಬಲಿಷ್ಠರ ಧ್ವನಿಯಾಗಿವೆ. ಇನ್ನೂ ಅಸಂಘಟಿತ ಅನಕ್ಷರಸ್ತ ಅಲೆಮಾರಿಗಳು ಕನಿಷ್ಟ ಕಾನೂನಿನ ಹೋರಾಟ ಮಾಡುವ ಶಕ್ತಿಯನ್ನೂ ಪಡೆದಿಲ್ಲ. ಇವರ ಪರವಾಗಿ ಕನಿಷ್ಟ ಮಾನವೀಯ ಕಾರಣದಿಂದಾದರು ವಕೀಲರು ದನಿಯಾಗಬೇಕಿತ್ತು.

ಇಂತಹವರೇ ಸಮಸ್ಯೆ ಸಿಂಡೋಳ್ಳು ಸಮುದಾಯಕ್ಕಿದೆ. ಜಗತ್ತಿನ ಯಾವುದೇ ಸಮುದಾಯ ಇವರಷ್ಟು ಬಡತನದಿಂದ ಇರಲು ಸಾಧ್ಯವಿಲ್ಲ. ಇಂದಿಗೂ ಕನಿಷ್ಟ ಹತ್ತನೆಯ ತರಗತಿಯ ವಿದ್ಯಾರ್ಥಿಯನ್ನು ನೀಡದ ಈ ಸಮುದಾಯವನ್ನು ಸ್ಥಳೀಯ ದುರ್ಗಮುರ್ಗಿ, ಬರ್‌ಬರ್‌ಶಾ, ಪೋತರಾಜ ಎಂದೆಲ್ಲಾ ಕರೆದು ಹಾವನೂರು ವರದಿಯಲ್ಲಿ ಈ ಪರ್ಯಾಯ ಹೆಸರುಗಳನ್ನು ಹಿಂದುಳಿದ ವರ್ಗದ ಪ್ರವರ್ಗ-೧ ರ ಪಟ್ಟಿಯಲ್ಲಿ ಇಡಲಾಗಿದೆ. ತಮ್ಮ ಬೆನ್ನಿಗೆ ಛಡಿ ಏಟಿನಿಂದ ಬಾರಿಸಿಕೊಳ್ಳುವ ಈ ಅಲೆಮಾರಿಗಳಿಗೆ ಸಂವಿಧಾನ ಸಾಮಾಜಿಕ ನ್ಯಾಯ ಮರೀಚಿಕೆಯಾಗಿದೆ.

ಉಪಸಂಸ್ಕೃತಿ ಮಾಲೆಯಲ್ಲಿ ಇಂತಹ ಅಲೆಮಾರಿ ಸಿಂಧೋಳ್ಳು ಸಮುದಾಯವನ್ನು ನಾಡೋಜ ಗೀತಾ ನಾಗಭೂಷಣರವರು ದುರ್ಗಮುರ್ಗಿ ಎಂತಲೇ ಗುರುತಿಸಿದ ಪರಿಣಾಮ ಅದರ ಮೂಲ ಸಿಂಧೋಳ್ಳು ಐಡೆಂಟಿಟಿ ಮರೆಮಾಚಿದಂತಾಗಿ ಪರಿಶಿಷ್ಟ ಜಾತಿಯ ಹಕ್ಕುಗಳ ದಕ್ಕಲಿಲ್ಲ.

ಈಗೆ ಹಲವಾರು ಅಲೆಮಾರಿ ಸಮುದಾಯವನ್ನು ಇಂದಿಗೂ ಐಡೆಂಟಿಟಿ ಸಮಸ್ಯೆಯಿಂದ ಬಳಲುತ್ತಿದ್ದು ಇದೀಗ ಎಚ್ಚರವಾಗುತ್ತಿದ್ದಾರೆ. ಒಮ್ಮೆ ಹಾವನೂರು



ಜೊತೆ ಸಹವರ್ತಿಯಾಗಿ ಕೆಲಸ ಮಾಡಿದ ಶ್ರೀ ಸಣ್ಣೀರರನ್ನು ಕೇಳುತ್ತಾ ಏಕೆ ಹಾವನೂರು ಅಲೆಮಾರಿಗಳ ಪರ್ಯಾಯ ಹೆಸರುಗಳನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದರು? ಎಂದಾಗ ಹಾವನೂರು ಅತ್ಯಂತ ವಿಷಾದದಿಂದ ಅಲೆಮಾರಿಗಳು ಅಲ್ಲಿಯೂ ಇರಲಿ ಮತ್ತು ಅತೀ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯೂ ಇರಲಿ ಎಂದು ಅನುಕಂಪದಿಂದ ಸೇರಿಸಿದರು ಎಂದು ಕೇಳಿದರು.

ಪ್ರಸ್ತುತ ಕರ್ನಾಟಕ ಮತ್ತು ರಾಜ್ಯದ ಪರಿಶಿಷ್ಟ ಜಾತಿಗಳ ಆಯೋಗ ಮತ್ತು ರಾಜ್ಯದ ಇಲಾಖೆಗಳು ಐಡೆಂಟಿಟಿ ಸಮಸ್ಯೆಯನ್ನು ಪರಿಹರಿಸಬಹುದಿತ್ತು. ಆದರೆ ಹಲವರಿಗೆ ಇಂತಹ ಸಮಸ್ಯೆಗಳ ಬಗ್ಗೆ ಕೇವಲ ಅನುಕಂಪ ಮಾತ್ರವಿದ್ದು ಕಾನೂನಿನ ಪರಿಹಾರ ಕೊಡಿಸಲು ಮುಂದಾಗುತ್ತಿಲ್ಲ.

ಕೂಡಲೇ ಕರ್ನಾಟಕದಲ್ಲಿ ಒಂದು ಶಾಶ್ವತ ಅಲೆಮಾರಿ ಆಯೋಗವನ್ನು ರಚಿಸಿ ಅತ್ಯಂತ ವೈಜ್ಞಾನಿಕವಾದ ಅಲೆಮಾರಿ ಪಟ್ಟಿಯನ್ನು ರಚಿಸಬೇಕೆ, ಮತ್ತು ಅಲೆಮಾರಿ ಐಡೆಂಟಿಟಿ ಸಮಸ್ಯೆಯನ್ನು ಆದ್ಯತೆಯಾಗಿ ಪರಿಹರಿಸಬೇಕು.

ಪರಿಶಿಷ್ಟ ಜಾತಿಯ ಲಂಬಾಣಿಗಳು ಹಿಂದುಳಿದ ವರ್ಗದ ಪಟ್ಟಿಯಲ್ಲಲಿರುವ 'ಬಂಜಾರ' ಪದವನ್ನು ಉಪಯೋಗಿಸದಷ್ಟು ಎಚ್ಚರದಿಂದಿದ್ದಾರೆ. ಆದರೆ ಇಂತಹ ಎಚ್ಚರ ದ್ರಾವಿಡ ಅಲೆಮಾರಿಗಳಿಗೆ ಇಲ್ಲ ಎನ್ನುವುದು ವಾಸ್ತವ.

**ವಸತಿ ಸಮಸ್ಯೆ**

ವಿಶ್ವ ಸಂಸ್ಥೆಗೆ ಭಾರತ ಸರ್ಕಾರ ಒಂದು ಮುಚ್ಚಳಿಕೆಯನ್ನು ನೀಡಿದ್ದು ಅದರಂತೆ ಭಾರತದಲ್ಲಿ ೨೦೧೫ರ ವೇಳೆಗೆ ಗುಡಿಸಲು ಟೆಂಟುಗಳು ಇಲ್ಲದೆ ಪ್ರತಿಯೊಬ್ಬನಿಗೂ ಸೂರು ನೀಡುತ್ತೇವೆ ಎಂದು ಸುಳ್ಳು ಹೇಳಿದೆ. ವಾಸ್ತವವಾಗಿ ಶೇ೮೦% ರಷ್ಟು ಅಲೆಮಾರಿಗಳಿಗೆ ರೇಷನ್ ಕಾರ್ಡ್, ಮತದಾನದ ಹಕ್ಕು, ಜಾತಿಪತ್ರಗಳಿಲ್ಲದೇ ಟೆಂಟುಗಳಲ್ಲೇ ಬದುಕಿದೆ.

ಕರ್ನಾಟಕದಲ್ಲಿ ಸರಾಸರಿ ಅರವತ್ತೈದು ಸಾವಿರ ಮನೆಗಳು ನೀಡಿದ್ದೇ ಆದರೆ ಅಲೆಮಾರಿಗಳು ತಮ್ಮ ಅಲೆಮಾರಿತನವನ್ನು ಬಿಡುತ್ತಾರೆ. ಮನೆ ನೀಡಿದರೆ ಅವರು ಅದರಲ್ಲಿ ವಾಸಿಸುವುದಿಲ್ಲ. ಎಂಬುದು ಶುದ್ಧ ಸುಳ್ಳು ಆಗಿದೆ. ಅಂತಹ ಅಪಪ್ರಚಾರ ಇನ್ನಷ್ಟು ನಕಾರಾತ್ಮಕವಾಗಿ ನಿರುತ್ಸಾಹಗೊಳಿಸಿ ಅಲೆಮಾರಿತನವನು ಮುಂದುವರೆಸುತ್ತಿದೆ.

**ತುರ್ತು ಆದ್ಯತೆಗಳು**

ಭಾರತ ಸರ್ಕಾರ ಶಾಶ್ವತ ಅಲೆಮಾರಿ ಆಯೋಗವನ್ನು ರಚಿಸಿ, ಭಾರತದ ಎಲ್ಲಾ ಅಲೆಮಾರಿ ಸಮುದಾಯಗಳ ಸರ್ವಾಂಗೀಣ ಪ್ರಗತಿಗೆ ಬದ್ಧತೆ ತೋರಿಸಬೇಕು. ಬಹಳ ಮುಖ್ಯವಾಗಿ ಅಲೆಮಾರಿ ಬುಡಕಟ್ಟುಗಳು ಪರಿಶಿಷ್ಟ ಜಾತಿ-ವರ್ಗ ಮತ್ತು ಬಂದುಳಿದ ವರ್ಗಗಗಳ ಪಟ್ಟಿಯಲ್ಲಿ ಹಂಚಿಹೋಗಿದ್ದು ಇಂತಹ ಪಟ್ಟಿಗಳಿಂದ ಅಲೆಮಾರಿ

ಬುಡಕಟ್ಟುಗಳನ್ನು ಹೊರತೆಗೆದು ೩ನೇ ಪರಿಶಿಷ್ಟವನ್ನು ರಚಿಸಬೇಕು. ಈ 3rd Shedule ರಚಿಸಲು ಸಂವಿಧಾನ ತಿದ್ದುಪಡಿಯಾಬೇಕಾಗಿದೆ.

ಬಲಿಷ್ಟರೊಡನೆ ಪೈಪೋಟಿ ಮಾಡಲಾಗದ ಅಲೆಮಾರಿಗಳಿಗೆ ಮೂರನೇ ಪರಿಶಿಷ್ಟ ಸಂಜೀವಿನಿಯಾಗುತ್ತದೆ.

ಆದರೆ ಇಷ್ಟೆಲ್ಲಾ ಸಾಧ್ಯವಾಗಲು ರಾಜಕೀಯ ಇಚ್ಛಾಶಕ್ತಿಯನ್ನು ಕಟ್ಟಿಕೊಡುವ ಒತ್ತಡ ಗುಂಪುಗಳು(pressure groups) ಅಲೆಮಾರಿಗಳಿಗೆ ಇಲ್ಲದ ಕಾರಣ ಅಲೆಮಾರಿಗಳಿಗೆ ಧ್ವನಿ ಕಳೆದುಕೊಂಡಿದ್ದಾರೆ.

ಹದಿನೈದು ಕೋಟಿ ಅಲೆಮಾರಿಗಳಿಗೆ ತಳ ಕಚ್ಚಿದ್ದು ಇದನ್ನು ಯಾವುದೇ ವ್ಯವಸ್ಥೆ ಮೂಕವಾಗಿ ಗಮನಿಸುತ್ತಿದೆ. ಎಂದರೆ ಇದು ಆ ದೇಶದ ಅಂಗವಿಕಲ ಶಾಸಕಾಂಗವಾಗಿರುತ್ತದೆ. ಎಂದು ಎಲ್ಲೋ ಓದಿದ ನೆನಪು.

ವಸತಿ-ಶಿಕ್ಷಣ-ಮೀಸಲಾತಿ- ಈ ಮೂಲಕ ಅಲೆಮಾರಿ ಜಗತ್ತನ್ನು ಬೆಳಗುವ ಅಂಬೇಡ್ಕರ್‌ರಾಗಿ ಈ ಅಂದೋಲನ ಕಾಯುತ್ತಿದೆ. ಇದನ್ನು ಸ್ಪಂದಿಸುವ ಈ ದೇಶದ ಸಾಹಿತಿಗಳು ಅಕಾಡೆಮಿಗಳು/ ಆಯೋಗಗಳು ಕಡೆಗೆ ಪ್ರಜ್ಞಾವಂತರು ಸಹ ನಮ್ಮನ್ನು ಮರೆತವರೆಂದು ಅಲೆಮಾರಿಗಳು ಭಾವಿಸಿದರೆ ತಪ್ಪೇನಿಲ್ಲ.

*************

## ೧೨. ದಲಿತ ಸ್ತ್ರೀವಾದ: ಸಮಸ್ಯೆ ಮತ್ತು ಸವಾಲುಗಳು

**- ಚಿ.ಯು ಸುಮಾ**

ಸ್ತ್ರೀವಾದ ಎಂದರೆ ಲಿಂಗತಾರತಮ್ಯ ಪುರುಷ ಪ್ರಧಾನತೆ ಮತ್ತು ಪಿತೃ ಪ್ರಧಾನತೆಯನ್ನು ಗುರುತಿಸುವ ಹಾಗೂ ಅದನ್ನು ಪ್ರಶ್ನಿಸುವ ತಾತ್ವಿಕತೆ. ಈ ರೀತಿಯ ಕ್ರಿಯೆ ಮತ್ತು ಚಿಂತನೆಗಳಲ್ಲಿ ತೊಡಗಿರುವ ಪುರುಷರೂ ಸ್ತ್ರೀವಾದಿಗಳಾಗುತ್ತಾರೆ. ಈ ಹೊತ್ತು ಸ್ತ್ರೀವಾದ ಪ್ರಮುಖವಾದ ಮೂರು ಹಂತಗಳನ್ನು ದಾಟಿ ನಾಲ್ಕನೆ ಹಂತದತ್ತ ಸಾಗಿತಿದೆ. ಅದನ್ನು ನಾಲ್ಕನೆ ಅಲೆ ಎಂದು ಗುರುತಿಸುತ್ತಾನೆ. ಈ ನಾಲ್ಕನೆಯ ಅಲೆಯ ವಿಶಿಷ್ಟತೆ ಏನೆಂದರೆ ಅದು ಸ್ತ್ರೀವಾದವನ್ನು

೧. ಏಕಘನಾಕೃತಿಯ ರಚನೆ ಅದು ಪರಿಗಣಿಸುವುದಿಲ್ಲ.

೨. ಸ್ತ್ರೀವಾದದಲ್ಲಿ ಭಿನ್ನ ತಾತ್ವಿಕತೆ ಇರುವ ಪರಿಸರ ಸ್ತ್ರೀವಾದಿ, ತೃತೀಯ ಲಿಂಗಿಗಳ ಸ್ತ್ರೀವಾದ, ದಲಿತ ಸ್ತ್ರೀವಾದ ಎಂದು ಅನೇಕ ಕವಲುಗಳಲ್ಲಿ ಇದನ್ನು ಗುರುತಿಸಲಾಗುತ್ತದೆ.

೩. ಪ್ರಸ್ತುತ ಚರ್ಚೆಗೆ ಒಳಪಡಿಸುತ್ತಿರುವ ದಲಿತ ಸ್ತ್ರೀವಾದ ಈಗಲೇ ಇರುವ ಸ್ತ್ರೀವಾದದ ಎಲ್ಲಾ ಧಾರೆಗಳಿಗಿಂತ ವಿಭಿನ್ನವಾದುದು. ಸರಳವಾಗಿ ದಲಿತ ಹೆಣ್ಣುಮಕ್ಕಳೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಹೆಣ್ಣು ಮಕ್ಕಳೆಂದು ಗುರುತಿಸಲಾಗುತ್ತದೆ. ಆದರೆ ದಲಿತ ಚಳವಳಿಯ ಆರಂಭಿಕ ಘಟ್ಟದಲ್ಲಿ ದಲಿತ ಎಂಬುದು ಶೋಷಿತ, ಅವಮಾನಿತ, ಪ್ರತ್ಯೇಕಿತ ಹಾಗೂ ಹೋರಾಟದ ಆಯಾಮವನ್ನು ಒಳಗೊಂಡಿರುವ ಒಂದು ಸಾಮಾಜಿಕ ಸಮುದಾಯ ಎಂದು ಸೂಚಿಸಲಾಗುತ್ತಿತ್ತು. ಆದರೆ ಈ ಹೊತ್ತು ದಲಿತ ಸ್ತ್ರೀವಾದ ಎನ್ನುವ ಚೌಕಟ್ಟಿನಲ್ಲಿ ಇದರ ಜೊತೆಗೆ ಮತಾಂತರವನ್ನು ಹೊಂದಿದೆ. ದಲಿತ ಮಹಿಳೆಯರ ಕಾಳಜಿಯನ್ನು ಕೂಡಾ ಪ್ರಮುಖವೆಂದು ಪರಿಗಣಿಸಲಾಗುತ್ತದೆ. ದಲಿತ ಸ್ತ್ರೀವಾದ ಮುಖ್ಯವಾಹಿನಿಯಲ್ಲಿರುವ ಸ್ತ್ರೀವಾದಕ್ಕಿಂತ ಯಾಕೆ ವಿಭಿನ್ನತೆಯನ್ನು ಪಡೆದುಕೊಳ್ಳುತ್ತದೆ. ಎಂದರೆ, ಈ ಸಮುದಾಯದ ಹೆಣ್ಣುಮಕ್ಕಳ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿನ್ಯಾಸಗಳು ಇತರೆ ಜಾತಿಯ, ನರ್ಗದ ಹೆಣ್ಣುಮಕ್ಕಳಿಗಿಂತ ಭಿನ್ನವಾದವು. ಈ ಹೊತ್ತು ದಲಿತರು ಕೂಡ ಮುಖ್ಯವಾಹಿನಿಯ ಎಲ್ಲಾ ವರ್ಗಗಳಲ್ಲಿ, ಎಲ್ಲಾ ನಗರಗಳಲ್ಲಿ, ಎಲ್ಲಾ ಔದ್ಯೋಗಿಕ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದಾರೆ. ಈ

ಸಮುದಾಯದ ಸುಮಾರು ಮುಕ್ಕಾಲು ಪಾಲು ಜನಸಂಖ್ಯೆ ಇನ್ನೂ ಆರ್ಥಿಕವಾಗಿ ತಳಸ್ತರದಲ್ಲಿಯೇ ಬದುಕುತ್ತಿದ್ದಾರೆ. ಕಡುಬಡತನ, ಹಸಿವು, ಹಿಂಸೆ, ಲೈಂಗಿಕ ಶೋಷಣೆ, ಕಡಿಮೆ ಕೂಲಿ, ಇದೆಲ್ಲಕ್ಕಿಂತ ಹೆಚ್ಚಾಗಿ ಜಾತಿ ತಾರತಮ್ಯದ ಎಲ್ಲಾ ನಿಷಿದ್ಧ ಆಚರಣೆಗಳು ಇಲ್ಲಿ ಇನ್ನೂ ಜೀವಂತವಾಗಿವೆ. ಹೀಗಾಗಿ ದಲಿತ ಹೆಣ್ಣು ಮಕ್ಕಳನ್ನು ಒಂದು ಪ್ರತ್ಯೇಕ ಸಾಮಾಜಿಕ ಘಟಕ ಎಂದೇ ಪರಿಗಣಿಸಿ ಈ ಹೆಣ್ಣುಮಕ್ಕಳ ಸ್ತ್ರೀವಾದದ ತತ್ವಗಳು ಮುಖ್ಯವಾಹಿನಿಯ ಸ್ತ್ರೀವಾದದ ತತ್ವಕ್ಕಿಂತ ವಿಭಿನ್ನವೆಂದು ಗುರುತಿಸಲಾಗುತ್ತದೆ.

ನಮ್ಮ ಮುಂದಿರುವ ಮುಖ್ಯವಾದ ಪ್ರಶ್ನೆಯೆಂದರೆ ದಲಿತ ಹೆಣ್ಣು ಮಕ್ಕಳನ್ನು ಬಿಟ್ಟರೆ ಇತರೇ ಜಾತಿಯ ಹೆಣ್ಣುಮಕ್ಕಳಿಗೆ ಈ ಸಮಸ್ಯೆ ಇಲ್ಲವೇ ಎಂಬುದು. ಆದರೆ ಅವರಿಗಿರುವ ಬೆಂಬಲ ವ್ಯವಸ್ಥೆ, ಪುನರ್ವಸತಿಯ ಅವಕಾಶಗಳು ದಲಿತ ಹೆಣ್ಣುಮಕ್ಕಳಿಗಿಂತ ಹೆಚ್ಚು ವಿಸ್ತಾರವಾದದ್ದು. ಅವರಿಗೆ ಎಲ್ಲೋ ಒಂದು ಸಣ್ಣ ದಾರಿಯಾದರೂ ಕಾಣಬಹುದು. ಆದರೆ ದಲಿತ ಹೆಣ್ಣುಮಕ್ಕಳ ಸ್ಥಿತಿ ಹೀಗಿರುವುದುಲ್ಲ. ಎಲ್ಲಾ ಸರಿ ಇರುವಾಗಲೂ ವಿಮೋಚನೆ ಎನ್ನುವುದು ಮಹಿಳೆಯರಿಗೆ ದೊಡ್ಡ ಸವಾಲಾಗಿರುವಾಗ, ದಲಿತ ಮಹಿಳೆಯರ ಪರಿಸ್ಥಿತಿ ಹದಗೆಟ್ಟ ಸಂದರ್ಭದಲ್ಲಿ ಅವರ ಸಾಮಾಜಿಕ ವ್ಯವಸ್ಥೆ ಎಲ್ಲಾ ರೀತಿಯಿಂದಲೂ ಮತ್ತಷ್ಟು ದುರ್ಬಲವಾಗಿ ನಿರ್ನಾಮವಾಗುವ ಸಾಧ್ಯತೆಗಳೇ ಹೆಚ್ಚುರುತ್ತವೆ. ಹೀಗಾಗಿ ದಲಿತ ಸ್ತ್ರೀವಾದದ ನೆಲೆಗಟ್ಟುಗಳು ಮತ್ತು ಕಾರ್ಯನಿರ್ವಹಿಸುವ ವಿಧಾನಗಳು ಎಲ್ಲವೂ ಬೇರೆಯಾಗಿರುತ್ತವೆ. ಈ ಗ್ರಹಿಕೆಯ ಸಂಪೂರ್ಣ ಅರಿವಿರುವ ಸಂದರ್ಭದಲ್ಲಿ ದಲಿತ ಸ್ತ್ರೀವಾದವನ್ನು ಅರ್ಥಮಾಡಿಕೊಳ್ಳಲು ಕೆಲವು ಮುಖ್ಯವಾದ ತೊಡಕುಗಳಿವೆ.

ಈಗ ನಮ್ಮ ಕಾಲಘಟ್ಟದಲ್ಲಿ ದಲಿತ ಹೆಣ್ಣುಮಕ್ಕಳನ್ನು ಹೇಗೆ ಮತ್ತು ಎಲ್ಲಿ ಗುರುತಿಸಬೇಕೆ ಎನ್ನವುದು ದೊಡ್ಡ ಸಮಸ್ಯೆಯಾಗುತ್ತಿದೆ. ದಲಿತ ಹೆಣ್ಣುಮಕ್ಕಳ ಸಾಮಾಜಿಕ ರಚನೆಯನ್ನು ಬಹುಶಃ ಹೀಗೆ ಗುರುತಿಸಬಹುದು.

೪. ಮುಖ್ಯವಾಹಿನಿಯಲ್ಲಿ ಒಂದು ಸಾಮಾಜಿಕ ರಚನೆಯಂತೆ ಅಥವಾ ಆಧುನಿಕ ಸಾಮಾಜಿಕ, ರಾಜಕೀಯ ಸಿದ್ಧಾಂತಗಳನ್ನು ಆಧರಿಸಿ ರೂಪುಗೊಂಡಿದ್ದರೂ ಕೊನೆಗೂ ಅದು ಪಾರಂಪರಿಕ ಶ್ರೇಣಿಕೃತ ವ್ಯವಸ್ಥೆಯ ಎಲ್ಲಾ ಗುಣಗಳನ್ನು ಜೀವಂತವಾಗಿ ಪೋಷಿಸುತ್ತಿದೆ.

೫. ದಲಿತ ಹೆಣ್ಣು ಮಕ್ಕಳು ವಾಸ್ತವವಾಗಿ ಈ ಶ್ರೇಣಿಕೃತ ವ್ಯವಸ್ಥೆಯನ್ನು ಆಧರಿಸಿದ ಯಾವ ವರ್ಣ ಮತ್ತು ಜಾತಿಗಳಿಗೂ ಸೇರದೇ ಹೋದರೂ ತಮ್ಮ ಮೆಲೆ ನಿರಂತರವಾಗಿ ಅಧಿಕಾರ ಸಾಧಿಸುತ್ತಾ ಬಂದಿರುವ ಈ ಸಾಮಾಜಿಕ ರಚನೆಯ ಸ್ವರೂಪದಿಂದ ತೀವ್ರವಾಗಿ ಪ್ರಭಾವಿರತಾಗಿ, ಅಲ್ಲಿ ಆಚರಣೆಯಲ್ಲಿರುವ



ಸಮಾಜೋ ಸಾಂಸ್ಕೃತಿಕ ನೀತಿಗಳಿಗೆ ತಮ್ಮನ್ನು ತೆತ್ತುಕೊಂಡುಬಿಟ್ಟಿದ್ದಾರೆ. ಈ ರೀತಿಯ ಪ್ರಭಾವದ ಹಿನ್ನೆಲೆಯಲ್ಲಿ ಮೇಲುಸ್ತರಗಳನ್ನು ಅನುಸರಿಸಬೇಕೆನ್ನುವ ಸುಪ್ತಪ್ರಜ್ಞೆಯಲ್ಲಿರುವ ಕೀಳರಿಮೆ ಕೆಲಸ ಮಾಡುತ್ತಿರುತ್ತದೆ. ವಾಸ್ತವವಾಗಿ ತಳಸ್ತರದ ಸಾಮಾಜಿಕ ಸ್ವರೂಪ ಮೇಲುಜಾತಿಯ ಸಾಮಾಜಿಕ ಸ್ವರೂಪಕ್ಕಿಂತ ಭಿನ್ನವಾಗಿದ್ದು, ಅದರ ಪಳೆಯುಳಕೆಗಳು ಇನ್ನೂ ಉಳಿದಿವೆ. ಎಂಬುದು ಸಮಾಜಶಾಸ್ತ್ರಜ್ಞರ ಸಿದ್ಧಾಂತವಾಗಿದೆ. ಡಾ. ಡೋಮಿನಿಕ್ ಅವರ 'ಕುಲ ಮೀಮಾಂಸೆ' ಎನ್ನುವ ಲೇಖನವು ವರ್ಣಾಶ್ರಮ ಎನ್ನುವ ಪದ್ಧತಿ ಮತ್ತು ಜಾತಿ ವ್ಯವಸ್ಥೆ ಲಂಬಾಕಾರವಾದ ರೀತಿಯಲ್ಲಿ ರಚನೆಯಾಗಿದೆ. ಕುಲದ ಕಲ್ಪನೆ ಒಂದು ಸಮತಟ್ಟಾಗಿರುವ ಸಾಮಾಜಿಕ ರಚನೆಯಾಗಿದೆ ಎಂದು ಪ್ರತಿಪಾದಿಸುತ್ತದೆ. ಅದಕ್ಕೆ ಅಗತ್ಯವಾಗಿರುವ ಉದಾಹರಣೆಗಳನ್ನು ಅವರು ನೀಡಿದ್ದಾರೆ. ಈ ಸಮತಟ್ಟಾಗಿರುವ ವ್ಯವಸ್ಥೆಯು ತಳಸ್ತರದ ಸಮುದಾಯಗೊಳಗಿರುವ ಕಸುಬು, ವೃತ್ತಿಗಳನ್ನು ಆಧರಿಸಿ ಸಾಮಾಜಿಕ ಸಂಬಂಧವಾಗಿದೆ. ತಳಸ್ತರದ ಹೆಣ್ಣಮಕ್ಕಳು ಏಕಕಾಲಕ್ಕೆ ಲಂಬಾಕಾರದ ಶ್ರೇಣಿಕೃತ ವ್ಯವಸ್ಥೆ ಮತ್ತು ಸಮತಟ್ಟಾದ ಸಾಮಾಜಿಕ ಸಂಬಂಧ ಎರಡರಿಂದಲೂ ಆಳಲ್ಪಟ್ಟವರಾಗಿದ್ದಾರೆ.

ಈ ಕಾರಣದಿಂದಾಗಿ ಲಿಂಗವ್ಯವಸ್ಥೆಯ ಸ್ವರೂಪ ಬಹಳ ಸಂಕೀರ್ಣವಾಗಿ ತಳಸ್ತರದ ಸಮುದಾಯದಲ್ಲಿ ಪ್ರಕಟವಾಗುತ್ತದೆ. ಇದನ್ನು ಸರಳವಾಗಿ ಬಹುಶಃ ಹೀಗೆ ಗುರುತಿಸಬಹುದು.

೬. ದಲಿತ ಹೆಣ್ಣುಮಕ್ಕಳನ್ನು ಅವರ ಸಮುದಾಯದವರೇ ಆದ ದಲಿತ ಪುರುಷರು ಹೇಗೆ ಗ್ರಹಿಸುತ್ತಾರೆ.

೭. ಇತರೆ ಜಾತಿಯ ಪುರುಷರು ಇವರನ್ನು ಹೇಗೆ ನೋಡುತ್ತಾರೆ.

೮. ಮೇಲ್ಜಾತಿಯ ಮತ್ತು ಮೇಲ್‌ವರ್ಗದ ಹೆಣ್ಣುಮಕ್ಕಳು ದಲಿತಹೆಣ್ಣು ಮಕ್ಕಳನ್ನು ನೋಡುವ ಬಗೆ ಯಾವುದು.

೯. ಸ್ವತಃ ದಲಿತ ಹೆಣ್ಣುಮಕ್ಕಳು ತಮ್ಮನ್ನು ತಾವು ಹೇಗೆ ಅರ್ಥೈಸಿಕೊಂಡಿರುತ್ತಾರೆ.

೧೦. ದಲಿತ ಹೆಣ್ಣುಮಕ್ಕಳ ಲಿಂಗ ಸಂಬಂಧಗಳು ಇಷ್ಟು ಸಂಕೀರ್ಣವಾಗಿರುವುದರಿಂದ ಇಲ್ಲಿ ಅಧಿಕಾರದ ಚಲನೆಯ ಅತ್ಯಂತ ಸಂಕೀರ್ಣವಾಗಿ ವ್ಯಕ್ತವಾಗುತ್ತಿರುತ್ತದೆ.

ಇನ್ನು ದಲಿತ ಹೆಣ್ಣುಮಕ್ಕಳ ಆರ್ಥಿಕ ಸ್ಥಿತಿಯನ್ನು ಗ್ರಹಿಸುವಲ್ಲಿಯೂ ಅನೇಕ ಸವಾಲುಗಳಿವೆ. ನಗರ, ಅರೆನಗರ, ಗ್ರಾಮ ಪರಿಧಿಯಲ್ಲಿರುವ ಪ್ರದೇಶಗಳು, ಇಲ್ಲಿ ಅವರು ಮಾಡುತ್ತಿರುವ ಕಸುಬು, ಉದ್ಯೋಗ, ಅವರು ಬದುಕುತ್ತಿರುವ ಕುಟುಂಬದ ಸ್ವರೂಪ, ಕುಟುಂಬದಲ್ಲಿರುವ ಜನಸಂಖ್ಯೆ, ಈ ಎಲ್ಲವನ್ನು ಆಧರಿಸಿ ಅವರ ಆರ್ಥಿಕ ಸ್ಥಿತಿ ನಿರ್ಧಾರವಾಗುತ್ತದೆ. ಆದ್ದರಿಂದ ದಲಿತ ಮಹಿಳೆಯ ಬಗ್ಗೆ ಮಾತಾನಾಡುತ್ತಿದ್ದೇವೆ



ಎಂಬುದು ಮತ್ತೊಂದು ಪ್ರಶ್ನೆಯಾಗಿದೆ. ಇಲ್ಲೇ ನಿರ್ಮಾಣವಾಗಿರುವ ಸಾಮಾಜಿಕ ವರ್ಗಗಳ ಕಾರಣದಿಂದಾಗಿ ಸಾಮಾನ್ಯವಾದ ಕೆಲವು ಮುಖ್ಯ ತಾತ್ವಿಕತೆಯನ್ನು ರೂಪಿಸಿಕೊಳ್ಳುವುದು ಕೂಡ ಸಾಧ್ಯವಾಗದೇ ಹೋಗಿದೆ. ಏಕೆಂದರೆ ಯಾವುದೋ ಒಂದು ರೀತಿಯ ತತ್ವವನ್ನು ರೂಪಿಸಿಕೊಂಡಾಗ ಅದು ಇದೇ ಜಾತಿಯ ಬೇರೆ ವರ್ಗದ ಹೆಣ್ಣುಮಕ್ಕಳಿಗೆ ಅನೂಕೂಲಕರವಾಗಿ ಪರಿಣಮಿಸುವ ಅಪಾಯ ಇರುತ್ತದೆ.

ದಲಿತ ಸಮುದಾಯದ ಸಾಂಸ್ಕೃತಿಕ ವಿನ್ಯಾಸದಲ್ಲೂ ಬಹುಮುಖ್ಯ ಆಯಾಮಗಳು ವ್ಯಕ್ತವಾಗುತ್ತವೆ. ಹಾಗೂ ನಿರಂತರವಾಗಿ ಬದಲಾಗುತ್ತಲೂ ಇರುವುದರಿಂದ ಸಾಂಸ್ಕೃತಿಕ ಅನನ್ಯತೆ, ಅಸ್ಪೃಶ್ಯತೆಯನ್ನು ಕುರಿತ ದಲಿತ ಮಹಿಳೆಯ ತತ್ವಗಳು ಧ್ರುವೀಕರಣಗೊಳ್ಳುವ ಅಪಾಯದಲ್ಲಿರುತ್ತದೆ. ಇದರ ಜೊತೆಗೆ ಮತಾಂತರಕ್ಕೆ ಒಳಗಾದ ಕ್ರೈಸ್ತರ, ಬೌದ್ಧಧರ್ಮದ ಸಾಂಸ್ಕೃತಿಕ ವಿನ್ಯಾಸಗಳು, ಒಂದು ದೃಷ್ಟಿಯಿಂದ ನೋಡಿದಾಗ ದಲಿತ ಸಮುದಾಯದೊಳಗೆ ಒಳಗೊಳ್ಳುವ, ಇನ್ನೊಂದು ದೃಷ್ಟಿಯಿಂದ ನೋಡಿದರೆ ಪ್ರತ್ಯೇಕವಾಗುವ ಬಿಕ್ಕಟ್ಟಿನಲ್ಲಿರುವುದರಿಂದ ದಲಿತ ಮಹಿಳೆಯರನ್ನು ಒಂದುಗೂಡಿಸುವ ಸಾಂಸ್ಕೃತಿಕ ಆಚರಣೆಗಳು ಸಾಧ್ಯವಾಗದ ಸ್ಥಿತಿಯಲ್ಲಿ ಇಂದು ಈ ಸಮುದಾಯ ಇದೆ. ಹೆಣ್ಣುಮಕ್ಕಳು ಆಚರಣೆಯ ನೆವದಲ್ಲಿ ಸಂಘಟಿತವಾಗುತ್ತ ವಿಸ್ತರಿಸುತ್ತಿರುವುದೇ ಮುಖ್ಯ ಕಾರಣವಾಗಿದೆ. ಆದರೆ ಈ ರೀತಿ ಸಂಘಟಿತವಾಗುವಂತಹ ಎಲ್ಲಾ ಸಾಧ್ಯತೆಗಳನ್ನು ದಲಿತ ಸಮುದಾಯದ ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಭಿನ್ನತೆಗಳು ಕುಂಇಟತಗೊಳಿಸುತ್ತವೆ. ಹೀಗಾಗಿ ದಲಿತ ಸ್ತ್ರೀವಾದ ಎನ್ನುವುದು. ಇನ್ನೂ ಆಗಬೇಕಾಗಿರುವ ಪ್ರಕ್ರಿಯೆ ಆಗಿ ನಿಲ್ಲುತ್ತದೆ.

ದಲಿತ ಹೆಣ್ಣುಮಕ್ಕಳ ರಾಜಕೀಯ ಪರಿಸ್ಥಿತಿಯು ಅತ್ಯಂತ ನಿರಾಶಾದಾಯಕವಾಗಿದೆ. ವಾಸ್ತವವಾಗಿ ಇಂದು ಎಲ್ಲಾ ಕ್ಷೇತ್ರಗಳಲ್ಲೂ ದಲಿತ ಹೆಣ್ಣುಮಕ್ಕಳೂ ರಾಷ್ಟ್ರದ ರಾಜಕೀಯದಲ್ಲಿ ಮಂಡಲ್ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಹಿಡಿದು ಸಂಸತ್ತಿನ (ಎಂ.ಪಿ) ಸದಸ್ಯರ ತನಕ ಅಲ್ಲಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹೆಣ್ಣುಮಕ್ಕಳು ತಮಗೆ ದೊರೆತಿರುವ ಅಧಿಕಾರವನ್ನು ಚಲಾಯಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿರುತ್ತಾರೆಯೇ ಎನ್ನವುದು ಒಂದು ಮುಖ್ಯವಾದ ಪ್ರಶ್ನೆಯಾಗಿದೆ. ಹಾಗೂ ದಲಿತ ಸಮುದಾಯದ ಪರವಾಗಿ ನೀತಿಗಳನ್ನು ರೂಪಿಸಬೇಕಾದ ಸಂದರ್ಭದಲ್ಲಿ ಕಠಿಣವಾದ ನಿರ್ಣಯಗಳನ್ನು ತೆಗೆದುಕೊಳ್ಳುವಷ್ಟು ಸ್ವಾಯತ್ತತೆ ಇವರಿಗೆ ಇರುತ್ತದೆಯೇ ಹಾಗೂ

ಯಾವುದೇ ರೀತಿಯ ಸಾಮಾಜಿಕ ವ್ಯತ್ಯಾಸಕ್ಕೆ ಕಾರಣವಾಗುವಂತಹ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಒಂದು ಗುಂಪಿನ ಮೇಲೆ ಒತ್ತಡ ಹೇರಲು ಸಾಧ್ಯವಾಗುವಷ್ಟು ಪ್ರಭಾವಶಾಲಿಯಾಗಿ ಇವರು ಇರುತ್ತಾರೆಯೇಎಂಬುದು ಪ್ರಶ್ನಾರ್ಹ ಸಂಗತಿಯಾಗಿದೆ.

ವಾಸ್ತವವಾಗಿ ಪಿತೃಪ್ರಾಧ್ಯಾನತೆ ಮತ್ತು ಪುರುಷ ಪ್ರಾಬಲ್ಯ ಈ ಎರಡು ಅಂಶಗಳು ಅತ್ಯಂತ ನಿರ್ಣಾಯಕವಾಗಿ ಕೆಲಸ ಮಾಡುವುದು ದಲಿತ ಹೆಣ್ಣುಮಕ್ಕಳ ಬದುಕಿನ ಮೇಲೆಯೇ ಆಗಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪುರುಷ ಪ್ರಾಬಲ್ಯದ ದೌರ್ಜನ್ಯ ಮತ್ತ ಅಮೂರ್ತ ಹಿಂಸೆಗಳು ಅತ್ಯಂತ ಕ್ರೂರವಾಗಿ ದಲಿತ ಹೆಣ್ಣು ಮಕ್ಕಳ ಮೇಲೆ ಕಾರಲ್ಪಡುತ್ತಿರುತ್ತವೆ. ಹೀಗಾಗಿ ನಿರ್ವಹಿಸುವ ಮತ್ತು



ನಿಭಾಯಿಸುವಂತಹ ಹೆಣ್ಣುಮಕ್ಕಳನ್ನು ಸೃಷ್ಟಿಸುವುದರಲ್ಲಿ ದಲಿತ ಸಮುದಾಯ ಹಾಗೂ ಇತರೆ ಜಾತಿಯ ಸಮುದಾಯಗಳು ಪ್ರಜ್ಞಾಪೂರ್ವಕವಾಗಿಯೇ ಅಡ್ಡಗಾಲನ್ನು ಒಡ್ಡತ್ತವೆ. ಈ ಕಾರಣದಿಂದಾಗಿ ದಲಿತ ಹೆಣ್ಣು ಮಕ್ಕಳ ಹಕ್ಕೊತ್ತಾಯ ಚಳವಳಿಗಳು ಎಷ್ಟೋ ಬಾರಿ ಕೇಳುವವರೆ ಇಲ್ಲದಂತೆ ಬಯಲ ದನಿಯಾಗಿ ಕಳೆದು ಹೋಗುವ ಸಾಧ್ಯತೆಗಳು ಸಾಕಷ್ಟು ಇರುತ್ತವೆ. ಈ ಎಲ್ಲಾ ಹಿನ್ನಲೆಯಲ್ಲಿ ತಳಸ್ತರದ ಸ್ತ್ರೀವಾದ ಸಾಧ್ಯವಾಗುತ್ತದೆಯೇ ಎನ್ನುವುದು ಒಂದು ಮುಖ್ಯ ಪ್ರಶ್ನೆಯಾಗಿದೆ.

ತಳಸ್ತರದ ಹೆಣ್ಣುಮಕ್ಕಳ ಅಗತ್ಯಗಳು ನಿರ್ದಿಷ್ಟ ಕಾಲ, ಪ್ರದೇಶ, ವರ್ಗದ ಅಗತ್ಯಕ್ಕೆ ತಕ್ಕಂತೆ ಅವು ಭಿನ್ನವಾಗುತ್ತಾ ಹೋಗುತ್ತವೆ. ಭಾರತದಲ್ಲಿ ದಲಿತ ಹೋರಾಟದ ರೂಪಕ್ಕೆ ಒಂದು ಭದ್ರವಾದ ಬುನಾದಿಯನ್ನು ಅಂಬೇಡ್ಕರ್ ಅವರ ಚಿಂತನೆಗಳು ದಲಿತ ಸ್ತ್ರೀವಾದವನ್ನು ರೂಪಿಸುವುದರಲ್ಲಿ ಯಾವ ರೀತಿ ಕೆಲಸ ಮಾಡಿವೆ ಎನ್ನವುದನ್ನು ಪರಿಶೀಲಿಸಬೇಕಾಗುತ್ತದೆ. ಡಾ. ಅಂಬೇಡ್ಕರ್ ಅವರ ತಾತ್ವಿಕತೆ ಎಷ್ಟರಮಟ್ಟಿಗೆ ಕರ್ನಾಟಕದ ದಲಿತ ಮಹಿಳೆಯರ ಚಿಂತನೆಯ ಮೇಲೆ ಪರಿಣಾಮ ಬೀರಿದೆ ಎಂಬುದನ್ನು ಇನ್ನೂ ಖಚಿತವಾಗಿ ಹೇಳದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಅದಕ್ಕೆ ಕಾರಣಗಳನ್ನು ಈ ರೀತಿಯಲ್ಲಿ ಗುರುತಿಸಬಹುದಾಗಿದೆ.

ದಲಿತರ ವಿಮೋಚನೆಗೆ ಅಂಬೇಡ್ಕರ್ ಅವರು ಬ್ರಾಹ್ಮಣೀಯ ಯಜಮಾನಿಕೆಯನ್ನು ಸಾರಾಸಗಟಾಗಿ ನಿರಾಕರಿಸುತ್ತಾರೆ. ಆದರೆ ತಳಸ್ತರದ ಮಹಿಳೆಯರ ಬದುಕಿನ ಮೇಲೆ ಇಲ್ಲಿ ತೀವ್ರವಾಗಿ ಪ್ರಭಾವವನ್ನು ಬೀರುತ್ತಿರುವುದು ಸಮಾಜೋ-ಸಾಂಸ್ಕೃತಿಕ ಚಲನೆಗಳೇ ಆಗಿವೆ. ಇದು ಮಾಧ್ಯಮಗಳ ಮೂಲಕ ಹೇರಲ್ಪಡುತ್ತಿರುವದರ ಜೊತೆಗೆ ದಲಿತ ಮಹಿಳೆಯರೇ ಮೇಲ್ಮುಖಿ ಚಲನೆ ಎಂಬ ಭ್ರಮೆಯಿಂದ ಅನುಕರಿಸುತ್ತಿರುವ ಸಂಗತಿಯೂ ಆಗಿದೆ. ತಳಸ್ತರದ ಮಹಿಳೆಯರ ಮೇಲೆ ಮೂರ್ತವಾದ ದೌರ್ಜನ್ಯ ಜಮೀನ್ದಾರಿ ವ್ಯವಸ್ಥೆಯಿಂದ ಉಂಟಾಗುತ್ತವೆ. ಈ ವ್ಯವಸ್ಥೆಯ ವಿರುದ್ಧ ದಲಿತ ಪುರುಷರೇ ಹೋರಾಡಲು ಅಸಫಲರಾಗಿರುವ ಸಂದರ್ಭದಲ್ಲಿ, ಇವರ

ಅಧೀನರಾಗಿರುವ ದಲಿತ ಮಹಿಳೆಯರು ಈ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಬಹುದಾದ ತಿಳುವಳಿಕೆ ಇದ್ದೂ, ಉತ್ತರಿಸಲಾರದ ಪರಿಸ್ಥಿಯಲ್ಲಿದ್ದಾರೆ. ಅಂಬೇಡ್ಕರ್ ದಲಿತರ ವಿಮೋಚನೆಗೆ ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ ದಲಿತ ಪುರುಷರ ಭಾಗವಹಿಸುವಿಕೆ ಬಹಳ ಮುಖ್ಯ ಎಂದು ಹೇಳುತ್ತಾರೆ. ಆದರೆ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಅತ್ಯಂತ ಹೆಚ್ಚು ಮತಗಳಿಸಿ, ಸತತವಾಗಿ ಚುನಾವಣೆಯಲ್ಲಿ ಗೆದ್ದಿರುವ (ರಾಮವಿಲಾಸ್ ಪಾಸ್ವಾನ್) ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಂತಹವರು ಕೂಡ ಮೇಲುಜಾತಿಯ ಅಧಿಕಾರ ರಾಜಕಾರಣದಲ್ಲಿ ಬದಿಗೆ ಸರಿಸಲ್ಪಟ್ಟಿರುವಾಗ ಇನ್ನು ಈಗ ತಾನೇ ಸ್ತ್ರೀಶಕ್ತಿ ಸಂಘಗಳನ್ನು ಕಟ್ಟಿಕೊಂಡು ಸಂಘಟಿತವಾಗುತ್ತಿರುವ ದಲಿತ ಮಹಿಳೆಯರು ಈ ರಾಜಕೀಯ ವ್ಯವಸ್ಥೆಯಲ್ಲಿ ಗಮನಾರ್ಹವಾದ ಪಾತ್ರವನ್ನು ವಹಿಸಲು ಇನ್ನೂ ಎಷ್ಟು ದೂರದ ದಾರಿಯನ್ನು ಕ್ರಮಿಸಬೇಕೆಂಬುದು ನಾವು ಊಹಿಸಿಕೊಳ್ಳಲು ಸಾಧ್ಯವಾಗದ



ಸಂಗತಿಯಾಗಿದೆ. ಆದ್ದರಿಂದ ದಲಿತರ ವಿಮೋಚನೆಗೆ ಅಂಬೇಡ್ಕರ್ ಅವರ ಚಿಂತನೆಗಳನ್ನು ದಲಿತ ಮಹಿಳೆಯರ ವಿಮೋಚನೆಗೂ ಸಾರಾಸಗಟವಾಗಿ ಅನ್ವಹಿಸಿಕೊಳ್ಳಲು ಈ ರೀತಿಯ ಸಮಸ್ಯೆಗಳು ಅಡ್ಡ ಬರುತ್ತವೆ.

ನಾವು ಕೇಳಿಕೊಳ್ಳಲೇಬೇಕಾದ ಮತ್ತೊಂದು ಮುಖ್ಯ ಪ್ರಶ್ನೆಯೆಂದರೆ, ದಲಿತ ಚಳುವಳಿಯ ದಲಿತ ಹೆಣ್ಣಮಕ್ಕಳಿಗೆ ಯಾವ ರೀತಿಯ ಅವಕಾಶಗಳನ್ನು ಸೃಷ್ಟಿಮಾಡಿದೆ ಎನ್ನುವುದು. ವಾಸ್ತವವಾಗಿ ದಲಿತ ಕಾರ್ಯಶಿಬಿರಗಳಲ್ಲಿ ದಲಿತ ಹೆಣ್ಣಮಕ್ಕಳು ಭಾಗವಹಿಸುತ್ತಿದ್ದರು. ಒಂದು ಹಂತದ ನಂತರ (ವಿವಾಹ, ಗರ್ಭಧಾರಣೆ, ಮಗುವಿನ ಜನನದ ನಂತರ) ಅವರು ಸಾರ್ವಜನಿಕ ವಲಯದಿಂದ ಕಾಣೆಯಾಗುತ್ತಿರುವುದು ಕಂಡುಬರುತ್ತದೆ.

ದಲಿತರ ವಿಮೋಚನೆಗೆ ದಲಿತ ಚಳವಳಿಯ ಮುಂದಿರುವ ಮತಾಂತರದ ಪ್ರಕ್ರಿಯೆಯಲ್ಲಿ, ಹೆಣ್ಣುಮಕ್ಕಳು ನಿಜವಾಗಿಯೂ ಸಂಪೂರ್ಣವಾಗಿ ಮತಾಂತರಗೊಂಡು ಬೌದ್ಧಧರ್ಮದವರಾಗಿ ಪರಿವರ್ತನೆಗೊಳಗಾಗುತ್ತಾರೆಯೋ ಅಥವಾ ಹಿಂದೂಧರ್ಮವನ್ನು ಅನುಕರಿಸುತ್ತಲೇ ಅಪ್ರಜ್ಞಾಪೂರ್ವಕವಾಗಿ ಹಿಂದೂ ಧರ್ಮದ ಬಂಧನದೊಳಗೇ ಸಿಲುಕಿಕೊಳ್ಳುತ್ತಾರೆಯೋ ಎನ್ನವುದು ನಾವು ಇನ್ನೂ ಉತ್ತರ ಕಂಡುಕೊಳ್ಳಬೇಕಾದ ಪ್ರಶ್ನೆಯಾಗಿದೆ. ಈಗಿನ ಜಾಗತೀಕೃತ, ಆರ್ಥಿಕತೆಯ ಪರಿಸರದಲ್ಲಿ ದಲಿತ ಹೆಣ್ಣಮಕ್ಕಳು ಸಂಘಟಿತವಾಗಿ ಹೋರಾಡುವುದು ಒಂದು ದೊಡ್ಡ ಸವಾಲಾಗಿದೆ. ಏಕೆಂದರೆ ಅಸಂಘಟಿತ ಕ್ಷೇತ್ರಗಳಲ್ಲಿ ಹೆಚ್ಚಾಗಿ ಕೆಲಸಮಾಡುವ ಈ ಹೆಣ್ಣಮಕ್ಕಳು ಸಂಘಟಿತವಾಗುವ ಅವಕಾಶವನ್ನೇ ಈ ಕ್ಷೇತ್ರಗಳು ನಿರಾಕರಿಸುತ್ತವೆ. ಇನ್ನು ಸಂಘಟಿತವಾಗುವ ಸಂದರ್ಭದಲ್ಲಿ ಹೊಸ ಆರ್ಥಿಕ ನೀತಿಯ, ಹೊಸ ಔದ್ಯೋಗಿಕ ನಿಯಮಗಳು ಚಳವಳಿಗಳನ್ನೇ ದ್ರವಿಸುವ ಗುಪ್ತ ನೀತಿಯನ್ನು ಹೊಂದಿರುತ್ತವೆ. ಇಂತಹ

ಸಂದರ್ಭದಲ್ಲಿ ದಲಿತ ಸ್ತ್ರೀವಾದ ನಿಜವಾಗಿಯೂ ಶಕ್ತವಾಗಿ ರೂಪುಗೊಳ್ಳುವುದಕ್ಕೆ ಸಾಧ್ಯವೆ ಎನ್ನವುದು ಒಂದು ಗಂಭೀರವಾದ ಪ್ರಶ್ನೆಯಾಗುತ್ತದೆ.

ರಾಷ್ಟ್ರದಾದ್ಯಂತ ಭುಗಿಲೆದ್ದಿರುವ ಮತೀಯವಾದಿ ರಾಜಕೀಯ ಹಿಂದುತ್ವದ ಮಾದರಿಯನ್ನು ಸ್ಥಿಕರಿಸುವ ಎಲ್ಲಾ ಪ್ರಯತ್ನಗಳನ್ನು ಅವಿರತವಾಗಿ ಮಾಧ್ಯಮಗಳು ಮತ್ತು ಆಚರಣೆಗಳ ಮೂಲಕ ಮಾಡಲಾಗುತ್ತಿದೆ. ಇದಕ್ಕೆ ಮೊದಲು ಬಲಿಯಾಗುವವರು ದಲಿತ ಹೆಣ್ಣುಮಕ್ಕಳೇ ಆಗಿರುತ್ತಾರೆ. ಹೀಗೆ ದಲಿತ ಸ್ತ್ರೀವಾದದ ಚಿಂತನೆಗಳು ರೂಪುಗೊಳ್ಳುವುದಕ್ಕೆ ಅನೇಕ ತೊಡಕುಗಳು ನಮ್ಮ ಸುತ್ತ ಸೃಷ್ಠಿಯಾಗಿವೆ. ಕರ್ನಾಟಕದಲ್ಲಿ ರಾಜ್ಯಮಟ್ಟದ ದಲಿತ ಮಹಿಳೆಯರ ಸಂಘಟನೆಗಳು ಕಾರ್ಯ ನಿರ್ವಹಿಸುತ್ತಿಲ್ಲವಾದರೂ ಅತ್ಯಂತ ಗಂಭೀರವಾಗಿ ಸಣ್ಣ ಸಣ್ಣ ಗುಂಪುಗಳಾಗಿ ತಮ್ಮ ತತ್‌ಕ್ಷಣದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗಬಹುದಾದ ಹಕ್ಕೋತ್ತಾಯದ ಹೋರಾಟಗಳು ನಿರಂತರವಾಗಿ ನಡೆಯುತ್ತಿವೆ. ಇತ್ತೀಚೆಗೆ ಎನ್‌ಜಿಒಗಳ ಪ್ರಭಾವದಿಂದ ದಲಿತ ಹೆಣ್ಣಮಕ್ಕಳ



ಓರಿಯೆಂಟೇಷನ್ ಕಾರ್ಯಕ್ರಮಗಳು ಅಲ್ಲಲ್ಲಿ ಸಾಗುತ್ತಿವೆ. ಮುಂದೆ ಇದು ಯಾವ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಎಂಬುದನ್ನು ನಾವು ಕಾದು ನೋಡಬೇಕಿದೆ.

**೧೩. ದಲಿತ ಸಂಸ್ಕೃತಿ: ಅಂದು ಇಂದು**

ಕಳೆದ ಶತಮಾನದ ಆರಂಭದಿಂದ ಸುಮಾರು ಅರ್ಧ ಶಥಮಾನದ ಮೈಸೂರು ರಾಜ ಅಭೂತಪೂರ್ವ ಬದಲಾವಣೆಯನ್ನು ಹಾಯ್ದು ಬಂತು. ಪ್ರಗತಿಪಥದಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿತು. ಆದರೆ ಅದೇ ಅವಧಿಯಲ್ಲಿ ಘಟಿಸಿದ ರಷ್ಯನ್ ಕ್ರಾಂತಿ, ಭಾತರದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಅಮಾನವೀಯ ಘೋರ ಮಹಾಯುದ್ಧಗಳಿಗೆ ದೊರೆತ ಪ್ರಚಾರ ಈ ಮೌನಕ್ರಾಂತಿಗೆ ಸಿಕ್ಕಲಿಲ್ಲ. ನಾನು ಹೇಳುತ್ತಿರುವುದು ನಲವತ್ತೆರಡು ವರ್ಷಗಳ ಕಾಲ ಅಖಂಡವಾಗಿ ಮೈಸೂರು ಸಂಸ್ಥಾನವನ್ನು ಆಳಿದ ಪ್ರಾತಃಸ್ಮರಣೀಯರಾದ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್‌ರವರ ಆಳ್ವಿಕೆಯನ್ನು, ಅವರ ಅಧಿಕಾರದ ಅವಧಿಯಲ್ಲಿ ಆದ ಸಾಧನೆಗಳಿಗೆ ಅದೃಸವಾದ ಉದಾಹರಣೆ ಭಾರತೀಯ ಇತಿಹಾಸದಲ್ಲಿ ಸಿಕ್ಕುವುದು ಕಷ್ಟ ಈ ರಾಜರ್ಷಿ ಜಗತ್ತು ಕಂಡ ಮೇಧಾವಿಗಳಲ್ಲಿ ಒಬ್ಬರು ಎಂಬ ಮಾತಿನಲ್ಲಿ ಲವಲೇಶವೂ ಉಲ್ಲೇಕ್ಷೆಯಿಲ್ಲ.

ಶ್ರೀ ಕೃಷ್ಣರಾಜೇಂದ್ರ ಒಡೆಯರು ಭುವನದ ಭಾಗ್ಯವೆಂಬಂತೆ ಸ್ವಾಮಿ ವಿವೇಕಾನಂದರ ಪ್ರಭಾವಕ್ಕೆ ಒಳಗಾದರು. ವಿವೇಕಾನಂದರ ಹಿಂದೂಧರ್ಮ ಸುಧಾರಣೆಯ ಪರಿಕಲ್ಪನೆಯನ್ನು ಅಕ್ಷರಸಶಃ ಜಾರಿಗೆ ತಂದರು.

ಸಮಾಜದ ಕಟ್ಟಕಡೆಯ ವ್ಯಕ್ತಿ ದರಿದ್ರನಾರಾಯಣನ ಏಳಿಗೆಯತ್ತ ತಮ್ಮ ಗಮನ ಹರಿಸಿದರು. ಒಂದು ಕಡೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಲಿತ ಏಳಿಗೆಗಾಗಿ ಹಲವಾರು ಕನಸುಗಳನ್ನು ಹೆಣೆಯುತ್ತಾ, ಹೋರಾಡುವ ಮುನ್ನವೇ ಮಹಾರಾಜರು ಆ ನಿಟ್ಟಿನಲ್ಲಿ ಬಿತ್ತಿದ ಬೀಜಗಳು ಫಲ ಕೊಡಲಾರಂಭಿಸಿದ್ದವು. ರಾಜ್ಯದ ಹಲವೆಡೆ ಪಂಚಮರ ವಸತಿ ನಿಲಯಗಳನ್ನು ತೆರೆದು ದಲಿತರನ್ನು ಜ್ಞಾನಪಥದಲ್ಲಿ ಮುನ್ನಡೆಸಿದರು. ಶತಮಾನಗಳಿಂದ ಜ್ಞಾನಗಳಿಕೆಯ ಅವಕಾಶವನ್ನು ಸಂಪೂರ್ಣವಾಗಿ ನಿರಾಕರಿಸಿದ್ದ ಶ್ರಮಿಕ ವರ್ಗಕ್ಕೆ ಅವರು ಅರಿವಿನ ಬಾಗಿಲು ತೆರೆದರು. ಭಾರತದ ಎಲ್ಲೆಡೆ ತುಂಡುಭೂಮಿಯ ಒಡೆತನದ ಆಸೆ ಹೊತ್ತ ಚೋಮರು ಮೈಸೂರು ಸಂಸ್ಥಾನದಲ್ಲಿ ಭೂಮಾಲೀಕರಾದರು. ಎಲ್ಲೆಡೆ ಅಮಾನವೀಯ ಹಾಗೂ ದನಿಹೀನ ಬದುಕಿನಲ್ಲಿ ಸವೆಯುತ್ತಿದ್ದ ದಲಿತರು ಇಲ್ಲಿ ಮಾತ್ರ ಒಡೆಯರ ರಕ್ಷಣೆಯಲ್ಲಿ ಅರಳಿ ನಿಂರತು. ಅದಷ್ಟೇ ಅಲ್ಲ, ವಿದ್ಯಾವಂತ ದಲಿತರು ಸಂಪೂರ್ಣವಾಗಿ ಉದ್ಯೋಗಾವಕಾಶ ಪಡೆದರು. ಪ್ರಜಾಪ್ರತಿನಿಧಿ ಸಭೆಗೆ ಪ್ರವೇಶಿಸಿ ರಾಜಕೀಯ ದೀಕ್ಷೆ ತೊಟ್ಟರು. ಇವೆಲ್ಲವುಗಳಿಂದ ದಲಿತರು ಮಹಾರಾಜರ ಮಕ್ಕಳು ಎಂಬ ಅರ್ಧ ಅಸೂಯೆ. ಅರ್ಧ ಹೆಮ್ಮೆ ತುಂಬಿದ ಬಿರುದನ್ನು ಸಾರ್ವಜನಿಕರಿಂದ ಸಂಪಾದಿಸಿದರು.

ಕೇವಲ ದಲಿತರಿಗಷ್ಟೇ ಅಲ್ಲದೇ ಮಹಿಳೆಯರು ಮತ್ತು ಹಿಂದುಳಿದ ವರ್ಗಗಳಿಗೂ ಶಿಕ್ಷಣ, ತರಬೇತಿ ಮತ್ತು ಉದ್ಯೋಗಗಳಲ್ಲಿ ಮಹಾರಾಜರು ಅವಕಾಶಗಳ ಹೆಬ್ಬಾಗಿಲನ್ನು



ತೆರೆದರು. ಜನಸಂಖ್ಯೆಯ ಅರ್ಧದಷ್ಟಿರುವ ಸ್ತ್ರೀಯರ ಎಲ್ಲಾ ಪ್ರತಿಭೆಗೂ ಕಡಿವಾಣ ಹಾಕಿದ ಕೀರ್ತಿ ನಮ್ಮ ನಾಡಿನದು. ಎಲ್ಲಾ ವರ್ಗದಲ್ಲೂ ಮಹಿಳೆ ಅಸ್ಪೃಶ್ಯತೆಯ ಅಡಿಯಲ್ಲಿ ಮಡಿವಂತಳು. ನಮೆಯ ಮಾಡಿಂದ ಹೊರಗೆ ಹೆಜ್ಜೆ ಇಡಲಾರದ ಗಾಂಧಾರಿ. ಆದರೆ ಈ ಎಲ್ಲಾ ಲಕ್ಷ್ಮಣ ರೇಖೆಯ ಗಡಿಯನ್ನು ದಾಟಿಸಿ ಶಾಲೆಯ ಅಂಗಳಕ್ಕೆ ಕರೆತಂದ ಕೀರ್ತಿ ಮಹಾರಾಜರದು. ಪ್ರಥಮ ಬಾರಿಗೆ ಭರತ ಖಂಡದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕಾಲೇಜು ತೆರೆದರು. ಮಹಾರಾಜರ ಪುತ್ರರೂ ಶ್ರೀ ಸಾಮಾನ್ಯರ ಮಕ್ಕಳೂ ಒಂದೇ ಕಾಲೇಜಿನಲ್ಲಿ ಕಲಿಯುವ ಶಿಕ್ಷಣ ಸಮಾನತೆ ಅವರಿಂದ ಆರಂಭವಾಯಿತು. ಮಹಾರಾಜರು ತಂದ ಕ್ರಾಂತಿಕಾರಿ ಬದಲಾವಣೆಯಿಂದ ಮೈಸೂರು ಸಂಸ್ಥಾನದಲ್ಲಿ ದಲಿತರಲ್ಲಿ ಚೇತೋಹಾರಿ ಫಲ ನೀಡಿತು. ಆ ಇತಿಹಾಸದಲ್ಲಿ ಅರಳಿದ ಶಿಶು ನಾನು. ನಾನು ತಲುಪಿರುವ ಮಟ್ಟ ಅದರ ಫಲ. ಆದುದರಿಂದ ಆಳಿದ ಆ ರಾಜರ್ಷಿಯನ್ನು ನೆನೆಯುವುದು ಈ ಸಂದರ್ಭದಲ್ಲಿ ತುಂಬಾ ಅರ್ಥಪೂರ್ಣವೆಂದು ಭಾವಿಸಿದ್ದೇನೆ.

ಈ ಸಂದರ್ಭದಲ್ಲಿ ಹಲವಾರು ಮುಖ್ಯವಾದ ವಿಷಯಗಳನ್ನು ತಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ. ಈ ಪರ್ವ ಕಾಲದಲ್ಲಿ ಇವು ಅತ್ಯಂತ ಮಹತ್ವವಾದವು ಎಂದೇ ಭಾವಸಿದ್ದೇನೆ.

ಕಳೆದ ನಲವತ್ತು ವರ್ಷಗಳಿಂದ ಈ ಸಮಾಜವನ್ನು ಬಿಡುಗಣ್ಣಿನಿಂದ ನೋಡುತ್ತಾ ಬಂದಿದ್ದೇನೆ. ಈ ವ್ಯವಸ್ಥೆಯ ನಾನಾ ಮುಖಗಳನ್ನು ಪರಿಚಯಿಸಿಕೊಂಡಿದ್ದೇನೆ. ಶೂದ್ರ- ದಲಿತ ಸಮುದಾಯದ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗ್ರಹಿಸುವ ಪ್ರಯತ್ನ ಮಾಡಿದ್ದೇನೆ. ಈ ಸಮುದಾಯದ ಸಂಸ್ಕೃತಿ ವೇದಗಳ ಅಮೂರ್ತವಾದ, ನಭೋಗಮನವಾದ ಭೌದ್ಧಿಕ ಸಂಸ್ಕೃತಿಯಲ್ಲ. ಭೂಮಿಯೊಳಗೆ ಬೇರುಬಿಟ್ಟು, ಹೂವರಳಿಸಿ ಮೂರ್ತರೂಪ ತಾಳಿದ ಶ್ರಮ ಸಂಸ್ಕೃತಿ, ಕೆರೆ ಕಟ್ಟಿ, ಕಾಲುವೆ, ತೋಡಿ ನೀರುಣಿಸಿದ, ಕೋಟೆ ಕಟ್ಟಿ ರಕ್ಷಣೆ ಕೊಟ್ಟ ಫಲಹಾಕಿ ಪಾಪ ಕಳೆದುಕೊಂಡ ಜೀವನ ಪ್ರೀತಿಯ ಸಂಸ್ಕೃತಿ, ಗಳಿಸಿದ ತಪಸ್ಸಿನ ಫಲವನ್ನೂ ಪರರಿಗೆ ಧಾರೆಯರೆಯುವ, ಸ್ವಯಂಶಕ್ತಿಯಿಂದ ಪ್ರತ್ಯೇಕ ಸ್ವರ್ಗವನ್ನೇ ಸೃಷ್ಟಿಸುವ ಸಮುದ್ರವನ್ನು ಲಂಘಿಸುವ ಅಸೀಮ ಬಲದ ಸಂಸ್ಕೃತಿ. ಈ ಸಂಸ್ಕೃತಿ ತ್ಯಾಗ, ಬಲಿದಾನಗಳನ್ನು ಆರಾಧಿಸಿವೆ. ಬಲಿ ಚಕ್ರವರ್ತಿ, ಕರ್ಣನಂತವರನ್ನು ರೂಪಿಸಿದೆ. ಭಕ್ತಿಯ ಪರಾಕಾಷ್ಠೆಯನ್ನು ಬಿಂಬಿಸಿದ ಕಣ್ಣಪ್ಪನನ್ನು ಸೃಷ್ಟಿಸಿದ. ವ್ಯಾಸ, ಕಾಳಿದಾಸರನ್ನು ರೂಪಿಸಿದೆ.

ಆದರೆ ಶ್ರಮ ಸಂಸ್ಕೃತಿಯ ಮೇಲೆ ಬೌದ್ಧಿಕತೆ ಸವಾರಿ ಮಾಡಲಾರಂಭಿಸಿದ ಮೇಲೆ ಬೆವರು ಸುರಿಸಿ ದುಡಿಯುವವರು ಮೂಲೆ ಗುಂಪಾದರು! ಉಣ್ಣುವಾಗ ಬೆವರು ಸುರಿಸುವರು ಸರ್ವಮಾನ್ಯರಾದರು!! ಬಹುಮುಖಿ ಹಾಗೂ ಜೀವಮುಖಿ ಸಂಸ್ಕೃತಿಯ ಜನ ಹಿಂದುಳಿದವರಾದರೂ ಅಸ್ಪೃಶ್ಯರಾದರು! ಅವರಿಗೆ ಅರಿವಿನ ಬಾಗಿಲು ಮುಚ್ಚಿತು. ಸಹಸ್ರಾರು ವರ್ಷ ಮೌಢ್ಯದ ಕೂಪದಲ್ಲಿ ಕೊಳೆತರು! ಸಮಾನತೆಗಾಗಿ ನಡೆದ ಅನೇಕ ಹೋರಾಟಗಳ ನಂತರ ಈ ದನಿ ಹೀನ ವರ್ಗಕ್ಕೆ ಅರಿವಿನ ಬಾಗಿಲು



ತೆರೆಯಿತು. ಹಿಂದುಳಿದವರು ಮುಂದುವರಿದವರೊಡನೆ ಹೆಜ್ಜೆ ಹಾಕಿದರು. ಇದು ನಮ್ಮ ಸಂಕ್ಷಿಪ್ತ ಇತಿಹಾಸ.

ಇದೆಲ್ಲವೂ ನಿಜ. ಆದರೆ ಈಗ ಏನಾಗಿದೆ? ಯಾವ ಆಯುಧ ಬಳಸಿ ಮೇಲ್ವರ್ಗದ ಜನತೆ ಶೂದ್ರ-ದಲಿತ ಸಮೂಹವನ್ನು ತುಳಿಯಿತೋ, ಅದೇ ಹತಾರುಗಳನ್ನು ಈ ಸಮೂಹ ಆರಾದಿಸುತ್ತಿದೆ. ಶೋಷಣೆಯ ಸಂಕೋಲೆಗಳಿಂದ ಹೊರಬಂದ ಇವರು ಅದೇ ಸರಪಳಿಯನ್ನು ತಮ್ಮ ಕೊರಳಿಗೆ ಉರುಳಾಗಿ ಧರಿಸುತ್ತಿದ್ದಾರೆ. ಭ್ರಷ್ಟತೆಯನ್ನು ಮೈಗೂಡಿಸಿ, ಕೊಳ್ಳುವುದರ ಜೊತೆಗೆ ಸತ್ಯನಾರಾಯಣ ವ್ರತ, ಗುರುವಾರ ಮಾಂಸ ತ್ಯಾಗ, ತಾಯಿತ ಕಟ್ಟಿಕೊಂಡು, ಜ್ಯೋತಿಷ್ಯ ಕೇಳುತ್ತಾ, ಪಂಚಾಂಗ ನೋಡುತ್ತಾ, ಶನಿದೇವರಿಗೆ ಪ್ರದಕ್ಷಿಣೆ ಹಾಕುತ್ತಾ, ವಾಸ್ತುಗೆ ಶರಣಾಗುತ್ತಾ ಮೂಢ ಮತಿಗಳಾಗಿ ಬಾಳುತ್ತಿದ್ದಾರೆ. ಜನಶಕ್ತಿಯಲ್ಲಿ ನಂಬಿಕೆ ಕಳೆದುಕೊಂಡು ಜ್ಯೋತಿಷ್ಯದಲ್ಲಿ ವಿಶ್ವಾಸ ತೋರುತ್ತಿದ್ದಾರೆ.

ಶೋಷಿತ ಜನಾಂಗ ವಿಮೋಚನೆಯ ಹಾದಿಯಲ್ಲಿ ಮುನ್ನಡೆಯಬೇಕಾದರೆ, ವೈಚಾರಿಕ ದೀಪಕ್ಕೆ ನಿರಂತರವಗಿ ಅಧ್ಯಯನದ ತೈಲ ಸರಬರಾಜಬೇಕು. ಇದು ದಲಿತರ ವಿಮೋಚನೆಗೆ ದುಡಿದು ಬಾಬಾಸಾಹೇಬರ ಆಶಯವಾಗಿತ್ತು. ದುರದೃಷ್ಟವೆಂದರೆ ಉದ್ಯೋಗ ಸಿಕ್ಕಿದ ತಕ್ಷಣ ಈ ಸಮೂಹ ಸರಸ್ವತಿ ಶತ್ರುಗಳಾಗಿ ಮಾರ್ಪಾಡಾಗುತ್ತಾರೆ! ವೈಚಾರಿಕ ಸಾಹಿತ್ಯದ ಬದಲು ಪಂಚಾಂಗ ಹಿಡಿಯುತ್ತಾರೆ.! ಇದರ ಫಲಶೃತಿ ಎಂದರೆ ರಚನಾತ್ಮಕ ಪ್ರಕ್ರಿಯೆಯ ಪ್ರಯೋಗಶೀಲತೆಯ ಅಭಾವ! ಇಂದು ವೈಚಾರಿಕ ಮನಸ್ಸು ಕಾಣದಾಗಿದೆ. ವೈಜ್ಞಾನಿಕ ಮನೋಭಾವ ಮಾಯವಾಗಿದೆ. ಇದರಿಂದಾಗಿಯೇ ಯಾವುದೇ ಚಳವಳಿ, ಆಂದೋಲನಗಳು ಸೈದ್ಧಾಂತಿಕ ಕಾವು ಕಳೆದುಕೊಂಡು ಅನಗತ್ಯ ಪಿಸುಮಾತಿಗೆ ಎಡೆಮಾಡಿದೆ!

ಇದು ಬೌದ್ಧಿಕ ಪತನವಾದರೆ, ಸಾಮಾಜಿಕ ಪತನದಲ್ಲಿಯೂ ಈ ವರ್ಗ ಅಗ್ರಶ್ರೇಣಿಯನ್ನು ಬಿಟ್ಟುಕೊಟ್ಟಲ್ಲ. ಒಂದು ಕಾಲದಲ್ಲಿ ಈ ವರ್ಗ ತ್ಯಾಗ, ಬಲಿದಾನ, ಶ್ರಮಗಳಿಗೆ ಹೆಸರಾಗಿತ್ತು. ಕೌಟುಂಬಿಕ ಸಂಬಂಧಗಳಿಗೆ ಭಾವನಾತ್ಮಕ ಬೆಸುಗೆಯ ಬಿಗಿ ಬಂಧವಿತ್ತು. ಆದರೆ ಇಂದು ಈ ಸಮೂಹ ಮೇಲ್ವರ್ಗದ ಆರಾಧಕರಾಗಿ ಸ್ವಾರ್ಥಲೋಲುಪರಾಗಿದ್ದಾರೆ. ಸಾಮಾಜಿಕ ಶ್ರೇಣಿಯಲ್ಲಿ ಮೇಲ್ವರ್ಗದ ಜೊತೆ ಗುರುತಿಸಿ ಕೊಳ್ಳುವ ತವಕದಲ್ಲಿ ಭಾವನಾತ್ಮಕ ಕೊಂಡಿಗಳು ಛಿದ್ರವಾಗಿವೆ. ಕೌಟುಂಬಿಕ ಸಂಬಂಧಗಳು ವಿಘಟನೆಯಾಗಿವೆ. ಮೀಸಲಾತಿಯ ಸೌಲಭ್ಯ ಉಂಡವರು, ತಮ್ಮ ವೈಯಕ್ತಿಕ ಉದ್ಧಾರದ ಜೊತೆಗೆ ತಾವು ಬೆಳೆದು ಬಂದ ಪರಿಸರದ ಉದ್ಧಾರಕರೂ ಆಗುತ್ತಾರೆಂಬ ಉದಾತ್ತವಾದ ಆಶಯ ಭಾಗ್ಯವಾಗಿದೆ. ಹೀಗಾಗಿ ವಿದ್ಯಾವಂತರೆನಿಕೊಂಡವರು ತತ್ವ, ಸಿದ್ಧಾಂತಗಳಿಗೆ ತಿಲಾಂಜಲಿ ನೀಡಿದ್ದಾರೆ. ಮೇಲ್ವರ್ಗದ ಜನ ನಾಚಿ ನೀರಾಗುವ ರೀತಿಯಲ್ಲಿ ಸುಖಲೋಲುಪರಾಗಿದ್ದಾರೆ. ಅವರಿಗೆ ಭೂತಕಾಲದ ವಿಸ್ಮೃತಿ ಆವರಿಸಿದೆ. ತಂದೆ ತಾಯಿಗಳನ್ನು, ಬಂಧುಗಳನ್ನು ಗುರುತಿಸಲಾಗದಂಥ ನಶೆ ತುಂಬಿದೆ. ನಡೆದು ಬಂದ ದಾರಿ ಮಸುಕಾಗಿದೆ. ಕಿರು ಅರಮನೆಯ ವೈಭವದಲ್ಲಿ ಹುಟ್ಟಿದ ಹಟ್ಟಿ, ಬೆಳೆದ ಹಕ್ಕಿಗಳು ಕನಸಿಗೂ ದೂರವಾಗಿದೆ.



ಇಂದು ಸಮಾಜ ಚಲನಶೀಲವಾಗಿದೆಯೆಂದು ಸಮಾಜ ವಿಜ್ಞಾನಿಗಳು ಗುರುತಿಸಿದ್ದಾರೆ. ಒಬ್ಬ ದಲಿತ ಮೇಲ್ವರ್ಗದ ಹೆಣ್ಣನ್ನು ಸಲೀಸಾಗಿ ಮದುವೆ ಮಾಡಿಕೊಳ್ಳಬಲ್ಲ ಸಂಗತಿಗಳನ್ನು ಚಲನಶೀಲತೆಗೆ ಉದಾಹರಿಸುತ್ತಾರೆ. ಆದರೆ ಒಳ ಹೊಕ್ಕು ನೋಡಿದರೆ ಈ ಸಮಾಜದ ಚಲನಶೀಲತೆ ಆತಂಕವನ್ನು ತರುತ್ತದೆ. ಆದರೆ ಆತ ತನ್ನ ಒಳಪಂಗಡದಲ್ಲೇ ಮದುವೆಯಾಗುವುದಕ್ಕೆ ಮೇಲು-ಕೀಳಿನ ಅಡ್ಡಿ ಬರುವ ವಿಪರ್ಯಾಸ ಬಹುದೊಡ್ಡ ಮಟ್ಟದಲ್ಲಿ ಜರುಗುತ್ತಿವೆ. ಇಂದು ದೊಡ್ಡದಾಗಿ ಬೆಳೆಯುತ್ತಿರುವ ಒಳಪಂಗಡಗಳ ನಡುವಿನ ಹೋರಾಟದಲ್ಲಿ ಭಾವನಾತ್ಮಕ

ಏಕತೆಯ ಸುಳಿವಿಲ್ಲ!. ಬದಲಿಗೆ ಕಂದಗಳನ್ನು ನಿರ್ಮಿಸುವ ಅಪಾಯಕಾರಿ ಸಾಧ್ಯತೆಗಳಿವೆ! ಒಂದು ಶೋಷಕ ವರ್ಗದ ಜೊತೆ ಸಾಮರಸ್ಯವಾಗಿ ಬದುಕುವ ಔದಾರ್ಯದ ಮನಸ್ಸು, ತನ್ನ ಸಹ ಶೋಷಿತರಿಗೆ ಸಂಬಂಧಿಸಿದಂತೆ ಯಾಕೆ ಸಂಕುಚಿತವಾಗುತ್ತದೆ. ವಿದ್ಯಾವಂತರಲ್ಲೇ ಈ ಮೌಢ್ಯ ಹೆಪ್ಪುಗಟ್ಟಿರುವುದು ಹೆಚ್ಚು ಆತಂಕಕಾರಿಯಾಗಿದೆ.

ತಮ್ಮೊಡನೆ ಹಂಚಿಕೊಳ್ಳಬೇಕಾದ ಮತ್ತೊಂದು ವಿಷಾದದ ಸಂಗತಿಯಿದೆ. ಶೋಷಿತ ವರ್ಗದ ಸ್ವಭಾವಸಿದ್ಧ ದಡ್ಡತನವನ್ನು ವ್ಯವಸ್ಥೆಯ ಪರಿಪಾಲಕರು ಬಹು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. ಸಾಮಾಜಿಕ ಶೋಷಣೆಯ ವಿರುದ್ಧ ಬಂಡೆದ್ದ ದೇವರ ಆಸ್ತಿವನ್ನೇ ನಿರಾಕರಿಸಿ, ಸರ್ವಸಾಮಾನ್ಯವಾದ ಸಮಾನತೆಯ ಪಾಠಗಳನ್ನು ಉಪದೇಶಿಸಿದ ಬುದ್ಧನನ್ನು ವಿಷ್ಣುವಿನ ದಶಾವತಾರಗಳಲ್ಲೂ ಒಂದೆಂಡೆ ಅದೇ ವ್ಯವಸ್ಥೆಯ ತೆಕ್ಕೆಗೆ ತೆಗೆದುಕೊಳ್ಳಲಾಯಿತು; ಅದನ್ನು ಅಂಗೀಕರಿಸಿದ್ದೇವೆ; ಈಗ ಆತ ಸಮಷ್ಟಿ ನಾಯಕನಲ್ಲ. ದಲಿತರ ಪಾಲಿಗೆ ಮಾತ್ರ ದೇವರು. ಅದೇ ರೀತಿ ಜಗದ ದಾರ್ಶನಿಕರನ್ನು ಜಾತಿಯ ನಾಯಕರನ್ನಾಗಿ ಮಾಡುತ್ತಿದ್ದೇವೆ. ಸಮಾನತೆಯ ಸಮಾಜಕ್ಕೆ ಹಂಬಲಿಸಿದ, ಕಾಯಕದ ಮಹಿಮೆಯನ್ನು ತೋರಿಸಿದ ಬಸವಣ್ಣ ಈಗ ಒಂದು ಕೋಮಿನವರ ಸ್ವಂತ ಆಸ್ತಿ, ಶೋಷಿತರ ವಿಮೋಚನೆಗೆ ದುಡಿದು, ಮಾನವ ಹಕ್ಕುಗಳಿಗೆ ಹೋರಾಡಿದ ಅಂಬೇಡ್ಕರ್ ದಲಿತರ ನಾಯಕ. ಇನ್ನು ಕೆಲವೇ ವರ್ಷಗಳಲ್ಲಿ ಅವರು ದಲಿತರು ಉಪಪಂಗಡ ನಾಯಕರಾಗಿ ಸಂಕುಚಿತಗೊಳ್ಳಬಹುದು! ವಿಶ್ವಮಾನವ ಪ್ರಜ್ಞೆ ಬಿತ್ತಿದ ಕವಿವರ್ಯ ಕುವೆಂಪು ಒಂದು ಜಾತಿಗೆ ಸೀಮಿತವಾಗುತ್ತಿದ್ದಾರೆ! ಅವರನ್ನು ವಿಶ್ವಮಾನವ ಎಂದು ಮರುನಾಮಕರಣ ಮಾಡಬಹುದಾದ ಕಾಲವಿನ್ನು ದೂರವಿಲ್ಲ. ಈ ನಾಯಕರ ತತ್ತ್ವ, ಬದುಕು, ಸಾಧನೆಯ ಸ್ಫೂರ್ತಿ ಯಾರಿಗೂ ಬೇಡ, ಅವುಗಳನ್ನೆಲ್ಲ ಘೋಷಣೆಗಳ ಮಟ್ಟಕ್ಕೆ, ಸಂಕೇತಗಳ ಮಟ್ಟಕ್ಕೆ ಇಳಿಸಿ ಕೃತಾರ್ಥರಾಗುತ್ತಿದ್ದೇವೆ. ನಿರಂಕುಶಮತಿಗಳಾದ ಅವರಿಗೆ ಅಂಕುಶ ಹಾಕಿ ನಿಯಂತ್ರಿಸಿದ್ದೇವೆ. ಅದಕ್ಕಾಗಿ ಊರಿಗೊಂದು ಮೂರ್ತಿ, ರಸ್ತೆ, ಬಡಾವಣೆಗೊಂದು ಹೆಸರು ಕೊಟ್ಟು ಸಾರ್ಥಕರಾಗುತ್ತಿದ್ದೇವೆ. ಅವರ ತತ್ತ್ವಗಳು ವಿರೂಪಗೊಂಡರೆ ಯಾರೂ ಕೆರಳುವುದಿಲ್ಲ. ಆದರೆ ಮೂರ್ತಿಗೆ ಭಂಗವಾದರೆ, ಭಿನ್ನವಾದರೆ ಊರೆಲ್ಲ ಹತ್ತಿ ಉರಿಯುವ ಚಳವಳಿ ಮಾಡುತ್ತೇವೆ! ನಮ್ಮ ದೌರ್ಬಲ್ಯ ಚೆನ್ನಾಗಿ ಅರ್ಥವಾಗಿದೆ. ನಮ್ಮನ್ನು ಉದ್ರೇಕಿಸಿ ವಿಚಾರಶಕ್ತಿಯನ್ನು ಊನಗೊಳಿಸುವ ಈ ವ್ಯವಸ್ಥಿತ ಸಂಚು ನಿರಂತರವಾಗಿ ನಡೆಯುತ್ತಲೇ ಇದೆ. ಹೀಗೆಂದ ಮಾತ್ರಕ್ಕೆ ಮೇಲ್ವರ್ಗದವರನ್ನು, ಶೋಷಕರನ್ನು ದ್ವೇಷಿಸಿ ಎಂದು ಹೇಳುತ್ತಿಲ್ಲ. ಅವರ ಹುನ್ನಾರ, ಸಂಚು, ಅವರ ಮೌಢ್ಯತೆಯೆಂದು ಬಗೆದು ನಗೆಯಲ್ಲೇ ಸಮಾಧಿ ಕಟ್ಟಬೇಕು. ಈ ಅಲ್ಪಸಂಖ್ಯಾತರನ್ನು ಮಾನವೀಯತೆಯ ಪಥದಲ್ಲಿ ಮುನ್ನಡೆಸುವ

ಜವಾಬ್ದಾರಿ ಬಹು ಜನರಾದ ನಮ್ಮ ಮೇಲಿದೆ; ಬುದ್ಧನ ಪ್ರೀತಿಯ ಮಾರ್ಗ ನಮ್ಮದಾಗಬೇಕು.

ಸಿಂಹಾಸನದಲ್ಲಿ ಕುಳಿತು, ಸುಖದಲ್ಲಿ ಬಂದು ಅವರಿಗಾಗಿ ದುಡಿದರು. ಅದು ಅವರಿಗೆ ಸಾಧ್ಯವಾದರೆ ಶ್ರಮ ಸಂಸ್ಕೃತಿಯನ್ನೇ ಮೈಗೂಡಿಸಿಕೊಂಡು ನಾವು ಎತ್ತರಕ್ಕೇರಿದ ನಂತರ ನಮ್ಮ ಸಮುದಾಯದ ಮಟ್ಟಕ್ಕೆ ಇಳಿದು ಅವರನ್ನು ಯಾಕೆ ಉದ್ಧರಿಸಲು ಸಾಧ್ಯವಿಲ್ಲ? ಅಪಾರವಾದ ಸಾಗರವನ್ನು ಕಂಡಾಗ ಮಹಾನ್ ಶಕ್ತಿಯ ಆಂಜನೇಯ ಅದನ್ನು ದಾಟುವ ಬಗ್ಗೆ ಸಂಶಯ ವ್ಯಕ್ತಪಡಿಸಿದನಂತೆ. ಜಾಂಬವಂತ ಮಾರುತಿಯ ಧೀಶಕ್ತಿಯನ್ನು ಮನನ ಮಾಡಿಕೊಟ್ಟನಂತೆ. ಅದೇ ರೀತಿ ನಮಗಿರುವ ಸಾಮರ್ಥ್ಯ ನಮಗೇ ತಿಳಿಯದು. ಕಲ್ಲಿನಲ್ಲಿರುವ ಶಿಲ್ಪ ತನ್ನನ್ನೇ ತಾನು ಅರಿಯದು. ವಿದ್ಯಾವಂತರೆನಿಸಿಕೊಂಡ ನಾವೆಲ್ಲ ಈ ಶಕ್ತಿಯನ್ನು ಅರಿತು, ಕಲ್ಲನ್ನು ಕೆತ್ತಿ ಶಿಲ್ಪ ಮೂಡಿಸುವ ಜವಾಬ್ದಾರಿ ಹೊರಬೇಕಿದೆ.

ಈ ನಿರಾಶೆಯ ಚಿತ್ರಣದಲ್ಲೂ ನನಗೆ ಭರವಸೆಯಿದೆ ಹಾಗೆಂದಾಗ ನನಗೆ ಮಾರ್ಟಿನ್ ಲೋಥರ್ ಕಿಂಗ್ ಜೂನಿಯರ್ ಪ್ರಸಿದ್ಧ ಭಾಷಣ ನೆನಪಾಗುತ್ತದೆ. ೧೯೬೩ರಲ್ಲಿ ವಾಷಿಂಗ್ಟನ್‌ನ ಅಬ್ರಹಾಂ ಲಿಂಕನ್ ಮೂರ್ತಿಯೆದುರು ನಿಂತು ಎರಡೂವರೆ ಲಕ್ಷ ಕರಿಯರನ್ನು ದ್ವೇಷಿಸಿ ಆತ ತನ್ನ ಕನಸುಗಳನ್ನು ತೇಲಿಬಿಟ್ಟ, ಆ ಭಾಷಣದ ಒಂದು ತುಣುಕು ಹೀಗಿದೆ: ನಿರಾಶೆಯ ನಡುವೆಯೂ ನನಗೊಂದು ಕನಸಿದೆ... ಎಂದಾದರೊಂದು ದಿನ ಜಾರ್ಜಿಯಾದ ಕೆಂಪು ಪರ್ವತದ ಮೇಲೆ ಮಾಜಿ ಗುಲಾಮರ ಮತ್ತು ಮಾಜಿ ಶೋಷಕರ ಕರಿಯ ಮತ್ತು ಬಿಳಿಯ ಮಕ್ಕಳು ಭ್ರಾತೃತ್ವದ ಮೇಜಿನೆದುರು ಕೂಡುತ್ತಾರೆಂಬ ಕನಸಿದೆ... ಚರ್ಮದ ಬಣ್ಣದ ಬದಲು ಮೈಗೂಡಿಸಿಕೊಂಡ ವ್ಯಕ್ತಿತ್ವವನ್ನು ಅಳೆಯುವಂಥಾ ದೇಶದಲ್ಲಿ ನನ್ನ ನಾಲ್ಕು ಕಂದಮ್ಮಗಳು ಬದುಕುತ್ತಾರೆಂಬ ಕನಸು ನನಗಿದೆ. ಆ ಭಾಷಣ ನನ್ನಲ್ಲಿನ್ನೂ ಅನುರಣಿಸುತ್ತಿದೆ. ಹಾಗೆಯೇ ನನ್ನ ಕನಸೂ ಸಹ! ಎಂದಾದರೊಂದು ದಿನ ವಿಮೋಚನೆಗೊಂಡ ದಲಿತ-ಶೂದ್ರ ಸಮೂಹ, ಶೋಷಕ ಪಟ್ಟಿಯನ್ನು ಕಿತ್ತೊಗೆದ ವರ್ಗ ಭ್ರಾತೃತ್ವವನ್ನು ಅಳೆಯುವ ಇಂಥಾ ದೇಶದಲ್ಲಿ, ಮಲಿನಗೊಳ್ಳದ ನದಿ, ಸಂಪದ್ಭರಿತವಾದ ಅರಣ್ಯ, ಕೊಳಗೇರಿಯಿಲ್ಲದ ಸಮಾಜದಲ್ಲಿ ನಮ್ಮೆಲ್ಲರ ಮಕ್ಕಳು ಬದುಕುತ್ತಾರೆಂಬ ಕನಸಿದೆ. ಆ ಕನಸು ನನಸಾಗಲಿ ಎಂದು ಹಾರೈಸುತ್ತೇನೆ'.

******************

## ೧೩. ದಲಿತರು ಮತ್ತು ಸಾಮಾಜಿಕ ನ್ಯಾಯ

-ಡಾ. ಅರ್ಜುನ ಗೊಳಸಂಗಿ

ಸಮಾಜವು ವ್ಯಕ್ತಿಗಳಿಂದ ರೂಪಿತವಾಗಿರುತ್ತದೆ. ವ್ಯಕ್ತಿಯ ಬೆಳವಣಿಗೆಯೇ ಸಮಾಜವೊಂದರ ಬೆಳವಣಿಗೆ, ಒಂದು ಸಮಾಜದ, ಒಂದು ದೇಶದ ಸಂಸ್ಕೃತಿಯನ್ನು ಆ ಸಮಾಜ, ದೇಶದ ಜನರ ರೀತಿ-ನೀತಿಗಳ ಮೇಲಿಂದಲೇ ಅಳೆಯಲಾಗುತ್ತದೆ. ಸಂಸ್ಕೃತಿಯೆಂಬುದು ಜನಾಂಗದ ಜೀವಾಳ, ಅಂತರಂಗದ ಉನ್ನತ ವಿಕಸನಕ್ರಿಯೆ. ಯಾವ ಸಮಾಜ ಆರೋಗ್ಯವಾಗಿರುತ್ತದೆಯೋ ಅಲ್ಲಿ ವ್ಯಕ್ತಿಗಳು ಆರೋಗ್ಯದಿಂದಷ್ಟೇ ಅಲ್ಲ ಸುಸಂಸ್ಕೃತರಾಗಿಯೂ ಇರುತ್ತಾರೆ. ಸಮಾಜ, ಊರು, ನಾಡು, ದೇಶದ ಆರೋಗ್ಯವನ್ನು ರಕ್ಷಿಸು ಹೊಣೆಗಾರಿಕೆಯು ಸಾಮಾನ್ಯವಾಗಿ ಉನ್ನತ ವರ್ಗದವರ ಕೈಯಲ್ಲಿರುತ್ತದೆ. ಈ ವರ್ಗದ ಜನರ ಸಮಾಜದ ಹಿತವನ್ನು ನೋಡಬೇಕು. ವೈಯಕ್ತಿಕ ಹಿತಾಸಕ್ತಿಗೆ ಸಾಮಾಜಿಕ ಮೌಲ್ಯಗಳನ್ನು ಬದಲಿಸಿಕೊಡಬಾರದು. 'ನಾವು ಬದುಕಿದಂತೆ ಇತರರೂ ಬದುಕಬೇಕೆಂಬ' ಆಶಯ ಇರಬೇಕು. ಆದರೆ ಇದು ಭಾರತೀಯ ಸಾಮಾಜಿಕ ಇತಿಹಾಸದ ಪುಟಗಳಲ್ಲಿ ಕಾಣಸಿಗದು. ಧರ್ಮ ದೇವರ ಹೆಸರಿನಲ್ಲಿ ಸಮಾಜದ ಸ್ವಾಸ್ಥ್ಯವನ್ನು ಅಂದೂ ಕೆಡಿಸಿದ್ದರು. ಇಂದೂ ಮುಂದುವರೆಸಿದ್ದಾರೆ.

'ಮನುಷ್ಯ ಸಂಘಜೀವಿ, ಸಮಾಜಜೀವಿ' ಎಂಬುದು ಬಹು ಪ್ರಸಿದ್ಧವಾದ ಮಾತು. ಸಮಾಜ ಎಂಬುದು ಜನಸಮೂಹವೊಂದು ನೆಲೆನಿಂತ ತಾಣ. ಎಲ್ಲ ಜನಸಮುದಾಯ ಒಟ್ಟಿಗೆ ವಾಸಿಸುವ ಸಮೂಹಕ್ಕೆ 'ಮಾನವ ಸಮಾಜ' ಎಂಬುದು ಒಪ್ಪುವ ಮಾತು. ದೇಶ ವಾಚಿಯಾಗಿ ಭಾರತೀಯರೆಲ್ಲರೂ ಇರುವುದು. 'ಭಾರತೀಯ ಸಮಾಜ' ಇದು ಸರಿಯಾದುದು. ಆದರೆ ಧರ್ಮಗಳೇ ಪ್ರಧಾನವಾದ ಈ ದೇಶದಲ್ಲಿ ಒಂದೊಂದು ಧರ್ಮದವರನ್ನು ಅನ್ವಯಿಸಿ, ಹಿಂದೂ ಸಮಾಜ, ಇಸ್ಲಾಂ ಸಮಾಜ, ಕ್ರಿಶ್ಚಿಯನ್, ಜೈನ, ಬೌದ್ಧ ಸಮಾಜ ಎಂದು ನಾಮಿಸಲಾಯಿತು.

ಸಮಾಜದ ನಾಮಕರಣ ಇಷ್ಟಕ್ಕೆ ನಿಂತಿದ್ದರೆ ಆರೋಗ್ಯಕರ ಎನ್ನಬಹುದಾಗಿತ್ತು. ಆದರೆ ದುರ್ದೈವದ ಸಂಗತಿಯೆಂದರೆ, ಹಿಂದು ಧರ್ಮದಲ್ಲಿಯೇ ಒಂದೊಂದು ಜಾತಿಯ ಸಮಾಜವನ್ನು ರೂಪಿಸಿಕೊಂಡಿರುವುದು. ಅಂದರೆ, ಬ್ರಾಹ್ಮಣ ಸಮಾಜ. ಲಿಂಗವಂತ ಸಮಾಜ, ಒಕ್ಕಲಿಗ ಸಮಾಜ ಇತ್ಯಾದಿ. ಇದು ಇನ್ನೂ ಮುಂದುವರೆದು ಪ್ರಧಾನ ಪಂಗಡದಲ್ಲಿಯೇ ಉಪಪಂಗಡಗಳ ಸಮಾಜ ನಿರ್ಮಾಣವಾಗಿರುವುದು. ಅಂದರೆ ರೆಡ್ಡಿ ಸಮಾಜದಲ್ಲಿ ಲಿಂಗರೆಡ್ಡಿ, ನಾಮದರೆಡ್ಡಿ, ಪಾಕನಾಟಿರೆಡ್ಡಿ, ಕ್ರಿಶ್ಚಿಯನ್

ರೆಡ್ಡಿ ಸಮಾಜ; ಗಾಣಿಗ ಸಮಾಜ, ದಲಿತ ಸಮಾಜದಲ್ಲಿ ಚಲವಾದಿ (ಹೊಲೆಯರು) ಮಾದಿಗ, ಡೋಹರ, ಸಮಗಾರ, ವಡ್ಡರ, ಲಂಬಾಣಿ, ಡೊಂಬ, ಕಿಳ್ಳಿಕ್ಯಾತ ಸಮಾಜ ಹಾಗೆಯೇ ಅಲೆಮಾರಿ, ವಿಘಟನೆಗೊಂಡಿರುವುದು ವಾಸ್ತವಿಕ ಸತ್ಯ

ಇನ್ನು ಭಾಷಿಕವಾಗಿ ಸಮಾಜ ವಿಂಗಡನೆಯನ್ನು ಗಮನಿಸಿದರೆ, ಕನ್ನಡ ಸಮಾಜ, ತೆಲುಗು ಸಮಾಜ, ಮರಾಠಿ, ಕೊಂಕಣಿ, ತಮಿಳು ಇತ್ಯಾದಿ. ಇದು ಭಾರತೀಯ ಸಮಾಜದಲ್ಲಿ ಜನನಿಷ್ಠಸಮುದಾಯದ ಸಮಾಜವೊಂದು ಜಾತಿನಿಷ್ಠ ಸಮಾಜವಾಗಿ ಪರಿವರ್ತನೆಗೊಂಡು ಛಿದ್ರೀಕರಣಗೊಂಡ ರೀತಿ ಸರಿಯಲ್ಲ. ಭಾರತೀಯರ ಸಂಸ್ಕೃತಿ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಹೊರಟ ಸಾಹಸದ ಕತೆಯಿದು. ಹಲವು ಮತದ, ಹಲವು ಭಾಷೆಯ, ಹಲವು ಸಂಸ್ಕೃತಿಯ ಜನಸಮುದಾಯದಲ್ಲಿ 'ಭಾವೈಕ್ಯತೆ' ಎಂದರೆ, ಅದೆಲ್ಲಿಂದ ಬರಲು ಸಾಧ್ಯ?

ಇಂತಹ ವಿಚಿತ್ರವಾದ ವಿವಿಧ ಸಮಾಜಗಳಲ್ಲಿ ಸಮಪಾಲು-ಬಾಳು, ಸಹೋದರತೆ, ಸಾಮಾಜಿಕ ನ್ಯಾಯ ದೊರೆಯುವುದು ಸಾಧ್ಯವೇ? ಎಂಬ ಚರ್ಚೆಯನ್ನು ಇಲ್ಲಿ ಮಾಡಲಾಗುವುದು.

**ಸಾಮಾಜಿಕ ನ್ಯಾಯ ಎಂದರೆ:**

'ಸಾಮಾಜಿಕ ನ್ಯಾಯ' ವನ್ನು ಈ ರೀತಿ ಅರ್ಥೈಸಬಹುದಾಗಿದೆ. “ಸಮಾಜದಲ್ಲಿ ತಳವರ್ಗದ/ದಲಿತ ವರ್ಗಕ್ಕೆ ಆಗಿರುವ ಅನ್ಯಾಯವನು ಹೋಗಲಾಡಿಸಿ ಆ ವರ್ಗವು ಸಮಾಜದ ಮುಂದುವರಿದ ವರ್ಗಕ್ಕೆ ಸಮನಾಗಿ ಬಾಳುವ ಅವಕಾಶ ಮಾಡಿಕೊಡುವುದೇ ಸಾಮಾಜಿಕ ನ್ಯಾಯ” . ಮಾನವೀಯ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ನ್ಯಾಯದ ಬಗೆಗೆ ಅವಲೋಕಿಸಿದಾಗ ಅದಕ್ಕೊಂದು ನೆಲೆ ಹಿನ್ನೆಲೆ ಇರುವುದು ಕಂಡುಬರುತ್ತದೆ.

**ಸಾಮಾಜಿಕ ನ್ಯಾಯ ನೆಲೆ-ಹಿನ್ನೆಲೆ”**

ಸಾಮಾಜಿಕ ನ್ಯಾಯ ಪ್ರಜ್ಞೆ ಬಂದದ್ದು ಯಾರಿಂದ ಯಾವಾಗಿನಿಂದ ಎಂದರೆ, ಈ ದೇಶದಲ್ಲಿ ಅಸ್ಪೃಶ್ಯತೆ ಯಾವಗ ಆರಂಭವಾಯಿತೋ ಅವಾಗಿನಿಂದಲೇ ಎನ್ನಬೇಕು. ವರ್ಗ ವರ್ಣಗಳ ಪರಿಕಲ್ಪನೆ ಇರುವಾಗಲೂ ಇದು ಶೂದ್ರರನ್ನು ಕಾಡದೇ ಬಿಟ್ಟಿರಲಿಲ್ಲ. ಶೂದ್ರರು ಸೇವೆಗೆ ಮಾತ್ರ ಯೋಗ್ಯರೆಂದು, ವಿದ್ಯೆ, ಜ್ಞಾನ ಮೊದಲಾದ ಅವಕಾಶಗಳಿಂದ ಅವರನ್ನು ವಂಚಿತರನ್ನಾಗಿ ಮಾಡಲಾಯಿತು. ಈ ಚಾತುರ್ವರ್ಣ್ಯದ ಪದ್ಧತಿಯಿಂದ ಹೊರಗೆ ಒಂದು

ವರ್ಗ ಉಳಿದಕೊಂಡಿತು. ಅವರೇ ಮುಂದೆ ಅಸ್ಪೃಶ್ಯರಾದರು. ಅವರನ್ನು ಶೂದ್ರರಿಗಿಂತಲೂ ಕೀಳಾಗಿ ಅಮಾನವೀಯವಾಗಿ ಕಾಣಲಾಯಿತು. ಸಾಮಾಜಿಕ ನ್ಯಾಯದಿಂದ ದೂರಾದರು. ಭಗವಾನ್ ಗೌತಮ ಬುದ್ಧನ ಕಾಲದಲ್ಲಿ ಇಂತಹ ಅನೇಕ ಅಸ್ಪಶ್ಯರಿಗೆ ಸಾಮಾಜಿಕ ನ್ಯಾಯ ಒದಗಿದ್ದು ಬುದ್ಧನ ಅನುಯಾಯಿಗಳಾಗುವುದರ



ಮೂಲಕ ಎಂಬುದು ಗಮನಾರ್ಹ, ಚಕ್ರವರ್ತಿ ಅಶೋಕನ ಕಾಲಾನಂತರ ಬೌದ್ಧರು ಹಿಂದೂಗಳಾಗಿ ಅಸ್ಪೃಶ್ಯರ ಗುಂಪಾಗಿ ಉಳಿದರು. ವಿಲೋಮ ಪದ್ಧತಿಯಿಂದ ಮದುವೆಯಾದವರ ಗುಂಪೊಂದು ಕೂಡಾ ಅಸ್ಪಶ್ಯರಾಗಿ ಉಳಿದರು. ಇವರೆಲ್ಲ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಿದರು. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದರು.

ಸಾಮಾಜಿಕ ನ್ಯಾಯ ಯಾರಿಗಾಗಿ ಎಂದು ಪ್ರಶ್ನಿಸಿಕೊಂಡಾಗ, ಯಾರಿಗೆ ಮಾನವೀಯವಾದ ಬದುಕು ಈ ದೇಶದಲ್ಲಿ ಸಾಧ್ಯವಿಲ್ಲವೋ ಅವರಿಗೆ ಮಾತ್ರ ಸಾಮಾಜಿಕ ನ್ಯಾಯ ದೊರೆಯುವಂತಾಗಬೇಕು.. ಅದು ದಲಿತರಿಗೆ ಮಾತ್ರ ಎಂಬುದನ್ನು ಬೇರೆ ಹೇಳಬೇಕಿಲ್ಲ.

ಬುದ್ಧನ ತರುವಾಯ ಸಾಮಾಜಿಕ ನ್ಯಾಯಕ್ಕಾಗಿ ನಡೆದ ಎರಡನೆಯ ಬಹುಮುಖ್ಯ ಆಂದೋಲನವೆಂದರೆ, ಹನ್ನೆರಡನೆಯ ಶತಮಾನದ ಶಿವಶರಣರದ್ದು. ಕರ್ನಾಟಕದಲ್ಲಿ ಸಮಾಜ ಚಿಕಿತ್ಸಕ ಅಣ್ಣ ಬಸವಣ್ಣನವರ ನೇತೃತ್ವದಲ್ಲಿ ಶರಣ ಚಳವಳಿ ಹೊಸ ಸಾಮಾಜಿಕ ಪರಿಲ್ಪನೆಯನ್ನು ರೂಪಿಸಿತು. ವರ್ಗ, ವರ್ಣ, ಲಿಂಗಬೇಧ ಅಳಿಸಿಹಾಕಿ ಸಮಾನತೆಯ ತಳಹದಿಯ ಮೇಲೆ ಸಮಾಜವನ್ನು ಕಟ್ಟಬಯಸಿದರು. ಮಾರ್ಕ್ಸ್ ಸಿದ್ಧಾಂತ ಅನ್ವಯವಾಗಲು ಅಂದರೆ 'ಸರ್ವರಿಗೂ ಸಮಪಾಲು-ಸಮಬಾಳು' ಸಿಗುವಂತಾಗಲು ಶರಣಸಿದ್ಧಾಂತ ರೂಪಿಸಿದರು. ವಚನಕಾರರಿಗೆ ನಿಜವಾದ ಸಾಮಾಜಿಕ ಕಳಕಳಿಯಾಗಿತ್ತು.

'ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು' ಎಂಬ ಬಸವಣ್ಣನ ಮಾತಿನಲ್ಲಿ ಹಂಚಿ ತಿನ್ನುವವರೆಗೂ 'ಸಮಪಾಲು-ಬಾಳು' ಸಾಧ್ಯವಿಲ್ಲವೆಂಬ ಚಿಂತನೆಯಿದೆ. ಅಸಮಾನತೆ ಹೋರಾಟಕ್ಕೆ ಕಾರಣವಾಗುತ್ತದೆಂಬುದು ಅವರಿಗೆ ತಿಳಿದಿತ್ತು. ಸಹಭೋಜನ, ದಾಸೋಹದಂತಹ ಪರಿಕಲ್ಪನೆಗಳು ಕೂಡಾ ಸಮಭಾವ ತರುವ ಉದ್ದೇಶವಾಗಿತ್ತು. ಇದರ ಜೊತೆಗೆ ಅಂದಿನ ಶ್ರೇಣಿಕೃತ ಸಮಾಜವನ್ನು ಕೂಡಾ ಪ್ರಬಲವಾಗಿ ಶರಣರು ವಿರೋಧಿಸಿದರು. 'ಏಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನೊಂದೆ ಎಂಬೆ', 'ಆವ ಕುಲವಾದರೇನು ಶಿವಲಿಂಗವಿದ್ದವನೆ ಕುಲಜನು;, 'ಕೊಲುವವನೆ ಮಾದಿಗ, ಹೊಲಸು ತಿಂಬುವವನೆ ಹೊಲೆಯ' ಎಂದ ಬಸವಣ್ಣ: 'ಕುಲವೇ ಡೋಹರನೇ? ಕುಲವೇ ಮದಾರನ ?.... ಕುಲವ ನೋಳ್ಪೆ ಹುರುಳಿಲ್ಲ. ಅವರ ನಡೆ ನೋಡೆ

ನಡೆಯುವರು ತ್ರಿಲೋಕದಲ್ಲಿಲ್ಲ. ಎಂದು ಸಿದ್ಧರಾಮ; ಹೀಗೆ ಅನೇಕ ಶರಣ, ಶರಣೆಯರು ಜಾತಿಯನ್ನು ದೂರಿದರು. ಸಮಾನತೆಗಾಗಿ, ತಳವರ್ಗದ ಜನರ ಸಾಮಾಜಿಕ ನ್ಯಾಯಕ್ಕೆ ಹೋರಾಡಿದರು.

ಸಾಮಾಜಿಕ ನ್ಯಾಯ ಎಂಬ ಪರಿಕಲ್ಪನೆಗೆ ಶರಣರು ಹಾಕಿದ ತಳಪಾಯದ ಮೇಲೆ ಒಂದು ಅಸ್ತಿತ್ವ ಬಂದದ್ದು ೧೯೫೦ರ ನಂತರ, ಅದು ಡಾ. ಅಂಬೇಡ್ಕರ್ ಯುಗ ಎಂಬುದರಲ್ಲಿ ಎರಡು ಮಾತಿಲ್ಲ. ಅವರ ಜೊತೆಜೊತೆಗೆ ಮಹಾತ್ಮಾಗಾಂಧೀಜಿ ಯವರ ಪ್ರಯತ್ನವೂ ಇಲ್ಲ ಎನ್ನಲಾಗುವುದಿಲ್ಲ. ಆದರೆ ಅಂಬೇಡ್ಕರ್‌ವಾದಿಗಳಿಗೆ ಅವರ ನಿಲುವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ದಲಿತರು ಮತ್ತು ಸಾಮಾಜಿಕ ನ್ಯಾಯ ೧೫೧

೧೯೫೦ ಕ್ಕೂ ಮೊದಲು ಡಾ. ಅಂಬೇಡ್ಕರ್ ಅವರಂತಹ ಧೀಮಂತ ನಾಯಕರಿಂದ ಸಾಮಾಜಿಕ ನ್ಯಾಯದ ಕಡ್ಡಾಯ ಪರಿಪಾಲನೆಗಾಗಿ ಒತ್ತಾಯ ಇದ್ದದ್ದು ಕಂಡುಬರುತ್ತದೆ. ಇದು ಹೆಚ್ಚು ಫಲಶ್ರುತಿಗೊಂಡದ್ದು ಸಂವಿಧಾನದ ಕಾನೂನುಗಳ ಮುಖೇನ. ಶತಮಾನಗಳಿಂದ ರಾಜಪ್ರಭುತ್ವ ಹಿಡಿತದಲ್ಲಿ ಶ್ರೇಣಿಕೃತ ವ್ಯವಸ್ಥೆ ಸ್ವಾತಂತ್ರ್ಯಾ ನಂತರ ಪ್ರಜಾಪ್ರಭುತ್ವದ ನೆಲೆಯಲ್ಲಿ ಕೊಂಚ ಬದಲಾವಣೆಯ ಗಾಳಿ ಬೀಸಿತು. ಬುದ್ಧ- ಬಸವಣ್ಣನ ಸಂವಿಧಾನದ ನಂತರ ಅಂಬೇಡ್ಕರ್ ಸಂವಿಧಾನವು ತಳವರ್ಗ ಅನುಭವಿಸುತ್ತ ಬಂದ ಅನೇಕ ನೋವು, ಅನ್ಯಾಯಗಳನ್ನು ಕಿತ್ತೆಸೆದು ಸಮಾನತೆಯ ಬದುಕನ್ನು ಕಟ್ಟುವ ಕನಸು ಕಂಡರು. ಹೀಗಾಗಿ ಸಾಮಾಜಿಕ ನ್ಯಾಯ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಕಟ್ಟಿಕೊಂಡ ಮಹದಾಶಯವಾಯಿತು. ಶ್ರೇಣಿಕೃತ ಸಮಾಜದ ಕೊರತೆಯ ಕವಚ ಕಳೆಯಿಸುವ ಪ್ರಯತ್ನ ನಡೆದವು. ಅದು ಸಕಾರದ ಮುಖ್ಯ ಹೊಣೆಗಾರಿಕೆಯೂ ಹೌದು.

ಯಾವುದೇ ಸರಕಾರ ತನ್ನ ಪ್ರಜೆಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು, ಜೀವನಾವಶ್ಯಕ ಸೌಲಭ್ಯಗಳನ್ನು ಒದಗಿಸಬೇಕಾದುದು ನಿಯಮ. ಭಾರತದ ಮಟ್ಟಿಗೆ ಉಲ್ಲೇಖಿಸುವುದಾದಲ್ಲಿ ಸ್ವಾತಂತ್ರ್ಯಾ ನಂತರ ಮತ್ತು ಸಂವಿಧಾನ ಅಂಗೀಕಾರವಾದ ತರುವಾಯ ಪ್ರಜಾಪ್ರಭುತ್ವದ ನಿಯಮ ಪಾಲನೆ ಆರಂಭವಾಯಿತು. ಭಾರತಕ್ಕೀಗ ಎಪ್ಪತ್ತರ ಸ್ವಾತಂತ್ರ್ಯ ಸಂಭ್ರಮ, ಕರ್ನಾಟಕಕ್ಕೆ ಸುವರ್ಣ ಮಹೋತ್ಸವದ ಸಡಗರ, ಅನೇಕ ಸರಕಾರಗಳು ಬಂದಿವೆ, ಹೋಗಿವೆ, ಮತ್ತೆ ಮುಂದೆ ಬರುತ್ತವೆ. ಆದರೆ ಸಾಮಾಜಿಕ ನ್ಯಾಯವನ್ನು ಪರಿಪೂರ್ಣವಾಗಿ ಯಾವ ಸರಕಾರಕ್ಕೂ ಒದಗಿಸಲು ಸಾಧ್ಯವಾಗಿಲ್ಲವೆನ್ನಬೇಕು.

ಅಸ್ಪೃಶ್ಯತೆ ಈ ದೇಶಕ್ಕೆ ಅಂಟಿಕೊಂಡ ಶಾಪ. ಇದೊಂದು ಸಾಮಾಜಿಕ ಪಿಡುಗು ಎಂಬುದನ್ನು ಒಪ್ಪಿಕೊಳ್ಳುವುದು ಮಾತ್ರ ಸಾಧ್ಯವಾಯಿತೇ ವಿನಃ ಅದನ್ನು ನಿವಾರಿಸುವುದು ಅಷ್ಟೊಂದು ಸುಲಭ ಸಾಧ್ಯವಾಗಲಿಲ್ಲ. ಸಮಾಜದ ಕಟ್ಟಕಡೆಯ ಮನುಷ್ಯನೊಬ್ಬನ ನೋವು, ಯಮಯಾತನೆ ಬುದ್ಧ, ಬಸವಣ್ಣನಂಥವರಿಗೆ ಮಾತ್ರ ಅರ್ಥವಾಯಿತು. ಅದನ್ನು ನಿವಾರಿಸಲು ಬಹು ದೊಡ್ಡ ಪ್ರಯತ್ನವನ್ನು ಮಾಡಿದರು.

ಸಾಮಾಜಿಕ ನ್ಯಾಯದ ಬಗೆಗೆ ಚರ್ಚಿಸುವಾಗ ಪುಂಖಾನುಪುಂಖವಾಗಿ ಮಾಡುವ ಭಾಷಣಗಳು ಲೆಕ್ಕವಿಲ್ಲದಷ್ಟು ಇದಕ್ಕೆ ಆಧಾರವಾಗಿ ಕಾನೂನು ಬೇರೆ. ಇಷ್ಟೆಲ್ಲ ಸಾಮಾಜಿಕ ಪ್ರಜ್ಞೆ ಇದ್ದರೂ ಇಂದು ಮತ್ತೆ ಡಾ. ಚನ್ನಣ್ಣ ವಾಲೀಕಾರ ಹೇಳುವಂತೆ

"ನೀ ಹೋದ ಮರುದಿನ ಮತ್ತೆ ನಮ್ಮ

ಬದುಕು ಮೊದಲಿನ್ಹಾಂಗ ಅಗ್ಯಾದೋ ಬಾಬಾಸಾಹೇಬ"

ಎಂಬಂತಾಗಿದೆ.

'ಸಾಮಾಜಿಕ ನ್ಯಾಯ' ಕುರಿತು ಚರ್ಚಿಸುವಾಗ ಮೊದಲು ಚರ್ಚಿತವಾಗಬೇಕಾದುದು 'ಅಸ್ಪೃಶ್ಯತಾ ಆಚರಣೆ' ವಿಷಯ. ಸಂವಿಧಾನದ ೧೭ನೆಯ ವಿಧಿ ಪ್ರಕಾರ ಯಾವುದೇ ರೂಪದಲ್ಲಿ ಅಸ್ಪೃಶ್ಯತೆ ಆಚರಿಸಿದರೂ ಅದು ಅಪರಾಧ.



ಅಂದರೆ ಅದನ್ನು ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಯಿಂದ ಗುರುತಿಸಬಹುದಾಗಿದೆ. ಅಸ್ಪೃಶ್ಯತೆ ಎಲ್ಲಿದೆ? ಎಂದು ಪ್ರಶ್ನಿಸುವ ಸವರ್ಣೀಯರಿಗೆ, ಅಧಿಕಾರಿಗಳಿಗೆ, ದಲಿತ ಬ್ರಾಹ್ಮಣರಿಗೆ 'ಅಸ್ಪೃಶ್ಯತೆ ಎಲ್ಲಿ ಇಲ್ಲ' ಎಂಬ ಮರುಪ್ರಶ್ನೆ ಕೇಳಬೇಕಿದೆ.

ಮೊದಲು ವೈಯಕ್ತಿಕ ನೆಲೆಯಲ್ಲಿ ಆಲೋಚಿಸಿದಾಗ ಗ್ರಾಮಾಂತರ ಪ್ರದೇಶದಲ್ಲಿ ಇವತ್ತಿಗೂ ಹರಿಜನ ಕೇರಿಯವರನ್ನು ಸವರ್ಣೀಯರು ಯಾರೂ ಮುಟ್ಟಿಸಿಕೊಳ್ಳುವುದಿಲ್ಲ. ಅಲ್ಲದೇ ಆಳುಗಳಲ್ಲಿ ಹೊಲೆಯಾಳು, ಮುಟ್ಟಾಳು ಎಂದು ವಿಂಗಡಿಸಿ ಸೇವೆ ಮಾಡಿಸಿಕೊಂಡು ಗುಲಾಮಗಿರಿಯ ದೊರೆಗಳಾಗಿದ್ದಾರೆ. ಹೊಲೆಯಾಳು ಮನೆಯ ಹೊರಗಿನ-ಕಟ್ಟೆಯ (ಗಗ್ಗರಗಟ್ಟಿ, ಪಡಸಾಲಿ) ಕೆಳಗಿನ ಕೆಲಸ ಮಾಡಿದರೆ, ಮುಟ್ಟಾಳು ಮಧ್ಯವರ್ಗದ ಜಾತಿಯವನಾದರೆ ಮನೆಯೊಳಗಣ ಕೆಲಸ ಮಾಡುತ್ತಾನೆ.

ಇದಲ್ಲದೆ ದಲಿತರಿಗೆ ಇಂದಿಗೂ 'ಕಟಿಂಗ್ ಮಾಡದಿರುವುದು, ಮಹಿಳೆಯರಿಗೆ ಮುಟ್ಟಿ ಬಳಿ ಇಡಿಸದೇ ಇರುವ ಮುಟ್ಟಿದರೆ ಮೈಲಿಗೆಯಾಗುವ ಅಸ್ಪೃಶ್ಯತೆಯ ಜೀವಂತ ತಾಜಾ ಉದಾಹರಣೆಗಳು ಕಣ್ಣ ಮುಂದಿವೆ.

ಇನ್ನು ಸಾಮಾಜಿಕ ನೆಲೆಯತ್ತ ಬಂದರೆ ಇದು ಅದಕ್ಕಿಂತ ಭೀಕರ, ಅಂದು ಡಾ. ಬಾಬಾಸಾಹೇಬ ಅಂಬೇಡ್ಕರ್‌ರರು ಮಾಡಿದ ಹೋರಾಟವನ್ನೇ ಮತ್ತೆ ಇಂದು ಮುಂದುವರೆಸುವುದು ಅಗತ್ಯ ಮತ್ತು ಅನಿವಾರ್ಯ. ದೇವಾಲಯ ಪ್ರವೇಶ; ಕೆರೆ- ಬಾವಿ ಮುಟ್ಟಿ ನೀರು ಪಡೆಯುವುದು; ಸಹಭೋಜನ; ಜಾತ್ರೆ-ಉತ್ಸವ-ಮದುವೆಗಳಲ್ಲಿ

ಏಕಪಂಕ್ತಿ ಭೋಜನ; ಆಶ್ರಯ ನೆಪದಲ್ಲಿ ಊರಹೊರಗೆ ಹೊಸಹೊಲಗೇರಿ, ದಲಿತ ಕೇರಿಗಳ ನಿರ್ಮಾಣದಲ್ಲೆಲ್ಲ ಪ್ರತ್ಯೇಕತೆ ಹಾಗೆಯೇ ಇದೆ. ಇದರಲ್ಲಿ ಯಾವುದಾದರೂ ಒಂದು ವ್ಯತ್ಯಾಸವಾದರೆ ದಲಿತರಿಗೆ ಊರ ಬಹಿಷ್ಕಾರ, ಕೇರಿಗಳಿಗೆ ಬೆಂಕಿ ಹಚ್ಚುವುದು, ಬೆತ್ತಲೆ ಮೆರವಣಿಗೆ, ಮಲ ತಿನ್ನಿಸುವ, ಮೂತ್ರ ಪಾನಿಸುವ ದೌರ್ಜನ್ಯಗಳು ನಿರಂತರ ನಡೆಯುತ್ತಲೇ ಇವೆ. ಇಲ್ಲೆಲ್ಲಿದೆ ಸಾಮಾಜಿಕ ನ್ಯಾಯ? ಅಂತರ್ಜಾತಿ ವಿವಾಹದಲ್ಲಂತೂ ಇನ್ನಷ್ಟು ಭಯಾನಕ ಕೃತ್ಯಗಳು ನಡೆಯುತ್ತವೆ.

ಇಂತಹ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿ ಸಮಾನತೆ ತರಲು, ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದವರಲ್ಲಿ ಬುದ್ಧ-ಬಸವಣ್ಣ-ಅಂಬೇಡ್ಕರ್ ಗೆದ್ದರೆ, ಗಾಂಧೀಜಿ ಮಾತ್ರ ಸಾಮಾಜಿಕವಾಗಿ ಸೋಲುತ್ತಾರೆ. ರಾಜಕೀಯವಾಗಿ ವಿಜಯವಾಗುತ್ತಾರೆ. ಆದರೂ ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯ ತಳ್ಳಿಹಾಕುವಂತಿಲ್ಲ. ೧೯೮೯ ರಲ್ಲಿ ದೌರ್ಜನ್ಯ ತಡೆ ಕಾಯ್ದೆ ಜಾರಿಯಾದರೂ ಪ್ರಜಾವಾಣಿ ಪತ್ರಿಕೆಯ ವಿಶೇಷ ಪುರವಣಿಯಲ್ಲಿ ವರದಿಯಾದ ದಲಿತರ ಮೇಲಿನ ದೌರ್ಜನ್ಯಗಳ ಲೇಖನಗಳನ್ನು ನೋಡಿದರೆ ಭಯಾನಕ ಎನಿಸುತ್ತದೆ.

**ಇಂದು ನಾವೇನು ಮಾಡಬೇಕು?**

ದಲಿತರ ಮೇಲಿನ ದೌರ್ಜನ್ಯವನ್ನು ನಮ್ಮ ಸಮೂಹ ಸಂವಹನ ಮಾಧ್ಯಮಗಳು ಇಂದು ತಕ್ಷಣವೇ ಪ್ರಸಾರಿಸುತ್ತಿರುವುದರಿಂದ ಅಧಿಕಾರಿಗಳು, ಸರಕಾರ ಅಷ್ಟೇ ತ್ವರಿತವಾಗಿ



ಮೊಸಳೆ ಕಣ್ಣೀರಿಡುತ್ತಿವೆ. ಆದರೆ ದಲಿತರೆಲ್ಲ ಜಾಗೃತರಾಗುತ್ತಿದ್ದಾರೆ. ಅಲ್ಲಲ್ಲಿ ಕೆಲವು ಸವರ್ಣೀಯರು ಮಾನವೀಕರಣಕ್ಕೊಳಗಾಗುತ್ತಿದ್ದಾರೆ.

'ನೊಂದವರ ನೋವ ನೋಯದವರೆತ್ತ ಬಲ್ಲರು, 'ಹೆರಿಗೆಯ ಬೇನೆ ಹೆತ್ತವಳಿಗೆ ಮಾತ್ರ ಗೊತ್ತು' ಎನುವಂತೆ ನಮ್ಮ ನೋವು-ಅವಮಾನಗಳು ಮಾನವೀಯ ಹೃದಯ ಇರುವವರಿಗೆ ಮಾತ್ರ ಅರ್ಥವಾಗಬಲ್ಲವು. ದೌರ್ಜನ್ಯಗಳಾದ ಕೇವಲ ದಲಿತರು, ದಲಿತ ಸಂಘಟನೆಗಳು ಪ್ರತಿಭಟಿಸಿದರೆ ಸಾಲದು. ದಲಿತಪರ, ಪ್ರಗತಿಪರರು ಅಂತಹ ಸಂಘಟನೆಗಳು, ಜೊತೆಗೆ ಸರ್ಕಾರ ಸ್ಪಂದಿಸಬೇಕು. ಇಂದಿನ ಪರಿಸ್ಥಿತಿ-ಪ್ರಸಂಗಗಳನ್ನು ನೋಡಿದರೆ ಹೋರಾಟಗಳಿಂದಲೇ ಎಲ್ಲವೂ ಸಾಧ್ಯವಾಗುವುದಿಲ್ಲ. ಹಾಗೆಂದು ಸುಮ್ಮನಿರುವಂತಿಲ್ಲ.

ಇವುಗಳಿಗೆ ಪೂರಕವಾಗಿ ದಲಿತರೂ ಕೂಡಾ ಪ್ರಜ್ಞೆ-ಪರಿಸರ ಬೆಳೆಸಿಕೊಳ್ಳುವುದು, ದಲಿತ ಲೋಕವೆಲ್ಲ ಅಕ್ಷರ ಲೋಕವಾಗುವುದು. ಆರ್ಥಿಕವಾಗಿ ಸದೃಢರಾಗುವುದು, ರಾಜಕೀಯವಾಗಿ, ಬೌದ್ಧಿಕವಾಗಿ ಸಮರ್ಥರಾಗುವುದು,

ಸಾಂಸ್ಕೃತೀಕರಣಕ್ಕೆ ಒಳಗಾಗುವುದು ಅಗತ್ಯವಿದೆ. ಇದು ಸಾಧ್ಯವಾಗದೇ ಹೋದರೆ, ಅಥವಾ ಸಾಧ್ಯವಾಗುತ್ತಿದ್ದಂತೆಯೇ ಈ ದೇಶದ ದಲಿತರೆಲ್ಲ ತಮಗೆ ಸರಿ ಎನಿಸಿದ ಮತ-ಪಂಥ ಬದಲಿಸುವುದು ತುಂಬಾ ಅಗತ್ಯವಿದೆ. ನಾಮಾಂತರದೊಂದಿಗೆ ಇಂದು ಅಂತಿಮವಾಗಿ ದಲಿತರಿಗಿರುವ ಮಾರ್ಗವೆಂದರೆ ಬುದ್ಧ-ಬಸವ ಮಾರ್ಗ ಒಂದೇ ಎನ್ನಬೇಕು.

***********

## ೧೪. ದಲಿತರ ಮುಂದಿನ ಹೆಜ್ಜೆಗಳು

**ಎಂ. ಕನ್ನಿಕಾ**

ನಾಗಾಲೋಟದಂತೆ ಕ್ರಮಿಸುತ್ತಿರುವ ಇಂದಿನ ಜಗತ್ತಿನ ವ್ಯಾಪಕಜ್ಞಾನ ಇಂದಿನ ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ, ಚಿಂತನೆಗಳಿಗೆಲ್ಲಾ ಜ್ಞಾನದ ದಿಗಂತದ ಮೆಟ್ಟಿಲನ್ನು ಸತ್ವಪೂರ್ಣವಾಗಿ, ವೈವಿಧ್ಯಮಯ, ವೈಶಿಷ್ಟ್ಯಮಯದ ಮೂಲಕ ಅಂತರಂಗ, ಬಹಿರಂಗದ ಸೌಂದರ್ಯಗಳನ್ನು ಉಜ್ವಲಿಸುತ್ತಾ ಸಾಗಿರುವುದೇನೊ ಸತ್ಯ. ಆದರೆ, ಮನುಷ್ಯ ತನ್ನ ಅಂತರಂಗದ ಅಮೂರ್ತ ಭಾವನೆ, ಆಲೋಚನೆಗಳನ್ನು ಆದಿಮ ಹಂತದಿಂದ ಹಿಡಿದು ಆಧುನಿಕ ಹಂತದವರೆಗೆ ಬಹಿರತಗೊಳಿಸುತ್ತಾ ಬಂದಿರುವ ವಾಡಿಕೆ ನಮ್ಮ ಮುಂದೆ ನಿದರ್ಶನವಾಗಿಯೇ ಉಳಿದಿದೆ.

ಇಂಥ ನೂರಾರು ಸ್ವರೂಪ ಸಹಜತೆಗಳನ್ನು ಧಾರಣ ಮಾಡಿಕೊಳ್ಳುತ್ತಾ, ತತ್ಫಲವಾಗಿ ಬೆಳೆಸುತ್ತಾ, ಮಾನವ ತನ್ನ ಅಂತರಂಗದ ಪ್ರತಿಭಾವನೆಗಳನ್ನು ಸಶಕ್ತವಾಗಿ ಅಭಿವ್ಯಕ್ತಗೊಳಿಸುತ್ತಾ, ಅಸ್ಪಷ್ಟ ಅಮೂರ್ತ, ಕಲ್ಪನಾತೀತ, ದೀರ್ಘಭಾವಾಲೋಚನೆಗಳನ್ನು ಗರ್ಭೀಕರಿಸಿಕೊಳ್ಳುತ್ತಾ ಬೌದ್ಧಿಕ, ಆಧ್ಯಾತ್ಮಿಕ ಹಾಗೂ ಬಹುಸ್ತರದ ಅರ್ಥಾವತಾರಗಳನ್ನು ಮನೋಗ್ರಾಹಿಯನ್ನಾಗಿ ಮಾಡಿದ ಮಹಾತ್ಮರ ಆದರ್ಶವು ನಮಗೆ

ಈ ಅವಿಷ್ಕಾರದ ನೆಲೆಗಟ್ಟಿನಡಿಯಲ್ಲಿ ಜ್ಞಾನ- ವಿಜ್ಞಾನ ತಾಂತ್ರಿಕ ಸಾಧನಗಳನ್ನು ತನ್ನೊಳಗೆ ಅಳವಡಿಸಿಕೊಳ್ಳುತ್ತಾ ಹೋದಂತೆಲ್ಲಾ ತನ್ನ ಪರಮನೋಸ್ಪರ್ಶ ಸಾಮರ್ಥ್ಯವಾಗಿ ನಿರಂತರವಾಗಿ ಜ್ಞಾನವಿಕಾಸದ ಮಹಾಯಾತ್ರೆ ಕೈಗೊಂಡಿದ್ದೇನೆಂದು ಹೂಂಕರಿಸುತ್ತಲೇ ಸಾರುತ್ತಾ ಬಂದಿದ್ದಾನೆ. ಇಂಥ ಮಹಾಯಾತ್ರೆಯ ಯಾಂತ್ರಿಕನ ಚೈತನ್ಯ ಚಿಗುರು, ನಿತ್ಯಸತ್ಯ ಅವತಾರದ ಸರ್ವಚೇತನನ ಹೃದಯ ಕಮಲದಲ್ಲಿ 'ಜಾತಿ ವ್ಯಾಮೋಹ' ಹರಿದಿಲ್ಲ.

“ಉಚ್ಚ-ನೀಚ' ಎಂಬ ಈ ಎರಡು ಕುಲದ ಹಾದಿಯೇ ಎರಡು ಸಾವಿರ ವರ್ಷಗಳ ಕಾಲ ಮಾನಸಿಕ ಗುಲಾಮತನಕ್ಕೆ ತಳ್ಳಿದ ಮನುವಾದಿ ಶ್ರೇಣಿಕೃತ ಜಾತಿ ವ್ಯವಸ್ಥೆ ಭಾರತೀಯ ಸಮಾಜವನ್ನು ಆರು

ಸಾವಿರಗಳಿಗಿಂತಲೂ ಹೆಚ್ಚಾಗಿ ವ್ಯವಸ್ಥೆಯನ್ನು ವಿಂಗಡಿಸಿ, ಇನ್ನೆಂದೂ ಏಕತೆ ಕಾಣದ ಹಾಗೆ ಭಾವೈಕ್ಯತೆಯನ್ನು ನುಚ್ಚುನೂರು ಮಾಡಿ ಬಿಟ್ಟಿದೆ.

ಅನಾದಿಕಾಲದಿಂದಲೂ ವಿದ್ಯೆ-ಅಧಿಕಾರ-ಆಸ್ತಿ-ಅಂತಸ್ತು ಎಲ್ಲವನ್ನು ಅನುಭವಿಸುತ್ತಾ, ಬಹುಸಂಖ್ಯಾತರಾಗಿದ್ದ ಅಸ್ಪೃಶ್ಯರು, ಹಿಂದುಳಿದವರು, ಶೂದ್ರರನ್ನು ಮೂಲೆ ಗುಂಪಾಗಿಸಿದ್ದ ಪರಿಯನ್ನು ನಾವೆಲ್ಲ ತಿಳಿದೆ ಇದ್ದೇವೆ. ಈ ಜಾಗತೀಕರಣದ ಹೊತ್ತಿನಲ್ಲೂ ಕೂಡ ನಾವು ಅನುಭವಿಸುತ್ತಿದ್ದೇವೆ. ಈ ತುಳಿದಾಟದ ಪ್ರಕ್ರಿಯೆಯಲ್ಲಿ



ನಾವೆಲ್ಲ ಬಹುದೂರ ಕ್ರಮಿಸಿ ಬಿಟ್ಟಿದ್ದೇವೆ. ಈ ನಡಿಗೆಯ ಓಟದೊಳಗೆ 'ಅಕ್ಷರ- ಹೋರಾಟ' ಜಾಗೃತದ ನೆಲೆಗೂ ಹೆಜ್ಜೆಯಿಟ್ಟಿದ್ದೇವೆ. ನಮ್ಮ ಮುಂದಿನ ಪೀಳಿಗೆಯನ್ನು ಮುಂದೊಯ್ಯಲು ಅಣಿಯಾಗುತ್ತಿದ್ದೇವೆ.

ಈ 'ಅಕ್ಷರ-ಹೋರಾಟ' ಈ ನೆಲೆ ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವ್ಯಕ್ತಿಸಲು ದಲಿತ ಜಾಗೃತ ಅಕ್ಷರಸ್ಥ ಸಮುದಾಯವೊಂದು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನು ತಮ್ಮದೇ ಬದುಕಿನ ಸಂಸ್ಕೃತಿಯೊಳಗೆ, ತಮ್ಮ ಜನರ ನೋವು ನಲಿವಿನ ಕತೆ-ವ್ಯಥೆಗಳಿಗೆ ತಮ್ಮ ಭಾಷೆಯನ್ನೆ ಉಪಯೋಗಿಸಿಕೊಂಡು ತಮ್ಮ ಸಹಜ ಅನುಭವಗಳಿಗೆ 'ಸಾಹಿತ್ಯ' ಎಂಬ ನಾಮಕರಣದ ಮೂಲಕ ಸಮಾಜ ಸೃಷ್ಟಿಯೊಳಗೆ 'ದಲಿತ ಸಾಹಿತ್ಯ'ವೆಂದೆ ಸೃಷ್ಟಿಕರಿಸಿಕೊಂಡು ತಮ್ಮ ತಳಹದಿಯನ್ನು ಬಹಳ ಆಳವಾಗಿ ಬೇರೂರಿಸಿಕೊಳ್ಳಲು ಹೆಣಗಿದ್ದೇನೋ ನಿಜ. ಆದರೆ ಈ ದಲಿತ ಸಾಹಿತ್ಯದ ನಂತರದ ಹೆಜ್ಜೆ, ಬೆಳವಣಿಗೆ ಕುಂಠಿತಗೊಂಡಿದೆ ಎಂಬ ಆತಂಕ ದಲಿತ ಸಮುದಾಯದೊಳಗೆ ಗೊಂದಲಕ್ಕೆ ಎಡೆ ಮಾಡಿಕೊಟ್ಟಿದೆ.

ಬಹಳ ವಿಶಾಲ ಅರ್ಥವನ್ನು ಪಡೆದುಕೊಂಡು ಸಾಗಿದ 'ದಲಿತ ಸಾಹಿತ್ಯ' ಆಂಧ್ರದ ವಿರಸಂ, ಮಹಾರಾಷ್ಟ್ರದ ದಲಿತ ಪ್ಯಾಂಥರ, ಕರ್ನಾಟಕ ದಲಿತ ಕಲಾವಿದರ ಮತ್ತು ಲೇಖಕರ ಒಕ್ಕೂಟ, ದಲಿತ ಸಂಘರ್ಷ ಸಮಿತಿ, ಬೂಸಾ ಪ್ರಕರಣ-ಹೀಗೆ ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ರೂಪುಗೊಂಡ ದಲಿತ ಸಾಹಿತ್ಯವು ಆವರೆಗೆ ಬೇರುಬಿಟ್ಟಿದ್ದ ಸಿದ್ಧಭಾಷೆ, ನುಡಿಗಟ್ಟು, ವಸ್ತು, ಅನುಭವಗಳನ್ನು ಭಂಜಕಗೊಳಿಸಿತು. ಆ ಸಂದರ್ಭದಲ್ಲಿ ಪ್ರತಿಭಟನೆಯ ಮೂಲಕ ದಲಿತ ಬರಹಗಾರರೆಲ್ಲಾ ಎಚ್ಚರ ಕೊಟ್ಟಂತಹ ರೀತಿ ಸ್ವಲ್ಪ ರೊಚ್ಚಿನದಾಗಿತ್ತು. ಅಲ್ಲದೆ, ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ರಾಜಕೀಯ ಸಂಘಟನೆಗಳ ಅನಿವಾರ್ಯತೆಯನ್ನು ಮನಗಂಡು, ಕರ್ನಾಟಕ ದಲಿತ ಸಂಘರ್ಷ ಸಮಿತಿ ರೂಪುಗೊಳ್ಳುವುದರ ಮೂಲಕ ಅನೇಕ ಆಶೋತ್ತರಗಳಿಗೆ ಯಕ್ಷ ಪ್ರಶ್ನೆಗಳಿಗೆ ಬುನಾದಿಯಾಗುವ ಆಶಯವನ್ನು ದಲಿತರ ಮನಸ್ಸಿನೊಳಗೆ ಆವರಿಸಿಕೊಂಡಿತು.

ಊರಿಂದೂರಿಗೆ, ಕೇರಿಯಿಂದ ಕೇರಿಗೆ ಇಂಥಹ ಸಮಿತಿಗಳು ನೂರಾರು ತಲೆಯೆತ್ತಿಕೊಂಡವು. ಅಲ್ಲಿನ ಸ್ಥಳೀಯರೊಡನೆ ಸಮೂಹಗಳನ್ನು ನಿರ್ಮಿಸಿಕೊಂಡವು. ನೈಜ ನೆಲೆಯೊಳಗೆ ಗಟ್ಟಿತನದ ಉಳಿವಿಗಾಗಿ ಹುಡುಕಾಟವನ್ನು ನಡೆಸಿಕೊಂಡವು ಎಂದರೆ ತಪ್ಪಾಗಲಾರದು.

ಈ ಎಲ್ಲಾ ಹವಣಿಕೆಯ ಮಧ್ಯೆ ಅಕ್ಷರಸ್ಥ ಸಮುದಾಯ 'ದಲಿತ ಹೆಜ್ಜೆ' ನವರೂಪು ನಿರ್ಮಾಣದ ತಳಹದಿಗೆ ಸೋಪಾನತೆಯನ್ನು ಸೃಷ್ಟಿಸುವ ಸಂದರ್ಭದೊಳಗೆ ಚಾರಿತ್ರಿಕ ನೆಲೆಯನ್ನು ಹೊಸದಾಗಿ ಸೃಷ್ಟಿಸಿಕೊಳ್ಳುವಲ್ಲಿ ಬೌದ್ಧಧರ್ಮದೆಡೆಗೆ ದೃಷ್ಟಿ ಹರಿಸಿದ್ದು ಸತ್ಯ ಸಂಗತಿ.



ಎರಡೂವರೆ ಸಾವಿರ ವರ್ಷಗಳ ಹಿಂದೆ ಲೋಕದ ದುಃಖ ನಿವಾರಣೆಗಾಗಿ ಸತ್ಯಮಾರ್ಗವನ್ನು ಬೋಧಿಸಿ, ಅಷ್ಟಾಂಗ ಮಾರ್ಗವನ್ನು, ನಿಲ್ದಾಣದ ದಾರಿಯನ್ನು ತೋರಿಸಿಕೊಟ್ಟ ಜಗದ ಮಹಾನ್ ಚೇತನ ಬುದ್ಧ ಗುರುವಿನ ಚಿಂತನೆಗಳಿಂದ ಆರ್ಕಷಿತಗೊಂಡ ಬುದ್ಧಿ ಜೀವಿಗಳು, ಸಾಹಿತಿಗಳು, ಹೋರಾಟಗಾರರರು, ಕಲಾವಿದರು, ಜನಸಾಮಾನ್ಯರು, ದುಃಖಿತರು- ಹೀಗೆ ಎಲ್ಲರನ್ನು ಒಳಗೊಂಡಂತೆ ನಾಡಿನ ಮೂಲೆ- ಮೂಲೆಗಳಿಂದ ಎಳೆಯ ಮಕ್ಕಳಿಂದ ಹಿಡಿದೂ ವಯಸ್ಸಾದ ವೃದ್ಧರವರೆಗೂ ಸಾಗರೋಪಾದಿ ಸಂಖ್ಯೆಯಲ್ಲಿ ಸಾವಿರಾರೂ ಜನ ವರ್ಷ-ವರ್ಷವೂ 'ಬುದ್ಧನೆಡೆಗೆ ಮರಳಿ ಮನೆಗೆ ಘೋಷಣೆಯ ಮೂಲಕ ಹಿಂದೂ ಧರ್ಮವನ್ನು ತೊರೆದು ಭೌದ್ಧಧರ್ಮ ದೀಕ್ಷೆಯನ್ನು ಸ್ವೀಕರಿಸುವುದರ ಮೂಲಕ ಬೆಳಕಿನೆಡೆಗೆ ಸಾಗುತ್ತಿದ್ದಾರೆ.

ಈ ಜಾಗೃತ ಸಮಾವೇಶಗಳು ಕರ್ನಾಟಕದ ಮಟ್ಟಿಗಷ್ಟೇ ಅಲ್ಲದೆ, ಇಡೀ ರಾಷ್ಟ್ರದಲ್ಲೆ ಒಂದು ಐತಿಹಾಸಿಕ ಘಟನೆ ಎನಿಸಿಕೊಂಡಿದೆ. ಇದರಿಂದ ದಲಿತ ಸಮುದಾಯದೊಳಗೆ ಒಂದು ಹೊಸ ಬೆಳಕು ಮೂಡುತ್ತಿದೆ ಎಂಬ ಭಾವ ಹೊರ ಬಂದಿದ್ದೇನೋ ನಿಜ. ಹಾಗೆಯೇ ನಾಡಿನ ಜನಮಾನಸದಲ್ಲಿ ಮತ್ತೊಂದು ಮರೆಯಲಾರದ ಸಮಾವೇಶ ಎನಿಸಿಕೊಂಡಿತು. ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು 'ದಲಿತರೆಂದು ಹಿಂದೂಗಳಾಗಿರಲಿಲ್ಲ' ಈಗಲೂ ಅಲ್ಲ. ಅವರು ಧರ್ಮಾತೀತರು. ಅವರೀಗ ಧರ್ಮದ ಅಗತ್ಯ ಬಂದೊದಗಿದೆ ಎಂದು ಹೇಳಿದ ಐತಿಹಾಸಿಕ ಸತ್ಯವನ್ನು ಮನಗಂಡ ಅವರ ಅನುಯಾಯಿಗಳೆಲ್ಲರೂ ಅಂಬೇಡ್ಕರ್ ಕಂಡ 'ಬುದ್ಧ ಭಾರತ'ದ ಕನಸನ್ನು ನನಸು ಮಾಡುವ 'ಬೌದ್ಧ ಧರ್ಮ ಸ್ವೀಕಾರ'ದ ಮೂಲಕ ನಾಡಿನ ದಲಿತ ಚಳವಳಿಯ ಹೊಸ ಅಧ್ಯಯನಕ್ಕೆ ಮುನ್ನುಡಿ ಬರೆಯುತ್ತಿದ್ದಾರೆ.

ಈ ಮೇಲಿನ ಎಲ್ಲಾ ಸಂಗತಿಯೊಳಗೂ ದಲಿತ ಹೆಜ್ಜೆಗಳು ಪ್ರಗತಿಪರವೇ ಆಗಿವೆ. ಆದರೆ, 'ಪ್ರಸ್ತುತ ಮತ್ತು ಮುಂದಿನ ಹೆಜ್ಜೆ' ಹಲಗಿನ ಮೇಲೆ ಕತ್ತಿನ ಮಿನಿಯಂತೆ ಪ್ರಶ್ನೆ ಎದುರಾಗಿದೆ.

ಮುಂಚೂಣಿಯಲ್ಲಿ ನಿಂತವರ ಕಿರಿಯ ಪೀಳಿಗೆಯನ್ನು ದಿಕ್ಕು ತಪ್ಪಿಸಿದರೆಂಬ ವಿಚಾರ 'ದಲಿತ ಇಂಟಲೆಕ್ಚುಯಲ್ ಆಂಡ್ ಕಾನ್ಸಿಯಸ್ ಕಾನ್ಸರೆನ್ಸ್'ನಲ್ಲಿ ಪ್ರಸ್ತಾಪಗೊಂಡಿದೆ. ಎಲ್ಲಾ ವಲಯದಲ್ಲೂ ಅಧಿಕಾರ, ನಾಯಕತ್ವ ಪಡೆದ ದಲಿತ ಮಂದಿಗಳು ಕೆಲವು ಸಂದಿಗ್ಧ ಪರಿಸ್ಥಿತಿಯೊಳಗೆ ಮೌನ ವಹಿಸಿ ಬಿಡುತ್ತಿದ್ದಾರೆ. ಅಧಿಕಾರದ ಲಾಲಸೆ,ಹಣ, ರಾಜಕೀಯತೆಗೆ ಮುಗಿಬಿದ್ದ ಈ ಪ್ರಥಮ ಹೆಜ್ಜೆಗಳು ತಮ್ಮ ಮುಂದಿನ ಯುವ ದಲಿತ ಹೆಜ್ಜೆಗಳಿಗೆ ದಾರಿ ಕಾಣದ ಹಾಗೆ ಮುಚ್ಚಿ ಕೆಡವಿ ಬಿಟ್ಟಿವೆ. ಈ ಅಸಹಾಯಕತನದೊಳಗೆ ಪ್ರಸ್ತುತ ದಲಿತ ಹೆಜ್ಜೆ ತೀರಾ ಸಪ್ಪಾಗಾಗಿವೆ ಎಂದೇ ಹೇಳಬಹುದು. ತಮ್ಮ ತಮ್ಮ ಕುಟುಂಬ ಕೇಂದ್ರಿತ ನೆಲೆಯೊಳಗೆ ಸ್ವಾರ್ಥ ಸಾಧಕರಂತೆ ತಮ್ಮಷ್ಟಕ್ಕೆ ತಾವೇ ಸೀಮಿತಗೊಳ್ಳುವಲ್ಲಿ ಪ್ರಗತಿಪರ ದಲಿತ ಮೌನಿಯಾಗಿದ್ದಾನೆ. ಈ ಸಂದರ್ಭದಲ್ಲಿ ನಮ್ಮವರನ್ನು ನಾವೇ ತುಳಿದುಕೊಳ್ಳುವ ಪರಿಸ್ಥಿತಿಗಳು, ವಲಯ ದಲಿತ ಇಬ್ಭಾಗಗಳು



ಪ್ರಸ್ತುತದೊಳಗೆ ನಿರಾಣಗೊಂಡು ಬಿಟ್ಟಿವೆ. ಕೆಲವರು ದಲಿತರೆಂದು ಹೇಳಿಕೊಳ್ಳುವಲ್ಲಿಯೂ ಸಂಕೋಚ, ಹಿಂಜರಿಕೆಗೆ ಒಳಗಾಗಿದ್ದಾರೆ. ತಮ್ಮ ಜನರ ಕಷ್ಟ-ಸುಖಗಳಿಗೆ ಸ್ಪಂದಿಸಲಾರದಷ್ಟು ಜಾಗತಿಕ ವ್ಯಾಪ್ತಿಯೊಳಗೆ ಸೆರೆಯಾಗಿ ಬಿಟ್ಟಿದ್ದಾರೆ. ಮತ್ತೆ, ಕೆಲವರು ರಾಜಕೀಯಕ್ಕೆ ಮುಗಿ ಬಿದ್ದಿದ್ದಾರೆ. ದಾಸ್ಯತನಕ್ಕೆ ಒಳಗಾಗಿ ತಲೆಬಾಗಿದ್ದಾರೆ. ಈ ಎಲ್ಲಾ ಒಳ ಸಂಘರ್ಷದ ದಲಿತ ಆಂತರ್ಯದೊಳಗೆ 'ಸ್ವಯಂ ಆತ್ಮ ಪ್ರಜ್ಞೆ' ದಲಿತನೊಳಗೆ ಮೂಡಬೇಕಾಗಿದೆ. ತಾನು ದೂಷಿಸುವ ಮೊದಲು, ತನ್ನೊಳಗೇ ತಾನೇ ಬೆಳಕನ್ನು ಕಂಡುಕೊಳ್ಳಬೇಕಾದ ಪ್ರಮೇಯ ಒದಗಿದೆ.

ಈ 'ದಲಿತ ಆತ್ಮ ಪ್ರಜ್ಞೆ'ಯೊಳಗೆ ಪ್ರತಿ ದಲಿತನು ಮಣಿದು ತನ್ನನ್ನು ತಾನು ಹುಡುಕಿಕೊಂಡಾಗಲೇ ಮುಂದಿನ ದಲಿತರಿಗೆ ಹೊಸ ಬೆಳಕು. ದಲಿತನೆಂಬ ಪಟ್ಟ ಹಿಡಿದು ಮೇಲಕ್ಕೆ ಹತ್ತಿ ಬಂದ ಮಂದಿ ತಮ್ಮ ಕೆಳಗೆ ನಿಂತವರಿಗೆ ಕೈ ನೀಡಿದ ಕೊರತೆಯೇ ಇಲ್ಲಿ ದಲಿತ ಸಮೂಹದೊಳಗೆ ಸೋರುವಿಕೆಗೆ ಉಂಟಾಗಿರುವ ಪರಿಸ್ಥಿತಿ ಎಂಬುದಾಗಿ ಪರಿಗಣಿಸಬಹುದಾಗಿದೆ. ದ್ವೇಷ, ಅಸೂಯೆ, ಆಲಸ್ಯತನ, ಗುಂಪಾಗುಳಿತನ ಗೂಂಡಾಪ್ರವೃತ್ತಿಗಳು ಪ್ರಸ್ತುತ ಹೆಜ್ಜೆಯೊಳಗೆ ಅಧಿಕಾರದ ರೀತಿಯಲ್ಲಿ ತೋರ್ಪಡಿಕೆ ಯಾಗುತ್ತಿವೆ. ದಿಟ್ಟ, ನೇರ ಹೋರಾಟದ ಪ್ರವೃತ್ತಿ ವಿಶಾಲ ಮನಸ್ಸಿನ ನಿಸ್ವಾರ್ಥ ಸಾಧಕರು ದಲಿತ ಸಮೂಹದೊಳಗೆ ಮೇಲೆಳಬೇಕಾಗಿದೆ. ಇದು ಒಂದು ಅಂಶವಾದರೆ, ಮತ್ತೊಂದು ರೀತಿಯಲ್ಲಿ 'ದಲಿತರ ಪರ ಧ್ವನಿ ಎತ್ತಿ ಸಮಾಜದೊಳಗೆ ತಮ್ಮ ಸ್ಥಾನ-ಮಾನಗಳನ್ನು ಭದ್ರಪಡಿಸಿಕೊಳ್ಳುವ ಸ್ಟಂಟ್‌ಮಾಸ್ಟರ್‌ಗಳು ಪ್ರಸ್ತುತದಲ್ಲಿ ಹೆಚ್ಚಾಗಿದ್ದಾರೆ. ಬ್ಯಾನರ್ ತಕ್ಕಂತೆ ಆ ವೇದಿಕೆಯ ಜನರನ್ನು ಓಲೈಸಿ ಮಾತನಾಡುವ ಮಂದಿಗೆ ನಾವೇ ನಮಗರಿವಿರದಂತೆ ಅವರ ಸ್ಥಾನಮಾನಗಳನ್ನು ಸಮಾಜದಲ್ಲಿ ಗಟ್ಟಿಗೊಳಿಸುತ್ತಿರುತ್ತೇವೆ. ಆದರೆ, ಅವರಿಂದ ಐದು ಪೈಸೆಯಷ್ಟು ಪ್ರಯೋಜನ ಸ್ಥಾನಮಾನವನ್ನು ತುಂಬಿಕೊಟ್ಟ ಜನಕ್ಕಾಗಿರುವುದಿಲ್ಲ. ಆದರೆ, ಅಷ್ಟರಮಟ್ಟಿಗೆ 'ಸೊಸೈಟಿ ಪಬ್ಲಿಕ್ ಪಬ್ಲಿಸಿಟಿ' ತುಂಬಿಕೊಟ್ಟಿರುತ್ತವೆ.

ಅಂಬೇಡ್ಕರ್ ಅವರು ಒಂದೇ ಸೂರಿನಡಿನಿಂತ ಶೋಷಿತರ ಬದುಕಿಗೆ ಹೊಸ ಬೆಳಕು ತುಂಬಿಕೊಟ್ಟ ಮಹಾನ್ ಚೇತನ. ಆದರೆ, ಒಂದೇ ಸೂರಿನಡಿ ನಿಂತಂಥವರೆಲ್ಲಾ ತಮ್ಮತಮ್ಮ ಸೂರುಗಳನ್ನು ತಾವೇ ಕೊಯ್ದುಕೊಂಡು

ಸ್ವತಂತ್ರ ಹಕ್ಕುಸ್ವಾಮ್ಯಗಳೆಡೆಗೆ ದೃಷ್ಟಿ ಹರಿಸಿದ್ದಾರೆ. 'ಸಮೂಹ ಪ್ರಗತಿ ವ್ಯಕ್ತಿ ಸೃಷ್ಟಿ'ಯನ್ನು ತಮ್ಮ ಸಮೂಹದೊಳಗ ಸೃಷ್ಟಿಸಿಕೊಳ್ಳುವುದರ ಮೂಲಕ ಪ್ರತ್ಯೇಕ ವಿಭಾಗತೆಯನ್ನು ತಮ್ಮದಾಸಿಕೊಂಡಿರುವ ಸಮೂಹ ಗುಂಪುಗಳೆಲ್ಲಾ ರಾಜಕೀಯ ಒಕ್ಕಣೆಗೆ ಮಣಿಯುತ್ತಾ ಹೋದಂತೆಲ್ಲಾ 'ಸಂಘಟನೆ' ಕೊರತೆ ಅನುಭವಿಸುತ್ತಿದೆ. ಇವತ್ತು ಹಿಂದುಳಿದ ವರ್ಗಗಳಲ್ಲಿ ಬಹುದೊಡ್ಡ ಕೊರತೆ ತೋರುತ್ತಿರುವುದು ಈ ಪ್ರತ್ಯೇಕ ಸಂಘಟನೆಯ ರೂಪದಲ್ಲಿ ಆಗಿದ್ದ ಪಕ್ಷದಲ್ಲಿ, ಅವರಿಗೆ ಪ್ರತ್ಯೇಕ ಸವಲತ್ತು ಬೇಡವೇ? ಎಂಬ ಪ್ರಶ್ನೆ ಎದುರಾಗಬಹುದು. ವಾಸ್ತವದಲ್ಲಿ, ಆಯಾಮ ಸಮೂಹಗಳು ಧ್ವನಿ ಎತ್ತದಿದ್ದರೆ ಬಲಿಷ್ಠ ಸಮೂಹದ ತುಳಿತಕ್ಕೆ ಒಳಗಾಗುವ ಸಂಭವವಿರುತ್ತದೆ. ಆದರೆ, ಸಂಘಟನೆಯ ರೂಪದಲ್ಲಿ ಪ್ರತ್ಯೇಕವಾಗಿ ಉಳಿಯುವುದು ತಪ್ಪು.



ಈ ಪ್ರಸ್ತುತ ಪರಿಯೊಳಗೆ ಉಸಿರಾಡುತ್ತಿರುವ ಇವಿಷ್ಟು ವಾಸ್ತವವು ಕೂಡ ಸತ್ಯ. ಇಲ್ಲಿವರೆಗೆ, ನಮ್ಮ ಹೆಜ್ಜೆ ನಿಂತಿದೆ ಎಂಬುದೇ ಬಹುಪಾಲು ಮಂದಿಯ ಆತಂಕ, ಈ ಮಾತು ಕೂಡ ನಿಜ. ಇಲ್ಲಿವರೆಗೆ ನಡೆದು ಬಂದ ಹೆಜ್ಜೆ ಮುಖಮಾಡಿ ನಿಂತಿದ್ದೇವೆ. ಆದರೆ, ಆ ಧರ್ಮದ ಒಳಗೆ ಹೊಕ್ಕವರೆಲ್ಲಾ ಇಲ್ಲಿವರೆಗೆ ದಲಿತರಿಗಾಗಿ ಯಾವ ಅಭಿವೃದ್ಧಿ ಪರತೆ ಕೈಗೊಂಡಿದ್ದಾರೆಂಬ ಪ್ರಶ್ನೆ ಇದೆ. ಯುವ ಪೀಳಿಗೆಗೆ ದಲಿತ ಹೆಜ್ಜೆ ಮುಂದೇನು? ಎಂಬ ಕೌತುಕತೆಯೂ ಕೂಡ ಇದೆ.

ಒಬ್ಬ ಯುವ ದಲಿತ ಉದಯೋನ್ಮುಖಿ ಲೇಖಕಿಯಾಗಿ ನನ್ನ ನೇರ ಅಭಿಪ್ರಾಯದ ಮೂಲಕ ದಲಿತರ ಮುಂದಿನ ಹೆಜ್ಜೆಯನ್ನು ವಿಸ್ಕೃತಿ ಪಡಿಸುವ ನಿಟ್ಟಿನಲ್ಲಿ ಆ ವ್ಯಾಖ್ಯಾನದ ವಿಸ್ತಾರದ ತಳಹದಿಗೆ ಒಂದಿಷ್ಟು ಲೇಪನದ ಸೊಬಗನ್ನು ಕಟ್ಟುವ ಪ್ರಯತ್ನಕ್ಕೆ ಕೈ ಹಾಕಿದ್ದೇನೆ.

ಕನ್ನಡ ಕ್ರಿಯಾ ಸಮಿತಿಗಳ ಹೋರಾಟದಿಂದ ಕನ್ನಡಕ್ಕೆ ಹೇಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿತೋ ಹಾಗೆಯೇ, ನಮ್ಮ ದಲಿತ ಸಮುದಾಯದೊಳಗೂ "ಅಕ್ಷರ- ಅಕ್ಷರೇತರ' ದಲಿತ ಕ್ರಿಯಾ ಸಮಿತಿಗಳು ಹುಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇದೆ. ರಾಜಕೀಯ ಸಂಘಗಳನ್ನು ಕಟ್ಟಿಕೊಳ್ಳುವುದರಿಂದಾಗಲಿ, ತಮಟೆ ಬಡಿಯುವುದರ ಮೂಲಕ ಪ್ರತಿಭಟಿವುದರಿಂದಾಗಲಿ ಇಂದು ಅಷ್ಟಾಗಿ ಪ್ರಯೋಜನ ಇಲ್ಲ. ಕಾಲದ ಚಕ್ರ ಬಹಳ ವೇಗದ ಗತಿಯಲ್ಲಿ ಸಾಗುತ್ತಿರುವುದರಿಂದ, ದಲಿತ ಅಸ್ಥಿತ್ವವನ್ನು ಮುಂದೊಂದು ದಿನ ಕಳೆದುಕೊಳ್ಳುವ ಪರಿಸ್ಥಿತಿ ಎದುರಾಗುವುದರಿಂದ, ನಾವು ಈಗಲೇ, ಈ ಕ್ಷಣದಲ್ಲಿ, ಸನ್ನದ್ಧವಾಗಿ ಎಚ್ಚೆತ್ತುಕೊಳ್ಳಬೇಕಾಗಿದೆ.

ಜಾತಿ ಸಂರಕ್ಷಣೆಯೊಳಗೆ ಮಠಮಾನಿತರೂಪಗಳು ಹೇಗೆ ಜೀವ ತಳೆದಿದೆಯೋ, ಹಾಗೆಯೇ, ಈ ದಲಿತರಿಗೆ ಮಠದ ಅವಶ್ಯಕತೆ ಬೇಡವಾದರೂ ಕೂಡ 'ದಲಿತ ಕ್ರಿಯಾ ಅಭಿವೃದ್ಧಿ ಸಮಿತಿಗಳು' ಹುಟ್ಟಿಕೊಳ್ಳಲೇ ಬೇಕಾಗಿದೆ. ಇಂಥ ಕ್ರಿಯಾ ಸಮಿತಿಗಳಿಂದ ಪೂರ್ಣ ದಲಿತರ ಅಭಿವೃದ್ಧಿ ಆಗದೇ ಹೋದರೂ ಕೂಡ, ಸ್ವಲ್ಪಮಟ್ಟಿಗಾದರೂ ಈ ಜಾಗತಿಕ ಜಾತಿ ವ್ಯಾಮೋಹದೊಳಗೆ, ದಲಿತರ ನೋವು ನಲಿವಿಗೆ ಒಂದಿಡಿ ಬೆಳಕು ತುಂಬಬಹುದು. ಸರ್ಕಾರದ ಬೆಂಬಲವನ್ನು

ಕೂಡ ಪಡೆಯಬಹುದಾಗಿದೆ. ಸರ್ಕಾರ ಅಭಿವೃದ್ಧಿ ಸ್ವಾಮ್ಯ, ದಲಿತ ಶ್ರೀಮಂತರ ಹಸ್ತಕ್ಷೇಪ, ದಲಿತ ರಾಜಕಾರಣಿಗಳ ಸಹಾಯ ಹಸ್ತ, ದಲಿತ ಅಕ್ಷರವಂತರ ಪಪ್ರಚಾರ ಸಪ್ತಾಹ, ಯುವ ದಲಿತ ಸಮೂಹದ ಸಹಚರ್ಯ, ಆಯಾಯ ಕ್ಷೇತ್ರದ ಪ್ರಮುಖ ದಲಿತ ಮುಖಂಡರ ನೆರವಿನಿಂದ ಈ ಅಭಿವೃದ್ಧಿ ಕ್ರಿಯಾ ಸಮಿತಿಗಳು ಹುಟ್ಟಿಕೊಳ್ಳಬೇಕಾಗಿದೆ. ಕೆಲವು ಕ್ರಿಯಾಶೀಲ ಕಾರಚಟುವಟಿಕೆಗಳನ್ನು ಕಡ್ಡಾಯವಾಗಿ ಇವು ಮಾಡಲೇಬೇಕಾಗಿದೆ.

ಅದರಲ್ಲಿ:-

* ಪ್ರತಿ ದಲಿತ ಕುಟುಂಬದೊಳಗೆ ಕಡ್ಡಾಯಶಿಕ್ಷಣವಾಗಲೇ ಬೇಕು. ಆ ಶಿಕ್ಷಣಕ್ಕೆ ಪೂರಕವಾದ ಸೌಲಭ್ಯವನ್ನು ಸರ್ಕಾರ ಕಲ್ಪಿಸಿಕೊಡುವುದರ ಜೊತೆಗೆ, ಈ ಕ್ರಿಯಾ ಸಮಿತಿಗಳು ಸಹಾಯದ ಹಸ್ತ ನೀಡಬೇಕು.



ಉನ್ನತ ಶಿಕ್ಷಣ ಪಡೆದ ದಲಿತ ಕುಟುಂಬದಲ್ಲಿ ಹಣ, ಇನ್‌ಪ್ಲುಯೆನ್ಸ್ ಇಲ್ಲದೆ, ನಿರುದ್ಯೋಗಿಗಳಾಗಿಯೇ ಉಳಿದಿರುವಂಥರನ್ನೆಲ್ಲಾ ಪಟ್ಟಿ ಮಾಡಿ, ಸರ್ಕಾರದ ಗಮನಕ್ಕೆ ತಂದು, ಅವರಿಗೆ ಅರ್ಹವಾದ ಉದ್ಯೋಗ ಕಲ್ಪಿಸಿಕೊಡುವಲ್ಲಿ ಈ ಸಮಿತಿ ನೆರವಾಗಬೇಕು.

* ದಲಿತ ಸಮುದಾಯದ ಕುಟುಂಬಗಳ ಮೇಲೆ ದಬ್ಬಾಳಿಕೆ, ದೌರ್ಜನ್ಯ, ಕಲಹಗಳು ಉಂಟಾಗದ ಹಾಗೆ, ಅವರ ಸಂರಕ್ಷಣೆಗೆ ಕಾನೂನು ಚೌಕಟ್ಟಿನೊಳಗೆ ಅವರ ಹಕ್ಕು ಭಾದ್ಯತೆಗಳನ್ನು ಕಾಪಾಡುವಲ್ಲಿ ಈ ಕ್ರಿಯಾ ಸಮಿತಿಗಳು ಸದಾ ಕಾರ್ಯತತ್ಪರವಾಗಿರಬೇಕು.

* ದಲಿತ ಕಲಾವಿದರು, ಸಾಹಿತಿಗಳು, ಸಾಹಿತ್ಯಾಸಕ್ತರು ಇತರ ಎಲ್ಲಾ ಕಲಾ ಪ್ರಕಾರಗಳನ್ನು ಪ್ರೋತ್ಸಾಹಿಸುವ, ಧನ ಸಹಾಯ ನೀಡುವ, ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟಕ್ಕೆ ಪರಿಚಯಿಸಿ ಕೊಡುವ ಪ್ರಾಬಲ್ಯತೆಯನ್ನು ಕ್ರಿಯಾ ಸಮಿತಿ ಹೊಂದಿರಬೇಕು.

* ಸರ್ಕಾರಗಳು ರೂಪಿಸುವ ಸಮಾಜ ಕಲ್ಯಾಣ ಇಲಾಖೆಗಳು ಎಷ್ಟರಮಟ್ಟಿಗೆ ಕಾರ್ಯಪ್ರವೃತ್ತಿಯಾಗಿವೆ. ಇಲಾಖೆಗಳ ಪ್ರಯೋಜನವನ್ನು ಜನ ಸಾಮಾನ್ಯರು ಯಾವ ಪ್ರಮಾಣದಲ್ಲಿ ಪಡೆದುಕೊಳ್ಳುತ್ತಿದ್ದಾರೆ. ಅಲ್ಲಿನ ವ್ಯವಸ್ಥೆ, ಅಧಿಕಾರಿಗಳ ಬಗ್ಗೆ ಜಾಗರೂಕತೆವಹಿಸುವುದು.

* ಭಾರತದ ಆದಿ ಮೂಲನಿವಾಸಿಗಳಾದ ದಲಿತರು ತಮ್ಮ ನೆಲೆಯೊಳಗೆ ತಮ್ಮದೇ ಭದ್ರತೆ ಪಡೆದುಕೊಳ್ಳುವ ಅಗತ್ಯವಿದೆ.

ಅಷ್ಟೇ ಅಲ್ಲದೆ, ನಾವು ಸೊಸೈಟಿಯೊಳಗೆ ಯಾರನ್ನು The Greatest Establishment People ಎಂಬುದಾಗಿ ಪರಿಗಣಿಸುತ್ತೇವೆಯೋ, ಅಂಥ I.A.S, I.P.S., I.F.S., special Adviser'. The Higher Economy Establishment', Scientist's, National, International Engineers, Doctors, Judges, Minister'

ಮೊದಲಾದ ಶಿಕ್ಷಣ ಸಮೂಹಕ್ಕೆ ದಲಿತಲೋಕದ ಕಷ್ಟಕಾರ್ಪಣ್ಯಗಳ ಅರಿವು ಮೂಡಿಸಬೇಕಾಗಿದೆ. ದಲಿತ ಕ್ರಿಯಾಸಮಿತಿಗಳಿಗೆ ಇವರೆಲ್ಲಾ ಪುಷ್ಟಿದಾಯಕ ಬಲ ಒದಗಿಸಿದರೆ, ಬಾಬಾಸಾಹೇಬ್ ಅಂಬೇಡ್ಕರ್ ಮತ್ತೆ ನಮ್ಮೊಳಗೆ ಉದಯಿಸಿದಂತೆ, ಅವರು ಕಂಡ ಕನಸು ನನಸಾದಂತೆ. ಅವರು ತಮ್ಮ ಬದುಕಿನುದ್ದಕ್ಕೂ ಹಂಬಲಿಸಿದಂತೆ ಶೋಷಿತ ಸಮುದಾಯಕ್ಕೆ ಪಡಿಸೂರು, ಅನ್ನ, ನೀರು, ವಿದ್ಯೆ ಒದಗಿದಂತೆ, ಅವರು ಹೇಳಿಕೊಟ್ಟ ಹಾದಿಯೊಳಗೆ ನಾವೆಲ್ಲಾ ಕೂಡಿ ಹೆಜ್ಜೆ ಇಟ್ಟಂತೆ.

ಈ ಕ್ರಿಯಾಶೀಲ ಕಾರ್ಯ ಚಟುವಟಿಕೆಯ ನಿರ್ಮಿತದೊಳಗೆ ಮಾತ್ರ ದಲಿತರ ಮುಂದಿನ ಹೆಜ್ಜೆ ಪ್ರತಿಪಥದೆಡೆಗೆ ಸಾಗಲು ಸಾಧ್ಯ. ಈ ಅನಿಸಿಕೆ....... ನಿಮ್ಮ ಉತ್ತರವೇನು?

************

**೧೫. ದಲಿತರು ಮತ್ತು ಕೃಷಿ ಪರಂಪರೆ**

**- ಮಂಜು ಎಚ್.**

ಕೃಷಿ ಮನುಷ್ಯನ ಪುರಾತನವಾದ ಕಸುಬು ಅಲೆಮಾರಿ ಮನುಷ್ಯ ನೆಲೆ ನಿಂತ ಮೇಲೆ ತನ್ನ ದಿನನಿತ್ಯದ ಅವಶ್ಯಕತೆಯಾದ ಆಹಾರವು ನಿರಂತರವಾಗಿ ಕಂಡುಕೊಂಡ ವ್ಯವಸ್ಥೆಯೇ ಕೃಷಿ. ಇದಕ್ಕೆ ಹತ್ತು ಸಾವಿರ ವರ್ಷಕ್ಕೂ ಹೆಚ್ಚಿನ ಇತಿಹಾಸವಿದೆ. ನಿಸರ್ಗದ ಲಯವನ್ನು ಅನುಸರಿಸಿ ಕಾಡಿನ ಕಣಿವೆಯಲ್ಲಿ, ಬೆಟ್ಟದ ತಪ್ಪಲಿನಲ್ಲಿ, ನದಿಯ ತಡಿಯಲ್ಲಿ ಮನುಷ್ಯ ತನಗೆ ಬೇಕಾದ ಆಹಾರ, ಬಟ್ಟೆ, ವಸತಿಗೆ, ಅವಶ್ಯಕವಾದ ಸಾಮಗ್ರಿಗಳು ಮತ್ತು ಪಶುಗಳಿಗೆ ಬೇಕಾದ ಹುಲ್ಲು ಸೊಪ್ಪುಗಳನ್ನು ಬೆಳೆದಿದ್ದಾನೆ. ತಾನು ಉಂಡು ಇತರರಿಗೂ ಹಂಚಿದ್ದಾನೆ. ಈ ದೀರ್ಘವಾದ ಪ್ರಯಾಣದಲ್ಲಿ ಅನೇಕ ಪ್ರಬೇಧದ ತಳಿಗಳನ್ನು ಗುರುತಿಸಿ ತನ್ನ ಅನುಕೂಲಕ್ಕೆ ತಕ್ಕಂತೆ ಅವುಗಳನ್ನು ಪಳಗಿಸಿ ಬಳಕೆ ಮಾಡುವ ಮೂಲಕ ಕೃಷಿ ವೈವಿಧ್ಯಕ್ಕೂ ಕಾರಣನಾಗಿದ್ದಾನೆ. ಮಣ್ಣಿನ ಗುಣ, ಮಳೆಯ ಪ್ರಮಾಣ, ಋತುಮಾನಗಳ ಕಾಲಚಕ್ರಕ್ಕೆ ಅನುಗುಣವಾಗಿ ಆಹಾರವನ್ನು ಬೆಳೆದುಕೊಳ್ಳುವ ಕ್ರಮವನ್ನು ರೂಪಿಸಿಕೊಂಡಿದ್ದಾನೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅವನು ಪ್ರಕೃತಿಯ ಮಗುವಾಗಿ ಬೆಳೆದಿದ್ದಾನೆ.

ಮಾನವನ ಸಂಸ್ಕೃತಿಗೆ ಮೂಲವಾದ ವ್ಯವಸಾಯವಯ ಹೇಗೆ ಆರಂಭವಾಯಿತು. ಎಂದು ಹೇಳುವುದು ಕಠಿಣ. ಪ್ರಾಕ್ತನ ಅವಶೇಷಗಳ ಆಧಾರದ ಮೇಲೆ ಮತ್ತು ಇಂದು ಬದುಕಿರುವ ಆದಿವಾಸಿ ಜನಾಂಗಗಳ ವ್ಯವಸಾಯ ಪದ್ಧತಿಯ ಆಧಾರದ ಮೇಲೆ ಉಗಮವನ್ನು ನಿರೂಪಿಸಲಾಗಿದೆ. ವ್ಯವಸಾಯ ಎಂದರೆ ಆಹಾರ ಉತ್ಪಾದನೆ ಮಾಡುವುದು ಎಂದರ್ಥ. ಆಹಾರ ಉತ್ಪಾದನೆ ಮಾಡುವುದು ಮನುಷ್ಯನಿಗೆ ಕೂಡಲೇ ಸಿದ್ಧಿಸಿಲ್ಲ. ಆ ಸಿದ್ಧಿಗೆ ಹಲವಾರು ಹಂತಗಳು ದಾಟಿ ಬಂದಿದೆ. ಕೆಲವು ಮಾನವ ವಿಜ್ಞಾನಿಗಳ ಪ್ರಕಾರ ಪ್ರಥಮದಲ್ಲಿ ಆಹಾರ ಸಂಚಯನ, ತದನಂತರ ಆಹಾರ ಉತ್ಪಾದನೆ. ಈ ಸಂಚಯನ ಮತ್ತು ಉತ್ಪಾದನೆಗಳೂ ಸಹ ಮಾನವನ ಅಲೆಮಾರಿತನಕ್ಕೆ ದಕ್ಕೆ ಬಂದಾಗ ಮಾತ್ರ ವಿದ್ವಾಂಸರು ಚರ್ಚೆ ಮಾಡಿದ್ದಾರೆ.

ಕೃಷಿಯ ಬಗ್ಗೆ ಕಲ್ಪನೆ ಮತ್ತು ಚಿಂತನೆಗಳು ಈ ಪೃಥ್ವಿಯಲ್ಲಿ ಮಾನವನ ಉಗಮದಿಂದಲೇ ಪ್ರಾರಂಭವಾಯಿತೆನ್ನಬಹುದು. ಆದಿಮಾನವನ ದೈನಂದಿನ ಆಹಾರಕ್ಕಾಗಿ ತನ್ನ ಪರಿಸರದಲ್ಲಿರುವ ಗೆಡ್ಡೆ ಗೆಣಸು, ಹಣ್ಣುಹಂಪಲು, ಪ್ರಾಣಿಪಕ್ಷಿಗಳನ್ನು ಹುಡುಕಲಾರಂಭಿಸಿದ್ದು, ಕೃಷಿಯ ಪರಿಕಲ್ಪನೆಗೆ ನಾಂದಿಯಾಯಿತು. ಆದ್ದರಿಂದಲೇ



ಇಂದೂ ಕೂಡ ಕೃಷಿಗೆ ಒಕ್ಕಲುತನ, ಆರಂಭ, ವ್ಯವಸಾಯ, ಬೇಸಾಯ ಮುಂತಾದ ಪರ್ಯಾಯ ಪದಗಳು ರೂಢಿಯಲ್ಲಿವೆ.

ರೈತ, ಕೃಷಿಕ, ಒಕ್ಕಲಿಗ, ವ್ಯವಸಾಯಗಾರ, ತೋಟಗಾರ, ತಿಗಳ, ಮುಂತಾಗಿ ಏನೇ ಹೆಸರಿನಿಂದ ಕರೆದರೂ ಅವರೆಲ್ಲರೂ ಭೂಮಿಯ ಸೇವೆ ಮಾಡಿ ನೇಗಿಲ ಯೋಗಿಗಳಾಗಿ ಇಡೀ ಮಾನವ ಕುಲಕ್ಕೆ ಹಸಿವನ್ನು ದೂರ ಮಾಡಲು ಆಹಾರ ಒದಗಿಸುವ ಅನ್ನದಾತ ಎಂದು ಪ್ರಸಿದ್ಧಿ ಪಡೆದಿದ್ದಾನೆ. ಈ ಭೂಮಿ ಮೇಲೆ ಮಾನವ ಆಹಾರಕ್ಕಾಗಿ ಹುಡುಕಾಟ ನಡೆಸಿ ಪ್ರಥಮಥಹ ಗೆಡ್ಡೆಗೆಣಸು, ಪ್ರಾಣಿಪಕ್ಷಿ, ಹಣ್ಣುಹಂಪಲು ಗಳತ್ತ ಗಮನಹರಿಸಿ ಅವು ಸದಾಕಾಲ ದೊರೆಯದಿದ್ದಾಗ ತನ್ನ ಸುತ್ತಮುತ್ತಲಿನ ನೈಸರ್ಗಿಕ ಸಂಪತ್ತನ್ನು ಸದುಪಯೋಗಪಡಿಸಲು ಕಾಡುಮೇಡು, ಗಿಡಗಂಟೆ, ಕಲ್ಲು, ಮುಳ್ಳು, ತೆಗೆದು ಹಸನು ಮಾಡಿ ಮಣ್ಣು ಅಗೆದು ಸಮಗಟ್ಟೆ ಉಳುಮೆ ಮಾಡಿ ಭೂಮಿಯ ಫಲವತ್ತತೆ ಕಾಪಾಡಲು ಜೈವಿಕ ತರಗಲೆ, ಮೆಕ್ಕಲು ಮಣ್ಣು ಹಾಕಿ ಬೆಳೆ ತೆಗೆಯಲು ಜಮೀನು ಹದಗೊಳಿಸುವ ಕಠಿಣ ಪರಿಶ್ರಮ, ದೀರ್ಘಕಾಲದಿಂದ ಬಳುವಳಿಯಾಗಿ ಅಪ್ಪನಿಂದ ಮಗ ಅವನಿಂದ ಅವನ ಮಗ, ಮೊಮ್ಮಕ್ಕಳು ಹೀಗೆ ಬಂದಿರುವ ವ್ಯವಸಾಯಗಾರಿಕೆಯು ಇಂದು ಒಂದು ಮುಖ್ಯ ಉದ್ಯೋಗವಾಗಿ ಬಹುಜನರ ಜೀವನಾಡಿಯಾಗಿದೆ. ಇದನ್ನು ಗ್ರಾಮೀಣ ಪ್ರದೇಶದಲ್ಲಿ ಅಚ್ಚಳಿಯದಂತೆ ನೇಗಿಯೋಗಿ ಯೋಗಿಯಂತೆ ರಾಜ್ಯಗಳಳಿಯಲಿ, ರಾಜ್ಯಗಳುದಿಸಲಿ, ತನ್ನೀಕಾರ್ಯವ ಬಿಡೆನೆಂಬ ಛಲದಿಬೆಂಬಿಡದ ಬೇತಾಳನಂತೆ ಎಲುಬು ಹೊರಬಂದ ಕೃಶ ಶರೀರದ ಮೈಗೆ ಎಣ್ಣೆ ನೀರು ಕಾಣದ ಹರಕಲು ಬಟ್ಟೆಯ ರೈತನನ್ನು ಕಾಣುತ್ತೇವೆ.

ಮನುಷ್ಯನ ಎಲ್ಲಾ ಚಟುವಟಿಕೆಗಳಿಗೆ ಆಹಾರ ಬೇಕು ಆಹಾರಕ್ಕೆ ಮೂಲ ಕೃಷಿ. ಕೃಷಿ ಸಸ್ಯಗಳನ್ನು ಒಗ್ಗಿಸಿಕೊಂಡು ಅವುಗಳನ್ನು ಬೆಳೆಸುವ ಒಂದು ಕುಶಲಕಲೆ, ಇದು ಮಾನವ ಜನಾಂಗದಷ್ಟೇ ಪ್ರಾಚೀನವಾದುದು, ಕೃಷಿ ಭಾರತೀಯರ ಮುಖ್ಯ ಉದ್ಯೋಗವಾಗಿದೆ. ಅದನ್ನವರು ಬಿಡುವಂತಿಲ್ಲ ನಮ್ಮ ರಾಷ್ಟ್ರೀಯ ವರಮಾನದಲ್ಲಿ ಶೇಕಡ

೫೦% ಕ್ಕಿಂತ ಹೆಚ್ಚು ಭಾಗ ಕೃಷಿಯಿಂದ ಸಂದಾಯವಾಗುತ್ತದೆ. ಕೃಷಿ ನಮ್ಮ ರಾಷ್ಟ್ರದ ಜೀವಾಳ ಹವಾಮಾನ ಮತ್ತು ಸಂಪನ್ಮೂಲ ಬದಲಾವಣೆಗಳಿಗೆ ತಕ್ಕಂತೆ ಸುಲಭವಾಗಿ ಹೊಂದಿಕೊಳ್ಳುವಂತಹ ಕೌಶಲ್ಯವನ್ನು ನಮ್ಮ ಕೃಷಿ ಪದ್ಧತಿ ಹೊಂದಿದೆ. ಕೃಷಿಯಲ್ಲಿ ಪ್ರಾಣಿಗಳು ಅಪ್ರಧಾನವಾದ ಅಂಶಗಳಾಗಿದ್ದು, ಸಸ್ಯಗಳು ಪ್ರಧಾನ ಅಂಶಗಳಾಗಿವೆ. ಸಸ್ಯವರ್ಗ, ಪ್ರಾಣಿವರ್ಗ, ಮಾನವ ವರ್ಗಗಳ ಪರಸ್ಪರ ಸಂಬಂಧವು ಬಹುಕಾಲದಿಂದ ಬೆಳೆದು ಬಂದಿದೆ. ಕೃಷಿಗೆ ಆಧಾರ ಭೂಮಿಯ ಮೇಲೆ ಕಲ್ಲು ಮರಳು ಪ್ರಧಾನವಾದ ಭೂಮಿ ಕೃಷಿಗೆ ಯೋಗ್ಯವಲ್ಲ. ಮೆದುಮಣ್ಣಿನ ಭೂಮಿ ಮಾತ್ರವೇ ಕೃಷಿಗೆ ಅರ್ಹವಾದದ್ದು.

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಶೇ.೭೦% ರಷ್ಟು ಜನರು ಕೃಷಿಯನ್ನೇ ತಮ್ಮ ಬದುಕಿನ ಮೂಲ ವೃತ್ತಿಯಾಗಿ ಅವಲಂಭಿಸಿಕೊಂಡಿದ್ದಾರೆ. ಆದ್ದರಿಂದಲೇ



ಕೃಷಿಯನ್ನು ಭಾರತದ ಬೆನ್ನೆಲುಬು ಎನ್ನತ್ತಾರೆ. ಕೃಷಿಯಲ್ಲಿ ದಲಿತರ ಪಾತ್ರ ಒಂದು ಅವಿಭಾಜ್ಯ ಅಂಗವಾಗಿದೆ. ಭಾರತದ ಜನಸಂಖ್ಯೆಯಲ್ಲಿ ಸುಮಾರು ೨೫% ರಷ್ಟು ದಲಿತರಿದ್ದಾರೆ. ಅವರಲ್ಲಿ ಶೇ.೨೫% ಕ್ಕಿಂತ ಹೆಚ್ಚು ಜನರು ತಮ್ಮ ಜೀವನ ನಿರ್ವಹಣೆಗೆ ಭೂಮಿಯನ್ನೇ ಆಶ್ರಯಿಸಿದ್ದಾರೆ. ಭೂ ಒಡೆತನವನ್ನು ಶೇ.೨% ಕ್ಕಿಂತ ಹೆಚ್ಚು ಜನ ಹೊಂದಿಲ್ಲ. ಅವರ ಒಡೆತನದಲ್ಲಿರುವ ಭೂಮಿಯ ಪ್ರಮಾಣವು ಒಟ್ಟು ಕೃಷಿ ಭೂಮಿಯಲ್ಲಿ ಸೇ.೨% ರಷ್ಟಿಲ್ಲ. ಇಂತಹ ದಾರುಣ ಪರಿಸ್ಥಿತಿಯಲ್ಲಿದ್ದರೂ ಅವರನ್ನು ರಕ್ಷಿಸುವುದು ನಮ್ಮ ಕಾನೂನುಗಳಿಗೆ ಕಾನೂನು ಪಾಲಕರಿಗೆ ಸಾಧ್ಯವಾಗಿಲ್ಲ.

ಪುರಾತನ ಕಾಲದಿಂದಲೂ ದಲಿತರು ಕೃಷಿಯ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಶತಶತಮಾನಗಳಿಂದ ತುಳಿತಕ್ಕೊಳಗಾದ ದಲಿತರು ಭೂಮಿಯನ್ನು ಕೃಷಿ ಮಾಡುವುದರ ಮುಖಾಂತರ ತಮ್ಮ ಬದುಕಿನಲ್ಲಿ ತಮ್ಮದೇ ಆದ ಸಂಸ್ಕೃತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಸಿಂಧು ಬಯಲಿನ ನಾಗರೀಕತೆಯ ಸಂದರ್ಭದಲ್ಲಿ ಹೆಚ್ಚಾಗಿ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದವರು ದಲಿತರೆ, ಆದರೆ ಈ ಕೃಷಿ ಚಟುವಟಿಕೆಗಳನ್ನು ನೋಡಿದಂತಹ ಆರ್ಯರು ದಲಿತರ ಜೊತೆ ಕೃಷಿ ಚಟುವಟಿಕೆಯಲ್ಲಿ ತೊಡಗುತ್ತಾರೆ. ಮುಂದೆ ಆರ್ಯರು ಪ್ರಧಾನವಾಗಿ ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸುತ್ತಾರೆ. ಕಾಲಕ್ರಮೇಣ ಪ್ರಕೃತಿ ವಿಕೋಪದಿಂದ ಬರಗಾಲ ಉಂಟಾಗಿ ದಲಿತರ ಕೃಷಿ ಚಟುವಟಿಕೆ ಕುಂಠಿತವಾಗಿ ಭೂಹೀನರಾಗುತ್ತಾರೆ. ೧೬ನೇ ಶತಮಾನದಲ್ಲಿ ಕರ್ನಾಟಕದ ದಕ್ಷಿಣ ಪ್ರಾಂತ್ಯದ ದಲಿತರು ಕೃಷಿಗಾಗಿ ಕೃಷಿ ಸಾಮಗ್ರಿಗಳಿಗಾಗಿ ಹೋರಾಟ ಮಾಡುತ್ತಾ ಬರುತ್ತಾರೆ. ಮಂಟೇಸ್ವಾಮಿ ಕಾಲದ ಕೃಷಿಯಲ್ಲಿ ಪ್ರಗತಿ ಪ್ರಧಾನವಾಗಿ ಮರದ ನೇಗಿಲು ಕಬ್ಬಿಣದ ಉಪಕರಣಗಳ ಅವಶ್ಯಕತೆ ಇರುತ್ತದೆ. ಆದರೆ ಪಾಳೇಗಾರಿಕೆ ಪ್ರವೃತ್ತಿ ಹೊಂದಿರುವಂತಹ ಭೂಮಾಲೀಕರ ದಲಿತರು ಕೃಷಿಯಲ್ಲಿ ಪ್ರಗತಿ ಹೊಂದುತ್ತಾರೆಂದು ಈ ಸಾಮಗ್ರಿಗಳನ್ನು ಕೊಡುವುದಿಲ್ಲ. ಈ ಸಂದರ್ಭದಲ್ಲಿ ಸಾಮಾಜಿಕ ಹೋರಾಟಕ್ಕೆ ಹೆಸರಾದಂತಹ ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿಯಂತಹ ಸಾಂಸ್ಕೃತಿಕ ಹೋರಾಟಗಾರರು ಪಾಳೇಗಾರರಿಂದ ಕೃಷಿ ಸಾಮಗ್ರಿಗಳನ್ನು ಕೊಡಿಸಲು ನಾನಾ ತರಹ ಪವಾಡಗಳನ್ನು ಮಾಡಿ ಸಾಮಗ್ರಿಗಳನ್ನು ಕೊಡಿಸಿ ಕೃಷಿಗೆ ಅನುಕೂಲ ಮಾಡಿಕೊಡುತ್ತಾರೆ. ಇದರಿಂದ ಕೃಷಿಗೂ

ಮತ್ತು ದಲಿತರಿಗೂ ಹೆಚ್ಚು ಸಂಬಂಧ ಇತ್ತು. ಎಂಬುದನ್ನು ನಾವು ಮನಗಾಣಬೇಕು. ಹೀಗೆ ದಲಿತರು ತಮ್ಮ ಜೀವನ ಸಾಗಿಸಲು ಎಷ್ಟೇ ಕಷ್ಟವಾದರೂ ಕೃಷಿಯನ್ನೇ ಅವಲಂಭಿಸಿದ್ದಾರೆ. ಎಂಬುದನ್ನು ಆ ಕಾಲದಿಂದಲೂ ನೋಡಬಹುದು.

ಕಾಲಕ್ರಮೇಣ ಭೂಮಾಲೀಕರ ಜಾತೀಯತೆಯ ಒಡೆತನದಿಂದ ತಮ್ಮ ಜೀವನಕ್ಕಾಗಿ ದಲಿತರು ಭೂಮಿಯನ್ನು ಅಡವಿಡುತ್ತಾ ಬರುತ್ತಾರೆ. ಇದರ ಪರಿಣಾಮವೇ ಮುಂದೆ ಬಂಡವಾಳಶಾಹಿಗಳ ಉದ್ಧವ ಹೆಚ್ಚಾಯಿತು. ತಮ್ಮ ಹೊಟ್ಟೆಪಾಡಿಗಾಗಿ ಮಕ್ಕಳನ್ನು ಕೂಡ ಜೀತಕ್ಕೆ ಸೇರಿಸಿ ತಾವು ಜೀತ ಮಾಡುವುದನ್ನು ನಾವು ಇತಿಹಾಸದಲ್ಲಿ



ಅವಲೋಕಿಸಬಹುದು. ಜೀವನಕ್ಕೆ ಏನೂ ಸಿಗದ ಸಂದರ್ಭದಲ್ಲಿ ಕಡ್ಲೆಪುರಿ, ಕಡ್ಲೆಕಾಯಿ, ಹೆಂಡ ಸಾರಾಯಿ ತೆಗೆದುಕೊಂಡು ಭೂಮಿಯನ್ನು ಮಾರಿಕೊಂಡಿರುವುದನ್ನು ನೋಡಬಹುದು. ದಲಿತರು ತಮ್ಮ ಭೂಮಿಯನ್ನೇ ಅಡವಿಟ್ಟು ತಮ್ಮ ಭೂಮಿಯಲ್ಲಿಯೇ ತಾವೇ ಕೆಲಸ ಮಾಡುವುದರಲ್ಲಿ ಬಹಳ ಸಂತೋಷ ಪಡುತ್ತಿದ್ದರು. ಇದರಿಂದ ಕೃಷಿಗೂ ದಲಿತರಿಗೂ ಬಿಡಿಸಲಾರದ ಸಂಬಂಧವಾಯಿತು.

೨೦ನೇ ಶತಮಾನದಲ್ಲಿ ದಲಿತರು ತಮ್ಮ ಭೂಮಿಯನ್ನು ತಮ್ಮಂತೆಯೇ ಮಾಡಿಕೊಳ್ಳಲು ತೆವಳಾಡುತ್ತಿದ್ದಂತಹ ಸಂದರ್ಭದಲ್ಲಿ ಇಂದಿರಾಗಾಂಧಿಯ ೨೦ ಅಂಶಗಳ ಕಾರ್ಯಕ್ರಮ, ದೇವರಾಜು ಅರಸು ನಾಯಕತ್ವದ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದ ಬಿ. ಬಸಲಿಂಗಪ್ಪ ಅವರು “ಉಳುವವನೇ ಭೂಮಿಯ ಒಡೆಯ” ಎಂಬ ಕಾನೂನು ತಂದ ಸಂದರ್ಭದಲ್ಲಿ ಎಷ್ಟೋ ದಲಿತರು ಅಡವಿಟ್ಟ ತಮ್ಮ ಭೂಮಿಯನ್ನು ವಾಪಸ್ಸು ಪಡೆದರು. ಭೂಮಿ ಸಿಕ್ಕಿದರೂ ಬದಲಾಗದ ಸಾಮಾಜಿಕ ಸ್ಥಿತಿಗತಿಯ ಕಾರಣ ಇನ್ನೂ ಕೂಡ ಗೇಣಿಭೂಮಿಗಳು ದಲಿತರಿಗೆ ಸಿಗದೆ ಇರುವಂತಹದು ಅಲ್ಲಲ್ಲಿ ಕಂಡುಬರುತ್ತದೆ. ದಲಿತರ ಬೆವರು ಭೂಮಿಯ ಜೊತೆ ಬೆರೆತು ಹೋಗಿರುವುದರಿಂದ ದಲಿತರಿಗೂ ಭೂಮಿಗೂ ದೇಹದೊಳಗಿರುವ ಹೃದಯದ ಹಾಗೆಯೇ ತಾಯಿ ಮಗುವಿನ ಸಂಬಂಧದಂತಾಗಿದೆ.

ಕೃಷಿಯಲ್ಲಿ ದಲಿತರ ಪಾತ್ರ ಬಹಳ ಪ್ರಮುಖವಾದುದಾಗಿದೆ. ಇವರು ಭೂಮಿ ಉಳುಮೆ ಮಾಡುವುದರಿಂದ ಹಿಡಿದು ಒಕ್ಕಣೆ ಮಾಡಿ ಧಾನ್ಯ ಸಂಗ್ರಹಿಸುವವರೆಗೂ ತಮ್ಮದೇ ಆದ ರೂಢಿ ಸಂಪ್ರದಾಯ, ನಂಬಿಕೆ ಆಚರಣೆಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ವರ್ಷದ ಮೊದಲ ಬೇಸಾಯ ಮಾಡುವಾಗ ಎತ್ತುಗಳಿಗೆ ಮತ್ತು ನೇಗಿಲಿಗೆ ಪೂಜೆಯನ್ನು ಮಾಡುತ್ತಾರೆ. ಇದಕ್ಕೆ 'ಹೊನ್ನೇರು' ಎಂದು ಕರೆಯುತ್ತಾರೆ. ದಲಿತರು ತಮ್ಮ ಅನುಭವದಿಂದ ಪ್ರಕೃತಿಯ ಚಲನವಲನಗಳನ್ನು ಬಹಳ ಗಂಭೀರವಾಗಿ ತಿಳಿದುಕೊಂಡಿದ್ದಾರೆ. ವ್ಯವಸಾಯಕ್ಕೆ ಯಾವ ಭೂಮಿ ಯೋಗ್ಯವಾಗಿದೆ.

ಯಾವ ಮಣ್ಣಿನಲ್ಲಿ ಯಾವ ಬೆಳೆ ಬೆಳೆಯಬಹುದು, ಯಾವ ವೇಳೆಗೆ ಯಾವ ಮಳೆ ಬೀಳುತ್ತದೆ ಹಾಗೆಯೇ ಯಾವ ಬೆಳೆಗೆ ಯಾವ ಗೊಬ್ಬರಬೇಕು, ಎಕರೆಗೆ ಎಷ್ಟು ಬೆಳೆ ಬೆಳೆಯಬಹುದು ಎಂಬುದನ್ನು ತಿಳಿದುಕೊಂಡಿದ್ದಾರೆ. ಇದರಿಂದ ಅವನು ಒಬ್ಬ ಉತ್ತಮ ಮಾರ್ಗದರ್ಶಕನಾಗಿದ್ದಾನೆ.

ಬಿತ್ತನೆ ಮಾಡುವಾಗ ಕೂರಿಗೆಗೆ ಬಿತ್ತನೆ ತುಂಬಿ ಪೂಜೆಯನ್ನು ಮಾಡಿ ಆ ನಂತರ ಬಿತ್ತನೆ ಮಾಡುತ್ತಾರೆ. ಈ ಬಿತ್ತನೆ ಬೀಜಗಳನ್ನು ತಮ್ಮದೇ ಆದ ಅನುಭವದಿಂದ ಸಂರಕ್ಷಿಸಿಡುತ್ತಾರೆ. ಚೆನ್ನಾಗಿ ದಪ್ಪವಾಗಿ ಬೆಳೆದ ತರಕಾರಿಯನ್ನು ಗಿಡದಲ್ಲೇ ಬಿಟ್ಟು ಬಲಿತು ಹಣ್ಣಾದ ನಂತರ ಅದನ್ನು ಕಿತ್ತು ತಂದು ಅಡುಗೆ ಮನೆಯೊಳಗಿನ ಸೂರಿಗೆ ನೇತುಹಾಕುತ್ತಾರೆ. ಚೆನ್ನಾಗಿ ಒಣಗಿದ ಮೇಲೆ ಬೀಜಗಳನ್ನು ತೆಗೆದು ಬೂದಿಯನ್ನು ಕಲಸಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ಆನಂತರ ಬಟ್ಟೆಯಲ್ಲೂ ಮಡಿಕೆಯಲ್ಲೊ ಇಟ್ಟು ಸಂರಕ್ಷಿಸಿಡುತ್ತಾರೆ. ಧಾನ್ಯಗಳ ಬಿತ್ತನೆ ಬೀಜವನ್ನು ಬಿದಿರಿನ ತೊಂಬೆಯಲ್ಲಿ, ಕಣಜದಲ್ಲಿ, ನೆಲಕ್ಕೆ ಸಗಣಿಯಲ್ಲಿ ಸಾರಿಸಿ ಬೂದಿಯನ್ನು ಹಾಕಿ ಅದರ ಮೇಲೆ ಧಾನ್ಯವನ್ನು



ಸುರಿದು ಒಣಹುಲ್ಲನ್ನು ಹಾಸಿ ಕೆಮ್ಮಣ್ಣನ್ನು ಕಲಸಿ ಮೆತ್ತುತ್ತಾರೆ. ಕೆಲವು ದೇವರಿಗೆ ಹರಕೆ ಮಿಶ್ರಣ ಮಾಡಿ ಮಡಿಕೆ, ಗುಡಾಣದಲ್ಲಿ ಹಾಕಿಡುತ್ತಾರೆ. ಕೆಲವರು ದೇವರಿಗೆ ಹರಕೆ ಮಾಡಿಕೊಂಡು ಬೆಳೆ ಚೆನ್ನಾಗಿ ಬಂದರೆ ನಿನ್ನ ತೇರಿಗೆ ಧಾನ್ಯವನ್ನು ಹಾಕುವೆ ಎಂದುಕೊಂಡು ಜಾತ್ರೆಯಲ್ಲಿ ಹರಕೆ ತೀರಿಸುತ್ತಾರೆ. ಆ ಸಂಧರ್ಭದಲ್ಲಿ ಬೀಜಗಳನ್ನು ತಂದು ದೇವರ ಪ್ರಸಾದ ಎಂದು ಅವುಗಳನ್ನು ಬಿತ್ತನೆಯ ಜೊತೆಯಲ್ಲಿ ಹಾಕಿ ಪೂಜೆಮಾಡಿ ಬಿತ್ತನೆ ಮಾಡುತ್ತಾರೆ. ಇದರಿಂದ ಬೆಳೆಗೆ ಯಾವ ತೊಂದರೆಯಾಗದೆ ಸಮೃದ್ಧವಾಗಿ ಬೆಳೆಯುತ್ತದೆ. ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ದಲಿತರು ಬೆಳೆಗೆ ರೋಗ ಬಂದಾಗ ಮುಂಜಾನೆಯಲ್ಲಿ ಬೂದಿಯನ್ನು ಎರಚುವುದು ಹಾಗೆಯೇ ಬೇವಿನ ಸೊಪ್ಪು ಎಕ್ಕದ ಎಲೆಗಳನ್ನು ಹಾಕುತ್ತಾರೆ. ಚರಗ ಚೆಲ್ಲುವುದು ಹಕ್ಕಿಗಳಿಂದ ಬೆಳೆ ಹಾನಿಯಾಗದೆ ಇರಲಿ ಎಂದು ಬೆದುರು ಬೊಂಬೆಯನ್ನು ಮಾಡುವುದು ಪ್ರಮುಖವಾಗಿದೆ. ಒಕ್ಕಣೆಯ ಸಂದರ್ಭದಲ್ಲಿ ಕಟಾವು ಮಾಡುವಾಗ ಆಯುಧಗಳಿಗೆ ಪೂಜೆ ಮಾಡಿ ಕಟಾವು ಮಾಡುತ್ತಾರೆ. ನಂತರ ಕಣ ಮಾಡಿ ಕೆಳಕ್ಕೆ ಮೇಟಿಗೂಟ ನೆಟ್ಟು ಕಣವನ್ನು ಚೆನ್ನಾಗಿ ದಂಸದಲ್ಲಿ ಹಿಡಿದು ಮಟ್ಟಮಾಡಿ ಸಗಣಿಯಿಂದ ಸಾರಿಸಿ ಒಣಗಿದ ಮೇಲೆ ಬೂದಿ ಮತ್ತು ಮರಳನ್ನು ಎರಚಿ ಪೊರಕೆಯಿಂದ ಗುಡಿಸುತ್ತಾರೆ. ಬತ್ತ ಬಡಿಯುವ ಉರಿಯನ್ನು ಬತ್ತದ ಹುಲ್ಲಿನಿಂದ ಇವರೇ ವಸೆಯುತ್ತಾರೆ. ಹುಲ್ಲನ್ನು ಗುಡಿಸಲು ಬಿದಿರಿನ ಮೆರೆಗೋಲನ್ನು ಮತ್ತು ಕಸ ಗುಡಿಸಲು ಮೊರಕೆಯನ್ನು ಬತ್ತ ತೂರಲು ಮೊರವನ್ನು ಮಣ್ಣು ಕಲ್ಲುಗಳನ್ನು ತಿರಿಯಲು ವಂದಿಯನ್ನು ಒಂದು ಕುಡ್ಲವನ್ನು ಇಟ್ಟುಕೊಂಡಿರುತ್ತಾರೆ. ಭತ್ತ ಬಡಿದು ರಾಶಿ ಪೂಜೆ ಮಾಡಿ ಧಾನ್ಯವನ್ನು ಎತ್ತಿನ ಗಾಡಿ ಮೂಲಕ ಮನೆಗೆ ಸಾಗಿಸುತ್ತಾರೆ.

ದಲಿತರು ಕೃಷಿಗೆ ಸಂಬಂಧಿಸಿದಂತೆ ಕೆಲವು ಹಬ್ಬಗಳನ್ನು ಆಚರಿಸುತ್ತಾರೆ. ಹೊಲಗದ್ದೆಗಳಲ್ಲಿ ಮುನಿಯನ್ನು ಮಾಡುವುದು. ನಾಗರಹಾವನ್ನು ಮುನಿದೇವರು ಎಂದು ಅದು ನಮ್ಮ ಹೊಲಗದ್ದೆಗಳಲ್ಲಿ ಯಾವುದೇ ರೀತಿಯ

ಅನಾಹುತ ಆಗದೆ ನಮ್ಮನ್ನು ಕಾಪಾಡುತ್ತದೆ ಎಂದು ಮುನಿಯನ್ನು ಮಾಡುತ್ತಾರೆ. ಸಂಕ್ರಾಂತಿ ಹಬ್ಬದಲ್ಲಿ ದನ, ಕರು, ಎಮ್ಮೆ, ಆಡು, ಕುರಿಗಳಿಗೆ ಅಲಂಕಾರ ಮಾಡಿ ಕಿಚ್ಚು ಹಾಯಿಸುತ್ತಾರೆ. ಇದರಿಂದ ಸಾಕುಪ್ರಾಣಿಗಳು ಹೆದರದೆ ಯಾವುದೇ ರೋಗ ಬರದೆ ಹೋಗಲಿ ಎಂದು ಬೆಂಕಿಯಲ್ಲಿ ನೆಗೆಸುತ್ತಾರೆ. ಆಯುಧ ಪೂಜೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಎಲ್ಲಾ ಉಪಕರಣಗಳನ್ನು ತೊಳೆದು ಅಲಂಕಾರ ಮಾಡಿ ಬಲಿಯನ್ನು ಕೊಟ್ಟು ಪೂಜೆಯನ್ನು ಮಾಡುತ್ತಾರೆ. ಇದರಿಂದ ಕೃಷಿ ಮಾಡುವಾಗ ಉಪಕರಣಗಳಿಂದ ತೊಂದರೆಯಾಗುವುದಿಲ್ಲ. ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಕಾರ್ ಹಬ್ಬವನ್ನು ಆಚರಿಸುತ್ತಾರೆ. ಘಪ್ಪೆಯನ್ನು ಲಕ್ಷ್ಮೀಯೆಂದು ತಿಳಿದು ಪೂಜೆಯನ್ನು ಮಾಡುತ್ತಾರೆ. ಪ್ರಕೃತಿ ವಿಕೋಪದಿಂದ ಮಳೆ ಬರದೆ ಹೋದಾಗ ಮಳೆರಾಯನನ್ನು ಪೂಜಿಸುತ್ತಾರೆ. ಕತ್ತೆಗಳಿಗೆ ಮದುವೆ ಮಾಡಿ ಊರುಸುತ್ತಾ ಮೆರವಣಿಗೆ ಮಾಡುತ್ತಾರೆ.

ದಲಿತರು ಕೃಷಿಗೆ ಸಂಬಂಧಿಸಿದಂತೆ ಕೆಲವು ಜನಪದ ಸಾಹಿತ್ಯವನ್ನು ಸೃಷ್ಟಿಸಿಕೊಂಡಿದ್ದಾರೆ. ನಟಿ ಮಾಡುವಾಗ ಪದಗಳನ್ನು ಹಾಡುತ್ತರೆ, ಕಳೆ ಕೀಳುವಾಗ



ಹಾಡುತ್ತಾರೆ. ಈ ಪದಗಳು ದೇವರ ಮಹಿಮೆಯನ್ನು ಕುರಿತಾಗಿರುತ್ತವೆ. ದೇವರ ಮಹಿಮೆಯನ್ನು ಹಾಡಿನ ಮೂಲಕ ಕೆಲಸ ಮಾಡುವಾಗ ಹಾಡಿದರೆ ಬೆಳೆಗೆ ಪೀಡೆ ಪಿಶಾಚಿಗಳಿಂದ ತೊಂದರೆಯಾಗದೆ ಸಮೃದ್ಧವಾಗಿ ಬೆಳೆಯುತ್ತದೆ ಎಂಬ ನಂಬಿಕೆಗಳನ್ನು ಇಟ್ಟುಕೊಂಡಿದ್ದಾರೆ. ಜೊತೆಗೆ ಕೆಲಸ ಮಾಡುವಾಗ ಕೆಲಸದ ಶ್ರಮ ಗೊತ್ತಾಗದೆ ಹೋಗಲಿ ಎಂದು ಪದಗಳನ್ನು ಹೇಳುವುದುಂಟು. ಜೊತೆಗೆ ಒಗಟುಗಳನ್ನು ಬಿಡಿಸುವುದು ಕಥೆಗಳನ್ನು ಹೇಳುವುದು, ಗಾದೆಗಳನ್ನು ಹೇಳುವುದು, ಲಾವಣಿಯನ್ನು ಕಟ್ಟುವುದು, ಒಕ್ಕಣೆಯಾದ ಮೇಲೆ ಸುಗ್ಗಿಹಾಡು ಹಾಡುವುದು, ಬಹಳ ಸೂಕ್ತವಾದುದಾಗಿದೆ. ಒಕ್ಕಣೆ ಮಾಡುವಾಗ ಕಣಕ್ಕೆ ಚಪ್ಪಲಿಯನ್ನು ಹಾಕಿಕೊಂಡು ಹೋಗಬಾರದು ಮುಟ್ಟಾದವರು ಕಣಕ್ಕೆ ಹೋಗಬಾರದು. ಕಣದಲ್ಲಿ ಮೊರವನ್ನು ಮಲಗಿಸಬಾರದು. ಕೆಲಸ ಮಾಡುವಾಗ ಮಲಗಿಕೊಳ್ಳಬಾರದು. ಇತ್ಯಾದಿ ನಂಬಿಕೆಗಳನ್ನು ಇಂದಿಗೂ ಆಚರಿಸಿಕೊಂಡು ಬಂದಿದ್ದಾರೆ.

ದಲಿತರು ಕೃಷಿಗೆ ಸಂಬಂಧಿಸಿದಂತೆ ಕೆಲವು ಕ್ರೀಡೆಗಳನ್ನು ಆಡುತ್ತಾರೆ. ದಲಿತರು ಕೃಷಿ ಕೆಲಸದ ಬಿಡುವಿನ ವೇಳೆಯಲ್ಲಿ ಹಾಗೂ ಹಬ್ಬ ಹರಿದಿನಗಳಲ್ಲಿ ಈ ಕ್ರೀಡೆಗಳನ್ನು ಆಡುತ್ತಾರೆ. ಎತ್ತಿನ ಗಾಡಿ ಓಟ, ಕೆಸರು ಗದ್ದೆ ಓಟ, ಕೋಣಗಳ ಓಟ, ಕೋಳಿ ಅಂಕ, ಗೂಳಿ ಕಾಳಗ, ಸುಗ್ಗಿ ಕುಣಿತ, ಹುಲಿಮನೆ ಆಟ, ದೊಣ್ಣೆವರಸೆ, ಕೊರವಂಜಿ, ಅಳುಗುಳಿಮನೆ ಆಟ, ಹುಲಿವೇಷ, ಚಿನ್ನಿ ದಾಂಡು, ಲಗೋರಿ, ಬುಗುರಿ, ಬಕ್ರೆ ಚೂರು ಆಟ, ಪಚ್ಚಿ ಆಟ, ಗೋಲಿ ಆಟ, ಉಪ್ಪುಪ್ಪು ಕಡ್ಡಿ ಆಟ, ಕಲ್ಲು ಮಣ್ಣು ಆಟ, ಕೋಲಾಟ ಇನ್ನು ಮುಂತಾದ ಆಟಗಳನ್ನು ಆಡುತ್ತಾರೆ.

ಕೃಷಿಯಲ್ಲಿ ದಲಿತರು ಬಹಳ ಶ್ರದ್ಧೆ ಭಕ್ತಿಯಿಂದ ಕೆಲಸವನ್ನು ಮಾಡುತ್ತಾರೆ. ಭೂಮಿ ತಾಯಿಯನ್ನು ನಂಬಿದರೆ ನಮಗೆ ಯಾವತ್ತು ಮೋಸ ಮಾಡುವುದಿಲ್ಲ ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ದಲಿತರಿಗೂ ಕೃಷಿಗೂ ಇರುವ

ಸಂಬಂಧ ತಾಯಿ ಮಕ್ಕಳಂತೆ ಹೊಕ್ಕಳಬಳ್ಳಿಯ ಸಂಬಂಧವಾಗಿದೆ. ಕೃಷಿಯಲ್ಲಿ ದಲಿತರ ಯಾವ ರೀತಿಯ ಸಂಬಂಧ ಇಟ್ಟುಕೊಂಡಿದ್ದಾರೆಂದರೆ ಗೋಸುಂಬೆ ತನ್ನ ಬಣ್ಣವನ್ನು ಆಗಾಗ ಸುತ್ತಮುತ್ತಲಿನ ಸನ್ನಿವೇಷಕ್ಕೆ ತಕ್ಕಂತೆ ಬದಲಾಯಿಸುತ್ತಿರುತ್ತದೆ. ಹಾವು ತನ್ನ ಉಳಿವಿಗಾಗಿ ಹೊರೆ ಬಿಡುತ್ತದೆ. ರಾಜಕಾರಣಿಗಳು ಅನುಕೂಲ ಸಿಂಧುಗಳಾಗಿ ಪಕ್ಷದಿಂದ ಪಕ್ಷಕ್ಕೆ ಹಾರುತ್ತಾರೆ. ಆದರೆ ಇವರು ಮಾತ್ರ ತಮ್ಮ ಕಾಯಕವನ್ನು ಕೃಷಿ ಉತ್ಪಾದನೆಗೆ ಮೀಸಲಿಟ್ಟಿದ್ದಾರೆ. ಆದ್ದರಿಂದ ನಮ್ಮ ದೇಶದ ಕೃಷಿಯ ಬೆನ್ನೆಲುಬು ದಲಿತರೇ ಎಂಬುದರಲ್ಲಿ ಸಂಶಯವಿಲ್ಲ. ಇವರು ಬಂಡವಾಳಸ್ತರಲ್ಲ, ಚಾಲಾಕು ಮಂದಿಯಲ್ಲ, ನ್ಯಾಯ ಅನ್ಯಾಯದ ಅರಿವು ಇಲ್ಲದಿರುವವರು ತಮ್ಮ ಕಸುಬಿನಲ್ಲಿ ನಿರತವಾಗಿರುವ ನಿಷ್ಠಾವಂತ ಜನರಾಗಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಭೂಮಾಲೀಕರು ದಲಿತರಿಗೆ ಕಡಿಮೆ ಕೂಲಿಯನ್ನು ಕೊಟ್ಟು ಹೆಚ್ಚು ಲಾಭವನ್ನು ಪಡೆಯುತ್ತಾರೆ. ಹಾಗೆಯೇ ದನ ಎಮ್ಮೆ ಮೇಯಿಸುವವರು ದಲಿತರು. ಆದರೆ ಹಾಲು, ತುಪ್ಪ ಉಣ್ಣುವವರು ಭೂಮಾಲಿಕರು. ಬೆಳೆ ತೆಗೆಯುವರು ದಲಿತರು. ಆದರೆ ಫಲ ತಿನ್ನುವವರು ಭೂಮಾಲೀಕರು. ಈ ಅಸಮಾನತೆಯಿಂದ ಭೂಮಾಲೀಕರು ಹೆಚ್ಚೆಚ್ಚು ಶ್ರೀಮಂತರಾಗುತ್ತಿದ್ದಾರೆಯೇ ಹೊರತು ಬಡದಲಿತರು ಬಡವರಾಗಿಯೇ ಉಳಿಯುತ್ತಿದ್ದಾರೆ. ಒಂದು ಕಡೆ ಭೂಮಾಲೀಕರು ಮೃಷ್ಟಾನ್ನ ಭೋಜನ



ತಿಂದು ತೇಗಿ ಕೊಬ್ಬುತ್ತಿದ್ದು, ಮತ್ತಷ್ಟು ಶಕ್ತಿವಂತರಾಗುತ್ತಿದ್ದಾರೆ. ದಲಿತರು ಹೊಟ್ಟೆ ತುಂಬ ಊಟವಿಲ್ಲದೆ ಕೃಷಿ ಕೆಲಸ ಮಾಡಿ ಮಾಡಿ ಶಕ್ತಿಹೀನರಾಗುತ್ತಿದ್ದಾರೆ. ಪಟ್ಟಣದ ನಾಜೂಕು ಗೊತ್ತಿಲ್ಲದ ಈ ದಲಿತರನ್ನು ಬಂಡವಾಳವಾಗಿಸಿಕೊಂಡಿರುವ ಭೂಮಾಲೀಕರು ತಮ್ಮ ದರ್ಪ ದೌರ್ಜನ್ಯದಿಂದ ಹೊರಗಿನ ಪ್ರಪಂಚಕ್ಕೆ ಬಿಡದೆ ಬಾವಿಯ ಕಪ್ಪೆಯಂತೆ ತಮ್ಮ ಜೀತದಾಳುಗಳಾಗಿ ಮಾಡಿಕೊಂಡಿದ್ದಾರೆ.

ಇಂದಿನ ಪ್ರತಿಯೊಂದು ಗ್ರಾಮೀಣ ಪ್ರದೇಶದಲ್ಲಿರುವ ಭೂಮಾಲೀಕರ ಹೊಲಗದ್ದೆಗಳು, ಮನೆ ಕಟ್ಟಿರುವ ನಿವೇಶನಗಳೆಲ್ಲ ದಲಿತರವೇ ಆಗಿವೆ. ಭೂಮಾಲೀಕರು ತಮ್ಮ ದಬ್ಬಾಳಿಕೆಯಿಂದ ದಲಿತರ ಹೊಲಗದ್ದೆಗಳನ್ನು ಮೋಸಮಾಡಿ ಹಣದ ಆಮಿಷ ವೊಡ್ಡಿ ಮಾಂಸದ ಊಟ ಮಾಡಿಸಿ ಅನಕ್ಷರಸ್ಥ ದಲಿತರ ಕೈಯಲ್ಲಿ ಹೆಬ್ಬೆಟ್ಟನ್ನು ಹಾಕಿಸಿಕೊಂಡಿದ್ದಾರೆ. ಇದರಿಂದ ದಲಿತರಿಗೆ ಬಹಳ ಅನ್ಯಾಯವಾಗಿದೆ. ಪ್ರತಿಯೊಂದು ಗ್ರಾಮೀಣ ಪ್ರದೇಶದಲ್ಲಿ ದಲಿತರಿಗೆ ಹೆಚ್ಚು ಭೂಮಿಯಿಲ್ಲ. ಇವರು ಅತೀ ಸಣ್ಣ ಹಿಡುವಳಿದಾರರಾಗಿದ್ದಾರೆ. ಹೆಚ್ಚಾಗಿ ಜಮೀನುಳ್ಳವರು ಭೂಮಾಲೀಕರೇ ಸರ್ಕಾರದ ಪ್ರತಿಯೊಂದು ಲಾಭ ಪಡೆಯುತ್ತಿರುವವರು ಭೂಮಾಲೀಕರೇ ಹೊರತು ದಲಿತರಲ್ಲ. ಹೆಚ್ಚಾಗಿ ಕೃಷಿಸಾಲ ಪಡೆಯುವವರು ಭೂಮಾಲೀಕರು ಟ್ರ್ಯಾಕ್ಟರ್ ತೆಗೆದುಕೊಳ್ಳುವುದು, ಟೇಲರ್, ಪಂಪ್ಸೆಟ್

ತೆಗೆದುಕೊಳ್ಳುವುದು, ಪ್ರತಿಯೊಂದು ಯಂತ್ರಗಳನ್ನು ಪಡೆಯಲು ಹೆಚ್ಚು ಜಮೀನು ಹೊಂದಿರಬೇಕು ಎಂದು ಸರ್ಕಾರ ತೀರ್ಮಾನಿಸುತ್ತದೆ. ಆಗ ಭೂಮಾಲೀಕರು ಇದರ ಲಾಭ ಪಡೆಯುತ್ತಾರೆ. ದಲಿತರು ಮೊದಲೇ ಸಾಲವೆಂದರೆ ಭಯಪಡುವರು. ಸಾಲವನ್ನೇ ತೆಗೆದುಕೊಳ್ಳುವುದಿಲ್ಲ. ಸರ್ಕಾರ ಕೃಷಿ ಸಾಲ ಮನ್ನ ಮಾಡಿತು. ಇದರ ಲಾಭ ಯಾರಿಗೆ ಆಯಿತೆಂದರೆ ಭೂಮಾಲಿಕರಿಗೇ ಆಯಿತು. ಇದರಿಂದ ದಲಿತರಿಗೆ ಯಾವುದೇ ಲಾಭ ಸಿಗುವುದಿಲ್ಲ. ಪಂಪ್ಸೆಟ್ ಉಚಿತ ವಿದ್ಯುತ್ ಮಾಡಿದ್ದಾರೆ. ಪಂಪೆಟ್‌ವುಳ್ಳವರು ಭೂಮಾಲೀಕರೇ ಹೊರತು ದಲಿತರಲ್ಲ. ಇದು ಸರ್ಕಾರದ ತಾರತಮ್ಯತೆಯಾಗಿದೆ. ಸರ್ಕಾರದ ಸೌಲಭ್ಯಗಳೆಲ್ಲ ಭೂಮಾಲೀಕರಿಗೇ ಸಿಗುತ್ತಿವೆ. ದಲಿತರಿಗೆ ಸಿಕ್ಕದೆ ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಸರಿಯಾದ ಕಾನೂನು ಕ್ರಮಗಳನ್ನು ಜಾರಿಗೆ ತರಬೇಕಾಗಿದೆ. ಪ್ರತಿ ಗ್ರಾಮೀಣ ಪ್ರದೇಶಕ್ಕೆ ಕೃಷಿ ಅಧಿಕಾರಿಗಳು ತೆರಳಿ ಸಂಶೋಧನೆ ಮಾಡಿ ಭೂಹೀನರು ಸಣ್ಣ ಹಿಡುವಳಿದಾರರಾದ ದಲಿತರಿಗೆ ಸರ್ಕಾರದ ಸೌಲಭ್ಯ ದೊರಕುವಂತೆ ಮಾಡಬೇಕಾಗಿದೆ. ಈ ನಿಟ್ಟಿನ ಕೆಲಸವನ್ನು ಯಾರು ಯಾವಾಗ ಮಾಡುತ್ತಾರೆ ಎಂಬುದು ಕಾದುನೋಡಬೇಕಾಗಿದೆ.

ಹೀಗೆ, ದಲಿತರಿಗೂ ಕೃಷಿಗೂ ಪರಸ್ಪರ ಪೂರಕ ಸಂಬಂಧವಿದೆ. ದಲಿತರಿಗೂ ಕೃಷಿಗೂ ಇರುವ ಸಂಬಂಧ ಒಂದು ನಾಣ್ಯದ ಎರಡು ಮುಖವಿದ್ದಂತೆ. ಇಂದಿನ ಆಧುನಿಕ ಯುಗದಲ್ಲೂ ಕೃಷಿ ಸಂಸ್ಕೃತಿ ಜೀವಂತವಾಗಿದೆ ಎಂದರೆ ಅದಕ್ಕೆ ಮೂಲಕಾರಣ ದಲಿತರೆ.

**********

## ೧೯. ದಲಿತರ ಅಭಿವೃದ್ಧಿ : ಕೃಷಿ ಪತ್ತಿನ ಸಹಕಾರಿ ಸಂಘಗಳ ಪಾತ್ರ

- ಎನ್. ನಿಂಗಯ್ಯ

ನಮ್ಮ ರಾಷ್ಟ್ರದಲ್ಲಿ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘಗಳನ್ನು ಯಶಸ್ವಿಯುತ ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಮುಖ್ಯ ಸಾಧನವಾಗಿ ಕಂಡುಕೊಳ್ಳಲಾಗಿತ್ತಿದೆ. ಲೇವದೇವಿಗಾರರ ದುಬಾರಿ ಬಡ್ಡಿದರದ ಬಿಗಿ ಮುಷ್ಠಿಯಿಂದ ಗ್ರಾಮೀಣ ಜನರನ್ನು ಮುಕ್ತಗೊಳಿಸುವ ಉದ್ದೇಶದಿಂದ ೨೦ನೆಯ ಶತಮಾನ ಆರಂಭದ ಭಾರತೀಯ ಮಣ್ಣಿನಲ್ಲಿ ಸಹಕಾರವು ಒಂದು ಚಳುವಳಿಯಾಗಿ ಪ್ರವೇಶಿಸಿದೆ. ಅದು ಮುಕ್ತವಾಗಿ ಪ್ರಜಾಸತ್ತಾತ್ಮಕ ತತ್ವದಡಿಯಲ್ಲಿ ರಚನೆಗೊಂಡು ಸದಸ್ಯರಿಗೆ ಹಣಕಾಸಿನ ಸಹಾಯ ಒದಗಿಸುವ ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿಮೋಚನೆಯ ಅರ್ಥದಲ್ಲಿ ಸೇವೆ ಸಲ್ಲಿಸುತ್ತಿದೆ.

ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಹೊಂದಿರುವ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಸಂಪತ್ತು ಮತ್ತು ಆದಾಯ ಇವುಗಳು ಅಸಮಾನವಾಗಿ ಹಂಚಿಕೆಯಾಗಿದ್ದು, ವಿವಿಧ ಸಾಮಾಜಿಕ ವರ್ಗಗಳ ನಡುವೆ ಗಣನೀಯ ತಾರತಮ್ಯ ಗೋಚರಿಸುತ್ತದೆ. ರಾಷ್ಟ್ರದಲ್ಲಿ ಪ್ರಾಚೀನ ಕಾಲದ ಸಾಮಾಜಿಕ ಅಸಮಾನತೆಯ ಪರಿಣಾಮವಾಗಿ ಕೆಲವೊಂದು ನಿರ್ದಿಷ್ಟ ವರ್ಗಗಳು ಶೋಷಣೆಗೆ ತುತ್ತಾಗಿ ಕನಿಷ್ಠ ಮಟ್ಟದ ಜೀವನ ನಡೆಲಾರದ ಸ್ಥಿತಿಯಲ್ಲೇ ಮುಂದುವರೆದಿದೆ. ಇವುಗಳಲ್ಲಿ ಹಿಂದಿನಿಂದಲೂ ಆರ್ಥಿಕವಾಗಿ ಹೆಚ್ಚಾಗಿ ಸಾಮಾಜಿಕ ಶೋಷಣೆಗೆ ಒಳಗಾಗಿರುವ ವರ್ಗಳೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗವಾಗಿದ್ದು, ಅಸ್ಪೃಶ್ಯತೆ ಆಚರಣೆಯಿಂದಾಗಿ ಈ ಜನ ವರ್ಗದ ಸ್ಥಿತಿಗತಿಗಳು ತೀವ್ರ ಅಮಾನುಷವಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ಇವರ ಪನರ್ ಅಭಿವೃದ್ಧಿಗೆ ಸರ್ಕಾರವು ಅನೇಕ ಕಾರ್ಯಕ್ರಮದ ಮುಖೇನ ಕಾರ್ಯೋನ್ಮುಖವಾಗಿದೆ. ಅಸ್ಪೃಶ್ಯರಾದ ಇವರನ್ನು ಭಾರತದಲ್ಲಿ ಅದರಲ್ಲೂ ಇತ್ತೀಚಿನ ದಶಕಗಳಲ್ಲಿ

ದಲಿತರೆಂದು ಕರೆಯುತ್ತಿದ್ದು, ಇವರ ವಿಮೋಚನೆಗಾಗಿ ಸರ್ಕಾರದ ಹಲವಾರು ಕಾರ್ಯಕ್ರಮಗಳು, ಯೋಜನೆಗಳು ಜಾರಿಯಲ್ಲಿವೆ. ಆದರೂ ಸಹ ಅಭಿವೃದ್ಧಿಗೊಂಡಿಲ್ಲ. ಜಾಗತೀಕರಣದಿಂದ ತತ್ತರಿಸುತ್ತಿರುವ ಈ ವರ್ಗದ ಜನರನ್ನು ಮೇಲೆತ್ತುವಲ್ಲಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ಶ್ರಮಿಸುತ್ತಿವೆ. ಪ್ರಾಚೀನ ಕಾಲದಿಂದಲೂ ಸಾಮಾಜಿಕವಾಗಿ ಬಹಿಷ್ಕರಗೊಂಡ ದಲಿತ ಜನರನ್ನು ಆರ್ಥಿಕವಾಗಿ ಸೇರ್ಪಡೆಯಲ್ಲಿ ಅವುಗಳ ಪಾತ್ರ ಪ್ರಮುಖವಾಗಿದೆ.



**ಸಹಕಾರಿ ಸಂಘಗಳ ಪರಿಭಾವನೆಗಳು, ಮೌಲ್ಯಗಳು ಮತ್ತು ತತ್ವಗಳು**

ಸಮಾಜದಲ್ಲಿ ನಿರಂತರವಾಗಿ ಕಂಡು ಬರುವ ಪರಸ್ಪರ ಒಡನಾಟಗಳ ರೂಪವೇ ಸಹಕಾರ, ಮಾನವರ ಇಡೀ ಸಮಾಜ ಜೀವನವೇ ಸಹಕಾರದ ತಳಹದಿಯ ಮೇಲೆ ನಿಂತಿವೆ. ಜನರು ಸಮಾಜದಲ್ಲಿ ವ್ಯವಹರಿಸಲು ಸಹಕಾರ ಅತ್ಯಗತ್ಯ. ಸಹಕಾರ ಎಂದರೆ ಸಿ.ಕಲ್ವರ್ಟ್ ಪ್ರಕಾರ 'ಸಹಕಾರವು ಒಂದು ರೀತಿಯ ಸಂಘಟನೆಯಾಗಿದ್ದು, ವ್ಯಕ್ತಿಗಳು ಸ್ವತಃ ತಮ್ಮ ಆರ್ಥಿಕ ಬೇಡಿಕೆಯನ್ನು ಹೆಚ್ಚಿಸಿಕೊಳ್ಳಲು ಸಮಾನತೆಯ ಆಧಾರದ ಮೇಲೆ ಸ್ವಪ್ರೇರಣೆಯಿಂದ ಒಗ್ಗೂಡುವ ಪದ್ಧತಿ' ಎಂದಿದ್ದಾರೆ.

ಒಂದು ಸಾಮಾನ್ಯ ಅಗತ್ಯಗಳನ್ನು ಈಡೇರಿಸಿಕೊಳ್ಳುವುದಕ್ಕೆ ನಿರ್ದಿಷ್ಟ ಪ್ರದೇಶದ ಜನರು ಆರ್ಥಿಕ ಉದ್ದೇಶದ ಪ್ರತಿಯೊಂದು ಕ್ಷೇತ್ರವನ್ನು ಸಹಕಾರ ಸಂಘಗಳು ಆಕ್ರಮಿಸಿಕೊಳ್ಳುತ್ತಿವೆ. ಅವುಗಳಲ್ಲಿ ಪ್ರಮುಖವಾಗಿ, ಹಾಲು ಉತ್ಪಾದಕರ ಸಹಕಾರ ಸಂಘಗಳು, ಮೀನುಗಾರಿಕೆಯ ಸಹಕಾರ ಸಂಘಗಳು, ಆರೋಗ್ಯ ರಕ್ಷಣ ಸಂಘಗಳು, ಕಾರ್ಮಿಕರ ಸಹಕಾರ ಸಂಘಗಳು, ಅನುಭೋಗ ಸಹಕಾರ ಸಂಘಗಳು, ಗೃಹನಿರ್ಮಾಣ ಸಹಕಾರ ಸಂಘಗಳು, ವಿವಿದೋದ್ದೇಶ ಸಹಕಾರ ಸಂಘಗಳು ವಿಮಾ, ಸಹಕಾರ ಸಂಘಗಳು - ಇತ್ಯಾದಿ

ಸಹಕಾರ ಸಂಘಗಳು ಏಳು ಮೌಲ್ಯಗಳನ್ನು ಅಥವಾ ತತ್ವಗಳನ್ನು ಒಳಗೊಂಡಿವೆ

ಅವುಗಳೆಂದರೆ:

೧. ಮುಕ್ತ ಮತ್ತು ತೆರೆದ ಸದಸ್ಯತ್ವ

೨. ಪ್ರಜಾಸತ್ತಾತ್ಮಕ ಸದಸ್ಯರ ನಿಯಂತ್ರಣ

೩. ಸದಸ್ಯರ ಆರ್ಥಿಕ ಭಾಗವಹಿಸುವಿಕೆ

೪. ಸ್ವತಂತ್ರತೆಯ ಮತ್ತು ಸ್ವಯಂಮಾಧಿಪತ್ಯ

೫. ಶಿಕ್ಷಣ, ತರಬೇತಿ ಮತ್ತು ಮಾಹಿತಿ

೬. ಸಹಕಾರ ಸಂಘಗಳ ನಡುವೆ ಸಹಕಾರ

೭. ಸಮುದಾಯ ಕಲ್ಯಾಣ

ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳು ಇತರ ಉದ್ದಿಮೆಗಳಿಗಿಂತ ಭಿನ್ನವಾಗಿದೆ

ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣ ಕಾರ್ಯಗಳೆರಡನ್ನು ಒಟ್ಟಿಗೆ ಮಾಡುತ್ತಿವೆ. ವಿವಿಧ ಸಮುದಾಯಗಳಿಂದ ಸಂಘಟಿಸಲ್ಪಟ್ಟಿರುವ ಈ ಸಂಸ್ಥೆಗಳಲ್ಲಿ ಸದಸ್ಯರಿಗೆ ಸಾಲವನ್ನು ನೀಡುವುದಲ್ಲದೆ, ಕೃಷಿಯೇತರ



ಚಟುವಟಿಕೆಗಳಿಗೂ ಹಣಕಾಸಿನ ನೆರವನ್ನು ನೀಡುತ್ತವೆ. ಇತ್ತೀಚಿನ ವರ್ಷಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಬ್ಯಾಂಕಿನ ಶೈಲಿಯಲ್ಲಿ ವ್ಯವಹಾರ ವೈವಾಟನ್ನು ನಿರ್ವಹಿಸುತ್ತಿರುವುದನ್ನು ಕಾಣಬಹುದಾಗಿದೆ. ಸದಸ್ಯರು ಮತ್ತು ಸದಸ್ಯರೇತರರಿಂದ ಠೇವಣಿಯನ್ನು ಸ್ವೀಕರಿಸುವುದು. ಸದಸ್ಯರ ಶೇರು ಬಂಡವಾಳವನ್ನು ಹೆಚ್ಚು ಮಾಡುವುದರ ಮೂಲಕ ಸ್ವಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳುತ್ತಿವೆ. ಇದರಿಂದಾಗಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಸಾಲಪಡೆಯುವ ಕ್ರಮ ಕಡಿಮೆಯಾದಾಗ ಮಾತ್ರ ಅವುಗಳ ಅಭಿವೃದ್ಧಿ ಸಾಧ್ಯವಾಗುತ್ತದೆ.

ಈ ಸಂಸ್ಥೆಗಳು ಸ್ವಸಂಪನ್ಮೂಲಗಳನ್ನು ವೃದ್ಧಿಗೊಳ್ಳುವುದರಿಂದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳಿಗೆ ಸೀಮಿತವಾಗಿ ಇವುಗಳು ದೀರ್ಘಾವಧಿಯ ಸಾಲಗಳನ್ನು ಕೊಡುವಲ್ಲಿ ಕಾರ್ಯಪ್ರವೃತ್ತಗೊಳ್ಳುತ್ತಿವೆ. ಜೊತೆಗೆ ಸದಸ್ಯರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವ ಸಲುವಾಗಿ ಆಹಾರ ಪದಾರ್ಥಗಳ ವಿತರಣ ಕಾವ್ಯವನ್ನು ಮಾಡುತ್ತಿವೆ. ಅಲ್ಲದೆ ಸದಸ್ಯರಿಗೆ ಅಪಘಾತ ವಿಮೆ ಮತ್ತು ಯಶಸ್ವಿನಿ ಆರೋಗ್ಯ ವಿಮೆಯನ್ನು ನೀಡಲಾಗುತ್ತಿದೆ.

ಪ್ರಾಥಮಿಕ ಸಹಕಾರ ಸಂಘಗಳು ಇತರ ಉದ್ದಿಮೆಗಳಿಗಿಂತ ಭಿನ್ನವಾಗಿದೆ ಎಂಬುದನ್ನು ಕೆಳಗಿನ ಮೂರು ಅಂಶಗಳಿಂದ ಸ್ಪಷ್ಟಪಡಿಸಿದೆ.

೧. ಸಹಕಾರ ಸಂಘಗಳ ಪ್ರಾಥಮಿಕ ಉದ್ದೇಶ, ಸದಸ್ಯರ ಸಾಮಾನ್ಯ ಅಗತ್ಯಗಳನ್ನು ಈಡೇರಿಸವುದು ಹಾಗೂ ಹಣಕಾಸಿನ ಸೌಲಭ್ಯಗಳನ್ನು ನೀಡುವುದಾಗಿದೆ. ಇತರ ಉದ್ದಿಮೆಗಳ ಮೂಲ ಉದ್ದೇಶ ತಮ್ಮ ಶೇರುದಾರರಿಗೆ ಹೆಚ್ಚು ಲಾಭಗಳಿಸಿ ಕೊಡುವುದಾಗಿದೆ.

೨. ಸಹಕಾರ ಸಂಘಗಳಲ್ಲಿ ಒಬ್ಬ ಸದಸ್ಯರಿಗೆ ಒಂದು ಮತವಿದೆಯೇ ಹೊರತು ಒಂದು ಷೇರಿಗೆ ಒಂದು ಮತವಿರುವುದಿಲ್ಲ. ಇದು ಸಾಮಾನ್ಯ ಅಗತ್ಯಗಳನ್ನು ಪೂರೈಸುವುದು ಹಾಗೂ ಆಸ್ತಿ ಅಂತಸ್ತಿನ ಆಧಾರದ ಮೇಲೆ ಸಂಘದ ನಿಯಂತ್ರಣ ಹೊಂದದಂತೆ ರಕ್ಷಿಸುವುದಾಗಿದೆ.

೩. ಸಹಕಾರ ಸಂಘಗಳಲ್ಲಿ ಲಾಭಾಂಶವನ್ನು ಸದಸ್ಯರ ನಡುವೆ ಸಮಾನವಾಗಿ ಹಂಚಲಾಗುತ್ತದೆ ಹೊರತು ಅವರು ಪಡೆದುಕೊಳ್ಳುವ ಹೆಚ್ಚು ಹೆಚ್ಚು ಷೇರಿನ ಆಧಾರದ ಮೇಲಲ್ಲ. ಹೀಗಾಗಿ ಅದರ ಲಾಭಾಂಶದಿಂದ ಸದಸ್ಯರ ಅಭಿವೃದ್ಧಿಗೆ ಸೇವೆ ಸಲ್ಲಿಸುವುದು ಮಾತ್ರವಲ್ಲದೆ ಸಮುದಾಯದ ಉತ್ತಮ ಜೀವನಕ್ಕೆ ಸಹಾಯವನ್ನು ಮಾಡುತ್ತದೆ. ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡದವರ ಸಾಮಾಜಿಕ ಆರ್ಥಿಕಾಭಿವೃದ್ಧಿಯ ಸಾಧನವಾಗಿ ಈ ಸಂಸ್ಥೆಗಳ ಕಾರ್ಯಗಳು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ದಲಿತರನ್ನು ಆರ್ಥಿಕವಾಗಿ ಸೇರ್ಪಡೆಯಲ್ಲಿ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಮುಖ್ಯವಾಗಿದೆ. ಆದ್ದರಿಂದ ಭಾರತದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಈ ವರ್ಗದ



ಜನರ ಸೇರ್ಪಡೆಯ ಅಂಕಿ-ಅಂಶಗಳನ್ನು ಕೆಳಗಿನ ಪಟ್ಟಿಯಲ್ಲಿ ತಿಳಿಸಲಾಗಿದೆ. ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ತುಂಬ ಕಡಿಮೆ ಇರುವುದು ಕಂಡು ಬಂದಿದೆ. ಆದ್ದರಿಂದ ದಲಿತ ವರ್ಗದವರು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಸೇರ್ಪಡೆ ಮಾಡಲು ಸರ್ಕಾರವೇ ಅವರ ಷೇರು ಹಣ ತುಂಬಿಕೊಡಲು ಸಿದ್ಧವಿರುವುದನ್ನು ಪ್ರಸ್ತುತದಲ್ಲಿ ಕಾಣಬಹುದಾಗಿದೆ.

**ಪರ್ಯಾಯ ಆರ್ಥಿಕ ವ್ಯವಸ್ಥೆಯಾಗಿ ಸಹಕಾರ**

ಸಹಕಾರ ಬಹು ಆಯಾಮದ ಪರಿಕಲ್ಪನೆ, ಮೂಲಭೂತವಾಗಿ ಮಾನವ ನಡುವಳಿಕೆಯ ವಿನ್ಯಾಸ, ಮಾನವ ಸಂಘಟನೆಯ ಬಗೆಯಾಗಿ ರೂಪಗೊಂಡಿದೆ. ವಿಶ್ವದಾದ್ಯಂತ ವ್ಯಾಪಿಸಿದ ಚಳುವಳಿ ಅರ್ಥವ್ಯವಸ್ಥೆಯ ಎಲ್ಲಾ ರಂಗಗಳನ್ನು ಪ್ರವೇಶಿಸಿದೆ. ಮಾನವರ ಜೀವನವು ಸಹಕಾರದ ತಳಹದಿಯ ಮೇಲೆ ನಿಂತಿದೆ. ಆತನ ಹುಟ್ಟಿನಿಂದ

ಸಾವಿನವರೆಗೂ ಜನರ ಪರಸ್ಪರ ಸಹಾಯ ಸಹಾನುಭೂತಿ ಮತ್ತು ಒತ್ತಾಸೆ ಅವಶ್ಯಕ. ಸಹಕಾರವು-ವ್ಯಕ್ತಿಗಳ ಮಟ್ಟದಿಂದ ಸಮೂಹ ಸಮುದಾಯ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದವರೆಗೂ ಹರಡಿದೆ.

ಸಮಾಜದ ಅಸಮಾನತೆ, ಶೋಷಣೆ, ದೌರ್ಜನ್ಯಗಳನ್ನು ತೊಡೆದು ಹಾಕಿ ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸ್ಥಾಪಿಸಿಲು ಸಹಕಾರ ಅತ್ಯಗತ್ಯ. ಆದ್ದರಿಂದ ಮಾನವನ ಸಾಮುದಾಯಿಕ ಕಲ್ಯಾಣವೇ ಸಹಕಾರ ಚಳವಳಿಯ ಮೂಲ ಉದ್ದೇಶವಾಗಿದೆ. ಸಹಕಾರ ಸಂಘಗಳು ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣಗಳ ಎರಡನ್ನು ನಿರ್ವಹಿಸುತ್ತಿದೆ. ಸಹಕಾರ ಸದಸ್ಯರ ಅಗತ್ಯಗಳನ್ನು ಪೂರೈಸಿ ಜೀವನ ಮಟ್ಟವನ್ನು ಹೆಚ್ಚಿಸಲು ಸಹಾಯಕವಾಗಿದೆ.

ಭಾರತದಲ್ಲಿ ಪ.ಜಾತಿ ಮತ್ತು ಪ.ಪಂಗಡದವರ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘಗಳಲ್ಲಿ ಸೇರ್ಪಡೆಯಾಗಿರುವ ಸದಸ್ಯರ ನೋಟ ೨೦೦೪-೦೫ ರಲ್ಲಿ

| ಕ್ರ ಸಂ | ವಿವರಗಳು | | ಒಟ್ಟು ಶೇಕಡವಾರು |
|---|---|---|---|
| ೧. | ಒಟ್ಟು ಪ್ರಾಕೃ.ಪ.ಸ ಸಂಘಗಳ ಸಂಖ್ಯೆ | ೧೦೭೦೮೨ | |
| ೨. | ಒಟ್ಟು ಸದಸ್ಯತ್ವ (ಸಾವಿರಕ್ಕೆ) | ೧೨೬೦೭೭ | |
| | ಅ)ಅದರಲ್ಲಿ SC ಸದಸ್ಯತ್ವ | ೨೪೫೨೦ | ೨೪.೫೨ |
| | ಬ)ಅದರಲ್ಲಿ ST ಸದಸ್ಯತ್ವ | ೯೨೭೦ | ೯.೩೭ |
| ೩. | ಶೇರು ಬಂಡವಾಳ (ಲಕ್ಷ ರೂ.ಗಳಲ್ಲಿ) | ೫೪೮೬೩೯ | |
| | ಅ)ಸದಸ್ಯರ ಶೇರು | ೬೨೭೨೮ | |
| | ಬ)ಸರ್ಕಾರದ ಶೇರು | | |
| ೪. | ಒಟ್ಟು ಸಾಲ ಮತ್ತು ಮುಂಗಡ (ಲಕ್ಷ ರೂ.ಗಳಲ್ಲಿ) | ೩೯೬೩೧೧೩ | |
| | ಅದರಲ್ಲಿ SC | ೧೩೧.೨ | ೧೩.೧೨ |
| | ಅದರಲ್ಲಿ ST | ೭೩.೮ | ೭.೩೮ |

Source: Indian Co-operative movement-A profile 2006 NCUL. New Delhi

ದಲಿತರ ಆರ್ಥಿಕಾಭಿವೃದ್ಧಿಗೆ ಪರ್ಯಾಯ ವ್ಯವಸ್ಥೆಯಾಗಿ ಸಹಕಾರಿ ಕ್ಷೇತ್ರ ಕೆಳಗಿನ ಅಂಶಗಳಿಂದ ಮುಖ್ಯವಾಗಿದೆ.

೧. ಗ್ರಾಮೀಣ ಮಟ್ಟದಲ್ಲಿ ಸ್ಥಾಪನೆಗೊಂಡಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಮುಖಾಂತರ ಈ ವರ್ಗದ ಜನರಿಗೆ ಬೆಳೆಸಾಲ ಅಥವಾ ಅಲ್ಪಾವಧಿಯ ಸಾಲ ಕೊಡಲಾಗುವುದು. ಅಲ್ಲದೆ ರಸಗೊಬ್ಬರಗಳು, ಬಿತ್ತನೆಯ ಬೀಜಗಳು ಮತ್ತು ಕ್ರಿಮಿನಾಶಕ ಔಷಧಿಗಳನ್ನು ಪೂರೈಸುತ್ತವೆ.

೨. ಪ.ಜಾತಿ ಮತ್ತು ಪ. ಪಂಗಡಗಳು ಗ್ರಾಮೀಣ ಪ್ರದೇಶಗಳಲ್ಲಿ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಸಾಲ, ಬಲೆ, ದೋಣಿಗಳು, ತಾಂತ್ರಿಕ ದೋಣಿಗಳು, ಮೀನು ಮಾರಾಟ ಕೇಂದ್ರ ಹಾಗೂ ಮೀನು ಉತ್ಪಾದನೆಗಳನ್ನು ಸಂರಕ್ಷಿಸುತ್ತದೆ.

೩. ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಉತ್ಪಾದನ ಸಹಕಾರ ಸಂಘಗಳು ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದೆ. ವಿವಿಧ ಹಾಲಿನ ಉತ್ಪನ್ನಗಳ ಬೇಡಿಕೆಯು ಹೆಚ್ಚಳವಾಗುತ್ತಿರುವುದನ್ನು ಗುರುತಿಸಬಹುದು. ಇದರಿಂದಾಗಿ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಕಾರಪ್ರವೃತಗೊಂಡಿದೆ.

೪. ಸಹಕಾರ ಪತ್ತಿನ ಸಂಘಗಳಲ್ಲಿ ಗ್ರಾಮೀಣ ಮತ್ತು ನನಗರ ಪ್ರದೇಶಗಳ ಎರಡರಲ್ಲೂ ಕಡಿಮೆ ಆದಾಯ ಗುಂಪುಗಳು ಜನರು ಕೃಷಿಯೇತರ ಚಟುವಟಿಕೆಗಳಿಗೆ ಸಾಲವನ್ನು ಪಡೆಯುತ್ತಿದ್ದಾರೆ. ಗೃಹನಿರ್ಮಾಣ ಸಹಕಾರ

ಸಂಘಗಳಿಂದ ಮಧ್ಯಮ ವರ್ಗ ಮತ್ತು ಅತಿ ಮಧ್ಯಮ ವರ್ಗಗಳ ಜನರಿಗೆ ಸ್ವಂತ ಮನೆಕಟ್ಟಿಕೊಳ್ಳಲು ಸಾಲದ ಸಹಾಯವನ್ನು ನೀಡುತ್ತಿವೆ.

೫. ಸಹಕಾರ ಸಂಘಗಳ ಮುಖಾಂತರ ಆರ್ಥಿಕವಾಗಿ ದುರ್ಬಲ ವರ್ಗವಾದ ಪರಿಶಿಷ್ಟ ಜಾತಿ ಮತ್ತು ಪ.ಪಂಗಡದವರಿಗೆ HUDCO ಸಾಲ ಶೇ. ೪ರ ಬಡ್ಡಿದರದಲ್ಲಿ ದೊರೆಯುತ್ತಿದೆ.

೬. ಎಲ್ಲಾ ಸಮುದಾಯದವರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವಲ್ಲಿ ಸಹಕಾರ ಸಂಘಗಲ ಪಾತ್ರ ಮುಖ್ಯವಾಗಿದೆ. ಯುವಕ ಮತ್ತು ಯುವತಿಯರು ನಿರುದ್ಯೋಗಿಗಳಾಗಿದ್ದರೆ, ಕೈಗಾರಿಕ ಸಹಕಾರ ಸಂಘಗಳಲ್ಲಿ ಸಂಘಟಿತರಾಗುವವರಿಗೆ ತರಬೇತಿ ಕೊಡಲಾಗುತ್ತಿದೆ. ತರಬೇತಿಯನ್ನು ಪಡೆದ ನಂತರ ಸ್ವ ಉದ್ಯೋಗವನ್ನು ಅರಂಭಿಸಿ ಬೇರೆ ಯುವಕ ಮತ್ತು ಯುವತಿಯರಿಗೆ ನೇರ ಉದ್ಯೋಗವನ್ನು ಕೊಡಲಾಗುವುದು.



೭. ಪ್ರಸ್ತುತದಲ್ಲಿ ಸಹಕಾರ ಸಂಘಗಳಲ್ಲಿ ಹೊಸ ಹೊಸ ಮಾರ್ಗಗಳು ಚಾಲನೆಯಾಗುತ್ತಿದ್ದು, ರಾಜ್ಯ ಮತ್ತು ಸಹಕಾರ ಸಂಘಗಳ ನಡುವೆ ಕೊಡುವ ಮತ್ತು ಕೊಳ್ಳುವ ವ್ಯವಹಾರ ರಚನೆಯಾಗುತ್ತಿದೆ. ಇದರಿಂದಾಗಿ ಹೊಸ ಹೊಸ ಕ್ಷೇತ್ರಗಳಾದ ಸಮುದ್ರ, ಸಾರಿಗೆ, ಚಿತ್ರೋದ್ಯಮ, ಆರೋಗ್ಯಸೇವೆ ಮತ್ತು ಪ್ರವಾಸ್ಕೋದ್ಯಮಗಳನ್ನು ಆವರಿಸಿಕೊಳ್ಳುತ್ತಿದೆ. ಹೀಗೆ ಎಲ್ಲಾ ಕ್ಷೇತ್ರಗಳನ್ನು ಆವರಿಸಿರುವ ಸಹಕಾರ ಸಂಘಗಳು ದಲಿತರನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪರ್ಯಾಯ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸಬಲ್ಲದಾಗಿದೆ.

ಸಹಕಾರ ತತ್ವಗಳಲ್ಲಿ ಒಂದಾದ ಪ್ರಜಾಸತ್ತಾತ್ಮಕ ಸದಸ್ಯರ ನಿಯಂತ್ರಣದ ಆಧಾರದ ಮೇಲೆ ಪ್ರಾಥಮಿಕ ಸಹಕಾರ ಸಂಘಗಳು ಕಾರ್ಯಪ್ರವೃತ್ತಗೊಳ್ಳುತ್ತಿದ್ದು, ಒಬ್ಬ ಸದಸ್ಯರಿಗೆ ಒಂದು ಮತ ತತ್ವದ ಆಧಾರದ ಮೇಲೆ ನಿಯಂತ್ರಿಸಲು ಅನುಷ್ಠಾನಗೊಳಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಈ ಸಂಸ್ಥೆಗಳಲ್ಲಿ ತುಂಬ ಕಡಿಮೆ ಇರುವುದರಿಂದ ಹೆಚ್ಚು ಹೆಚ್ಚು ಸದಸ್ಯರು ಸೇರುವಂತೆ ಆಡಳಿತ ಮಂಡಳಿಯವರು ವಿಶೇಷ ಉಪನ್ಯಾಸ ಕಾರ್ಯಕ್ರಮದ ಮುಖಾಂತರ ದೊರೆಯುವ ಸೇವಾ ಸೌಲಭ್ಯಗಳ ಬಗ್ಗೆ ಪ್ರೇರೆಪಿಸುವುದು. ಅಲ್ಲದೆ ಈ ವರ್ಗದ ಜನರ ಆರ್ಥಿಕ ಅಸಮಾನತೆ ಮತ್ತು ಶೋಷಣೆಯನ್ನು ನಿವಾರಿಸಿ ಅವರಿಗೆ ಆದಾಯ ಹಾಗೂ ಸಂಪತ್ತು ವೃದ್ಧಿಸಿ, ಉತ್ಪಾದನೆಯ ವಿವಿಧ ಅಂಶಗಳ ನಡುವೆ ಒಂದು ನ್ಯಾಯಯುಕ್ತವಾದ ಸಮತೋಲನ ಕಾಯ್ದುಕೊಳ್ಳುವುದರಿಂದ ಮಾತ್ರ ಸಾಮಾಜಿಕ-ಆರ್ಥಿಕಾಭಿವೃದ್ಧಿಯನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಯಶಸ್ವಿಯುತವಾಗಿ ಕಾರ್ಯನಿರ್ವಹಿಸಬಲ್ಲವು ಎಂಬುದಾಗಿ ಹೇಳಬಹುದಾಗಿದೆ.

***************

## ೧೬. ಭಾರತದಲ್ಲಿ ಜನಗಳೆಲ್ಲ ಜಾತಿಗಳವೆ!

**-ಡಾ. ಎಚ್.ಜಿ.ಕೋಲ್ಕಾರ**

ಇಡೀ ಬದುಕಿನ ಸಂವೇದನೆಗಳೆಲ್ಲ ಇಂದು ಜಾಗತಿಕವಾಗಿ ಒಂದಾಗುತ್ತಿರುವ ಸಂದರ್ಭದಲ್ಲಿ ಜಾತಿ, ಮತ, ಕುಲ, ಪಂಥ, ಪ್ರಜ್ಞೆಗಳು ನಮ್ಮನ್ನು ಸದಾ ಕಾಡುತ್ತಲಿವೆ ಎಂಬುದೇ ವಿಪರ್ಯಾಸ, ಮನುಷ್ಯ ನಡೆದು ಬಂದ ದಾರಿಯಲ್ಲಿ ತನ್ನ ಗುಣಗಳನ್ನು ಗಣಿಸಿ ಗುಣಿಸಿಕೊಳ್ಳುತ್ತ, ದೋಷಗಳನ್ನು ನೀಗಿಕೊಳ್ಳುತ್ತ ಬಂದ ಉದಾಹರಣೆಗಳು ಸಾಕಷ್ಟಿದ್ದರೂ ಅದರರಿವಿನ ವ್ಯಾಪ್ತಿ ಇಡೀ ಬದುಕನ್ನು ವ್ಯಾಪಿಸಿಕೊಂಡಿತೆ ಎಂಬುದೊಂದು ದೊಡ್ಡ ಪ್ರಶ್ನೆ, ಈ ಪ್ರಶ್ನೆಯೇ ನಮ್ಮನ್ನು ಮತ್ತೆ ಮತ್ತೆ ಅಂತರ್ಮುಖಿಯಾಗಿಸಿ ಇಂಥ ಚಿಂತನೆಗಳಿಗೆ ಈಡು ಮಾಡುತ್ತಿದೆ. ಮತ್ತು ವಿಕಾಸ ಶೀಲ ಪ್ರಜ್ಞೆ ಮೂಡುವವರೆಗೂ ಈಡು ಮಾಡಬೇಕು. ಈ ಕೆಲಸ ಮಹಾಕವಿ ಕುವೆಂಪು ಹೇಳಿದಂತೆ 'ಮನುಜಮತ ವಿಶ್ವ ಪಥ'ಗಳು ಮೂಡುವವರೆಗೂ ನಡೆಯಬೇಕು.

ಮೂಲದಲ್ಲಿ (ಮನುಷ್ಯ ಜಾತಿಯ) 'ಗುಂಪುಮೂಲವಾಗಿ ಮೂಡಿದ ಜಾತಿ ಬರಬರುತ್ತ 'ಕಸುಬು ಮೂಲ'ವಾಗಿ ಬೆಳೆದು ಅನಂತರ 'ಕುಲ ಮೂಲ'ವಾಗಿ ಗುರುತಿಸಿಕೊಂಡುದು ಮನುಷ್ಯ ಕುಲದ ದೊಡ್ಡ ದುರಂತ, ಮನುಷ್ಯ ವಿಕಾಸದ ಹಾದಿಯಲ್ಲಿ ಇದು ಒಡ್ಡಿದ ತೊಂದರೆ ತಾಪತ್ರಯಗಳು, ಮಾಡಿದ ಗಾಯಗಳು, ಮೂಡಿಸಿದ ಕಲೆಗಳು ಲೆಕ್ಕವಿಲ್ಲದಷ್ಟು ಬರೀ ಭಾರತವನ್ನಷ್ಟೇ ತೆಗೆದುಕೊಂಡರೂ ಇಂಥ ಗಾಯಗಳಿಗೆ ಆಯಾಯಾ ಕಾಲಕ್ಕೆ ಮದ್ದು- ಮಾತ್ರೆಗಳನಿಕ್ಕಿ, ಮೂಡಿದ ಕಲೆಗಳನ್ನಳಿಸಿ ಹಾಕಲೆಂದು ಸುಳಿದವರೆಷ್ಟೋ ಮಹಾತ್ಮರನ್ನು "ಶಾಸ್ತ್ರದ ವಸ್ತ್ರದೊಳಗೆ ಸುತ್ತಿ" ಘಾಸಿಗೊಳಿಸಿದ ಶಕ್ತಿಯೂ ಇದಕ್ಕಿದೆ. ಹೀಗೆ ಬಂದ ಬುದ್ಧ-ಬಸವ-ಗಾಂಧಿ- ಅಂಬೇಡ್ಕರ್‌ರನ್ನೂ ಭಂಜಿಸಿ "ಸದ್ದಿಲ್ಲದೆ ಅವರನ್ನು ದೂರವಿರಿಸಿ ಕಾಲಾಂತರಗಳ ಹೆಜ್ಜೆಗಳಲ್ಲಿ ತಾಳವಾಗುತ್ತ ನಡೆದಿದೆ ಜಾತಿ. ಹೀಗಾದ್ದಾಗ ಅನಿಕೇತನದ ನಡೆಯನ್ನು ಮನುಷ್ಯ ಸುಲಭವಾಗಿ ನಡೆಯುವುದಾದರೂ ಹೇಗೆ? ಎಂಬುದು ಮತ್ತೊಂದು ಗಂಭೀರ ಪ್ರಶ್ನೆ, ಜಾತಿಗೆ

ಸಂಬಂಧಿಸಿ ಹೀಗೆ ಪ್ರಶ್ನೆಗಳ ಸರಮಾಲೆಯೇ ಹುಟ್ಟುತ್ತದೆ. ಅದರಲ್ಲಿ ಲೌಖಿಕ ಬದುಕಿನ ಆಗುಹೋಗುಗಳನ್ನೇ ಮುಖ್ಯವಾಗಿಸಿಕೊಳ್ಳುವ ಸ್ವಾರ್ಥವೋ ಸ್ವಪಕ್ಷಪಾತವೋ ಇದರ ಪರಮ ಗುರಿಯಾಗಿರುವಾಗ ಪರಿಪೂರ್ಣ ಶಾಂತಿ ಎಲ್ಲಿ ಸಾಧ್ಯ? ಜಾತಿ ಆತ್ಯಂತಿಕವಾಗಿ ಸಾಧಿಸುವುದಾದರೂ ಏನನ್ನು ಎಂದರೆ ಬರೀ ಶೂನ್ಯವೆ.

ಅಂತರ್-ಬಹಿರ್‌ಗಳನ್ನು ಒಂದಾಗಿಸಿಕೊಂಡು ಅನುಭವಿಸುವ ಸುಖವೇ ನಿಜವಾದ ಸುಖ ಅದುವೇ ಶಾಂತಿ, ಐಕ್ಯ ಎಂಬುದನ್ನು ಮನುಷ್ಯ ಬಹಳ ತರ್ಕಿಸಿ,



ಚಿಂತಿಸಿ ಕಂಡುಕೊಂಡಿದ್ದಾನೆ. (ಇದಕ್ಕೆ ಅವನ ಜೀವನಾಭವಗಳೇ ಆಧಾರವಾಗಿದೆ). ಈ ಹಿನ್ನೆಲೆಯಲ್ಲಿಯೇ ಜೀವನದ ಮೌಲ್ಯಗಳನ್ನು ಗುರುತಿಸಿಕೊಂಡಿದ್ದಾನೆ. ಪ್ರೀತಿ- ಮಮತೆ, ಕರುಣೆ, ಮಾನವೀಯತೆ, ಪರೋಪಕಾರ, ಸಹಕಾರ, ಸಮಾನತೆ, ಸಹಬಾಳ್ವೆ, ಸಹೋದರತ್ವ ಮುಂತಾದ ಗುಣಗಳ ಮೂಲಕ ಜೀವನದ ಶಾಂತಿ ನೆಮ್ಮದಿಯನ್ನು ಹಿರಿದಾಗಿ ಅನುಭವಿಸಲು ಸಾಧ್ಯವೆಂದರಿತಿದ್ದಾನೆ. ಇಂಥ ಶಾಂತಿ-ನೆಮ್ಮದಿಗಳಿಗೆ ಎಡರು- ತೊಡರಾಗುವ ಎಲ್ಲವುಗಳನ್ನು ಅಪಮೌಲ್ಯಗಳಾಗಿ ಗಣಿಸಿದ್ದಾನೆ. ಅವು ಕಾಲಿಕ ಸುಖಕೊಟ್ಟರೂ ಸಾರ್ವಕಾಲಿಕ ಸುಖ ನೀಡುವುದಿಲ್ಲವೆಂದು ಖಚಿತಪಡಿಸಿಕೊಂಡಿದ್ದಾನೆ. ಹೀಗಿದ್ದರೂ ಮನುಷ್ಯ ಲೌಖಿಕ ಸುಖದ ಆಶೆ-ಆಮಿಷಗಳನ್ನೆ ಹಿರಿದಾಗಿಸಿಕೊಳ್ಳುತ್ತಿದ್ದಾನೆ. ಹೀಗಾದಾಗಲೆಲ್ಲ ಆತ ಕುಬ್ಜನಾಗುವುದು, ಕನಿಷ್ಟನಾಗುವುದು, ಕಷ್ಟಗಳನ್ನನುಭವಿಸುವುದು ಸರ್ವಸಾಮಾನ್ಯವಾಗಿದೆ. ಪ್ರಸ್ತುತ ಕಾಲದಲ್ಲಂತೂ ಜೀವನದ ಅಪ ಮೌಲ್ಯಗಳು ಭಯಂಕರ ರೂ ತಳೆದು ಅಟ್ಟಹಾಸದಿಂದ ಕುಣಿಯುತ್ತಿವೆ. ಇವುಗಳ ಜೊತೆಗೆ ಜಾತಿ-ಕೋಮು, ಮತ-ಪಂಥಗಳ ಭ್ರಮೆಯೂ ಸುತ್ತಿಕೊಂಡು ಧರ್ಮವು ಜೀವನ ಧರ್ಮವನ್ನು ಕಡೆಗಣಿಸುತ್ತಿದೆ. ಹೀಗಾಗಿ ಬದುಕು ನಿಜ ಶಾಂತಿ ನೆಮ್ಮದಿಗಳನ್ನು ಕಳೆದುಕೊಂಡು ಹಾಹಾಕಾರದಿಂದ ತತ್ತರಿಸುತ್ತಿದೆ.

ಜಾಗತಿಕ ವಲಯದಲ್ಲಿ ಇಂದು ಜಾತಿ-ಅಂತಸ್ತುಗಳ ನೆಲೆಯಲ್ಲಿ ಭಯಂಕರ ಯುದ್ಧಗಳಾಗುತ್ತಿವೆ. ಭಾರತವೂ ಇದಕ್ಕೆ ಹೊರತಾಗಿಲ್ಲ. ವಿಭಿನ್ನ ಸಂಸ್ಕೃತಿಯ ಜನಾಂಗ ಇಲ್ಲಿದ್ದುದರಿಂದ ಅವುಗಳೇ ಜಾತಿಗಳೆಂದೂ ಗುರುತಿಸಲ್ಪಟ್ಟು ಭಾರತವು ಸಾವಿರಾರೂ ಸಂಖ್ಯೆ ಜಾತಿಗಳ ತವರಾಗಿದೆ. ಒಂದರೊಳಗೊಂದು ಹೊಂದಿಕೆ ಇರದ ಕಾರಣ ಪ್ರತಿಯೊಂದಕ್ಕೂ ಗೋಡೆ-ಕಂದರಗಳು ನಿರ್ಮಾಣವಾಗಿ, (ಅನೇಕ ಆಂತರಿಕ ಕಚ್ಚಾಟಗಳು ಹೆಚ್ಚಿ) ಮನಸ್ಸುಗಳು ಮುಕ್ತವಾಗಿ ಮಾತನಾಡಲಾರದೆ ಮೌನವಾಗುತ್ತಿವೆ, ಮುದುಡಿಕೊಳ್ಳುತ್ತಿವೆ. ಮನುಷ್ಯ ಸಹಜ ಸಂಬಂಧದ ಭಾವ ಬಾಂಧವ್ಯದ ಕೊಂಡಿಗಳು ಕಳಚಿಕೊಳ್ಳುತ್ತಿವೆ. ಹೀಗಾಗಿ ಬದುಕು ಹಿಗ್ಗಾ ಮುಗ್ಗಿ ಅಸ್ತವ್ಯಸ್ತಗೊಳ್ಳುತ್ತಿದೆ. ಸಂವಿಧಾನಿಕ

ನೀತಿ-ನಿಯಮಗಳು ಗಾಳಿಗೆ ತೂರಲ್ಪಟ್ಟು ಜಾತಿಯ ನೆಲೆಯಲ್ಲಿ ಇಂದು ಭಯಂಕರ ಹಿಂಸೆಗಳೂ ನಡೆಯುತ್ತಿವೆ. ನಮ್ಮ ಇಡೀ ಬದುಕನ್ನು ಸುಂದರಗೊಳಿಸುವ ನಮ್ಮದೇ ಪ್ರತಿನಿಧಿಗಳ ರಾಜಕೀಯವು ಮತ್ತು ಅದರ ಯಂತ್ರ-ಮಂತ್ರ-ತಂತ್ರಗಳಂತೂ ಇಂದು ತುಂಬ ಅಧಃಪತನದ ಸ್ಥಿತಿಗಿಳಿದು ಅವುಗಳಿಗೆಲ್ಲ ಕುಮ್ಮಕ್ಕೂ ನೀಡುತ್ತಿದೆ. ಗಾಳಿ ಬಿಟ್ಟಾಗ ತೂರಿಕೊಳ್ಳುವ ಹೊಂಚು ಹಾಕುತ್ತ ಸಮಯ ಸಾಧಿಸಿ ಜಾತಿ-ಕೋಮುಗಳನ್ನೇ ಹಿಡಿದುಕೊಂಡು ರಾಜಕೀಯ ಅರಾಜಕತೆಯನ್ನು ನಿರ್ಮಾಣ ಮಾಡುತ್ತಿದೆ. ಜಾತಿ ರಾಜಕಾರಣದ ದಳ್ಳುರಿ ರಾಜ್ಯ-ರಾಜ್ಯಗಳಲ್ಲಿ ಹಬ್ಬಿ ಎಷ್ಟೋ ಅಮಾಯಕ ಜೀವಗಳನ್ನು ಸಾಮೂಹಿಕವಾಗಿ ಬಲಿತೆಗೆದುಕೊಂಡು ಬೂದಿ ಮಾಡುತ್ತಿದೆ. ಪದವಿ, ಪಟ್ಟ, ಅಧಿಕಾರ, ಅಂತಸ್ತು, ವ್ಯಾಪಾರ, ಉದ್ಯೋಗ ಎಲ್ಲಕ್ಕೂ ಇಂದು ಜಾತಿಯೇ ಮಾನದಂಡವಾಗುತ್ತಿದೆ. ಅರಿವನ್ನು ಮೂಡಿಸುವ ಶಿಕ್ಷಣಕ್ಕೂ ಕೂಡ ಇದರ ಮುದ್ರೆ ಬೀಳುತ್ತಿದೆ. ಜಾತಿಯ ಕವಚಗಳಿಂದ ದೇವರು-ದಿಂಡರು ಧರ್ಮಗಳು ಕಳಚಿಕೊಳ್ಳುವ ಬದಲು ಮತ್ತಷ್ಟು



ಬಿಗಿಗೊಳ್ಳುತ್ತಿವೆ. ಅದರ ಬಣ್ಣಗಳಿನ್ನಷ್ಟು ಢಾಳಾಗಿ ಮೆತ್ತಿಕೊಳ್ಳುತ್ತಿವೆ. ಮಠ-ಮಂದಿರಗಳಿಗೆ ಹಿಂದಿದ್ದ ಪ್ರವೇಶ ನಿಷೇಧಗಳು ಮತ್ತೆ ಜಾರಿಗೊಳ್ಳುತ್ತಿವೆ. ಶೂದ್ರಾತಿ ಶೂದ್ರ ಕಲ್ಪನೆಗಳು ಇಂದು ಮತ್ತೆ ಅಚ್ಚೊತ್ತಿ ಮೂಡುತ್ತಿವೆ. ವೇಷ-ಭೂಷಣಗಳು, ನಾಮ-ಪುಂಡಗಳು ಜಾತಿ ಸಂಕೇತದಲ್ಲಿ ಗುರುತಿಸಿಕೊಂಡು ಮೆರೆಯುತ್ತಿವೆ. ವಿಕಾಸದ ಪಥ ಅವಕಾಶದ ಪಥವಾಗುತ್ತಿದೆ.

ಇನ್ನೂ ವೈಚಿತ್ರ್ಯ ಮತ್ತು ಆಘಾತಕಾರಿ ಸಂಗತಿಗಳೆಂದರೆ ಜೀವನದ ನೆಮ್ಮದಿ, ಸಮಾಧಾನ, ಸಂತೋಷದ ಮೂಲಗಳಾದ ನಮ್ಮ ದೇವಾಲಯಗಳು, ಚರ್ಚು- ಮಂದಿರ- ಮಸೀದಿಗಳು ಜಾತಿಯ ನೆಲೆಯಲ್ಲಿಯೇ ಸಿಡಿಬಾಂಬುಗಳನ್ನು ತಯಾರಿಸುವ ಆಗರಗಳಾಗುತ್ತಿವೆ. ಇಂದು ಕೆಲವು ಅವುಗಳನ್ನೇ ಅಡಗು ತಾಣಗಳನ್ನಾಗಿಸಿಕೊಳ್ಳುತ್ತಲಿವೆ. ಇನ್ನೂ ಕೆಲವು ಅವುಗಳ ಮೇಲೆಯೇ ಬಾಂಬುಗಳನ್ನು ಸುರಿಸುತ್ತಿವೆ. ಹೀಗಾಗಿ ಗಡಿಗಡಿಗಳಲ್ಲಿ ನಡೆದ ಯುದ್ಧ ಇಂದು ಒಳಗಿನ ಗುಡಿಗುಡಿಗಳೆಡೆಗೂ ವ್ಯಾಪಿಸಿಕೊಂಡಿದೆ.

ಉಳ್ಳವರು ಜಾತಿಯ ಶಿವಾಲಯಗಳನ್ನು ಮಾಡುತ್ತಿರುವಾಗ “ಎನ್ನಶಿರವೇ ಹೊನ್ನ ಕಳಸವಯ್ಯಾ” ಎನ್ನುವವರನ್ನು ದುರ್ಬಿನು ಹಿಡಿದು ಹುಡುಕಬೇಕಾಗಿದೆ. ಕರಗಿ ಹೋಗುತ್ತಿರುವ ಭಾವಸಂಗಮದ ಜೀವಧಾರೆಯನ್ನು ಬದುಕಿನ ಒರತೆಯಿಂದ ಅಗಿದಗಿದು ತರಬೇಕಾಗಿದೆ. ಅದರಲ್ಲಿ ಜೀವ ಸಂಜೀವಿನಿಯನ್ನು ಮನುಷ್ಯ ಕುಲಕ್ಕೆ ಮತ್ತೆ ಎರೆಯಬೇಕಾಗಿದೆ. ಇಂತಹ ಕೆಲಸಕ್ಕೆ ಅರಿವಿನ ತಲೆಯಿದ್ದ, ವೈಚಾರಿಕ ನೆಲೆಯಿದ್ದ, ಭವಿಷತ್ತಿನ ಗುರಿಯಿದ್ದ ಬುದ್ಧ ಪ್ರಬುದ್ಧ ಜನಗಳು ಬೇಕಲ್ಲವೆ, ಭಾರತದಲ್ಲಿ ಇಂದು ಇಂಥ ಜನಗಳಿದ್ದಾರೆಯೇ? ಇಲ್ಲವೆನ್ನಲಿಕ್ಕಾಗುವುದಿಲ್ಲ. ಆದರೆ “ಬಲ್ಲಿದರೂ ಕೂಡ ಬಲವಿಲ್ಲ”  ಎಂಬುವುದೂ ಇಲ್ಲವೆಂದಂತೆಯೇ ಆಗುತ್ತಿದೆ.

ಇಂಥ ವಿಪರ್ಯಾಸದ ತಪ್ತ ಬದುಕಿಗೆ ಎಂಥ ಅನುಭವದ ಮುದ್ರೆಯೊತ್ತಿ ಸಂಯಮಿಸಲು ಸಾಧ್ಯ ಎಂಬ ಚಿಂತೆ ಮುಕ್ತ ಮನಸ್ಸುಗಳನ್ನು ಮತ್ತೆ ಮತ್ತೆ ಕಾಡುತ್ತಿದೆ. ಆಗ ಮನುಷ್ಯ ನಡೆದು ಬಂದ ದಾರಿಯಲ್ಲಿನ ಅನುಭವದ ಕವಣೆಗಲ್ಲುಗಳನ್ನೇ, ಹುರುಳು- ತಿರುಳುಗಳನ್ನೇ ಆಯ್ದುಕೊಂಡು ಆ ತಪ್ತ ಮನಗಳ ಮೇಲೆ ಎಸೆಯುವುದೊಂದು ಅನಿವಾರ್ಯ ಕೆಲಸ. ಹೀಗಾದಾಗ ಆ ಮನಸ್ಸುಗಳಿಗೆ ಅವುಗಳ ಬೆನ್ನಹಿಂದೆ ಬುದ್ಧನೆದ್ದು ನಿಲ್ಲುತ್ತಾನೆ, ಬಸವ ಡಂಡ ಹಿಡಿಯುತ್ತಾನೆ, ಗಾಂಧೀ ಸಹಕರಿಸುತ್ತಾನೆ, ಅಂಬೇಡ್ಕ ಗುಡುಗುತ್ತಾನೆ-"ಮನುಷ್ಯ ಕುಲವೆಲ್ಲ ಒಂದು, ಜಾತಿ ಈ ಲೋಕಕ್ಕಂಟಿಕೊಂಡ ದೊಡ್ಡ ಕಳಂಕ. ಇದು ನಾಶವಾಗುವರೆಗೆ ಮನುಷ್ಯ ಕುಲ ಉದ್ಧಾರವಾಗುವುದು ಅಸಾಧ್ಯ" ಎಂದು ಈ ಎಲ್ಲರ ಒಕ್ಕೊರಲಿನ ಧ್ವನಿ ಒಂದೇ ಆಗಿದೆ ಎಂದು ಅರಿಯುವಂತಾಗುತ್ತದೆ.

ತನಗಾದ ಸಂತೋಷ-ಸಮಾಧಾನ, ನೋವು-ನಿರಾಶೆಗಳನ್ನು ಹಂಚಿಕೊಳ್ಳುವ ಆಯಾಮಗಳಾಗಿಯೇ ಮನುಷ್ಯ ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕ್ರೀಡೆಗಳನ್ನು ರೂಪಿಸಿ ಉಳಿಸಿ ಬೆಳೆಸಿಕೊಂಡು ಬಂದಿದ್ದಾನೆ. ತನ್ನ ಬೌದ್ಧಿಕ, ಆತ್ಮಿಕ ಬೆಳವಣಿಗೆಗಳ



ಕುರುಹಾಗಿಯೂ ಇವುಗಳನ್ನು ಆಗಾಗ ಪ್ರದರ್ಶಿಸುತ್ತಾನೆ. ಹಾಗಾಗಿಯೇ ಇವುಗಳು ಮನುಷ್ಯನ ಜೀವನದ ಲೆಕ್ಕ ಹಾಕುವಲ್ಲಿ, ಗುಣದೋಷಗಳನ್ನು ಒರೆಗೆ ಹಚ್ಚುವಲ್ಲಿ ಪೂರಕವೂ ಆಗಿವೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಮಿಡಿದ ಅನೇಕ ಸಂತ-ಮಹಾಂತ ಕವಿ ದಾರ್ಶನಿಕರ ಭಾವಗಳು ಸುಂದರವಾಗಿವೆ. ಜಾತಿ ಧರ್ಮಗಳ ವಿಷಯದಲ್ಲಿ ಅಷ್ಟೇ ನಿಷ್ಟುರವೂ ನೇರವೂ ಆಗಿವೆ.

ಕನ್ನಡದ ಗದ್ಯಗ್ರಂಥ ದುರ್ಗಸಿಂಹನ ಪಂಚತಂತ್ರ ಜಾತಿ ವಿರೋಧಿ ನಿಲುವನ್ನು ಹಲವು ಕಥೆಗಳಿಂದ ಹೊರಹಾಕಿದೆ. ತನ್ನ ಸುತ್ತಲಿನ ಪ್ರಕೃತಿ ಪರಿಸರದೊಂದಿಗೆ ಮನುಷ್ಯ ಹೊಂದಾಣಿಕೆಯ ಬದುಕನ್ನು ಕಳೆಯಲು ನೀತಿಸೂತ್ರಗಳನ್ನು ನೀಡುತ್ತದೆ. ಕನ್ನಡದ ವೈಶಿಷ್ಟ್ಯವೆಂದರೆ ಆದಿಕವಿ ಪಂಪನೇ "ಮಾನವ ಕುಲಂ ತಾನೊಂದೆ ವಲಂ" ಎಂಬ ವಿಶಾಲಭಾವ ತಳೆದ ಮಹಾ ಮಾನವ, ಮಹಾನುಭಾವ. ಅವನ ಮನುಷ್ಯ ಪರಿಕಲ್ಪನೆಯಲ್ಲಿ ಮೂಡಿಬಂದ "ಚಾಗದ ಭೋಗದಕ್ಕರದಗೇಯದ ಗೊಟ್ಟಿಯಲಂಪಿನ ಇಂಪುಗಳಾಗರ ಮಾದ ಮಾನಿಸರೇ ಮಾನಿಸರ್" 'ಜಾತಿಮತ ಪಂಥ ಕುಲಗಳು ಮೀರಿನಿಂತ ತುಂಬ ಎತ್ತರದ ನಿಲುವಿನವರು. ಕವಿ ರನ್ನನಲ್ಲೂ- ಕುಲಂ ಕುಲಮಲ್ತು ಬಲಂ ಕುಲಂ ಛಲಂ ಕುಲಂ" ಎಂಬುದಾಗಿ ಕುಲಕ್ಕೆ ಹೊಸ ವ್ಯಾಖ್ಯಾನ ದೊರಕುತ್ತದೆ. ಹೀಗೆ ಜಾತಿಯ ಕುರಿತು ಅನೇಕ ಭಾವಗಳು ಇಡೀ ಕನ್ನಡ ಸಾಹಿತ್ಯದುದ್ದಕ್ಕೂ ಹೇರಳವಾಗಿ ಸಿಕ್ಕುತ್ತವೆ.

ಶರಣರಂತೂ ಮನುಷ್ಯ ನಿರ್ಮಾಣದ ಕಮ್ಮಟ(ಕಲ್ಯಾಣದ ಅನುಭವ ಮಂಟಪ)ವನ್ನು ಕಟ್ಟಿ ಜಾತಿ ಮತ ಕುಲಾತೀತ ಶುದ್ಧ ಮನುಷ್ಯನನ್ನು ಕಡೆಯಲು ಹೆಣಗಿದವರು. ದಾಸಿಮಯ್ಯ, ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ, ಅಂಬಿಗರ ಜೇಡಯ್ಯ, ರಾಮಯ್ಯ, ಲಕ್ಕಮ್ಮ, ಕಾಳವ್ವ, ಮೊದಲಾದ ಶರಣ-ಶರಣೆಯರು

ಜಾತಿಯನ್ನು ಕಟುವಾಗಿ ಅಲ್ಲಗಳೆದಿದ್ದಾರೆ. “ನಡುವೆಸುಳಿವಾತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ” ಎನ್ನುವ ದಾಸಿಮಯ್ಯ ಜಾತಿಯ ನೆಲೆಯಲ್ಲಿ ಸ್ತ್ರೀಗೊದಗಿದ ದುಃಖಸ್ಥಿತಿಯನ್ನು ಹೊರಗೆಳೆದ ಸಮಾನತೆಯ ಕನಸುಗಾರ,

“ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ” “ಆನು ಹಾರವನೆಂದಡೆ ಕೂಡಲ ಸಂಗಮದೇವ ನಗುವನಯ್ಯಾ”

ಎನ್ನುವ ಬಸವಣ್ಣ ಜಾತಿಯನ್ನು ಮೀರುವಲ್ಲಿ ಎಂಥ ದೃಢ ಮನಸ್ಸುಳ್ಳುವನಾಗಿದ್ದ ನೆನ್ನಾವುದಕ್ಕೆ ನಾನು ಅನೈತಿಕ ಸಂಗಕ್ಕೆ ಹುಟ್ಟಿದವನು, ಇದಕ್ಕೆ ಪ್ರಮಾಣ ಕೂಡಲ ಸಂಗಮದೇವಾ ಎನ್ನುವ ಹಂತವನ್ನು ಮುಟ್ಟಿ ಎಲ್ಲರ ಬಾಯಿಕಟ್ಟುತ್ತಾನೆ. ಮಾನವೀಯ ನೆಲೆಗೆ ಎಂಥ ಎದೆಗಾರಿಕೆಯೂ ಬೇಕು ಎನ್ನುವುದಕ್ಕೆ ಬಸವಣ್ಣ ಸಾಕ್ಷಿ.

“ಅಂಬಿಗ ಅಂಬಿಗ ಎಂದು ಕುಂದ ನುಡಿಯದಿರು

ನಂಬಿದರೆ ಒಂದೇ ಹುಟ್ಟಲಿ

ಕಡೆಯ ಹಾಯಿಸುವನಂಬಿಗರ ಚೌಡಯ್ಯ”

ಎನ್ನುವ ಅಂಬಿಗರ ಚೌಡಯ್ಯ,



“ಕುರಿಕೋಳಿ ಕಿರಿಮೀನು ತಿಂಬುವರಿಗೆಲ್ಲ ಕುಲಜ ಕುಲಜರೆಂದೆಂಬರು ಶಿವನ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು ಅವರೆಂತು ಕೀಳು ಜಾತಿಯಾದರು?

ಎಂದು ಕೇಳುವ ಕಾಳವೆಯು ಧ್ವನಿಯಲ್ಲಿ ಜಾತಿ ಕಲ್ಪನೆಗೆ ಅರ್ಥವಿಲ್ಲ. ಬದಲಾಗಿ ಮನುಷ್ಯ ಮನುಷ್ಯನನ್ನು ಅಪ್ಪಟವಾಗಿ ಪ್ರೀತಿಸುವ ಭಾವ ಬಾಂಧವ್ಯದ ಬೆಸುಗೆ ಇದೆ. ಅಂತಃಕರಣವಾದ-ಸೌಂದರ್ಯವಿದೆ. ಸಂವೇದನಾಶೀಲ ಮನಸ್ಸುಗಳು ಜಾಗೃತಗೊಂಡು ಹೊಸದೊಂದು 'ಶರಣಕುಲದ ಪರಿಕಲ್ಪನೆಯನ್ನೇ ಇಲ್ಲಿ ಮೂಡಿಸಿದ್ದು ಮನುಕುಲಕ್ಕೆ ಮಾದರಿ.

ಶರಣ ಸಂವೇದನೆಗಳನ್ನು ನೇರವಾಗಿ ಸ್ವೀಕರಿಸಿದ ಹರಿಹರ ಬೇಧವನ್ನು ಅಳಿಸಿ ಹಾಕಿದ, ಒಮ್ಮುಖದ ಮತ ಧರ್ಮ ಜಾತಿಗಳ ಕಟ್ಟಾವಿರೋಧಿಯಾದ ಹರಿಹರನ ರಗಳೆಗಳಲ್ಲಿ ಜಾತಿ ಸಮಸ್ಯೆಗೆ ತಕ್ಕ ಉತ್ತರಗಳಿವೆ.

ದಾಸಪರಂಪರೆಯಲ್ಲಿ ಕನಕ ಪುರಂದರರಂಥ ದಾಸವರೇಣ್ಯರು ಮಿಡಿದ ಭಾವಗಳಂತೂ ಅಜರಾಮರ. ಅವು ನಿತ್ಯ ತರಂಗಿತಗೊಳ್ಳುತ್ತಿರುತ್ತವೆ.

"ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ

ಕುಲದ ನೆಲೆಯನ್ನೇನಾದರು ಬಲ್ಲಿರಾ ಬಲ್ಲಿರಾ

ಆತ್ಮ ಯಾವ ಕುಲ ಜೀವ ಯಾವ ಕುಲ

ತತ್ವೇಂದ್ರಿಯಗಳ ಕುಲವ ಹೇಳಿರಯ್ಯ"

ಎಂದು ಕನಕದಾಸರು ಒಡ್ಡಿದ ಸವಾಲಿಗೆ ಜಾತಿ ಭ್ರಮಿರು ಕಕ್ಕಾಬಿಕ್ಕಿಯಾಗುತ್ತಾರೆ. ಅವರ ಅರಿವಿನ ನಡೆಯಲ್ಲಿ ಮೂಡುವ ದೀನ ಭಾವ, ಆರ್ತ ಭಾವ, ಸೇವ್ಯಭಾವಗಳು ಎಂಥ ದುರಹಂಕಾರಿಗಳನ್ನು ನಾಚಿಸುತ್ತವೆ.

"ದಾಸದಾಸರ ಮನೆಯ ದಾಸಿಯರ ಮಗ ನಾನು

ಶಂಕುದಾಸರ ಮನೆಯ ಮಂಕುದಾಸನು ನಾನು ಮರುಳ ದಾಸ

ಕಾಳಿದಾಸರ ಮನೆಯ ಕೀಳುದಾಸನು ನಾನು

ಆಳುದಾಸನು ನಾನು ಮೂಳದಾಸ

ಹಲವು ದಾಸರ ಮನೆಯ ಹೊಲೆಯ ದಾಸನು ನಾನು

ಕುಲವಿಲ್ಲದ ದಾಸ ಕುರುಬದಾಸ...."

ಜೀವನದ ಮರ್ಮವನ್ನು ತಿಳಿದ ಇಂಥ ಅರಿವಿನ ಕುರುಹಕ್ಕೆ ಎಂಥ ಜಾತಿಯ ಬಣ್ಣ ಬಳಿಯಲಾದೀತು! ಬಳಿಯುವ ಮನಸೂ ಎಷ್ಟು ವಿರೂಪದ್ದಿರಬೇಕು!

ನಮ್ಮ ನಾಡಿನಲ್ಲಿ ಮೂಡಿಬಂದ ಸ್ವರವಚನಕಾರರು, ಅನುಭಾವಿಗಳು, ತತ್ವಪದಕಾರರು ಜೀವನವನ್ನೇ ಜಾಲಾಡಿಸಿ ಜರಡಿ ಹಿಡಿದು ಸೋಸಿದವರು. ಹಟವಾದಿಗಳಾಗಿ ಅವರು ತೆರೆದ ಕಣ್ಣುಗಳಲ್ಲಿ ಜಾತಿ-ಮತ-ಗೊಡ್ಡು ಸಂಪ್ರದಾಯಗಳು ಸುಟ್ಟುರಿದು ಹೋಗಿವೆ.

ಕನ್ನಡದಲ್ಲಿ ಸರ್ವಜ್ಞನಂತವನು ಬೇರೊಬ್ಬನಿಲ್ಲ. (ತೆಲುಗಿನಲ್ಲಿ ವೇಮನನೊಬ್ಬನಿದ್ದಾನೆ) ಇವನಾಡದ ವಿಷಯವಿಲ್ಲ. ಜಾತಿ ಭ್ರಮೆಯ ಕುರಿತು ಇವನಾಡುವ ಮಾತುಗಳು ಇರಿಯುವ ಈಟಿ, ಭರ್ಚಿ, ಭಲ್ಲೆ, ಕಠಾರಿ, ಖಡ್ಗ ಏನೆಲ್ಲ ಆಗುತ್ತವೆ

"ಕುಲವಿಲ್ಲ ಯೋಗಿಗೆ/ ಛಲವಿಲ್ಲ ಜ್ಞಾನಿಗೆ

ತೊಲೆ ಕಂಭವಿಲ್ಲ ಗಗನಕ್ಕೆ/ ಸ್ವರ್ಗದಲಿ

ಹೊಲಗೇರಿ ಇಲ್ಲ"

"ಕೋತಿಂಗೆ ಗುಣವಿಲ್ಲ ಮಾತಿಂಗೆ ಕೊನೆಯಿಲ್ಲ

ಸೋತು ಹೋದವಗೆ ಜಗವಿಲ್ಲ (ಅರಿದಂಗೆ

ಜಾತಿಯೇ ಇಲ್ಲ"

ಎಂದು ನೇರ ನುಡಿಯುತ್ತಾನೆ.

**"ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ?**

ಎಂದು ಪ್ರಶ್ನೆ ಎತ್ತುತ್ತಾನೆ. “ಜಾತಿ ವಿಜಾತಿ ಎನಬೇಡ| ದೇವನೊಲಿದಾತನೆ ಜಾತ” ನೆನ್ನುತ್ತ “ತನ್ನಂತೆ ಪರರ ಬಗೆದೊಡೆ ಕೈಲಾಸ” ದಕ್ಕುವುದೆಂದು ತಿಳಿಹೇಳುತ್ತಾನೆ. “ನಡೆವ ಭೂಮಿ ಕುಡಿವ ನೀರು, ಸುಡುವಗ್ನಿ ಒಂದೇ ಇರುತಿರಲು ಕುಲಗೋತ್ರಗಳೆತ್ತಣವು?”ಎನ್ನುವ ಅವನ ಕಿಡಿನುಡಿಗಳಲ್ಲಿ ಅಂತರಂಗದರಿವು, ಆತ್ಮಶೋಧದ ಹಾದಿಗಳು ತೆರೆದುಕೊಳ್ಳುತ್ತವೆ.

ಆಧುನಿಕ ಕಾಲದಲಿ ಕವಿ ಕುವೆಂಪು ಮಿಡಿದ ಭಾವ ತರಂಗಗಳು ಎತ್ತೆತ್ತಲೋ ಓಡುವ ನಮ್ಮ ಮನವನ್ನು ಗಕ್ಕನೆ ಹಿಡಿದು ನಿಲ್ಲಿಸಿ ಚಿಂತನೆಗೆ ಒಳಗುಪಡಿಸುವ ಮಂತ್ರಗಳು. ಕುವೆಂಪು ಚಿಂತನೆ ಮನುಷ್ಯನನ್ನು ಎಲ್ಲ ಜಂಜಡಗಳಿಂದ ಬಿಡಿಸಿ ಅನಿಕೇತನದೆಡೆಗೆ ಎಳೆದೊಯ್ದ ಹೆದ್ದಾರಿ. ಅಲ್ಲಿ ಗುಡಿ, ಚರ್ಚು, ಮಸಜೀದುಗಳ ಬಿಟ್ಟು ಹೊರಬಂದು

“ರೂಪ ರೂಪಗಳನು ದಾಟಿ, ನಾಮ ಕೋಟಿಗಳನು ಮೀಟಿ

ನೂರು ಮತದ ಹೊಟ್ಟು ತೂರಿ, ಎಲ್ಲ ತತ್ವದೆಲ್ಲೆ ಮೀರಿ,

ದಿಗ್‌ದಿಗಂತವಾಗಿ ಏರಿ, ಅನಂತ ತಾನ್ ಅನಂತವಾಗಿ”

ಮನುಷ್ಯ ಚೇತನವು ಅಗಾಧವಾಗಿ ಬೆಳೆಯಬೇಕೆಂಬ ಆಶಯವಿದೆ. ಅರಿವಿನಿಂದ ಮನುಷ್ಯನಿಗೊದಗುವ ಅಗಾಧ ಶಕ್ತಿ-ಯುಕ್ತಿಗಳನ್ನು ಕವಿ ಕನವರಿಸುತ್ತಾನೆ. ಅದರ ದರ್ಶನ ಮಾಡಿಸಲು ಹಾತೊರೆಯುತ್ತಾನೆ.

“ಎನಿತು ಜನ್ಮದಲಿ ಎನಿತು ಜೀವರಿಗೆ ಎನಿತು ನಾವು ಋಣಿಯೋ

ತಿಳಿದು ನೋಡಿದರೆ ಬಾಳು ಎಂಬುದು ಋಣದ ರತ್ನಗಣಿಯೋ”



ಎಂಬ ವಿನೀತ ಭಾವ ತಳೆದ ಕುವೆಂಪು ಶಿಷ್ಯ ಕವಿ ಜಿ.ಎಸ್.ಎಸ್. ಕೂಡ ಬದುಕಿನಲ್ಲಿ ಜೀವನ ಪ್ರೀತಿಯನ್ನೇ ಮುಖ್ಯವಾಗಿ ಕಂಡವರು. “ಪ್ರೀತಿ ಇಲ್ಲದ ಮೇಲೆ(ಜೀವನದ) ಹೂವು ಅರಳೀತು ಹೇಗೆ” ಎಂದು ಚಿಂತಿಸಿದವರು.

ಜಾತಿ-ಮತ-ವರ್ಗಗಳನ್ನು ಕುರಿತು ಕವಿ ಸಿದ್ದಯ್ಯ ಪುರಾಣಿಕರು ಎತ್ತುವ ಪ್ರಶ್ನೆಗೆ ಎಂಥ ಹರಿವಿದೆ, ಹರಿತವಿದೆ ನೋಡಿ-

"ನಾ ಕರಿಯಳೆಂದು ನೀ ಜರಿಯಬೇಡ ಬಿಳಿ ಗೆಳತಿ ಗರ್ವದಿಂದ

ಕಪ್ಪಿಗಿಂತ ಬಿಳಿ ಬಣ್ಣ ಹೆಚ್ಚು ಹೇಳಾವ ರೀತಿಯಿಂದ

ಬಿಳಿಮೋಡ ನೀಡುವುದು ಇಳೆಗೆ ಬರಿ ಬೆಡಗು ಅಂದಚೆಂದ

ಇಳೆಯ ಜೀವ ಮಳೆ ಬರುವುದಕ್ಕೆ ಕರಿಮೋಡ ಮಾತ್ರದಿಂದ"

ಹೀಗೆಯೇ ಆಧುನಿಕ ಬದುಕಿನಲ್ಲಿ ಅಸ್ತಿತ್ವದ ಪ್ರಜ್ಞೆಗೆ, ಇನ್ನೂ ಗಟ್ಟಿ ಅಡಿಪಾಯ ಹಾಕಿದ ಕವಿ ಅಡಿಗರು ಅಡಿಗಡಿಗೆ ಸಿಡಿದದ್ದು ಗುಡುಗಿದ್ದು ಕಡಿಮೆಯೇನಲ್ಲ.

ನಾವೆಲ್ಲರು ಒಂದಜಾತಿ ಒಂದೆ ಮತ ಒಂದೆ ಕುಲ

ನಾವು ಮನುಜರು ನಗರ ನಡುವಿನಡ್ಡ ಗೋಡೆಗಳನ್ನು ಕುಟ್ಟಿ

ಕೆಡಹುತಿರುವ ನಾವು ವಿಲಯರುದ್ರರು"

ಎನ್ನುವ ಕವಿತೆಯ ಆಶಯವೇ ಇಡೀ ಮನುಷ್ಯ ಕುಲವನ್ನು ಒಂದಾಗಿ ಕಾಣುವ ಕಣ್ಣು, ಭಾವ, ಹೃದಯವುಳ್ಳದ್ದು.

"ಜಾತಿ- ಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ

ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ"

ಎಂದು ಕರೆಕೊಟ್ಟ ಅವರು ಬಂದವರನೆಲ್ಲ ಕೂಡಿಕೊಂಡು ಹೊಸ ನಾಡೊಂದನು, ರಸದ ಬೀಡೊಂದನು ಕಟ್ಟಲು ಹೊರಟರು. ಇಂಥ ನಾಡಿಗೆ, ಬೀಡಿಗೆ ಯಾವ ಸೀಮೆ,ಗಡಿ, ರೇಖೆ, ಬಣ್ಣ ಜಾತಿಗಳಿವೆ ನೀವೇ ಹೇಳಿ, ಇಂಥ ಕಾರ್ಯಕ್ಕೆ ಕೂಡಿಕೊಂಡವರು "ಕಟ್ಟತೇವ ನಾವು ಕಟ್ಟತೇವ ನಾವು ಎಂದು ಧುಮುಕಿದ್ದು, ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೆ ಕಟ್ಟಲು ಹೆಣಗಿದ್ದು ಎಂಥ ಧೈರ್ಯ- ಸ್ಥೈರ್ಯದ ಎಷ್ಟು ವಿಶಾಲ ಎಷ್ಟು ಅಗಾಧದ ಹಾದಿ ಎಂಬುದನ್ನು ನಾವು ಮತ್ತೆ ಮತ್ತೆ ಚಿಂತಿಸಬೇಕು.

ನವ್ಯೋತ್ತರ ಕಾಲದ ಸಾಹಿತ್ಯದಲ್ಲಿ ದಲಿತ ಬಂಡಾಯ ಚಳುವಳಿಗಳು ಹುಟ್ಟಿಕೊಂಡು ಜಾತಿ-ಮತಗಳ ವಿರುದ್ಧದ ಅನೇಕ ಹೋರಾಟದ ಚಿಂತನೆಗಳನ್ನು ಹುಟ್ಟುಹಾಕಿವೆ. ಅವು ಜೀವನದ ಅರೆಕೊರೆಗಳನ್ನು ತಿದ್ದಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಸಂಸ್ಕೃತಿಯ ಪುನರ್ ವ್ಯಾಖ್ಯಾನದ ಸೂತ್ರ ಗಳನ್ನೂ ಹೆಣೆದಿವೆ. ಸ್ವಾತಂತ್ರ್ಯದ ಸ್ವಾರ್ಥ ಅನ್ಯಾಯ, ದೌರ್ಜನ್ಯಗಳನ್ನು ಪ್ರಶ್ನಿಸಿ ಮೊದಲ ಬಾರಿಗೆ 'ಹೊಲೆಮಾದಿಗರ ಹಾಡು'ಗಳನ್ನು 'ಸಾವಿರಾರು ನದಿಗಳ ರೂಪಗಳಲ್ಲಿ ಬೀದಿಗಿಟ್ಟು ಮನುಕುಲದ ಹೃದಯ ತರಂಗಗಳನ್ನು



ತಟ್ಟಿ ಮಿಡಿದ ಕವಿ ಸಿದ್ಧಲಿಂಗಯ್ಯ ಮೊದಲಾಗಿ ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಚಂಪಾ ಅನಂತಮೂರ್ತಿ, ಲಂಕೇಶ, ಶರ್ಮಾ, ಎಲ್.ಹನುಮಂತಯ್ಯ ಮುಂತಾದ ಕವಿ-ಚಿಂತಕರು ಜಾತಿ ವಿರೋಧಿ ನೆಲೆಯಲ್ಲಿ ವೈಚಾರಿಕ ಅಲೆಗಳನ್ನು ದಟ್ಟವಾಗಿ ಎಬ್ಬಿಸಿ ನಾಡಿನುದ್ದಕ್ಕೂ ದೇಶದುದ್ದಕ್ಕೂ ಹರಡಿಬಿಟ್ಟಿದ್ದಾರೆ. ಅವರ ಹಾದಿಯಲ್ಲೇ ಹೆಜ್ಜೆ ಹಾಕಿದ ಸರಜೂ ಕಾಟ್ಕರ, ಸತ್ಯಾನಂದ ಪಾತ್ರೋಟ, ಸತೀಶ ಕುಲಕರ್ಣಿ, ಅಲ್ಲಮಪ್ರಭು ಬೆಟ್ಟದೂರು, ರವಿ ಉಪಾಧ್ಯೆ, ಮುಳ್ಳೂರು ನಾಗರಾಜ, ಮುನಿವೆಂಕಟಪ್ಪ ಮುಂತಾದವರು ಈ ಅಲೆಗಳಿಗೆ ಪೂರಕ ಅಲೆಗಳನ್ನು ಪುನಃ ಸೃಷ್ಟಿಸುತ್ತಿದ್ದಾರೆ.

ಇನ್ನೂ ವಿಶೇಷವೆಂದರೆ ಪ್ರಸ್ತುತ ಸಂದರ್ಭದಲ್ಲಿ ಜಾತಿಯಿಂದಾಗುತ್ತಿರುವ ದುರಂತ, ಅನಾಹುತಗಳನ್ನು ಮುಂದಿಟ್ಟುಕೊಂಡು ತೆರೆದ ಮನಸ್ಸಿನಿಂದ ಮುಕ್ತವಾಗಿ ಚಿಂತಿಸುತ್ತಿರುವ ಪ್ರಬುದ್ಧ ಮನಸ್ಸುಗಳಲ್ಲಿ ಜಿ.ರಾಮಕೃಷ್ಣ, ಜಿ.ಕೆ.ಗೋವಿಂದರಾವ್, ಜ್ಯೋತಿ ಹೊಸೂರ, ಡಾ.ಪಂಡಿತಾರಾಧ್ಯ ನಟರಾಜ್ ಹುಳಿಯಾರ್, ಅವಿಂದ ಮಾಲಗತ್ತಿ, ರಾಜೇಂದ್ರ ಚೆನ್ನಿ, ರಂಜಾನ್ ದರ್ಗಾ, ರಹಮತ್ ತರೀಕೆರೆ, ಬಂಜಗೆರೆ ಜಯಪ್ರಕಾಶ, ಪಟ್ಟಾಭಿರಾಮ ಸೋಮಯಾಜಿ, ಗದಗದ ತೊಂಟದ ಡಾ. ಸಿದ್ಧಲಿಂಗ ಮಹಾಸ್ವಾಮೀಜಿ ಚಿತ್ರದುರ್ಗದ ಶಿವಮೂರ್ತಿ ಸ್ವಾಮಿಜಿ, ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮಿಜಿ, ಹುಕ್ಕೇರಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಚಿಂಚಣಿಯ ಅಲ್ಲಮಪ್ರಭು ಸ್ವಾಮಿಗಳು ಅಲ್ಲದೆ ಹಂಪಿ, ಕುವೆಂಪು, ಮಂಗಳೂರು, ದೆಹಲಿ ವಿಶ್ವವಿದ್ಯಾಲಯದ ಕೆಲವು ವೈಚಾರಿಕ ಚಿಂತಕರು

ತಮ್ಮ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆ ಹಾಗೂ ಹೋರಾಟಗಳ ಮೂಲಕ ಜಾತಿ ಮತ ಗೊಡ್ಡು ಧರ್ಮ ಮುಕ್ತ ಸಮಾಜಕ್ಕೆ ಪಣ ತೊಟ್ಟಂತೆ ದುಡಿಯುತ್ತಿದ್ದಾರೆ. ಇದಕ್ಕೆ ಪೂರಕ ಹಾಗೂ ಹಿನ್ನೆಲೆಯಾಗಿ ಭಾರತೀಯ ನೆಲೆಯಲ್ಲಿ- ಡಾ. ಬಿ.ಆರ್. ಅಂಬೇಡ್ಕರ್, ರಾಮಾನುಜ, ವೇಮನ, ಪೆರಿಯಾರ್, ಲೋಹಿಯಾ, ಫುಲೆ ದಂಪತಿಗಳ ವಿಚಾರಧಾರೆಗಳು, ಸಾಹೀರ್ ಲುಧಿಯಾನ್ವಿ, ಪ್ರೇಮಚಂದ್, ಅಮೃತಾಪ್ರೀತಂ, ಟ್ಯಾಗೋರ್, ಕಬೀರ್ ಮೊದಲಾದ ತಸ್ಲಿಮಾರವರೆಗಿನ ಕವಿಹೃದಯಗಳು ಮಿಡಿಯುತ್ತಿವೆ.

ಪಾಶ್ಚಾತ್ಯ ನೆಲೆಯಿಂದ ದಾರ್ಶನಿಕರೂ ಸಮಾಜ ಸುಧಾರಕರೂ ಆದ ಡಾಲ್‌ಸ್ಟಾಯ್, ದಾಸ್ತೋವಸ್ಕಿ, ಮಾವೊತ್ಸೆ ತುಂಗಾ, ಮಾರ್ಕ್ಸ್, ಲೆನಿನ್, ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ ಮುಂತಾದವರ ಚಿಂತನೆಗಳೂ ಜಾತಿ ವರ್ಗ, ವರ್ಣ ಮುಕ್ತ ಸಮಾಜ ನಿರ್ಮಾಣದ ಕನಸುಗಳನ್ನೇ ಕನವರಿಸುತ್ತಿವೆ. ಜಾತಿ ಭ್ರಮಿತ ಮನಸ್ಸುಗಳು ಈ ಅಪಾರ ಅನುಭವದಾಗರದ ಸಾಗರದಲ್ಲಿ ಮಿಂದು ಮೈಮನಗಳಿಗಂಟಿದ ದಟ್ಟ ಜಾತಿಯ ಕಲೆಗಳನ್ನು ತೊಳೆದುಕೊಂಡು ಮೇಲೇಳಬೇಕು. ಆಗ ಮಾತ್ರ ಅವುಗಳಿಗೆ ವಿಶಾಲ ಜೀವನದ ಅರಿವು ಇರವುಗಳು ಹಿರಿದಾಗಿ ಕಂಡಾವು!

ಭಾರತದ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಪರಂಪರೆಗಳನ್ನು ಬಹುಸೂಕ್ಷ್ಮವಾಗಿ ನೋಡಿದಾಗ 'ಜಾತಿ' ಎಂಬುದೊಂದು ಜೀವನ ಪದ್ಧತಿಯಾಗಿ



ಕಾಣುತ್ತದೆ. ಅದು ಮೇಲೂ ಅಲ್ಲ, ಕೀಳೂ ಅಲ್ಲ. ಆದರೆ ಇದನ್ನು ಮೇಲು-ಕೀಳು ಎಂದು ಅಂತರಗಳನ್ನು ಸೃಷ್ಟಿಸಿ ಸ್ವಾರ್ಥ ಸಾಧನೆಯ ಬಂಡವಾಳ ಮಾಡಿಕೊಳ್ಳುವ ವ್ಯವಸ್ಥೆಯಲ್ಲಿ ಮನುಷ್ಯರಿರುವುದಿಲ್ಲ. ಅಲ್ಲಿರುವವರೆಲ್ಲ ಮನುಷ್ಯರಾಕಾರದ ಪಿಶಾಚಿಗಳೇ, ರಾಕ್ಷಸರೇ ಆಗಿರುತ್ತಾರೆ. ಈ ಮನುಷ್ಯರಾಕಾರದ ಪಿಶಾಚಿ, ರಾಕ್ಷಸರು ಸಮಯ, ಸಂದರ್ಭಾನುಸಾರ ಮನುಷ್ಯನನ್ನೇ ತಿನ್ನುತ್ತ ಬಂದಿರುವ ದುಷ್ಟ ಪರಂಪರೆಯನ್ನು ಒಂದೆಡೆ ಕಾಣುತ್ತೇವೆ. ಇದು ಮೊದಲನೆಯದು.

ಇನ್ನೊಂದೆಡೆ ಮನುಷ್ಯರಿರುವಲ್ಲಿ ಜಾತಿಗಳಿಲ್ಲ. ಅಲ್ಲಿ ಅವುಗಳನ್ನವರು ಬರಗೊಡುವುದಿಲ್ಲ ಅಥವಾ ಅವುಗಳಾಟವೂ ಅಲ್ಲಿ ನಡೆಯುವುದಿಲ್ಲ. ಅಲ್ಲಿ ಶೋಷಣೆ ಎಂಬುದಕ್ಕೆ ಅರ್ಥವಿಲ್ಲ. ಯಾರು ಯಾರಿಗೂ ಅಲ್ಲಿ ಸೇವಕರಲ್ಲ, ಹಾಗೆಯೇ ಯಜಮಾನರೂ ಅಲ್ಲ. ಹಾಗಿರುವ ಆ ಮನಸ್ಸುಗಳಿಗೆ ಮನೆ-ಮಠಗಳು, ಆಸ್ತಿ- ಅಂತಸ್ತುಗಳು ಬೇಕೆಂಬುದಿಲ್ಲ. ಅವಿದ್ದರೂ ಅವುಗಳೇ ಸರ್ವಸ್ವವಲ್ಲ. ಬದುಕಿಗೆ ಮಾಡುವ ಕೆಲಸಗಳಾದವೂ ಅಲ್ಲಿ ಕೀಳಲ್ಲ. ಹಿಡಿದ ಕೆಲಸಗಳಲ್ಲೇ ಪರಮ ಕೈಲಾಸದ ತೃಪ್ತಿ ಅಲ್ಲಿನದು. ಅನ್ಯರಾರೇ ಇರಲಿ ತನ್ನವರೆಂದು ಅಪ್ಪಿಕೊಳ್ಳುವ ಭಾವ ಅಲ್ಲಿನದು. ಇಂಥ ಶುದ್ಧ ಮನುಷ್ಯ ಪರಂಪರೆಯನ್ನೂ ನಾವೂ ಕಾಣುತ್ತೇವೆ. ಇದು ಎರಡನೆಯದು.

ಇನ್ನು ಇವೆರಡರ ಜೊತೆಗೆ ಮೂರನೆಯ ಪರಂಪರೆಯೊಂದಿಗೆ, ಇಲ್ಲಿ ಮನುಷ್ಯರಿರುತ್ತಾರೆ. ಮತ್ತು ಜಾತಿವ್ಯವಸ್ಥೆಯಲ್ಲಿ ಮನುಷ್ಯ ರೂಪದ ಪಿಶಾಚಿ-ರಾಕ್ಷಸರೂ ಇರುತ್ತಾರೆ. ಯಾರು ಯಾರಾರೆಂಬುದು ಇಲ್ಲಿ ಗೊತ್ತಾಗುವುದೇ ಇಲ್ಲ. ಸುಖಾಂತವೆಂದರೆ- ಮನುಷ್ಯರ ರೀತಿ-ನೀತಿಗಳನ್ನು ಕಂಡು ನಾಚಿದ ರಾಕ್ಷಸರು ಇಲ್ಲಿ ಮನುಷ್ಯರಾಗಿ ಮಾರ್ಪಡುತ್ತಾರೆ. ಇವರ ಸಂಖ್ಯೆ ಕಡಿಮೆಯಿರಬಹುದಷ್ಟೆ. ದುರಂತವೆಂದರೆ ಇಲ್ಲಿ ಮನುಷ್ಯರು ರಾಕ್ಷಸರನ್ನು ತಿದ್ದಲು ಹೋಗಿ ತಾವೇ ರಾಕ್ಷಸರಾಗುತ್ತಾರೆ. ಇವರ ಸಂಖ್ಯೆ ಖಂಡಿತ ಹೆಚ್ಚಿದೆ. ಇಂದಿನ ನಮ್ಮ ಸಂದರ್ಭ ಬೇರೆ ಯಾವುದೂ ಆಗಿಲ್ಲ. ಈ ಮೂರನೆಯ ಪರಂಪರೆಯ ಭಾಗದ್ದಾಗಿದೆ. ಹೀಗಾಗಿ ಭಾರತದಲ್ಲಿಂದು ಮನುಷ್ಯರಿಲ್ಲ ಅಂದರೆ ಜನಗಳಿಲ್ಲ.(ಅವರಿದ್ದರೂ ಮನುಷ್ಯರೆ(?) ಎಂಬ ಸಂದೇಹಗಳೂ ಇವೆ), ಬದಲಿಗೆ ಭಯಂಕರ ಜಾತಿಗಳಿವೆ!

*********

## ೧೮. ದಲಿತರು ಮತ್ತು ಉದ್ದಿಮೆಶೀಲತೆ

**- ರಘೋತ್ತಮ ಹೊ.ಬ**

ಮೀಸಲಾತಿ: ವೈಯಕ್ತಿಕವಾಗಿ ನಾನು ಅದರ ಫಲಾನುಭವಿ. ಫಲಾನುಭವಿ ಆಗಲೇಬೇಕು ಅಂತ ಓದಿದ್ದೆ, ಅದಕ್ಕೆ ಫಲಾನುಭವಿ. ಮನೆಯವರ ಒತ್ತಡ, ಹಾಗೇ ಅಣ್ಣಂದಿರು ಫಲಾನುಭವಿಗಳಾದವರು ನಾನು ಆಗದಿದ್ದರೆ ನನ್ನ ಅಪ್ಪ ಅಮ್ಮ ಸುಮ್ಮನ್ನೇ ಬಿಡುವರೇ ಎಂಬ ಸಾಮಾನ್ಯ ಆಲೋಚನೆ ಕೂಡ ನಾನು ಹಾಗೇ ಮೀಸಲಾತಿಯ ಫಲಾನುಭವಿ ಆಗುವಂತೆ ಮಾಡಿತು. ಆದರೆ ನನ್ನ ಬೇರೆ ಜಾತಿಯ ಸ್ನೇಹಿತರು ಅದರ(ಮೀಸಲಾತಿ) ಫಲಾನುಭವ ಇಲ್ಲದೆ ನನಗಿಂತಲೂ ಚೆನ್ನಾಗಿ ಬದುಕುತ್ತಿದ್ದಾರೆ! ನನ್ನನ್ನೇ ಅಣಕಿಸುವಷ್ಟು! ಹಾಗಿದ್ದರೆ ನಾನು ಗಳಿಸಿದ್ದಾದರೂ ಏನು? ಅವರು ಕಳೆದುಕೊಂಡದ್ದಾದರೂ ಏನು? ಹೌದು, ನಾನು ಗಳಿಸಿದ್ದು ಬರೀ ಮೀಸಲಾತಿ ಮತ್ತು ಒಂದು ಉದ್ಯೋಗ. ಆದರೆ ಅವರು? ಇಡೀ ಜಗತ್ತನ್ನೇ ತಮ್ಮದೆಂದುಕೊಂಡರು. ಫುಟ್‌ಪಾತ್‌ನಲ್ಲಿ ಕಳ್ಳೇಕಾಯಿ ಮಾರುವುದರಿಂದ ಹಿಡಿದು ಹೈಟೆಕ್ ಕಂಪನಿಯ ಸಿ.ಇ.ಒ. ಗಳಾಗುವವರೆಗೆ ಅವರು ಅವಕಾಶ ಪಡೆದರು. ಎಲ್ಲಾ ಬಗೆಯ ಉದ್ಯಮಗಳೂ ಅವರಿಗೆ ತೆರೆದಿತ್ತು. ದಲಿತರ ಈ ಹೊತ್ತಿಗೆ ಹಸಿವನ್ನು ಮೀಸಲಾತಿ ಖಂಡಿತ ಹಿಂಗಿಸಲಾರದು. ಅವರಿಗೂ ತೆರೆಯಬೇಕಿದೆ ಎಲ್ಲಾ ಬಗೆಯ ಉದ್ಯಮಗಳು. ಇಲ್ಲದಿದ್ದರೆ ಮುಂದಿನ ಪೀಳಿಗೆಯಲ್ಲಿ ನಾಶ ಖಚಿತ.

ಉದ್ದಿಮೆ, ಹಾಗಿದ್ದರೆ ದಲಿತರು ಎಲ್ಲೆಲ್ಲಿ ನುಗ್ಗಬಹುದು? ಉತ್ತರ ಬಹು ಆಯಾಮದ್ದು. ಅಂದಹಾಗೆ ನನಗೆ ಪರಿಚಿತ ಸ್ವಯಂ ಉದ್ಯೋಗ ನಡೆಸುತ್ತಿದ್ದ ದಲಿತ ಸಂಘರ್ಷ ಸಮಿತಿಯ ಮುಖಂಡರೊಬ್ಬರು ಹೀಗೆ ಸವರ್ಣೀಯರ ವಿರುದ್ಧ ಹೋರಾಟ ಕೈಗೊಂಡಾಗ ಅವರಿಗೆ ಅಂಗಡಿ ಬಾಡಿಗೆ ನೀಡಿದ್ದ ಸವರ್ಣೀಯನೊಬ್ಬ ಅವರನ್ನು ಖಾಲಿ ಮಾಡಿಸಿದ. ಆದರೆ ಅವರು ಹೆದರಲಿಲ್ಲ. ಬೇರೊಂದು ಅಂಗಡಿ ಬಾಡಿಗೆಗೆ ಪಡೆದು ತಮ್ಮ ವ್ಯವಹಾರ ಮುಂದುವರಿಸಿದರು. ಖಂಡಿತ, ಈ ಸಂದರ್ಭದಲ್ಲಿ ಅಸ್ಪೃಶ್ಯತಾಚಾರಣೆ ಎಂದುಕೊಂಡರೆ ನಮ್ಮಪ್ಪರಾಣೆಗೂ ನಾವೂ ಈ ದಶಕದಲ್ಲಿ ಉದ್ಧಾರವಾಗಲು ಸಾಧ್ಯವಿಲ್ಲ. ಉದ್ದಿಮೆಗೆ ಇಳಿಯಬೇಕು. ಮೊದಲು ಕಡ್ಲೆಕಾಯಿಯನ್ನೇ ಮಾರಬೇಕು. ಫುಟ್‌ಪಾತ್‌ನಲ್ಲಿ ಟೀಯನ್ನೇ ಕಾಯಿಸಬೇಕು. ಚಪ್ಪಲಿ ಹೊಲಿಯುವುದಕ್ಕಿಂತ, ಶೌಚಾಲಯ ಶುಚಿಗೊಳಿಸುವುದಕ್ಕಿಂತ ಸಾಮಾನ್ಯ ಆಲೋಚನೆ ಕೂಡ ನಾನು ಹಾಗೇ ಮೀಸಲಾತಿಯ ಫಲಾನುಭವಿ ಆಗುವಂತೆ ಮಾಡಿತು. ಆದರೆ ನನ್ನ ಬೇರೆ ಜಾತಿಯ ಸ್ನೇಹಿತರು ಅದರ(ಮೀಸಲಾತಿ) ಫಲಾನುಭವ ಇಲ್ಲದೆ ನನಗಿಂತಲೂ ಚೆನ್ನಾಗಿ



ಬದುಕುತ್ತಿದ್ದಾರೆ! ನನ್ನನ್ನೇ ಅಣಕಿಸುವಷ್ಟು! ಹಾಗಿದ್ದರೆ ನಾನು ಗಳಿಸಿದ್ದಾದರೂ ಏನು? ಅವರು ಕಳೆದುಕೊಂಡದ್ದಾದರೂ ಏನು? ಹೌದು, ನಾನು ಗಳಿಸಿದ್ದು ಬರೀ ಮೀಸಲಾತಿ ಮತ್ತು ಒಂದು ಉದ್ಯೋಗ. ಆದರೆ ಅವರು? ಇಡೀ ಜಗತ್ತನ್ನೇ ತಮ್ಮದೆಂದುಕೊಂಡರು.

ಇದು ಉತ್ತಮ ಕೆಲಸ! ಹಾಗಿದ್ದರೆ ಗ್ರಾಹಕರು? ನಾವೇ! ಕಡ್ಲೆಕಾಯಿ ಮಾರಬೇಕು, ರೇಷನ್ ಅಂಗಡಿ ತೆರೆಯಬೇಕು, ಗೊಬ್ಬರದ ಅಂಗಡಿ ತೆರೆಯಬೇಕು, ಬೇರೆಯವರಿಗಿಂತ ಅರ್ಧ ರೂಪಾಯಿ ಕಮ್ಮಿ ತೆಗೆದುಕೊಳ್ಳಬೇಕು. ನಾವೇ ಅದರ ಗ್ರಾಹಕರೂ ಕೂಡ ಆಗಬೇಕು. ನೋಡಿ, ಲಕ್ ಹೇಗೆ ಕುದುರುತ್ತದೆ ಎಂಬುದನ್ನು! ಉದ್ಯೋಗವೂ ಸೃಷ್ಠಿಯಾಗುತ್ತದೆ. ನಾಲ್ಕು ಕಾಸೂ ಕೂಡ ಬರುತ್ತದೆ. ಯಾಕೆಂದರೆ ಇಂದಿಗೂ ದಲಿತರು ಬಹಿತೇಕ ಅಂಗಡಿಗಳಿಗೆ, ಹೋಟೆಲ್‌ಗಳಿಗೆ, ಕಂಪನಿಗಳಿಗೆ ಖಾಯಂ ಗಿರಾಕಿಗಳಾಗಿದ್ದಾರೆ, ಗ್ರಾಹಕರಾಗಿದ್ದಾರೆ. ಆದರೆ ಮಾಲೀಕರಾಗುವುದು? ಖಂಡಿತ, ಹೀಗೆ ಕೆಳಮಟ್ಟದಿಂದಲೇ ಪ್ರಾರಭವಾಗಬೇಕು. ಇಡೀ ಜಗತ್ತು ಸ್ಪರ್ಧಾತ್ಮಕತೆಯ ಹಿಂದೆ ಇಡುತ್ತಿದೆ. ಹೀಗಿರುವಾಗ ದಲಿತರು ಅಪ್ಪ ಹಾಕಿದ ಮೀಸಲಾತಿ ಎಂಬ ಆಲದ ಮರಕ್ಕೆ ನೇತುಹಾಕಿಕೊಳ್ಳುವುದು? ಅದಕ್ಕೇ ಜೋತುಬೀಳುವುದು?

ಎಲ್ಲಿಯವರೆಗೆ ನಮ್ಮ ಹೋರಾಟ ಒಂದೇ ದಿಕ್ಕಿನೆಡೆಗೆ, ಬರೇ ಮೀಸಲಾತಿಯೆಡೆಗೆ ಇರುತ್ತದೆಯೋ ಅಲ್ಲಿಯವರೆಗೆ ನಮ್ಮನ್ನು ಬಲಿತೆಗೆದುಕೊಳ್ಳುವುದು ಪಟ್ಟಭದ್ರರಿಗೆ ಸುಲಭವಾಗುತ್ತದೆ. ಅದೇ 'ನಾವು ಮೀಸಲಾತಿ ಬೇಡುವವರಲ್ಲ. ನೀಡುವವರಾಗುತ್ತೇವೆ' ಎಂದು ವ್ಯಾಪಾರ ಉದ್ದಿಮೆಗಳೆಡೆ ಮನಸ್ಸು ಮಾಡಿದರೆ ವರ್ಣಾಶ್ರಮದ ಮೌಲ್ಯಗಳನ್ನು ಉಲ್ಟಾಪಲ್ಟಾ ಮಾಡುವತ್ತ ಚಿಂತಿಸಿದರೆ? ಹೊಸ ಬಗೆಯ ಗ್ರಾಹಕರು ಹುಟ್ಟಿಕೊಳ್ಳುತ್ತಾರೆ. ಅಕಸ್ಮಾತ್ ಅಸ್ಪೃಶ್ಯತಾಚರಣೆಯೂ ನಡೆದರೆ ಎಷ್ಟು ದಿನ ಅಂತ ನಡೆಯಲಿಕ್ಕಾಗುತ್ತದೆ? ನಡೆದರೆ ನಡೆಯಲಿ ಬಿಡಿ. ನಮ್ಮ ಮೇಲೆ ನಡೆದದ್ದು ನಮ್ಮ ಮಕ್ಕಳ ತಲೆಗೆ ಕೊನೆ ಗೊಳ್ಳಬಹುದು. ಮೊಮ್ಮಕ್ಕಳ ತಲೆಗೆ ಕೊನೆಗೊಳ್ಳಬಹುದು. ಬರೇ ಮೀಸಲಾತಿಗೆ ಜೋತು ಬಿದ್ದರೆ ನಮ್ಮ ಮಕ್ಕಳೇಗೆ ಹೊಸ ರೀತಿ ಯೋಚಿಸಲು ಸಾಧ್ಯ? 'ನಮ್ಮಪ್ಪ ಮೀಸಲಾತಿಯಿಂದಲೇ ಕೆಲಸ ತೆಗೆದುಕೊಳ್ಳಬೇಕು' ಎಂದು ಆತ ಅಂದುಕೊಂಡರೆ ಆತನಿಗೆ ತೆಗೆದುಕೊಳ್ಳಲು ಅಲ್ಲಿ ಉದ್ಯೋಗವೇ ಇರುವುದಿಲ್ಲ. ಎಲ್ಲವೂ ಖಾಸಗೀಕರಣಗೊಂಡು ಮೀಸಲಾತಿ ಹಲ್ಲಿಲ್ಲದ ಹಾವಾಗುತ್ತದೆ. ಉಪಯೋಗಕ್ಕೆ ಬಾರದ ಆಯುಧ್ಧವಾಗುತ್ತದೆ! ಅದರ ಬದಲು ಉದ್ದಿಮೆಶೀಲತೆಯ ಮೂಲಕ ನಾವು ಆತನಿಗೆ/ ಆಕೆಗೆ 'ಬದುಕನ್ನು ಹೀಗೂ ಬಾಳಬಹುದು; ಏನಾದರೂ ಮಾಡು, ಬದುಕಲಿಕ್ಕೆ ವ್ಯಾಪಾರವಾದರೂ ಸೈ, ಸ್ವಯಂ ಉದ್ಯೋಗವಾದರೂ ಸೈ, ನಿನ್ನದೇ ಸ್ವಂತ ಉದ್ದಿಮೆಯಾದರೂ ಸೈ' ಎಂಬ ಕನಸನ್ನು ಆತನಲ್ಲಿ/ಆಕೆಯಲ್ಲಿ ಬಿತ್ತಿದ್ದೇ ಆದರೆ?

ಈ ದಿಕ್ಕಿನಲ್ಲಿ ಮೊನ್ನೆ ಬೆಂಗಳೂರಿನಲ್ಲಿ ನಡೆದ DICCI(Dalit India Chamber of Commerece and Industries) ಸಮಾವೇಶ ಗಮನಾರ್ಹವಾದುದೇ. ಯಾಕೆಂದರೆ ಮೀಸಲಾತಿ ನಿರ್ವೀರ್ಯಕರಣಗೊಳ್ಳುತ್ತಿರುವ ಈ ದಿನದಲ್ಲಿ ಬರೀ



ಅದಷ್ಟಕ್ಕೆ ದಲಿತರು ಜೋತು ಬೀಳುವುದೆಂದರೆ ಮುಂದೆ ಬದುಕುವುದಾದರೂ ಹೇಗೆ? ಖಾಸಗೀ ರಂಗದಲ್ಲಿ ಮೀಸಲಾತಿ ಎಂದು ಕೆಲವರು ಅನ್ನಬಹುದು. ಆದರೆ ಸರ್ಕಾರಿ ಮೀಸಲಾತಿಯನ್ನೇ ಪರಿಣಾಮಕಾರಿಯಾಗಿ ಜಾರಿಗೊಳಿಸದ ವ್ಯವಸ್ಥೆ ಖಾಸಗಿ ರಂಗದಲ್ಲಿ ಅದನ್ನು ಜಾರಿಗೊಳಿಸುತ್ತದೆ ಎಂಬುದು ಕನಸಿನ ಮಾತು. ಈ ಕಾರಣಕ್ಕಾಗಿ ದಲಿತರಲ್ಲಿ ಉದ್ದಿಮೆಶೀಲತೆ ಬೆಳೆಸುವ ನಿಟ್ಟಿನಲ್ಲಿ DICCI ಯ ಮುಖ್ಯ ಪ್ರವರ್ತಕ, ದಲಿತ ಚಿಂತಕ ಚಂದ್ರಭಾನ್ ಪ್ರಸಾದ್ ಮತ್ತು ಅಧ್ಯಕ್ಷ ಮಿಲಿಂದ್ ಕಾಂಬ್ಳೆಯವರ ಪ್ರಯತ್ನ ಖಂಡಿತ ಹೊಸ ಮಾದರಿಯದ್ದು. ಅಂದ ಹಾಗೆ ಬೆಳೆಯುತ್ತಿರುವ ದಲಿತ ವಿದ್ಯಾರ್ಥಿ ಸಮೂಹಕ್ಕೆ ಸರ್ಕಾರ ಎಷ್ಟು ಅಂತ ಉದ್ಯೋಗ ನೀಡಲಿಕ್ಕಾಗುತ್ತದೆ? ಸರ್ಕಾರ ನೀಡಲಿಲ್ಲವೆಂದರೆ ದಲಿತ ಸಮುದಾಯ ಹೊಸದಾಗಿ ಏನನ್ನೂ ಮಾಡುವುದು ಬೇಡವೆ? ಹಿಂದೆ ದಲಿತ ಯುವಕರಲ್ಲಿ ಒಂದು ಟ್ರೆಂಡ್ ಇತ್ತು. ಪದವಿ ಗಳಿಸಿದಾಕ್ಷಣ ಸರ್ಕಾರ ನಮಗೆ ಕರೆದು ಉದ್ಯೋಗ ಕೊಡಬೇಕು ಎಂಬುದೇ ಆ ಟ್ರೆಂಡ್ ಕೆಲಸ ಮಾಡು ಅಂದರೆ 'ಹೂಂ ನಾನು ಓದಿಲ್ಲವೆ?' ಎಂಬ ಉತ್ತರ ಅಂತಹ ವಿದ್ಯಾರ್ಥಿಗಳಿಂದ ಬರುತ್ತಿತ್ತು. ಆದರೆ ಈಗ ಕಾಲ ಬದಲಾಗಿದೆ. 'ನೀನು ಓದಿದ್ದೀಯ. ಅದು ನಿನ್ನ ಜ್ಞಾನಕ್ಕಷ್ಟೆ' ಎಂಬ ವಿವರಣೆ ಈಗ

ಸರ್ವೇಸಾಮಾನ್ಯವಾಗಿದೆ. ಹಾಗಿದ್ದರೆ ಇಂತಹ ಸಮಯದಲ್ಲಿ ಏನು ಮಾಡುವುದು? ಖಂಡಿತ, ಉತ್ತರ:- ಉದ್ದಿಮೆಶೀಲತೆ ಅಥವಾ entrepreneurship.

ಹಿಂದೆ ದಿ. ಕಾರಾಂರವರು ತಾನು ದಲಿತರನ್ನು 'ಬೇಡುವ ಸಮಾಜದಿಂದ, ನೀಡುವ ಸಮಾಜವಾಗಿ ಪರಿವರ್ತಿಸುತ್ತೇನೆ' ಎಂದಿದ್ದರು. ಅವರ ಉದ್ದೇಶ ದಲಿತರನ್ನು ರಾಜಕೀಯ ಹಕ್ಕು ಅಧಿಕಾರಗಳಿಗಾಗಿ ತಯಾರು ಮಾಡುವುದಾಗಿತ್ತು. ಖಂಡಿತ, ಕಾರಾಂ ಆ ದಿಶೆಯಲ್ಲಿ ಯಶಸ್ಸನ್ನೂ ಕೂಡ ಕಂಡರು. ಮಾಯಾವತಿಯಂತಹ ದಲಿತ ಮಹಿಳೆ ಬೃಹತ್ ರಾಜ್ಯವೊಂದರಲ್ಲಿ ೪ ಬಾರಿ ಮುಖ್ಯಮಂತ್ರಿಯಾದರು. ಆದರೆ ದಲಿತರ ಭವಿಷ್ಯದ ಬದುಕಿನ ಉದ್ಯೋಗದ ಪ್ರಶ್ನೆ? ಖಂಡಿತ, ಚಂದ್ರಭಾನ್‌ಪ್ರಸಾದ್ DICCI (ಡಿಕ್ಕಿ) ಮಾದರಿಯ ಹೋರಾಟ ಈ ಸಂದರ್ಭದಲ್ಲಿ ಅತ್ಯಗತ್ಯವಾಗುತ್ತದೆ. ಒಂದು ಜನರೇಶನ್ ಚಂದ್ರಭಾನ್ ಪ್ರಸಾದ್ ಆ ದಿಕ್ಕಿನಲ್ಲಿ ಪ್ರಯತ್ನಿಸಬೇಕು. ದಲಿತರಲ್ಲಿ ಉದ್ದಿಮೆಶೀಲತೆ ಬೆಳೆಸಲು ತನು,ಮನ, ಧನ ಎಲ್ಲವನ್ನೂ ಮೀಸಲಿಡಬೇಕು. ಒಂದು ಹೊಸ ಚಳುವಳಿಯ ರೂಪವಾಗಿ ಅದು ಹೊರಹೊಮ್ಮಬೇಕು.

ಇಂದು ಟಾಟಾ, ಬಿರ್ಲಾ, ರಿಲೈಯಾನ್ಸ್, ವಿಪ್ರೋ, ಇನ್ಫೋಸಿಸ್ ಸರ್ಕಾರಗಳಿಂದ ಬಹುಕೋಟಿಗಟ್ಟಲೆ ಸಾಲ, ಭೂಮಿ, ಸವಲತ್ತು ಪಡೆದು ದಲಿತರ ಮೀಸಲಾತಿಯನ್ನು ನಾಚಿಸುತ್ತಿವೆ. ಅದೇ ದಲಿತರೇ ಅಂತಹ ಪ್ರಯತ್ನಕ್ಕೆ ಕೈ ಹಾಕಿದರೆ? ಉದಿಮೆಶೀಲತೆಯನ್ನು ಬೆಳೆಸುತ್ತ/ರೂಢಿಸುವತ್ತ ಕೈ ಜೋಡಿಸಿದರೆ?

'political power is the master key through which you unlock all door of progress' ಇದು ಅಂಬೇಡ್ಕರ್‌ರ ಶ್ರೇಷ್ಠ ನುಡಿ. ಆದರೆ ಮೀಸಲಾತಿ



ಇಲ್ಲದ ಇಂತಹ ಜಾಗತೀಕರಣದ ಈ ಕಾಲದಲ್ಲಿ ಆ ನುಡಿ 'entrepreneneurship (v3) is the master key through which you unlock all door of progress' ಎಂದು ಹೊಸ ಅರ್ಥ ಕಲ್ಪಸಿದರೆ? ಖಂಡಿತ ಅಂತಹ ಹೊಸ ಅರ್ಥ ಕಲ್ಪಿಸಬೇಕಿದೆ. ಅಂಬೇಡ್ಕರ್ ಚಿಂತನೆಗೂ ಹೊಸ ಕಸುವು ತುಂಬುವ ಕೆಲಸ ನಡೆಯಬೇಕಿದೆ. ದಲಿತರಲ್ಲಿ ಉದ್ದಿಮೆಶೀಲತೆ ನೆಲೆಗೊಳ್ಳಬೇಕಿದೆ. ಯಾಕೆಂದರೆ ಮೊದಲೇ ಹೇಳಿದ ಹಾಗೆ LPJಯ, FDIನ ಈ ಯುಗದಲ್ಲಿ ದಲಿತರ ಹಸಿವನ್ನು ಕೇವಲ ಮೀಸಲಾತಿಯಿಂದಷ್ಟೆ ಹಿಂಗಿಸುವುದು ಖಂಡಿತ ಸಾಧ್ಯವಿಲ್ಲ ಅದಕ್ಕೆ.

***************

## ೧೯. ದೇವಾಲಯ ಸಂಸ್ಕೃತಿ ಮತ್ತು ದಲಿತರು

**ಡಾ. ಓ. ದೇವರಾಜ**

ದೇವಾಲಯ ಸಂಸ್ಕೃತಿಯು, ಸ್ಥಾಪಿತ ಬಲಾಢ್ಯ ವರ್ಗಗಳಿಗೆ ಸಂಬಂಧಿಸಿದ ವಿಚಾರವೆಂದು ಮೇಲ್ನೋಟಕ್ಕೆ ಕಂಡರೂ ಅದರ ಅಂತರಗದಲ್ಲಿ ಸಮಾಜದ ಎಲ್ಲಾ ಜನವರ್ಗಗಳು ಭಾಗಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎನ್ನುವುದಕ್ಕೆ ಚರಿತ್ರೆ ಪುರಾವೆ ಒದಗಿಸುತ್ತವೆ. ಮಧ್ಯಕಾಲೀನ ಸಂದಂರ್ಭದಲ್ಲಿ ಬಹುತೇಕ ರಾಜವಂಶಗಳು, ಸಾಮಂತ ಅರಸರು, ಪಾಳೇಗಾರರು ದೇವಾಲಯಗಳ ನಿರ್ಮಾಣಕಾರಕ್ಕೆ ಹೆಚ್ಚಿನ ಮಹತ್ವ ಕೊಟ್ಟರು. ಆ ಮುಖಾಂತರ ಕಲೆ ಮತ್ತು ವಾಸ್ತುಶಿಲ್ಪವು ಉನ್ನತ ಹಂತವನ್ನು ತಲುಪಿತು. ಈ ನಿಟ್ಟಿನಲ್ಲಿ ದೇವಾಲಯಗಳ ನಿರ್ಮಾಣಕಾರ್ಯದ ಹಿಂದೆ ಜನ ಸಮುದಾಯದವರ ಕಾರ್ಯಕ್ಷೇತ್ರವೂ ವಿಸ್ತರಿಸಿಕೊಳ್ಳುತ್ತದೆ. ಅಂದರೆ ದೇವಾಲಯಗಳ ನಿರ್ಮಾಣಕಾರ್ಯದಲ್ಲಿ ಶ್ರಮ ವಹಿಸಿದವರು ಜನಸಾಮಾನ್ಯರೇ ಹೊರತು ಸಮಾಜದ ಉನ್ನತ ಸ್ತರದಲ್ಲಿದ್ದವರಲ್ಲ. ದೇವಾಲಯಗಳು ಆರಂಭ ಕಾಲಘಟ್ಟದಲ್ಲಿ ಭಕ್ತಿ ಕೇಂದ್ರಗಳಾಗಿಸ್ವರೂಪವನ್ನು ಪಡೆದುಕೊಂಡವು.

ಆದರೆ ಅವುಗಳನ್ನು ಇನ್ನೊಂದು ನೆಲೆಯಲ್ಲಿ ಅಧ್ಯಯನ ಮಾಡಿದಾಗ ಶೋಷಣೆಯ ಕೇಂದ್ರವಾಗಿದ್ದವು. ಮತ್ತು ಸಾಮಾಜಿಕ ಶ್ರೇಣೀಕರಣ, ಸ್ಥಾಪಿತಮೌಲ್ಯಗಳು, ರೂಢಿ ಸಂಪ್ರದಾಯಗಳು ಹಾಗೆಯೇ ಮುಂದುವರೆಯುವಂತೆ ವ್ಯವಸ್ಥಿತವಾಗಿ ನೋಡಿಕೊಳ್ಳಲಾಯಿತು. ದೇವಾಲಯಗಳು ದಲಿತರಿಗೆ ಶೋಷಣೆಯ ಕೇಂದ್ರಗಳಾಗಿ ಗೋಚರಿಸಿದವು ಎಂದರೆ ತಪ್ಪಾಗಲಾರದು. ಈ ಕುರಿತಂತೆ ದೇವಾಲಯಗಳು ಮತ್ತು ದಲಿತರಿಗೆ ಇರುವ ಅವಿನಾಭಾವ ಸಂಬಂಧಗಳು ಹಾಗೂ ಇತರೆ ಕಾರ್ಯಗಳನ್ನು ಪ್ರಸ್ತುತ ವಿಷಯದಲ್ಲಿ ಚರ್ಚಿಸಲು ಯತ್ನಿಸಲಾಗಿದೆ.

ಪ್ರಾಚೀನ ಕರ್ನಾಟಕದ ದೇವಸ್ಥಾನಗಳು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕಗಳು. ದೇವಾಲಯದ ಚರಿತ್ರೆಯು ಕರ್ನಾಟಕದಲ್ಲಿ ಕ್ರಿ.ಶ.ಕ್ಕಿಂತ ಹಿಂದೆ ಹೋದರೂ ಈಗ ಉಳಿದು ಬಂದಿರುವ ದೇವಸ್ಥಾನಗಳೆಲ್ಲ ಅತ್ಯಂತ ಪ್ರಾಚೀನವಾದುದೆಂದರೆ ತಾಳಗುಂದದ ಪ್ರಣವೇಶ್ವರ ದೇವಸ್ಥಾನ. ಇವು ವಿವಿಧ ಜನಸಮುದಾಯಗಳ ಜನಸಂಪರ್ಕ ಕೇಂದ್ರಗಳಾಗುವುದರ ಜೊತೆಗೆ ಸ್ಥಾಪಿತ ಪದ್ಧತಿಗಳು ಸದಾ ಮುಂದುವರಿಯುವಂತೆ ಅನುವು ಮಾಡಿಕೊಟ್ಟವು. ಧರ್ಮವು ಸಮಾಜದಲ್ಲಿ ಪ್ರಧಾನ ಪಾತ್ರ ವಹಿಸಿತು. ಇದು ಇಡೀ ವ್ಯವಸ್ಥೆಯನ್ನು ನಿಯಂತ್ರಿಸುತ್ತಿತ್ತು. ಜಾತಿವ್ಯವಸ್ಥೆ ಮತ್ತು ಮೂಢನಂಬಿಕೆಗಳು ಸದಾಮುಂದುವರೆಯಲು ಸಮಾಜದ ಬಲಾಢ್ಯಶಕ್ತಿಗಳು ತಮ್ಮಲ್ಲೇ ಅಧಿಕಾರವನ್ನು



ಕೇಂದ್ರಿಕರಿಸಿಕೊಂಡು ಎಲ್ಲಾ ರೀತಿಯ ಸವಲತ್ತುಗಳನ್ನು ಪಡೆಯುವುದರ ಜೊತೆಗೆ ತಾವು ಇತರಗಿಂತ ಉತ್ತಮರು ಎಂದು ತೋರಿಸಿಕೊಳ್ಳುತ್ತಿದ್ದರು. ಕೆಳಜಾತಿಗಳಿಗೆ ಮತ್ತು ದಲಿತರ ಪಾಲಿಗೆ ದೇವಾಲಯಗಳು ಯಾವಾಗಲೂ ಶೋಷಣೆಯ ಸಂಕೇತವಾಗಿ ಕಂಡಿವೆ. ಅಧ್ಯಯನದ ಅವಧಿಯಲ್ಲಿ ದೇವಾಲಯಗಳಿಗೆ ದಲಿತರ ಪ್ರವೇಶ ಕುರಿತು ಹಲವು ಆಂದೋಲನಗಳೇ ನಡೆದಿವೆ. ಆದರೆ ಅವು ಯಶಸ್ವಿಯಾಗಿರುವುದು ಮಾತ್ರ ಶೂನ್ಯವೆ. ಇವೆಲ್ಲ ಹಿನ್ನೆಲೆಗಳು ದೇವಾಲಯದ ನಿರ್ಮಾಣ ಹಂತದಲ್ಲಿ ಅದಕ್ಕೆ ಶ್ರಮಿಸಿದ ಶ್ರಮಿಕರನ್ನು ಸ್ಮರಿಸುವುದಿಲ್ಲ. ಆದರೆ ಯಾವುದೇ ಒಬ್ಬ ರಾಜ ಅಥವಾ ರಾಣಿಯ ಹೆಸರು ಮಾತ್ರ ಶಾಶ್ವತವಾಗಿ ಉಲ್ಲೇಖವಾಗುತ್ತದೆ. ನಿರ್ಮಾಣ ಯಾವ ಉದ್ದೇಶಕ್ಕಾಗಿ ಆಯಿತು, ಅದರ ಆಡಳಿತ ವರ್ಗ, ವಿದ್ಯಾಕೇಂದ್ರಗಳಾಗಿ, ನ್ಯಾಯಾಲಯಗಳಾಗಿ, ಪರಿಚಾರಿಕವರ್ಗ, ದೇವದಾಸಿ ಪದ್ಧತಿಯಂತಹ ಸೇವಾಪ್ರವೃತ್ತಿಯನ್ನು ಹುಟ್ಟುಹಾಕಿದ ಇವು ಆ ಸಂದಂರ್ಭದಲ್ಲಿ ವಿಭಿನ್ನ ಪಾತ್ರವಹಿಸಿವೆ. ದೇವಾಲಯಗಳು ಬಹುಪಾಲು ರಾಜಪ್ರಭುತ್ವದಿಂದ ಹೆಚ್ಚು ನಿರ್ಮಾಣ ಮಾಡಿಸಿರುವುದು ಶಾಸನಗಳಿಂದ

ವೇದ್ಯವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಜನಸಾಮಾನ್ಯರೂ ಕೂಡ ದೇವಾಲಯಗಳನ್ನು ಕಟ್ಟಿರುವುದು ಮತ್ತು ದಾನಧರ್ಮಗಳನ್ನು ನೀಡಿರುವುದನ್ನು ಚರಿತ್ರೆಯಲ್ಲಿ ಗಮನಿಸಬಹುದು.

**ಪರಿಚಾರಕ ವರ್ಗ:**

ದೇವಾಲಯಗಳು ಸಾಮಾಜಿಕ ಸ್ತರವಿನ್ಯಾಸವನ್ನು ಸದಾ ಮುಂದುವರಿಸಲು ಕಾರಣೀಭೂತವಾದವು. ದೇವಾಲಯ ಆರ್ಥಿಕವಾಗಿ ಸಶಕ್ತವಾಗುವುದರ ಜೊತೆಗೆ ವಿವಿಧ ಜನಸಮುದಾಗಳ ಸೇವೆಯ ಕೇಂದ್ರವಾಯಿತು. ಒಬ್ಬ ಅರ್ಚಕನಿಂದ ಹಿಡಿದು ಬೀದಿಯಲ್ಲಿ ಕಸ ಗುಡಿಸುವ ವ್ಯಕ್ತಿಯವರೆಗೂ ವಿವಿಧ ಕಾರ್ಯಗಳಿಗೆ ಜಾತಿ ಶ್ರೇಣೀಕರಣಕ್ಕೆ ಅನುಗುಣವಾಗಿ ನೇಮಿಸಿಕೊಳ್ಳಲಾಗುತ್ತಿತ್ತು. ದೇವಾಲಯದ ಗರ್ಭಗೃಹದಿಂದ ದ್ವಾರ ಬಾಗಿಲುವರೆಗೆ ಎಲ್ಲಾ ವರ್ಗದವರಿಗೆ ಮುಕ್ತ ಪ್ರವೇಶವಿರಲಿಲ್ಲ. ಬಹುತೇಕ ಕೆಳಜಾತಿ ಜನಾಂಗಗಳು ಮುಖ ಮಂಟಪದ ಹೊರಗಿನಿಂದಲೇ ದೇವತೆಯ ದರ್ಶನ ಪಡೆಯಬೇಕಾಗಿತ್ತು. ದೇವಸ್ಥಾನದ ಪರಿಚಾರಕ ವರ್ಗವೆಂದರೆ ಸರ್ವರೀತಿಯಲ್ಲಿ ದೇವಸ್ಥಾನವನ್ನು ಸ್ವಚ್ಛಗೊಳಿಸುವವರು. ಪೂಜೆಗೆ ಹೂಮಾಲೆಗಳನ್ನು ಒದಗಿಸುವುದರಿಂದ ಹಿಡಿದು ದೇವಸ್ಥಾನದ ಹೊರಭಾಗದ ಕಸ ಗುಡಿಸುವವರೆಗೂ ಸೇವೆಯನ್ನು ಸಲ್ಲಿಸಲಾಗುತ್ತಿತ್ತು. ದೇವಸ್ಥಾನದ ಪಕ್ಕದ ಹೂದೋಟವನ್ನು ತೋಟದ ತಳಾರನು ನೋಡಿಕೊಳ್ಳುತ್ತಿದ್ದನು. ಕೊಳಲನ್ನು ಬಾರಿಸುವವರು (ವಂಶಕಾರ ಅಥವಾ ವಂಶಿಗ), ಹರೆಯನ್ನು ಬಾರಿಸುತ್ತಿದ್ದ ಪರಕಾರ, ದೇವಸ್ಥಾನವನ್ನು ಕಾಯುತ್ತಿದ್ದವನು 'ಅಂಗಜಾವದ ಕಾಹಿವನು'. ದೇವಸ್ಥಾನ ಶಿಥಿಲವಾದರೆ ರೂವಾರಿ ಅಥವಾ ಕಲ್ಲುಟಿಗನನ್ನು ನೇಮಿಸಲಾಗುತ್ತಿತ್ತು. ಕೊನೆಯದಾಗಿ 'ಪಾತ್ರ'ದವರು ಇವರನ್ನು ದೇವದಾಸಿಯರೆಂದು



ಕರೆಯಲಾಗಿದೆ. ಪೂಜಾರಿಗಳು ಸೇರಿದಂತೆ ಪರಿಚಾರಕವರ್ಗ(ಸಮಸ್ತ ಊಳಿಗ)ವೆಂದು ದೇವಸ್ಥಾನದ ಸೇವೆಯಲ್ಲಿ ತೊಡಗುತ್ತಿದ್ದರು. ಹಾಸನ ಜಿಲ್ಲೆಯ ಹಳೇಬೀಡಿನ ಕೇದಾರೇಶ್ವರ ದೇವಾಲಯದಲ್ಲಿ ಶೂದ್ರರ ಸೇವೆ ಸಲ್ಲುತ್ತಿತ್ತು. ದೇವಾಲಯಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಲು ಕಮ್ಮಾರರು, ಕುಂಬಾರು, ಅಕ್ಕಸಾಲಿಗರು ಮುಂತಾದವರನ್ನು ನಿಗದಿಗೊಳಿಸಲಾಗುತ್ತಿತ್ತು. ಕೆಲವು ಶೂದ್ರ ಸಮುದಾಯಗಳಿಗೆ ಸೇರಿದ ಸ್ತ್ರೀಯರು ಪೂಜಾರಿಕೆ ಕೆಲಸದಲ್ಲಿ ನಿರತರಾಗಿದ್ದರು ಎಂದು ತಿಳಿದುಬರುತ್ತದೆ. ಮೂಲಸ್ಥಾನ ದೇವಾಲಯದಲ್ಲಿ ರೇವ ಎಂಬುವವಳು(ಸಿರಿವೂರು) ಪೂಜಾರಿಕೆ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಳು. ರೇವಟ್ಟೆ ಎಂಬುವವಳು ಗೊರವಿಯಾಗಿದ್ದುಕೊಂಡು ದೇವಸ್ಥಾನದ ಕಾರ್ಯ ನಿರ್ವಹಿಸುತ್ತಿದ್ದಳು.

ದೇವಾಲಯಗಳು ಗ್ರಾಮಗಳ ಆಡಳಿತ ಮತ್ತು ಜಾತಿ ಕಟ್ಟಳೆಯ ಉನ್ನತ ನ್ಯಾಯಾಲಯಗಳಾಗಿದ್ದವು. ದೇವಾಲಯದ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವುದು ಜಾತಿಯನ್ನು ಅವಲಂಬಿಸಿಕೊಂಡಿರುತ್ತಿತ್ತು. ಜಾತಿಯ

ಆಧಾರದ ಮೇಲೆ ವಿವಿಧ ಜನ ವರ್ಗದವರು ದೇವಾಲಯಗಳ ಹಕ್ಕನ್ನು ಅನುಭವಿಸಬೇಕಾಗಿತ್ತು. ಬ್ರಾಹ್ಮಣರಿಗೆ ಮಾತ್ರ ಗರ್ಭಗುಡಿಯೊಳಗೆ ಪ್ರವೇಶಿಸಲು ಮತ್ತು ವಿಗ್ರಹಕ್ಕೆ ಪೂಜೆ ಮಾಡಲು ಅವಕಾಶವಿತ್ತು. ಅದರ ಕೆಳಗಿನ ಅಂತಸ್ತಿನವರು ಗರ್ಭಗುಡಿಯ ಮುಂದೆ ನಿಲ್ಲಬಹುದಾಗಿತ್ತು. ಆದರೆ ಒಳಗೆ ಹೋಗುವಂತಿರಲಿಲ್ಲ. ಮೊದಲನೇ ಅಂತಸ್ತಿನ ಜನರು ದೇವಾಲಯದ ಪ್ರಾಂಗಣದಲ್ಲಿ ಸೇರಲು ಅವಕಾಶವಿತ್ತು. ಇನ್ನೂ ಕೆಳ ಅಂತಸ್ತಿನವರು ದೇವಾಲಯದ ಪೌಳಿ ಆಚೆಯೇ ನಿಲ್ಲಬೇಕಾಗಿತ್ತು. ಅಸ್ಪೃಶ್ಯರು ದೇವಾಲಯದ ಬಳಿ ಎಷ್ಟೋ ಅಂತರದಲ್ಲಿ ನಿಲ್ಲಬೇಕಾಗಿತ್ತು. ದೇವಾಲಯಗಳು ಜಾತಿವ್ಯವಸ್ಥೆ, ಆರ್ಥಿಕ ಕೇಂದ್ರವಾಗಿ, ಭಯ ಭಕ್ತಿ ಮೂಡುವಂತೆ ಮಾಡಿ ಧಾರ್ಮಿಕ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಮಾಡುತ್ತಿದ್ದವು. ಎಷ್ಟೋ ದೇವಸ್ಥಾನಗಳು ಗುಲಾಮರ ಮಾರಾಟದ ಕೇಂದ್ರವಾಗಿ ಕಾರ್ಯ ನಿರ್ವಹಿಸಿವೆ. ಕೆಳಜಾತಿಯ ಹೆಣ್ಣು ಮಕ್ಕಳನ್ನು ಮಾರಾಟ ಮಾಡಲಾಗುತ್ತಿತ್ತು. ಮೇಲಿನ ವಿವರಣೆಗಳಿಂದ ಶೂದ್ರ ಮತ್ತು ದಲಿತರು ದೇವಾಲಯದ ಭಾಗವಾಗಿ ಪೂಜಾಕಾರ್ಯಗಳನ್ನು ನಿರ್ವಹಿಸುತ್ತಿದ್ದರು ಎಂಬುದು ವೇದ್ಯವಾಗುತ್ತದೆ. ಆದರೆ ಹೆಚ್ಚಿನದಾಗಿ ದೇವಾಲಯದ ಆಡಳಿತವರ್ಗವು ವ್ಯವಸ್ಥೆಯ ಭಾಗವಾಗಿ ಅವರನ್ನು ಬಳಸಿಕೊಂಡಿದ್ದಲ್ಲದೆ ಶೋಷಣೆಯ ಕೂಪಕ್ಕೆ ತಳ್ಳಿತು. ಈ ರೀತಿಯ ವಿವರಗಳು ಕರ್ನಾಟಕದುದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಇತ್ತೀಚೆಗೆ ಕರ್ನಾಟಕ ಸರ್ಕಾರವು ದೇವಾಲಯಗಳ ಪುರೋಹಿತ ಕಾರ್ಯಕ್ಕೆ ದಲಿತರನ್ನು ನೇಮಿಸಿಕೊಳ್ಳಬೇಕೆಂಬ ಪ್ರಸ್ತಾವಣೆಯನ್ನು ಇಟ್ಟಿರುವುದು ಗಮನಿಸಬಹುದು.

**ಮಠಗಳು:**

ದೇವಾಲಯಗಳ ಜೊತೆಗೆ ಮಠಗಳು ಸಹ ಅವಿಭಾಜ್ಯ ಅಂಗವಾಗಿ ಬೆಳೆದುಕೊಂಡು ಬಂದವು. ದೇವಾಲಯ ಸಂಸ್ಕೃತಿ ಮುಂದುವರಿದ ಭಾಗವೇ ಮಠಗಳು. ದೇವಸ್ಥಾನದ ಅಂಗವಾಗಿ ಮಠಗಳು ಕಾಣಿಸಿಕೊಳ್ಳಲಾರಂಭವಾದುದ್ದು. ಕ್ರಿ.ಶ.ಆರು



ಅಥವಾ ಏಳನೇ ಶತಮಾನಗಳಿಂದೀಚೆಗೆ, ಎಂದರೆ ಕರ್ನಾಟಕದಲ್ಲಿ ಲಾಕುಳ ಶೈವಧರ್ಮವು ಪ್ರಚಾರದ ಬಳಿಕ, ತಮಿಳುನಾಡಿನ ಮಠಗಳ ಇತಿಹಾಸವೂ ಇದನ್ನೇ ಪೋಷಿಸುತ್ತದೆ. ಅಲ್ಲಿನ ಅತ್ಯಂತ ಪ್ರಾಚೀನ ಮಠಗಳು ಕ್ರಿ.ಶ.೭ನೆಯ ದಶಕದ ಜ್ಞಾನಸಂಬಂಧರಿಗೆ ಸಂಬಂಧಿಸಿದವು (ಜ್ಞಾನಸಂಬಂಧರು ತಮಿಳುನಾಡಿನ ಶೈವಧರ್ಮಕ್ಕೆ ಸೇರಿದವರು). ದೇವಾಲಯ ಮತ್ತು ಮಠಗಳು ವಿಭಿನ್ನ, ಅವುಗಳನ್ನು ಒಂದರಿಂದ ಮತ್ತೊಂದನ್ನು ಪ್ರತ್ಯೇಕಿಸುವುದು ಕಷ್ಟಸಾಧ್ಯ. ಅವು ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಕೇಂದ್ರಗಳಾಗಿ ಸಹ ಕಾರ್ಯ ನಿರ್ವಹಿಸಿವೆ. ಮಠಗಳ ವರಮಾನ ಹೆಚ್ಚಾದಂತೆ ಸಮಾಜದ ಬಲಾಢ್ಯ ಸಮುದಾಯಗಳು ಆರ್ಥಿಕವಾಗಿ ಸಶಕ್ತವಾಗುತ್ತಿದ್ದವು. ಇದಕ್ಕೆ ವ್ಯತಿರಿಕ್ತವಾಗಿ ಕೆಳಜಾತಿಗಳ ಸ್ತ್ರೀ ಪುರುಷರನ್ನು ಮಠಗಳ ಚಾಕರಿ ಕೆಲಸಕ್ಕೆ ನೇಮಿಸಿಕೊಳ್ಳುತ್ತಿತ್ತು. ತನಗೆ ತೋಚಿದಾಗ ಅವರನ್ನು ಬದಲಾಯಿಸಿಕೊಳ್ಳಬಹುದಾಗಿತ್ತು ಮತ್ತು ಮಾರಾಟ ಮಾಡಬಹುದಾಗಿತ್ತು. ಈ ವಿಚಾರಕ್ಕೆ ಸಂಬಂಧಿಸಿದಂತೆ ಶೃಂಗೇರಿ ಧರ್ಮಸಂಸ್ಥಾನದಲ್ಲಿ ಮಾರಾಟ ಮಾಡಿದ ಕಡತಗಳಿವೆ.

ಮಠಮಾನ್ಯಗಳು ಮತ್ತು ದೇವಾಲಯಗಳು ಭಕ್ತಿ ಪರಿಕಲ್ಪನೆಯ ತಳಹದಿ ಸಂಸ್ಥೆಗಳಾಗಿ ಕೆಲಸ ಮಾಡಿದವು. ಇವು ಉತ್ತಮೋತ್ತರಿಗೆ ಸೇವೆ ಸಲ್ಲಿಸುವ ಮನೋಭಾವವನ್ನು, ಅವರಿಗೆ ನಿರಾತಂಕವೂ ಫಲಾಪೇಕ್ಷೆ ರಹಿತವೂ ಆದ ಶ್ರಮ ಹಾಗೂ ವಿಧೇಯತಾ ಭಾವವನ್ನು ಸಲ್ಲಿಸುವಂತೆ ಉತ್ತೇಜಿಸಿದವು. ದಾಸ್ಯದ ಮನೋಭಾವವನ್ನು ಸ್ವಂತದ ಲಾಭಕ್ಕಾಗಿ ಬಳಸಿಕೊಂಡ ಪುರೋಹಿತರು ಅಂತ್ಯಜರ ಸೇವೆಯನ್ನು ಕಡ್ಡಾಯವೆಂಬಂತೆ ಬಳಸಿಕೊಂಡರು. ಈ ದಾಸತ್ವ ಪರಂಪರೆಯನ್ನು ಬಹುತೇಕ ಮಠಗಳು ಎತ್ತಿ ಹಿಡಿದಿವೆ. ಇದರಿಂದಾಗಿ ಕೆಲವು ಪ್ರಮುಖ ಕುಶಲಕರ್ಮಿಗಳ ಮತ್ತು ಶ್ರಮಿಕರ ಸೇವೆಯು ಮುಕ್ತವಾಗಿಯೂ ತಲೆತಲಾಂತರದಿಂದಲೂ ಶಾಶ್ವತವಾಗಿ ಮಠಕ್ಕೆ ಸಲ್ಲುವಂತಾಯಿತು. ಮಠಗಳಿಗೆ ರಾಜರು, ಸಾಮಂತರು, ಸಮಾಜದ ಪ್ರತಿಷ್ಠಿತರು ನೀಡುತ್ತಿದ್ದ ದಾನಗಳಿಂದ ಆರ್ಥಿಕವಾಗಿ ಸದೃಢವಾಗುತ್ತಿದ್ದವು. ಮಧ್ಯಕಾಲೀನ ಕರ್ನಾಟದಲ್ಲಿ ಮಠಗಳು ಆಧ್ಯಾತ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಕೊಡುಗೆಗಳನ್ನು ನೀಡಿದರೂ ಆಯಾ ಜಾತಿ ಸಮುದಾಯಗಳಿಗೆ ಸೀಮಿತವಾಗಿ ಕಾರ್ಯ ನಿರ್ವಹಿಸಿದವು. ಆ ಸಮಯದಲ್ಲಿ ಶೈವಧರ್ಮದ ಮಠಗಳು ಮುಖ್ಯವಾಗಿ ಕಾಳಾಮುಖ ಪಾಶುಪತ ಲಾಕುಲೀಶ ಕೇಂದ್ರಗಳು ಹೆಚ್ಚು. ಕೋಡಿಮಠ ಇಲ್ಲಿ ಉಲ್ಲೇಖನೀಯ, ಇದರ ನಿಜವಾದ ಹೆಸರು ಕೇದಾರೇಶ್ವರ ಮಠ. ಅದು ಕೇದಾರೇಶ್ವರ ದೇವಸ್ಥಾನದ ಅಂಗವಾಗಿದ್ದಿತು. ಪ್ರಾಚೀನ ಕರ್ನಾಟದ ಅತಿ ಪ್ರಸಿದ್ಧ ಶೈವಮಠವೆಂದರೆ ಇದೇ. ದೇವಸ್ಥಾನಕ್ಕೆ ನಿಕಟವಾಗಿ ಅನೇಕ ಮಠಗಳಿದ್ದವು. ಸಂಜೀವ ಮಠ, ಲೋಕೇಶ್ವರ ಮಠ ಮುಂತಾದವುಗಳು ಸಾಮಾಜಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಏವೂರು(೧೦೭೮),



ಅಂದೇಲಿ(೧೦೫೦), ಮರ್ತೂರು(೧೧೨೪) ಮಠಗಳು ದೀನದಲಿತರ ಉಪಚಾರಿ ಕೇಂದ್ರಗಳಾಗಿದ್ದವು. ಲೆಂಕ, ಗರುಡ, ತೊತ್ತು, ಗುಡ್ಡ ಹೆಸರಿನ ಶಿಷ್ಯರಿದ್ದುದಾಗಿ ತಿಳಿದು ಬರುತ್ತದೆ. ವೀರಶೈವ ಮಠಗಳಲ್ಲಿ ಎರಡು ವಿಧಗಳಿವೆ. ಗುರುಮಠಗಳು ಹಾಗೂ ವಿರಕ್ತಮಠಗಳು, ಹೀರೇಮಠ, ಸಾಲೀಮಠ, ಓಲೆ ಮಠ ಮುಂತಾದವುಗಳು ಗುರುಪೀಠಗಳ ಶಾಖೆಗಳು. ಇವು ಧಾರ್ಮಿಕ ಮತ್ತು ಶೈಕ್ಷಣಿಕ ಪಾತ್ರಗಳನ್ನು ಮಾತ್ರ ಹೆಚ್ಚಾಗಿ ನಿರ್ವಹಿಸಿವೆ. ಆದರೆ ವಿರಕ್ತ ಮಠಗಳು ಆರ್ಥಿಕವಾಗಿಯೂ ಪಾತ್ರ ವಹಿಸಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತಮ್ಮದೇ ಆದ ಕೊಡುಗೆಯನ್ನು ನೀಡಿದೆ. ಆ ಸಮಯದಲ್ಲಿ ನಾಡಿನಾದ್ಯಂತ ಮಠಗಳು ಕೇವಲ ಸಾಮಾಜಿಕ ಮತ್ತು ಆರ್ಥಿಕ ಕೇಂದ್ರಗಳಾಗಿ ಮಾತ್ರ ನಿರ್ವಹಿಸುವುದರ ಜೊತೆಗೆ ಕೆಳಜಾತಿ ಸ್ತ್ರೀಯರನ್ನು ಪರಿಚಿತ ಕಾರ್ಯಕ್ಕೆ ನೇಮಿಸಿಕೊಳ್ಳುತ್ತಿದ್ದರು. ಇದಕ್ಕೆ ಉತ್ತಮ ಉದಾಹರಣೆ ಕೆಳದಿ ಸಂಸ್ಥಾನ, ಸ್ವಾದಿ ಮತ್ತು ಕೆಳದಿ ಅರಸರ ಕಾಲದಲ್ಲಿ ಸಿರಸಿಯಲ್ಲಿ ೧೦ಮಠಗಳಿದ್ದವು. ಈ ಮೇಲೆ ನೀಡಿದ ವಿವರಗಳಿಂದ ಕೆಲವು ಮಠಗಳು ಜನಸಾಮಾನ್ಯರ ಹಾಗೂ ದಲಿತರ ಶ್ರೇಯಸ್ಸಿಗೆ ಶ್ರಮಿಸಿದೆ ಎಂದರೆ ತಪ್ಪಾಗಲಾರದು.

**ದೇವದಾಸಿ ಪದ್ಧತಿ:**

ದೇವದಾಸಿಯೆಂದರೆ ಭಗವಂತನ ದಾಸಿಯರು, ದೇವರು ಸೇವೆಗೆ ಮೀಸಲಾದವರು ಎಂದರ್ಥ. ದೇವಸ್ಥಾನಗಳಲ್ಲಿ ಗೀತ ನೃತ್ಯಗಳ ಮೂಲಕ ಭಗವಂತ ಸೇವೆಯನ್ನು ಮಾಡಿಕೊಂಡು ಬದುಕುತ್ತಿದ್ದವರು. ಭಾರತದಲ್ಲಿ ಈ ಸಂಪ್ರದಾಯ ಅಷ್ಟೇನು ಪ್ರಾಚೀನವಾದುದ್ದಲ್ಲ ಎಂದು ಅಲೇಕರ್ ಅವರು ಅಭಿಪ್ರಾಯಪಡುತ್ತಾರೆ. ಆ ಅವಧಿಯಲ್ಲಿ ದೇವದಾಸಿ ಒಂದು ಅನಿಷ್ಟ ಪದ್ಧತಿಗಳಲ್ಲಿ ಒಂದಾಗಿತ್ತು. ಆದರೆ, ಸಮಾಜ ಅದನ್ನು ಸ್ವೀಕರಿಸಿತ್ತು. ಇದರಿಂದಾಗಿ ಬಡಜನತೆಯ ವರ್ಗವೊಂದು ಹುಟ್ಟಿಕೊಳ್ಳುವಂತಾಯಿತು. ಅವರನ್ನು ದೇವದಾಸಿಯರು, ಪಾತರದವರು, ಬಸವಿಯರು ಹಾಗೂ ಸೂಳೆಯರು ಎನ್ನುವ ಹೆಸರಿನಿಂದ ಕರೆಯಲಾಯಿತು. ಇವರು ಬೇರೆ ಬೇರೆ ಹಿನ್ನೆಲೆ ಹೊಂದಿದವರಾಗಿದ್ದು, ವೃತ್ತಿಗಳು ಬೇರೆಯಾಗಿದ್ದವು. ಆದರೆ ಹೆಚ್ಚಿನ ಅಧ್ಯಯನಗಳು' ದೇವದಾಸಿ'ಯರೆಂದು ಕರೆದಿವೆ.

ದೇವದಾಸಿ ಪದ್ಧತಿ ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಕಾಲದಿಂದ ಬೆಳಕಿಗೆ ಬಂದಿರಬೇಕು ಎಂದು ಹೇಳಲಾಗಿದೆ. ಬಹುಶಃ ಕ್ರಿ.ಶ ೧೦ನೇ ಶತಮಾನದ ವೇಳೆಗೆ 'ಸೂಳೆ' ಎಂಬ ಶಬ್ದ ಅಂಗಭೋಗ, ರಂಗಭೋಗ ಎಂದು ಕವಲೊಡೆದಿರಬಹುದೆಂದು ತಿಳಿಯುತ್ತದೆ. ಅಂಗಭೋಗದ ಸೂಳೆಗೆ ತೆರೆಯ ಮರೆಯ ಸೂಳೆ, ತೆರೆಯೊಳಗೆ ಬಿಟ್ಟಸೂಳೆ, ಪಿರಿಯರವಾಳ ಸೂಳೆ, ಪೆರ್ಗಡೆವಾಳ ಸೂಳೆ, ಪೆರುಕರಗ, ಭೋಗದ ಸೂಳೆಯರೆಂದು ಹೆಸರಿಸಲಾಗಿದೆ. ರಂಗದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಿದ್ದವಳು ಪಾತ್ರದ ಸೂಳೆ, ಇವರಿಗೆ ಭೂಮಿಯನ್ನು ದಾನ ಮಾಡಿದ ಅನೇಕ ಶಾಸನಗಳು



ಲಭ್ಯವಾಗುತ್ತವೆ. ಕೆಳಜಾತಿಗಳಿಗೆ ಸೇರಿದ ಸೂಳೆಯರು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದ್ದರು. ಈ ವರ್ಗದವರನ್ನು ಪ್ರಭುತ್ವ ದೈಹಿಕವಾಗಿ ಮತ್ತು ಮಾನಸಿಕವಾಗಿ ಶೋಷಣೆ ಮಾಡಿರುವುದು ಸ್ಪಷ್ಟವಾಗಿದೆ. ಇಂದಿಗೂ ಕೂಡ ಸೂಳೆಯ ಬಗೆಗೆ ವೇಶ್ಯಾವಾಟಿಕೆ, ಬಸವಿ ಇತ್ಯಾದಿ ಪದಗಳ ಬಳಕೆಯಾಗುತ್ತಿರುವುದು ಹಾಗೂ ಮುಂದುವರಿಯುತ್ತಿರುವುದು ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ಅಂದಿನ ರಾಜಸೂಳೆಯರ ಬಗ್ಗೆ ಸಹ ಶಾಸನಗಳು ಗಮನ ಸೆಳೆಯುತ್ತವೆ. ಸೂಳೆಯರಲ್ಲಿ ವ್ಯಕ್ತಿಸೂಳೆ,ಏವಸೂಳೆ, ಕಂಬಸೂಳೆ, ಮಾದಡಸೂಳೆ, ಚಾಮರದ ಸೂಳೆ, ಪಾತ್ರದ, ಓಲಗದ, ಬಸವಿ, ನಾಟವ ಎಂದು ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ರಂಗದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದವಳು ಪಾತ್ರದ ಸೂಳೆ, ಇವರಿಗೆ ಭೂಮಿಯನ್ನು ದಾನ ಮಾಡಿದ ಅನೇಕ ಶಾಸನಗಳು ಲಭ್ಯವಾಗುತ್ತವೆ. ಪಾತ್ರದ ಮಲ್ಲವೆಯ ವಿಷಯ ಬಳ್ಳಿಗಾವೆಯ ಶಾಸನದಲ್ಲಿ ಮದ್ದಳೆ ಮಾದಿಗನೊಂದಿಗೆ ಅವಳಿಗೆ ದೇವತ ವೃತ್ತಿಯಾಗಿ ಎರಡು ಮತ್ತರು ಗದ್ದೆ, ೧೦ ಗದ್ಯಾಣ ಹಣ, ಪುರದಲ್ಲಿ ಮೂರು ಮನೆಗಳನ್ನು ಬಿಟ್ಟುಕೊಟ್ಟ ವಿಷಯವಿದೆ. ಹೊಯ್ಸಳರ ಕಾಲದ ಒಂದು ಶಾಸನದಲ್ಲಿ ಪಾತ್ರದ ಮಣಿಗಾರ ಮಾದವ್ವ,

ಆನೆಯ ಮಾಳವ್ವ, ನಾಗೌವ್ವ, ಚಂದವ್ವ, ಗೋಡವ್ವೆ, ಪಾತ್ರದ ಚೆಣ್ಣಯನ ಮಾದವೆ, ವಿಸ್ಸವೆ ಮುಂತಾದವರನ್ನು ಹೆಸರಿಸಬಹುದು. ದೇವನ ಪ್ರೀತ್ಯರ್ಥವಾಗಿ ಸಂಗೀತ ಸೇವೆ ಸಲ್ಲಿಸುವವರನ್ನು ಶಾಸನಗಳ ಬಲಗದ ಸೂಳೆಯೆಂದು 'ಪಾಡುವವರು' ಎಂದು ಕರೆದಿವೆ. ಇವರಲ್ಲಿ ವಂಶಗ ಕೊಳಲು ನುಡಿಸುವವ, ಪೆರಕಾರ(ಹಲಗೆ ನುಡಿಸುವವ), ಮದ್ದಳಿಗೆ ಮೃದಂಗ ನುಡಿಸುವವರು ಮುಂತಾದವವರು ಇರುತಿದ್ದರು. ಕಲಿದೇವರ ತೊತ್ತು ನಾಗವ್ವಯ ಮಗಳು ಹಾಡುವ ಕಾಮವೆಂಬ ಉಲ್ಲೇಖ ಬಾಗಳಿ ಶಾಸನದಲ್ಲಿ ಕಂಡುಬರುತ್ತದೆ. ನಾಗಾವಿಯ ಮಧುಸೂಧನ ದೇವಾಲಯದ ನಾಲ್ವರು ಮದ್ದಳೆಕಾರರಿಗೆ ೪೦ ಮತ್ತರು ಬಾಳೇಶ್ವರದ ಪರೆಕಾರರಿಗೆ ೧೨ ಮತ್ತರು ಭೂಮಿ ನೀಡಿರುವುದು. ಕೆಳಜಾತಿಯ ಹೆಂಗಸರು ಕೇವಲ ಜೀವಿಕೆಗಾಗಿ ತಮ್ಮ ಗಂಡಸರೊಂದಿಗೆ ಸರಿಸಮಾನರಾಗಿ ದುಡಿಯಬೇಕಾಗಿತ್ತು. ಇವರು ಶ್ರಮಜೀವಿಗಳು ಮತ್ತು ಪರಾವಲಂಬಿಗಳು. ಅವರಲ್ಲಿ ಕೆಲವರು ವೇಶ್ಯೆಯರು. ಸರ್ಕಾರಕ್ಕೆ ತೆರಿಗೆಯನ್ನು ಕಟ್ಟುತ್ತಿದ್ದರು. ದೇವದೇವತೆಯರ ಅನುಗ್ರಹವನ್ನು ಪಡೆಯುತ್ತಿದ್ದರು. ಅವರಲ್ಲಿ ಕೆಲವರು ದೇವಾಲಯ ಅಥವಾ ಮಠಗಳಿಗೆ ಸೇರಿದವರು. ದೇವಾಲಯಗಳಿಗೆ ಸೇರಿದರೂ ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ಅವಳ ವೃತ್ತಿಯು ವ್ಯಾಪಾರವಾಗಿ ಕೆಲವೊಮ್ಮೆ ಮಾರ್ಪಾಡು ಆಗುತ್ತಿತ್ತು. ಮೇಲ್ಜಾತಿಗಳ ಪುರುಷರು ಇವರನ್ನು ಬಳಸಿಕೊಳ್ಳುತ್ತಿದ್ದರು. ಭೇಧ ಕಲ್ಪಿಸುವಂತಿರಲಿಲ್ಲ. ಮೇಲು-ಕೀಳು ಎಂದು ನೋಡಿ ಆರಿಸಿಕೊಳ್ಳುತ್ತಿರಲಿಲ್ಲ. ದೇವಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜನಗಳಿಗೆ ಕಲಚೂರಿ ಚಕ್ರವರ್ತಿಯ ಒಂದು ಶಾಸನವು ಮಹಾರಾಜನಗಳ ಸನ್ನಿದಾನದಲ್ಲಿ ಹರಿಹರ ದೇವರಿಗೆ,



ಸೂಳೆಗೇರಿಗೆ ಅಂಗಭೋಗ ರಂಗಭೋಗಕ್ಕೆ ತಮ್ಮ ಶ್ರೇಯೋಭಿವೃದ್ಧಿಗಾಗಿ ಎಡಹಳ್ಳಿಗೇರಿಯಲ್ಲಿ ಕೆಲವು ದಾನಗಳನ್ನು ಬಿಡುತ್ತಾರೆ. ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳು ಕೆಳಜಾತಿ ಮತ್ತು ದಲಿತ ಸಮುದಾಯಗಳಿಗೆ ಶೋಷಣೆಯ ಕೇಂದ್ರವಾಗಿ ಕಾಣಿಸಿಕೊಂಡಿವೆ ಎಂದರೆ ತಪ್ಪಾಗಲಾರದು. ಶ್ರಮ ಸಮುದಾಯಗಳು ದೇವಾಲಯಕ್ಕೆ ಸಂಬಂಧಿಸಿದ ಪರಿಚಾರಿಕ ಕೆಲಸಗಳನ್ನು ನಿರ್ವಹಿಸಬೇಕಾಗಿತ್ತು. ಸಾಮಾನ್ಯ ಜನತೆಯನ್ನು ದೇವಾಲಯದ ಗರ್ಭಗೃಹದಿಂದ ದೂರವಿರುವಂತೆ ನಿರ್ಬಂಧಿಸಲಾಗಿತ್ತು. ಇಲ್ಲಿಯೂ ಸಹ ಅಸ್ಪೃಶ್ಯ ಸಮುದಾಯಗಳ ಬಳಕೆಯಲ್ಲಿ ಶ್ರೇಣೀಕರಣವನ್ನು ಕಾಣಬಹುದು. ಆ ಮುಖಾಂತರ ರೂಢಿ-ಸಂಪ್ರದಾಯಗಳು ಹಾಗೆಯೇ ಮುಂದುವರಿಯುವಂತೆ ಸಹಾಯಕವಾಗುತ್ತಿತ್ತು. ಹೀಗಿರುವಾಗ ಮಧ್ಯಕಾಲೀನ ಸಮಾಜದ ಕೆಲವು ಪಶುಪಾಲಕ ಸಮಾಜಗಳು ಮೇಲ್ವರ್ಗದ ರೂಢಿ-ಸಂಪ್ರದಾಯಗಳನ್ನು ಅನುಸರಿಸಲು ಯತ್ನಿಸಿದವು. ಆ ಮುಖಾಂತರ ಸಮಾಜದಲ್ಲಿ ಉನ್ನತೀಕರಣಕ್ಕೆ ಯತ್ನಿಸಿರುವುದನ್ನು ಕಾಣಬಹುದು. ಕುರುವ ಸಮುದಾಯವನ್ನು ಇಲ್ಲಿ ಗಮನಿಸಬಹುದು.

************

## ೧೦. ಉಲಿಲಿಂಗಪೆದ್ದಿ : ಮಾನವೀಯ ಮೌಲ್ಯಗಳು

**- ಶಿವಲಿಂಗಪ್ಪ ಆಯ್. ಭಂಡಾಲಿ**

ವಚನ ಸಾಹಿತ್ಯದ ಸಂದರ್ಭದಲ್ಲಿ ಮಾನವೀಯ ಮೌಲ್ಯಗಳ ಪರಿಕಲ್ಪನೆ ಭಾವಪೂರ್ಣವಾದುದ್ದಾಗಿದೆ. ಅಷ್ಟೇ ಅಲ್ಲ, ನೈತಿಕ ತಳಹದಿಯ ಮೇಲೆ ನಿರ್ಮಿತವಾದದ್ದು. ವಿಶ್ವದ ಜನತೆಯ ಉದ್ಧಾರವನ್ನು ಬಯಸಿದ ಬಸವಣ್ಣನವರ "ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ" ಎಂಬ ನೀತಿ ಬೋಧನೆಯಲ್ಲಿ, ಇಡೀ ವಿಶ್ವವನ್ನೇ ಒಂದು ಕುಟುಂಬದೊಳಗಿಟ್ಟು ನೋಡುವ ರಕ್ತ ಸಂಬಂಧದಂತಹ ಬಾಂಧವ್ಯ ಕಂಡುಬರುತ್ತದೆ. ಮಾನವ ಜೀವನದಲ್ಲಿ ಕಷ್ಟ-ಕಾರ್ಪಣ್ಯಗಳು, ಎಡರು-ತೊಡರುಗಳು ಒಂದೊದಾಗುವುದು ಸಹಜ. ಇಂತಹ ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ವ್ಯಕ್ತಿಯು ದುಷ್ಟನಾಗುತ್ತಾನೆ. ಇಂತಹ ಸಂದರ್ಭದಲ್ಲಿ ಮಾನವೀಯ ಮೌಲ್ಯಗಳು ಗಾಳಿಗೆ ತೂರಿಬಿಟ್ಟು ಕಸವಾಗಿ ಕಂಡುಬಂದರೂ, ವ್ಯಕ್ತಿ ಸುಸಂಸ್ಕೃತ ಬದುಕು ನಡೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಮಾನವೀಯತೆ ಎಂಬುದು ವ್ಯಕ್ತಿ ಮತ್ತು ವ್ಯಕ್ತಿಗಳಲ್ಲಿಯ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಸ್ವಾರ್ಥ, ಮೋಹ, ಮದ, ಮತ್ಸರಾದಿಗಳನ್ನು ಕಳೆಯುತ್ತದೆ. ಅಜ್ಞಾನ- ಅಧಃಕಾರದಲ್ಲಿ ಮುಳುಗಿ ತೊಳಲಾಡುವವರನ್ನು ಬೆಳಕಿನೆಡೆಗೆ ತರಲು ಪ್ರಯತ್ನಿಸುತ್ತದೆ. ಹೀಗೆ ಸಹಾನುಭೂತಿ, ಅನುಕಂಪ, ಪ್ರೀತಿ, ಉತ್ಕಟವಾದ ಕಳಕಳಿಯನ್ನು ವ್ಯಕ್ತಮಾಡುವ ಗುಣ ಮಾನವೀಯ ಮೌಲ್ಯಗಳಲ್ಲಿದೆ. ಇಂತಹ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕುವ ಪರಿ ನಿಜವಾದ ಮಾನವ ಧರ್ಮವಾಗಿದೆ. ಈ ಮಾನವತಾವಾದಕ್ಕೆ ಬಹುವರ್ಷಗಳ ಸುದೀರ್ಘ ಇತಿಹಾಸವಿದೆ. ಪಾಶ್ಚಿಮಾತ್ಯ ದೇಶದ ಜೀಸಸ್ ಮತ್ತು ಭಾರತದ ಬುದ್ಧ ಮಾನವತಾದಿಗಳಾಗಿರುವಂತೆ, ಹನ್ನೆರಡನೆಯ ಶತಮಾನದ ಶಿವಶರಣರು ಸಹ, ಮಹಾಮಾನವತಾವಾದವನ್ನು ಮೆರೆದಿದ್ದಾರೆ. ಅಂತವರಲ್ಲಿ ಶರಣರ ಕೇಂದ್ರ ಬಿಂದುವಾದ ಬಸವಣ್ಣನಲ್ಲದೆ ಅಲ್ಲಮಪ್ರಭು, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಾದರ ಚೆನ್ನಯ್ಯ, ಮಾದರ ದೂಳಯ್ಯ, ಸಮಗಾರ ಹರಳಯ್ಯ, ಉರಿಲಿಂಗ ಪೆದ್ದಿಯಂತಹ ಹಲವು ಜನ ಶಿವಶರಣರು ಮುಖ್ಯರು.

ವಚನಕಾರ ಉರಿಲಿಂದಪೆದ್ದಿ ಮಾನವೀಯ ಮೌಲ್ಯಗಳಿಗೆ ಬೆಲೆ ನೀಡಿದ್ದನು ಎಂಬುದಕ್ಕೆ ಅವರ ವಚನಗಳೇ ಸಾಕ್ಷಿ. ಈ ಮಾನವೀಯ ಮೌಲ್ಯಗಳ ಮೂಲ ಉದ್ದೇಶವೇ ಜಗತ್ತನ್ನು ಉದ್ಧರಿಸುವುದು. ಪ್ರತಿಯೋರ್ವ ವ್ಯಕ್ತಿ ತನ್ನಲ್ಲಿಯ ಸ್ವಾರ್ಥವನ್ನು



ತೊರೆದು ಪರರ ಸುಖ-ಸಂತೋಷಕ್ಕಾಗಿ ಹಾತೊರೆಯುವುದರಲ್ಲಿ ತಮ್ಮ ಸೌಖ್ಯವನ್ನು ಅರಸುವುದು ನಿಜವಾದ ಮಾನವೀಯ ಗುಣವಾಗಿತ್ತು. ಉರಿಲಿಂಗ ಪೆದ್ದಿಯಂತೂ ಜನಪರ ಸೇವೆಯಲ್ಲಿಯೇ ಮುಕ್ತಿಯನ್ನು ಕಾಣಲು ಪ್ರಯತ್ನಿಸಿದವನು. ಅಂತೆಯೇ ದೈವವನ್ನು ನಂಬಿ ಕೆಟ್ಟುಹೋಗುವ ಪರಿಯನ್ನು ಖಂಡಿಸುತ್ತಾ, ಮುಕ್ತಿಯ ಮಾರ್ಗವನ್ನು ಸೂಚಿಸಿದ್ದಾನೆ.

ಆವ ಸಿದ್ಧಿಗಳಿಂದಲೂ ಫಲವಿಲ್ಲ;

ಏನನೋದಿ ಏನಕೇಳಿ ಏನ ಹೇಳಿಯು ಫಲವಿಲ್ಲ.

ಇವು ಭಕ್ತಿಯೊಳಗಲ್ಲ, ವ್ಯಕ್ತಿಗೆ ಸಲ್ಲವು,

ಇದನಂದು ಆವನಾನೊಬ್ಬನು ಲಿಂಗವಂತು ಲಿಂಗಾರ್ಚನೆಯಂ ಮಾಡಿ,

ಗುರುಲಿಂಗ ಜಂಗಮಕ್ಕೆ ತನು, ಮನ, ಧನ ಸರ್ವಸಿದ್ಧಿ,

ಅದೇ ಸರ್ವ ಕಾರಣವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ಎಂದು ಅರಿತವನು. ಮೂಲತಃ ಅಸ್ಪೃಶ್ಯನಾಗಿ ಹುಟ್ಟಿದ್ದರು ತನ್ನ ಭಕ್ತಿ, ನಿಷ್ಠೆ, ಶ್ರದ್ಧೆಯಿಂದ ಅದನ್ನು ಸಾದಿಸಿಯೇ ತೀರುವೆನೆಂಬ ಛಲದಿಂದಾಗಿಯೇ ಒಂದು ಮಠದ ಪೀಠಾಧಿಕಾರಿಯಾಗಿದ್ದನು. ಮಾನವೀಯ ಎಂದು ಪದ ಇಡೀಸಮಷ್ಟಿ ಪ್ರಜ್ಞೆಯನ್ನು ವ್ಯಕ್ತಮಾಡುತ್ತದೆ. ಈ ಗುಣಗಳಿಂದಾಗಿಯೇ ಸ್ಥಾಪಿತ ಮೌಲ್ಯಗಳೇ ಭದ್ರವಾದ ನೆಲೆನಿಂತ ಹನ್ನೆರಡನೆಯ ಶತಮಾನದಲ್ಲಿ ಅಸ್ಪೃಶ್ಯ ಶಿವಶರಣನೊಬ್ಬನು ಪೀಠಾಧಿಪತಿಯಾಗಲು ಸಾಧ್ಯವಾಯಿತು. ಡಾ.ಎಸ್. ವಿದ್ಯಾಶಂಕರ ಹೇಳುವಂತೆ, "ಜ್ಞಾನಕ್ಕೆ ಉಚ್ಚ-ನೀಚರೆಂಬ ಭೇದ ಭಾವವಿಲ್ಲ. ವಯಸ್ಸಿನ ಕಟ್ಟುಪಾಡುಗಳಲ್ಲಿ ಸಂಸಾರ ಬಂಧುವಿನಲ್ಲಿ, ಜ್ಞಾನ ಪಿಪಾಸುವಿಗೆ ಬೇಕಾದದ್ದು ಮುಖ್ಯವಾಗಿ ಶ್ರದ್ಧೆ" .

ಉರಿಲಿಂಗ ಪೆದ್ದಿಯ ಮಾನವೀಯ ನಡೆ ಎಲ್ಲರಂಥದ್ದಲ್ಲ. ಭಕ್ತಿಯೊಳಗೆ ಮಿಂದು ಓಲಾಡುವಂಥಹದು. ಅಂತೆಯೇ ಉರಿಲಿಂಗಪೆದ್ದಿ ಕರ್ಮವನ್ನು ಭಜಿಸದೆ, ಒಳ್ಳೆಯ ಕಾರ್ಯಗಳಿಗಾಗಿ ಚಿಂತಿಸುತ್ತಾನೆ. ಗುರು-ಲಿಂಗ ಜಂಗಮವು ಪ್ರತಿಯೊಬ್ಬರ ಮನವನ್ನು ಬೆಳಗುವ ದಿವ್ಯ ದೀವಿಗೆಗಳಾಗಿ ಕಂಡಿವೆ.

ಉರಿಲಿಂಗ ಪೆದ್ದಿ ವ್ಯರ್ಥವಾಗಿ ಕಾಲ ಕಳೆಯುವವರನ್ನು ದೂಷಿಸುತ್ತಾನೆ. ಭೂಮಿಯ ಮೇಲೆ ಹುಟ್ಟಿಬಂದ ಪ್ರತಿಯೊಬ್ಬರು ಸೃಜನಾತ್ಮಕ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಸುಖವನ್ನು ಸವಿಯಬೇಕು. ಅರ್ಥವಿಲ್ಲದ ಆಚರಣೆಗಳಿಗೆ ಜೋತುಬಿದ್ದು, ನಮ್ಮ ಬದುಕನ್ನು ಹಾಳು ಮಾಡಿಕೊಳ್ಳುವುದರಲ್ಲಿ ಯಾವ ಅರ್ಥವಿಲ್ಲ ಎನ್ನುವ ಪೆದ್ದಿ, ಈ ಜಗತ್ತೆಂಬುದು 'ಮಾನವರ ಮನೆ' ಎಂದು ನಂಬಿದ್ದನು. ಅವನು ತನ್ನ ಸುಖ-ಸಮೃದ್ಧಿಯನ್ನು ಬಯಸಲಿಲ್ಲ. ನಡೆ-ನುಡಿಗಳೆರಡನ್ನು ಒಂದಾಗಿಸಿ ಅವುಗಳನ್ನು ನಿಷ್ಠೆಯಿಂದ ಪಾಲಿಸಿದ. ಅಂತೆಯೆ ಸ್ವ-ಸುಖ, ಪರಸುಖವನ್ನು ಸಾಧಿಸಿದಾಗ ಮಾತ್ರ ಜೀವನ ಸಾರ್ಥವಾಗುತ್ತದೆ ಎಂದು ನಂಬಿದ್ದನು.

ಉರಿಲಿಂಗಪೆದ್ದಿ ಏಕದೇವೋಪಾಸಕನು, ದೇವರಲ್ಲಿ ದೃಢಭಕ್ತಿಯುಳ್ಳವ, ಅಂತೆಯೇ ಧರ್ಮದ ಭದ್ರ ಬುನಾದಿಯ ಮೇಲೆ ಮಾನವೀಯ ಮೌಲ್ಯಗಳ ಮಹಾಸೌಧವನ್ನೇ



ಕಟ್ಟಿದನು. ಮಾನವೀಯ ಗುಣಗಳು ಎಲ್ಲಿ ಅಸ್ತಿತ್ವದಲ್ಲಿರುತ್ತವೆಯೋ ಅಲ್ಲಿ ಧರ್ಮವಿರುತ್ತದೆ ಎನ್ನುತ್ತಾನೆ.

ಅನ್ಯರು ಆಯುಷ್ಯ(ಭವಿಷ್ಯ) ಭೋಗಾದಿಭೋಗಂಗಳ

ಕೊಟ್ಟರೆಂ ಸಂತೋಷಬೇಡ, ಕೊಡರೆಂಬ ಕ್ಲೇಶ ಬೇಡ.

ಶಿವಾಧೀನವೆಂಬುದನರಿದು,

'ತೇನ್‌ನಾ ತೃಣಾಗ್ರಮಪಿನ ಚಲತಿ'

ಎಂಬುದನರಿದು ಪರಿಣಾಮಿಸು.

ಪರಿಣಾಮದಿಂ ಲಿಂಗವನರ್ಚಿಸು ಪೂಜಿಸು

ಕೇವಲ ವಿಶ್ವಾಸಂ ಮಾಡಿದಡೆ ಬೇಡಿತ್ತ ಕೊಡುವ

ಇಹ ಪರ ಸಿದ್ಧಿ, ನೆರೆ ನಂಬು ನಂಬು ಮನವೇ

ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ."

ಮನದ ಕಳೆಯನ್ನು ಕಳೆಯಬೇಕು, ಒಳ್ಳೆಯ ಬೆಳೆಯನ್ನು ಬೆಳೆಯಬೇಕು. ಅದು ಅಂತಃಕರಣ ಶುದ್ಧಿಯಿಂದ ಮಾತ್ರ ಸಾಧ್ಯ. ಮನುಷ್ಯ ತನ್ನ ಅಂತರಾತ್ಮವನ್ನು ತೆರೆದಿಟ್ಟ ಶುದ್ಧ ಮನಸ್ಸಿನಿಂದ ಭಕ್ತಿಭಾವದಿಂದ ಶಿವನನ್ನು ಆರಾಧಿಸಿದಾಗ ಮಾತ್ರ ಇಷ್ಟಸಿದ್ಧಿ ನೆರವೇರುತ್ತದೆ ಎಂಬ ಆಶಯ ಉರಿಲಿಂಗ ಪೆದ್ದಿಯದು. ಅರಿವಿನ ಪಥದಲ್ಲಿ ಮುನ್ನಡೆದ ಅವನ ಆಚರಣೆಯಲ್ಲಿ ವಿಶಿಷ್ಟತೆ ಇದೆ. ಏನನ್ನಾದರೂ ಉಪದೇಶಿಸುವ ಮೊದಲು ಅದನ್ನು ಅಳವಡಿಸಿಕೊಂಡು ಅನುಭವಿಸುತ್ತಿದ್ದನು. ಹೀಗಾಗಿ ತಮ್ಮನ್ನು ತಾವೇ ಅವಲೋಕನ ಮಾಡಿಕೊಂಡು ಬದುಕಿನ ಮಾದರಿಯ ವ್ಯಕ್ತಿ ಅವನು. ತಮ್ಮ ಜೀವಿತಾವಧಿಯಲ್ಲಿ ಅವರದೇ ಆವರಣಗಳನ್ನು ಮೆಟ್ಟಿನಿಂತವನು. ಇಂತಹ ಆತ್ಮಶೋಧನೆ ಉರಿಲಿಂಗಪೆದ್ದಿಯ ಮಾನವೀಯ ಬದುಕಿಗೆ ಕನ್ನಡಿ ಹಿಡಿದಂತಿದೆ.

ಜಾತಿಯನ್ನೇ ಭೇದಿಸಿ ಮಾನವೀಯತೆಗೆ ಮಹತ್ವವನ್ನು ನೀಡಿದ ಉರಿಲಿಂಗ ಪೆದ್ದಿ, ಜಾತಿಭೇದಗಳ ಕಲ್ಪನೆಯನ್ನು ಕನಸಿನಲ್ಲೂ ಕಂಡವನಲ್ಲ. ಸ್ವತಃ ಅಸ್ಪೃಶ್ಯನಾಗಿಯೂ ಅದ್ಯಾವುದರ ಅಳುಕು ಅವನಿಗಿಲ್ಲ. ಶಿವಭಕ್ತನೆಂಬ ಕುಲಜನೇ ಕುಲಜನು ಎಂದು ನಂಬಿದ್ದನು.

ಮಹಾದೇವನೇ ಶ್ರೀಗುರು ಕಾಣಿರಣ್ಣಾ

ಆ ಶ್ರೀಗುರುವಿನ ಕರ ಕಮಲದಲ್ಲಿ ಉದ್ಭವಿಸಿದ

ತಚ್ಛಿಷ್ಯನೇ ಮಹಾಪ್ರಾಣನು. ಇಂತೆಂಬುದು ಹುಸಿಯಲ್ಲಿ

ಜಾತಿ, ವಿಜಾತಿ ಎಂದು ಅಷ್ಟದಶಾಜಾತಿಯೊಳಗೆ ಇಕ್ಕಲಾಗದು

ಅಷ್ಟದಶಾಜಾತಿಯಾಗೊಂದು ಭಾವಿಸಲಾಗದು.

ಆಮಹಿಮನೇ ಸಕ್ಕುಲಜನು."

ಉರಿಲಿಂಗ ಪೆದ್ದಿಯ ದೃಷ್ಟಿಯಲ್ಲಿ ಲಿಂಗ ಒಂದು ಸಂಕುಚಿತ ಮನೋವೃತ್ತಿಯ ಧರ್ಮಸಂಕೇತವಾಗದೆ, ಸರ್ವಸಮಾನತೆಯ ಸಂಕೇತವಾಗಿದೆ. ಅದು ಎಲ್ಲಾ ಜೀವಿಗಳನ್ನು ಒಳಗೊಂಡ ಮಾನವ ಲೋಕಕ್ಕೆ ಆದರ್ಶ ಪ್ರಾಯವಾದ ಮೌಲ್ಯಗಳನ್ನು, ಸ್ವಾತಂತ್ರ್ಯ,



ಸರ್ವಸಮಾನತೆಗಳನ್ನು ಎತ್ತಿಹಿಡಿಯುವ ಸಾಧನವಾಗಿ ತೋರಿದೆ. ಕಾಯಕ ಮತ್ತು ದಾಸೋಹ ತತ್ವಗಳು ಒಂದು ಜಾತಿ, ಧರ್ಮಗಳಿಗೆ ಸಂಬಂಧಿಸಿದವುಗಳಲ್ಲ, ಸರ್ವತೋಮುಖ ಶ್ರೇಯೋಭಿವೃದ್ಧಿಯನ್ನು ಬಯಸುವ ಸಮಾಜವಾದದ ಆದರ್ಶ ಗುಣಗಳು, ಅವನ ದೃಷ್ಟಿಯಲ್ಲಿ ಗುರು-ಲಿಂಗ-ಜಂಗಮ ವ್ಯಾಪಕಾರ್ಥವನ್ನು ಪಡೆದುಕೊಂಡಿವೆ. ಇದನ್ನು ಲೆಕ್ಕಿಸದೆ ಶಿವಶರಣರು ಸಂಕುಚಿತಾರ್ಥವನ್ನು ಕಲ್ಪಿಸಿ, ತಮ್ಮ ಮನಬಂದಂತೆ, ಭಕ್ತಿಹೀನನಾಗಿ ನಡೆದರೆ ಮುಂದಿನ ಪರಿಣಾಮ ಏನಾಗುವುದೆಂಬುದನ್ನು ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ.

ಶಿವ ಶಿವಾ, ಭಕ್ತಹೀನನ ಬಟ್ಟೆಯಲ್ಲಿ ಕಂಡು

ನೆಟ್ಟನೆ ಶಿವಭಕ್ತಿ ಜೋಹಾರ ಎಂದಡೆ,

ಸುರಪಾನದಲ್ಲಿ ಮಜ್ಜನ ಮಾಡಿದಂತಾಯಿತ್ತು ಅವನ ಶಿವಪೂಜೆ.

ಕಟ್ಟಿದ ಕರೆಯನೊಡೆದಂತಾಯಿತ್ತು ಅವನ ಶಿವಪೂಜೆ.

ಹೇಲೋಳಗಣ ಹುಳವಕೋಳಿ ಕೆದರಿದಂತಾಯಿತ್ತು ಅವನ ಶಿವಪೂಜೆ.

ಒಣಗಿದೆಲುವ ಸೊಣಗ ಕಡಿದು

ತನ್ನ ರಕ್ತವ ತಾನೇ

ಭುಂಜಿಸಿದಂತಾಯಿತ್ತು. ಅವನ ಶಿವಪೂಜೆ

ಅವನ ಸರ್ವಾಂಗವು ಪಾಕುಳದ ಕುಳಿಯಾದಂತಾಯಿತು.

ಕನ್ನಡಿಯ ಮೇಲೆ ಉದ್ದುರುಳಿದಂತಾಯಿತ್ತು ಅವನ ಶಿವಪೂಜೆ.

ಲೋಳಸರದ ಮೇಲೆ ಬಂಡಿ ಹರಿದಂತಾಯಿತ್ತು ಅವನ ಶಿವಪೂಜೆ.

ಎಂದು ಹಲವು ಉದಾಹರಣೆಗಳನ್ನು ನೀಡುವ ಉರಿಲಿಂಗ ಪೆದ್ದಿ, ತನುವಿನೊಳಗೆ ಹುಸಿ ತುಂಬಿಕೊಂಡ ವ್ಯಕ್ತಿಗೆ ದೀಕ್ಷೆ ನೀಡಿದರೂ ಅವನು ಶಿವಭಕ್ತನಾಗಲಾರನೆಂದು ಸಂಶಯ ಪಡುತ್ತಾನೆ. ಮನುಷ್ಯನ ಮನಸ್ಸು ಯಾವತ್ತೂ ಚಂಚಲ, ಅದು ಒಂದೆಡೆ ಸ್ಥಿರವಲ್ಲ. ಹಲವು ರೆಂಬೆಗೆ ಹಾರುವ ಮಂಗನಂತಿದ್ದು, ಅದನ್ನು ನಿಗ್ರಹಿಸುವುದು ಬಲು ಕಷ್ಟ. ಮಂಗನಂತಹ ಮನಸುಳ್ಳವನು ಭಕ್ತನ ವೇಷ ಹಾಕಿದರೇನು? ಲಿಂಗ ಧರಿಸಿದರೇನು?ವಿಭೂತಿ, ರುದ್ರಾಕ್ಷಿಯ ತೊಟ್ಟರೇನು? ಮೊದಲಿನ ಆವರಣಗಳನ್ನು ಬಿಡಲು ಆದೀತೆ? ಇಂತಹ ಅವಗುಣಗಳನ್ನು ಅಳಿಸಿ ಹಾಕಿದಾಗ ಮಾತ್ರ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯ ಎಂದು ನಂಬಿದ್ದ.

ಮನುಷ್ಯ ಧರ್ಮಭೀರುವಾಗಬೇಕು. ನೀತಿವಂತನಾಗಬೇಕು. ದೇವರಲ್ಲಿ ನಿಸ್ಸಿಮ ಭಕ್ತಿಯುಳ್ಳವನಾಗಬೇಕು, ಅಂತರಂಗ, ಬಹಿರಂಗ ಶುದ್ಧಿಗೊಂಡಾಗ ಮಾತ್ರ, ಭಕ್ತನಾಗಲು ಸಾಧ್ಯ. ಮನುಷ್ಯ ಅರಿವಿನ ಕಣ್ಣು ತೆರೆದು, ತನ್ನ ತಾನು ಅರಿತು ಜ್ಞಾನಿಯಾಗಬೇಕು. ಆ ಜ್ಞಾನದ ಬೆಳಕಿನಲ್ಲಿ ನಡೆಯಬೇಕು. ವಿಚಾರದಿಂದ ಕೂಡಿದ ಆಚಾರ ಗಟ್ಟಿಕೊಂಡು ಅನುಭಾವಿಯಾಗಬೇಕು. ಇಂತಹ ಒಳ್ಳೆಯ ವಿಚಾರಗಳನ್ನು ಜವಮನದಲ್ಲಿ ತುಂಬಿ ಬೆಳೆಸಲು ಶ್ರಮಿಸಿದ ಉರಿಲಿಂಗಪೆದ್ದಿ, ಹುಟ್ಟಿನಿಂದ ಅಸ್ಪೃಶ್ಯನಾಗಿದ್ದರೂ ಸ್ಪೃಶ್ಯನಾಗಿ ಮೆರೆದಿದ್ದಾನೆ. ಆವರಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮಧ, ಮತ್ಸರಾದಿಗಳನ್ನು ಮೀರಿ, ಶಿವಗುಣಗಳನ್ನು ಬೆಳೆಸಿಕೊಂಡು ಉರಿಲಿಂಗ ಪೆದ್ದಿಗೆ

ಲಿಂಗಾಂಗ ಸಾಮರಸ್ಯ ಸುಲಭವಾಗಿ ದಕ್ಕಿದ್ದಲ್ಲ. ದಿನಂಪ್ರತಿ ಊಟ, ನಿದ್ರೆಗಳ ಪರಿವೆಯಿಲ್ಲದೆ, ಸತತ ಅಭ್ಯಾಸಿಯಾಗಿ ದುಡಿದು ಜ್ಞಾನದಾಹವನ್ನು ಹಿಂಗಿಸಿಕೊಂಡವನು. ಇಷ್ಟೇ ಅಲ್ಲ,ವೇದ, ಆಗಮ, ಉಪನಿಷತ್ತು, ಪುರಾಣಸ್ಮೃತಿ ಶಿವಾದ್ವೈತ ಸಿದ್ಧಾಂತಗಳನ್ನು ಆಳವಾಗಿ ಅಭ್ಯಾಸಿಸಿದ, ಸಂಸ್ಕೃತವನ್ನು ಬಲ್ಲ ಬಹುದೊಡ್ಡ ವಿದ್ವಾಂಸ, "ಅಸ್ಪೃಶ್ಯನಾಗಿದ್ದ ಉರಿಲಿಂಗಪೆದ್ದಿಯ ವಿದ್ವತ್ತು ಎಂಥ ದಲಿತ ವಿರೋಧಿಯನ್ನು ಚಕಿತಗೊಳಿಸುತ್ತದೆ." ಅಸ್ಪೃಶ್ಯನಾಗಿ, ಗೃಹಸ್ಥನಾಗಿ ಲಿಂಗವಂತನಾಗಿ ತಾನು ಕಂಡುಂಡ ಅನುಭವದ ರಸವನ್ನು ಜನತೆಗೆ ಹಂಚಲು ಪ್ರಯತ್ನಿಸಿದ್ದನು. ತನ್ನಂತೆಯೇ ಸಮಾಜದ ಪ್ರತಿಯೊಬ್ಬರು ಸಜ್ಜನರಾಗಿ ಬಾಳಲು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳುವಂತೆ ಪ್ರೇರೇಪಿಸಿದನು. ಹನ್ನೆರಡನೆಯ ಶತಮಾನ ಕೊನೆಯಲ್ಲಿ ಬಾಳಿ ಬದುಕಿದ್ದ ಉರಿಲಿಂಗ ಪೆದ್ದಿಯ ಈ ನೀತಿ ಬೋಧಿಸಿದ ತತ್ವಗಳಲ್ಲೂ ನಿಸ್ವಾರ್ಥಸೇವೆ, ನೈತಿಕ ಬದುಕು ಮತ್ತು ಮಾನವೀಯ ಗುಣಗಳು ಪ್ರಧಾನ ಪಾತ್ರ ವಹಿಸುತ್ತವೆ.

*********

## ೧೧. ದಲಿತ ಮಹಿಳೆ ಮತ್ತು ಜಾಗತಿಕ ವಿವೇಕ

**- ಹುಲಿಕುಂಟೆ ಮೂರ್ತಿ**

ಭಾರತದ ಮಟ್ಟಿಗೆ ಸ್ತ್ರೀವಾದದ ಬಗೆಗಿನ ಅದು ಮಾತೆಂದರೆ, ಗಾಯದ ನೋವಿನ ಬದಲಾಗಿ ಅದು ಉಳಿಸಿದ ಗುರುತುಗಳ ಮಾತು. ಹೆಣ್ಣಿನ ಬದುಕು ಜಗತ್ತಿನ ಪುರುಷ ಅಹಂಕಾರದ ನಂಜಿನಲ್ಲಿ ತನ್ನನ್ನೆ ತೋಯಿಸಿಕೊಂಡು ಆ ಅಹಂಕಾರದ ಕಿರೀಟ ಬೀಳದ ಹಾಗೆ ಎತ್ತಿ ಹಿಡಿಯುವ ಕಾಯಕದಲ್ಲಿ ಕಳೆದುಹೋಗಿರುವುದನ್ನು ಸಾವಿರ ಸೀಮನ್ ದ ಬೋವಾರೂ ತಪ್ಪಿಸಲಾಗಲಿಲ್ಲ. ಬದಲಾಗಿ ಪಾಶ್ಚಾತ್ಯರ ಪುರುಷಾಂಹಕಾರ ಸ್ತ್ರೀವಾದದ ಹೆಸರಲ್ಲಿ ಜಗತ್ತಿನ ಗಾಯಗೊಂಡ ಸ್ತ್ರೀಯರ ಪರಿಪಾಟಲನ್ನು ಆಡಿಕೊಂಡು ನಗುವ ಆ ಮೂಲಕ ತನ್ನ ಗರ್ವವನ್ನೂ ಕಲಾವಂತಿಕೆಯ ಸೋಗಿನಲ್ಲಿ ಕಲಸಿ ಮಾನವೀಯತೆಯನ್ನೇ ಉಂಡು ಬದುಕುವ ಬೌದ್ಧಿಕ ಭೂಮಿಕೆಗಳ ಮೇಲೆ ಚೆಲ್ಲಿ ಮೀಸೆ ಮರೆಯಲ್ಲಿ ಗಿಂಜುವ ಆಧುನಿಕ ಡ್ರಾಮಾ ಹೆಚ್ಚುತ್ತಿದೆ.

ಇದರ ಪರಿಣಾಮವಾಗಿ ಮಾನವೀಯ ಸಂವೇದನೆಯೆಂಬುದು ಮಾನವ ಮೂಲ ವರ್ತನೆಯ ಸ್ಮೃತಿಯೊಳಗೆ ಸಹಿಸಲಾಗದ ಕೆಟ್ಟ ಪಣವಾಗಿ ಮಾರ್ಪಾಡಾಗಿಬಿಟ್ಟಿದೆ. ಈ ಕಾರಣಕ್ಕೆ ಮಾನವರ ಸಾಮಾಜಿಕ ಉಸಿರಾಟವೆ ಒಂದು ವಿಚಿತ್ರ ಹಿಪೋಕ್ರಸಿಯೊಳಗೆ ಸಿಲಿಕಿ ತನ್ನನ್ನೇ ಸೀಳಿಕೊಂಡು ಬದುಕುವ ರೋಗವಾಗಿಬಿಟ್ಟಿದೆ. ಆ ರೊಗದಾಚೆಗಿನ ನೆಮ್ಮದಿಯನ್ನು ಕನಸು ಮನಸ್ಸುಗಳು ಇಂದು ತಮ್ಮೊಳಗೆ ಬಚ್ಚಿಟ್ಟುಕೊಂಡು ಯಾವುದನ್ನೋ ಯಾರಿಗು ತಿಳಿಯದಂತೆ ಆವಾಸಿಕೊಳ್ಳುವ ಕನಸು ಕಾನುತ್ತಿದ್ದರೆ, ಅವುಗಳ ಸುತ್ತಲಿನ ಜಗತ್ತು ಮಾತ್ರ ಹುಚ್ಚನಾಯಿ ಕಡಿತಕ್ಕೆ ಹೊಕ್ಕಳ ಸುತ್ತ ಹತ್ತಾರು ಚುಚ್ಚುಮದ್ದು ಹಾಕಿಸಿಕೊಳ್ಳಬೇಕಾದರೆ ರೇಜಿಗೆಯನ್ನು ಅನುಭವಿಸುತ್ತಿವೆ. ಈ ನಡುವೆ ಜಾಗತಿಕ ಜ್ಞಾನ ಪರಂಪರೆಗಳು ಆಧುನಿಕತೆಯನ್ನು ಮೈಗೂಡಿಸಿಕೊಂಡು ಒಗ್ಗಿಸಿಕೊಳ್ಳಲಾಗದೆ ಮೈತುಂಬಾ ಹುಣ್ಣಾದಂತೆ ಮುಲಾಮು ಸಿಗದೆ ಒದ್ದಾಡುತ್ತಿವೆ. ಅವುಗಳ ಸ್ತ್ರೀವಾದ ಮುಂಚೂಣಿಯಲ್ಲಿದೆ.

**ಹಟ್ಟಿ ಹೆಂಗಸರು ಮತ್ತವರ ಕೆಂಪುನಗು**

ನನಗೆ ಸ್ತ್ರೀವಾದದ ಬಗ್ಗೆ ಮಾತನಾಡುವಾಗೆಲ್ಲಾ ನಮ್ಮ 'ಹಟ್ಟಿ' ಹೆಂಗಸರ ಬದುಕಿನ ಬಣ್ಣಗಳು ಕಾಡುತ್ತವೆ. ಸೀಮನ್ ದ ಬೋವಾರಂತಹ ಸ್ತ್ರೀವಾದಿಗಳೂ ಜಾಗತಿಕ ಮಟ್ಟದಲ್ಲಿ ಶೋಷಿತ ಹೆಣ್ಣುಗಳ ಬಗ್ಗೆ ಮಾತನಾಡುವಾಗ ಅವರೆದರು ಸುಳಿಯುವ ಹೆಣ್ಣುಗಳೊಂದಿಗೆ ಹೋಲಿಕೆಯಾಗದೆ ತಮ್ಮದೊಂದು ಕೆಂಪು ನಗುವಿನಲ್ಲಿ ಸಾವಿರಾರು



ಅಕ್ಕಂದಿರನ್ನು ಸೃಷ್ಟಿಸುವ ನಮ್ಮ ದಲಿತ ಹೆಂಗಸರ ಜಗತ್ತು ಶತಮಾನಗಳ ಕಾಲ ತಲೆ ಕೆಡಸಿಕೊಂಡು ಲಿಂಗ ತಾರತಮ್ಯಕ್ಕೆ ತಣ್ಣಗೆ ಪರಿಹಾರವನ್ನು ಹೆರುತ್ತಿರುತ್ತಾರೆ. ಇದು ಉಲ್ಲೇಕ್ಷಿತವಾಗಿ ಕಂಡರು ಬದುಕೆಂದರೆ ಗಂಡಸು ಹೆಂಗಸಿನ ನಡುವಿನ ಚಾಪೆ ಅಂತರದ ಎಂದಂತೆ ಅರ್ಥೈಸುವ ಸ್ತ್ರೀವಾದಕ್ಕೆ ಪರ್ಯಾಯ ಮಾನವೀಯ ಸಂವೇದನೇಯೊಂದನ್ನು ಸೃಷ್ಟಿಸಿ ಬದುಕೆಂದರೆ, 'ಬಿರುಕಗಳ ನಡುವೆ ಬಣ್ಣ ತುಂಬುವ ಕಸಬು' ಎಂಬ ಸಂದೇಶವನ್ನು ಸಾರುವುದು ದಿಟ.

ಮಹಾದೇವರ 'ಕುಸುಮಬಾಲೆ'ಯಲ್ಲಿ ಬರುವ ತೂರಮ್ಮನ ಪಾತ್ರ ನೋಡಿದರೆ, ಮೇಲಿನ ತಿಳುವಳಿಕೆಗೆ ಕೊಂಚ ಶಕ್ತಿ ಬರಬಹುದು. ಕೆಂಪಿಯ ಕೂಸು ಹುಟ್ಟುವಾಗಲೆ 'ಇದಿ'ಯ ಕೋಪಕ್ಕೆ ಗುರಿಯಾಗಿ ತನ್ನ ಜೇನ್ನಗುವಿಗೆ ಜೀವಜಲವೊಂದರ ಅಗತ್ಯದಿಂದ ಬಳಲುತ್ತಿದ್ದಾಗ ತೂರಮ್ಮನಿಗೆ ಅದರ ಅಗತ್ಯ ಗೋಚರಿಸುತ್ತದೆ. ಆಗ ಆಕೆ ಆಧುನಿಕ

ಮನಸ್ಸುಗಳಿಗೆ ತೀರಾ ವಿಕ್ಷಿಪ್ತವಾಗಿ ಕಾಣುವ ಆಚರಣೆವೊಂದಕ್ಕೆ ಮುಂದಾಗುತ್ತಾಳೆ. ಈ ರೂಪಕ ಹತ್ಯಾ ದೋಷದಿಂದ ನರಳುತ್ತಿರುವ ಇಡೀ ವಿಶ್ವ ಹೆಣ್ಣನ್ನು ತನ್ನ ಯಾವುದೆ ಬಲಿಕೊಟ್ಟು ಉಳಿಸಿಕೊಳ್ಳಬೇಕಾದ ತುರ್ತನ್ನು ಅಬಿನಯಿಸುತ್ತದೆ. ಇದು ಮಹಾದೇವ ಪಾಶ್ಚಾತ್ಯ ಚಿಂತನೆಯನ್ನು ಓದಿಕೊಂಡು ಸಂಪಾದಿಸಿರುವ (ಮಾಂತ್ರಿಕ ವಾಸ್ತವತಾವಾದ) ಕಾದಂಬರಿ ಪ್ರಜ್ಞೆಯಂತೆ ಮೇಲ್ನೋಟಕ್ಕೆ ಕಂಡರು ಅದನ್ನು ಮಹಾದೇವರಂತೆ ನೆಲದ ಬದುಕಿನ ಲೇಕಖರಿಂದಬರೆಸಿಕೊಂಡಿರುವ ತಳ ಸಂಸ್ಕೃತಿಯೊಂದರ ಆತ್ಮಜ್ಞಾನದ ರೂಪಕದಂತೆಯೆ ನೋಡಬೇಕಿದೆ. ಈ ರೂಪಕವನ್ನು ಸ್ಮೃತಿಯೊಳಗೆ ಇಳಿಸಿಕೊಂಡರೆ ಆ ಆತ್ಮಜ್ಞಾನಕ್ಕೆ ಹಾದಿ ಗೋಚರಿಸಬಹದು.

ದಿನಾಲು ಕತ್ತಲಾಗುತ್ತಿದ್ದಂತೆ ಬೇಟೆಗೆ ಹೋಗುವ ನೆಪದಲ್ಲಿ ದಲಿತ ಹೆಣ್ಣುಗಳ ಅಂದವನ್ನು ಸವಿಯಲೆಂದೆ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಊರೆಲ್ಲಾ ಪೂಜಿಸುವ ದೇವರ ಕತೆ ಹೇಳುತ್ತಿದ್ದ ನನ್ನ ದೊಡ್ಡಜ್ಜಿ, ದೇವರೆಂದರೆ, ಐನೋರ ಮನೆಯ ಕೋಣೆಯೊಳಗೆ ಬಚ್ಚಿಟ್ಟ ಪಂಚಾಂಗವನ್ನು ಪುಸ್ತಕದಂತೆ ಕಾಣುವ ಜನರಿಗೆ ಸವಾಲು ಹಾಕುತ್ತಾಳೆ. ಊರಿನ ಸಮಸ್ತರಿಂದ ಪೂಜಿಸಲ್ಪಡುವ ದೇವರು ದಲಿತ ಹೆಣ್ಣುಗಳ ಚೆಂದವನ್ನು ಸವಿಯಲು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಓಡಾಡುತ್ತಿದ್ದ ಕತೆ ಅದ್ಯಾವ ಬಣ್ಣದ ತೊಗಲಿನ ಸಂಕತನಗಳಿಗೆ ಮುಖಾಮುಖಿಯಾಗಲು ಹುಟ್ಟಿಕೊಂಡಿದ್ದೋ ಎಂಬುದನ್ನು ಹೆಚ್ಚೇನು ಹಿಚುಕಿ ನೋಡಬೇಕಿಲ್ಲ. ದಲಿತರು ವೈದಿಕ ಸಂಸ್ಕೃತಿಯೆದುರು ತಮ್ಮ ಪವಾಡ ಸದೃಶ ಬದುಕನ್ನು ಅನಾವರಣಗೊಳಿಸಿ ಉಣ್ಣುವ ಹಿಟ್ಟಿಗೆ ಸ್ವಾಭಿಮಾನ ಬೆರೆಸಲು ಹವನಿಸುತ್ತಿದ್ದರು ಅಲ್ಲೆಲ್ಲಾ ಅವರ ಕುಲಗಳ ಸ್ತ್ರೀಯರೆ ವಿಜೃಂಬಿಸುತ್ತಿದ್ದುದನ್ನು ಈಗಾಗಲೆ ಶ್ರೇಷ್ಟ ಸಂಸ್ಕೃತಿಯ ಎದುರು ತಲೆಯೆತ್ತಿ ನಿಂತು ಲೋಕ ಲೋಕಗಳಾಚೆಗೆ ಇಣುಕುತ್ತಿರುವ ದಲಿತ ಸಾಂಸ್ಕೃತಿಕ ಅಧ್ಯಯನಗಳು ಸಾರಿ ಹೇಳುತ್ತಿವೆ.

ಕಲ್ಯಾಣ ಪಟ್ಟಣದ ವಿನಾಶಕ್ಕೆ ಕಾರಣರಾದ 'ಲಿಂಹಿನ' ಜಂಗಮರು ಬಸವಣ್ಣರ ತಲೆಯನ್ನು ನೋಡಿ ಕೆಡಸಿ 'ದಾಸೋಹಕ್ಕೆ ಬರುವ ಜನರ ಯೋಗ್ಯತೆಯನ್ನು ನೊಡಿ



ಒಳಗೆ ಬಿಡು.... ಅಂತ ದಾಸೋಹ ಭವನದೆದರು ನಿಂತ ಕಾವಲುದಾರನಿಗೆ ಹೇಳುವಷ್ಟು ಹಾಳುಮಾಡುತ್ತಾರೆ. ಇದನ್ನು ಅರಿತ ಅಲ್ಲಮ ಪ್ರಭುಗಳ ಬಸವಣ್ಣರ ಸತಿ ನಿಲಮ್ಮರ ಕನಸಿಗೆ ಹೋಗಿ 'ನಾಳೆ ನಾನು ನಿನ್ನ ಗಂಡನಿಗೆ ಗುರುವಾರ ಕಲ್ಯಾಣ ಪಟ್ಟಕ್ಕೆ ಬರುವ ಪ್ರಭುಗಳು ಕಲ್ಯಾಣದ ಕಾವಲುಗಾರನಿಂದ ಒದೆ ತಿಂದು ಮಾದಿಗರ ಹರಳಯ್ಯನ ತಿಪ್ಪೆಗುಂಡಿಯಲ್ಲಿ ಕೀವು ರಕ್ತ ತುಂಬಿಕೊಂಡು ಬಿದ್ದಿದ್ದಾಗ ಬಸವಣ್ಣರ ಕಣ್ಣಿಗೆ ಬೀಳದೆ ನೀಲಮ್ಮರ ಕಣ್ಣಿಗೆ ಗೋಚರಿಸುತ್ತಾರೆ.

ಜನಪದ ಕಾವ್ಯದೊಂದು ಇಲ್ಲಿ ಮಾಡಹೊರಟಿರುವ ಸಾಂಸ್ಕೃತಿಕ ರಾಜಕಾರಣವನ್ನು ಗಮನಿಸಿದರೆ, ಹೆಣ್ಣನ್ನು ತನ್ನ ನರಗಳಿಂದ ಸೃಷ್ಟಿಸಿ ಅವಳನ್ನು ಸ್ವಾತಂತ್ರ್ಯಕ್ಕೆ ಹಾಗೂ ಜ್ಞಾನಾರ್ಜನೆಗೆ ಅರ್ಹಳಲ್ಲ ಎಂಬುದನ್ನು ಶತಮಾನಗಟ್ಟಲೆ ಕೂಗಿ ಹೇಳಿದ ಪುರುಷ ಪ್ರಧಾನ ಸಂಸ್ಕೃತಿಯ ಬಾಗಿಲಲ್ಲಿ ನಿಂತು ಹೆಣ್ಣಿಗೆ ಮಾತ್ರವೆ ಮನುಕುಲದ

ಉದ್ಧಾರದ ಜ್ಯೋತಿ ಕಾವಲು ಸಾಧ್ಯ... ಎಂಬುದನ್ನು ಪವಾಡಗಳ ಮೂಲಕವೆ ತೋರಿಸಿಕೊಡುತ್ತಾರೆ. ಕನ್ನಡ ಸಾಂಸ್ಕೃತಿಕ ಜಗತ್ತು ಮಾನವಿಯ ಮೌಲ್ಯಗಳ ಅತ್ಯಾಂತಿಕವಾಗಿ ಆಧರಿಸುವ ಬಸವಣ್ಣರ ಕಣ್ಣಿಗೆ ಕಾಣುವುದು ನಮ್ಮ ನಡುವಿನ ಜನರ ಜಗತ್ತಿಗೆ ಏನನ್ನು ಕೂಗಿ ಹೇಳುತ್ತಿದೆ ಎಂಬುದನ್ನು ಜಗತ್ತಿಗೆ ಏನನ್ನು ಕೂಗಿ ಹೇಳುತ್ತಿದೆ ಎಂಬುದನ್ನು ನಿಶ್ಚಳವಾಗಿ ತೋರಿಸುತ್ತದೆ.

ಮುಟ್ಟಿನ ಕಾರಣಕ್ಕೆ ಹೆಣ್ಣನ್ನು ಅಸಹ್ಯವಾಗಿ ಕಾಣುವ ಸಂಸ್ಕೃತಿಯ ಮಗ್ಗುಲಲ್ಲೇ ದೊಡ್ಡಮ್ಮ ತಾಯಿ ಮುಟ್ಟಾದ ಸ್ಥಳಕ್ಕೆ ಮುಟ್ಟಳ್ಳಿ ಎಂದು ಹೆಸರಿಡುತ್ತದೆ. ಮಂಟೇದರ ಜನಪದ ಕಾವು ಹಣದಾಸೆಗೆ ಮುದುಕನೋದಿಗೆ ಮದುವೆಗೆ ಅಣಿಮಾಡುವ ಮಲತಾಯಿಯ ತಾರತಮ್ಯದಿಂದ ದೊಡ್ಡಮ್ಮನನ್ನು ಬಿಡಿಸಲು ಮದುವೆ ಮಂಟಪದಲ್ಲೇ ಅವಳಿಗೆ ಸಾವು ತರುವ ನಾಟಕವಾಡಿ ನಂತರ ಹೆಣವನ್ನು ದಾನವಾಗಿ ಪಡೆದು ತಮ್ಮೊಡನೆ ಕರೆದೊಯ್ಯುವ ಮಂಟೇದರು ಈ ಜೀವವಿಮುಖ ಸಂಸ್ಕೃತಿಯ ಪಾತಳಿಯಿಂದ ಬಹುದೂರಕ್ಕೆ ಹೆಣ್ಣನ್ನು ಎತ್ತುವ ಈ ರೂಪಕ ನಮಗೆ ಶಿಷ್ಯ ಎಂದು ಹೇಳಿಕೊಳ್ಳುವ ಸಂಸ್ಕೃತಿಗಳಲ್ಲಿ ಸಿಗದು.ಆದರೆ ಇಲ್ಲಿ ಜನಪದ ಮಾನವೀಯ ಪ್ರಜ್ಞೆ ಶೋಷಣಾಯುಕ್ತ ಆತ್ಮಗಳನ್ನು ದೊಡ್ಡ ಸಂಸ್ಕೃತಿಗಳೆದುರು ನಿಂತು ಮುದ್ದಿಸಿ ನೀಲಿನಗುವಿಗೆ ಸಮತೆಯನ್ನು ಬೆರೆಸಿ ತೇಲುತ್ತದೆ.

ಯಾವುದೋ ಜಾತಿಯ ದೊಡ್ಡಮ್ಮ ಮತ್ತಾವುದೋ ಜಾತಿಯ ರಾಚಪ್ಪಾಜಿಯರಿಗೆ ಮದುವೆ ಮಾಡಿಸುವ ಮಂಟೇದರು ಬಸವಣ್ಣನವರ ಜಾತಿ ವಿನಾಶದ ಕಾಯಕಕ್ಕೆ ಒಂದು ತಳ ಸಾಂಸ್ಕೃತಿಕ ಪವಾಡವನ್ನು ಬೆರೆಸುತ್ತಾರಷ್ಟೇ. ಆದರಿದನ್ನು ಪ್ರಶ್ನಿಸಲು ಇಲ್ಲಿರುವ ಯಾವ ಹುಸಿ ಶರಣರಿಗೂ ಶಕ್ತಿಯಿಲ್ಲದಂತೆ ಅವರ ಶರಣತ್ವವನ್ನೇ ಡಿಸೇಬಲ್ ಮಾಡಲಾಗಿ ಅವರು ಖಂಡುಗ ಕೀವು-ರಕ್ತದ ಮಂಟೇದರ ಎದುರು ನಿರ್ವೀಯರಂತೆ ವರ್ತಿಸುತ್ತಾರೆ.ಆಧುನಿಕ ಜ್ಞಾನಶಿಸ್ತುಗಳು ತಮ್ಮೊಳಗೆ ಬರಲೆತ್ನಿಸುವ ತಳ ಸಾಂಸ್ಕೃತಿಕ ತಿಳಿವಳಿಕೆಗಳೊಂದಿಗೆ ಸಪೋರ್ಟಿಂಗ್ ಪ್ರಾಗ್ರಾಮ್' ಇಲ್ಲದ ಸಾಫ್ಟ್‌ವೇರ್



ರೀತಿಯಲ್ಲಿ ವರ್ತಿಸುವ ಈ ಕಾಲಘಟ್ಟದಲ್ಲಿ ಮಂಟೇದರ ಜಗತ್ತಿನ ಪುರುಷಾಹಂಕಾರಕ್ಕೆ ಅವರು 'ಒಂಬತ್ತು ತಿಂಗಳು ಅವ್ವನ ಮುಟ್ಟು ಹಾಳು ಬಂದಿದ್ದಕ್ಕೆ ಎಲ್ಲರೂ ಮುಟ್ಟಾಳರೇ ....ಎಂಬ ಅದ್ಭುತ ಆದರೆ, ವಿಕ್ಷಿಪ್ತವಾದ ಪಂಚ್ ಕೊಡುತ್ತಾರೆ ಇಂಥದ್ದನ್ನು ನಾವು ಬಹುತೇಕ ತಳ ಸಮುದಾಯಗಳ ಸಂಕಥನಗಳೊಳಗೆ ಕಾಣಬಹುದು ಹಾಗೂ ನಮ್ಮ ಜ್ಞಾನಕೇಂದ್ರಿತ ಪ್ರಜ್ಞಾಸ್ಥಿತಿಗೆ ಅವನ್ನು ಕಸಿ ಮಾಡಿಕೊಳ್ಳಬಹುದು.ಅವು ನಿಜಕ್ಕೂ ನಮ್ಮ ಪ್ರಜ್ಞೆಯ ದತ್ತಾಂಶಗಳೊಂದಿಗೆ ಸಪೋರ್ಟ್ ಮಾಡಬಲ್ಲವು.

**ಆತ್ಮಜ್ಞಾನವೇ ಮುಖೇಡಿತನವನ್ನು ತಂದೊಡ್ಡುವ ಬಗೆ**

ಆದರೆ, ಮಾನವೀಯತೆಯನ್ನೇ ಮರೆಸಲು ಹುಟ್ಟಿಕೊಂಡಂತೆ ಕಾಣುವ ದಲಿತ ಸಂಸ್ಕೃತಿಯಿಂದಲೇ ಎದ್ದು ಬರುವ 'ಜ್ಞಾನಿ'ಗಳು ಅದರ 'ಆತ್ಮಜ್ಞಾವನ್ನು ಅನುಮಾನಿಸುತ್ತಾರೆ ಈ ಕಾರಣಕ್ಕೆ ಮನುಷ್ಯರ ಜೀವಕೋಶಗಳೊಳಗೆ

ಇಳಿದು ಪರಿಣಾಮವಾಗಿ ಜನಪದವೂ ಪುರಾಣದ ಕೊಳೆಬಟ್ಟೆಯೊಳಗೆ ಸುತ್ತಿಕೊಂಡು ಮುಟ್ಟಲಾಗದ ಮೂಸಲಾಗದ ವರ್ಜ್ಯವಾಗಿಬಿಟ್ಟಿದೆ.ಅಂದರೆ ನಾವು ಈಗ ಮಾತನಾಡಲು ತೊಡಗಿರುವ ಪ್ರಕ್ರಿಯೆಯೇ ಇಲ್ಲಿ ಪ್ರಶ್ನೆಗೆ ಒಳಗಾಗಿ 'ಜನಪದ ' ಎಂಬುದರ ಅರ್ಥ ಬದಲಾಗುತ್ತದೆ. ಇಲ್ಲಿ ನಾವು ತಳ ಸಾಮುದಾಯಿಕ ಸ್ತ್ರೀ ತಾಖತ್ತಿನ ಬಗ್ಗೆ ಮಾತನಾಡುವಾಗ ನಮ್ಮ 'ಜನಪದ' ಜ್ಞಾನ ಅದನ್ನು ಟ್ರಿಮ್' ಮಾಡಲೆತ್ನಿಸಿ ತೂರಮ್ಮನಂತಹ ಪಾತ್ರಗಳ ಬದಲು ತೊಟ್ಟಿಲ ಹೊತ್ಕಂಡು ತವರಣ್ಣ ಉಟ್ಕಂಡು...ಅಪ್ಪ ಕೊಟ್ಟ ಎಮ್ಮೆ' ಹೊಡೆದುಕೊಂಡು ಗಂಡನ ಮನೆಗೆ ಹೊರಡುವ 'ಆದರ್ಶ ಸ್ತ್ರೀಯರು' ವಿಜೃಂಬಿಸುತ್ತಾರೆ.ಅಲ್ಲದೆ ಅವರ ಅಪ್ಪ ಕೊಟ್ಟ ಎಮ್ಮೆಯೇ ಪರಂಪರೆಯ ಘನಘೋರ ಸಂಕಥನವಾಗಿ ರೂಪುಗೊಂಡು ಕೆಂಪಿ.ಈರಿಯಂಥವರಿಗೆ ಅರಿವಾಗದೋಪಾದಿಯಲ್ಲಿ ಸಾವು ಒದಗುತ್ತದೆ.

ಮೇಲಿನ ನನ್ನ ಮಾತುಗಳು ತಳ ಸಂಸ್ಕೃತಿಯ ತೀರಾ ಗಟ್ಟಿಯಾದ ಸ್ತ್ರೀವಾದವನ್ನು ಬದುಕಿ ಅನುಭವಿಸಿದವರಿಗೆ ಅರ್ಥವಾಗುವಂತವು. ಅಥವಾ 'ತಳ' ಎಂದು ಹೇಳಬಹುದಾದ ದಲಿತ ಸಂಸ್ಕೃತಿಯ ನೆನಪಿನಲ್ಲಿ ನೇಣುಹಾಕಿಕೊಳ್ಳುವ ಮುಖೇಡಿಗಳಿಗೆ ಇವು ಅವಮಾನದ ಸುಟ್ಟ ಹಾಯಗಳಂತೆ ಕಾಣುವ ಅಪಾಯವಿದೆ. ಅಂಥವರಿಗೆ ತೂರಮ್ಮನಂಥವರ ಆಚರಣೆ ಥೀ ಥ ಎನಿಸಿ ಮೂಗು ಮುಚ್ಚಿಕೊಂಡು ತಲೆಮಾರುಗಳಾಚೆ ಓಡಿಹೋಗಬೇಕೆನಿಸುತ್ತದೆ. ಹಾಗೆ ಓಡಿ ಹೋದವರ ದೊಡ್ಡ ದಂಡೇ ಇದೆ. ಇವರಿಗೆ ಆತ್ಮಜ್ಞಾನ ಮತ್ತು ವರ್ತಮಾನದ ಬದುಕಿನ ಸೌಂದರ್ಯದ ಅರಿವಿರುವುದಿಲ್ಲ. ಹಾಗೂ ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು'. ಎಂಬ ಬಾಬಾ ಸಾಹೇಬರ ಮಾತಿಗೆ ಪಕ್ಕಾಗಿ ಇತಿಹಾಸವೆಂದರೆ, ತಮ್ಮ ತಲೆಮಾರುಗಳ ತಿಪ್ಪೆಗುಂಡಿಯಂತೆ ಮೂಗು ಮುಚ್ಚಿಕೊಳ್ಳುತ್ತಾರೆ.

**ಇದು ಆಗಬೇಕಾಗಿರುವುದು ಹೀಗೆ....**

ನಮ್ಮ ತಳ ಸಾಂಸ್ಕೃತಿಕ ಜ್ಞಾನಶಿಸ್ತುಗಳು ನಮ್ಮ ಜತೆಯಲ್ಲೇ ಉಸಿರಾಡುತ್ತಿರುವ ಸ್ವಶ್ಯ ಸಂಕಥನಗಳಿಗಿಂತ ಹೆಚ್ಚಿನ ಶಕ್ತಿ ಹೊಂದಿದ್ದಾನೆ. ಎಂಬ ಕಾರಣಕ್ಕೇನೆ ಅವುಗಳನ್ನು



ಅಸ್ಪೃಶ್ಯವನ್ನಾಗಿ ಮಾಡಲಾಗಿದೆ. ಉದಾಹರಣೆಗೆ ಗ್ರಾಮದೇವತೆ ಕತೆಯಲ್ಲಿ ಬರುವ ಬ್ರಾಹ್ಮಣರ ಹೆಣ್ಣು ಮಾದಿಗ ಕದರನ ನಿಜವಾದ ಜಾತಿ ಗೊತ್ತಾದ ತಕ್ಷಣ ಅವನಿಗೆ ಶಾಪ ಕೊಡುತ್ತಾಳೆ. ಮಾದಿಗನಾಗಿ ಬ್ರಾಹ್ಮಣನೆಂದು ಸುಳ್ಳು ಹೇಳಿ ತನ್ನನ್ನು 'ಮೋಸ ಮಾಡಿದ್ದಕ್ಕೆ ಅವನನ್ನು ಅವಳ ಗುಡಿಯ ಮುಂದೆ ಕಡಿದು ಅವನ ಕಾಲುಗಳನ್ನು ಬಾಯಿಗೆ

ತುರಕಬೇಕೆನ್ನುವ ಶಾಪ ಅದು. ಮಾಂಸಹಾರದ ವಿರೋಧಿ ಎಂದು ಹೇಳಿಕೊಳ್ಳುವ 'ನಾಗರಿಕ' ಸಮುದಾಯ ಹೆಣ್ಣೊಬ್ಬಳು ತಾನು ಅನಾಗರಿಕ ಎಂದು ನಂಬುವ ವ್ಯಕ್ತಿಯೊಬ್ಬನ ಮೇಲೆ ಪ್ರಯೋಗಿಸುವ ಶಾಪ ಇದು. ಇಲ್ಲೊಂದು ವಿಚಿತ್ರ ಸಂಕಥನ ಸೃಷ್ಟಿಯಾಗಿದೆ. ಅದೆಂದರೆ ತನ್ನ ಕುಲದ ಹೆದ್ದೊಬ್ಬಳು 'ಹೀನ ಕುಲ'ದ ಗಂಡಿನ ಬಗ್ಗೆ ತಳೆಯುವ ನಿರ್ಧಾರವನ್ನು ಅವಳ ಸಂಸ್ಕೃತಿ ಪುರಸ್ಕರಿಸುವುದಿಲ್ಲ. ಯಾಕೆಂದರೆ, ಈ ಸಂಕಥನ ದಲಿತ ಅಸಹಾಯಕ ಮನಸ್ಸುಗಳಿಂದ ಹುಟ್ಟಿರಬಹುದೆಂಬ ಗುಮಾನಿ ಆ ಸಮುದಾಯಕ್ಕೆ. ಕದರನೆಂದು ಕೋಣನನ್ನು ಕಡಿಯುವ ದಿವಸ ಅವನಿಂದ ಆ ಮೇಲ್ಜಾತಿ ಹೆಂಗಸಿಗೆ ಹುಟ್ಟಿದ ಮಕ್ಕಳು ತಮ್ಮ ಅನಾಥ ಸ್ಥಿತಿಯ ಬಗ್ಗೆ ಕೋಪಗೊಂಡು ಅವಳನ್ನು ಕೆಟ್ಟ ಶಬ್ದಗಳಿಂದ ಬೈದು ಕೋಪ ತಣಿಸಿಕೊಳ್ಳುವ ಆಚರಣೆ ಇಂದಿಗೂ ಗ್ರಾಮದೇವತಾ ಜಾತ್ರೆಗಳಲ್ಲಿ ನಡೆಯುತ್ತದೆ. ಅವರು ತಮ್ಮನ್ನು 'ಆಸಾದಿ'ಗಳೆಂದು ಕರೆದುಕೊಳ್ಳುತ್ತಾರೆ. ಸಣ್ಣದೊಂದು ಜೋಗುಳದ ಹಾಡನ್ನು ದೊಡ್ಡ ಜನಪದ ಸಂಸ್ಕೃತಿಯೆಂದು ಸಂಭ್ರಮಿಸುವ ವಿದ್ವಾಂಸರು ಈ ಮೇಲಿನ ಆಚರಣೆ ಬಗ್ಗೆ ಕುರುಡ ಕಿವುಡರಾಗುತ್ತಾರೆ. ಸಂಸ್ಕೃತಿಯ ಪುನರುಜ್ಜಿವನದ ಜವಾಬ್ದಾರಿ ಹೊತ್ತ ಹಾಗೂ ತಮ್ಮ ತಲೆಮಾರುಗಳ ತಲೆಯ ಮೇಲಿನ 'ಕಸದ' ಮಂಕರಿಯನ್ನು ಇಳಿಸಿಕೊಳ್ಳಬೇಕಾದ ಇಂದಿನ ಪೀಳಿಗೆ ಕದರನಂತಹ ಸಂಕಥನವನ್ನು ತಮ್ಮ ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕಾಗಿದೆ. ಆ ಥರದ ಸಂಕಥನಗಳಿಗೆ ನಮ್ಮ ಅವಮಾನಗಳನ್ನು ಅಭಿಮಾನದ ನಿಧಿಗಳನ್ನಾಗಿ ಮಾರ್ಪಡಿಸುವ ಶಕ್ತಿ ಖಂಡಿತಾ ಇದೆ. ಶರಣ ಚಳವಳಿ ತನ್ನೆಲ್ಲಾ ಆಶಯಗಳನ್ನು ಕೊಂದುಕೊಂಡು ಒಂದು ಕೆಟ್ಟ ಜಾತಿ ನೇಣಿಗೆ ಸಿಲುಕಿ ಯಾತನೆ ಪಡುತ್ತಿದ್ದಾಗ ಮಂಟೇದರು ಬಂದು ಬಸವಣ್ಣರ ಮೈಮರೆವನ್ನು ಪ್ರಶ್ನಿಸುತ್ತಾರಲ್ಲಾ.. ಅದನ್ನು ನಾವು ಎದೆ ತಟ್ಟಿಕೊಂಡು ಮಾತಾಡುತ್ತೇವಲ್ಲಾ ಹಾಗೆ.

ಈ ರೀತಿಯ ಸಂಕಥನಗಳು ಯಾವುದೋ ಸಂಸ್ಕೃತಿಯ ಎದುರು 'ಊರಿದ್ದಲ್ಲಿ ಹೊಲೆಗೇರಿ' ರೀತಿಯ ಮಾತುಗಳಿಗೆ ಸಿಲುಕ್ಕಿದ್ದ ನಮ್ಮ ತಳ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ, ಆ ಮೂಲಕ ಸಮಾಜೋ-ಸಾಂಸ್ಕೃತಿಕ ಬದಲಾವಣೆಗಳಿಗೆ ಸ್ಪಂದಿಸುವ ಹಾಗೆ ಮಾಡಿ ಒಂದು ಸಮಾಜದ ಸಹಜ ಚಟುವಟಿಕೆಗಳೊಂದಿಗೆ ಬೆರೆಸಿಬಿಡುತ್ತವೆ. ಈ ಕಾರಣಕ್ಕೆ ವಿಶ್ವವಿದ್ಯಾಲಯಗಳಲ್ಲಿ 'ದಲಿತ ಅಧ್ಯಯನ ಪೀಠಗಳು ಶುರುವಾಗಿ, ಬಿಟ್ಟರೆ ಸಿಗದ ಜನಪದ ಸಂಸ್ಕೃತಿಯ ಆಚರಣೆಗಳನ್ನೋ, ಬದುಕಿನ ಕ್ರಮಗಳನ್ನೂ ದಾಖಲಿಸಿಕೊಳ್ಳುವ ಪ್ರಕ್ರಿಯೆ ಶುರುವಾಗುತ್ತದೆ. ಇದರಿಂದ ದಲಿತರು ಯಾವ ಆಚರಣೆಗಳು ಹಾಗು ಬದುಕಿನ ಕ್ರಮಗಳಿಂದ ಹಿಂಸೆ ಅನುಭವಿಸುಯತ್ತಿದ್ದರೋ, ಅದೇ ಪ್ರಕ್ರಿಯೆಗಳಿಂದ ಮುಖ್ಯವಾಹಿನಿಯ ಅಧ್ಯಯನಗಳಲ್ಲಿ ದಲಿತ ಮಹಿಳಾ ಜಗತ್ತಿನದ್ದೇ ಸಿಂಹಪಾಲಿದೆ.

ಇನ್ನೂ ಪ್ರಮುಖ ಅಂಶವೆಂದರೆ, ಜನಪದ ಅಧ್ಯಯನಗಳ ಪರಿಧಿಯನ್ನು ಮೀರಿದ ದಲಿತ ಮಹಿಳಾ ಬದುಕಿದೆ ಎಂಬುದನ್ನು ದಲಿತರೇ ಉಪಾಯದಿಂದ ಮರೆಯುತ್ತಿದ್ದಾರೆ. ನನ್ನ ಅಜ್ಜಿ ಮುನಿಯಮ್ಮ ಗಂಡನ 'ತೋಟಿ' ಕೆಲಸವನ್ನು ಅವನಿಗಿಂತ ಹೆಚ್ಚಾಗಿ ನಿರ್ವಹಿಸುತ್ತಿದ್ದುದನ್ನು ನಾನು ಕಂಡಿದ್ದೇನೆ. ಊರಿನ ಯಾವುದೇ ಬೀದಿಯಲ್ಲಿ ನಾಯಿ ಸತ್ತರೆ, ಅದನ್ನು ಅಲ್ಲಿಂದ ಊರ ಹೊರಕ್ಕೆ ಸಾಗಿಸುವುದು ಅದರಲ್ಲಿ ಮುಖ್ಯವಾದ ಕಾಯಕ. ಹೀಗೆ ಮಾಡಿದರೆ, ಅಜ್ಜಿಗೆ ಆ ಕೇರಿಯ ಜನರಿಂದ ಹಿಟ್ಟು, ಮೆಣಸಿಣಕಾಯಿ, ಅಕ್ಕಿ, ಧಾನ್ಯಗಳು ಸಿಗುತ್ತಿದ್ದವು. ಇಂಥವೇ ಇನ್ನೂ ಹಲವು ಕೆಲಸಗಳಿಂದ ನನ್ನ ಅಜ್ಜಿ ಸುತ್ತಲಿನ ಹಳ್ಳಿಗಳಲ್ಲಿ ತಾತನಿಗಿಂತ ಹೆಚ್ಚು ಪರಿಚಿತಳು. ಈಗಲೂ ನಮ್ಮ ಊರಿನ ಕೆಲವರು ನನ್ನನ್ನು ನನ್ನ ಅಜ್ಜಿಯ ಮೂಲಕ ಗುರುತಿಸುತ್ತಾರೆ. ತಾತ ಕೆಲವು ಕೆಲಸಗಳನ್ನು ಊರಿನ 'ಉತ್ತಮರು' ಹೇಳಿದ ಕಾರಣಕ್ಕೆ ಮಾಡುತ್ತಿದ್ದರೂ, ಕೆಲವನ್ನು ಮಾಡಲು ಹಿಂಜರಿಯುತ್ತಿದ್ದನಂತೆ. ಆದರೆ, ಆಜ್ಜಿ ಮಾತ್ರ ಎಲ್ಲವನ್ನು ಒಂದೇ 'ರಾಗದಲ್ಲಿ ಮಾಡಿ ಮುಗಿಸಿ ಸಂಸಾರವನ್ನು ಸಾಗಿಸುತ್ತಿದ್ದಳು. ಇದಕ್ಕೆ ಸುಲಭವಾಗಿ ಮಾತೃಪ್ರಧಾನ ಕುಟುಂಬದ ಲೇಬಲ್ ಹಾಕಿ ರಮ್ಯವಾದ ಜನಪದ ಸಿದ್ಧಾಂಥಕ್ಕೆ ಕಟ್ಟಿಹಾಕಿ ಮುಖ್ಯವಾಹಿನಿಗೆ ಬಿಡಬಹುದು. ಆದರೆ, ಈ ರೀತಿಯ ಕಟ್ಟಿಹಾಕುವ ಕ್ರಿಯೆಯನ್ನು ನನ್ನ ಅಜ್ಜಿಯಂಥವರ ಕತೆಗಳು ನಿರಾಕರಿಸುವ, ವಾಣಿಜ್ಯಕರಣವನ್ನು ತಡೆಗಟ್ಟಿ ಆತ್ಮಜ್ಞಾನದ ನಗೆ ಬೀರುತ್ತವೆ. ಈ ರೀತಿಯ ಆತ್ಮಜ್ಞಾನವೇ ನಮ್ಮನ್ನು ಕಾಯುತ್ತದೆ.

**“ಒಳಗಿದ್ದೂ ಇಲ್ಲದ' ಹೊರಗಿನ ಕ್ರಮ**

ಅಂದರೆ, ನಮ್ಮ ದಲಿತ ಬದುಕಿಗೆ ಪಾಶ್ಚಾತ್ಯರ ಸಿದ್ಧಾಂತಗಳನ್ನು ಅಂಟಿಹಾಕಿ ಬೌದ್ಧಿಕ ಜಂಭ ಕೊಚ್ಚಿಕೊಳ್ಳುವುದನ್ನು ತಳ ಸಂಸ್ಕೃತಿ ನಿರಾಕರಿಸುತ್ತದೆ. ಪುರುಷ ಪ್ರಧಾನ ನೆಲೆಯಿಂದಲೇ ಜಗತ್ತನ್ನು ಕಂಡ ಜ್ಞಾನಶಿಸ್ತುಗಳು ಇಲ್ಲೇ ನೆಲೆಯೂರಿರುವ, ರಕ್ತಗತವಾಗಿರುವ ಮಾತೃಪ್ರಧಾನ ಆಶಯಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋತು ಮತ್ತೆ ಮತ್ತೆ ಹೊರಗಿನಿಂದಲೇ ಒಳಬರುವ ಕ್ರಮವನ್ನು ತುಂಬಾ ಹೆಡ್ಡತನದಿಂದ ಮಾಡುತ್ತವೆ. ಇದರಿಂದ ಮಾತೃ ಪ್ರಧಾನ ಪರಂಪರೆಗಳಿಂದಲೇ ಬಂದು ಬದುಕು ಸವೆಸುತ್ತಿರುವವರೂ ಗೊಂದಲಗೊಂಡು ಅರಿವಾಗದೋಪಾದಿಯಲ್ಲಿ ಹೊರ ಹೋಗಿ ಮತ್ತೆ ಅವರ ಸಂಸ್ಕೃತಿಯ ಒಳನುಗ್ಗುವ ವ್ಯರ್ಥ ಪ್ರಯತ್ನ ಮಾಡುತ್ತಾರೆ. ಈ ಕಾರಣಕ್ಕೆ ಮಹಿಳಾ ಸಿದ್ಧಾಂತಗಳು ಪುರುಷ ಪ್ರಧಾನ ಸಂಸ್ಕೃತಿಯ ಸವಲತ್ತಿನ ಜತೆಯಲ್ಲಿ ಮಾತೃಪ್ರಧಾನ ಅಂಶಗಳಿಂದಲೇ ಇನ್ನೂ ಜೀವಂತವಾಗಿರುವ ತಳ ಸಮುದಾಯಗಳ ಸ್ತ್ರೀಯರ ದ್ವಂದ್ವ ಶುರುವಾಗಿದೆ. ಇದರಲ್ಲಿ ಸ್ವಾತಂತ್ರ್ಯ ನಂತರ ಇಂಡಿಯಾಕ್ಕೆ ಲಗ್ಗೆಯಿಟ್ಟ ಎನ್ ಜಿಓಗಳ ಪಾಲು ಬಹಳಷ್ಟಿದೆ.

ತಳ ಬದುಕುಗಳನ್ನು ಅರ್ಥ ಮಾಡಿಕೊಳ್ಳಲು ಶಕ್ತಿ ಇರದ ಈ ಎನ್ ಜಿಓಗಳ ಕಾರ್ಯಕರ್ತರಿಗೆ ಕುಡಿದು ಬಂದು ಹೆಂಡತಿಗೆ ಬಡಿಯುವ ದಲಿತ ಗಂಡನಿಗೂ ಕತ್ತಲೆ ಕೋಣೆಯಲ್ಲಿ ಕೊಳೆತು ನಾರುವಂತೆ ಹೆಂಡತಿಯನ್ನು ಕಟ್ಟಿಹಾಕಿ ವಿಚಿತ್ರ 'ಗಂಡು

ಸುಖ' ಅನುಭವಿಸುವ ಕಲಿತ ಮೇಲ್ಜಾತಿ ಗಂಡನಿಗೂ ವ್ಯತ್ಯಾಸ ಕಾಣದು.ಇಂಥವರಿಗೆ ಅರ್ಥವಾಗದ ಜಗತ್ತೊಂದಿದೆ ಅದೆಂದರೆ, ರಾತ್ರಿ ಕುಡಿದು ಹೆಂಡತಿ ಜತೆ ಗಲಾಟೆ ಮಾಡುವ ಗಂಡ ದಿನ ಬೆಳಗಾದರೆ ಮೇಲ್ಜಾತಿ ಹೆಂಗಸು ಗಂಡಸರಿಬ್ಬರಿಂದಲೂ ವಿಚಿತ್ರ ಶೋಷಣೆ ಅನುಭವಿಸಿ, ಅವರು ಕಾಲಲ್ಲಿ ತೋರಿಸಿದ್ದನ್ನು ಕೈಯಲ್ಲಿ ಮಾಡಿ 'ದಣಿದು' ಬರುವಾಗ ಅವನ ನೋವನ್ನು ಶಮನ ಮಾಡಬಲ್ಲಂಥ ಪವಾಡ ವಸ್ತುವೊಂದಕ್ಕಾಗಿ ಹಪಹಪಿಸುತ್ತಾನೆ.ಅವನ ಹಪಹಪಿಕೆಯನ್ನು ಅರ್ಥ ಮಾಡಿಕೊಳ್ಳುವುದು ಅವನಿಂದ ಏಟು ತಿನ್ನುವ ಅವನ ಹೆಂಡತಿ ಮಾತ್ರ ಅವಳು ಯಾವುದೋ ಮಾಯದಲ್ಲಿ ತನ್ನ ಮಕ್ಕಳಿಗೆ ಕಾಣದಂತೆ ಸೆರಗಿನ ಮರೆಯಲ್ಲಿ ಸಾರಾಯಿ ತಂದುಕೊಡುತ್ತಾಳೆ. ಇದು ಜಗತ್ತನ್ನು ಸಾಕುವ ತಾಯ್ತನ ಮಾತ್ರವಲ್ಲ:ಸಂಸ್ಕೃತಿಯೊಂದರ ಉಳಿವನ್ನು ಕನಸುವ ಸ್ವಪ್ನವು ಹೌದು. ಇದನ್ನು ಮಹಿಳೆಯ ಹೆಡ್ಡತನ ಎನ್ನಬಹುದು.

**ತೇಪೆಗಳನ್ನು ಮುಚ್ಚುವ ಕ್ರಿಯೆ**

ದಲಿತ ಸಂಸ್ಕೃತಿಯೊಂದಿಗೆ ಇತರ ಸಿದ್ಧ ಸರಕುಗಳಂಥ ಸಿದ್ಧಾಂತಗಳು ಹೊಂದಿಕೆಯಾಗುವುದಿಲ್ಲ ಎಂದು ತೀರಾ ತೆಳುವಾಗಿ ಹೇಳಿ ಮುಗಿಸುವುದು ನನ್ನ ಮಾತಿನ ಉದ್ದೇಶವಲ್ಲ: ದಲಿತ ಸಂಸ್ಕೃತಿಯಂಥ ನೆಲದ ಬದುಕಿನ ಜತೆಗೆ ಒಡನಾಟ ಮಾಡುವಾಗ ಕೊಂಚ ಎಚ್ಚರ ವಹಿಸುವುದು ಅಗತ್ಯ. ಇಲ್ಲವಾದರೆ ನಮ್ಮ ರೊಟ್ಟಿ 'ಕೇಕ್' ಆಗಿಬಿಡುವ ಅಪಾಯವಿದೆ ಎಂಬುದನ್ನು ನೆನಪಿಸುತ್ತಿದ್ದೇನೆ. ಅಂದರೆ ಸ್ತ್ರೀವಾದದಂತಹ ಪಾಶ್ಚಾತ್ಯ ಜ್ಞಾನಶಿಸ್ತುಗಳನ್ನು ನಮ್ಮ ನಿತ್ಯ ಜೀವನದ ತಲ್ಲಣಗಳೊಂದಿಗೆ ಬೆರೆಸುವಾಗ ಇಲ್ಲಿನ ನಿಜವಾದ ವಾಸನೆ ಮಾಸಿಬಿಡುತ್ತದೆ ಅಥವಾ ತಪ್ಪು ತಿಳುವಳಿಕೆಯನ್ನು ಜಗತ್ತಿಗೆ ಸಾರಿದಂತಾಗುತ್ತದೆ. ಆಗ ನಮ್ಮ ಸಂಸ್ಕೃತಿಯ ಊರ ಕಾಯುವ ಮಾರಿಯರು ಮತ್ತದೇ ಪುರುಷ ಪ್ರಧಾನತೆಯ ಮರೆಯಲ್ಲಿ ಊರುಬಿಟ್ಟು ಹೋಗಿ ಕುಡಿದು ಹೆಂಡತಿಗೆ ಬಡಿಯುವ ಗಂಡಂದಿರ ವಿಚಾರವೇ ಮುಖ್ಯವಾಗಿ ಕಾಣುತ್ತದೆ. ಇದನ್ನು ಸ್ತ್ರೀವಾದದ ಬಟ್ಟಲಿಗೆ ಹಾಕಿ ಕಲೆಸಿ ದಲಿತರ ಮನೆಯ ತೇಪೆಗಳನ್ನು ಮುಚ್ಚುವ ಕ್ರಿಯೆ ಶುರುವಾಗುತ್ತದೆ.

ಅಂದರೆ ಭಾರತದಲ್ಲಿ ಅಂಬೇಡ್ಕರರಂಥ ಮಹಾನ್ ಜ್ಞಾನಿಯೊಬ್ಬ ಬಂದು ಇಡೀ ದೇಶದ ಏಳಿಗಾಗಿ ಸಂವಿಧಾನವೊಂದನ್ನು ರಚಿಸಿದ್ದರೂ ಅವರ ಸಮುದಾಯ ಮಾತ್ರ ಇಂದಿಗೂ ಜೀತದ ಬೇಗೆಯಲ್ಲಿ ಬೇಯುತ್ತಿದೆ. ತುಂಬಾ ವೇಗವಾಗಿ ಬೆಳೆಯುತ್ತಿರುವ ಸಾಮಾಜಿಕ ಜೀವನದಲ್ಲಿ ದಲಿತರು ಒಗ್ಗಿಕೊಳ್ಳಲಾಗದೆ 'ದೇಶದ ಅಭಿವೃದ್ಧಿ' ತಲೆಬಿಸಿಯಲ್ಲಿರುವ ಸರಕಾರಗಳನ್ನು ಕೇಳಲಾಗದೆ ವಿಚಿತ್ರ ತಲ್ಲಣ ಅನುಭವಿಸುತ್ತಿದ್ದಾರೆ. ಇಂತಹ ಸಮಸ್ಯೆಗಳನ್ನು ಕೇಳಿಸಿಕೊಳ್ಳಲು ಸಿದ್ಧರಿರದ ಆಳುವ ಮಂದಿ ವಿದೇಶಿ ಸಿದ್ಧಾಂತಗಳನ್ನು ಹೊತ್ತು ಸೇವೆಗೆ ಮುಂದಾಗುವ ಎನ್‌ಜಿಓಗಳಿಗೆ ಕುಡಿತದ ಚಟ ಬಿಡಿಸುವ ಅಥವಾ ಹೊಗೆಸೊಪ್ಪು ಬಿಡಿಸುವ, ಚರಂಡಿಗಳನ್ನು ಕ್ಲೀನಾಗಿಟ್ಟುಕೊಳ್ಳುವ,

ದಿನಾ ಸ್ನಾನಮಾಡಿ ಸ್ವಚ್ಛವಾಗಿರುವ, ಶಾಲೆಗೆ ಸೇರಿಸುವ, ವಯಸ್ಕರಿಗೆ ಅಕ್ಷರ ಕಲಿಸುವ ತರಲೆ ಪ್ರಾಜೆಕ್ಟುಗಳನ್ನು ವಹಿಸಿ ದಲಿತರ ಕೇರಿಗಳಿಗೆ ಬಿಡುತ್ತದೆ. ಆ ಎನ್‌ಜಿಓ ಮಂದಿ



ದಲಿತರ ಹಟ್ಟಿಗಳಲ್ಲಿ ಕಾಣುವ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲಾಗದೆ, ಮೂಗು ಮುಚ್ಚಿಕೊಂಡೇ ಸರಕಾರಕ್ಕೆ ರಿಪೋರ್ಟು ಬರೆಯುತ್ತಾರೆ.

ಇವರು ಮಾಡುವ ಈ 'ಅಧ್ಯಯನ'ದಿಂದ ದಲಿತರೆಂದರೆ, ಇನ್ನೂ ಶೈಶವಾವಸ್ಥೆಯಲ್ಲಿರುವ ನಾಗರಿಕತೆಯ ಸಣ್ಣ ಸಣ್ಣ ದ್ವೀಪಗಳಂತೆ ಕಂಡು ಇಡೀ ಜಗತ್ತೇ ಮೂಗು ಮುಚ್ಚಿಕೊಳ್ಳುವ ಮಟ್ಟಕ್ಕೆ ತಂದು ನಿಲ್ಲಿಸುತ್ತಾರೆ. ಇಂಥ ಸಂಧರ್ಭದಲ್ಲಿ ನಾವು ದಲಿತ ಬದುಕಿನ ಮಾತೃಪ್ರಧಾನ ಮೌಲ್ಯಗಳ ಬಗ್ಗೆ ಮಾತನಾಡಿದರೆ ಅದು ನಗೆಪಾಟಲಾಗುತ್ತದೆ ಬಹಳ ದೊಡ್ಡದಾದ ಸಂಸ್ಕೃತಿಗಳಿಗೆ ಒದಗುವ ಇಂಥ ವಿಪತ್ತುಗಳನ್ನು ಅರ್ಥ ಮಾಡಿಕೊಳ್ಳಲೂ ಇದೇ ಎನ್‌ಜಿಓಗಳು ಫೆಲೋಷಿಪ್ ಕೊಡುತ್ತವೆ. ಆಗ ಅನುಭವ, ಸಂವೇಧನೆಗಳ ಪರಿಧಿ ದಾಟಿದ ಬದುಕುಗಳು ಸ್ತ್ರೀವಾದವನ್ನೂ ದಲಿತರ ನೋವುಗಳನ್ನೂ ಅರ್ಥ ಮಾಡಿಕೊಳ್ಳುವ ಶಕ್ತಿಯಿಲ್ಲದೆ, ತಮ್ಮ ಅಸ್ಮಿತೆಯ ಬಗ್ಗೆಯೂ ಸರಿಯಾದ ನಿಖರತೆಯಿರದೆ ಗೊಂದಲದಿಂದ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ. ಅಥವಾ ಹಾಗೆ ನಂತರದ ಬದುಕನ್ನು ಬದುಕಬೇಕಾಗುತ್ತದೆ.

**ಇನ್ನು ನಾವು ಸುಮ್ಮನಿರುವಂತಿಲ್ಲ**

ಕೇವಲ ಎನ್‌ಜಿಓಗಳ ಬಗ್ಗೆ ನಾನು ಈ ಮಾತನ್ನು ಹೇಳುತ್ತಿಲ್ಲ. ನವ ವಸಾಹತೀಕರಣದ ಮತ್ತೊಂದು ರೂಪವಾಗಿರುವ ಈ ಸಂಸ್ಥೆಗಳು ನಮ್ಮ ಬದುಕುಗಳನ್ನು ಹೀಗೆ ಹರಾಜಿಗಿಟ್ಟು ಬಿಕರಿಗೆ ನಿಲ್ಲುವ ಸತ್ಯವನ್ನು ಅರಿತೂ ನಾವು ಎಲ್ಲ ಇಂದ್ರಿಯಗಳನ್ನೂ ಮುಚ್ಚಿಕೊಂಡು ಬದುಕುತ್ತಿದ್ದೇವಲ್ಲಾ ಇದಕ್ಕಿಂತಲೂ ಘೋರ ಮತ್ತೊಂದಿಲ್ಲ. ಇದರೊಂದಿಗೆ ನಮ್ಮ ಸಮುದಾಯಗಳ ಸ್ತ್ರೀ ತಾಖತ್ತು ಜೀವನ್ಮುಖಿ ಅನುಭವಗಳು ಎಲ್ಲವೂ ಹೇಳಹೆಸರಿಲ್ಲದಂತೆ ಕಳೆದುಹೋಗಿ, ಮನೆ ಮಠ ಕಳೆದುಕೊಂಡು ಬೀದಿಗೆ ಬಂದು ನಿಲ್ಲುವ ನಿರಾಶ್ರಿತರಂತೆ ಬದುಕು ನಡೆಸಬೇಕಾಗುತ್ತದೆ ಇದನ್ನು ತಪ್ಪಿಸಬೇಕಾದರೆ,ನಮ್ಮ ಸಂಸ್ಕೃತಿಯಲ್ಲಿ ಇಡೀ ಮಾನವ ಬದುಕಿನ ವಿವೇಕವನ್ನು ಬಲಿಸುವಂಥ ಜೀವಜಲವಿದೆ ಎಂಬ ಅಂಶವನ್ನು ಮೊದಲು ನಾವು ಅರ್ಥ ಮಾಡಿಕೊಂಡು ನಂತರ ಅದನ್ನು ವಿಸ್ಮತಿಗೆ ಸಿಲುಕಿರುವ ಸಂಸ್ಕೃತಿಗಳೊಟ್ಟಿಗೆ ಕೂತು ಚರ್ಚಿಸಿ ಕಾರ್ಯಪ್ರವೃತ್ತರಾಗಬೇಕು.ಈ ಕೆಲಸ ಈಗಲೇ ಆಗಬೇಕು: ಯಾಕೆಂದರೆ ಬಹಳ ವೇಗವಾಗಿರುವ ಜಾಗತಿಕ ವಿದ್ಯಮಾನಗಳೆದುರು ತಲೆಯೆತ್ತಿ ನಿಲ್ಲುವಂಥ ಸಂಸ್ಕೃತಿಗಳ ಸಾಲಿನಲ್ಲಿ ನಮ್ಮ ಸಂಸ್ಕೃತಿಗಳು ಈಗಾಗಲೇ ಸ್ಥಾನ ಪಡೆದುಕೊಂಡಿವೆ. ಅಲ್ಲಿ ನಾವು ನಮ್ಮ ಆಲೋಚನೆಗಳನ್ನು ಜಗತ್ತಿನ ಮುಂದೆ

ಇಡುವ ಅವಕಾಶವನ್ನು ಕಳೆದುಕೊಂಡರೆ ಈಗಾಗಲೇ ಈ ಪ್ರಕ್ರಿಯೆಯಿಂದ ಅಸೂಯೆಗೊಂಡಿರುವ 'ಪ್ರಬಲ' ಎಂದು ಹೇಳಿಕೊಳ್ಳುವ ಸಂಸ್ಕೃತಿಗಳ ರಾಜಕಾರಣಕ್ಕೆ ಸಿಲುಕಿ ಅನಗತ್ಯ ಶ್ರಮ ಪಡಬೇಕಾಗುತ್ತದೆ.

ಇದರೊಟ್ಟಿಗೆ ಸಂಸ್ಕೃತಿಯೊಂದು ಎಲ್ಲಾ ಮೂಲಗಳಿಂದ ಜಾಗತಿಕ ವಿವೇಕದ ಪರಿಧಿಗೆ ಜಿಗಿಯುತ್ತದೆ ಎಂದು ತಿಳಿದಾಕ್ಷಣ ನಾವು ಅಲ್ಲಿ ಹೆಚ್ಚುಕಾಲ ಉಳಿದುಕೊಂಡು



ಪರಿಣಾಮ ಬೀರಬಲ್ಲ ಮಾರ್ಗಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾಗುತ್ತದೆ ಈ ತಲೆ ಕೆಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ನಮ್ಮ ಸಾಂಸ್ಕೃತಿಕ ರಾಜಕಾರಣದ ಬಹಳ ಮುಖ್ಯ ಆದ್ಯತೆಯನ್ನು ನಾವು ನಮ್ಮ ನಡುವಿನ ಸ್ತ್ರೀ ಬದುಕಿನ ಜೀವನ್ಮುಖಿ ಆಶಯಗಳ ಬಗ್ಗೆ ಕೋಡಬೇಕಾಗುತ್ತದೆ ಯಾಕೆಂದರೆ ಸಮುದಾಯ ಈ ರೀತಿಯ ಮುಂದಿನ ಜಾಗತಿಕ ಎಂಬುದನ್ನು ನಾವೀಗಾಗಲೇ ಅರ್ಥ ಮಾಡಿಕೊಂಡಿದ್ದೇವೆ. ಹಾಗಾಗದಿದ್ದರೆ ಈ ಜಗತ್ತು ಉಳಿಯಲಾರದು ಎಂಬುದನ್ನು ಅಂಬೇಡ್ಕರ್ ಮತ್ತು ತಂದೆ ಪೆರಿಯಾರ್ ತರದ ಸಮಾಜ ವಿಜ್ಞಾನಿಗಳು ನಮಗೆ ಹೇಳಿಕೊಟ್ಟಿದ್ದಾರೆ.

ಈ ಸಂದರ್ಭದಲ್ಲಿ ನಮ್ಮಂಥವರ ಕೆಲಸವೆಂದರೆ ಕಾಲಗಳನ್ನು ಬೆಸೆದು ಒಂದು ಕಾಲದ ವಿವೇಕವನ್ನು ಇನ್ನೊಂದು ಕಾಲಕ್ಕೆ ಬಸಿಯುವ ಒಂದು ಕಾಲದ ತಪ್ಪುಗಳನ್ನು ಇನ್ನೊಂದು ಕಾಲದಲ್ಲಿ ತಡೆಯುವ ಜವಾಬ್ದಾರಿಯುತ ಕೆಲಸ. ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು ಎಂಬ ಜನಪದ ತಿಳಿವಳಿಕೆ ಈಗ ನಮಗೆ ದಾರಿದೀಪವಗಬೇಕಿದೆ.

*********

## ೧೧. ಜಾತಿ ಮತ್ತು ಅಸ್ಪೃಶ್ಯತೆಯಿಂದ ನಡೆಯುವ ದೌರ್ಜನ್ಯಗಳು

**ಡಾ. ಕೆ.ಪಿ. ಮಹಾಲಿಂಗು ಕಲ್ಕುಂದ**

ದೇಶದ ಉದ್ದಗಲಕ್ಕೂ ಶೋಷಿತರ ಮೇಲೆ ಒಂದಲ್ಲೊಂದು ರೀತಿಯ ದೌರ್ಜನ್ಯಗಳು ನಡೆಯುತ್ತಿರುವುದು ಜಾತಿ ಮತ್ತು ಅಸ್ಪೃಶ್ಯತೆಯ ಕಾರಣಕ್ಕಾಗಿ. ಇವರೆಡೂ ಅಷ್ಟು ಹದಗೆಟ್ಟಿವೆ ಎಂದು ಹೇಳುವುದೇ ಅಸಾಧ್ಯವಾದುದು. ಅಷ್ಟು ಹದಗೆಟ್ಟ ಕೆಟ್ಟ ಪದ್ಧತಿಗಳು, ಪ್ರತಿ ನಿಮಿಷಕ್ಕೂ ಈ ದೇಶದ ಶೋಷಿತರನ್ನು ಚಿಂತೆಗೆಡಿಸಿದ ಕೆಟ್ಟ ವಿಷಯಗಳಿವು.

ಪ್ರತಿನಿತ್ಯ ಮಾಧ್ಯಮಗಳಲ್ಲಿ ಇಂತಹ ದೌರ್ಜನ್ಯಗಳು ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಸ್ವಾತಂತ್ರ್ಯ ಪೂರ್ವದ ಸ್ಥಿತಿಗತಿಗಳು ಬೇರೆಯಾಗಿದ್ದಾಗ, ಒಂದು ರೀತಿಯ ದೌರ್ಜನ್ಯಗಳು ನಡೆಯುತ್ತಿದ್ದರೆ, ಸ್ವಾತಂತ್ರ್ಯ ನಂತರದಲ್ಲಿ ಚಾಣಾಕ್ಷತನದಿಂದ ತಂತ್ರ ಕುತಂತ್ರದಿಂದ ಬೇರೆ ಒಂದು ರೀತಿಯಾಗಿ ಅಸ್ಪೃಶ್ಯತೆ ಆಚರಣೆಗಳು ನಡೆಯುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ. ಅವುಗಳನ್ನು ಹೇಗೆ ಸೃಷ್ಟಿಸುತ್ತಾರೆ? ನಂತರ ಪರಿಸ್ಥಿತಿಗಳನ್ನು ಹೇಗೆ ಇರುತ್ತದೆ ಮುಂತಾದವುಗಳನ್ನು ತಿಳಿದುಕೊಳ್ಳುವುದು ಅವಶ್ಯಕವೆನಿಸುತ್ತದೆ.

ಸ್ವಾತಂತ್ರ್ಯ ಪೂರ್ವದ ೧೯೨೮ರಲ್ಲಿ ಜನವರಿ ೪ರ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಿದ ಘಟನೆಗಳ ವಿವರದಲ್ಲಿ ಅಸ್ಪೃಶ್ಯರಿಗೆ ಮೇಲಿನ ಜಾತಿಯವರು ವಿಧಿಸಿದ ಕಟ್ಟುಪಾಡುಗಳನ್ನು ನೋಡಿದರೆ ಆತಂಕವಾಗುತ್ತದೆ. ದಲಿತರು ಚಿನ್ನದ ಜರಿಯುಳ್ಳ ಪಗಡಿ ಧರಿಸಕೂಡದು. ಅಲಂಕಾರದ ಅಂಚಿನ ಸೀರೆ, ಪಂಚೆ ಧರಿಸಕೂಡದು. ಸವರ್ಣೀಯರ ಸಾವಿನ ಸುದ್ದಿಯನ್ನು ನಡೆದುಕೊಂಡೇ ಹೋಗಿ ತಿಳಿಸಬೇಕು. ಅವರ ಕುಟುಂಬಗಳ ಮದುವೆ, ದೇವಸ್ಥಾನ, ಸಮಾರಂಭಗಳಲ್ಲಿ ವಾದ್ಯಗಳನ್ನು, ಡೋಲು, ತಮಟೆ, ಕಹಳೆ ನುಡಿಸಬೇಕು. ಆಭರಣಗಳನ್ನು ಸವರ್ಣೀಯ ಹಿಂದೂಗಳು ನೋಡದ ಹಾಗೆ ಧರಿಸಬೇಕು. ಅವರ ಕುಟುಂಬಗಳಲ್ಲಿ ಹೆರಿಗೆ ಆದರೆ ಅಲ್ಲಿ ದಲಿತ ಹೆಂಗಸರು ಸೇವೆ ಸಲ್ಲಿಸಬೇಕು. ಇವುಗಳನ್ನು ಒಪ್ಪದೇ ಇದ್ದರೆ, ಊರುಬಿಟ್ಟು ಹೋಗಬೇಕು. ಇದಕ್ಕೆ ಒಪ್ಪದಿದ್ದವರಿಗೆ ನೀರು, ಸಾರ್ವಜನಿಕ ಪ್ರವೇಶ ನಿಷೇಧಿಸುತ್ತಿದ್ದರು.

ಹಾಗೆಯೇ ಗುಜರಾತ್ ರಾಜ್ಯದ 'ಕವಿತಾ', ಎಂಬ ಗ್ರಾಮದಲ್ಲಿ ೧೯೩೫ನೇ ನವೆಂಬರನಲ್ಲಿ ಅಸ್ಪೃಶ್ಯ ಸ್ತ್ರೀಯರು ಹಿತ್ತಾಳೆ, ತಾಮ್ರ, ಬಿಂದಿಗೆಗಳಲ್ಲಿ ನೀರು ಹಿಡಿಯಲು ಹೋದದ್ದಕ್ಕೆ ಊರಿನ ಬಾವಿ ಬಳಿ ಅವರನ್ನು ಸೇರಿಸದೇ ಹಲ್ಲೆ ನಡೆಸಿದರು. ೧೯೩೬



ಏಪ್ರಿಲ್‌ನಲ್ಲಿ ಜಯಪುರ ಸಂಸ್ಥಾನ ಆಡಳಿತದಲ್ಲಿ ಚಕ್ವಾರು ಎಂಬ ಗ್ರಾಮದಲ್ಲಿ ಮನೆ ದೇವರ ದರ್ಶನ ಮಾಡಿದ ಸಂತೋಷಕ್ಕೆ ಔತಣಕೂಟ ಏರ್ಪಡಿಸಿ ಪಟ್ಟಣದಿಂದ ಅಡುಗೆ ತಯಾರಿಸಲು ತುಪ್ಪ ತಂದಿದ್ದನ್ನು ಕೇಳಿ ಸಹಿಸದ ಸವರ್ಣೀಯ ಹಿಂದೂಗಳು ಅಸ್ಪೃಶ್ಯರ ಕೇರಿಗೆ ನುಗ್ಗಿ, ಊಟ ಮಾಡುತ್ತಿದ್ದವರ ಮೇಲೆ ಹಲ್ಲೆ ನಡೆಸಿ ದೌರ್ಜನ್ಯ ನಡೆಸಿದ್ದರು. (ಜಾತಿ ನಾಶ ಹೇಗೆ?) ಡಾ. ಅಂಬೇಡ್ಕರ್- ಸಂಗ್ರಹ-ಮಂಗಳೂರ ವಿಜಯ್-ಪುಟ-೭)

ಈ ದೇಶದ ಮೂಲ ವಂಶಸ್ಥರಾದ ಅಸ್ಪಶ್ಯರಿಗೆ ಸಾರ್ವಜನಿಕವಾಗಿ ಅವಮಾನಗಳು ನಡೆಯುತ್ತವೆ. ಅವರಿಗೆ ಕೆರೆ, ಬಾವಿ, ದೇವಸ್ಥಾನ, ಹೋಟೆಲ್ ಹೀಗೆ ಎಲ್ಲೆಡೆ ಪ್ರವೇಶ ನಿರ್ಬಂಧವಾಗಿದೆ. ರಸ್ತೆಯಲ್ಲಿ ನಡೆದುಕೊಂಡು ಹೋಗುವದಕ್ಕೂ ಸಹ ಬಿಡುವುದಿಲ್ಲ. ಇಷ್ಟವಾದ ಬಟ್ಟೆ, ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಹೀಗೆ ಅವರಿಗೆ ಆಭರಣ ಧರಿಸುವ ಹಕ್ಕನ್ನು ಕಸಿದು ಕೊಂಡಿದ್ದಾರೆ. ಅವರು ತಮ್ಮ ಇಷ್ಟಾನುಸಾರ ಊಟ ಮಡುವುದಕ್ಕೂ ಅಡ್ಡಪಡಿಸಿ ಹೀನ ನಡವಳಿಕೆಗಳನ್ನು ಸವರ್ಣೀಯ ಹಿಂದೂಗಳು ತೋರುತ್ತಿದ್ದಾರೆ. ಸ್ವಾತಂತ್ರ್ಯ ಬಂದ ಮೇಲೂ ಇವು ಮುಂದುವರೆದಿದೆ ಎಂಬುವುದಕ್ಕೆ ಅನೇಕ ಸಾಕ್ಷಿಗಳ ಬಗ್ಗೆ ಸಂಶೋಧನೆ ನಡೆದಿವೆ. ದಲಿತ ಚಳುವಳಿಗಳು ಪ್ರತಿಭಟನೆಗಳನ್ನು ನಡೆಸಿ ಕೆಲವು ಬದಲಾವಣೆಗಳನ್ನು ತಂದಿವೆ. ಆದರೆ ಕೆರೆ, ಬಾವಿ, ಸಾರ್ವಜನಿಕ ಉದ್ದಿಮೆ, ಅಧಿಕಾರ, ಇವುಗಳಲ್ಲಿ ಇನ್ನೂ ದಬ್ಬಾಳಿಕೆಗಳು ಜಾಸ್ತಿಯಾಗಿವೆ. ಅತಿ ತಾರತಮ್ಯದಿಂದ ಆಗಿರುವ ಕೆಲವು ದೌರ್ಜನ್ಯಗಳನ್ನು ಮಾತ್ರ ಅವಲೋಕಿಸಿ ಉದಾರಿಸುವ ಕೆಲಸ ಸಣ್ಣ ಮಟ್ಟದಲ್ಲಿ ಹೇಳಲು ಪ್ರಯತ್ನಿಸಲಾಗಿದೆ. ಈ ಬಗೆಗೆ ಈ ಕೆಳಗಿನ ಕೆಲ ಘಟನೆಗಳನ್ನು ನೋಡಬಹುದು.

೧೯೯೩ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ೧೦ಕಿಮೀ ದೂರದಲ್ಲಿರುವ ಚಾಮರಾಜನಗರ -ನಂಜನಗೂಡು ಹೆದ್ದಾರಿಯಲ್ಲಿ ಇರುವ "ಬದನವಾಳು, ಎಂಬ ಗ್ರಾಮದಲ್ಲಿ ಸಿದ್ದೇಶ್ವರ ಸ್ವಾಮಿ ದೇವಸ್ಥಾನಕ್ಕೆ ದಲಿತರು ಪ್ರವೇಶಿಸಿದರು ಎಂಬ ವಿಚಾರಕ್ಕೆ ವೀರಶೈವ ಮುಖಂಡರು, ಕ್ರಿಕೆಟ್ ಆಟ ಮುಗಿಸಿ ಬರುತ್ತಿದ್ದ ದಲಿತರ ಗುಂಪಿನ ಮೇಲೆ ದಾಳಿ ನಡೆಸಿ ಮೂವರನ್ನು ಹತ್ಯೆಗೈದುದು ಅಮಾನವೀಯ ಕೃತ್ಯವೆನ್ನಬಹುದು. ಇದು ಒಂದು ತಾಜಾ ಉದಾಹರಣೆ ಅಷ್ಟೆ.

ಈ ಘಟನೆ ಖಂಡಿಸಿ ೧೯೯೩ರ ಏಪ್ರಿಲ್‌ನಲ್ಲಿ ಬೃಹತ್ ಪ್ರತಿಭಟನಾ ಮೌನ ರಾಲಿಯನ್ನು, ನಂಜನಗೂಡಿನಲ್ಲಿ ಅನೇಕ ಜಿಲ್ಲೆಗಳಿಂದ ಬಂದಿದ್ದ ದಲಿತರು ಇತಿಹಾಸ ನಿರ್ಮಿಸುವ ಚಳವಳಿಯನ್ನು ದಲಿತ ಸಂಘರ್ಷ ಸಮಿತಿಯೊಂದಿಗೆ, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಈ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಮಾಡಿದರು. ಈ ಘಟನೆಯಿಂದ ದಲಿತರ ವಿರುದ್ಧ ಪಿತೂರಿ ನಡೆಸಿ ಪೋಲಿಸರು ಮೆರವಣಿಗೆ ಹಿಮ್ಮೆಟ್ಟಿಸಲು ಗೋಲಿಬಾರ್ ನಡೆಸಿದರು. ಗೋಲಿಬಾರ್‌ನಿಂದ ಮುಳ್ಳೂರು ಎಂಬ ಗ್ರಾಮದ ಇಬ್ಬರು ದಲಿತರು ಸಾವಿಗೀಡಾದರು. ಅಸ್ಪೃಶ್ಯತೆಯಿಂದ ಹೀನ ಆಚರಣೆಯನ್ನು ಮೈಗೂಡಿಸಿಕೊಂಡಿದ್ದರಿಂದ ಈ ಕೃತ್ಯ ನಡೆಯಿತು. ವಿಕೃತ ಮನಸ್ಸಿನಿಂದ ಈ ನೀಚ



ಕೆಲಸ ನಡೆದು ಐದು ಜನ ದಲಿತರು ತಮ್ಮ ಜೀವ ತೆತ್ತರು. ಅಷ್ಟಕ್ಕೂ ಶಾಂತಿದೂತ ಮಹಾತ್ಮಗಾಂಧಿ ಈ ಊರಿಗೆ ಬಂದು ಹೋಗಿದ್ದರು. ಇಂತಹ ಗ್ರಾಮ ದಲಿತರ ಹತ್ಯಾಕಾಂಡದಿಂದಾಗಿ ಇತಿಹಾಸ ಸೇರಿತ್ತು. ( ಪ್ರಜಾವಾಣಿ-ಆಂದೋಲನ-೧೯೯೩ ಮತ್ತು ೫ನೇ ನವೆಂಬರ್ ೨೦೧೦ ನೋಡಬಹುದು)

ಜಾತಿ ಪದ್ಧತಿ, ಅಸ್ಪೃಶ್ಯತೆ ಆಚರಣೆ ಮತ್ತು ದೇವಸ್ಥಾನ ಪ್ರವೇಶ ವಿಚಾರದಲ್ಲೂ, ದಲಿತರ ಹತ್ಯಾಕಾಂಡದಿಂದಾಗಿ ಇತಿಹಾಸ ಸೇರಿತ್ತು.(ಪ್ರಜಾವಾಣಿ- ಆಂದೋಲಣ ೧೯೯೩ ಮತ್ತು ೫ನೇ ನವೆಂಬರ್ ೨೦೧೦ ನೋಡಬಹುದು) ಜಾತಿ ಪದ್ಧತಿ, ಅಸ್ಪೃಶ್ಯತೆ ಆಚರಣೆ ಮತ್ತು ದೇವಸ್ಥಾನ ಪ್ರವೇಶ ವಿಚಾರದಲ್ಲೂ, ದಲಿತರ ಮೇಲೆ ಹಲ್ಲೆ ನಡೆದಿದೆ. ದಿನಾಂಕ ೨೧ ಏಪ್ರಿಲ್ ೨೦೧೪ರ ಇವತ್ತಿನ ದಿನದಲ್ಲೂ ನಡೆದಿದೆ. ಬಾಗಲಕೋಟ್ ಜಿಲ್ಲೆಯ ಜಮಖಂಡಿಯಲ್ಲಿ ಹನುಮಾನ್ ದೇವರ ಓಕುಳಿ ಹಾಗೂ ಉತ್ಸವ ಜರುಗುತ್ತಿದ್ದಾಗ ದೇವಸ್ಥಾನವನ್ನು ಪ್ರವೇಶಿಸಿದ ಚಂದ್ರಪ್ಪ ಪರಪ್ಪ ಹೊಸಮನಿ ಮತ್ತು ವಿಷ್ಣು ಅರ್ಜುನ ಮನಿಗೋಳ ಹಾಗೂ ರಂಗಪ್ಪ ಹೊಸಮನಿ ಅವರನ್ನು ಸವರ್ಣೀಯರು ಥಳಿಸಿ ಹಲ್ಲೆ ನಡೆಸಿದ್ದಾರೆ.(ಪ್ರಜಾವಾಣಿ-೨೧.೦೪.೨೦೧೪)

ಅದೇ ರೀತಿ ೨೦೧೩ರ ಆಗಸ್ಟ ೨೭ರಂದು ಮಂಗಳೂರು ಜಿಲ್ಲೆಯ ಮುಲ್ಕಿಯ ಕೆನರಾಬ್ಯಾಂಕ್ ಶಾಖೆಯಲ್ಲಿ ಬಿಲ್ಲವ ಮತ್ತು ದಲಿತ ಗ್ರಾಹಕರು ಸೂಕ್ತ ಬ್ಯಾಂಕಿಂಗ್ ಸೇವೆ ನೀಡದೆ, ಜಾತಿ ನಿಂದನೆ ಮಾಡಿ ಅವಮಾನಿಸುತ್ತಿದ್ದುದು ವರದಿಯಾಗಿದೆ. ಮೇಲ್ವರ್ಗಗಳು ಹೋದರೆ, ಅವರಿಗೆ ರಾಜಾತಿಥ್ಯ ನೀಡಿ ಕಳುಹಿಸುತ್ತಾರೆ ಎಂದು ದಲಿತ ವರ್ಗದ ಗ್ರಾಹಕರು ದೂರು ನೀಡಿದ್ದಾರೆ. ಸಾರ್ವಜನಿಕ ಸೇವೆ ಮಾಡುವ ಬ್ಯಾಂಕ್‌ನಲ್ಲೂ ಜಾತೀಯತೆ ನಡೆಯುತ್ತಿರುವುದು ಈ ವ್ಯವಸ್ಥೆಯ ಕೆಟ್ಟ ಪದ್ಧತಿಯನ್ನು ತೋರಿಸುತ್ತದೆ. ಈ ಬಗ್ಗೆ ಬ್ಯಾಂಕ್‌ನ ಗ್ರಾಹಕರಾದ ಭೋಜ ಮುಖಾರಿ, ಕಿಟ್ಟಪ್ಪ ಮುಖಾರಿ, ಜೆ.ವಿ. ಕೋಟ್ಯಾನ್, ವಾಮನ್ ಸಾಲ್ಯೂನ್ ಇತರರು ಬ್ಯಾಂಕರನ ಡಿಜಿಯವರಿಗೆ ದೂರು ಸಲ್ಲಿಸಿರುವುದು ಮಾಧ್ಯಮಗಳಲ್ಲಿ ಪ್ರಕಟನೆಯಾಗಿದೆ. ದಲಿತರಾದ ನೀವು ಎಂಜಲು ತಿನ್ನಲು ಮಾತ್ರ ಯೋಗ್ಯರು, ಸಾಲ ನೀಡಿದರೆ ಸಾಲ ಪಾವತಿಸದೇ ಇರುವುದರಿಂದ, ನಾವು ಸಾಲ ನೀಡುವುದಿಲ್ಲ ಎಂದು ಜಾತಿ ನಿಂದನೆ ಮಾಡಿದ್ದಾರೆ ಎಂದು ವರದಿಯಾಗಿದೆ. ದಿನಾಂಕ ೨೭ ಅಗಸ್ಟ್ ೨೦೧೩- ಪ್ರಜಾವಾಣಿ)

**ಜಾತಿಯ ಹೆಸರಿನಲ್ಲಿ ಅಮಾನವೀಯ ಪದ್ಧತಿಗಳು**

ಜಾತಿಯ ಹೆಸರಿನಲ್ಲಿ ಅಮಾನವೀಯ ಪದ್ಧತಿಗಳು ನಡೆಯುವುದು ರೂಢಿಯಾಗಿ, ಅಸ್ಪೃಶ್ಯತೆಯ ಆಚರಣೆ ನಡೆಸಲಾಗುತ್ತದೆ. ಜಾತಿಯಲ್ಲಿ ಕೀಳಾದವರು ಅಸ್ಪಶ್ಯರು ಎನ್ನುವ ಕಾರಣಕ್ಕೆ ೨೧ನೇ ಶತಮಾನದಿಂದ ಇವತ್ತಿನ ಕಾಲಮಾನದಲ್ಲೂ ಜಾತಿ ಪದ್ಧತಿ ಅಸ್ಪೃಶ್ಯರ ಮೇಲೆ ನಡೆಯುತ್ತಿದೆ. ಭಯದ ಹೆಸರಿನಲ್ಲಿ, ಮೂಢ ನಂಬಿಕೆ ಹೆಸರಿನಲ್ಲಿ ಇದು ಚಾಲ್ತಿಯಲ್ಲಿದೆ ಎನ್ನುವುದಕ್ಕೆ ಮಂಗಳೂರು ಜಿಲ್ಲೆಯ ಸುಳ್ಯ ತಾಲ್ಲೂಕಿನ ಇತ್ತಿಚೀನ



ಒಂದು ತಾಜಾ ಉದಾಹರಣೆಯನ್ನು ನೋಡಬಹುದಾಗಿದೆ. ಸುಳ್ಯ, ಚೆನ್ನಕೇಶವ ದೇವಸ್ಥಾನದ ಜಾತ್ರೆ ಸಂದರ್ಭ ಬಜಪ್ಪಿಲ ದೈವದ ಭಂಡಾರ ಆಗಮಿಸುವಾಗ (ಉತ್ಸವ) ದಾರಿಯಲ್ಲಿರುವ 'ಮುಳ್ಳಿ ಕಜೆ, ದಲಿತ ಕಾಲೋನಿಯ ಆದಿ

ದ್ರಾವಿಡ ಸಮುದಾಯಕ್ಕೆ ಸೇರಿದ ೩೮ ಕುಟುಂಬಗಳು ಮನೆ ಬಿಡುವ ಹೀನ ಪದ್ಧತಿ ಜಾರಿಯಲ್ಲಿದ್ದುದು ಕಂಡು ಬಂದಿದೆ. ಈ ಪದ್ಧತಿ ಸುಮಾರು ೪೦೦ ವರ್ಷಗಳಿಂದ ನಡೆದುಕೊಂಡು ಬಂದಿದೆ ಎಂದು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಈ ಅಮಾನವೀಯ ಪದ್ಧತಿಗಳಿಗೆ ಕಾರಣ ಹುಡುಕಿದರೆ, ಈ ಹಿಂದೆ ದಲಿತ ಕಾಲೋನಿಯ ಜನತೆಯ ಪೂರ್ವಿಕರು ದೇವರ ಭಂಡಾರ ಬರುವ ಸಮಯದಲ್ಲಿ ಜಗಳ ಮಾಡುತ್ತಿದ್ದರಂತೆ. ಮೂಳೆಯಲ್ಲಿ(ಎಲುಬಿನಲ್ಲಿ) ಪರಸ್ಪರ ಹೊಡೆದಾಡಿ ಕೊಳ್ಳುತ್ತಿದ್ದರಂತೆ. ಎಲುಬಿನ ಒಂದು ತುಂಡು ದೇವರ ಭಂಡಾರದ ಮೇಲೆ ಬಿತ್ತಂತೆ. ಇದರಿಂದ ಕೋಪಗೊಂಡ ದೇವರ ಶಾಪದಿಂದ, ಈ ಕಾಲೋನಿ ಮುಂದೆ

ನಾಶವಾಗುತ್ತದೆಂದು ಯಾರೋ ಕಿಡಿಗೇಡಿಗಳು ಹಬ್ಬಿಸಿದ ಸುಳ್ಳು ಸುದ್ದಿಯಿಂದ ಇಡೀ ಕಾಲೋನಿಯ ಜನರು ದೇವರ ಭಂಡಾರ ಸಂದರ್ಭದಲ್ಲಿ ಮನೆ ಬಿಟ್ಟು ಬೇರೆ ಕಡೆ ಇರುತ್ತಿದ್ದರೆಂದು ಸ್ಥಳೀಯರು ತಿಳಿಸುತ್ತಾರೆ. ಹೀಗೆ ಮುಂದುವರೆದ ಇದು, ಶತಮಾನಗಳೂ ಕಳೆದರೂ, ಹಾಗೆಯೇ ಮುಂದುವರೆದದ್ದು ಒಂದು ಹೇಯ ಕೃತ್ಯವೇ ಆಗಿದೆ. ಕೆಲವರಿಗೆ ಮನೆ ಬಿಡಲು ಮನಸ್ಸಿಲ್ಲದಿದ್ದರೂ ದೇವರ ಭಯದಿಂದ ಮನೆ ಬಿಡುವುದು, ಅವರೇ ಸೃಷ್ಟಿಸಿಕೊಂಡ ಅನಿವಾರ್ಯತೆಯೆನ್ನಬಹುದು. ಉಳಿದ ಸಂದರ್ಭಗಳಲ್ಲಿ ಈ ಕಾಲೋನಿ ಜನರು ಬಜಪ್ಪಿಲ ದೇವಸ್ಥಾನಕ್ಕೆ ಹೋಗಲು ಪ್ರಯತ್ನಿಸಲಿಲ್ಲ. ಇದಕ್ಕೆ ಅವಕಾಶವು ಅವರಿಗೆ ಇರಲಿಲ್ಲ. ಆದರೆ ದೇವರಿಗೆ ಕಾಣಿಕೆಯನ್ನು (ಪೂಜೆ) ಬೇರೆಯವರ ಮೂಲಕ ಪಾವತಿಸುತ್ತಿದ್ದರು.

ಸುಮಾರು ವರ್ಷಗಳಿಂದ ಜಾರಿಯಲ್ಲಿದ್ದ ಈ ಪದ್ಧತಿಯನ್ನು ೨೦೧೧ರ ಜನವರಿಯಲ್ಲಿ ಕೆಲವು ಪತ್ರಿಕೆಗಳು ಬೆಳಕು ಚೆಲ್ಲದರ ಪರಿಣಾಮ ಸಾರ್ವಜನಿಕ ವರ್ಗದಲ್ಲಿ ಚರ್ಚೆಗೆ ಗ್ರಾಸವಾಯಿತು. ಇದನ್ನು ನಿಲ್ಲಿಸಬೇಕೆಂದು ಪತ್ರಕರ್ತ ಹರೀಶ ಬಂಟ್ವಾಲ್ ನೇತೃತ್ವದಲ್ಲಿ ಆದಿ ದ್ರಾವಿಡ ಸಮಾಜ ಸಂಘಟನೆಯ ಅಧ್ಯಕ್ಷ ಕೆ.ಎಂ.ಬಾಬು, ಗ್ರಾ.ಪಂ ಸದಸ್ಯ ಸೋಮನಾಥ, ಮತ್ತಿತರು ಪ್ರಯತ್ನಿಸಿದ ಪರಿಣಾಮ ದೇವಸ್ಥಾನ ಮಂಡಳಿ ಸದಸ್ಯರು ದೈವದ ಹಿತವನ್ನು ತಿಳಿದುಕೊಂಡು ಮುನ್ನಡೆಯಬೇಕಿದೆ, ಆ ಪ್ರಕಾರ ಈ ದೇವಸ್ಥಾನಕ್ಕೆ ತಾಂಬೂಲ (ಕಾಣಿಕೆ)ವನ್ನು ನೀಡಬೇಕು ಅದರಂತೆ ಇದು ಪರಿಹಾರವಾಗಬಹುದು ಎಂದು ನಿರ್ಧರಿಸಿದರು. ಇಲ್ಲೂ ಕೂಡ ದೈವದ ಹೆಸರಿನಲ್ಲಿ ಅಸ್ಪೃಶ್ಯರನ್ನು ಎದುರಿಸುವ ಕೆಲಸ ನಡೆಯಿತು.

ತಾಂಬೂಲ (ಕಾಣಿಕೆ) ನೀಡುವ ಪರಿಹಾರ ರೂಪದಲ್ಲಿ ಬಜಪ್ಪಿಲ್ಲ ದೇವಸ್ಥಾನಕ್ಕೆ ಕಾಲೋನಿಯವರು ಆಳೆತ್ತರದ ಒಂದು ಕಂಚಿನ ದೀಪವನ್ನು ಸಮರ್ಪಿಸಬೇಕೆಂದು



ತೀರ್ಮಾನಿಸಲಾಯಿತು. ಈ ಮೂಲಕ ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕು, ತಮ್ಮ ಪಾಲನ್ನು ಸಮರ್ಪಿಸಬೇಕು . ಮತ್ತು ಇದರ ಜೊತೆಗೆ ದೇವಸ್ಥಾನಕ್ಕೆ ಎಣ್ಣೆ ನೀಡಬೇಕು. ಹೀಗೆ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಪೂಜೆ ನಡೆಸಬಹುದು.

ತಮ್ಮ ಹಿರಿಯರು ನಡೆಸಿದ ತಪ್ಪಿನಿಂದ ತಾವು ಪ್ರಾಯಶ್ಚಿತ್ತಕ್ಕಾಗಿ ಈ ಎಲ್ಲಾ ಧಾರ್ಮಿಕ ಪರಿಹಾರ ಕಾರ್ಯಗಳನ್ನು ನಡೆಸಲು ದಲಿತರು ತೀರ್ಮಾನಿಸಿ, ಪ್ರತಿ ವರ್ಷ ಜನವರಿಯಲ್ಲಿ ನಡೆಯುವ ದೈವ ಭಂಡಾರ ಬರುವಾಗ ದಲಿತರು, ಇನ್ನೂ ಮುಂದೆ ತಮ್ಮ ಮನೆಯಲ್ಲಿ ಇರಲು ಪ್ರಾರಂಭಿಸಿದರು. ಯಾರೂ ಮನೆ ಬಿಟ್ಟು ಹೊರಗೆ ಹೋಗದೆ ಇರಲು ತೀರ್ಮಾನಿಸಿದರು.

ಜಾತಿ ಧರ್ಮದ ಹೆಸರಿನಲ್ಲಿ ತಲತಲಾಂತರದಿಂದ ದಲಿತರನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದಾರೆ ಎಂಬುವುದಕ್ಕೆ ತಾಜಾ ಉದಾಹರಣೆ ಇದಾಗಿದೆ. ದೇವರ ಹೆಸರಿನಲ್ಲಿ ಮೂಢನಂಬಿಕೆ ಸೃಷ್ಠಿಸಿ, ಶೋಷಿತರಲ್ಲಿ ಭಯದ ವಾತಾವರಣ ಉಂಟುಮಾಡಿ ಹೀಗೆ ನಡೆದುಕೊಳ್ಳುವುದು ಅಮಾನವೀಯ ಕೃತ್ಯವಾಗಿದೆ.(ಪ್ರಜಾವಾಣಿ- ಗುರುವಾರ ೭ನೇ ಡಿಸೆಂಬರ್ ೨೦೧೨)

ಇಂತಹ ಹೀನ ಪದ್ಧತಿಗಳು ಹೆಚ್ಚು ದಲಿತರ ಮೇಲೆ ನಡೆಯುವುದು, ಏಕೆಂದರೆ ಹುಟ್ಟಿನಲ್ಲಿ ದಲಿತರು ಕೀಳೆಂದು ಮನು ಸೃಷ್ಠಿಸಿದ್ದರಿಂದ ಇವರಿಗೆ ಈ ಅಪಮಾನಗಳು ಆಗಾಗ ಬರುತ್ತವೆ. ಇವು ಹೆಚ್ಚೆಚ್ಚು ಮಹಿಳೆಯರ ಮೇಲೆ ನಡೆಯುತ್ತವೆ ಎನ್ನುವುದಕ್ಕೆ ಮತ್ತಷ್ಟು ಘಟನೆಗಳನ್ನು ನೋಡಬಹುದು.

**ಶೋಷಿತ ಮಹಿಳೆಯರ ಮೇಲೆ ಮೌಢ್ಯತೆ ಮತ್ತು ಶೋಷಣೆ**

ಸ್ವಾತಂತ್ರ್ಯ ಪೂರ್ವದ ಸ್ಥಿತಿಯನ್ನು ಅವಲೋಕಿಸಿದಾಗ ಮಹಿಳೆಯರ ಮೇಲೆ ಅನೇಕ ದೌರ್ಜನ್ಯಗಳು, ಕಂದಾಚಾರ, ಮೌಢ್ಯತೆಗಳಿಂದ ಕೂಡಿದ ವಿಧವಾ ಪದ್ಧತಿ, ಸತಿಸಹಗಮನ ಪದ್ಧತಿ ಹೀಗೆ ಗುರುತ್ತಿಸುತ್ತಿದ್ದೇವೆ. ಆದರೆ ಸ್ವಾತಂತ್ರ್ಯ ನಂತರದಲ್ಲಿ ಸಂವಿಧಾನದ ಮೂಲಕ ಮಹಿಳೆಯರಿಗಾಗಿ ಅನೇಕ ಕಾನೂನುಗಳು ಇದ್ದರೂ ಮಹಿಳೆಯರು ಶೋಷಣೆಗೆ ಒಳಗಾಗುತ್ತಿದ್ದಾರೆ. ಅದರಲ್ಲೂ ದಲಿತರೆನಿಸಿದ ಶೋಷಿತ ಮಹಿಳೆಯರನ್ನು ಮೌಢ್ಯದ ಹೆಸರುಗಳಿಂದ ಮತ್ತೊಂದು ರೀತಿಯ ಅಮಾನವೀಯ ಕೃತ್ಯಗಳು ನಡೆಯುತ್ತಿದೆ ಎನ್ನಬಹುದು. ಜಾತ್ರೆ, ದೈವಗಳ ಹೆಸರಿನಲ್ಲಿ ಅವರನ್ನು ಅತ್ಯಂತ ಹೀನಯವಾಗಿ ನಡೆಸಿಕೊಳ್ಳುವ ಉದಹರಣೆಗಳನ್ನು ನಾವು ಕಾಣಬಹುದು. ಇದಕ್ಕೆ ಪುಷ್ಟಿ ಎಂಬಂತೆ ಚಂದ್ರಗುತ್ತಿ ಬೆತ್ತಲೆಸೇವೆ, ದೇವದಾಸಿ ಪದ್ಧತಿ ನಡೆಯುತ್ತಿದ್ದನ್ನು ನಾವು ಕಂಡಿದ್ದೇವೆ. ದಲಿತ ಚಳವಳಿ ಚಂದ್ರಗುತ್ತಿ ಬೆತ್ತಲೆಸೇವೆಯನ್ನು ತಡೆಗಟ್ಟಲು ಧರಣಿ, ಮೆರವಣಿಗೆ, ಸಮಾವೇಶ ನಡೆಸಿದರು. ಇದನ್ನು ನಿಲ್ಲಿಸಲು ಒಂದು ಪ್ರಬಲ ಸಂಘಟನೆ ಹೋರಾಟ ಮಾಡಿದ ನಂತರ ಸರ್ಕಾರ ಇದನ್ನು ನಿಲ್ಲಿಸಿದ್ದು ಕೂಡ ಮರೆಯುವಂತಿಲ್ಲ.



ಇಂತಹ ಘಟನೆಗಳು ಒಂದಿಲ್ಲೊಂದು ರೀತಿಯಲ್ಲಿ ಈಗಲೂ ನಡೆಯುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಅರೆಬೆತ್ತಲೆ ಬೇವಿನ ಉಡುಗೆ ಸೇವೆ ಮತ್ತು ಮುತ್ತು ಕಟ್ಟುವ ಪದ್ಧತಿ' ಯ ಹೀನ

ಸಂಸ್ಕೃತಿ ಎನ್ನಬಹುದು. ಈ ಪದ್ಧತಿಗಳು ಶೋಷಿತರರಿಗೆ ಮಾತ್ರ ಇರುತ್ತದೆ. ದಾವಣಗೆರೆ ದುರ್ಗಾಂಬಿಕಾ ದೇವಿ ಜಾತ್ರೆಯ ಅಂಗವಾಗಿ ಮಂಗಳವಾರ ಮಧ್ಯರಾತ್ರಿಯಲ್ಲಿ ಬೇವಿನ ಸೊಪ್ಪು ಕಟ್ಟಿಕೊಂಡು ಅರೆಬೆತ್ತಲೆಯಾಗಿ ಮಹಿಳೆಯರು ಮೆರವಣಿಗೆ ನಡೆಸುತ್ತಾರೆ. ಇದರಿಂದ ಅವರ ಅನಾರೋಗ್ಯ ಸಂಕಷ್ಟಗಳು ನಿವಾರಣೆಯಾಗುವುದಲ್ಲದೆ, ಸಂತಾನ ಭಾಗ್ಯವು ಆಗುತ್ತದೆ ಎಂದು ಹರಕೆ ಹೊತ್ತುಕೊಂಡು ಈ ರೀತಿ ಅರಬೆತ್ತಲೆಯಲ್ಲಿ ದೇವರ ಸೇವೆ ಎಂದು ಮಾಡುತ್ತಿದ್ದಾರೆ. ನಿರಂತರವಾಗಿ ದೇಗುಲದ ಸುತ್ತ ತಣ್ಣೀರು ಸುರಿದುಕೊಂಡು ಪ್ರದಕ್ಷಿಣೆ ಹಾಕಿಕೊಂಡು ಈ ಸೇವೆ ಸರಕಾರದ ಅಂಗವಾದ ಪೋಲಿಸ್ ಮತ್ತು ಜಿಲ್ಲಾ ಅಧಿಕಾರಿಗಳ ಎದುರು ನಡೆಯುತ್ತಿರುವುದು ದುರಾದೃಷ್ಟವೆನ್ನಬಹುದು.(ಪ್ರಜಾವಾಣಿ ೧೩ನೇ ಮಾರ್ಚ ೨೦೧೪ ಪುಟ- ೪)

ಹಾಗೆಯೇ ಕೊಪ್ಪಳ ಜಿಲ್ಲೆಯಲ್ಲಿ ನಡೆಯುತ್ತಿರುವ " ಮುತ್ತು ಕಟ್ಟುವ ಪದ್ಧತಿ" ಎಂಬ ಹೀನ ಕೃತ್ಯದಿಂದ ಶೋಷಿತ ಹೆಣ್ಣು ಮಕ್ಕಳು ತಮ್ಮ ವಿದ್ಯಾಭ್ಯಾಸ, ಆಸೆ ಆಕಾಂಕ್ಷೆ ಬದಿಗೊತ್ತಿ ಮೋಸ ಹೋಗುತ್ತಿದ್ದಾರೆ. ಈ ಹಿಂದೆ ಬಹಿರಂಗವಾಗಿ ನಡೆಯುತ್ತಿದ್ದ, ಈ ಪದ್ಧತಿ ಪ್ರತಿ ಯುಗಾದಿ ಹಬ್ಬದ ಸಂದರ್ಭದಲ್ಲಿ ಗುಟ್ಟಾಗಿ ನಡೆಯುತ್ತಿದೆ. ಮದುವೆ ಮಾಡದೆ ಇತರ ಯಾರನ್ನಾದರೂ ವರಿಸುವ ಈ ಹೀನ ಕೃತ್ಯಗಳಿಗೆ, ಸಣ್ಣ ವಯಸ್ಸಿನ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದಾರೆ. ಇಲ್ಲಿ ಹೆಣ್ಣು ಮಕ್ಕಳಿಗೆ ವಯಸ್ಸಿಗೆ ತಕ್ಕಂತೆ ಮದುವೆ ಮಾಡಲು ಹೆತ್ತವರು ಮುಂದಾಗುವುದಿಲ್ಲಾ. ಗಂಡನ್ನು ಕರೆದುಕೊಂಡು ಬಂದರೆ ಗ್ರಾಮದ ಮರುಳು ಸಿದ್ದಪ್ಪ ದೇವರ ಮುಂದೆಯೇ ಕಟ್ಟಿಕೊಡಲು ಮುಂದಾಗುತ್ತಾರೆ. ಬಾಳ್ವೆ ಮಾಡಲು ಇವರಿಗೆ ಯಾವುದೇ ಗ್ಯಾರಂಟಿ ಇಲ್ಲ.

ಹೀಗೆ ಈ ಪದ್ಧತಿಯಿಂದ ಅಮಾಯಕರು ಬಲಿಯಾಗುತ್ತಿದ್ದಾರೆ. ಇಂತಹ ವಿಚಾರಗಳು ಹಿರೇ ಸಿಂದೋಗಿ ಗ್ರಾಮದ ದೇವದಾಸಿ ಕೇರಿಯಲ್ಲಿ ಇಂದಿಗೂ ಜೀವಂತವಾಗಿರುವ ಬಗ್ಗೆ ಜನರೇ ಮಾತನಾಡುತ್ತಾರೆ.

ಮಾಧ್ಯಮದವರ ಪ್ರಶ್ನೆಗೆ ಸೀತಮ್ಮ ಎಂಬ ಮಹಿಳೆಯು ಮಾತನಾಡಿರುವುದು ಈ ಬಗ್ಗೆ ಅಂದಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸೀತಮ್ಮಳ ಹೇಳಿಕೆಯ ಪ್ರಕಾರ ದೇವಸ್ಥಾನದ ಪೂಜಾರಿಯ ಸಹೋದರರಲ್ಲಿ ಯಾರಾದರೊಬ್ಬರಿಗೆ ಹೆಣ್ಣು ಮಕ್ಕಳನ್ನು ಪಡೆಯುತ್ತಾರೆ. ಅವರು ಬಾಳನ್ನು ನಡೆಸಬಹುದು ಎಂದು ಹೇಳುವ ಅಮಾನವೀಯ ಕೃತ್ಯವನ್ನು ಪತ್ರಿಕೆಗಳು ಬಯಲಿಗೆಳೆದಿವೆ. ಈ ರೀತಿ ಸುಮಾರು ೨೦೦ ಮಂದಿ ಮುತ್ತು ಕಟ್ಟಿದವನ ಜತೆಗಿದ್ದಾರೆ ಎಂದು ತಿಳಿಯುತ್ತದೆ. ನಂತರ ಈ ಹೆಣ್ಣು ಮಕ್ಕಳು ಬೀದಿ

ಪಾಲಾಗುತ್ತಿದ್ದಾರೆ. ಇದರಿಂದ ಹೆಣ್ಣು ಮಕ್ಕಳು ಅಡ್ಡದಾರಿ ಹಿಡಿಯಲು ಹಿರಿಯರು ಮುಂದಾಗುತ್ತಿದ್ದಾರೆ. ವಯಸ್ಸಾದವರು ಕೂಲಿ ಕೆಲಸಕ್ಕೆ ಹೋಗುತ್ತಾರೆ. ಇಂತಹ ಅಮಾನವೀಯ ಘಟನೆಗಳಿಗೆ ಕಾರಣವನ್ನು ಹುಡುಕಿದರೆ, ಇಲ್ಲಿಯ ಹೆಣ್ಣು ಮಕ್ಕಳು ಸಹಜವಾಗಿ ಮದುವೆಯಾದರೆ, ಆ ಕುಟುಂಬ ಹಾಳಾಗುತ್ತದೆಂದು ಹುಡುಗರು ಬೇರೆ ಕಡೆ ಹೆಣ್ಣು ನೋಡಿ ಮದುವೆಯಾಗುತ್ತಾರೆ. ಅವರಿಗೆ ಹುಟ್ಟಿದ ಹೆಣ್ಣು ಮಕ್ಕಳನ್ನು ಈ ಸಂಪ್ರದಾಯದ ಪ್ರಕಾರ ದೇವರಿಗೆಂದು ಬಿಡುತ್ತಾರೆ. ಇಂತಹ ಮೂಢನಂಬಿಕೆ ಭೂತಕ್ಕೆ ಈ ಜನರು ಇಂದು ಸಹ ಸಿಲುಕ್ಕಿದ್ದಾರೆ.(ಪ್ರಜಾವಾಣಿ-೧೩-೦೩-೨೦೧೪ರ ವರದಿ)

**ಮಡೆಸ್ನಾನ ಮತ್ತು ಪಂಕ್ತಿ ಬೇಧ ಎಂಬ ಅನಿಷ್ಟ ಪದ್ಧತಿ**

ಬ್ರಾಹ್ಮಣರು ಮತ್ತು ಮೇಲ್ಜಾತಿಗೆ ಸೇರಿದ ನಿರ್ದಿಷ್ಟ ಸಮುದಾಯದ ಜನರು ಊಟ ಮಾಡಿ ಬಿಟ್ಟ ಎಂಜಲೆಲೆಯ ಮೇಲೆ ಶೋಷಿತ ಸಮುದಾಯ ಅಲ್ಲದೆ, ಇತರರು ಉರುಳು ಸೇವೆ ಮಾಡಿ, ಒದ್ದಾಡಿ ಎದ್ದರೆ, ದೇವರಿಗೆ ನೈವೇಧ್ಯ ರೂಪದಲ್ಲಿ ಹರಕೆ ತೀರಿಸಿದಂತೆ, ಇದರಿಂದ ಚರ್ಮರೋಗ, ಪಾರ್ಶುವಾಯು ವಾಸಿಯಾಗುತ್ತದೆಂಬ ಕುರುಡು ನಂಬಿಕೆಯ ಮಡೆಸ್ನಾನ, ಎಡೆಸ್ನಾನ ನಿಜಕ್ಕೂ ಅಮಾನವೀಯ ಮೂಢನಂಬಿಕೆಯ ಪರಮಾವಧಿ ಮತ್ತು ಇತರರಿಗೆ ಮಾಡಿದ ಅಪಮಾನವೆನ್ನಬಹುದು. ಇಂತಹ ಘಟನೆ ಸರಕಾರದ ಮುಜರಾಯಿ ದೇವಸ್ಥಾನದ ಕುಕ್ಕೆಸುಬ್ರಮಣ್ಯದಲ್ಲಿ ನಡೆಯುತ್ತಿದೆ. ಆದರೆ ಇದರ ಹಿನ್ನಲೆ ಬೇರೆಯದೆ ಆಗಿದೆ.

ಇದಕ್ಕೆ ಕುಕ್ಕೆ ಸುಬ್ರಮಣ್ಯಸ್ವಾಮಿ ಸನ್ನಿಧಿಯ ಆಸುಪಾಸಿನಲ್ಲಿ ವಾಸವಾಗಿರುವವರು ತಂತ್ರಗಾರಿಕೆಗೆ ಬಲಿಯಾಗಿರುವ, ಕೆಳ ಸಮುದಾಯದ ಪ್ರಾಚೀನವಾಗಿ ಬದುಕಿ ತೋರಿಸಿದ "ಮಲೆ ಕುಡಿಯರು" ಇತಿಹಾಸದಲ್ಲಿ ಇವರು ಬೆಟ್ಟದ ಸಾಲುಗಳಲ್ಲಿ ಮಳೆನಾಡದ್ದರಿಂದ ಮಲೆ ಬೆಟ್ಟ ಸಾಲುಗಳಲ್ಲಿ ತಾವು ಜೀವನ ನಡೆಸಿದವರು " ಹಿರಿತಲೆಮಾರಿನಲ್ಲಿ ಆದಿ ಕುಕ್ಕೆ/ಕುಕ್ಕಾಲವೆಂದು ಕರೆದುಕೊಳ್ಳುವ ಸುಬ್ರಮಣ್ಯದ ಸುತ್ತಮುತ್ತ ಇರುವ ಮೂಲ ನಿವಾಸಿಗರಿವರು" (ಡಾ. ಪೂವಪ್ಪಕಣಿಯೂರು- ಸುಳ್ಯ, ಸಂಗತ- ಪ್ರಜಾವಾಣಿ ೨೦-೧೨-೨೦೧೨)

ಆದಿ ಕುಕ್ಕೆಯ ಮೂಲ ನಾಗಾರಾಧನೆಯ ಹಿಂದಿರುವ ಸಮುದಾಯದ ಲೋಕದೃಷ್ಟಿ ನಂಬಿಕೆಯನ್ನು ಶಿವಕುಮಾರ ಸುಬ್ರಹ್ಮಣ್ಯನಿಗೆ ಅನ್ವಯಿಸಿ ಲಿಂಗರೂಪಿ ಶಿವನ ಆರಾಧನೆಯಾಗುತ್ತಿದ್ದ ಸ್ಥಳದಲ್ಲಿ ಅವನಿಗೆ ಪ್ರಾಶಸ್ತ್ರ ನೀಡಲಾಗಿದೆ. ಮಣ್ಣಿನಲ್ಲಿ ಉರುಳುವ ಆಚರಣೆಯನ್ನು ದೇವಸ್ತಾನದ ಪ್ರಾಂಗಣಕ್ಕೆ ಸ್ಥಳಾಂತರಿಸಲಾಗಿದೆ. ಮೂಲದಲ್ಲಿಲ್ಲದ 'ಮಡೆಸ್ನಾನ' ಎನ್ನುವ ಒಂದು ಸಮುದಾಯಕ್ಕೆ ಸಂಬಂಧಿಸಿದ ಮಡಿ- ಶ್ರೇಷ್ಠತೆಯ ಪರಿಕಲ್ಪನೆಯನ್ನು ಕಾಲಾನುಕ್ರಮ ಬದಲಾಯಿಸಲಾಗಿದೆ.

ವೇದ ಮೂಲದ ವೈದಿಕರ ಎಂಜಲೆಲೆಯ, ಹಾಸುಕಲ್ಲಿನ ಪ್ರಾಂಗಣದಲ್ಲಿ ಮಡೆಸ್ನಾನನಡೆಸುವುದೇ ಔಚಿತ್ಯ. ಏಕೆಂದರೆ ಚರ್ಮದ ಆರೋಗ್ಯ ರಕ್ಷಿಸುವ ರೋಗ ನಿರೋಧಕ ಸತ್ವ ಎಂಜಲೆಲೆಗಾಗಿ, ಹಾಸುಕಲ್ಲಿಗಾಗಲಿ ಇರುವುದಕ್ಕಿಂತ ಮಣ್ಣಿಗಿರುವುದೇ ಹೆಚ್ಚು ಸತ್ಯ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ(ಅದೇ, ಪುಟ)

ಮುಂದುವರೆದ ತಜ್ಞರು, ಶೈವ ಕೇಂದ್ರವಾದ ಕುಕ್ಕೆ ಸುಬ್ರಹ್ಮಣ್ಯದಲ್ಲಿ ವಾಸ್ತವವಾಗಿ, ಪ್ರಸಾದ ರೂಪವಾಗಿ ಭಕ್ತರಿಗೆ ಶಿವಪ್ರಿಯವಾದ ವಿಭೂತಿ, ಬಿಲ್ವ, ತುಂಬೆ ಹೂವಿನ ಬದಲು ಹರಿಪ್ರಿಯ ಗಂಧ, ತುಳಸಿ ನೀಡುತ್ತಾ ಬದಲಾಯಿಸಿರುವುದರಿಂದ ಮಡೆಸ್ನಾನವನ್ನು ನಿಷೇದಿಸುವುದು ಕಷ್ಟವಾಗುವುದಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಇದರಿಂದ ವ್ಯಕ್ತಿ ಸ್ವಾಭಿಮಾನಕ್ಕೆ ಗೌರವ ಸಿಗುವುದಿಲ್ಲವೆಂದು ನೇರವಾಗಿ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಈ ಮೂಲಕ ಇದರ ಒಳಮರ್ಮ ಒಳಹೊಕ್ಕಿ ನೋಡಿದ್ದಾರೆ. ಇಂತಹ ಮನುಷ್ಯ ವಿರೋಧಿ ಮಡೆಸ್ನಾನದ ಎಂಜಲೆಲೆ ಉರುಳುಸೇವೆಯನ್ನು ನಿಷೇಧಿಸುವಂತೆ ಆಗ್ರಹಿಸಿ ದಲಿತ ಹಿಂದುಳಿದ ಅಲ್ಪ ಸಂಖ್ಯಾತ ಸಮನ್ವಯ ವೇದಿಕೆ ಮತ್ತು ದಸಂಸ ಹಾಗೂ ಅನೇಕ ಪ್ರಗತಿ ಪರ ಚಿಂತಕ ಸಾಹಿತಿಗಳು ಮತ್ತು ಇತರೆ ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸಿವೆ. ದ.ಹಿಂ.ಅ. ಸಮನ್ವಯ ವೇದಿಕೆ ರಾಜ್ಯಾದ್ಯಕ್ಷ ಕೆ.ಎಸ್.ಶಿವರಾಂ ಖುದ್ದಾಗಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಮುಂದೆ ಪ್ರತಿಭಟಿಸಿದ್ದಕ್ಕೆ, ಅವರ ಮೆಲೆ ಮೇಲ್ಜಾತಿ ಕುತಂತ್ರಿಗಳು ಮಲೆಕುಡಿ ಜನಾಂಗಗಳನ್ನು ಬಿಟ್ಟು ಹಲ್ಲೆ ನಡೆಸಿದ್ದಾರೆ. ಆದರೂ ಕೆ.ಎಸ್. ಶಿವರಾಂರಿಂದ ಇದರ ನಿಷೇಧಕ್ಕೆ ಹೋರಾಟ ನಡೆಯುತ್ತಲೇ ಇದೆ. ಸಾಮಾನ್ಯ ಜನ ಸಮುದಾಯದ ಮೇಲೆ ಮೌಢ್ಯತೆ ಬಿತ್ತುವ ಇಂತಹ ಆಚರಣೆ ವಿರುದ್ಧ ನಿರಂತರ ಪ್ರತಿಭಟನೆ ನಡೆಯುತ್ತಿದೆ. ಖ್ಯಾತ ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್, ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿ ಚಳವಳಿಯಲ್ಲಿ ಭಾಗವಹಿಸಿದ್ದಾರೆ. ಅತ್ಯಂತ ಅಮಾನವೀಯ ಆಚರಣೆ, ಮನುವಾದಿಗಳ ಒತ್ತಡದಿಂದ ನಡೆಯುವ ಕ್ರೂರ ಶೋಷಣೆ ಇದು ಎಂದು ಖಂಡಿಸಿದ್ದಾರೆ.

ಈ ವಿಚಾರವಾಗಿ ಸಾಮಾಜಿಕ ಪರಿಸ್ಥಿತಿಯನ್ನು ಮೌಢ್ಯತೆಗೆ ತಳ್ಳುವ ಈ ಹುನ್ನಾರವನ್ನು ಜೀವಂತವಾಗಿ, ಬ್ರಾಹ್ಮಣತ್ವವಿರುವವರು ಮಾಡುತ್ತಿದ್ದಾರೆ ಎಂದು ಹಿರಿಯ ದಲಿತ ಚಳುವಳಿಗಾರ ಹರಿಹರ ಆನಂದಸ್ವಾಮಿ ಅಭಿಪ್ರಾಯ ಪಡುತ್ತಾರೆ. ಈ ನಿಟ್ಟಿನಲ್ಲಿ ಕೆ.ಎಸ್.ಶಿವರಾಂ ಜೊತೆ ಸೇರಿ ೨೦೧೦ ಡಿಸೆಂಬರ್ ೧ ಮತ್ತು ೧೨ರಲ್ಲಿ ಕುಕ್ಕೆ ಸುಬ್ರಹ್ಮಣ್ಯದಲ್ಲಿ, ೯-೧೨-೨೦೧೦ರಲ್ಲಿ ಮೈಸೂರಿನಲ್ಲಿ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಮುಂದುವರೆದು ಖ್ಯಾತ ಚಿಂತಕ ಪ್ರೊ.ಜಿ.ಕೆ.ಗೋವಿಂದರಾವ್‌ರವರು ಶೂದ್ರ ಸಮುದಾಯದವರನ್ನು ಹಿಂದೂ ಧರ್ಮದಲ್ಲಿ ಉಳಿಸಿಕೊಂಡು ಪುಷ್ಟಿ ಹೆಚ್ಚಿಸಿಕೊಳ್ಳಲು ಮೇಲ್ವರ್ಗಗಳು ಈ ರೀತಿ ಮಾಡುತ್ತಿದ್ದಾರೆ" ಎಂದು ಅಭಿಪ್ರಾಯಪಡುತ್ತಾರೆ.

"ಯಾರೋ ತಿಂದು ಬಿಟ್ಟ ಎಂಜಲೆಲೆಯ ಮೇಲೆ ಉರುಳಾಡುವುದನ್ನು ತಳ ಸಮುದಾಯದವರು ಬಿಡಬೇಕು. ಇಂತಹ ಸ್ಥಳಗಳಿಗೆ ಹೋಗಬಾರದು. ಇದು ದಲಿತ

ಸಮುದಾಯಗಳಿಗೆ ಘನತೆ ತರುವಂಥಹ ಕೆಲಸವಲ್ಲ" ಎಂದು ಇದನ್ನು ಇನ್ನೂ ಉಗ್ರವಾಗಿ ಖ್ಯಾತ ರಾಜಕೀಯ ಧುರೀಣ ವಿ.ಶ್ರೀನಿವಾಸ ಪ್ರಸಾದ್ ಅಸಮಧಾನ ವ್ಯಕ್ತಪಡಿಸುತ್ತಾರೆ.

ಇಂತಹ ಅಮಾನುಷ ಕೃತ್ಯವನ್ನು ಸಮಾಜವಾದಿ ಪ.ಮಲ್ಲೇಶ್, ಜಾನಪದ ವಿದ್ವಾಂಸ ಪ್ರೊ, ಕಾಳೇಗೌಡ ನಾಗವಾರ, ಪ್ರಜಾವಾಣಿ ಪತ್ರಿಕೆ ಸ್ಥಾನಿಕ ಸಂಪಾದಕ ರವೀಂದ್ರಭಟ್ಟ, ಪತ್ರಕರ್ತ, ಸೋಮಯ್ಯ ಮಲೆಯೂರು, ದಸಂಸ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ, ನೆಲೆ ಕ.ರಾ. ಗೋಪಾಲಕೃಷ್ಣ, ದೇವಗಹಳ್ಳಿ ಸೋಮಶೇಖರ್, ಸಾಹಿತಿ ಪೋರಿಗಾಲಿ ಮರಡೆಶಮೂರ್ತಿ, ಡೀಡ್ ಸಂಸ್ಥೆ ನಿರ್ದೇಶಕ ಎಸ್, ಶ್ರೀಕಾಂತ್, ಸಿಕ್ರಿ ಪ್ರಸನ್ನ, ದಲಿತ ಪ್ರಗತಿ ಪಂಥದ ನಾಗರಾಜ್ ತಲಕಾಡು, ರಾಷ್ಟ್ರಕ್ರಾಂತಿ ಸೇವಾದಳದ ಮಹದೇವಯ್ಯ, ಮರಿದಂಡಯ್ಯ (ಬುದ್ಧ), ಬೆಟ್ಟಯ್ಯಕೋಟೆ, ಬಿ.ಡಿ. ಶಿವಬುದ್ಧಿ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಖಂಡಿಸಿದ್ದಾರೆ. ಇಷ್ಟಾದರೂ ಮನುಷ್ಯರಿಗೆ ಸ್ವಾಭಿಮಾನ ನೀಡದ ಆಚರಣೆಯಾದ ಮಡೆ ಮಡೆಸ್ನಾನ ಇನ್ನೂ ನಿಲ್ಲದೆ, ಇರುವುದು ಒಂದು ದುರಂತ. ಇಂತಹ ಹೀನಾಯ ಕೃತ್ಯವನ್ನು ಯಾವ ನೆಲೆಗಟ್ಟಿನಲ್ಲಿ ಸಮರ್ಥಿಸಿಕೊಳ್ಳುತ್ತಿದ್ದಾರೆಂಬುವುದು ನಂಬಲಾರದ ಅಸತ್ಯ ಎನ್ನಬಹುದು.

ಹಾಗೆಯೇ ದೇವರ ಸನ್ನಿಧಿ' ಎಂಬ ಸಾರ್ವಜನಿಕ ಸ್ಥಳಗಳಲ್ಲಿ 'ಪಂಕ್ತಿ ಬೇಧ' ನಡೆಸುವುದು ಕೂಡ ಒಂದು ರೀತಿಯ ಅಮಾನುಷವಾದುದು. ಬ್ರಾಹ್ಮಣರಿಗೆ ಒಂದು ಕಡೆ ಊಟದ ವ್ಯವಸ್ಥೆ, ಇತರೆ ಜನರಿಗೆ ಒಂದು ವ್ಯವಸ್ಥೆ ಹೀಗೆ ಬೇರೆ ಬೇರೆಯಾಗಿ ವ್ಯವಸ್ಥೆ ಮಾಡಲಾಗಿದೆ. ಶೃಂಗೇರಿ, ಉಡುಪಿ ಕೃಷ್ಣಮಠದಂತಹ ಅಂತರಾಷ್ಟ್ರೀಯ ಖ್ಯಾತಿ ಪಡೆದ ಸ್ಥಳಗಳಲ್ಲಿ ಪಂಕ್ತಿಬೇಧ ನಡೆಯುತ್ತಿರುವುದು ಒಂದು ಮನುಷ್ಯ ವಿರೋಧಿ ನಡೆಯಾಗಿದೆ.

ಸಾರ್ವಜನಿಕವಾಗಿ ದೇವಸ್ಥಾನ, ಮಠಗಳಿಗೆ ದೇಣಿಗೆ ಕೊಡುವ ಸಮುದಾಯಕ್ಕೆ ಸೇರಿದ 'ಬಂಟ' ಸಮಾಜದ ಮಹಿಳೆಯೊಬ್ಬರಿಗೆ ಉಡುಪಿಯ ಶ್ರೀ ಕೃಷ್ಣ ಮಠದ ಭೋಜನ ಶಾಲೆಯಿಂದ ಬಲವಂತವಾಗಿ ಹೊರಗೆ ಕಳುಹಿಸಿದ ಘಟನೆ ದಿನಾಂಕ ೪ ಮಂಗಳವಾರ ಏಪ್ರಿಲ್ ೧೪ರಂದು ನಡೆದಿದೆ.(ಅಂದಿನ ಪ್ರಜಾವಾಣಿ ವರದಿ) ಬಂಟರ ಸಂಘದ ಜನರು ಈ ಬಗ್ಗೆ ಪ್ರತಿಭಟನೆಯನ್ನು ನಡೆಸಿದರು. ನೊಂದ ಮಹಿಳೆ ಉಪನ್ಯಾಸಕಿಯಾಗಿದ್ದು, ಬೆಂಗಳೂರಿನಲ್ಲಿ ಮಾಧ್ಯಮದ ಮುಂದೆಯೂ ಇದನ್ನು ಖಂಡಿಸಿ ಪ್ರಕರಣ ದಾಖಲಿಸಲು ಆಗ್ರಹಪಡಿಸಿದ್ದರು. ಇವತ್ತಿನ ಇಂತಹ ದಿನದಲ್ಲೂ ಪಂಕ್ತಿ ಬೇಧ ನಡೆಯುತ್ತಿದೆ.

ಜಾತ್ಯಾತೀತ ತತ್ವವಿರುವ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ, ವರ್ಣಬೇಧವನ್ನು ಸೃಷ್ಟಿಸಿ, ಜಾತಿಭೇದ ನಡೆಸುವ ಇಂತಹ ಕೃತ್ಯ ಹೇಯವಾದುದು. ಇದನ್ನು ಸರಕಾರ ನಿಷೇಧಿಸಿ ಸಮಾನತೆ ತರಬೇಕು.

**ಮರ್ಯಾದೆ ಹತ್ಯೆ ಎಂಬ ಮರ್ಯಾದೆಗೇಡು ಪೈಶಾಚಿಕ ಕೃತ್ಯಗಳು**

ಮಾನವರು ದಿನನಿತ್ಯ ತಮ್ಮ ನಿತ್ಯ ಕರ್ಮಗಳನ್ನು ಹೇಗೆ ಮುಗಿಸುತ್ತಾರೋ ಹಾಗೆಯೇ ಹಸಿವು, ದಾಹ, ನೀಗಿಸುವಂತೆ ಪ್ರೀತಿ ಪ್ರೇಮ ಕೂಡ ಸಹಜವಾಗಿ ಮೂಡುವಂತಹ ಗುಣಗಳು. ಇಂತಹ ಗುಣಗಳನ್ನು ಅಳವಡಿಸಿಕೊಳ್ಳಲು ಮನುಷ್ಯರಿಗಲ್ಲದೆ, ಮತ್ಯಾರಿಗೂ ಈ ಭೂಮಿ ಮೇಲೆ ಸಾಧ್ಯವಾಗುವುದಿಲ್ಲ. ಏಕೆಂದರೆ ಸಕಲ ಜೀವಿಗಳಲ್ಲೇ ಮನುಷ್ಯ ಬುದ್ಧಿವಂತ ಎಂಬ ಕಾರಣಕ್ಕಾಗಿ ಇದು ಸಾಧ್ಯವಾಗುತ್ತದೆ. ಮನುಷ್ಯರ ಸಹಜ ಗುಣದಂತೆ ಯುವ ವಯಸ್ಸಿನಲ್ಲಿ ಪ್ರೀತಿ ಪ್ರೇಮ ಮೂಡುವುದು, ಯುವಕ ಯುವತಿ ಪರಸ್ಪರ ಪ್ರೀತಿಸುವುದು ಸಹಜ. ಈ ಪ್ರೀತಿ ವಿಚರದಲ್ಲಿ ಜಾತಿ-ಧರ್ಮ ಲೆಕ್ಕಕ್ಕೆ ಬರುವುದಿಲ್ಲ. ಎಂಬುದಕ್ಕೆ ಇತಿಹಾಸದಲ್ಲಿ ನಡೆದ ಘಟನೆಗಳಿಂದ ತಿಳಿಯುತ್ತದೆ. ಇಂತಹ ಕ್ರಿಯೆಯಲ್ಲಿ ರಾಜ ಮಹಾರಾಜರು ಸಿಕ್ಕಿ ಹಾಕಿಕೊಂಡಂತಹ ಅನೇಕ ಘಟನೆಗಳು ನಡೆದು ಹೋಗಿವೆ.

ಆದರೆ ಇವೆಲ್ಲಕ್ಕೂ ಮಿಗಿಲಾದುದು 'ಜಾತಿ' ಎಂಬ ಕಾರಣಕ್ಕಾಗಿ ಅನ್ಯ ಧರ್ಮೀಯರು, ಅನ್ಯ ಜಾತಿಯವರು ಪ್ರೀತಿಸಿ ಮದುವೆಯಾದರೆ ಈ ವ್ಯವಸ್ಥೆ ಸಹಿಸುವುದಿಲ್ಲ. ಇದು ಅನಾದಿ ಕಾಲದಿಂದಲೂ ತಂತ್ರ ಕುತಂತ್ರಕ್ಕೆ ಪ್ರೀತಿಸಿದವರು ಬಲಿಯಾದದ್ದನ್ನು ನೋಡಿದ್ದೇವೆ, ಕೇಳಿದ್ದೇವೆ. ಅದರಲ್ಲೂ ಕೆಳ ಜಾತಿಯ ಯುವಕ-ಯುವತಿಯರು ಪ್ರೀತಿಸಿದ್ದಕ್ಕೆ, ನಡೆಯುವ ಹತ್ಯೆಗಳಿಗೆ 'ಮರ್ಯಾದೆ ಹತ್ಯೆ' ಎಂಬ ಪೈಶಾಚಿಕ ಕೃತ್ಯವನ್ನು ಮನುಷ್ಯರು ಮಾಡುತ್ತಿರುವುದು ರಾಕ್ಷಸ ಪ್ರವೃತ್ತಿಯನ್ನು ತೋರಿಸುತ್ತಿದೆ. ತಾವು ಜನ್ಮ ನೀಡಿ ಸಾಕಿ ಸಲುಹಿ, ವಿದ್ಯಾಭ್ಯಾಸ ನೀಡಿ ದೊಡ್ಡವರನ್ನಾಗಿ ಮಾಡಿದ ತಂದೆ, ತಾಯಿ, ಬಂಧುಗಳೇ ತಮ್ಮ ರಕ್ತ ಹಂಚಿಕೊಂಡು ಹುಟ್ಟಿದ ಹೆಣ್ಣು ಮಕ್ಕಳನ್ನು ಕೆಳ ಜಾತಿಯವರನ್ನು ಪ್ರೀತಿಸಿ ಮದುವೆಯಾದರು ಎಂದು ಹತ್ಯೆ ಮಾಡುತ್ತಿದ್ದಾರೆ. ನಿಜಕ್ಕೂ ಇದು ಮನುಷ್ಯರು ಮಾಡುವಂತದ್ದಲ್ಲ. ಅದಕ್ಕೆ ಇದನ್ನು 'ರಾಕ್ಷಸ ಕೃತ್ಯ' ಎಂದು ಕರೆದದ್ದು.

ಇಂತಹ ಘಟನೆಗಳು ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ನಡೆಯುತ್ತಿರುವುದು ಇಡೀ ಅಂಟಿದ ಕಳಂಕ ಎನ್ನಬಹುದು. ಮದ್ದೂರು ತಾಲ್ಲೂಕಿನ ಅಂಬಲವಾಡಿ ಗ್ರಾಮದ ಸವರ್ಣೀಯ ಹುಡುಗಿಯೊಬ್ಬಳು ಕೆಳ ಜಾತಿಯ ಯುವಕರನ್ನು ಪ್ರೀತಿಸಿದ್ದಕ್ಕೆ, ಸುವರ್ಣ ಎಂಬ ಆ ಹೆಣ್ಣು ಮಗಳನ್ನು ಮದುವೆ ಮಾಡಿಕೊಂಡ ಆ ಯುವಕನ ಎದುರೇ ಸುವರ್ಣಳನ್ನು ಹತ್ಯೆ ಮಾಡಿರುವುದು ಮಾನವ ಕುಲಕ್ಕೆ ಒಂದು ದೊಡ್ಡ ಕಳಂಕ. ಇಂತಹ ಹತ್ಯೆಯನ್ನು 'ಮರ್ಯಾದೆ ಹತ್ಯೆ' ಎಂದು ಹೇಳುತ್ತಿರುವುದು. ಇದನ್ನು ಒಂದು ಅಮಾನುಷ ವರ್ತನೆ ಎನ್ನಬಹುದು. (೧೮.೦೧.೨೦೦೨ ಪ್ರಜಾವಾಣಿ ವಾರ್ತೆ) ಆದ್ದರಿಂದ ಇದನ್ನು ಮರ್ಯಾದೆಗೇಡು ಹತ್ಯೆ ಎಂದು ನಾವು ಕರೆಯಬೇಕು.

**ಮರ್ಯಾದೆ ಹತ್ಯೆ ಎಂಬ ಮರ್ಯಾದೆಗೇಡು ಪೈಶಾಚಿಕ ಕೃತ್ಯಗಳು**

ಮಾನವರು ದಿನನಿತ್ಯ ತಮ್ಮ ನಿತ್ಯ ಕರ್ಮಗಳನ್ನು ಹೇಗೆ ಮುಗಿಸುತ್ತಾರೋ ಹಾಗೆಯೇ ಹಸಿವು, ದಾಹ, ನೀಗಿಸುವಂತೆ ಪ್ರೀತಿ ಪ್ರೇಮ ಕೂಡ ಸಹಜವಾಗಿ ಮೂಡುವಂತಹ ಗುಣಗಳು. ಇಂತಹ ಗುಣಗಳನ್ನು ಅಳವಡಿಸಿಕೊಳ್ಳಲು ಮನುಷ್ಯರಿಗಲ್ಲದೆ, ಮತ್ಯಾರಿಗೂ ಈ ಭೂಮಿ ಮೇಲೆ ಸಾಧ್ಯವಾಗುವುದಿಲ್ಲ. ಏಕೆಂದರೆ ಸಕಲ ಜೀವಿಗಳಲ್ಲೇ ಮನುಷ್ಯ ಬುದ್ಧಿವಂತ ಎಂಬ ಕಾರಣಕ್ಕಾಗಿ ಇದು ಸಾಧ್ಯವಾಗುತ್ತದೆ. ಮನುಷ್ಯರ ಸಹಜ ಗುಣದಂತೆ ಯುವ ವಯಸ್ಸಿನಲ್ಲಿ ಪ್ರೀತಿ ಪ್ರೇಮ ಮೂಡುವುದು, ಯುವಕ ಯುವತಿ ಪರಸ್ಪರ ಪ್ರೀತಿಸುವುದು ಸಹಜ. ಈ ಪ್ರೀತಿ ವಿಚರದಲ್ಲಿ ಜಾತಿ-ಧರ್ಮ ಲೆಕ್ಕಕ್ಕೆ ಬರುವುದಿಲ್ಲ. ಎಂಬುದಕ್ಕೆ ಇತಿಹಾಸದಲ್ಲಿ ನಡೆದ ಘಟನೆಗಳಿಂದ ತಿಳಿಯುತ್ತದೆ. ಇಂತಹ ಕ್ರಿಯೆಯಲ್ಲಿ ರಾಜ ಮಹಾರಾಜರು ಸಿಕ್ಕಿ ಹಾಕಿಕೊಂಡಂತಹ ಅನೇಕ ಘಟನೆಗಳು ನಡೆದು ಹೋಗಿವೆ.

ಆದರೆ ಇವೆಲ್ಲಕ್ಕೂ ಮಿಗಿಲಾದುದು 'ಜಾತಿ' ಎಂಬ ಕಾರಣಕ್ಕಾಗಿ ಅನ್ಯ ಧರ್ಮೀಯರು, ಅನ್ಯ ಜಾತಿಯವರು ಪ್ರೀತಿಸಿ ಮದುವೆಯಾದರೆ ಈ ವ್ಯವಸ್ಥೆ ಸಹಿಸುವುದಿಲ್ಲ. ಇದು ಅನಾದಿ ಕಾಲದಿಂದಲೂ ತಂತ್ರ ಕುತಂತ್ರಕ್ಕೆ ಪ್ರೀತಿಸಿದವರು ಬಲಿಯಾದದ್ದನ್ನು ನೋಡಿದ್ದೇವೆ, ಕೇಳಿದ್ದೇವೆ. ಅದರಲ್ಲೂ ಕೆಳ ಜಾತಿಯ ಯುವಕ-ಯುವತಿಯರು ಪ್ರೀತಿಸಿದ್ದಕ್ಕೆ, ನಡೆಯುವ ಹತ್ಯೆಗಳಿಗೆ 'ಮರ್ಯಾದೆ ಹತ್ಯೆ' ಎಂಬ ಪೈಶಾಚಿಕ ಕೃತ್ಯವನ್ನು ಮನುಷ್ಯರು ಮಾಡುತ್ತಿರುವುದು ರಾಕ್ಷಸ ಪ್ರವೃತ್ತಿಯನ್ನು ತೋರಿಸುತ್ತಿದೆ. ತಾವು ಜನ್ಮ ನೀಡಿ ಸಾಕಿ ಸಲುಹಿ, ವಿದ್ಯಾಭ್ಯಾಸ ನೀಡಿ ದೊಡ್ಡವರನ್ನಾಗಿ ಮಾಡಿದ ತಂದೆ, ತಾಯಿ, ಬಂಧುಗಳೇ ತಮ್ಮ ರಕ್ತ ಹಂಚಿಕೊಂಡು ಹುಟ್ಟಿದ ಹೆಣ್ಣು ಮಕ್ಕಳನ್ನು ಕೆಳ ಜಾತಿಯವರನ್ನು ಪ್ರೀತಿಸಿ ಮದುವೆಯಾದರು ಎಂದು ಹತ್ಯೆ ಮಾಡುತ್ತಿದ್ದಾರೆ. ನಿಜಕ್ಕೂ ಇದು ಮನುಷ್ಯರು ಮಾಡುವಂತದ್ದಲ್ಲ. ಅದಕ್ಕೆ ಇದನ್ನು 'ರಾಕ್ಷಸ ಕೃತ್ಯ' ಎಂದು ಕರೆದದ್ದು.

ಇಂತಹ ಘಟನೆಗಳು ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ನಡೆಯುತ್ತಿರುವುದು ಇಡೀ ಅಂಟಿದ ಕಳಂಕ ಎನ್ನಬಹುದು. ಮದ್ದೂರು ತಾಲ್ಲೂಕಿನ ಅಂಬಲವಾಡಿ ಗ್ರಾಮದ ಸವರ್ಣೀಯ ಹುಡುಗಿಯೊಬ್ಬಳು ಕೆಳ ಜಾತಿಯ ಯುವಕರನ್ನು ಪ್ರೀತಿಸಿದ್ದಕ್ಕೆ, ಸುವರ್ಣ ಎಂಬ ಆ ಹೆಣ್ಣು ಮಗಳನ್ನು ಮದುವೆ ಮಾಡಿಕೊಂಡ ಆ ಯುವಕನ ಎದುರೇ ಸುವರ್ಣಳನ್ನು ಹತ್ಯೆ ಮಾಡಿರುವುದು ಮಾನವ ಕುಲಕ್ಕೆ ಒಂದು ದೊಡ್ಡ ಕಳಂಕ. ಇಂತಹ ಹತ್ಯೆಯನ್ನು 'ಮರ್ಯಾದೆ ಹತ್ಯೆ' ಎಂದು ಹೇಳುತ್ತಿರುವುದು. ಇದನ್ನು ಒಂದು ಅಮಾನುಷ ವರ್ತನೆ ಎನ್ನಬಹುದು. (೧೮.೦೧.೨೦೦೨ ಪ್ರಜಾವಾಣಿ ವಾರ್ತೆ) ಆದ್ದರಿಂದ ಇದನ್ನು ಮರ್ಯಾದೆಗೇಡು ಹತ್ಯೆ ಎಂದು ನಾವು ಕರೆಯಬೇಕು.

ಅದೇ ರಿತಿ 'ಅಂತರ್ಜಾತಿ ವಿವಾಹ' ಮಾಡಿಕೊಂಡ ನಾಯಕ ಜನಾಂಗಕ್ಕೆ ಸೇರಿದ ಶಿಲ್ಪಾ ನಾಯಕ್ ಮತ್ತು ಪರಿಶಿಷ್ಟ ಜಾತಿಗೆ ಸೇರಿದ ಅಭಿಜಿತ್ ಎಂಬ ಪ್ರಕರಣ ಕೂಡ ನಾಗರೀಕ ಸಮಾಜವನ್ನು ತಲೆತಗ್ಗಿಸುವಂತದ್ದು. ಇದು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕನ್ನಹಳ್ಳಿ ಗ್ರಾಮದ ಹತ್ತಿರ ಹುಡುಗನ ಬಂಧುಗಳೆಂದು ಹೇಳಿಕೊಂಡು ಶಿಲ್ಪಾಳನ್ನು ಬರ್ಬರ ಹತ್ಯೆ ಮಾಡಿ ಬೆಂಕಿ ಹಾಕಿಸುಟ್ಟಿದ್ದು, ಒಂದು ದೊಡ್ಡ ಕ್ರೌರ್ಯವಾಗಿದೆ. ಜಾತಿ ಎಂಬ ವಿಷ ತಲೆಗೇರಿಸಿಕೊಂಡು ಈ ರೀತಿ ಮಾಡಿ ಪರಾಕಾಷ್ಠೆ ಮಾಡುತ್ತಿರುವುದು ಕೂಡ ಪೈಶಾಚಿಕ ಕೃತ್ಯಕ್ಕೆ ಉದಾಹರಣೆ. (೨೮.೦೪.೨೦೧೪ ಪ್ರಜಾವಾಣಿ)

ಇಂತಹ ಅಮಾನವೀಯ ಕೃತ್ಯಕ್ಕೆ ಜಾತಿ ಕಾರಣ ನೀಡಿ ರಾಕ್ಷಸ ಪ್ರವೃತ್ತಿ ಮಡುತ್ತಿರುವುದು ಇಡೀ ದೇಶಕ್ಕೆ ಗಂಡಾಂತರ ಎನ್ನಬಹುದು. ಇವೆಲ್ಲ ಜಾತಿ ಕಾರಣಕ್ಕೆ ನಡೆಯುತ್ತಿದೆ. ಎಂದರೆ ಆತಂಕವಾಗುತ್ತದೆ. ದೇಶದ ತುಂಬ ಇಂತಹ ಕೃತ್ಯಗಳು ನಡೆಯುತ್ತಿವೆ. ಮೇಲ್ಜಾತಿಯ ಯುವತಿ ದಲಿತ ಯುವಕನನ್ನು ಮದುವೆಯಾದಳು ಎಂದು ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಸುಮಾರು ೨೫೦ಕ್ಕೂ ಹೆಚ್ಚು ದಲಿತರ ಮನೆಗಳನ್ನು ಸುಟ್ಟು ಹಾಕಿದ್ದು, ಇತರೆ ಹಿಂದುಳಿದ ಜಾತಿಗೆ ಸೇರಿದ 'ವೆನ್ನಿಯಲ್' ಸಮುದಾಯದ ವ್ಯಕ್ತಿಗಳು ಈ ಕೃತ್ಯ ನಡೆಸಿದ್ದಾರೆ. ಇದು ಒಂದು ದೊಡ್ಡ ದುರಂತ, ಈ ವಿಚಾರದಲ್ಲಿ ಅನೇಕ ದಲಿತರ ಮೇಲೆ ಮಾರಣಾಂತಿಕ ಹಲ್ಲೆ ನಡೆಯಿತು. ಇದು ಕೂಡ ಜಾತಿ ಎಂಬ ಕಾರಣಕ್ಕಾಗಿ ನಡೆದದ್ದು. (ದಿನಾಂಕ ೧೦ನೇ ನವೆಂಬರ್ ೨೦೧೪-ಪ್ರಜಾವಾಣಿ)

ಒಟ್ಟಾರೆ ಜಾತಿ ಕಾರಣಕ್ಕಾಗಿ ಅನೇಕ ರೀತಿ ದೌರ್ಜನ್ಯಗಳು ದಲಿತರ ಮೇಲೆ ನಡೆಯುತ್ತಿವೆ. ಈ ಮೂಲಕ ಅಸ್ಪೃಶ್ಯತೆ ಆಚರಣೆ ನಡೆಯುತ್ತಿದೆ. ಒಬ್ಬರಿಂದ ಮತ್ತೊಬ್ಬರು ಅಸ್ಪೃಶ್ಯತೆ ಆಚರಣೆ ಮಾಡಿಸಿಕೊಂಡವರು ತಮ್ಮ ಜಾತಿ ದೊಡ್ಡದೆಂದು ಇತರೆ ಹಿಂದುಳಿದ ಜಾತಿಯವರನ್ನು ಕ್ರೂರವಾಗಿ ಕಾಣುತ್ತಾ ಅಸ್ಪೃಶ್ಯತೆ ಮತ್ತು ಜಾತಿ ಎಂಬ ಎರಡು ಭೂತಗಳನ್ನು ಒಂದರೊಳಗೊಂದು ಎಂಬಂತೆ ಸೃಷ್ಟಿಸಿ ದ್ವಿನೀತಿ ಅನುಸರಿಸಿ ರಾಕ್ಷಸರಂತೆ ವರ್ತಿಸುತ್ತಿರುವದು ಖಂಡನೀಯ. ತಾವು ಸಾಕಿ ಸಲಹಿ ದೊಡ್ಡವರಾಗುವಂತೆ ಮಾಡಿ, ಬೇಕು

ಮತ್ತು ಈ ದೇಶದ ನಾಗರೀಕರು ಪಾಲಿಸಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ದಲಿತರ ಪಾಲಿನ ವಿಮೋಚಕರಾದ ಡಾ.ಬಿ.ಆರ್. ಅಂಬೇಡ್ಕರ್‌ರವರು ಅಂತರ್ ಜಾತಿ ವಿವಾಹ. ಸಹಪಂಕ್ತಿ ಭೋಜನ, ಮುಂತಾದ ಸಲಹೆಗಳನ್ನು ನೀಡಿದ್ದಾರೆ. ಹೆಚ್ಚೆಚ್ಚು ಇಂತಹ ವಿಚಾರಗಳು ನಡೆಯಬೇಕು ಎಂದು ಅವರು ಹೇಳುತ್ತಾರೆ. ಮುಂದುವರೆದು

ಮೂಢನಂಬಿಕೆ, ಅಸ್ಪೃಶ್ಯತೆ ಆಚರಣೆ, ಪಿಡುಗುಗಳ ವಿರುದ್ಧ ಜನಜಾಗೃತಿ ಮೂಡಿಸಬೇಕು. ಇವು ಸವರ್ಣೀಯರಿಂದಲೇ ಮೊದಲು ಪ್ರಾರಂಭಗೊಳ್ಳಬೇಕು. ಮೇಲ್ಜಾತಿಯವರು ನಡೆಸುವ ಮಠ, ದೇವಸ್ಥಾನ, ಮದುವೆ, ಮುಂತಾದ ಜಾಗೃತಿಗಳು ಹೆಚ್ಚಾಗಬೇಕು. ಸಮಾಜ ಸುಧಾರಣೆಗಾಗಿ ವೈಜ್ಞಾನಿಕವಾಗಿ ಶಾಸ್ತ್ರೀಯ ಅಧ್ಯಯನಗಳೇ ನಡೆಯಬೇಕು. ಜಾತಿ-ಬೇಧ ಅಸ್ಪೃಶ್ಯತೆ, ಮೂಢನಂಬಿಕೆ ಪಿಡುಗುಗಳು ವಿರುದ್ಧ ನಿರ್ದಾಕ್ಷಿಣ್ಯ ಕಾನೂನು ಕ್ರಮ ಕೈಗೊಂಡು ಶಿಕ್ಷೆ ಕೊಡಿಸಬೇಕು. ಇದರಿಂದ ಜಾತಿ ವ್ಯವಸ್ಥೆ ಮತ್ತು ಮೂಢನಂಬಿಕೆಯನ್ನು ಘೋಷಿಸುವ ಮನಸ್ಸುಗಳನ್ನು ಹತ್ತಿಕ್ಕಬಹುದು. ಹರಿಯಾಣದ ನಾರ್ನಿಡ್ ಗ್ರಾಮದ ಸತ್ರೋಲ್‌ಖಾಪ್ ಪಂಚಾಯಿತಿ ಅಂತರ್ಜಾತಿ ವಿವಾವಹಕ್ಕೆ ಅವಕಾಶ ನೀಡಿ ಐತಿಹಾಸಿಕ ನಿರ್ಧಾರದಂತೆ ದೇಶದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲೂ ಇದನ್ನು ಜಾರಿಗೆ ತರಬೇಕು. ಈ ಮೂಲಕ ಜಾತಿ ಮತ್ತು ಅಸ್ಪಶ್ಯತೆ ಹಾಗೂ ಮೂಢನಂಬಿಕೆ ಎಂಬ ವಿಷವನ್ನು ತೆಗೆಯಬಹುದು.

*********

## ೧೩. ದಲಿತ ಕಾವ್ಯದಲ್ಲಿ ಮಾನವೀಯ ಚಿಂತನೆಗಳು

ಡಾ. ವೈ. ವಿ. ದೇವಋಷಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ ಸಾಹಿತ್ಯ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ. ದಲಿತ ಸಾಹಿತ್ಯದ ತಿಳಿದುಕೊಳ್ಳುವುದಕ್ಕಿಂತ ಮೊದಲು ದಲಿತ ಪದದ ಅರ್ಥವನ್ನು ತಿಳಿದುಕೊಳ್ಳುವುದು ಅವಶ್ಯಕವಾದದ್ದು. 'ದಲಿತ' ಪದ ಕುರಿತು ಅನೇಕ ಚರ್ಚೆಗಳು ಸಾಹಿತ್ಯ ವಲಯದಲ್ಲಿ ನಡೆದಿವೆ. 'ದಲ' ಎಂಬುದು ಸಂಸ್ಕೃತದ ಪದ. 'ದಲ' ಎಂದರೆ ಚೂರು, ತುಂಡು, ಭಾಗ, ಸೈನ್ಯ ಎಂಬ ಅನೇಕ ಅರ್ಥಗಳನ್ನು ಹೊಂದಿದೆ. ಆದರೆ ಸಾಹಿತ್ಯ ಸಂದರ್ಭದಲ್ಲಿ ಸೈನ್ಯ ಹರಿತವಾದ ಶಸ್ತ್ರ ಎಂಬ ಅರ್ಥ ಸಮಂಜಸವೆನಿಸುತ್ತದೆ. ಶತಮಾನಗಳಿಂದ ಜನ ಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳು ವೃತ್ತಿ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ.

'ದಲಿತ' ಎಂದರೆ ದಮನಕ್ಕೆ ಒಳಗಾದವರು. ದಲಿತರನ್ನು ಅಸ್ಪೃಶ್ಯರು, ಅಂತ್ಯಜರು. ಅಂತ್ಯವಾಸಿ, ದಸ್ಯು, ಆದಿಮ ಜನಾಂಗ, ಪಂಚಮರು, ಬಹಿಷ್ಕೃತರು. ಆದಿ ಕರ್ನಾಟಕ. ಆದಿದ್ರಾವಿಡ, ಅನುಸೂಚಿತ, ಪರಿಶಿಷ್ಟ ಜಾತಿ, ಹರಿಜನ ಮುಂತಾಗಿ ಕರೆಯಲಾಗುತ್ತದೆ. ಇದರಲ್ಲಿಯ ಕೆಲವು ಪದಗಳು ವೃತ್ತಿ ಹಾಗೂ ಇರುವಿಕೆಯನ್ನು ಸೂಚಿಸಿದರೆ ಇನ್ನು ಕೆಲವು ಜಾತಿಯನ್ನು ಜನಾಂಗವನ್ನು ಸೂಚಿಸುತ್ತವೆ. ಹರಿಜನ ಪದವನ್ನು ಮೊದಲು ಬಳಸಿದವರು ೧೭ನೆಯ ಶತಮಾನದ ಹರಿದಾಸರು, ನಂತರದ ವರ್ಷಗಳಲ್ಲಿ ಗಾಂಧಿಯವರು ಈ ಪದವನ್ನು ಮಾತ್ರ ಬಳಕೆಗೆ ತಂದರು. ದಲಿತರು 'ಹರಿಜನ' ಎಂಬ ಪದವನ್ನು ನಿರಾಕರಿಸಿದ್ದರು. ನಾವು ಹರಿಯ ಮಕ್ಕಳಲ್ಲ ನಾವು ಸಹ ಮನುಷ್ಯರ ಮಕ್ಕಳೆ ಎಂಬ ದಲಿತ ಪ್ರಜ್ಞೆಯೊಂದಿಗೆ ಸ್ವಾಭಿಮಾನದೊಂದಿಗೆ 'ದಲಿತ' ಪದ ರೂಢಿಗೆ ಬಂತು. ಇದಕ್ಕಿಂತ ಮುಂಚೆ ಮಹಾರಾಷ್ಟ್ರದಲ್ಲಿ ಈ ಪದ ಬಳಕೆಯಲ್ಲಿತ್ತು. ಇಂತಹ ತುಳಿತಕ್ಕೆ ಒಳಗಾದ ಶೋಷಣೆಗೆ ಒಳಗಾದ ದಲಿತರನ್ನು ಕುರಿತು ಬರೆದ ಸಾಹಿತ್ಯ 'ದಲಿತ ಸಾಹಿತ್ಯ'ವೆಂದು ಕರೆಯಿಸಿಕೊಳ್ಳುತ್ತದೆ.

ದಲಿತರು, ದಲಿತೇತರರು ದಲಿತ ಪ್ರಜ್ಞೆಯಿಂದ ದಲಿತರ ಕುರಿತು ಸೃಷ್ಟಿಸಿದ ಸಾಹಿತ್ಯವೇ ದಲಿತ ಸಾಹಿತ್ಯ, ದಲಿತರು ಊರ ಹೊರಗೆ ಬದುಕಿದ್ದಾರೆ. ಆದರೆ

ಊರಿನವರ ಸಂಬಂಧ ಕಳೆದುಕೊಂಡು ಬದುಕಿಲ್ಲ. ಎರಡು ಹಸ್ತಗಳು ಸೇರಿದಾಗ ಚಪ್ಪಾಳೆ ಎಂಬ ಮಾತಿನಂತೆ ದಲಿತರು, ದಲಿತೇತರರು ದಲಿತ ಪ್ರಜ್ಞೆಯಿಂದ ಬರೆದದ್ದು ದಲಿತ ಸಾಹಿತ್ಯವಾಗುತ್ತದೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಭಾರತೀಯ ಮತ್ತು ಅನ್ಯಭಾಷಾ ಸಾಹಿತ್ಯದ ಪ್ರಭಾವ ದಲಿತ ಸಾಹಿತ್ಯ ಮೇಲಿದೆ. ಉತ್ತರ ಕರ್ನಾಟಕದ ಲೇಖಕರ ಮೇಲೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿಯ ಪ್ರಭಾವ ಅಧಿಕವಾಗಿರುತ್ತದೆ. ದಕ್ಷಿಣ ಕರ್ನಾಟಕದ ದಲಿತ ಸಾಹಿತಿಗಳ ಮೇಲೆ ತೆಲುಗಿನ ದಿಗಂಬರು ಹಾಗೂ ತಿರುಗುಬುಡುಲುಸಾಹಿತ್ಯದ ಪ್ರಭಾವ ಆಗಿದೆ. ಲೋಹಿಯಾ ವಾದದ ಪ್ರಭಾವ. ಅಂಬೇಡ್ಕರರವಾದ. ಮಾರ್ಕ್ಸ್‌ವಾದ. ಗಾಂಧಿವಾದ ಮುಂತಾದವುಗಳು ದಲಿತ ಸಾಹಿತ್ಯಕ್ಕೆ ಪ್ರೇರಕ ಶಕ್ತಿಗಳಾದವು.

ಕುದುರೆಮೋತಿ ಪ್ರಕರಣ. ಬೆಳ್ಳಿ ಪ್ರಕರಣ, ಕಾರಂಚೇಡು ಪ್ರಕರಣ, ಮೀಸಲಾತಿ ಪ್ರಕರಣ ಮತಾಂತರದ ಪ್ರಕರಣ. ವೆಂಕಟಸ್ವಾಮಿ ಆಯೋಗದ ವರದಿ, ಖೋಟಾಜಾತಿ ಪತ್ರಗಳ ವಿರುದ್ಧ ಹೋರಾಟ, ಮುನಿವೆಂಕಟಪ್ಪ ಪ್ರಕರಣ. ಮಲತಿನ್ನಿಸಿದ ಪ್ರಕರಣ. ಬೆತ್ತಲೆಸೇವೆ ಪ್ರಕರಣ ಮುಂತಾದವುಗಳು ದಲಿತ ಸಾಹಿತ್ಯದ ಚಳವಳಿ ರಾಜಕೀಯ ರಂಗದ ವಿಚಾರಗಳನ್ನು ಕೇಂದ್ರವನ್ನಾಗಿ ಮಾಡಿಕೊಳ್ಳಲಿಲ್ಲ. ಬದಲಾಗಿ ಮನುಷ್ಯನನ್ನೇ ದಲಿತ ಸಾಹಿತ್ಯದ ಕೇಂದ್ರವಾಗಿರುವುದರಿಂದ ರಾಜಕೀಯ ಚಿಂತನೆ ದಲಿತ ಸಾಹಿತ್ಯದ ಒಂದು ಅಂಗವಾಗಿ ಮಾತ್ರ ಪರಿಗಣಿಸಲಾಗುತ್ತದೆ.

ಸಾಮಾಜಿಕ ಪರಿವರ್ತನೆ ಎಂದಾಗ ಎದುರಾಗುವುದು ಸಮಾನತೆಯ ಪ್ರಶ್ನೆ, ಇಲ್ಲಿಯ ಸಾಮಾಜಿಕ ಅಸಮಾನತೆಗೆ ಕೇಂದ್ರವಾದದ್ದಾಗಿದೆ. ದಲಿತ ಸಾಹಿತ್ಯದ ಬಗ್ಗೆ ಕೆಲವೊಂದು ತಪ್ಪು ಅಭಿಪ್ರಾಯಗಳಿವೆ. ಆದರೆ ದಲಿತ ಸಾಹಿತ್ಯ ಹಗೆತನವನ್ನು ಸಾಧಿಸುವ ಸಾಹಿತ್ಯವಲ್ಲ. ಮನುಷ್ಯನ ಪ್ರೀತಿಯನ್ನು ಸಾರುವ ಸಾಹಿತ್ಯವಾಗಿದೆ. ಈ ಹಿಂದಿನ ಸಾಹಿತ್ಯಗಳು ಹೊಂದದೆ ಇದ್ದ ಮಾನವೀಯ ಚಿಂತನೆಯನ್ನು ಪ್ರಖರವಾಗಿ ಹೊಂದಿದ್ದು, ದಲಿತ ಸಾಹಿತ್ಯ ಜನಾಂಗ ಮುಖಿಸಾಹಿತ್ಯ, ಆನಾಂಗ ಜನಾಂಗಗಳ ನಡುವೆ ಪ್ರೀತಿ, ಸಹಕಾರವನ್ನು ಬಿತ್ತುವ ಸಾಹಿತ್ಯ. ತನ್ನ ಜಾತಿಯವರೊಂದಿಗೆ ಅನ್ಯರಾಗುವುದು. ಸವರ್ಣಿಯರೊಂದಿಗೆ ಮತ್ತು ಪ್ರಗತಿಪರರೊಂದಿಗೆ ಅನ್ಯರಾಗುವುದಕ್ಕೆ ದಾರಿ ಮಾಡಿಕೊಡುವುದು. ಹೀಗೆ ದಲಿತ ಸಾಹಿತ್ಯ ತನ್ನನ್ನು ತಾನು ಕಂಡುಕೊಳ್ಳುವುದರೊಂದಿಗೆ ಜನಾಂಗ ಮುಖಿಯಾಗಿ ಕಂಡುಕೊಳ್ಳಲು ದಾರಿ ತೋರುವುದಾಗಿದೆ.

ದಲಿತ ಸಾಹಿತ್ಯದಲ್ಲಿ ಮಹಿಳೆಯನ್ನು ಒಂದು ಕ್ರಿಯಾತ್ಮಕ ಶಕ್ತಿಯಾಗಿ ಬಳಿಸಿಕೊಂಡಿರುವುದು. ಕಾಣುತ್ತದೆ. ಕಾಮದ ಹೊಂಡವನ್ನೇ ತುಂಬಿಕೊಂಡ ಮಾಂಸದ ಮುದ್ದೆಯಾಗಿ ಹೆಣ್ಣನ್ನು ಚಿತ್ರಿಸುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರ ಸ್ಥಾನಮಾನಗಳು ಹತ್ತಿಕ್ಕಲ್ಪಟ್ಟಿವೆ. ಇದಕ್ಕೆ ಮೂಲದ ಹಣ್ಣಿನ ಸ್ಥಾನಮಾನದಲ್ಲಿ ಆದ ಬದಲಾವಣೆಗಳ

ಕಾರಣಗಳಾಗಿವೆ. ಸಿಟ್ಟು, ಅಬ್ಬರ, ರೊಚ್ಚು, ಆವೇಶಗಳು, ದಲಿತ ಸಾಹಿತ್ಯದ ಆರಂಭದಲ್ಲಿ ಪ್ರಖರವಾಗಿದ್ದವು. ನಂತರದಲ್ಲಿ ಅವುಗಳ ಪ್ರಖರತೆ ಕಡಿಮೆಯಾಗಿ ಮಾನವೀಯ ಚಿಂತನೆ ಧಾರೆಯನ್ನು ಒಳಗೊಂಡಿತ್ತು. ಪ್ರಾರಂಭದ ದಲಿತ ಕಾವ್ಯಕ್ಕಿಂತ ಇಂದಿನ ದಲಿತ ಕಾವ್ಯದ ನಡಿಗೆಯೇ ಭಿನ್ನವಾಗಿದೆ. ಗೇಯತೆಯನ್ನು ಕಳೆದುಕೊಂಡಿದ್ದ ಕನ್ನಡ ಕಾವ್ಯಕ್ಕೆ ಗೇಯತೆಯ ಮೂಲಕ ಹೊಸ ಚೈತನ್ಯವನ್ನು ದಲಿತ ಸಾಹಿತ್ಯ ತಂದುಕೊಟ್ಟಿತು. ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರಗಳನ್ನು ದಲಿತ ಕಾವ್ಯ ತುಂಬಾ ಸಮರ್ಥವಾಗಿ ಹಿಡಿದಿಟ್ಟಿದೆ. ಇದರ ಜೊತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ಗೌರವಿಸುವುದು ಮಾನವ ಬದುಕಿನ ವಿಕಾರ ಭಾವನೆಗಳನ್ನು ವಿರೋಧಿಸುವುದು ದಾಸ್ಯದ ಭಾವದಿಂದ ಹೊರಾಟದ ಪರಿಕಲ್ಪನೆಯನ್ನು ಇಟ್ಟೂಕೊಂಡು ಶಿಕ್ಷಣಕ್ಕೆ ಎಲ್ಲಿಲ್ಲದ ಮಹತ್ವ ನೀಡಿತ್ತು.

ಇಲ್ಲಿ ಬುದ್ಧ ಬಸವ, ಅಂಬೇಡ್ಕರ, ಮಾರ್ಕ್ಸ್‌ರಂಥವರ ಚಿಂತನೆಗಳು ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದವು. ದಲಿತ ಕಾವ್ಯದಲ್ಲಿ ವ್ಯಕ್ತಿನಿಷ್ಟವಾದ ಕವನಗಳು ನೀರಾಗಿ ಹರಿದಿವೆ. ಅನ್ನ, ಬಡತನ, ಬೆಲೆಯಿಲ್ಲದ, ದುಡಿತ, ಇಂಥವುಗಳೆಲ್ಲ ಕಾವ್ಯದಲ್ಲಿ ಮನೆ ಮಾಡಿ ನಿಂತಿದೆ. ಅಸ್ಪೃಶ್ಯತೆಯ ನೋವಿನ ವಿವಿಧ ಮಜಲುಗಳನ್ನು ಬಿಚ್ಚಿ ತೋರಿಸುತ್ತ ಎದುರಾಳಿಯ ಮನಸ್ಸುನ್ನು ಕಲಕುವ, ಆತ್ಮವಿಮರ್ಶೆಗೆ ಹಚ್ಚುವ ವಸ್ತುವಿನ ಆಯ್ಕೆ ಮತ್ತು ಬರವಣಿಗೆಯ ಶೈಲಿ ಇಲ್ಲಿ ಪ್ರಧಾನವಾಗಿದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಪಂಪನಿಂದ ಹಿಡಿದು ಹೊಸಗನ್ನಡಕ್ಕೆ ಬಂದಾಗಲೂ ಅದು ಕೆಲವೇ ಜನ ಕವಿಗಳ ಸ್ವತ್ತಾಗಿತ್ತು. ಹಳಗನ್ನಡದಿಂದ ಹೊಸಗನ್ನಡದವರೆಗಿನ ಮಹತ್ವದ ಘಟ್ಟಗಳನ್ನು ಗಮನಿಸಿದಾಗ ಈ ಮಾತಿಗೆ ಅರ್ಥಸಿಗುತ್ತದೆ. ಇಂತಹ ಸಂದರ್ಭದಲ್ಲಿ ಶೋಷಣೆಗೆ ಒಳಗಾದವರ ಧ್ವನಿ ಕೇಳಿಬರಲಾರಂಭಿಸಿತು. ಅಲ್ಲದೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತನ್ನದೆ ಆದ ಒಂದು ಮೌಲಿಕ ಆಶಯವನ್ನು ಹೊತ್ತುಕೊಂಡು ಮುಖ್ಯವಾಹಿನಿಯಾಗಿ ಹರಿದದ್ದು ದಲಿತ ಸಾಹಿತ್ಯ ಇಲ್ಲಿ ಕಾವ್ಯಕ್ಕೆ ಪ್ರಮುಖ ಪ್ರಾಶಸ್ತ್ರ ದಲಿತ ಕಾವ್ಯ ಬೀದಿಯ ಕಸ ಗುಡಿಸುವ ಭೀಮಪ್ಪನನ್ನು ಅನಿಷ್ಟ ಸಂಪ್ರದಾಯದಲ್ಲಿ ಸಿಲುಕಿ ಮಲಹೊರುವ ಮರೆಪ್ಪನನ್ನು ಚಪ್ಪಲಿ ಹೊಲಿಯುವ ಬಸ್ಯಾನನ್ನು ಕಾವ್ಯದೊಳಗೆ ಮೊದಲು ಸಲ ತಂದದ್ದುದಲಿತ ಕಾವ್ಯ

ಅಮೇರಿಕಾ ಮತ್ತು ಆಫ್ರಿಕಾ ದೇಶಗಳಲ್ಲಿನಿಗ್ರೋ ಜನಗಳು ಶೋಷಣೆಗೆ ಒಳಗಾಗಿ ಗುಲಾಮಗಿರಿಯಲ್ಲಿ ಬದುಕುವ ಹೀನ ಜೀವನಕ್ಕಿಂತ ಭಾರತೀಯ ಸಮಾಜದಲ್ಲಿ ಕೆಳವರ್ಗವ ಜನ ಪುರೋಹಿತ ಶಾಹಿಯಿಂದ ಶೋಷಣೆಗೆ ಈಡಾಗಿ ಬದುಕು ಸಾಗಿಸುತ್ತಿದ್ದರು. ಸಾಮಾಜಿಕ ಜೀವನದಲ್ಲಿ ಸಮಾನತೆಗೆ ತುಂಬಾ ಮಹತ್ವದ ಸ್ಥಾನವಿದೆ. ಆದರೆ ವಸ್ತುಸ್ಥಿತಿ ಭಾರತದಲ್ಲಿ ಹಾಗಿಲ್ಲ. ಮೇಲು ಕೀಳಿನ ತಾರತಮ್ಯದ ಫಲವಾಗಿ

ಮೇಲ್ವರ್ಗದ ಅಥವಾ ಮೇಲ್ಜಾತಿಯ ಜನ ಕೀಳುವರ್ಗದ ಅಥವಾಕೆಳಜಾತಿಯ ಜನರನ್ನು ಹೀನಾಯವಾಗಿ ನಡೆಸಿಕೊಂಡು ಬಂದಿರುವುದು ಸರ್ವವೇದ್ಯ.ಭಾರತೀಯ

ಸಮಾಜದಲ್ಲಿ ಸಹೋದದರತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯ ಇವು ಕನಸಿನ ಮಾತುಗಳಾಗಿ ಇಂದಿಗೂ ಉಳಿದಿರುವುದನ್ನು ಗಮನಿಸಿದಾಗ ದಮನಕ್ಕೊಳಗಾದ ಜನ ಇದನ್ನು ಪ್ರತಿಭಟಿಸಿ ಬಾಯಿ ತೆರೆಯುವು ಅನಿವಾರ್ಯವಾಯಿತು. ಈ ಕಾರಣದಿಂದಲೇ ಬಾಯಿ ಇಲ್ಲದವರ ಬಾಯಿಯಾಗಿ ಮೂಕಾನುಭವಕ್ಕೆ ಮಾತುಗಳನ್ನು ಕೊಡುತ್ತಕನ್ನಡ ಸಾಹಿತ್ಯದಲ್ಲಿ ಬೆಳೆದು ಬಂದದ್ದೆದಲಿತ ಕಾವ್ಯ.

"ಮೌಲ್ಯದರ್ಶನವಿಲ್ಲದ ಮಾನವನ ಬದುಕು ದೊಡ್ಡದಾಗುವುದಿಲ್ಲ ಎಂಬುದು ನಿಜವಾದರೂ ಮೌಲ್ಯಾಕ್ಕಾಗಿ ಮೌಲ್ಯ ಇರಬೇಕಾದುದಲ್ಲ. ಅದು ಮನುಷ್ಯನಿಗಾಗಿ ಇರಬೇಕಾದುದು……………. ಮನುಷ್ಯನಿಗೆ ಪ್ರಥಮ ಗೌರವ ಸಲ್ಲಿಸಿದ ಮೌಲ್ಯಾದರ್ಶವಾದಿಗಳು ಸಮಗ್ರ ಅರ್ಥದಲ್ಲಿ ಜನಪರವಾಗಿರಲು ಸಾಧ್ಯವಿಲ್ಲ. ಮೌಲ್ಯಾದರ್ಶನದ ಸಾಧನೆಗಾಗಿ ಸಮತಾವಾದದಂತ ಜನಪರವಾದಿ ವಿಚಾರವಾದದ ಮೌಲ್ಯಾದರ್ಶನಗಳನ್ನು ನಂಬುವವರು ಅದನ್ನು ತತ್ವದ ಭಾಗವೆಂಬಂತೆಯೇ ಪಾಲಿಸಿಕೊಂಡು ಬಂದಿದ್ದಾರೆ. ಕನ್ನಡದ ಕೆಲವು ಬಂಡಾಯ ಕವಿಗಳು ಅಂತಹ ಮನೋಭಾವಿಸಿದ ನೋವು ನಿರಾಶೆ, ಸಮಾಜ ಬದಲಾವಣೆಗೆ ಬೇಕಾದ ಮೌಲ್ಯಗಳು ಮಾನವೀಯ ಚಿಂತನೆ ಮುಂತಾದವುಗಳನ್ನು ಹಿಮ್ಮೆಟ್ಟಿಸುವ ಪ್ರತಿಭಟನಾ ಪ್ರಜ್ಞೆಯನ್ನು ಹೊಂದಿರುವ ದಲಿತ ಕಾವ್ಯದ ಮುಖ್ಯ ವಿಚಾರಧಾರೆ ಮಾನವೀಯ ಚಿಂತೆನೆಯಾಗಿದೆ.

ಭಾರತದಲ್ಲಿ ಮಾನವೀಯ ಚಿಂತನೆಯ ಬಗ್ಗೆ ಪ್ರತ್ಯೇಕವಾದ ಚಿಂತನೆ ನಡೆಯದಿದ್ದರೂ ಮಾನವನ ಕಲ್ಯಾಣವನ್ನು ಬಯಸುವ ಅನೇಕ ಪ್ರವಾಹಗಳು ಉಪನಿಷತ್ತುಗಳ ಕಾಲದಿಂದಲೂ ಬೆಳೆದು ಬಂದಿವೆ. ಭಗವದ್ಗೀತೆ, ಬೌದ್ಧ, ಜೈನ, ಚಾರ್ವಾಕ ಮತಗಳಲ್ಲಿ, ಹನ್ನೆರಡನೆಯ ಶತಮಾನದ ವಚನ ವಳಿವಳಿಯಲ್ಲಿ ನಂತರ ಬಂದ ದಾಸ ಸಾಹಿತ್ಯ, ಹೊಸಗನ್ನಡ ಸಾಹಿತ್ಯ ಮುಂತಾದವುಗಳಲ್ಲಿ ಮಾನವೀಯ ಚಿಂತನೆಯ ವಿಚಾಧಾರೆಯನ್ನು ಕಾಣುತ್ತೇವೆ. ಮಾನವೀಯ ಚಿಂತನೆ ಒಂದು ಅರ್ಥದಲ್ಲಿ ಪ್ರತ್ಯೇಕವಾದ ವೈಚಾರಿಕ ಸಿದ್ಧಾಂತವಾಗಿದೆ. ಮಾನವೀಯ ಚಿಂತನೆಯನ್ನು ಒಂದು ಅರ್ಥದಲ್ಲಿ ಮಾನವತಾವಾದ ಎಂದು ಕರೆಯಬಹುದು. ಮಾನವತಾವಾದ ಮಾನವನ ಕಲ್ಯಾಣವನ್ನು ಬಯಸುತ್ತದೆ. ಮಾನವೀಯ ಚಿಂತನೆ ಇದಕ್ಕಿಂತ ಭಿನ್ನವಾಗಿಲ್ಲ. "ಮಾನವತಾವಾದ ಎಂದರೆ ಕರುಣಾಳು. ದಯಾಳು. ಕೃಪಾಳು, ಮಾನವೋಚಿತ, ಸಹೃದಯ, ಸಾಂಸ್ಕೃತಿಕ ಸಂಪನ್ನ ಗುಣಗಳನ್ನು ರೂಢಿಸಿಕೊಂಡ ಮನುಷ್ಯತ್ವದ ಸುಸಂಸ್ಕೃತ ಸ್ವಭಾವದ ದರ್ಶನ ಅಲ್ಲದೆ ಈ ತೆರನಾದ ಮನುಷ್ಯತ್ವನ್ನು ರೂಢಿಸುವ, ಮನುಷ್ಯತ್ವವನ್ನು

ಎತ್ತಿ ಹಿಡಿಯುವ ಮಾನವನ ಕಲ್ಯಾಣವು ಬಯಸುವುದು" ಮಾನವೀಯ ಚಿಂತನೆ ಇದಕ್ಕೆ ಪೂರಕವಾದದ್ದಾಗಿದೆ. ಮಾನವೀಯ ಚಿಂತನೆ ಉದ್ದೇಶ ಮಾನವನ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವುದು ಹಾಗೂ ಮಾನವನ ಕಲ್ಯಾಣ ಮಾಡುವುದಾಗಿದೆ. ಇದರಲ್ಲಿ ಮಾನವನ ಘನತೆಯ ಪ್ರಶ್ನೆ ಕೂಡ ಅಡಗಿದೆ. ಹಾಗಾಗಿ ಅದನ್ನು ಎತ್ತರಿಸುವ ಮಾನವೀಯ ಗುಣಗಳ ಮೌಲ್ಯಗಳ ಹುಡುಕಾಟ ಇದರಲ್ಲಿ ಪ್ರಧಾನವಾಗುತ್ತದೆ. " Humanisim is also associated with the Renaissance. When it denoted a move away from God to man as the centre od interest. God still remained as vtrator and supreme authority. The Ren-aissance humanist were for from being theists but his activity was seen as less immediate. More as general control than as day-to day interference and this enabled a scientific out look to arise which saw the universe as goverried by general laws albeit those were laid down by god".

ಈ ಮೇಲಿನ ವಿಚಾರ ಗಮನಿಸಿದಾಗ ಮಾನವರೇ ಶ್ರೇಷ್ಠ ಎಂಬುದು ತಿಳಿಯುತ್ತದೆ. ಮಾನವರಿಗಿಂತ ಉನ್ನತವಾದದ್ದು ಇನ್ನೊಂದಿಲ್ಲ. ಮಾನವ ತೀರ ಹಳಬ ಮಾನವನ ಚಿಂತನೆ ಅವನಷ್ಟೇ ಹಳೆಯದು. ಸೃಷ್ಟಿಯಲ್ಲಿ ಮಾನವ ಶ್ರೇಷ್ಠತೆಯನ್ನು ಪ್ರಾಚೀನ ಕಾಲದಿಂದಲೂ ಒಪ್ಪಿಕೊಂಡು ಬಂದವನು ಮಾನವರೇ ಆಗಿದ್ದಾನೆ. ಮಾನವೀಯ ಅನುಕಂಪ, ಸಹಾನೂಭೂತಿ, ಜಾತಿ, ಮತ, ಪಂಥ, ಉಚ್ಛ-ನೀಚಗಳೆಂಬ ಭೇದಗಳನ್ನು ಮೀರಿದ ಮನುಷ್ಯತ್ವದ ಸಾಮಯಿಕ ಭಾವನೆ ಎಂಬರ್ಥದ ಮಾನವೀಯತೆಯನ್ನು ಮೀರಿದ ತಾತ್ವಿಕ ತಾತ್ಪರ್ಯದ ಪರಿಕಲ್ಪನೆಯೇ ಮಾನವತಾವಾದ" ಈ ಮಾತು ಮಾನವೀಯ ಚಿಂತನೆಯ ಒಂದು ಮಾರ್ಗವನ್ನು ತೋರಿಸುತ್ತದೆ. ಸರ್ವದೇಶಗಳಲ್ಲೂ, ಸರ್ವಕಾಲಗಳಲ್ಲೂ, ಸರ್ವಜನಾಂಗಗಳಿಗೂ ಸಾಮೂಹಿಕ ಹಿತವನ್ನು ಬಯಸುವ ಚಿಂತನೆ ಮಾನವೀಯ ಚಿಂತನೆ. "ಭಾತರದಲ್ಲಿ ಮಾನವೀಯ ಚಿಂತನೆಯನ್ನು ಋಷಿ ಮುನಿಗಳ ಕಾಲದಿಂದ ಬಸವಣ್ಣ, ಮಹಾತ್ಮಾಗಾಂಧಿ, ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರೆಗೆ ಗುರುತಿಸಬಹುದಾಗಿದೆ. ಮಾನವನ ಹಿರಿಮೆಯನ್ನು ಎತ್ತಿ ಹಿಡಿದು ಮಾನವತೆಗೆ ಗೌರವ ತೋರಿದ ದೇಶಗಳಲ್ಲಿ ಭಾರತವು ಒಂದು" .

ಮಾನವನ ಶ್ರೇಷ್ಠತೆಯನ್ನು ಮಾನವೀಯ ಚಿಂತನೆಯನ್ನು ಅಸೀಮಿತವಾದ ಸಾಮರ್ಥ್ಯವನ್ನು, ಭಾರತೀಯ ಧರ್ಮ-ದರ್ಶನಗಳು ಪ್ರಾಚೀನ ಕಾಲದಿಂದಲೂ ಎತ್ತಿ ಹಿಡಿಯುತ್ತ ಬಂದಿದೆ. ಮಾನವನ ವ್ಯಕ್ತಿತ್ವದ ವಿಕಾಸವೇ ಜೀವನದ ಪ್ರಮುಖ ಉದ್ದೇಶ. ದಿವ್ಯತ್ವವನ್ನು ಪಡೆಯುವುದೇ ಜೀವನದ ಪರಮಗುರಿ. ಭಾರತೀಯರದು ಇಂದ್ರಿಯ ಗಮ್ಯವಾದ ಮನುಷ್ಯತ್ವವನ್ನು ಮೀರಿ ಆತ್ಮ ಪ್ರಜ್ಞೆಯ ಅರಿವಿನ ಮೂಲಕ ಅನಂತ

ಪ್ರಜ್ಞೆಯನ್ನು ಸಾಧಿಸುವ ದಿವ್ಯತ್ವ ಸಹಿತವಾದ ವಿಚಾರಗಳು ಧರ್ಮ ದರ್ಶನಗಳು ಕಂಡು ಬರುತ್ತದೆ. ಪ್ರಾಚೀನ ಭಾರತದಲ್ಲಿ ಮಾನವೀಯ ಚಿಂತನೆಯನ್ನೆ ಪ್ರಮುಖವಾಗಿ ಹೊಂದಿದ್ದವು. ಮಧ್ಯಯುಗದಲ್ಲಿ ಸಾಮಾಜಿಕ ಜೀವನದ ಸಾಂದರ್ಭಿಕ ಅಗತ್ಯವೆಂಬಂತೆ ಭಾರತ ದೇಶದ ಮೂಲೆ ಮೂಲೆಗಳಿಂದ ಹಿಂದೂ, ಮುಸ್ಲಿಂ, ಸಿಖ್, ಸಂತ್ ಮೂಲಕ ಜೀವನ ಪ್ರೇಮ, ಸಮಾನತೆ, ಭಾರತತ್ವ ಮುಂತಾದವುಗಳು ಜಾಗೃತವಾದವು. ಈ ಸಂದರ್ಭದಲ್ಲಿ ಮಹಾರಾಷ್ಟ್ರದ ಸಂತ ಜ್ಞಾನೇಶ್ವರ, ಬಂಗಾಳದಲ್ಲಿ ಚೈತನ್ಯ, ಪಂಜಾಬಿನಲ್ಲಿ ಗುರುನಾನಕ, ಉತ್ತರ ಪ್ರದೇಶದಲ್ಲಿ ಕಬೀರ, ಆಂಧ್ರ ಪ್ರದೇಶದಲ್ಲಿ ವಲ್ಲಭಾಚಾರ್ಯ, ಕರ್ನಾಟಕದಲ್ಲಿ ಬಸವಾದಿ ಶರಣರು. ದಾಸಪರಂಪರೆಯ ಕನಕದಾಸರು ಭಗವಂತನ ಭಕ್ತಿಯೊಂದಿಗೆ ಸಮಾಜ ಜೀವಿಯಾದ ಮಾನವನ ಬಗ್ಗೆ ಚಿಂತನೆಗಳನ್ನು ಮಾಡಿ ನವ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು.

ಆಧುನಿಕ ಭಾರತದಲ್ಲಿ ಮಾನವೀಯ ಚಿಂತನೆಯನ್ನು ಎತ್ತಿ ಹಿಡಿದವರಲ್ಲಿ ಬ್ರಹ್ಮ ಸಮಾಜದ ಸ್ಥಾಪಕ ರಾಜಾರಾಮ ಮೋಹನರಾಯ, ಜ್ಯೋತಿಬಾಫುಲೆ, ಡಾ.ಬಾಬಾಸಾಹೇಬ ಅಂಬೇಡ್ಕರ, ನಾರಯನಗುರು, ಮಹಾತ್ಮಾ ಗಾಂಧಿ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮುಂತಾದವರು ಪ್ರಮುಖರು. ಒಟ್ಟಿನಲ್ಲಿ ಭಾರತ ದೇಶದಲ್ಲಿ ಮಾನವೀಯ ಚಿಂತನೆಯನ್ನು ಕುರಿತ ಚರ್ಚೆ ಪ್ರಾರಂಭದಿಂದಲೂ ಆಧುನಿಕ ಕಾಲದವರೆಗೆ ಸಾಗಿ ಬಂದಿದೆ. ಸಾಹಿತ್ಯ ಸಂದರ್ಭದಲ್ಲಿ ಭಾರತದ ಎಲ್ಲ ಭಾವನೆಗಳ ಸಾಹಿತ್ಯಗಳಲ್ಲಿ ಮಾನವೀಯ ಚಿಂತನೆ ಬೆಳೆದು ಬಂದಿದೆ. ಅದರಲ್ಲೂ ವಿಶೇಷವಾಗಿ ಕನ್ನಡ ಸಾಹಿತ್ಯದ ಎಲ್ಲ ಘಟ್ಟಗಲ್ಲಿ ಪ್ರಮುಖವಾಗಿ ದಲಿತ ಕಾವ್ಯಾದಲ್ಲಂತೂ ಮಾನವೀಯ ಚಿಂತನೆ ಹೆಚ್ಚು ಪ್ರಖರವಾಗಿ ಮೂಡಿ ನಿಂತಿದೆ.

"ಶತಮಾನಗಳಿಂದ ಆರ್ಥಿಕ, ಸಾಮಾಜಿಕ ಗುರಿಯಾಗಿದ್ದ ಜನಾಂಗದ ಮೊಟ್ಟ ಮೊದಲ ದನಿ ಇದು. ಅದುಮಿಟ್ಟಿದ್ದ ತನ್ನೆಲ್ಲ ದಟ್ಟರೋಷ, ರೊಚ್ಚು, ವಾದ ಈ ಕಾವ್ಯದ ಸಾಲುಗಳಲ್ಲಿ ವಿದ್ಯುತ್ತಿನಂತೆ ಹರಿಯುತ್ತದೆ" ಹೀಗಾಗಿ ದಲಿತ ಕಾವ್ಯ ಮೊದಲು ಗುರುತಿಸಿಕೊಂಡದ್ದೆ ಕ್ರಾಂತಿಯ ಕಿಡಿಯಲ್ಲಿ. ಸಿಟ್ಟು, ರೊಚ್ಚು ಇಲ್ಲಿಯ ಸ್ಥಾಯಿಭಾವ ಎನಿಸಿದರೂ ಅದು ಮಾನವೀಯ ಚಿಂತನೆಗಾಗಿ ಹಂಬಲಿಸುವ ಪರಿ ಗಮನ ಸೆಳೆಯುತ್ತದೆ. "ಇಕ್ರಲಾ, ಓದಿದ್ರಾ ಈ ನನ್ನ ಮಕ್ಕ ಚರ್ಮ ಎಬ್ರಲಾ" ಎಂದು ಹೇಳುವುದರಲ್ಲಿ ಇಲ್ಲಿಯವರೆಗೆ ಅದುಮಿಟ್ಟಿದ್ದ ಸಿಟ್ಟು ಪುಟನೆಗೆದಿದೆ. ಇಲ್ಲಿ ಬರುವ ಸಿಟ್ಟಿಗೊಂದು ಅರ್ಥವಿದೆ. ಅದು ವಿನಾಕಾರಣವಾಗಿ ಹುಟ್ಟಿಕೊಂಡ ಸಿಟ್ಟು ಅಲ್ಲ. ಹೀಗಾಗಿ ದಲಿತ ಕಾವ್ಯದ ಪ್ರಾರಂಭದ ಕಾವ್ಯಗಳನ್ನು ಮುಂದಿಟ್ಟುಕೊಂಡು ಮಾನವೀಯತೆಯ ಬಗ್ಗೆ ವಿಮರ್ಶೆ ಮಾಡಿದಾಗ ಅಲ್ಲಿ ಕಂಡುಬರುವ ಚಿಂತನೆ ಔಚಿತ್ಯ ಪೂರ್ಣವಾದದ್ದು. "ಹೀಗಾಗಿ ದಲಿತ ಬಂಡಾಯ ಕಾವ್ಯವೆಂದರೆ ಮನರಾವಲೋಕನ ಪ್ರಕ್ರಿಯೆ ಮತ್ತು

ಸಮಕಾಲೀನ ಸ್ಫೋಟ. ಈ ಎರಡನ್ನು ಒಳಗೊಂಡು ಉರಿಯುವ ಕೆಂಡ. ಈ ಕೆಂಡ ಕೆಲವೊಮ್ಮೆ ಕಚ್ಚಿದರೂ ಅದು ಕತ್ತಲನು ಕಚ್ಚುವ ಬೆಳಕೇ ಹೊರತು ಕಂಡದ್ದನ್ನೆಲ್ಲ ಕಚ್ಚುವ ಕೆಂಡವಲ್ಲ" .

ಮಹಾರಾಷ್ಟ್ರದಲ್ಲಿ ನಡೆದ ದಲಿತ ಪ್ಯಾಂಥರ್ ಚಳವಳಿ ಮತ್ತು ಸಾಹಿತ್ಯ, ಆಂಧ್ರದಲ್ಲಿ ಹೊತ್ತಿದ ದಿಗಂಬರ ವಿಪ್ಲವ ಕಾವ್ಯ ಚಳವಳಿ, ಬಂಗಾಳದಲ್ಲಿ ಎದ್ದು ನಿಂತ ನಕ್ಸಲೆಟ್ ಕ್ರಾಂತಿ, ಬೆಲ್ಲಿ ಪ್ರಕರಣ ಮುಂತಾದವುಗಳು ಅಲ್ಲದೆ ಡಾ. ಬಾಬಾಸಾಹೇಬ ಅಂಬೇಡ್ಕರ, ಮಹಾತ್ಮ ಫುಲೆ, ಪೆರಿಯಾರ್ ರಾಮಸ್ವಾಮಿ, ರಾಮ ಮನೋಹರ ಲೋಹಿಯಾ ಮತ್ತು ಅಂಶಿಕವಾಗಿ ಮಹಾತ್ಮಾಗಾಂಧಿ ಮೊದಲಾದವು ಮತ್ತು ಅವರ ವಿಚಾರಗಳು, ವಾದಗಳು ದಲಿತ ಕಾವ್ಯದ ಬೆಳವಣಿಗೆಗೆ ಪ್ರೇರಕ ಶಕ್ತಿಗಳಾದವು. ಇವರ ವಾದ, ವಿಚಾರಗಳಲ್ಲಿ ಮಾನವೀಯ ಚಿಂತನೆ ಕಂಡುಬರುವುದರಿಂದ ಈ ಚಂತನೆ ದಲಿತ ಕಾವ್ಯದಲ್ಲಿ ಪ್ರಧಾನ ಸ್ಥಾನ ಪಡೆಯಿತು. "ದಲಿತ ಬಂಡಾಯ ಕಾವ್ಯ ಕೇವಲ ಮೆರವಣಿಗೆಯ ಮಾತಲ್ಲ. ಅಬ್ಬರದ ಮೆರವಣಿಗೆಯ ಮಧ್ಯ ಮಿಡಿಯುವ ಮನಸ್ಸಿನ ಮಾತು. ಬಂಡಾಯವೆಂದರೆ ಕೇವಲ ಸಿಟ್ಟಿನ ಸ್ಫೋಟಗೊಳ್ಳುವ ಮಾನವೀಯ ಮಿಡಿತ" . ಹೀಗಾಗಿ ಮಾನವೀಯ ಚಂತನೆ ದಲಿತ ಬಂಡಾಯ ಕಾವ್ಯಗಳ ಆಕ್ರೋಶ ಮತ್ತು ಸಿಟ್ಟುಗಳ ಮಡಿಲಲ್ಲಿದೆ.

ಎಷ್ಟ ದಿನಾ ಈ ಪುಟ್ಗೋಸಿಗಳಾಟ?

ಸಿಡೀತಿನಿ ಬಾಂಬ್ ಸಿದ್ಧಂಗೆ

ಇವು ಸಿಂಗಾರ, ಸೋಪಾ, ಗಾಜು, ಲೈಟು ಎಲ್ಲಾ

ಪುಡಿ ಪುಡಿ ಆಗಾಂಗೆ

(ಸಿದ್ದಲಿಂಗಯ್ಯ)

ಎನ್ನುವಲ್ಲಿ ಶೋಷಕರನ್ನು ನಾಶ ಮಾಡಿ ಸುಖದಿಂದ ಬದುಕುವ ಕಾಲ ಬಹಳ ದೂರ ಇಲ್ಲ, ಅದಕ್ಕಾಗಿ ಎಷ್ಟು ದಿನ ಈ ಪುಟಗೊಸಿಗಳ ಆಟ ಎಂದು ಪ್ರಶ್ನಿಸುವ ಮೂಲಕ ಆ ಹಂಬಲವನ್ನು ಕವಿ ಕೈಮಾಡಿ ತೋರಿಸುತಿದ್ದಾನೆ. ಇದು ಏನಾದರು ಒಂದು ವೇಳೆ ಆಗದೆ ಹೋದರೆ ಬಾಂಬ್ ಸಿಡಿದಂಗೆ ಸಿಡಿಯುವ ಎಚ್ಚರಿಕೆಯನ್ನು ಕೂಡ ನೀಡುತ್ತಾನೆ.

ದಲಿತ ಸಾಹಿತ್ಯದ ಮುಖ್ಯ ಉದ್ದೇಶವೇ ಮಾನವೀಯ ಚಿಂತನೆ ಆದರೆ ಕೆಲವು ಸಂದರ್ಭದಲ್ಲಿ ಬ್ರಾಹ್ಮಣ ವಿರೋಧಿ ಸಾಹಿತ್ಯವೆಂದು ಬಿಂಬಿಸಲಾಗುತ್ತದೆ. ಆದರೆ ದಲಿತ ಸಾಹಿತ್ಯ ಯಾವುದೇ ಒಂದು ಜಾತಿಯನ್ನು ವಿರೋಧಿಸಲು ಹುಟ್ಟಿಕೊಂಡದ್ದಲ್ಲ. ಅದು ಇಡಿ ಜಾತಿ ವ್ಯವಸ್ಥೆಯನ್ನೇ ವಿರೋಧಿಸುತ್ತದೆ. ಪುರೋಹಿತ ಶಾಹಿ, ಬಂಡವಾಳ ಶಾಹಿ, ಅಧಿಕಾರ ಶಾಹಿ ಮತ್ತು ಯಥಾಸ್ಥಿತಿವಾದವವನ್ನು ಒಪ್ಪುವ ಯಾವುದೇ ಶಕ್ತಿಯನ್ನು ಇದು ಧಿಕ್ಕರಿಸುತ್ತದೆ. ಕೆಲವು ವಿಮರ್ಶಕರು ಹಳೆಯದಾದ ಸೂತ್ರವೊಂದನ್ನು

ತಲೆಯಲ್ಲಿಟ್ಟುಕೊಂಡು ಪೂರ್ವಾಗ್ರಹ ಪೀಡಿರತಾಗಿ ದಲಿತ ಸಾಹಿತ್ಯವನ್ನು ಅಲ್ಲಗಳೆಯುತ್ತಾ ಬಂದಿದ್ದಾರೆ. ದಲಿತ ಕಾವ್ಯದಲ್ಲಿರುವ ಸಿಟ್ಟು, ವ್ಯಂಗ್ಯ, ವಿಡಂಬನೆಯನ್ನು ಮುಂದಿಟ್ಟುಕೊಂಡು ದಲಿತ ಸಾಹಿತ್ಯದ ಮೂಲ ಕೇವಲ ಆಕ್ರೋಶವಾಗಿರುವುದರಿಂದ ಅದು ಒಂದು ಪ್ರತಿಭಟನೆಯ ಕೂಗು ಅಥವಾ ಪ್ರಚಾರದ ವೈಖರಿ ಎಂದು ಹೇಳುವ ಇವರು ದಲಿತ ಸಾಹಿತ್ಯ ಸಾಹಿತ್ಯವೇ ಅಲ್ಲ, ಎಂಬ ವಿಶ್ಲೇಣೆಯನ್ನು ನೀಡುತ್ತಾರೆ. ಇಂತಹ ವಿಮರ್ಶಕರಿಗೆ ಅಲ್ಲಿರುವ ಸಿಟ್ಟು, ವ್ಯಂಗ್ಯ ವಿಡಂಬನೆ ಮಾತ್ರ ಅರ್ಥವಾಗುತ್ತದೆ. ಅದರಲ್ಲಿ ಅಡಗಿರುವ ಮಾನವೀಯ ದೃಷ್ಟಿ, ಮಾನವೀಯ ಪ್ರೀತಿ, ಸಮಾನತೆ ಕಾಳಜಿ ಮಾನವೀಯ ಚಿಂತನೆ ಗೋಚರಿಸುವುದೇ ಇಲ್ಲ.

ಹುಟ್ಟ ಬಾರದಷ್ಟೂ ಹುಟ್ಟು ಬಾರು

ಏಳೇಳ ಜನ್ಮದಾಗ ಈ ಭೂಮಿ ಮ್ಯಾಗ

ಹೊಲಿ ಮಾದಿಗ್ರಾಗಿ ಹುಟ್ಟು ಬಾರ

(ಅರವಿಂದ ಮಾಲಗತ್ತಿ)

ಇಲ್ಲಿ ಶತಮಾನಗಳಿಂದ ಶೋಷಣೆಗೆ ಈಡಾಗಿ ನೊಂದ ಸಮುದಾಯದ ಧ್ವನಿಯೊಂದು ಬಿಡುಗಡೆಗಾಗಿ ಹಂಬಲಿಸುತ್ತದೆ. ಮೇಲ್ವರ್ಗದ ಮೇಲ್ಜಾತಿಯ ಜನರಿಂದ ಹಿಂಸೆ, ನೋವು, ಅತ್ಯಾಚಾರ, ಕ್ರೌರ್ಯ ಮೊದಲಾದವುಗಲನ್ನು ಅನುಭವಿಸಿನೊಂದಿರುವ ಅತ್ಯಂತ ಕೆಳಸ್ತರದ ಜನ ಹೀಗೆ ಅಸಹಾಯಕತೆಯೇ ಆಕ್ರೋಶವಾಗಿ ಪರಿವರ್ತನೆ ಆಗುತ್ತದೆ. ಹೀಗಾಗಿ ಮೊದಲು ಎಚ್ಚರಿಕೆಯನ್ನು ಕೂಡ ಅವರು ನೀಡುತ್ತಾರೆ. ಬಹಳ ಆತ್ಮೀಯತೆಯಿಂದ ಸಮಾನತೆಯಿಂದ ಸಮನತೆಗಾಗಿ ಕೇಳಿಕೊಳ್ಳುತ್ತ ಮಾನವೀಯತೆಯ ಹೊಸ ಹಾದಿ ಹಿಡಿಯಲು ಒತ್ತಾಯಿಸುತ್ತಾರೆ.

ಮೌನದಲ್ಲಿ ಕೊಲ್ಲಬೇಡಿ ಕರುಣೆ ನಮಗೆ ಬೇಡ

ಲೆಕ್ಕ ಮಿಕ್ಕು ಬೆಳ್ಳಿಕೊಳ ಅಂಕಗಣಿತ ಬೇಡ

ಜೇಡ ಜಾಲ ಕೊಡವಿ ನಿಲ್ಲಿ ಹೊಸತು ಮಾತು ಮಸೆಯಿರಿ

ಜೀವಗಾಳಿ ಗೆಳೆಯರಾಗಿ ಮರುಳು ಮನಸು ಬೆಸೆಯಿರಿ

ಭಾರತೀಯ ವರ್ಣ ವ್ಯವಸ್ಥೆಯಲ್ಲಿ ಜಡ್ಡುಗಟ್ಟಿದ ವಾತಾವರಣದಲ್ಲಿ ಶೋಷಿತ ಜನರ ಬಗ್ಗೆ ಕೇವಲ ಉದ್ಧಾರದ ಮಾತುಗಳನ್ನು ಆಡಿದರೆ ಸಾಲದು. ಅದಕ್ಕಾಗಿ ಕವಿ 'ಕರುಣೆ ನಮಗೆ ಬೇಡ' ಎನ್ನುತ್ತಾರೆ. ಶೋಷಿತ ಜನಾಂಗಕ್ಕೆ ಬೇಕಾಗಿರುವುದು ಕರುಣೆ ಅಲ್ಲ ಸಹಾಯವೂ ಅಲ್ಲ. ದಯೆಯೂ ಅಲ್ಲ. ಮುಖ್ಯವಾಗಿ ಬೇಕಾಗಿರುವುದು ಸಮಾನರಾಗಿ ಬದುಕುವ ಹಕ್ಕು ಮಾತ್ರ ವರ್ಣ ವ್ಯವಸ್ಥೆಯನ್ನು ಮೀರಿ ಮನಸ್ಸು ಮನಸ್ಸುಗಳು ಬೆಸೆಯುವಂತಾಗಬೇಕು, ಎನ್ನುವ

ಮಾತುಗಳಲ್ಲಿ ಮಾನವೀಯ ಸಮಾಜ ನಿರ್ಮಾಣದ ಆಶಯವನ್ನು ಅವರು ಬಯಸುತ್ತಾರೆ. ಇದು ಮಾನವೀಯ ಚಿಂತನೆಯ ಪ್ರಮುಖ ಆಶಯವೂ ಆಗಿದೆ.

ದಲಿತ ಕಾವ್ಯ ಪುರೋಹಿತ ಶಾಹಿ, ಅಧಿಕಾರ ಶಾಹಿ ಮತ್ತು ಬಂಡವಾಳ ಶಾಹಿ ಇವುಗಳನ್ನು ಸಾರಾ ಸಗಟಾಗಿ ತಿರಸ್ಕರಿಸುತ್ತದೆ ಮತ್ತು ದಿಕ್ಕರಿಸುತ್ತದೆ ಏಕೆಂದರೆ,



ಪರಂಪರೆ ಪುರಾಣಗಳ ಕಚ್ಚೆರುಕ ರಾಜರುಗಳ

ದೇವಾನು ದೇವತೆಗಳ

ಕಂದು ಕಾಲಡಿ ಸಿಕ್ಕಿ ಕೆಂಬೆವರ ಸೂಸಿಕರಿ

ಮುದ್ದೆಯಾದವರು

ಯುಗ ಯುಗದ ಬಸಿರಲ್ಲಿ ಬರಿ

ಭ್ರೂಣವಾದವರು

(ಇಂದೂಧರ ಹೊನ್ನಾಪುರ)

ಹೀಗೆ ಪುರೋಹಿತ ಶಾಹಿ ವರ್ಗ, ಪರಂಪರೆ-ಪುರಾಣ ದೇವಾನುದೇವತೆಗಳ ಜೊತೆಯಲ್ಲಿ ಆಳುವ ಪ್ರಭುಗಳ ನಿತ್ಯ-ನಿರಂತರ ಶೋಷಣೆ ಮಾಡುವ ಸಂದರ್ಭದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದು ಕೊಂಡವರ ಮೊದಲ ನುಡಿ ಪ್ರತಿಭಟನೆ ಆಗಿರದೆ ಮತ್ತೇನು ಆಗಲು ಸಾಧ್ಯ? ಆದರೆ ಈ ಪ್ರತಿಭಟನೆಯಲ್ಲಿಯೂ ಕೂಡ ಮಾನವೀಯತೆಗಾಗಿ ಹಂಬಲಿಸುವ ಆಶಯವೇ ಪ್ರಧಾನವಾಗಿದೆ.

ದಲಿತ ಕಾವ್ಯದಲ್ಲಿ ನೈಜತೆಗೆ ಮತ್ತು ವಾಸ್ತವತೆಗೆ ಪ್ರಮುಖ ಸ್ಥಾನವಿದೆ. ಇಲ್ಲಿ ಎಷ್ಟೇ ಆಕ್ರೋಶ ಭರಿತ ಕಾವ್ಯ ರಚನೆಯಾದರೂ ಅದು ಮನಸ್ಸು-ಮನಸ್ಸುಗಳಲ್ಲಿ ಹೂವಿನ ಮುಗ್ಧತೆಯಿರುವುದನ್ನು ಉಲ್ಲೇಖಿಸುತ್ತದೆ.

ಪುಟ್ಟ ಗುಡಿಸಲಿನಲ್ಲಿ ಕೆಟ್ಟ ಮನಸುಗಳಿಲ್ಲ

ಮನಸ್ಸು ಕನಸುಗಳಲ್ಲಿ ಜಾಜಿ ಮಲ್ಲಿಗೆ

ಸತ್ತ ನರಗಳ ಸುತ್ತ ಹಸಿದ ಹಾವುಗಳಿಲ್ಲ

ಟೊಂಗೆ ಟೊಂಗೆಯ ತುಂಬ ಬಿರಿವ ಮೊಗ್ಗೆ.

ಬಂದ ಕಾಗೆಗಳೆಷ್ಟೋ ತಿಂದ ಹದ್ದುಗಳೆಷ್ಟೂ

ಲೆಕ್ಕವಿಡಲು ಒಬ್ಬ ಕರಣಿಕನೂ ಇಲ್ಲ

ಬರುವ ಯಾತ್ರಿಕರಿಗೆಲ್ಲ ಜಾತ್ರೆಯಾದರೂ ಕೂಡ

ಯಾರ ಮೇಲೂ ಇವರ ಮುನಿಸೆಂಬುದಿಲ್ಲ.

(ಸತ್ಯಾನಂದ ಪಾತ್ರೋಟ)

ದಲಿತ ಕಾವ್ಯ ಆಕ್ರೋಶ ಹೊಂದಿದೆ ಎಂದು ಹೇಳಬಹುದಾದರೂ ಅದರಲ್ಲಿಯೂ ಅನುಭವ ದೃಷ್ಟಿಯಿದೆ. ಇಲ್ಲಿ ವರ್ಣ ಮತ್ತು ಈ ಎರಡು ಸಮಸ್ಯೆಗಳನ್ನು ಎತ್ತಿಕೊಂಡು ಹೇಳುವ ವಿಚಾರಗಳಿದ್ದರೂ, ಅಲ್ಲಿಯ ಹಂಬಲ ಸಮಾನತೆಗಾಗಿ ಮಾತ್ರ ದಲಿತ ಕಾವ್ಯದ ಪ್ರಥಮ ಕಾಳಜಿ ಮಾನವೀಯತೆಯೇ ಆಗಿರುವುದರಿಂದ ವಸ್ತುನಿಷ್ಠತೆಯನ್ನು ಪ್ರತಿಪಾದಿಸುತ್ತಲೇ ಸೌಂದರ್ಯದ ಸೂಕ್ಷ್ಮತೆಗಳನ್ನು ಸೆರೆ ಹಿಡಿಯುತ್ತದೆ. ಹೀಗಾಗಿ ಮಾನವೀಯತೆ ಅಥವಾ ಮಾನವೀಯ ಚಿಂತನೆ ಅಲ್ಲಿ ಸ್ಥಾಯಿ ಭಾವವಾದರೆ ಉಳಿದೆವಲ್ಲವುಗಳು ಸಂಚಾರಿ ಭಾವಗಳಾಗಿ ಕಾವ್ಯಕ್ಕೆ ಪೂರಕವಾಗಿ ನಿಲ್ಲುತ್ತವೆ.

ಮೂಕ ರಾಜ್ಯದಲ್ಲಿ ಮೊದಲಬಾರಿಗೆ ಮಾತನಾಡುವ

ಸಂಧರ್ಭದಲ್ಲಿ ಮಾನವ ಸಂಬಂಧಗಳು ಅರಳುತ್ತವೆ.

ಅನಿಸಿಕೆಗಳಲ್ಲಿ ಅಭಿವ್ಯಕ್ತಿಯಲ್ಲಿ ಧ್ವನಿಸುತ್ತವೆ.

(ಕೆ. ಗೋವಿಂದ ರಾಜು)

ಮಾನವ ಸಂಬಂಧಗಳು ಅರಳುವ ವೈಚಾರಿಕ ಪ್ರಜ್ಞೆ, ಅಭಿವ್ಯಕ್ತವಾಗುವ ಸಂದರ್ಭಗಳು ಬದುಕಿಗೆ ಬೆನ್ನು ತಿರುಗಿಸುವುದಿಲ್ಲ. ಬದಲಾಗಿ ಮಾನವೀಯ ಸಂಬಂಧಗಳಿಂದ ಕೂಡಿದ ಹೊಸ ಬದುಕಿನ ಕನಸನ್ನು ಕಾಣುತ್ತವೆ. ಈ ಕನಸುಗಳ ಸಾಕಾರತೆಯ ಸಂದರ್ಭದಲ್ಲಿ ಪ್ರತಿಭಟನೆ ಅನಿವಾರ. ಆದರೆ ಈ ಪ್ರತಿಭಟನೆ ಕೇವಲ ಮಾನವೀಯ ಕಾಳಜಿಗಾಗಿ ಎಂಬುವುದನ್ನು ಮರೆಯಬಾರದು.

ಎಲ್ಲಿತನ ಕತ್ತಲವು ಬೆಳಗು ಆಗಲೇಬೇಕು

ಚಿಕ್ಕಿಗಳು ಹೊಳೆದಾವ ಮ್ಯಾಗ

ಜಗತ್ತಿನೆಲ್ಲಾ ಕಡೆಗೆ ಮೊದಲಿಂದ ಅತ್ತವರೆ

ಗಟ್ಯಾಗಿ ಕುಳಿತಾರ ಈಗ

(ಚೆನ್ನಣ್ಣ ವಾಲಿಕಾರ)

ಬೆಳಕು ಮೂಡುವ ಆಶಾಭಾವನೆ ದಲಿತ ಚಳುವಳಿ ತೀವ್ರವಾಗುತ್ತ ನಡೆದಂತೆ ಖಚಿತವಾದ ನಿರ್ಧಾರಕ್ಕೆ ಬರುವುದನ್ನು ಪ್ರತಿನಿಧಿಸುತ್ತದೆ.

ಇಂದಿಲ್ಲದಿರೆ ನಾಳೆ

ಈ ಜಗವನ್ನು ಆಳುವವರು ನಾವೆ

ಸೂರ್ಯನ ಜೊತೆಗೆಯೇ

ಬಂದ ಕತ್ತಲು ನುಂಗಿ ಬಿಡುವೆವು

ಪ್ರತಿ ಕಿಡಕಿಗಳ ತೂರಿ

ಬೆಳಕಾಗಿ ಮನೆ ತುಂಬುವೆವು

ಹಾವಾಗಿದ್ದ ಜನರ ಕೈಗೆ ಹೂವು ಕೊಡುವೆವು

(ಬರಗೂರ ರಾಮಚಂದ್ರಪ್ಪ)

ಈ ಕನಸುಗಳು ಕೇವಲ ಭ್ರಮಾತ್ಮಕವಾಗಿ ಬಂದವುಗಳಲ್ಲ. ಹಾಗೂ ಈ ಕನಸುಗಳು ಕೇವಲ ಒಣ ಕನಸುಗಳಲ್ಲ. ಅದಕ್ಕೊಂದು ಸ್ಪಷ್ಟ ಉದ್ದೇಶವಿದೆ. ಒಂದು ತಾತ್ವಿಕ ಸಿದ್ಧಾಂತದ ತಳಹದಿಯ ಮೇಲೆ ರಾಜ್ಯ ಕಟ್ಟುವ ಮತ್ತು ಪ್ರಜೆಗಳನ್ನು ಸುಖಿಗಳನ್ನಾಗಿ, ಸಮಾನರಾಗಿ ಬದುಕುವ ಹಾಗೆ ಮಾಡುವ ತಾತ್ವಿಕ ಬದ್ಧತೆ ದಲಿತ ಕಾವ್ಯಕ್ಕಿದೆ. ದಲಿತ ಕಾವ್ಯ ಈ ಅವ್ಯವಸ್ಥೆಯನ್ನು ಬದಲಯಿಸುವ ಛಲ ಹೊಂದಿರುವುದು ಕಂಡು ಬರುತ್ತದೆ. ಅವ್ಯವಸ್ಥೆಯನ್ನು ಬದಲಾಯಿಸಿ ಸಮಾಜವನ್ನು ವ್ಯವಸ್ಥಿತ ರೀತಿಗೆ ತರುವ ತುಡಿತ ದಲಿತ ಕಾವ್ಯದಲ್ಲಿದೆ.



ಮೂಲವ ಕಡಿಯುವೆ

ನೆಲೆಯಿಲ್ಲದಲೆ ಅವಮಾನ

ಬೆವರಲ್ಲಿ ಬದುಕು ಮೆತ್ತಿಕೊಂಡಿದೆ

ಇವರ ತದಗು.....

ಪುಳ್ಳಿ ಸೌದೆಗಳನೆಲ್ಲಾಗುಡಿಸಿ

ಬಿಸಿ ನೀರು ಕಾಸಿ

ಕಬ್ಬಿಣದ ಕಡಿ ಮೈಯ ಬೆವರ

ತೊಳೆಯುತ್ತೇನೆ

ಉಜ್ಜುತ್ತೇನೆ

ಹಳೆಯ ಕೊಳೆಯನೆಲ್ಲಾ

(ಮ.ನ. ಜವರಯ್ಯ)

ಶೋಷಣೆಗೆ ಒಳಗಾದ ಜನ ಈ ಮೊದಲೇ ಹೇಳಿದಂತೆ ಹೊಸ ಬದುಕಿನ ಹಂಬಲಿಕೆಯುಳ್ಳವರು. ತಮ್ಮ ದುಃಖ ದುಮ್ಮಾನಗಳನ್ನು ತೋಡಿಕೊಳ್ಳುತ್ತ ತಮ್ಮನ್ನು ಶೋಷಣೆಗೆ ಈಡು ಮಾಡುತ್ತಿರುವ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಲೇ ಅಲ್ಲಿರುವ ಹಳೆಯ ಕೊಳೆಯನ್ನೆಲ್ಲಾ ಕಿತ್ತು ಹಾಕಿ. ಶಾಂತಿ ಮತ್ತು ಸಹೋದರತೆಗಳಿಂದ ಕೂಡಿದ ಸಾಮಾಜಿಕ ಸಮಾನತೆಯನ್ನು ಇಲ್ಲಿ ತರಲೆತ್ನಿಸುತ್ತಾರೆ.

ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವಾಗ ಆ ಮೌಲ್ಯಗಳ ನಿರ್ಣಯ ಮಾನವೀಯತೆ ಆಧಾರದಲ್ಲಿಯೇ ನಡೆಯುತ್ತದೆ.ಪ್ರಭು- ಪ್ರಭುತ್ವದಿಂದ ಪ್ರಜಾಪ್ರಭುತ್ವದ ತನಕ ಭಾರತೀಯ ಸಾಮಾಜಿಕ ಚರಿತ್ರೆ ತುಂಬಾ ಜಟಿಲವಾಗಿಯೇ ಇದೆ. ಕಾಲಕಾಲಕ್ಕೆ ಆದರ್ಶವಾಗಿದ್ದ ಮೌಲ್ಯಗಳು ಬದಲಾಗುತ್ತಲೇ ಬಂದಿವೆ. ಒಂದು ಕಾಲದಲ್ಲಿದ್ದ ಮೌಲ್ಯ ಇನ್ನೊಂದು ಕಾಲದಲ್ಲಿ ಅನಿಷ್ಟ ಸಂಪ್ರದಾಯವಾಗಿ ಕಾಣಬಹುದು. ಹೀಗಾದಾಗ ಸಮಕಾಲೀನ ಸ್ಥಿತಿಯಲ್ಲಿ ಅದನ್ನು ಮೌಲ್ಯವೆಂದು ಪರಿಗಣಿಸಬಾರದು.ಆದರೆ ಮಾನವೀಯ ಮೌಲ್ಯ ಎಂದಿಗೂ ಬದಲಾಗುವಂತದ್ದಲ್ಲ. ಮಾನವೀಯ ಮೌಲ್ಯಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಸಾಕಷ್ಟು ಪುರಸ್ಕಾರವಿದ್ದರೂ ಅದು ಬಳಕೆಯಲ್ಲಿ ತುಂಬಾ ವಿರಳವಾಗಿದೆ.

ಸಮಾಜದ ಧೀನ ದುರ್ಬಲರ, ಬಡಜನರ, ನಿರ್ಗತಿಕರ, ಅಸಹಾಯಕ ಮಕ್ಕಳ, ಅಬಲೆಯರ ಮತ್ತು ವೃದ್ಧರ ದುರ್ದೆಶೆಯನ್ನು ನಿವಾರಿಸಿ ಅವರ ಕಲ್ಯಾಣವನ್ನು ಸಾಧಿಸುವ ಬಲವಾದ ತುಡಿತ ದಲಿತ ಕಾವ್ಯಕ್ಕಿದೆ. ಇದನ್ನೇ ಕೇಂದ್ರವಾಗಿಟ್ಟುಕೊಂಡ ದಲಿತ ಕಾವ್ಯ ತನ್ನ ಆಶಯವನ್ನು ಪ್ರತಿನಿಧಿಸುತ್ತದೆ.

ಕೊಳೆಯಿಂದ ಕರೆಗಟ್ಟಿದ ಭೂ- ಮೈತೊಳೆದು

ತಗ್ಗು ತಿಟ್ಟುಗಳ ಸಮಮಾಡಿ

ನೊಂದ ಜೀವಗಳಿಗೆಲ್ಲ ನೆಮ್ಮದಿಯ ಹೊಸ ಬದುಕು

ಕೊಡಲು

ಮುಂಗಾರು ನೀ ಬೇಗ ಬಾ

(ಬಾನಂದೂರ ಕೆಂಪಯ್ಯ)

ಶೋಷಣೆಗೆ ಒಳಗಾದವರು ಶೋಷಣೆಗೀಡು ಮಾಡುತ್ತಿರುವ ವ್ಯವಸ್ಥೆಯನ್ನು ಪ್ರತಿಭಟಿಸುತ್ತ ಸಮಾನತೆಗಾಗಿ ಹಂಬಲಿಸುತ್ತಾರೆ. ದಲಿತ ಕಾವ್ಯ ಮಾನವೀಯತೆಯ ಆಧಾರದಲ್ಲಿ ರಚಿತವಾದ ಸಾಮಾಜಿಕ ಸಮಾನತೆಯ ಸಂಬಂಧಗಳಿಂದ ಕೂಡಿ ಬಾಳುವ ಪರಿಲಕಲ್ಪನೆಯನ್ನು ಮುಂದಿಡುತ್ತದೆ. ಜಾತಿ-ಮತ-ಪಂಥ, ವರ್ಗ,ವರ್ಣ, ಅಜ್ಞಾನ, ಮೂಢನಂಬಿಕೆ ಇವುಗಳನ್ನೆಲ್ಲಾ ಮೀರಿ ಮಾನವ ಧರ್ಮವನ್ನು ನಮ್ಮದಾಗಿಸಿಕೊಳ್ಳಬೇಕು ಎಂಬುದು ದಲಿತ ಕಾವ್ಯದ ಮೂಲದ್ಯೆಯವಾಗಿದೆ.ದಲಿತ ಕಾವ್ಯದ ಮತ್ತೊಂದು ವಿಶೇಷವೆಂದರೆ ಈ ದೇಶದಲ್ಲಿ ನಿರಂತರ ಅವಮಾನಕ್ಕೆ ಗುರಿಯಾಗಿ ನಾಲ್ಕು ಗೋಡೆಗಳ ಮಧ್ಯ ಬದುಕು ಸವೆಸುವ ಹೆಣ್ಣಿಗೂ ಒಂದು ಘಟ್ಟಿ ಧ್ವನಿಯನ್ನು ಕೊಟ್ಟಿದೆ. ವಚನ ಸಾಹಿತ್ಯವನ್ನು ಬಿಟ್ಟರೆ ಅಧಿಕೃತವಾಗಿ ಮಹಿಳೆ ಮನ ಬಿಚ್ಚಿ ಮಾತನಾಡಿದ್ದು ದಲಿತ ಕಾವ್ಯದಲ್ಲಿ.

ದಲಿತ ಕಾವ್ಯ ಕ್ರಾಂತಿಯ ಕರೆಯನ್ನು ನೀಡಿ, ಸನಾತನ ಸಂಪ್ರದಾಯತ್ವವನ್ನು ಕಿತ್ತೊಗೆದು ಮಾನವೀಯ ಆಧಾರದಲ್ಲಿ ನೆಲೆಗೊಳ್ಳುವ ಸಮಾಜದ ಅಧಿಕಾರ ಪಡೆಯುವ ಮತ್ತು ತಾರತಮ್ಯ ರಹಿತ ಮಾನವ ಸಂದರ್ಭಗಳನ್ನು ಬೆಸೆಯಲು ತವಕಿಸುತ್ತದೆ. ಸೂರ್ಯನ ಜೊತೆಗೆಯೇ ಬಂದು ಕತ್ತಲು ನುಂಗಿ ಬಿಡುವೆವು' ಎಂಬಲ್ಲಿ ಮುಸುಕಿದ ಅಜ್ಞಾನದ ಕತ್ತಲೆಯನ್ನು ನೀಗುವ ಮಹದಾಸೆಯಿದೆ. ಹಾಗಾಗಿ ಅದರ ಆಶಯವೂ ಸುಸ್ಪಷ್ಟವಿದೆ. ಸಮಾನತೆಯ ಹಂಬಲ, ಶೋಷಣೆಯ ನಿರ್ಮೂಲನೆ ತಾರತಮ್ಯವಿಲ್ಲದ ಬದುಕುಗಳಿಗಾಗಿ ಮಾನವೀಯ ಚಿಂತನೆಗಳು ದಲಿತ ಕಾವ್ಯದಲ್ಲಿ ಹರಳುಗಟ್ಟಿವೆ.

***********

# ೧೪. ಬಣ್ಣ ಕಳೆದುಕೊಳ್ಳುತ್ತಿರುವ ಕೊಂಡಮಾಮರ

# ಸಾಂಸ್ಕೃತಿಕ ಬದುಕು

**ಡಾ. ಚಿ. ಶ್ರೀನಿವಾಸಯ್ಯ**

ಆದಿಮ ಕಾಲದಲ್ಲಿ ಕಾಡುವಾಸಿಯಾದ ಮಾನವನು, ಹೊಟ್ಟೆ ಹೊರೆಯಲು ಪ್ರಾಣಿ ಪಕ್ಷಿಗಳನ್ನು ಬೇಟೆತಾಡುತ್ತಿದ್ದ. ಡ್ಡೆ-ಗೆಣಸುಗಳನ್ನು ತಿಂದು ಬದುಕುತ್ತಿದ್ದ. ಚಳಿ ಗಾಳಿ ಮಳೆಯಿಂದ ರಕ್ಷಣೆ ಪಡೆಯಲು ಮರ-ಪೊಟರೆಗಳನ್ನು ಆಶ್ರಯಿಸಿದ್ದ. ಆಹಾರನ್ವೇಷಣೆಯು ಇವರನ್ನು ನಿಶ್ಚಿತ ಸ್ಥಳದಲ್ಲಿ ನೆಲೆನಿಲ್ಲದಂತೆ ಅಲೆಮಾರಿ ಬದುಕು ಇವರದಾಗಿಸಿತ್ತು. ಕಾಲಕ್ರಮೇಣ ವ್ಯವಸಾಯ ಮತ್ತು ಪಶುಪಾಲನೆ ರೂಢಿಗೆ ಬಂದು ಒಂದೆಡೆ ನೆಲೆನಿಂತರು. ಗಂಡು ಹೆಣ್ಣಿನ ಸಹಜೀವನಕ್ಕೆ ವಸತಿಯ ಅಗತ್ಯತೆಯನ್ನು ಅರಿತು ಗುಹಾವಾಸಕ್ಕೆ ತೊಡಗಿದರು-ಹೀಗೆ ಆರಂಭಗೊಂಡ ಸಾಮಾಜಿಕ ಜೀವನ, ಸಾಂಸ್ಕೃತಿಕ ಉಜ್ವಲತೆಗೆ, ಭವ್ಯ ನಾಗರಿಕತೆಗೆ ನಾಂದಿಯಾಯಿತು. ಆಧುನಿಕ ಸಂಸ್ಕೃತಿಯೊಂದಿಗೆ ಸಮಾಜದ ಮುಖ್ಯವಾಹಿನಿಯೊಂದಿಗೆ ಬದುಕು ಮುಂದುವರಿಯಿತು. ಆದರೆ ಮಾನವ ಕುಲಗಳು, ತಮ್ಮ ಆದಿಮ ಬದುಕಿಗೆ ಅಂಟಿಕೊಂಡು ಹಳೆಯ ಸಾಂಸ್ಕೃತಿಕ ಪಳಿಯುಳಿಕೆಗಳ ಪ್ರತೀಕಗಳಾದವು. ಅಲೆಮಾರಿ ಜೀವನವನ್ನು ಅಪ್ಪಿಕೊಂಡು ವಿಶಿಷ್ಟ ಬದುಕಿನೊಂದಿಗೆ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಕಾಯ್ದುಕೊಂಡು ನಾಗರಿಕ ಸಮಾಜದಿಂದ ದೂರ ಉಳಿದಿರುವಂತಹ ಅನೇಕ ಪಂಗಡಗಳು ಅಥವಾ ಜನವರ್ಗಗಳನ್ನು ಕಾಣಬಹುದು. ಆದರೆ ಯಾವ ಸಂಸ್ಕೃತಿಯೂ ಪರಿವರ್ತನಾಶೀಲ ಗುಣದಿಂದ ವಿಮುಖವಾಗುವುದಿಲ್ಲ. ಕಾಲಗತಿಯಲ್ಲಿ ಸಾಂಸ್ಕೃತಿಕ ಸಂಕ್ರಮಣದ ಸ್ಥಿತಿಗೆ ಒಳಪಡಲೇಬೇಕಾಗುತ್ತದೆ. ಹೀಗೆ ಒಳಪಟ್ಟ ಕೊಂಡಮಾಮರ ಸಾಂಸ್ಕೃತಿಕ ಬದುಕಿನ ಮೇಲೊಂದು ನೋಟ.

ಪೂರ್ವೇತಿಹಾಸ ಹಿನ್ನೆಲೆಯಿಲ್ಲದ ಜನಾಂಗವಿಲ್ಲ. ಅದು ಅವರಿಗೆ ಪ್ರಾಚೀನ ಪರಂಪರೆಯನ್ನು, ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಒದಗಿಸುವಲ್ಲಿ ಸಹಕಾರಿಯಾಗುತ್ತದೆ. ಅವು ಐತಿಹ್ಯಗಳಾಗಿಯೋ, ಕಾಲ್ಪನಿಕ ಕಥೆಗಳಾಗಿಯೋ, ಹಾಡುಗಬ್ಬಗಳಾಗಿಯೋ ಅಥವಾ ಪ್ರಾದೇಶಿಕ ನಂಬಿಕೆಗಳಾಗಿಯೋ ಲಭ್ಯವಾಗುತ್ತವೆ. ಈ ಸಂಬಂಧವಾಗಿ ನಿಖರವಾದ ದಾಖಲೆಗಳಲ್ಲದಿದ್ದರೂ ಸಾಂಸ್ಕೃತಿಕ ಅಧ್ಯಯನಕ್ಕೆ ಆನುಷಂಗಿಕ ಮಾಹಿತಿಗಳಾಗಬಲ್ಲವು. ಆದರೆ ಅವುಗಳನ್ನು ಅಭಿವ್ಯಕ್ತಿಸುವ, ಲಭ್ಯ ಮಾಹಿತಿಗಳನ್ನು ಸಂರಕ್ಷಿಸಿಡಯವ ಪ್ರಜ್ಞಾವಂತಿಕೆ ಈ ಅನನ್ಯತೆ ಹಾಗೀ

ರಹಸ್ಯವನ್ನು ಕಾಯ್ದುಕೊಳ್ಳುವ ಅಥವಾ ಅನ್ಯ ಸಂಸ್ಕೃತಿಯೊಂದಿಗೆ ಸಮವಾಗಿ ನಿಲ್ಲಲಾರದ ಕೀಳರಿಮೆಯ ಭಾವನೆಯೂ ಇದರ ಹಿಂದೆ ಇರುವ ಹಾಗಿದೆ.ಒಟ್ಟಾರೆ ಅನಕ್ಷರಸ್ಥ ಅಮಾಯಕ ಜನರಾದ ಇವರಿಂದ ಮಾಹಿತಿಗಳನ್ನು ಸಂಗ್ರಹಿಸಿದ ಇವರ ಪುರಾತನ ಬದುಕಿನ ಚಿತ್ರಣ ಇಂತಿದೆ.

೧. 'ರಾಮಾಯಣದ ಕಾಲದಲ್ಲಿ ಈ ಜನಾಂಗ ಅಸ್ತಿತ್ವದಲ್ಲಿ ಎಂಬ ಪ್ರತೀತಿಯಿದೆ. ಶ್ರೀರಾಮನು ಲಕ್ಷ್ಮಣ ಸಮೇತನಾಗಿ ದಕ್ಷಿಣಪ್ಪದಲ್ಲಿ ಸಂಚರಿಸುವಾಗ ಇವರ ಲಿಂಗಪೂಜೆಯನ್ನು, ಶೂರತನವನ್ನು ಮೆಚ್ಚಿ, ತನ್ನ ವಂಶಜರೆಂದು, ಒಕ್ಕಲೆಂದು ಹೇಳಿದನು. ತನ್ನ ಕೀರ್ತಿಯನ್ನು ಹೆಚ್ಚಿಸುವಂತೆ ಇವರ ಮೂಲ ಪುರುಷನಿಗೆ ವಚನವಿತ್ತಿದ್ದನೆಂದು" - ಇವರ ಅನೇಕ ಹಾಡುಗಬ್ಬಗಳಿಂದ ತಿಳಿದು ಬರುತ್ತದೆ.

"ಕುರು ಕುರು ಮಾಮ ಕೊಂಡದೇವತಾ

ನಾಮಾನಾ ಚೆಪ್ಪಡಯ್ಯ

ಕುರು ಕುರು ಕೊಂಡನಾಥುದಾ

ಈ ಮೊದ್ದೇನೋ ಬಾಗುಂದಯ್ಯ

ರೇಪಟಿದೇಮೋ ತೆಲೀದಯ್ಯ.ಕು.ಕುರುಕುರು....

೨. ಕೊಂಡಮಾಮರ ಮೂಲ ಪುರುಷರು ಕಾಡುವಾಸಿಗಳಾಗಿದ್ದರು, ಶ್ರೀಜಂಗಾಲು, ಎಂದು ಹಿಂದೆ ಇವರನ್ನು ಕರೆಯುತ್ತಿದ್ದರು. ವಿವಸ್ತರಾಗಿ ಅಲೆಯುತ್ತಾ ಬಿಲ್ಲು-ಬಾಣ ಬತ್ತಳಿಕೆಗಳನ್ನು ಧರಿಸಿ, ಬೇಟೆಯಲ್ಲೇ ಬದುಕನ್ನು ಸಾಗಿಸುತ್ತಿದ್ದರು. ಒಮ್ಮೆ ಆದಿದೇವನಾದ ಶ್ರೀಶೈಲ ಮಲ್ಲಿಕಾಜುನನು ನಾರದನ ರೂಪದಲ್ಲಿ ವೇಷಮರಸಿ, ಇವರ ವಂಶಜರನ್ನು (ಸೋರೆ ಬುರುಡೆಯ ಏಕತಂತಿವಾದ್ಯ) ನೀಡಿ, ಮುಂದೆ ನನ್ನನ್ನು ತಪ್ಪದೆ ಧ್ಯಾನಿಸಬೇಕೆಂದು ಅಪ್ಪಣೆಯನ್ನು ನೀಡಿದನೆಂದು ಅವರ ಹಿರಿಯರ ಅಭಿಮತವಾಗಿದೆ. ಹೀಗೆ ಅವರಿಗೆ ಏಕನಾದವೂ ಅನುಚಾನವಾಗಿ ಬಂದಿತೆಂದು ಹೇಳುತ್ತಾರೆ.

೩. ಕೊಂಡಮಾಮರ ವಂಶದ ಮೂಲಗುರು ಶ್ರೀಶೈಲದವರು. ಆದರೆ ಒಮ್ಮೆ ಭದ್ರಾಚಲಕ್ಕೆ ಭೇಟಿ ನೀಡಿ ರಾಮದಾಸನ ದರ್ಶನ ಪಡೆದುದರಿಂದ ಶ್ರೀರಾಮಭಕ್ತರಾದರೆಂದು ಹಿರಿಯರು ಹೀಳುತ್ತಾರೆ. ಅಂದಿನಿಂದ ಕ್ಷೌರ ಮಾಡಿಸದೆ, ಶ್ರೀರಾಮನ ಹೆಸರಿನಲ್ಲಿ ಮುಡಿಧ್ಯಾನ ಮಾಡುತ್ತಾ ಭವಿಷ್ಯಕಾರ ವೃತ್ತಿಯನ್ನು ಹಿಡಿದರು. ಅದಕ್ಕೆ ತಮ್ಮ ಕುಲದವರನ್ನು 'ರಾಮಕ್ಷತ್ರಿಯ'ರು ಎಂದು ಕರೆಯುವರೆಂದು ಹೇಳುತ್ತಾರೆ.

ಈ ಮೇಲೆ ಪ್ರಸ್ತಾಪಗೊಂಡ ಮೂರು ಮಾಹಿತಿಗಳು, ಕೆಲವು ವಿಶಿಷ್ಟಾಂಶಗಳು ಚರ್ಚೆಗೆ ಗ್ರಾಸವಾಗುತ್ತವೆ. ಇವರು ಮೂಲತಃ ದ್ರಾವಿಡ ಸಂಸ್ಕೃತಿಯವರೂ ಕಾಡುವಾಸಿಗಳೂ ಹಾಗೂ ಮೂಲದಲ್ಲಿ ಶೈವ ನಿಷ್ಟರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಕಾಲಾನಂತರದಲ್ಲಿ ವೈಷ್ಣವ ನಿಷ್ಠೆಗೆ ಪರಿವರ್ತನೆಗೊಂಡವರೆಂದು ಹೇಳಬಹುದಾಗಿದೆ . ಅಂದರೆ ವಚನ ನಿಷ್ಠೆಯನ್ನು ಮೀರದ ಸತ್ಯವಂತರಾಗಿದ್ದರು.



ಇಂದಿಗೂ ಈ ಅಪೂರ್ವ ಗುಣವನ್ನು ಇವರಲ್ಲಿ ಕಾಣಬಹುದಾಗಿದೆ .ಕಾಡಿನ ಹಂತದ ಅವರ ಬರ್ಬರ ಬದುಕು ಹಾಗೂ ತನ್ನ ಒಕ್ಕಲುಗಳಾಗಿ ಪರಿವರ್ತಿಸುವಲ್ಲಿ ದೇವರುಗಳ ಪ್ರವೇಶ ಮತ್ತು ನಿಷ್ಠರಾಗಿ ತಮ್ಮ ಸಾಂಸ್ಕೃತಿಕ ಬದುಕಿನಲ್ಲಿ ಸಂಬವಿಸಿದೆ ಸಂಕ್ರಮಣಗಳೂ ಬದಲಾದ ವೇಷಭೂಷಣಗಳು ಅವರ ಸಾಂಸ್ಕೃತಿಕ ಸ್ಥಿತ್ಯಂತರದ ಕುರುಹುಗಳಾಗಿವೆ ಎಂದರೆ ತಪ್ಪಾಗಲಾರದು. ಅಲ್ಲದೆ ಅವರು ಶೈವ ಮತ್ತು ವೈಷ್ಣವ ಸಂಪ್ರದಾಯಕ್ಕೆ ತೋರುವ ನಿಷ್ಠೆಯು ಅವರ ಧರಿಸುವ ರುದ್ರಾಕ್ಷಿ ನಾಮ,ಏಕನದ ಮುಟುಗಟ್ಟು (ಶಿಖೆಯನ್ನು ಕಟ್ಟುವ ರೀತಿ) ಮುಂತಾದ ಉಡುಗೆ-ತೊಡುಗೆಗಳು, ಅವರ ದೈವಿಕ ಹಾಗೂ ಕುಲಾಚಾರದಲ್ಲಿನ ತತ್ತ್ವ ನಿಷ್ಠಗಳನ್ನು ತೋರಿಸುತ್ತವೆ. ಆದರೆ ಪ್ರಸ್ತು ಈಸಾಂಸ್ಕೃತಿಕ ಕಲಾಸಿರಿ ಕಾಲದಂಚೆಗೆ ಸರಿಯಲ್ಪಡುತ್ತಿರುವುದು ಆದುನಿಕತೆಯ ವಿಪರ್ಯಾಸವೆಂದೆ ಹೇಳಬೇಕಾಗುತ್ತದೆ.

ಕೊಂಡಮಾಮರ ಕರ್ನಾಟಕ ಆಂಧ್ರ ಮತ್ತು ಭರತದ ಗಡಿಯಾಚೆಗೂ ಜನಪ್ರಿಯತೆಯನ್ನು ಪಡೆದ ಭವಿಷ್ಯಕಾರರಾಗಿದ್ದರೆ, ಇವರನ್ನು ಪ್ರಾದೇಶಿಕ ಹಿನ್ನಲೆಯಲ್ಲಿ ಹಲವಾರು ನಾಮಧೇಯಗಳಿಂದ ಕರೆಯುತ್ತಾರೆ .ಬೈರಾಗಿ,ಜಂಗಮುಲು, ಶಾಸ್ತ್ರೀಕರು, ರಾಮಕೊಂಡಲು, ಕೊಡಮಾಮ, ಕೊದರಾಜು-ಮುಂತಾದ ಹೆಸರುಗಳಿವೆ. ಆದರೆ ತಮ್ಮ ಶಾಸ್ತ್ರದ ಆದಿಪುರುಷನಾದ ಶ್ರೀರಾಮನನ್ನು ಹಾಗು ತಮ್ಮ ಸಾಂಸ್ಕೃತಿಕ ನೆಲದಿಂದ ಕೊಂಡದೇವತೆ(ಮಲೆದೇವತೆ)ಯನ್ನು ಸ್ತುತಿಸುವುದರಿಂದ ಕೊಂಡಮಾಮದಂತಹ ಹೆಸರು ಪ್ರಾಪ್ತವಾಗಿರಬಹುದು. ಮಾನಸಿಕ ಭವನೆಯ ಕುರುಹನ್ನು ಹೊರದೋರುವ ಹಿರಿಯನಾಗಿರುದರಿಂದ 'ಕುರುಕುರುಮಾಮ' ಹೆಸರಿನಿಂದ ಕರೆಯುತ್ತಾರೆಂದು ಹಿರಿಯರೊಬ್ಬರ ಅಭಿಪ್ರಾಯ ವ್ಯಕ್ತಪಡಿಸಿದರು.

ನಂಬಿಕೆ ರಹಿತ ಮನುಷ್ಯನ ಬದುಕಿಲ್ಲ. ಆದಿಮಾನವನಿಂದ ಆಧುನಿಕ ಮಾನವನ ತನಕ ಇದನ್ನು ಕಾಣಬಹುದು. ಅದು ಅಗೋಚರ ಶಕ್ತಿಯ ನಂಬಕೆಯಿರಬಹುದು ಅಥವಾ ಭವಿಷ್ಯ ನಿರ್ಧಾರಕ ಶಕ್ತಿಗಳಲ್ಲಿರಬಹುದು. ಒಟ್ಟಾರೆ ಭವಿಷ್ಯದ ಆಗು-ಹೋಗುಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಮಾನವ ಸಹಜವಾಗಿದೆ. ಅದಕ್ಕಾಗಿ ಅವನು ಹಲವು ಸಂಕೇತ, ಶಕುನ ಹಸ್ತ ಸಾಮುದ್ರಿಕೆಗಳೋ ಕುರುಡ ನಂಬಿಕೆಗಳೋ ಎಂಬುದು ಮುಖ್ಯವಲ್ಲ. ಮಾನವನ ಭವಿಷ್ಯಗ್ರಹಿಕೆಯು ಅದರಲ್ಲು ಅದರಲ್ಲಿನ ಆಸಕ್ತಿಯು ಎಷ್ಟು ಪುರಾತನವೆಂಬುದು ಇಲ್ಲಿ ಪ್ರಧಾನವಾಗಿರುತ್ತದೆ. ಈ

ನಿಟ್ಟಿನಲ್ಲಿ ಕೊಂಡಮಾಮರ ಭವಿಷ್ಯವನ್ನು ಗ್ರಹಿಸಬೇಕು. ಭವಿಷ್ಯಕಾರರ ಭವಿಷ್ಯವಿಂದು ಅಧೋಗತಿಗಿದಿದೆ. ವೃತ್ತಿನಿರತ ಭವಿಷ್ಯಕಾರರು ಮೂಲೆಗುಂಪಾಗಿದ್ದಾ, ಭವಿಷ್ಯವನ್ನು ಹೇಳುವ ಆಧುನಿಕ ತಾಂತ್ರಿಕ ಭವಿಷ್ಯಕಾರರು ತಲೆಯೆತ್ತುತ್ತಿದ್ದಾರೆ. ಜ್ಯೋತಿಷ್ಯಾಲಯಗಳಲ್ಲಿ ಇಂದು ಭವಿಷ್ಯ ಕಂಪ್ಯೂಟರೀಕರಣಗೊಳ್ಳುತ್ತಿದೆ. ನಿಯತಕಾಲಿಕಗಳು,ದೃಶ್ಯ ಹಾಗು ಶ್ರವ್ಯಮಾಧ್ಯಮಗಳು ಭವಿಷ್ಯ ಸಂಬಂಧಿ ಕಾರ್ಯಕ್ರಮಗಳನ್ನು ಯಥೇಚ್ಛವಾಗಿ ಬಿತ್ತರಿಸುತ್ತಿವೆ. ಅಲ್ಲದೆ ಆದುನಿಕ ಶಿಕ್ಷಣ, ವೈಜ್ಞಾನಿಕ ಭೋಧನೆಗೆ ಮುಂದಾಗಿರುವುದರಿಂದ ವೃತ್ತಿರತ ಕೊಂಡಮಾಮರ



ಭವಿಷ್ಯಕ್ಕೆ ಮನ್ನಣೆ ಇಲ್ಲದಾಗಿದೆ . ಇವರು ಶಾಸ್ತ್ರಕಟ್ಟಿನ ಕಂಪ್ಯೂಟರೀಕೃತ ಭವಿಷ್ಯ ಮೇಲುಗೈ ಸಾಧಿಸಿದೆ. ಹೀಗೆ ಹತ್ತು ಹಲವಾರು ಕಾರಣಗಳಿಂದ ಕುಲವೃತ್ತಿಯನ್ನ ನಂಬಿ ಬದುಕುತ್ತಿದ್ದ ಕೊಂಡಮಾಮರ ಜೀವನ ನಿರ್ವಹಣೆಯಾಗಿ ಅನ್ಯವೃತ್ತಿಗಳನ್ನು ಅವಲಂಬಸಿ ಬದುಕು ಮುನ್ನಡೆಸಬೇಕಾದ ಅನಿವಾರ್ಯ ಕಾಲಘಟ್ಟದಲ್ಲಿದ್ದಾರೆ.

ಕೊಂಡಮಾಮರ ಮೂಲ ನೆಲೆ ಆಂಧ್ರಪ್ರದೇಶವಾದರು ಎಲ್ಲಾ ಪ್ರದೆಶಗಳಲ್ಲಿ ಇವರನ್ನು ಕಾಣಬಹುದಾಗಿದೆ. ತಮ್ಮ ಮಾತೃಭಾಷೆಯಾದ ತೆಲಗಿನ ಜೊತೆಗೆ ತಾವು ನೆಲೆಸಿರವ ಪ್ರಾದೇಶಿಕ ಭಾಷೆಗಳನ್ನು ಮಾತನಾಡಬಲ್ಲರು. ಕಡುಬಡತನದಿಂದ ಅಲೆಮಾರಿ ಬದುಕಿಗೆ ಒಗ್ಗಿದರೂ ಸಮಾಜದ ಇತರೆ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಕಾಯಯ್ದುಕೊಂಡು ಬಂದಿದ್ದಾರೆ . ವಲಸೆ ಹೋದ ಕಡೆಗಳಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಆಯಾ ಪ್ರಾದೇಶಿಕ ಭಾಷೆಯ ಕಲಿಕೆಯು ಅನಿವಾರ್ಯವಾದುದುರಿಂದ ಅವರು ಬಹುತೇಕ ಭಾಷೆಗಳನ್ನು ಬಲ್ಲವರಾಗಿದ್ದರೆ. ಹಲವು ದಶಕಗಳ ಹಿಂದೆ ಹೊಟ್ಟೆ ತುಂಬಿಸಿಕೊಳ್ಳಲು ವಲಸೆ ಬಂದ ಈ ಜನಸಮೂಹವು ಇಂದು ಕರ್ನಾಟಕದ ಎಲ್ಲಾ ಪ್ರಾಂತ್ಯಗಳಲ್ಲೂ ಕಾಣಸಿಗುತ್ತದೆ ಅಲ್ಲದೆ ಅವರ ವೇಷ-ಭಾಷೆಯಲ್ಲಿಯೂ ಕನ್ನಡತವನ್ನು ಕಾಣಬಹುದಾಗಿದೆ.

ಗುಡ್ಡಗಾಡಿನ ವಾಸಿಗಳಾದ ಇವರು ವ್ಯವಸಾಯ ಮಾಡಿ ಜೀವಿಸುತ್ತಿದ್ದರು- ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸುವುದುಂಟು. ಆದರೆ ನಿರ್ಧಿಷ್ಟ ಆಧಾರಗಳಿಲ್ಲ. ಏಕೆಂದರೆ ಅಲೆಮಾರಿ ಜೀವನವೇ ಇವರಿಗೆ ಪ್ರಧಾನವಾದಂತಿದೆ. ಭಿಕ್ಷೆ ಬೇಡುವುದೇ ವಿತ್ಯಕಾಯಕವಾಗಿರುವ ಇವರು ಮಠ-ಮಂದಿರವನ್ನೂ ಚವಡಿಕಟ್ಟೆಯನ್ನೋ ನಿತ್ಯ ಮನೆಯಾಗಿಸಿಕೊಳ್ಳುವ ಇವರಿಗೆ ವ್ಯವಸಾಯದ ಕಡೆಗೆ ಗಮನಹರಿಸದಿರಲು ಸಾಧ್ಯವಿಲ್ಲವೆನಿಸುತ್ತದೆ! ಒಟ್ಟಾರೆ ಇವರು ಜಮೀನು ಪಡೆದು ವ್ಯವಸಾಯವನ್ನು ಮಾಡುತ್ತಿದ್ದರೂ ಎಂಬುದಕ್ಕೆ ಉದಾಹರಣೆಗಳು ಅಪರೂಪವೆಂದು ಹೇಳಬೇಕಾಗುತ್ತದೆ. ಆದರೆ ಇಂದು ಒಕ್ಕಡೆ ನೆಲೆ ನಿಂತು ವ್ಯವಸಾಯಕ್ಕೆ ತೊಡಗಿರುವ ಜನರು ಇಲ್ಲವೆಂದರೆ ತಪ್ಪಾಗುತ್ತದೆ. ತಮ್ಮ ಮೂಲವೃತ್ತಿಯಿಂದ ಜೀವನ ನಿರ್ವಹಣೆ ಕಷ್ಟದಾಯಕವಾಗಿರುವುದು ಇದಕ್ಕೆ ಒಂದು ಕಾರಣವೆಂದು ಹೇಳಿದರೂ ಅಲೆಮಾರಿ ಜೀವನವನ್ನೇ ನಂಬಿದವರು ಹೆಚ್ಚಾಗಿಯೇ ಇದ್ದಾರೆ.

ಅದು ಅಲೆಮಾರಿ ಬದುಕಾಗಲೀ, ನೆಲೆನಿಂತ ಜೀವನವಾಗಲೀ ಇವರು ತಮ್ಮದೇ ಪಶು ಸಂಪದವನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆ. ದನಕರು, ಕುರಿಕೋಳಿ, ಮೇಕೆಗಳನ್ನು ಸಾಕುತ್ತಾರೆ. ಸಾಗಾಣಿಕೆ ಮತ್ತು ಹಣಕಾಸಿನ ತೊಂದರೆಯನ್ನು ನೀಗಿಸಿಕೊಳ್ಳುವಲ್ಲಿ ಇವು ಸಹಕಾರಿಯಾಗಿವೆ. ಹಿಂದೆ ಸಂಚಾರಕ್ಕಾಗಿ, ಸರಕು ಸಾಗಾಣಿಕೆಗಾಗಿ ಕುದುರೆ ಮತ್ತು ದನಕರುಗಳನ್ನು ಬಳಸುತ್ತಿದ್ದರು. ಈಗಲು ಕುದುರೆಗಳನ್ನು ಬಳಸುವವರಿದ್ದಾರೆ. ಆದರೆ ಬಹುತೇಕ ಅಲೆಮಾರಿ ಕುಟುಂಬದವರು ಕಾವಡಿಕಟ್ಟಿಕೊಂಡು



ಸಾಮಾನುಗಳನ್ನು ಹೊರುವುದು ಸಾಮಾನ್ಯವಾಗಿತ್ತು. ಇಂದು ಅವುಗಳ ಸ್ಥಾನವನ್ನು ದ್ವಿಚಕ್ರವಾಹನಗಳು ತುಂಬಿಕೊಟ್ಟಿವೆ.

ಆದಿಮ ಕಾಲದಲ್ಲಿ ಮೂಲವಾಸ ಗುಡ್ಡಗಾಡುಗಳಾಗಿದ್ದೂ ಬೇಟೆಯೇ ನಿತ್ಯಕಾಯಕವಾಗಿತ್ತು. ಮಾಂಸಹಾರಿಗಳಾದ ಇವರು ಮಾಂಸದ ಜೊತೆಗೆ ಅಂಬಲಿ ಹಾಗೂ ಬಿದಿರುಗಮಜಿಯನ್ನು ಸೇವಿಸುತ್ತಿದ್ದರು. ಆದರೂ ಆಹಾರ ಪದ್ಧತಿಯಲ್ಲಿ ಕೆಲವು ಕಟ್ಟುಪಾಡುಗಳು ಆಚರಣೆಯಲ್ಲಿವೆ. ನವಿಲು, ಗಿಣಿ, ಹಂಸ, ಪಾರಿವಾಳ, ಗರುಡ-ಮುಂತಾದ ಪಕ್ಷಿಗಳ ಮಾಂಸ ಸೇವೆನೆಗೆ ಇವರಲ್ಲಿ ನಿಷೇಧವಿದೆ. ಏಕೆಂದರೆ ನವಿಲು ನಂಬಿಕೆಯಂತೆ ಪವಿತ್ರ ಪ್ರಾಣಿ. ಗಿಳಿಯು ರಾಮನ ಸಂಕೇತ. ಹಾಗೆಯೇ ಗರುಡನನ್ನು 'ರತ್ನಪಕ್ಷಿ' ಎಂದು ಕರೆದು ನಮಸ್ಕರಿಸುತ್ತಾರೆ. ಆದರೆ ಈ ನಿಷೇಧಗಳು ಸಡಿಲಗೊಂಡಿವೆ. ಆಧುನಿಕ ಆಹಾರ ಪಾನೀಯಗಳು ಇವರ ಬದುಕಿನಲ್ಲಿ ಪ್ರವೇಶಿಸಿವೆ. ಪಾರಂಪರಿಕ ಹವ್ಯಾಸವಾದ ಮದ್ಯಪಾನ, ಭಂಗಿಸೇವನೆ ಇಂದು ಇವರ ಬದುಕಿನ ಬವಣೆಯನ್ನು ಹೆಚ್ಚಿಸಿ ನಿತ್ಯ ಸಂಪಾದನೆ ಆ ಚಟಕ್ಕೆ ಸುರಿಯುವಂತೆ ಮಾಡಿದೆ.

ಶಿಷ್ಟ ಸಂಸ್ಕೃತಿಯವರಂತೆ ಇವರುಗಳಲ್ಲಿ ಹಲವಾರು ಪಂಗಡಗಳಿವೆ. ಅವುಗಳನ್ನು ಭಿನ್ನ ಹೆಸರುಗಲಿಂದ ಕರೆಯುತ್ತಾರೆ. ಬೆಡಗುಗಳು ಬೇರೆಯದರೂ ತಮ್ಮನ್ನು ರಾಮಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ತಮ್ಮೊಳಗೆ ಯಾವುದೇ ಮೇಲುಕೀಳಿನ ಅಥವಾ ಭಿನ್ನಭೇದದ ಭವನೆಯನ್ನು ತೋರಿಸುವುದಿಲ್ಲ. ಆದರೆ ವೈವಾಹಿಕ ಸಂದರ್ಭಗಳಲ್ಲಿ ಬೆಡಗುಗಳನ್ನು ಅನುಸರಿಸಿಯೇ ಪರಸ್ಪರ ಸಂಬಂಧಗಳನ್ನು ಏರ್ಪಡಿಸಿಕೊಳ್ಳುತ್ತಾರೆ. ಶಿಷ್ಟಸಂಸ್ಕೃತಿಯವರಲ್ಲಿನ ಗೋತ್ರಗಳಂತೆ ಇವರಲ್ಲಿಯೂ ಗೋತ್ರಗಳಿದ್ದೂ ಸಗೋತ್ರ ತಪ್ಪಿದ ವಿವಾಹಕ್ಕೆ ನಿಷೇಧವಿದೆ. ಉಳಿದ ಯಾವುದೇ ವಿಚಾರಗಳಲ್ಲಿ ರಾಜಿಯಾದರೂ ಗೋತ್ರ ತಪ್ಪಿದ ವಿವಾಹಕ್ಕೆ ಇಂದಿಗೂ ಸಮ್ಮತಿಯಿಲ್ಲವೆಂದು ಆ ಸಮೂಹದ ಹಿರಿಯರು ಅಭಿಪ್ರಾಯಪಡುತ್ತಾರೆ.

ಇತರೆ ಪರಿಶಿಷ್ಟ ಜನಾಂಗದ ಬೆಡಗುಗಳಿಲ್ಲಿರುವಂತೆ 'ಕೆಲಪೆದ್ದ' (ಕುಲದ ಯಜಮಾನ) ವ್ಯವಸ್ಥೆ ಇವರಲ್ಲಿ ಅಸ್ತಿತ್ವದಲ್ಲಿದೆ. ಇವನು ಜನಾಂಗದ ಹಿರಿಯನಾಗಿದ್ದು ಬೆಡಗಿನ ಪ್ರಮುಖನಾಗಿರುತ್ತಾನೆ. ಇವನನ್ನು 'ಬಂಡಾರರು'

ಎಂದು ಕರೆಯುತ್ತಾರೆ. ಈತನ ಮುಂದಾಳತ್ವದಲ್ಲೇ ಕುಲಾಚಾರಗಳು ನಡೆಯುತ್ತದೆ. ಕುಲದ ಯಾವುದೇ ಶುಭಾಶುಭ ಕಾರ್ಯಗಳಲ್ಲಿ ಇವನ ಹಾಜರಾತಿ ಕಡ್ಡಾಯವಾಗಿರುತ್ತದೆ.

ಒಂದು ಕಾಲಘಟ್ಟದಲ್ಲಿ ಅವಿಭಕ್ತ ಕುಟುಂಬಗಳು ಹೇರಳವಾಗಿದ್ದ ಈ ಸಮೂಹದಲ್ಲಿ ಇಂದು ಗಂಡ-ಹೆಂಡತಿ-ಮಕ್ಕಳೊಡಗೂಡಿದ ಸಣ್ಣ ಕುಟುಂಬಗಳು ಹೆಚ್ಚಾಗತೊಡಗಿವೆ. ಆದಾಯ ಮಿತಿ, ಜೊತೆಗೆ ಭಿಕ್ಷೆ ಹಾಗೂ ಭವಿಷ್ಯ ಹೇಳುವ ಕಾಯಕದ ಅತ್ಯಲ್ಪ ಆದಾಯದಲ್ಲಿ ದೊಡ್ಡ ಕುಟುಂಬಗಳ ಪೋಷಣೆ-ನಿರ್ವಹಣೆ ಕಷ್ಟವಾಗಿರುವುದು ಪ್ರಮುಖ ಕಾರಣವೆಂದು ಹೇಳಬಹುದು. ಆದರೂ ಕೆಲವು ಕಡೆ ಅವಿಭಕ್ತ ಕುಟುಂಬಗಳನ್ನೇ ಕಾಣಬಹುದಾಗಿದೆ.



ದ್ರಾವಿಡ ಸಂಸ್ಕೃತಿಯಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಇವರಲ್ಲಿ ಕಾಣುತ್ತೇವೆ. ಸ್ತ್ರೀಗೆ ವಿಶೇಷ ಸ್ಥಾನಮಾನ ಹಾಗೂ ಸ್ವಾತಂತ್ರ್ಯವನ್ನು ಇವರಲ್ಲಿ ಕಲ್ಪಿಸಲಾಗಿದೆ. ಶಿಷ್ಟಸಂಸ್ಕೃತಿಯ ಸ್ತ್ರೀಯರಿಗಿರುವ ಯಾವುದೇ ಸಾಮಾಜಿಕ ನಿರ್ಬಂಧಗಳು ಇವರಲ್ಲಿ ಕಂಡು ಬರುವುದಿಲ್ಲ. ಶೋಷಣೆ ಕಿರುಕುಳಗಳಿಲ್ಲ. ಪುರುಷನಷ್ಟೆ ಸಮಾನವಾಗಿ ಸ್ತ್ರೀಯರನ್ನು ಕಾಣುತ್ತಾರೆ. ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ ಪೂರ್ವದಲ್ಲಿ ಈ ಸಮಾಜದಲ್ಲಿ ಚಾಲ್ತಿಯಲ್ಲಿದ್ದ 'ಸೇವಾ ವಿವಾಹ ಪದ್ಧತಿ'ಯಲ್ಲಿನ ಸ್ತ್ರೀಯ ಸ್ಥಾನಮಾನಗಳ ಬಗ್ಗೆ ಸ್ಪಷ್ಟ ಮಾಹಿತಿಗಳನ್ನು ಒದಗಿಸಿಕೊಡುತ್ತದೆ. ಆದರೆ ಈ ಪದ್ಧತಿಗಳು ಮರೆಯಾಗಿ ಪುರುಷ ಪ್ರಧಾನ ಅದರಲ್ಲೂ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಎಲ್ಲೆಡೆಯೂ ಕಾಣುತ್ತಿದ್ದೇವೆ. ಕುಟುಂಬದಲ್ಲಿ ಯಜಮಾನ್ಯ ವ್ಯವಸ್ಥೆ ಜರಿಯಲ್ಲಿದ್ದೂ ಯಜಮಾನನ ಮಾತನ್ನು ವೇದ ವಾಕ್ಯವೆಂದು ಭಾವಿಸುವ ಕಾಲಘಟ್ಟದಲ್ಲಿದ್ದೇವೆ.

ಕೊಂಡಮಾಮರ ಸಂಸ್ಕೃತಿಯಲ್ಲಿ ಗಂಡು ಮಕ್ಕಳು ತಮ್ಮ ಹದಿನಾಲ್ಕು ಅಥವಾ ಹದಿನೈದನೆಯ ವಯಸ್ಸಿಗೆ ಪರಂಪರಾಗತವಾಗಿ ಬಂದ ತಂದೆಯ ವೃತ್ತಿಯನ್ನು ಅನುಸರಿಸಿ ಕಲಿಯುವುದು ಸಂಪ್ರದಾಯವಾಗಿದೆ. ಮುಡಿಕಟ್ಟುವುದು, ಸಾಂಪ್ರದಾಯಕ ವೇಷಭೂಷಣ ತೊಡುವುದು, ಏಕನಾದದ ಧ್ವನಿಗೆ ತಕ್ಕ ಹಾಗೆ ಆಕರ್ಷಣೀಯ ಮಾತಿನಲ್ಲಿ ಮೋಡಿ ಮಾಡುವುದು ಮುಂತಾದ ಕುಲವೃತ್ತಿಯ ಕೌಶಲ್ಯಗಳನ್ನು ತಮ್ಮ ಹಿರಿಯರಿಂದ ಅಥವಾ ತಂದೆಯರಿಂದ ಕಲಿತು ಕುಲವೃತ್ತಿಯ ವಾರಸುದಾರರು ಆಗುತ್ತಿದ್ದರು. ಆದರೆ ಇಂದು ಅವಿಭಕ್ತ ಕುಟುಂಬಗಳು ವಿಘಟನೆಗೊಂಡು, ತಂದೆಯ ಸ್ಥಾನಮಾನಗಳು ಕುಸಿಯುವ ಹಂತ ತಲುಪಿವೆ. ಕುಲವೃತ್ತಿಗಿಂತ ಕೂಲಿನಾಲಿಯೇ ಸೂಕ್ತವೆಂಬ ಅಭಿಪ್ರಾಯ ಜನಾಂಗದ ಕಿರಿಯ ಪೀಳಿಗೆಯವರಲ್ಲಿ ವ್ಯಕ್ತವಾಗುತ್ತದೆ. ಇದಕ್ಕೆ ಮೋಹಕವಾದ ಆಧುನಿಕ ಜೀವನ ಶೈಲಿಯ ಬಹುತೇಕ ಕಾರಣವೆಂದು ಹೇಳಬಹುದಾಗಿದೆ.

ಕೊಂಡಮಾಮರ ಸಮಾಜದಲ್ಲಿ ಪ್ರಾಪ್ತ ವಯಸ್ಸಿಗೆ ಬಂದ ಮಕ್ಕಳು ದುಡಿಯಬೇಕೆಂಬುದು ನಿಯಮ. ಅವರ ಸಂಪಾದನೆಯ ಹಣದಿಂದ ಸಂಸಾರವನ್ನು ನಡೆಸಬೇಕೆ ಹೊರತು ವಂಚಿಸುವುದು ಅಕ್ಷಮ್ಯ ಅಪರಾಧವೆಂದು ಹಿರಿಯರು ಹೇಳುತ್ತಾರೆ. ಒಂದು ವೇಳೆ ವಂಚನೆಯ ಆರೋಪ ರುಜುವಾದರೇ ಕುಲದ ಹಿರಿಯನ ಸಮಕ್ಷಮದಲ್ಲಿ ದಂಡ ವಿಧಿಸಲಾಗುತ್ತಿತ್ತು. ಕೆಟ್ಟ ಮಾತು ಕೆಟ್ಟ ಕೆಲಸ ಮಾಡಿದರೂ ದಂಡನೆಗೆ ಗುರಿಯಾಗುವುದಲ್ಲವೇ ಕುಲ ಬಹಿಷ್ಕಾರದಂತಹ ಉಗ್ರ ಶಿಕ್ಷೆಯನ್ನು ನಿಡಲಾಗುತ್ತಿತ್ತು. ಈ ದಂಡನೆಯ ಶಿಕ್ಷೆಯುಕೊಂಡಮಾಮರಲ್ಲಿ ಮಾತ್ರವೇ ಅಲ್ಲದೇ ಬಹುತೇಕ ಅಲೆಮಾರಿಗಳಲ್ಲಿ ಒಂದು ವಿಶಿಷ್ಟ ನಿಯಮವಾಗಿ ಅಸ್ತಿತ್ವದಲ್ಲಿತ್ತು. ಇದರಿಂದ ಪರಸ್ಪರ ವ್ಯಾಜ್ಯಗಳು ಕೋರ್ಟ ಕಛೇರಿಗಳ ಮೆಟ್ಟಲನ್ನೇರದೆ ತಮ್ಮೊಳಗೆ ಇವು ಇತ್ಯರ್ತವಾಗುತ್ತಿದ್ದವು. ತನ್ನೊಪ್ಪಿಗೆಯ ಸಂದರ್ಭದಲ್ಲಿ ದೇವರ ಮೇಲೆ ಮಾಡುವ ಪ್ರಮಾಣವು ಕೋರ್ಟಿನ ಶಿಕ್ಷೆಗಿಂತ ಮಿಗಿಲಾದುದು ಎಂಬ ನಂಬಿಕೆ ಇವರಲ್ಲಿ ಪ್ರಬಲವಾಗಿತ್ತು. ಈ ನಂಬಿಕೆ ಹಾಗೂ ಉಗ್ರ ಶಿಕ್ಷೆಯ ಕಾರಣವಾಗಿ ಅಕ್ಷಮ್ಯ ಅಪರಾಧಗಳನ್ನು ಪ್ರಜ್ಞಾಪೂರ್ವಕವಾಗಿ



ಯಾರೂ ಮಡುತ್ತಿರಲಿಲ್ಲ. ಆದರೆ ಸಮೂಹ ಜೀವನ ವ್ಯವಸ್ಥೆಯ ಸಮಯದಲ್ಲಿ ಇವು ಕಟ್ಟುನಿಟ್ಟಾಗಿ ಪಾಲನೆಯಲ್ಲಿದ್ದವು. ಕಾಲಘಟ್ಟಗಳು ಬದಲಾದಂತೆ ನಿಯಮಗಳಲ್ಲಿ ಸಡಿಲಿಕೆ ಕಂಡು ಬಂದಿತು. ಇಂತಹ ದಂಡನೆಯ ನಿಯಮಗಳು ಅಲ್ಲೊಂದಿಲ್ಲೊಂದು ಕಂಡು ಬರುವು ಇದೆ.

ಕೊಂಡಮಾಮರು ಯಾವುದೇ ಪ್ರಾದೇಶಿಕ ನೆಲದಲ್ಲಿ ವಾಸಿಸುತ್ತಿದ್ದರೂ ತಮ್ಮ ಗಂಡು ಮಕ್ಕಳಿಗೆ ಗುರು ದೀಕ್ಷೆ ಕೊಡಿಸುವ ಸಂಪ್ರದಾಯವನ್ನು ಅನುಸರಿಸುತ್ತಿದ್ದರು. ಪ್ರಾಪ್ತ ವಯಸ್ಸಿಗೆ ಬಂದ ಹುಡುಗರನ್ನು ಶ್ರೀಶೈಲದ ಮಲ್ಲಿಕಾರ್ಜುನನ ದರ್ಶನಕ್ಕೆ ಕರೆದೊಯ್ದು ಗುರು ದೀಕ್ಷೆಯನ್ನು ಕೊಡಿಸುತ್ತಿದ್ದರು. ಈ ದೀಕ್ಷೆಯನ್ನು ಪಡೆದವರು ಮಾತ್ರವೇ ಸಾಂಪ್ರದಾಯಿಕ ವೃತ್ತಿಯನ್ನು ಮಾಡಲು ಅರ್ಹರೆಂಬ ನಿಯಮವಿದೆ. ಆದರೆ ಕೆಲವು ಅನನೂಕೂಲತೆಗಳ ಕಾರಣದಿಂದ ಕುಟುಂಬ ಕಟ್ಟುಪಾಡುಗಳನ್ನು ಮೀರುವುದುಂಟು. ಕುಲವೃತ್ತಿಯ ಹಿರಿಯರಿಂದಲೇ ಇಂದು ದೀಕ್ಷೆ ಪಡೆದು ವೃತ್ತಿಯನ್ನು ಮುಂದುವರೆಸುವ ಜನರು ಇದ್ದಾರೆ. ಒಟ್ಟಾರೆ. ನೀತಿ ನಿಯಮಗಳನ್ನು ಮೀರುವ ಜನರೇ ಇಂದು ಹೆಚ್ಚಾಗ ತೊಡಗಿದ್ದಾರೆಂದರೆ ತಪ್ಪಾಗುವುದಿಲ್ಲವೆಂದು ಹಿರಿಯರು ಬೇಸರವನ್ನು ವ್ಯಕ್ತಪಡಿಸುತ್ತಾರೆ.

ಕೊಂಡಮಾಮರ ಸಾಂಸ್ಕೃತಿಕ ಬದುಕಿನಲ್ಲಿ ವೇಭೂಷನಗಳಿಗೆ ವಿಶಿಷ್ಟ ಸ್ಥಾನವಿತ್ತು. ಅವರ ಚಿಂತಾಮಣಿ ಕಟ್ಟು, (ಶಾಸ್ತ್ರಕಟ್ಟು) ರುದ್ರಾಕ್ಷಿಸರ, ವಿಭೂತಿ ಉಂಡೆಗಳು, ಏಕನಾದ, ಮುಡಿಕಟ್ಟು, ನಾಮ ವೀರಗಚ್ಚೆ, ಎದೆಗೆ ಕಾವಿ ಇಲ್ಲವೇ ಅರ್ಧ ಅಂಗಿಯ ಕುಪ್ಪಸ ತೊಟ್ಟು, ಕಪ್ಪುಬಟ್ಟೆ ಅಥವಾ ಚರ್ಮದ ನಡುಪಟ್ಟೆ, ಕೈಗಳಲ್ಲಿ ತಾಮ್ರದ ಕಡಗಗಳು, ಎತ್ತಿಕಟ್ಟಿದ ಮುಡಿ, ಅದರ ಮೇಲೆ ಯಂತ್ರಕಡಗದಿಂದ ಸಿಂಬೆ ಮಾಡಿ ತಾಮ್ರದ ಬಳೆ ತೊಡಿಸುವುದು, ಬಳೆಯಾಕಾರದ ಹುಲಿಚರ್ಮವನ್ನು ಮುಡಿಗೆ ಕಟ್ಟಿಕೊಂಡು ನವಿಲುಗರಿ- ಹಕ್ಕಿಪುಕ್ಕಗಳನ್ನು ಸಿಕ್ಕಿಸಿಕೊಳ್ಳುವುದು,

ಹಣೆಗೆ ಬಿಳಿ ನಾಮ, ಕುತ್ತಿಗೆಗೆ ಬೆಳ್ಳಿಕಟ್ಟಿನ ಹುಲಿ ಉಗುರಿನ ತಾಯತ ಕಟ್ಟಿಕೊಳ್ಳುವುದು, ಕೊಂಡಿ ಕಟ್ಟಿರುವ ಬೆಳ್ಳಿ ಹಾಗೂ ತಾಮ್ರ ನಾಣ್ಯಗಳನ್ನು ಸರವಾಗಿ ಧರಿಸುವುದು, ಬಿದಿರುದಟ್ಟೆಗೆ ಕೌದಿಚೀಲ ನೇತು ಹಾಕಿಕೊಂಡು, ಕೈಯಲ್ಲಿ ಏಕನಾದ ಮತ್ತೊಂದು ಕೈಯಲ್ಲಿ ಚಿಂತಾಮಣಿ ಕಟ್ಟು ಹಿಡಿದುಕೊಳ್ಳುವುದು, ಕಿವಿಯಲ್ಲಿ ಚಂದ್ರಾಕಾರದ'ಚಂದ್ರಮುಡಿ'ಗಳು ಇರುತ್ತಿದ್ದವು.ಆದರೆ ಹಿಂದೆ ಚಂದ್ರಮುಡಿಯ ಬದಲಿಗೆ ಬಾಣ ಭತ್ತಳಿಕೆಗಳು ಧರಿಸುತ್ತಿದುದುಂಟು . ಹೀಗೆ ಪ್ರತಿ ವಸ್ತುವೂ ಸಾಂಸ್ಕೃತಿಕ ಅನನ್ಯತೆಯನ್ನು ಸೂಚಿಸುವ ಸಂಕೇತಗಳಾಗಿದ್ದವು. ಕೊಂಡಮಾಮರು ವರ್ಷಕ್ಕೊಂದಾವರ್ತಿ ಶ್ರೀಶೈಲನ ಸನ್ನಿಧಿಗೆ ತೆರಳಿ, ಗುರುಕಾಣಿಕೆಯನ್ನು ಸಮರ್ಪಿಸುವ ಸಂಪ್ರದಾಯವಿತ್ತು. ಕುಲ ನಿಯಮದ ಪ್ರಕಾರ ಗಡ್ಡಮೀಸೆ ಹಾಗೂ ತಲೆಗೂದಲನ್ನು ಬೋಳಿಸುವಂತಿಲ್ಲ. ಒಂದು ವೇಳೆ ನಿಯಮ ಮೀರಿದರೆ ದಂಡನೆಗೆ ಗುರಿಯಾಗುತ್ತಿದ್ದರು. ಆದರೆ ಆಧುನಿಕ ಸಂಸ್ಕೃತಿಯ ಅಬ್ಬರದಲ್ಲಿ ಸಾಂಪ್ರದಾಯಿಕ ಬದುಕಿನ ನಿಯಮಗಳು ಬೆಲೆ ಕಳೆದುಕೊಳ್ಳ ತೊಡಗಿವೆ. ಹೊಟ್ಟೆಯೇ ಖಾಲಿಯಾಗಿರುವಾಗ ದೇವರಿಗೆ



ಕಾಣಿಕೆಯನ್ನು ಸಲ್ಲಿಸುವ ಗೋಜಿಗೆ ಹೋಗದ ಅನೇಕ ಕುಟುಂಬಗಳನ್ನು ಇಂದು ನಾವು ಕಾಣಬಹುದಾಗಿದೆ.

ಕೊಂಡಮಾಮರ ಜೀವನಾವರ್ತನ ನಂಬಿಕೆಗಳು ಸಂಕರ ಸ್ಥಿತಿಯಲ್ಲಿವೆ. ಗರ್ಭಿಣಿ ಬಸುರಿನೊಳಗಿನ ಕಂದನ ಆಸೆಗಳನ್ನು ತೀರಿಸುವ ಬಯಕೆಯ ಆಚರಣೆಯು ಬದಲಾಗಿ ಸೀಮಂತದಂತಹ ಪ್ಯಾಶನ್ ಆಚರಣೆಗಳು ಜಾಗ ಮಾಡಿಕೊಂಡಿವೆ. ಪ್ರಸವ ಕಾರ್ಯವನ್ನು ನಿರ್ವಹಿಸುತ್ತಿದ್ದ 'ಮಂತ್ರಸಾನಿ (ಸೂಲಗಿತ್ತಿ) ಯ ಕೆಲಸಕ್ಕೆ ವಿರಾಮ ನೀಡಲಾಗಿದೆ. ಏಕೆಂದರೆ ಅನಕ್ಷರರಾದ ಇವರು ಆಧುನಿಕ ಆಸ್ಪತ್ರೆಗಳ ಮುಖ ನೋಡಿದವರಲ್ಲ. ಆದರೆ ಕೆಲವರ್ಷಗಳಲ್ಲಿ ಕಾಡಿದ ಮಾರಣಾಂತಿಕ ಕಾಯಿಲೆಗಳು ಆರೋಗ್ಯ ಶಿಕ್ಷಣ ಪದ್ಧತಿಗಳು, ಅವರನ್ನು ಆಧುನಿಕ ಚಿಕಿತ್ಸೆಗೆ ಅವರನ್ನು ಪ್ರೇರೆಪಿಸಿದವು. ಬಾಣಂತಿಯ ಆರೈಕೆಗೆ ಬಳಸುತ್ತಿದ್ದ ವಾಂಪುಡಿ, ಪಿಪ್ಪಿಳ್ಳು (ಕರಿಮೆಣಸು), ಕಸ್ತೂರಿ ಮಾತ್ರೆ, ಬಜೆ, ಕಾಯಿ, ನಾಮಕೊಡಿ, ಪರಂಗಿಚೆಕ್ಕೆಯಂತಹ ಮನೆಮದ್ದುಗಳು ಆಧುನಿಕ ಔಷಧಿಗಳ ಕಾರಣದಿಂದ ದೂರ ಸರಿದವು. ಆದರೆ ಸಂಪ್ರದಾಯಕ್ಕಾದರೂ ಬಳಸಬೇಕೆಂದು ಕೆಲವು ಕುಟುಂಬಗಳು ಇವುಗಳನ್ನು ತಂದು ಬಳಸುತ್ತಾರೆ.

ಈ ಜನಾಂಗದ ವಿವಾಹ ಆಚರಣೆಗಳಿಗೆ ಒಂದು ವೈಸಿಷ್ಟ್ಯತೆಯಿದೆ. ಕುಟುಂಬದ ಯಜಮಾನಾದಿಯಾಗಿ ಕುಲಪೆದ್ದನ ಸಮ್ಮುಖದಲ್ಲಿ ಕನ್ಯಾ ನಿಶ್ಚಿತಾರ್ಥ ನೆರವೇರುತ್ತಿತ್ತು. ಯಾವುದೇ ಪುರೋಹಿತನ ಮುಂದಾಳತ್ವ ಇವರ ಮದುವೆಗಳಿಲ್ಲಲ್ಲ. ಕುಲದ ಹಿರಿಯನೇ ಈ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಆದರೆ ಪ್ರಸ್ತುತ ಜಾತಕ, ನಕ್ಷತ್ರಫಲ ಹಾಗೂ ಮಹೂರ್ತ ನಿರ್ಣಯ ಕಾರ್ಯಗಳಿಗೆ ಪುರೋಹಿತರನ್ನು ಆಶ್ರಯಿಸ ತೊಡಗಿದ್ದಾರೆ. ಶುಭಾಶಯ ಕಾರ್ಯಗಳಿಂದ ಕುಲದ ನಿಯಮಗಳನ್ನು ಮೀರಿ ದಂಡನೆಗೊಳಪಟ್ಟವರನ್ನು ದೂರವಿಡುವ ನಿಯಮವು ಇಂದು

ಸಡಿಲಗೊಳ್ಳತೊಡಗಿದೆ. ಇವರಲ್ಲಿ ಒಂದು ಕಾಲದಲ್ಲಿ ಜಾರಿಯಲ್ಲಿದ್ದ 'ಕೂಡಿಕೆ ಪದ್ಧತಿ' ಇಂದಿಗೂ ಜಾರಿಯಲ್ಲಿದೆ. ಗಂಡಸರ ಮರುಮದುವೆಗೆ ಅವಕಾಶವಿದೆ. ಆದರೆ ಮೊದಲ ಹೆಂಡತಿ ತೀರಿಕೊಂಡಿದ್ದರೇ ಮಾತ್ರವೇ ಎಂಬ ನಿಯಮವಿದೆ. ಇವರಲ್ಲಿ ಯವುದೇ ಕಾರಣಕ್ಕೂ ವಿವಾಹ ವಿಚ್ಛೇಧನದಂತಹ ಕಾರ್ಯಕ್ಕೆ ಆಸ್ಪದವಿಲ್ಲ. ಇಂತಹ ವಿಚಾರಗಳು ಜಟಿಲವಾದಾಗ ಕುಲಪಂಚಾಯತಿ ಮಾಡಿ ಪರಿಹರಿಸಿಕೊಳ್ಳುವ ವಿಶಿಷ್ಟ ಸಂಪ್ರದಾಯ ಇಂದಿಗೂ ಚಲ್ತಿಯಲ್ಲಿದೆ.

ಹಿಂದೆ ಪ್ರತಿ ಮನೆ ಮನೆಗೂ ಬಂದು ಭಿಕ್ಷೆ ಬೇಡುವುದರ ಜೊತೆಗೆ ಶಾಸ್ತ್ರವನ್ನು ಹೇಳುತ್ತಿದ್ದರು. ಮಕ್ಕಳಿಗೆ ಬಾಲಗ್ರಹ, ನೆಲಗ್ರಹ, ಭೀತಿ, ಹಲ್ಲು ಕಡಿಯುವಿಕೆ-ಮುಂತಾದ ಮಕ್ಕಳ ಕಾಯಿಲೆಗಳಿಗೆ, ಗರ್ಭಚವಿ, ಗರ್ಭಸುಲಿ, ಕಿವಿ ಸೋರುವುದು, ದೃಷ್ಟಿದೊಷ, ವಾಂತಿ ಮುಂತಾದ ಹಿರಿಯರ ಕಾಯಿಲೆಗಳಿಗೆ ನಾಟಿ ಔಷಧವನ್ನು ಮಾಡಿಕೊಡುತ್ತಿದ್ದರು. ಆದರೆ ಆಧುನಿಕ ಔಷಧಿಯ ಕಾರಣದಿಂದ ನಾಟಿ ಮನೆಮದ್ದುಗಳು ಬೆಲೆ ಕಳೆದುಕೊಳ್ಳತೊಡಗಿವೆ.



ಹೀಗೆ ಭವ್ಯ ಸಾಂಸ್ಕೃತಿಕ ಬದುಕನ್ನು ನಡೆಸಿದ, ಸಂತೆ ಪಟ್ಟಣಗಳಲ್ಲಿ ಹೇರಳವಾಗಿ ಶಾಸ್ತ್ರ ಹೇಳುತ್ತಿದ್ದ ಕೊಂಡಮಾಮರು ಇಂದು ಅಪರೂಪವಾಗುತ್ತದ್ದಾರೆ. ಅವರು ತಮ್ಮ ಸಾಂಪ್ರದಾಯಿಕ ಉಡುಪನ್ನು ಧರಿಸಲು ಹಿಂಜರಿಯುತ್ತಿದ್ದಾರೆ. ಧರಿಸಿದರೂ ಮನೆಯಂಗಳಕ್ಕೆ ಬಂದು ಬೇಡಿದಾಗ, ಭಿಕ್ಷೆ ನೀಡುವ ತಾಯಂದಿರ ಸಂಖ್ಯೆ ಕಡಿಮೆಯಾಗಿದೆ. ಆಧುನಿಕ ಜ್ಯೋತಿಷ್ಯಾಲಯಗಳು ಇವರ ಬದುಕಿಗೆ ಬರೆ ಎಳೆದಿದೆ. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಇವರ ಬದುಕಿಗೆ ಆಸರೆ ನೀಡುತ್ತಿಲ್ಲ. ಇವರ ಕಲಾವಂತಿಕೆಗೆ ಸೂಕ್ತ ಮನ್ನಣೆಯಿಲ್ಲದೆ, ವೃತ್ತಿ ಬದುಕನ್ನು ತೊರೆದು ಜೀವನ ನಿರ್ವಹಣೆಗಾಗಿ ಅನ್ಯಕೆಲಸಗಳನ್ನು ಹುಡುಕುತ್ತಾ ಪಟ್ಟಣದ ಕಡೆಗೆ ವಲಸೆ ಹೋಗುತ್ತಿದ್ದಾರೆ. ಇಂತಹ ಸಾಂಸ್ಕೃತಿಕ ಕಲಾಸಂಪದವನ್ನು ಮುಂದಿನ ಪೀಳಿಗೆಗೆ ಸಂರಕ್ಷಣೆ ಮಾಡಬೇಕಾದ ಅನಿವಾರ್ಯತೆ ಇಂದು ಅಧಿಕವಾಗಿದೆ. ಆಧುನಿಕತೆಯ ಪ್ರವಾಹದಲ್ಲಿ ದೇಸಿಕಲೆಗಳು ಕೊಚ್ಚಿ ಹೋಗುವ ಮುನ್ನ ಅವುಗಳನ್ನು ರಕ್ಷಿಸಿ, ಪೋಷಿಸುವ ಜವಾಬ್ದಾರಿ ಪ್ರತಿಯೊಬ್ಬರದಾಗಬೇಕಾಗಿದೆ.

**ಪರಾಮರ್ಶನಾ ಕೃತಿಗಳು:**


೧. ಸಂ: ಡಾ.ಚಂದ್ರಶೇಖರ ಕಂಬಾರ-ಕರ್ನಾಟಕ ಜಾನಪದ ವಿಶ್ವಕೋಶ ಸಂ.೧.೨ ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು

9. ಸಂ: ಹಾ.ಮಾ.ನಾಯಕ-ಕನ್ನಡ ವಿಶ್ವಕೋಶ, ಮೈಸೂರು ವಿಶ್ವವಿದ್ಯಾಲಯ

೩. ಹೆಚ್. ಜೆ. ಲಕ್ಕಪ್ಪಗೌಡ-ಕನ್ನಡ ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ

೪. ಶ್ರೀಕಂಠ ಕೊಡಿಗೆ ಕೊಡಮಾಮ, ಐಬಿಎಚ್ ಪ್ರಕಾಶನ

೫. ಚಿತ್ತರಂಜನ್-ಕೋಲಾರ ಜಿಲ್ಲಾ ಗಯಾಸೆಟಿಯರ್

೬. ನಿಗಣ್ಣ ಸಣ್ಣಕ್ಕಿ-ಜಾನಪದ ವೈಭವ

೭. ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ವಕ್ತಗಳು:

೮. ನಾರಾಯಣಪ್ಪ ೮೫ವರ್ಷ ಕೊಂಡಮಾಮ ಕೋಲಾರ.


************

## ೧೫. ಮುತ್ತು ಕಟ್ಟಿಸಿಕೊಂಡವರ ತುತ್ತು ಕೂಳನ ಕಥೆ

**- ಮಂಜುಶ್ರೀ ಕಡಕೋಳ**

ಎಂದಿನಂತೆಯೇ ಕೂಲಿಗೆ ಹೊರಟಿದ್ದ ದುರ್ಗವ್ವನಿಗೆ ಅವತ್ತು ತನ್ನ ಮೇಲೆ ಅಂಥ ಘಟನೆ ನಡೆಯುತ್ತೆ ಅಂತ ನಿರೀಕ್ಷೆ ಕೂಡಾ ಮಾಡೋಕೆ ಆಗಿರಲಿಲ್ಲ. ತನ್ನ ಪಾಡಿಗೆ ತಾನು ಕೂಲಿ ಕೆಲಸ ಮುಗಿಸಿ ಮುಸ್ಸಂಜೆ ಹೊತ್ತಲ್ಲಿ ಮನೆಗೆ ವಾಪಸ್ ಬರುತ್ತಿರುವಾಗ ಅದೆಲ್ಲಿ ಅವಿತಿದ್ದನೋ ಅವನು ಏಕಾಏಕಿ ಅವಳ ಮೇಲೆ ದಾಳಿ ಮಾಡಿಬಿಟ್ಟ. ತನ್ನ ಮೇಲೆ ಏನಾಗುತ್ತಿದೆ ಎಂದು ತಿಳಿದುಕೊಳ್ಳುವ ಮುನ್ನವೇ ಅವಳ ಮೇಲೆ ಅತ್ಯಾಚಾರ ನಡೆದುಹೋಗಿತ್ತು. ಇದು ಇತ್ತೀಚೆಗಷ್ಟೇ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಳಜರ ಹರೆಯದ ದೇವದಾಸಿ ದುರ್ಗವ್ವ (ಹೆಸರು ಬದಲಿಸಲಾಗಿದೆ) ಮೇಲೆ ನಡೆದ ಅತ್ಯಾಚಾರ ಪ್ರಕರಣ. ತನ್ನವ್ವ ಎಂದೋ ಮುತ್ತು ಕಟ್ಟಿಸಿದ್ದ ತಪ್ಪಿಗೆ ದುರ್ಗವ್ವ ಇಂದಿಗೂ ನೋವು ಅನುಭವಿಸುತ್ತಿರುವ ಪರಿ ಇದು. ಹೊಟ್ಟೆಪಾಡಿಗೆ ಅಡ್ಡ ಹಾದಿ ಹಿಡಿಯದೇ ಮರ್ಯಾದೆಯಿಂದ ಕೂಲಿ ಮಾಡ್ಕೊಂಡು ಬದುಕಿನ ತುತ್ತು ತುಂಬಿಸಿಕೊಳ್ಳಲು ಹೊರಟಿದ್ದ ದುರ್ಗವ್ವಳ ಜಾತಿ ಮತ್ತು ಹೆಣ್ಣನವೇ ಮೇಲ್ಜಾತಿಯ ಅವನಿಗೆ ಸದರ ಕೊಟ್ಟಿತ್ತು. ಮೇಲಾಗಿ ದೇವದಾಸಿ ಬೇರೆ ಏನು ಮಾಡಿಯಾಳು ಎಂಬ ಅಹಂನಿಂದಲೇ ಅವನು ಮೇಲೆ ಪಶುವಿನಂತೆ ಎರಗಿದ್ದ.

ಶತಮಾನಗಳಿಂದ ನಮ್ಮ ನಡುವೆ ಬೇರುಬಿಟ್ಟಿರುವ ದೇವದಾಸಿ ಪದ್ಧತಿಯ ಅನಿಷ್ಟ ಮುಖವಿದು. ದುರ್ಗವ್ವನಂಥ ಎಷ್ಟೋ ದಲಿತ ಮಹಿಳೆಯರ ಮೌನ ಬಿಕ್ಕಳಿಕೆಗಳು, ಕಣ್ಣೀರ ಕಥೆಗಳು ಜಗತ್ತಿನ ಕಣ್ಣಿಗೆ ಕಾಣದೆ ಹಾಗೇ ನೇಪಥ್ಯದಲ್ಲೇ ಉಳಿದುಬಿಡುತ್ತವೆ. ದೇವದಾಸಿ, ದಲಿತಗಳು ಎಂಬ ಕಾರಣಕ್ಕಾಗಿಯೇ ಇವೆಲ್ಲವನ್ನೂ ಸಹಿಸಬೇಕಿರುವ ಆ ಮಹಿಳೆಯರ ನೋವಿನ ಜಗತ್ತು. ನಾಗರಿಕ ಜಗತ್ತಿನ ಅರಿವಿಗೇ ಬರುವುದಿಲ್ಲ. ಮತ್ತೊಂದು ತಿಂಗಳ ಹೊತ್ತಿಗೆ ದುರ್ಗವ್ವನಂಥ ಮತ್ತೊಬ್ಬ ಮಹಿಳೆಯ ಮೇಲೆ ಇದೇ ಪ್ರಕರಣ ಮರುಕಳಿಸುತ್ತದೆ. ಎಂದಿನಂತೆ ಸರ್ಕಾರ, ಕಾನೂನು ಕಣ್ಮುಚ್ಚಿ ಕುಳಿತಿರುತ್ತದೆ. ಹೌದು ಇದು ಮುತ್ತು ಕಟ್ಟಿಸಿಕೊಂಡವರ ತುತ್ತು ಬದುಕಿನ ವ್ಯಥೆಯ ಕಥೆ.

ದಲಿತಳು ಎಂಬ ಕಾರಣಕ್ಕಾಗಿಯೇ ನಿತ್ಯವೂ ಈ ಅನಿಷ್ಟ ಪದ್ಧತಿಗೆ ಬಲಿ ಮಾಡುತ್ತಿರುವ ವ್ಯವಸ್ಥೆಯ ಹಿಂದೆ ಪುರೋಹಿತಶಾಹಿ ವರ್ಗದ ಹುನ್ನಾರವಿದೆ. ಹಿಂದೆ ದೇವಸ್ಥಾನಗಳಲ್ಲಿ ದೇಔರ ಸೇವೆಗೆಂದು ನೇಮಿಸಲ್ಪಡುತ್ತದ್ದ ದೇವದಾಸಿಯರು ಕಾಲಾನಂತರ ದೇವರಷ್ಟೇ ಅಲ್ಲ, ಅಲ್ಲಿನ ಪೂಜರಿ, ಊರಿನ ಮುಖಂಡ, ಗೌಡರ ಕಾಮಲಾಲಸೆಗೂ

ಬಳಕೆಯಾಗತೊಡಗಿದರು. ಜಮೀನ್ದಾರಿ-ಊಳಿಗಮಾನ್ಯ ಪದ್ಧತಿಯಲ್ಲಿ ಪುರುಷ ಎಷ್ಟಾದರೂ ಮದುವೆಯಾಗಬಹುದು. ಕೆಳಜಾತಿಯ ಮಹಿಳೆಯರನ್ನೂ ತನ್ನ ಕಾಮಲಾಲಸೆಗೆ ಬಳಸಬಹುದು ಎಂಬ ನಂಬಿಕೆಯೇ ಈ ಪದ್ಧತಿ ಜೀವಂತವಾಗಿರಲು ಕಾರಣ. ಇಂದಿಗೂ ನಮ್ಮ ಹಳ್ಳಿಗಳಲ್ಲಿ ಈ ಪದ್ಧತಿ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ ಎಂಬುದಕ್ಕೆ ಈಚೆಗೆ ಮಾಧ್ಯಮಗಳಲ್ಲಿ ವರದಿಯಾದ ಕೊಪ್ಪಳ ಜಿಲ್ಲೆಯ ಹಿರೇಸಿಂದೋಗಿ ಪ್ರಕರಣವೇ ಸಾಕ್ಷಿ. ಇಲ್ಲಿನ ಸುಪ್ರಸಿದ್ಧ ಮಠವೊಂದರ ಸೇವೆಗೆ ಮೀಸಲಾಗಿರುವ ಸುಮಾರು ೮೦ ಕುಟುಂಬಗಳ ಎಲ್ಲಾ ಹೆಣ್ಣುಮಕ್ಕಳು ಇಲ್ಲಿ ದೇವದಾಸಿಯಾಗಿದ್ದಾರೆ. ಅಷ್ಟೇ ಅಲ್ಲ, ಪ್ರತೀ ಶಿವರಾತ್ರಿ, ಯುಗಾದಿ ಹಾಗೂ ಊರ ಜಾತ್ರೆಯ ಸಂದರ್ಭಗಳಲ್ಲಿ ಆ ಊರಿನ ಪೂಜಾರಿಯೇ ಮುತ್ತು ಕಟ್ಟುತ್ತಾನೆ!. ಇವೆಲ್ಲವನ್ನೂ ಆ ದೇವದಾಸಿ ಮಹಿಳೆಯರು ಎಗ್ಗಿಲ್ಲದೇ ಹೇಳಿಕೊಳ್ಳುತ್ತಾರೆ. ತಮ್ಮ ಬದುಕು ಇರುವುದೇ ಹೀಗೆ, ತಮ್ಮ ಮನೆಯಲ್ಲಿ ಹುಟ್ಟುವ ಪ್ರತೀ ಹೆಣ್ಣೂ ದೇವರಿಗೆ ಮೀಸಲು ಎಂಬ ಮೂಢನಂಬಿಕೆ ಅವರಲ್ಲಿ ಆಳವಾಗಿ ಬೇರೂರಿದೆ. ಅಷ್ಟೇ ಅಲ್ಲ, ೨೧ನೇ ಶತಮಾನದ ಈ ವೈಜ್ಞಾನಿಕ ಯುಗದಲ್ಲೂ 'ಈ ಪದ್ಧತಿ ತಪ್ಪಿದ್ದಲ್ಲಿ ತಮ್ಮ ಕುಟುಂಬಕ್ಕೆ ಒಳ್ಳೆಯದಾಗದು, ದೇವರ ಶಾಪ ತಟ್ಟತ್ತೆ' ಎಂದು ನಂಬಿಯೇ ಆ ದಲಿತ ಮಹಿಳೆಯರು ಜೀವನ ಸಾಗಿಸುತ್ತಿರುವುದು ಸಾಮಾಜಿಕ ವ್ಯವಸ್ಥೆಯ ಕ್ರೂರ ವ್ಯಂಗ್ಯ

ಕರ್ನಾಟಕದ ಗುಲ್ಬರ್ಗ, ಬೀದರ್, ಬಾಗಲಕೋಟೆ, ವಿಜಾಪುರ, ಕೊಪ್ಪಳ, ರಾಯಚೂರು, ಗದಗ, ಹಾವೇರಿ, ಧಾರವಾಡ, ಬೆಳಗಾವಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಯಾದಗಿರಿ ಜಿಲ್ಲೆಗಳಲ್ಲಿ ಇಂದಿಗೂ ದೇವದಾಸಿಯರಿದ್ದಾರೆ. ಎಂಬುದನ್ನು ಖುದ್ದು ಸರ್ಕಾರವೇ ಸಮೀಕ್ಷೆ ಮಾಡಿ ವರದಿ ನೀಡಿದೆ. ಈ ೧೪ ಜಿಲ್ಲೆಗಳಲ್ಲೂ ಇಂದಿಗೂ ಪ್ರತಿ ಭರತ ಹುಣ್ಣಿಮೆ, ಯುಗಾದಿ ಮತ್ತಿತ್ತರರ ಸಂದರ್ಭಗಳಲ್ಲಿ ನೂರಾರು ದಲಿತ ಮಹಿಳೆಯರು ಮುತ್ತು ಕಟ್ಟಿಸಿಕೊಂಡು ಅಧಿಕೃತವಾಗಿ ದೇವದಾಸಿಯರಾಗಿ ಮಾರ್ಪಾಡುತ್ತಾರೆ. ಈಗಾಗಲೇ ಮುತ್ತು ಕಟ್ಟಿಸಿಕೊಂಡು ದೇವದಾಸಿಯರಾಗಿರುವವರು ತಮ್ಮ ನಿತ್ಯ ಮುತ್ತೈದೆತನವನ್ನು ನವೀಕರಣಗೊಳಿಸಿಕೊಳ್ಳುತ್ತಾರೆ.

ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗದಲ್ಲಿ ಪ್ರತಿ ವರ್ಷ ಭರತ ಹುಣ್ಣಿಮೆ ಸಂದರ್ಭದಲ್ಲಿ ರಾಜ್ಯದ ವಿವಿಧೆಡೆಯಿಂದ ಬರುವ ಸಾವಿರಾರು ದೇವಾದಾಸಿಯರು ತಾವು ತೊಟ್ಟಿರುವ ಹಳೆಯ ಹಸಿರು ಬಳೆಗಳನ್ನು ತೆಗೆದು ಹೊಸ ಹಸಿರು ಬಳೆ ತೊಟ್ಟುಕೊಳ್ಳುವ ಮೂಲಕ, ಉಚ್ಚಂಗೆಮ್ಮ ದೇವಿಗೆ ಹರಕೆ ತೀರಿಸುವ ಮೂಲಕ ತಮ್ಮ ದೇವದಾಸಿತನವನ್ನು ನವೀಕರಣಗೊಳಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಇದೇ ಸಂದರ್ಭದಲ್ಲಿ ಗುಟ್ಟಾಗಿ ದೇವಸ್ಥಾನದ ಆವರಣದಲ್ಲೇ ದಲಿತ ಹೆಣ್ಣುಮಕ್ಕಳಿಗೆ ಮುತ್ತು ಕಟ್ಟಿಸಲಾಗುತ್ತದೆ. ಇಂದಿಗೂ ಭರತ ಹುಣ್ಣಿಮೆ ಸಂದರ್ಭದಲ್ಲಿ ದೇವಸ್ಥಾನದ ಆವರಣದಲ್ಲಿ ಮುತ್ತು ಕಟ್ಟಲು ಬಳಸಲಾಗುವ ಕೆಂಪು ಮತ್ತು ಬಿಳಿ ಬಣ್ಣದ ಮುತ್ತುಗಳನ್ನು ಮಾರಾಟ ಮಾಡಲಾಗುತ್ತದೆ.

ಬೆಳಗಾವಿ ಜಿಲ್ಲೆಯ ಸವದತ್ತಿ, ಕೊಕಟನೂರು, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ, ದಾವಣಗೆರೆ ಜಿಲ್ಲೆಯ ಉಚ್ಚಂಗಿದುರ್ಗ, ಬಳ್ಳಾರಿ ಜಿಲ್ಲೆಯ ಹುಲಿಗೆ ಗ್ರಾಮ ದೇವದಾಸಿಯರನ್ನು ಸೃಷ್ಟಿಸುವ ಕೇಂದ್ರಗಳಾಗಿವೆ. ಯಲ್ಲಮ್ಮ ದೇವಿ, ಹುಲಿಗೆಮ್ಮದೇವಿ, ಉಚ್ಚಂಗೆಮ್ಮದೇವಿ ಸೇರಿದಂತೆ ಸಾಮಾನ್ಯವಾಗಿ ಹೆಣ್ಣು ದೇವತೆಗಳಿಗೆ ದಲಿತ ಮಹಿಳೆಯರನ್ನು ಮೀಸಲು ಬಿಡಲಾಗುತ್ತದೆ. ಮತ್ತೆ ಕೆಲವೆಡೆ ಮಾರುತಿ ದೇವರಿಗೂ ಮೀಸಲು ಬಿಡುವ ಪದ್ಧತಿ ಇದೆ. ಕರ್ನಾಟಕವಷ್ಟೇ ಅಲ್ಲ ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ, ತಮಿಳುನಾಡು, ರಾಜಸ್ಥಾನಗಳಲ್ಲೂ ಈ ಅನಿಷ್ಟ ಪದ್ಧತಿಯನ್ನು ಕಾಣಬಹುದು. ರಾಜ್ಯದಲ್ಲಿ ದೇವರಿಗೆ ಮೀಸಲು ಇಲ್ಲವೇ ಹರಕೆ ಬಿಡುವ ಮಹಿಳೆಯರನ್ನು ದೇವದಾಸಿಯರೆಂದು ಕರೆದರೆ, ಇತರ ರಾಜ್ಯಗಳಲ್ಲಿ ಇವರನ್ನು ಜೋಗಿಣಿ, ಜೋಗತಿ, ದ್ಯಾಮವ್ವ, ಕಲಾವಂತಿ, ಧಾರೇಶ್ವರ, ಬಸವಿ, ಮಾಯವ್ವ, ದುರ್ಗವ್ವ, ಮಾತಂಗಿ, ಮಾರುತಿ ಶರಣೆ, ಅಂಬಾಬಾಯಿ, ತಳನಾಥ ಭಾವಿಣಿ, ಭೂತನಾಥ ನಾಯಿಕೆ, ಮಹಾಬಲೇಶ್ವರ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಹೊಲೆಯರು, ಮಾದಿಗರು, ತಳವಾರ, ಕಬ್ಬಲಿಗ, ನಾಯಕ, ಬೇಡ, ದಾಸ, ಕುರುಬ, ಭಂಡಾರಿ, ಕುಣಬಿ ಜಾತಿಯವರಲ್ಲಿ ಮಾತ್ರ ಈ ಪದ್ಧತಿಯನ್ನು ಪಾಲಿಸಲಾಗುತ್ತಿದೆ. ಒಟ್ಟಾರೆ ದೇವದಾಸಿಯರ ಇತಿಹಾಸವನ್ನು ಗಮನಿಸಿದಾಗ ಶೇಕಡಾ ೯೯ರಷ್ಟು ದಲಿತ, ಹಿಂದುಳಿದ ಜಾತಿಯ ಮಹಿಳೆಯರು ಮತ್ತು ಶೇಕಡಾ ೧ರಷ್ಟು ಮಾತ್ರ ಮೇಲ್ಜಾತಿಯ ಮಹಿಳೆಯರು ಈ ಪದ್ಧತಿ ಒಳಗಾಗಿರುವುದನ್ನು ಗುರುತಿಸಬಹುದು.

ದೇವದಾಸಿ ಪದ್ಧತಿಯ ಜೀವಂತಿಕೆಗೆ ಜಾತಿಯ ಕೊಡುಗೆ ಅಪಾರ, ಮೇಲ್ಜಾತಿಯ ಜನರು ಎಲ್ಲಾ ವಿಷಯದಲ್ಲಿ ದಲಿತರನ್ನು ಅಸ್ಪೃಶ್ಯರನ್ನಾಗಿ ಪರಿಗಣಿಸಿದ್ದಾರೆ. ಆದರೆ, ತಮ್ಮ ವೈಯಕ್ತಿಕ ಹಿತಾಸಕ್ತಿ ಮತ್ತು ಲಾಭದ ಸಂದರ್ಭಗಳಲ್ಲಿ ಮಾತ್ರ ದೇವರು, ಧರ್ಮದ ಹೆಸರಿನಲ್ಲಿ ದಲಿತರನ್ನು ವಿಶೇಷವಾಗಿ ದಲಿತ ಮಹಿಳೆಯರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ. ಅದಕ್ಕೆ ಸಾಕ್ಷಿಯಾಗಿ ದೇವದಾಸಿ ಪದ್ಧತಿ ಇದೆ. 'ಗ್ರಾಮದ ಒಳಿತಿಗಾಗಿ' ಎನ್ನುವ ಮೂಢನಂಬಿಕೆಯಲ್ಲಿ ದಲಿತ ಮಹಿಳೆಯರನ್ನು ದೇವಸ್ಥಾನದ ಪೂಜಾರಿಗಳೇ ಮುತ್ತು ಕಟ್ಟುವ ಮೂಲಕ ದೇವದಾಸಿ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಈ ಮೌಢ್ಯದ ಹಿಂದೆ ವೈದಿಕ ವ್ಯವಸ್ಥೆಯ ಹುನ್ನಾರವಿದೆ. ಪೂಜಾರಿ ವರ್ಗ ಸದಾ ದೇವರ ಪೂಜಾ ಕಾರ್ಯಗಳನ್ನು ಕೈಗೊಳ್ಳುವುದರಿಂದ ಹಾಗೂ ದೇವರ ಸಮೀಪದಲ್ಲೇ ಇರುತ್ತಾನೆ ಎಂಬ ನಂಬಿಕೆ ದಲಿತರಲ್ಲಿ ಮನೆಮಾಡಿರುವುದರಿಂದ ಆತ ಏನು ಹೇಳಿದರೂ ಅದು ದೇವರಿಂದ ಬಂದ ಆಜ್ಞೆ ಎಂಬಂತೆ ನಡೆದುಕೊಳ್ಳುತ್ತಾರೆ. ಮೈಮೇಲೆ ದೇವರು ಬರುವುದು, ತಲೆಯಲ್ಲಿ ಜಡೆ ಕಾಣಿಸಿಕೊಳ್ಳುವುದು ದೇವಿಗೆ ದಲಿತ ಮಹಿಳೆಯರನ್ನು ಮೀಸಲು ಬಿಡುವ ಲಕ್ಷಣಗಳೆಂದೇ ಶತಮಾನಗಳಿಂದ ದಲಿತರಲ್ಲಿ ಆಳವಾದ ಭಾವನೆ ಬೇರೂರಿದೆ. ಮೊದಲೇ ಶಿಕ್ಷಣದಿಂದ ವಂಚಿತರಾಗಿರುವ ದಲಿರ ಸಮುದಾಯ ಸಮುದಾಯ ಸಮಾಜದ ಮುಖ್ಯವಾಹಿನಿಯಲ್ಲೂ ಸ್ಥಾನ ಪಡೆಯುವಲ್ಲಿ

ವಿಫಲವಾಗಿದೆ. ಬಡತನ, ಅನಕ್ಷರತೆ, ತಿಳುವಳಿಕೆ, ವೈಜ್ಞಾನಿಕ ಮನೋಭಾವದ ಕೊರತೆಯಿಂದ ಬಳಲುತ್ತಿರುವ ಈ ಸಮುದಾಯ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ದೇವದಾಸಿ ಪದ್ಧತಿಗೆ ಬಲಿಯಾಗುತ್ತಲೇ ಬಂದಿದೆ.

ಆರಂಭದಲ್ಲಿ ದೇವರ ಸೇವೆಗೆಂದು ಮೀಸಲಾಗಿರುವ ದೇವದಾಸಿಯರು, ಕಾಲಾನಂತರ ಊರಿನ ಗೌಡ, ಪಟೇಲ ಇಲ್ಲವೇ ಮುಖಂಡರ ವೈಯಕ್ತಿಕ ಲಾಲಸೆಗೆ ಬಲಿಯಾಗುತ್ತಾರೆ. ಯೌವನವಿದ್ದಾಗ ದೇವದಾಸಿಯರನ್ನು ಅನುಭವಿಸುವ ಈ ವರ್ಗಗಳು ಅವಳಿಗೆ ವಯಸ್ಸಾಗುತ್ತಿದ್ದಂತೆ ಮತ್ತೊಬ್ಬಳು ದೇವದಾಸಿಯನ್ನು ಬಲಿ ಪಡೆಯಲು ಸಿದ್ಧವಾಗುತ್ತವೆ. ಯೌವನ ಮಾಸುವ ವೇಳೆಗೆ ಸಂತಾನ ಪಡೆದಿರುವ ದೇವದಾಸಿಯರು ಮುಂದಿನ ತಮ್ಮ ಹಾಗೂ ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಕೆಲವೊಮ್ಮೆ ಅನೈತಿಕ ಹಾದಿ ಹಿಡಿಯುತ್ತಾರೆ. ಅಥವಾ ಭಿಕ್ಷಾಟನೆಯಲ್ಲಿ ತೊಡಗುತ್ತಾರೆ. ಇನ್ನು ಕೆಲ ದೇವದಾಸಿಯರು ತಮ್ಮದೇ ದಲಿತ ಹೆಣ್ಣುಮಕ್ಕಳನ್ನು ಮುತ್ತು ಕಟ್ಟಿಸುವ ಅಮಾನವೀಯ ಪದ್ಧತಿಗೆ ತಳ್ಳಲು ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸತೊಡಗುತ್ತಾರೆ. ಒಟ್ಟಾರೆ ಇದೊಂದು ಬಗೆಯ ಸರಪಳಿಯಂತೆ ನಿರಂತರವಾಗಿ ದೇವದಾಸಿ ಪದ್ಧತಿಯ ಜೀವಂತಿಕೆಗೆ ಕಾರಣವಾಗುತ್ತದೆ.

ನಾಗರಿಕ ಸಮಾಜದಲ್ಲಿ ದೇವದಾಸಿಯರನ್ನು ಅನಿಷ್ಟ ಪದ್ಧತಿಗೆ ಒಳಗಾದವರು ಎಂದು ಗುರುತಿಸಲಾಗುತ್ತದೆಯಾದರೂ, ದೇವದಾಸಿಯರ ಕುಟುಂಬಗಳಲ್ಲಿ ಮಾತ್ರ ಆ ಮಹಿಳೆಗೆ ಅತ್ಯಂತದ ಗೌರವದ ಸ್ಥಾನ ನೀಡಲಾಗುತ್ತದೆ. ಧಾರ್ಮಿಕ ಆವರಣೆಗಳು, ನಂಬಿಕೆಗಳು ಹಾಗೂ ಆಕೆಯಿಂದ ಸಿಗಬಹುದಾದ ಆರ್ಥಿಕ ಸೌಲಭ್ಯಗಳ ಕಾರಣದಿಂದಾಗಿ ಆಕೆಯ ಕುಟುಂಬದಲ್ಲಿ ಆಕೆಗೆ ಹೆಚ್ಚಿನ ಗೌರವ ದೊರೆಯುತ್ತವೆ. ಪಿತೃಪ್ರಧಾಸವಾಗಿರುವ ಸಮಾಜದಲ್ಲಿ ದೇವದಾಸಿಯರನ್ನು ಗಂಡಿಗೆ ಸಮಾನವೆಂದೇ ಪರಿಗಣಿಸಲಾಗುತ್ತದೆ. ದೇವದಾಸಿಯರಿಗೆ ಹೆಣ್ಣುಮಗು ಹುಟ್ಟಿದ್ದಲ್ಲಿ ಆಕೆಯೂ ಈ ಪದ್ಧತಿಯನ್ನು ಎಗ್ಗಿಲ್ಲದೇ ಮುಂದುವರೆಸಿಕೊಂಡು ಹೋಗುವ ಪರಿಸರವೂ ಇದೆ. ಗಂಡು ಹುಟ್ಟಿದ್ದಲ್ಲಿ ಅಷ್ಟಾಗಿ ತಲೆಕೆಡಿಸಿಕೊಳ್ಳದ ದೇವದಾಸಿಯರು ತಮ್ಮ ಹೆಣ್ಣಮಕ್ಕಳನ್ನು ಮಾತ್ರ ದೇವರಿಗೆ ಮೀಸಲು ಬಿಡುವ ಪದ್ಧತಿಗೆ ಜೋತು ಬಿದ್ದಿದ್ದಾರೆ. ಅಲ್ಲಲ್ಲಿ ಗಂಡು ಮಕ್ಕಳನ್ನು ಜೋಗಪ್ಪಗಳನ್ನಾಗಿ ಮಾಡುವ ಸಂದರ್ಭಗಳೂ ಕಂಡುಬರುತ್ತದೆ. ದೇವದಾಸಿಯರ ಹೆಣ್ಣುಮಕ್ಕಳನ್ನು ಮದುವೆಯಾಗಲು ಯಾರೂ ಮುಂದೆ ಬರುವುದಿಲ್ಲ. ಗಂಡು ಮಕ್ಕಳಲ್ಲಿ ಕೆಲವರು ಓದಿ ಉನ್ನತ ಹುದ್ದೆಯಲ್ಲಿದ್ದರೂ ದೇವದಾಸಿಯ ಮಗ ಎನ್ನುವ ಕಾರಣಕ್ಕೆ ಅವರನ್ನೂ ಮದುವೆಯಾಗಲು ಯುವತಿಯರು ಮನಸ್ಸು ಮಾಡುತ್ತಿಲ್ಲ.

ದೇವದಾಸಿಯರ ವಿಮೋಚನೆಗಾಗಿ ಸ್ವಾತಂತ್ರ್ಯ ಪೂರ್ವದಿಂದಲೇ ಅನೇಕರು ಶ್ರಮಿಸಿದ್ದಾರೆ. ಮಹಾರಾಷ್ಟ್ರದ ಕೊಲ್ಲಾಪುರದ ಶಾಹು ಮಹಾರಾಜ ೧೯೨೧ರ ಜನವರಿ ೧೭ರಂದು ದೇವದಾಸಿಯರ ಕುರಿತು ಕಾಯ್ದೆ ಜಾರಿಗೆ ಆದೇಶಿಸಿದ್ದ. ಈ ಕಾಯ್ದೆಯ ಎರಡನೇ ಕಲಂನಲ್ಲಿ ಜೋಗತಿಯರ ಕುರಿತು ಪ್ರಸ್ತಾಪಿಸಲಾಗಿದೆ. 'ಜೋಗತಿ, ಮುರಳಿ, ದೇವದಾಸಿ, ಭಾವಿನ ಮೊದಲಾದ ದೇವಸ್ಥಾನಗಳಲ್ಲಿ ಮೀಸಲು ಬಿಟ್ಟ ಅಥವಾ ಧರ್ಮದ

ಹೆಸರಿನಲ್ಲಿ ಬೇರೆ ಯಾವುದೇ ರೀತಿಯಿಂದ ಮೀಸಲು ಬಿಟ್ಟ ಹೆಣ್ಣಮಕ್ಕಳಿಗೆ ಗಂಡು ಮಗನಂತೆಯೇ ಆಸ್ತಿಯಲ್ಲಿ ಹಕ್ಕನ್ನು ಪಾಲಕರು ನೀಡಬೇಕು. ಆದರೆ, ಈ ಕಾಯ್ದೆಯ ನಂತರವೂ ದೇವದಾಸಿಯಾಗುವವರಿಗೆ ಯಾವುದೇ ರೀತಿಯ ಆಸ್ತಿ ಪಾಲು ದೊರೆಯಲಾರದು' ಎಂದು ಹೇಳಲಾಗಿತ್ತು.

ಶಾಹು ಮಹಾರಾಜರಿಗಿಂಲೂ ಮೊದಲು ೧೮೯೨ರಲ್ಲಿ ದೇವದಾಸಿಯರು ಕೈಗೊಳ್ಳುತ್ತಿದ್ದ ನೃತ್ಯ ಪ್ರಕಾರಗಲಿಗೆ ವಿರೋಧ ವ್ಯಕ್ತವಾಗಿತ್ತು. ಆ ಸಂದರ್ಭದಲ್ಲಿ ನೃತ್ಯವಿರೋಧಿ ಪ್ರತಿಭಟನೆಗಲು ಕೂಡಾ ನಡೆದವು. ಸುಧಾರಣಾವಾದಿ ರಾಮಸ್ವಾಮಿ ನಾಯ್ಕ ಅವರ ನೇತೃತ್ವದಲ್ಲಿ ಕೆಲವು ಸಂಘಟನೆಗಳು ಭಾರತದ ವೈಸರಾಯ್ ಹಾಗೂ ಮದ್ರಾಸಿನ ಗವರ್ನರ್‌ಗಳಲ್ಲಿ ಈ ಪದ್ಧತಿ ನಿರ್ಮೂಲನೆಗೆ ಮನವಿ ಮಾಡಿದ್ದವು. ಮುಂದೆ ೧೯೧೧ರ ಸುಮಾರಿಗೆ ಈ ಚಳುವಳಿ ರಾಷ್ಟ್ರವ್ಯಾಪಿಯಾಗಿ ಪಸರಿಸಿತು. ಇದರ ಪರಿಣಾಮ ೧೯೪೭ರಲ್ಲಿ ದೇವದಾಸಿ ಪದ್ಧತಿ ವಿರುದ್ಧ ಕಾಯ್ದೆ ಜಾರಿಗೆ ತರಲಾಯಿತು. ಆಗ ಕಾಯ್ದೆಯ ಪ್ರಕಾರ ದೇವದಾಸಿಯರು ಮದುವೆ ಮಾಡಿಕೊಳ್ಳುವ ಅವಕಾಶವನ್ನೂ ಕಲ್ಪಿಸಲಾಯಿತು. ಇದರ ಪರಿಣಾಮವಾಗಿ ಸುಪ್ರಸಿದ್ಧ ಗಾಯಕಿಯಾಗಿದ್ದ ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಬ್ರಾಹ್ಮಣನೊಂದಿಗೆ ವಿವಾಹವಾದರು. ಅಂತೆಯೇ ಪಂದನಲ್ಲೂರಿನ ಪ್ರಸಿದ್ಧ ನರ್ತಕಿಯಾಗಿದ್ದ ಜಯಲಕ್ಷ್ಮೀ ಎಂಬುವರು ವಿವಾಹವಾಗಿ ರಾಣಿಯಂತೆ ಜೀವನ ನಡೆಸಿದರು ಎಂಬ ಉಲ್ಲೇಖಗಳು ಇತಿಹಾಸದಿಂದ ದೊರೆಯುತ್ತವೆ.

ಸ್ವಾತಂತ್ರ್ಯ ಪೂರ್ವಕ್ಕೂ ಮುನ್ನ ೧೯೩೬ ಜೂನ್◌ಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ದೇವದಾಸಿಯವರು ಹಾಗೂ ವೇಶ್ಯಯರಿಗಾಗಿ ನಡೆದ ಸಮಾವೇಶದಲ್ಲಿ ಮಾಡಿದ ಭಾಷಣವೂ ಇಲ್ಲಿ ಉಲ್ಲೇಖನಾರ್ಹ. ಮುಂಬೈನ ದಾಮೋದರ ಹಾಲ್‌ನಲ್ಲಿ ನಡೆಸಿದ ಕಾರ್ಯಕ್ರಮದಲ್ಲಿ ಡಾ. ಅಂಬೇಡ್ಕರ್ ಅವರು, ಮಹಾರ್ ಜಾತಿಗೆ ಕಳಂಕ ತರುವ ಈ ಕಾರ್ಯ ಬೀಡದೆ ಇದ್ದರೆ ನಿಮಗೊಂದು ಏಟು ಬಾರಿಸಿಯೇ ಹೇಳಬೇಕಾಗುತ್ತದೆ. ಸಾವಿರಾರು ಸ್ವಯಂ ಸೇವಕರನ್ನು ತಯಾರುಮಾಡಿ ನಿಮ್ಮನ್ನು ಅಲ್ಲಿಂದ ಹೊಗೆಸೆಯುವೆ ಎಚ್ಚರವಿರಲಿ ಎಂದು ಎಚ್ಚರಿಕೆ ನೀಡುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಎಡಪಂಥೀಯ, ದಲಿತ ಚಳವಳಿಗಳ ಪರಿಣಾಮವಾಗಿ ೧೯೮೪ರಲ್ಲಿ ದೇವದಾಸಿ ಪದ್ಧತಿ ನಿಷೇದ ಕಾಯ್ದೆ ಜಾರಿಗೆ ಬಂದಿದೆ. ಆದರೆ, ಮೂರು ದಶಕಗಳೇ ಕಳೆದರೂ ಈ ಕಾಯ್ದೆ ಸಮರ್ಪಕವಾಗಿ ಅನುಷ್ಠಾನವಾಗಿಲ್ಲ. ಸ್ವತಃ ಸರ್ಕಾರ ನೀಡುವ ಅಂಕಿ-ಅಂಶಗಳೇ ಇದನ್ನು ದೃಢಿಕರಿಸುತ್ತವೆ.ಸರ್ಕಾರ ಮೊದಲ ಬಾರಿಗೆ ೧೯೯೩-೯೪ರಲ್ಲಿ ಸಮೀಕ್ಷೆ ನಡೆಸಿದಾಗ ಸುಮಾರು ೨೩,೭೮೩ ದೇವದಾಸಿಯರಿದ್ದರೆ, ನಂತರ ೨೦೦೭-೨೦೦೮ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಈ ದೇವದಾಸಿಯರ ಸಂಖ್ಯೆ ದುಪ್ಪಟ್ಟು ಅಂದರೆ ಸುಮಾರು ೪೬,೬೬೦ಕ್ಕೆ ಏರಿದೆ. ಆದರೆ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘದ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ೮೦,೦೦೦ಕ್ಕೂ ಹೆಚ್ಚು ದೇವದಾಸಿಯರಿದ್ದಾರೆ. ಅಂದರೆ, ಕಾಯ್ದೆ ಇದ್ದರೂ ಈ ಪದ್ಧತಿ ಅವ್ಯಾಹತವಾಗಿ ನಡೆಯುತ್ತಿದೆ ಎಂದಾಯಿತು.

ಕರ್ನಾಟಕದಲ್ಲಿ ೨೦೦೭ರಲ್ಲಿ ದೇವದಾಸಿ ಪುನರ್ವಸತಿ ಯೋಜನೆ ಜಾರಿಗೆ ತರಲಾಗಿದೆ. ಕರ್ನಾಟಕ ಸರ್ಕಾರದ ಉದ್ಯಮವಾಗಿರುವ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಈ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಹೊತ್ತಿದೆ. ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರುವ ೪೫ ವರ್ಷ ಮೀರಿರುವ ಮಾಜಿ ದೇವದಾಸಿಯರಿಗೆ ತಿಂಗಳಿಗೆ ೪೦೦ ರೂಪಾಯಿ ಮಾಸಾಶನ ನೀಡಲಾಗುತ್ತದೆ. ರಾಜ್ಯ ಸರ್ಕಾರ ೨೦೧೩- ೨೦೧೪ರ ಬಜೆಟ್ ನಲ್ಲಿ ಘೋಷಿಸಿದಂತೆ ಸೆಪ್ಟೆಂಬರ್ ೨೦೧೩ರಿಂದ ಮಾಸಾಶನದ ಮೊತ್ತವನ್ನು ೫೦೦ ರೂಪಾಯಿಗೆ ಏರಿಸಿದೆ. ಆದರೆ, ಈ ಏರಿಕೆಯ ಮೊತ್ತವಿರಲಿ, ಕಳೆದ ತಿಂಗಳಿಂದ ಸರ್ಕಾರ ದೇವದಾಸಿಯರಿಗೆ ಮಾಸಾಶನವನ್ನೇ ಬಿಡುಗಡೆ ಮಾಡಿಲ್ಲ. ಬೆಲೆ ಏರಿಕೆಯ ಈ ದಿನಗಳಲ್ಲಿ ಸರ್ಕಾರ ಕೊಡುವ ಪುಡಿಗಾಸು ದೇವದಾಸಿಯರ ಹೊಟ್ಟೆ ತುಂಬಿಸುತ್ತಿಲ್ಲ. ಅದರಲ್ಲೂ ೪೫ ವರ್ಷ ಮೀರಿದ ೧೩,೮೭೯ ದೇವದಾಸಿಯವರಿಗೆ ಮಾತ್ರ ಮಾಸಾಶನ ಸೌಲಭ್ಯ ದೊರಕುತ್ತಿದ್ದು, ಉಳಿದ ೩೨೭೮೧ ದೇವದಾಸಿಯವರ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಅತ್ತ ಸರ್ಕಾರದಿಂದ ಮಾಸಾಶನವೂ ಸಿಗದೇ ಇತ್ತ ಕೂಲಿ ಮಾಡಲು ಹೋದಾಗ ನಡೆಯುವ ನಿರಂತರ ದೌರ್ಜನ್ಯಗಳಿಂದಲೂ ಮುಕ್ತಿ ದೊರೆಯದೇ ಈ ಮಹಿಳೆಯರ ಬದುಕು ಬೀದಿ ಪಾಲಾಗುವ ಸ್ಥಿತಿ ತಲುಪಿದೆ.

ದೇವದಾಸಿ ಪದ್ಧತಿಗೆ ಪ್ರಚೋದನೆ ನೀಡುವವರಿಗೆ ೫,೦೦೦ ರೂಪಾಯಿ ದಂಡ ಹಾಗೂ ೫ ವರ್ಷ ಜೈಲು ಶಿಕ್ಷೆ ನಿಗದಿಪಡಿಸಲಾಗಿದೆ. ಆದರೆ, ಈ ಪದ್ಧತಿಯನ್ನು ಪ್ರೋತ್ಸಾಹಿಸುವವರು ಕಾನೂನಿಗೆ ಸೆಡ್ಡು ಹೊಡೆದು ಈ ಪದ್ಧತಿಯನ್ನು ರಾಜಾರೋಷವಾಗಿಯೇ ಜೀವಂತವಾಗಿರುಸುವಲ್ಲಿ ಯಶಸ್ವಿಯಾಗಿದ್ದಾರೆ. ಕಾನೂನು ಸುವ್ಯವಸ್ಥೆ ಕಣ್ಮುಚ್ಚಿ ಕುಳಿತಿದೆ ಎನ್ನುವುದಕ್ಕೆ ದಾವಣಗೆರೆ ಜಿಲ್ಲೆಯ ಕದ್ದು ಮುಚ್ಚಿ ನಡೆಯುತ್ತಿರುವ ಮುತ್ತು ಕಟ್ಟುವ ಪದ್ಧತಿ, ದೇವದಾಸಿ ಮಹಿಳೆಯರಿಂದ ನಡೆಯುವ ಸಿಡಿ ಆಟ, ಕೊಪ್ಪಳ ಜಿಲ್ಲೆಯ ಹಿರೇಸಿಂಧೋಗಿಯಲ್ಲಿ ಇರುವ ೮೦ ದೇವದಾಸಿ ಕುಟುಂಬಗಳೇ ಸಾಕ್ಷಿ.

ಪ್ರತಿ ವರ್ಷ ಜಾತ್ರೆಯಲ್ಲಿ ಸಿಡಿ ಆಡಿಸಲು ನನ್ನ ಮನೆ ಹತ್ತಿರ ಜನ ಬಂದಾಗ ನನಗೆ ತುಂಬಾ ಅಳು ಬರುತ್ತೆ, ಊರಲ್ಲಿ ಎಷ್ಟೊಂದು ಹೆಣ್ಣು ಮಕ್ಕಳು ಇದ್ದಾರೆ.ಆದರೆ, ಎಲ್ಲಾ ಬಿಟ್ಟು ನನಗೆ ಯಾಕೆ ಈ ಥರ ಮಾಡ್ತಾರೆ ಅಂತ ನೋವಾಗುತ್ತೆ. ಸಿಡಿ ಆಡುವಾಗ ಕರೆಂಟಿನ ಕಂಬಕ್ಕಿಂತ ಎತ್ತರದ ಕಂಬಕ್ಕೆ ಕಟ್ಟುತ್ತಾರೆ. ಮೊಣಕಾಲು ತನಕ ಮಾತ್ರ ಸೀರೆ ಉಡೇಕು. ಸಿಡಿ ಆಡುವ ಹಿಂದಿನ ದಿನದಿಂದಲೇ ಉಪವಾಸ ಇರಬೇಕು. ನನ್ನನ್ನು ಸಿಡಿ ಕಂಬಕ್ಕೆ ಗಂಡಸರೇ ಕಟ್ಟುತ್ತಾರೆ. ಕಬ್ಬಿಣದ ಕೊಕ್ಕೆ ಸೊಂಟದ ಹಿಂಬದಿಗೆ ಚುಚ್ಚಿದಾಗ ರಕ್ತ ಹರಿದು ತುಂಬಾ ನೋವಾಗುತ್ತದೆ.

ಆ ನೋವಿನಲ್ಲಿ ಸಿಡಿ ಕಂಬಕ್ಕೆ ನನ್ನನ್ನು ಬಿಗಿಯಾಗಿ ಕಟ್ಟುತ್ತಾರೆ. ಒಮ್ಮೆಯಂತೂ ಎದೆಯ ಭಾಗದಲ್ಲಿ ಬಿಗಿಯಾಗಿ ಕಟ್ಟಿಬಿಟ್ಟಿದ್ದು, ಉಸಿರು ಗಟ್ಟಿ ಅಳು ಬರೋ ಹಾಗೆ ಆಗಿತ್ತು. ಎಂದು ದಾವಣಗೆರೆ ಜಿಲ್ಲೆಯ ಹುಚ್ಚವ್ವನಹಳ್ಳಿಯ ದೇವದಾಸಿ ಮಹಿಳೆ ರತ್ನಮ್ಮ

ತನ್ನ ನೋವಿನ ಕಥೆ ಬಿಚ್ಚಿಡುತ್ತಿದ್ದಾಗ ಎಂಥವರ ಮನ ಕರಗದಿರದು. ಹತ್ತು ವರ್ಷಗಳ ಕಾಲ ನಿರಂತರವಾಗಿ ಈ ನೋವನ್ನು ಸಹಿಸಿಕೊಂಡಿದ್ದ ರತ್ನಮ್ಮ ೨೦೧೨ರ ಏಪ್ರಿಲ್‌ನಲ್ಲಿ ಸಿಡಿ ವಿರುದ್ಧ ಸಿಡಿದೆದ್ದು ವಿಮೋಚನಗೊಂಡರು. ಆದರೆ, ರತ್ನಮ್ಮ ಅವರಂಥಹ ಮನೋಸ್ಥೆರ್ಯ ಎಲ್ಲಾ ದೇವದಾಸಿಯರಲ್ಲೂ ಇರುವುದು ಕಷ್ಟ, ಹಳ್ಳಿಯ ಊಳಿಗಮಾನ್ಯ ಪದ್ಧತಿಯಲ್ಲಿ ಬದುಕುತ್ತಿರುವ ದೇವದಾಸಿಯರಿಗೆ ಕೆಳಜಾತಿಯೇ ಶಾಪವಾಗಿ ಪರಿಣಮಿಸಿದೆ. ರತ್ನಮ್ಮ ಅವರಂತೆ ಇಡೀ ಹಳ್ಳಿಯನ್ನು ಎದುರು ಹಾಕಿಕೊಂಡು ಜೀವನ ಮಾಡುವುದು ಎಷ್ಟು ಜನಕ್ಕೆ ಸಾಧ್ಯ?

ಇನ್ನು ಹರಪನಹಳ್ಳಿ ತಾಲ್ಲೂಕ ಉಚ್ಚಂಗಿ ದುರ್ಗದ ಹಾಡುಹಕ್ಕಿ ದೇವದಾಸಿ ಎಲಿಸವ್ವ ಮಾದರ ಅವರ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಜಾನಪದ ಮಜವೇ ಆಗಿರುವ ಎಲಿಸವ್ವ ಬಾಲ್ಯದಲ್ಲೇ ಮುತ್ತು ಕಟ್ಟಿಸಿಕೊಂಡವರು. ದೇವರ ಹರಕೆಗಾಗಿ ತಮ್ಮ ಮಗಳು ದುರ್ಗಮ್ಮ ಅವರನ್ನೂ ಈ ಪದ್ಧತಿಗೆ ಒಳಪಡಿಸಿದ್ದಾರೆ. ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ಎಲಿಸವ್ವ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿದೆಯಾದರೂ, ಪ್ರಶಸ್ತಿಯಿಂದ ಹೊಟ್ಟೆ ತುಂಬೋದಿಲ್ಲ ಎಂದು ಅವರು ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಉಚ್ಚಂಗೆಮ್ಮ ದೇವಿಯ ಪಾದಗಟ್ಟೆ ಬಳಿ ಭಿಕ್ಷೆಗೆ ಕೂರುತ್ತಾರೆ,

ರಾಜ್ಯದಲ್ಲಿ ೨೦೦೬ ರಿಂದ ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘ ದೇವದಾಸಿಯರ ವಿಮೋಚನೆಗಾಗಿ ಸಂಘಟಿತವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಂಘದ ಅನೇಕ ಹೋರಾಟಗಳ ಫಲವಾಗಿ ಮೊದಲು ೧೦ ಜಿಲ್ಲೆಗಳಲ್ಲಿ ಮಾತ್ರ ದೇವದಾಸಿಯರು ಇದ್ದಾರೆಂದು ಸರ್ಕಾರ ಗುರುತಿಸಿದ್ದ ಪಟ್ಟಿಗೆ ಇತರ ೪ ಜಿಲ್ಲೆಗಳಲ್ಲಿರುವ ದೇವದಾಸಿಯರನ್ನೂ ಸೇರಿಸಲಾಗಿದೆ. ಮಾಶಾಸನ, ವಸತಿ ಸೌಲಭ್ಯ ಕಲ್ಪಿಸುವಲ್ಲಿ ಸಂಘವು ಮಹತ್ತರ ಪಾತ್ರ ವಹಿಸಿದೆ. ನಿರಂತರ ಹೋರಾಟಗಳು, ಜನಜಾಗೃತಿ, ಕಾನೂನು ಶಿಬಿರಗಳ ಮೂಲಕ ದೇವದಾಸಿಯರ ವಿಮೋಚನೆಗೆ ಶ್ರಮಿಸುತ್ತಿರುವ ಸಂಘ ದೇವದಾಸಿಯರಿಗೆ ಸಂಬಧಿಸಿದಂತೆ ೧೨ ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದೆ.

ದೇವದಾಸಿಯರನ್ನು ಸಂಘಟಿಸುವುದು ಸುಲಭದ ಕೆಲಸವಲ್ಲ. ಸರ್ಕಾರದ ಮಾಶಾಸನವನ್ನೇ ನಂಬಿ ಕುಳಿತರೆ ಹೊಟ್ಟೆ ತುಂಬದು. ಅದಕ್ಕಾಗಿಯೆ ದೇವದಾಸಿ ಮಹಿಳೆಯರು ಕೂಲಿ ಕೆಲಸಕ್ಕೆ ತೆರಳುತ್ತಾರೆ. ಅವರನ್ನು ಸಂಘದ ಹೋರಾಟಕ್ಕೆ ಅಂದರೆ ಆ ದಿನದ ಕೂಲಿ ಕೈತಪ್ಪುತ್ತದೆ. ಕೂಲಿ ತಪ್ಪಿದರೆ ಆ ದಿನ ಆ ದೇವದಾಸಿ ಹಾಗೂ ಅವಳನ್ನೇ ನಂಬಿರುವ ಕುಟುಂಬ ಉಪವಾಸ ಇರಬೇಕಾಗುತ್ತದೆ. ಆದರೂ ಸಂಘ ಈ ಮಹಿಳೆಯರನ್ನು ನಿರಂತರವಾಗಿ ಸಂಘಟಿಸುತ್ತಾ ಬಂದಿದೆ ಎನ್ನುತ್ತಾರೆ. ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘದ ರಾಜ್ಯಾದ್ಯಕ್ಷೆ ಬಿ. ಮಾಳಮ್ಮ.

ಸರ್ಕಾರ ದೇವದಾಸಿಯರಿಗೆ ಮನೆ ಕಟ್ಟಿಕೊಳ್ಳಲು ೪೦,೦೦೦ ರೂಪಾಯಿ, ರೇಷನ್ ಕಾರ್ಡ, ಸ್ವಯಂ ಉದ್ಯೋಗ ನೀಡುವುದಾಗಿ ಹೇಳುತ್ತಲೇ ಬರುತ್ತಿದೆ. ಆದರೆ, ಇದುವರೆಗೂ ಈ ಯಾವ ಭರವಸೆಗಳೂ ಸಮರ್ಪಕವಾಗಿ ಜಾರಿಯಾಗಿಲ್ಲ.

ದೇವದಾಸಿಯರಿಗೆ ಒಂದು ಹೊತ್ತಿನ ಊಟಕ್ಕೂ ತತ್ವಾರವಿರುವಾಗ ನಿವೇಶನ ಎಲ್ಲಿಂದ ಬರಬೇಕು?ಸಿಡಿಯಂಥ ಅನಿಷ್ಟ ಪದ್ಧತಿ ತಡೆಯಿರಿ ಎಂದು ಜಿಲ್ಲಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗಮನಕ್ಕೆ ತಂದಾಗಲೂ ಜಿಲ್ಲಾಡಳಿತ ನಿರ್ಲಕ್ಷ್ಯ ವಹಿಸುವಾಗ ಇಂಥ ಅಧಿಕಾರಿಶಾಹಿ ವರ್ಗದವರಿಂದ ಮೂಢನಂಬಿಕೆ ತೊಲಗಿಸುವುದು ಸಾಧ್ಯವೇ? ಎಂದು ಪ್ರಶ್ನಿಸುತ್ತಾರೆ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ವಿ.ರೇಣುಕಮ್ಮ.

ಸರ್ಕಾರ ಹೆಸರಿಗಷ್ಟೇ ಪುನರ್ವಸತಿ ಯೋಜನೆಯನ್ನು ಜಾರಿಗೆ ತಂದು ಕೈತೊಳೆದುಕೊಂಡಿದೆ. ದೇವದಾಸಿಯರ ಸಾಮಾಜಿಕ-ಆರ್ಥಿಕ ಸಬಲೀಕರಣದ ಕುರಿತು ಸರ್ಕಾರ ಇನ್ನೂ ಸಮಗ್ರವಾಗಿ ಚಿಂತನೆಯನ್ನೇ ನಡೆಸಿಲ್ಲ. ಹಾಗಾಗಿ, ಬಡತನ ಅಜ್ಞಾನದಿಂದ ಬಳಲುತ್ತಿರುವ ದೇವದಾಸಿಯರ ಸಬಲೀಕರಣ ಇನ್ನೂ ದೂರವೇ ಉಳಿದಿದೆ. ಈ ನಿಟ್ಟಿನಲ್ಲಿ ಸರ್ಕಾರವಷ್ಟೇ ಅಲ್ಲ, ಸಾಮಾಜಿಕ ನೆಲೆಯಲ್ಲೂ ಅನೇಕ ಮಹತ್ತರ ಬದಲಾವಣೆಗಳಾಗಬೇಕಿದೆ. ಮುಖ್ಯವಾಗಿ ಜಾತಿ ಪದ್ಧತಿಯ ಕರಾಳ ಆಚರಣೆಯಾಗಿ ಇನ್ನೂ ಅಸ್ತಿತ್ವದಲ್ಲಿರುವ ದೇವದಾಸಿ ಪದ್ಧತಿಯನ್ನು ಬೇರು ಸಮೇತ ನಿರ್ಮೂಲಣೆ ಮಾಡುವತ್ತ ಶ್ರಮಿಸಬೇಕಿದೆ. ಅದಕ್ಕೆ ಜನಜಾಗೃತಿಯೊಂದೆ ಮದ್ದು, ಆ ಜನಜಾಗೃತಿ ಮೂಡಿಬರಬೇಕಾಗಿದ್ದು ಶೋಷಿತರಿಂದ ಮಾತ್ರವಲ್ಲ, ಸಮಾಜದ ಆಯಕಟ್ಟಿನ ಇಲ್ಲವೇ ಉನ್ನತ ಹಂತದಲ್ಲಿರುವವರಿಂದಲೂ ಆದಾಗ ಮಾತ್ರ ದೇವದಾಸಿಯಂತಹ ಅನಿಷ್ಟ ಪದ್ಧತಿಗೆ ಅಂತ್ಯ ಹಾಡಬಹುದು. ಅಷ್ಟಕ್ಕೂ ನೊಂದ ನೋವ ನೋಯದವರೆ ಬಲ್ಲರು? ಅಲ್ಲವೆ?

*********

**ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು**

**ಕಾರ್ಯಕಾರಿ ಸಮಿತಿ**

ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ವ.ಚ. ಚನ್ನೇಗೌಡ, ಗೌರವ ಕಾರ್ಯದರ್ಶಿ

ಶ್ರೀ ಮಾಯಣ್ಣ, ಬೆಂಗಳೂರು ನಗರ

ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ

ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ

ಶ್ರೀ ನಾಗಾನಂದ ಕೆಂಪರಾಜ್, ಕೋಲಾರ

ಶ್ರೀ ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ

ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು

ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ

ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ

ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ

ಡಾ. ವೈ.ಡಿ. ರಾಜಣ್ಣ, ಮೈಸೂರು

ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ

ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ

ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ

ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು

ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

ಶ್ರೀ ಸುರೇಶ ಚನಶೆಟ್ಟಿ, ಬೀದರ್

ಡಾ.ಬಸವಪ್ರಭುಪಾಟೀಲಬೆಟ್ಟದೂರು,ರಾಯಚೂರು

ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ

ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ

ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಡಾ. ತಮಿಳ್ ಸೆಲ್ವಿ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಲಳನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :

ಡಾ. ಚಂದ್ರಶೇಖರ ಕಂಬಾರ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :

ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :

ಡಾ. ರಮೇಶ ಲಂಡನಕರ

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪುರ

ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ

ಶ್ರೀ ಶರಣು ಗೋಗೇರಿ, ಗದಗ

ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ

ಶ್ರೀ ವೀರಭದ್ರ ಸಿಂಪಿ, ಕಲಬುರಗಿ

ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ

ಸರ್ಕಾರದ ಪ್ರತಿನಿಧಿ :

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :

ಡಾ. ವಸುಂಧರಾ ಭೂಪತಿ ಮತ್ತು

ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು :

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು

ಶ್ರೀ ಪಿ.ಎ. ಮೇಘಣ್ಣನವರ

ಪರಿಶಿಷ್ಟ ಪಂಗಡ ಪ್ರತಿನಿಧಿ :

ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :

ಶ್ರೀ ಶೇಖರಗೌಡ ಮಾಲಿಪಾಟೀಲ



ನೂರೈದು ವರ್ಷಗಳ ಭವ್ಯ ಇತಿಹಾಸದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಅವಧಿಯುದ್ದಕ್ಕೂ ಅನೇಕ ಮೈಲಿಗಲ್ಲುಗಳನ್ನು ದಾಟಿದೆ ಮತ್ತು ನೆಟ್ಟಿದೆ. ಪ್ರಸ್ತುತ ಪ್ರಕಟವಾಗುತ್ತಿರುವ ದಲಿತ ಸಾಹಿತ್ಯ ಸಂಪುಟಗಳು ಅಂಥ ಇನ್ನೊಂದು ಮಹತ್ವದ ಹಾಗೂ ಐತಿಹಾಸಿಕ ಎನಿಸುವಂಥ ಮೈಲಿಗಲ್ಲು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ ಘಟ್ಟಗಳ ಹಾಗೆಯೇ ೧೯೭೦-೮೦ರ ದಶಕದಲ್ಲಿ ಆರಂಭವಾದ ಬಂಡಾಯ ಹಾಗೂ ದಲಿತ ಪಂಥಗಳೂ ಅತ್ಯಂತ ಪ್ರಮುಖ ಘಟ್ಟಗಳು. ಬಂಡಾಯ ಹಾಗೂ ದಲಿತ ಪಂಥಗಳ ಕಾಲದಲ್ಲಿ ಕನ್ನಡದಲ್ಲಿ ಅನೇಕ ಮಹತ್ವದ ಕೃತಿಗಳು ಪ್ರಕಟವಾಗಿವೆ. ಆದರೆ, ಪ್ರಾತಿನಿಧಿಕ ದಲಿತ ಬರವಣಿಗೆಗಳನ್ನು ಒಳಗೊಂಡ ಸಂಪುಟಗಳು ಇದುವರೆಗೆ ಬಂದಿರಲಿಲ್ಲ. ಈಗ ನಿಮ್ಮ ಕೈಯಲ್ಲಿ ಆ ಸಂಪುಟಗಳು ಇವೆ. ಇವು ಕನ್ನಡದ ದಲಿತ ಲೋಕವನ್ನು, ಸಂವೇದನೆಯನ್ನು ಅರ್ಥ ಮಾಡಿಕೊಳ್ಳಲು ನೆರವಾದರೆ ಪರಿಷತ್ತು ಕೃತಾರ್ಥ. ನನ್ನ ಕಾಲದಲ್ಲಿ ಇದೆಲ್ಲ ಆಯಿತು ಎಂಬುದು ನನ್ನ ಹೆಮ್ಮೆ.

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು

ರೂ.೩೨೦/-

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.